# ಮಹಿಳೆ ಮತ್ತು ಮಲೆನಾಡು

ಪ್ರೊ. ರೇಚಲ್ ಬಾರಿ

ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ

ಜ್ಞಾನಸಹ್ಯಾದ್ರಿ, ಶಂಕರಘಟ್ಟ

## ಪರಿವಿಡಿ

೧. ಹಿಂದುಳಿದ ವರ್ಗಗಳ ಮಹಿಳೆ –ಡಾ. ಸಾರಾ ಅಬ್ಬೂಬಕರ್

೨. ಕೃಷಿ ಮತ್ತು ಗ್ರಾಮೀಣ ಮಹಿಳೆ –ಪ್ರೊ. ಬಸವರಾಜ ನೆಲ್ಲಿಸರ

೩. ಮಹಿಳೆ ಮತ್ತು ಸಮಕಾಲೀನ ಸವಾಲುಗಳು –ಡಾ. ಜಿ. ಪ್ರಶಾಂತ ನಾಯಕ

೪. ಮಲೆನಾಡ ಕೃಷಿ ಪರಿಸರದಲ್ಲಿನ ಮಹಿಳೆಯರು –ಡಾ. ಕೆ.ಸಿ. ಶಶಿಧರ

೫. ಮಹಿಳೆ ಮತ್ತು ಮನೆ– ಡಾ.ನೆಲ್ಲಿಕಟ್ಟೆ ಸಿದ್ಧೇಶ

೬. ಮಲೆನಾಡಿನ ಕಥೆಗಳಲ್ಲಿ ಹೆಣ್ಣಿನ ಚಿತ್ರಣಗಳು (ಕಾರಂತ–ಕುವೆಂಪು–ತೇಜಸ್ವಿ)– ಡಾ. ಎಂ. ಎನ್. ರಮೇಶ, ರವಿಶಂಕರ್ ಜಿ.

೭. ಮಲೆನಾಡಿನ ಬುಡಕಟ್ಟು ಮಹಿಳೆ : ಒಂದು ಹಿನ್ನೋಟ– ಡಾ. ಎಸ್.ಎಂ. ಮುತ್ತಯ್ಯ

೮. ಮಾಧ್ಯಮ ಮತ್ತು ಮಹಿಳಾ ನಿರೂಪಣೆ – ಡಾ. ಸಬಿತಾ ಬನ್ನಾಡಿ

೯. ಮಲೆನಾಡು ಮಹಿಳೆ ಮತ್ತು ಕೃಷಿ –ಡಾ. ಅಂಜಲಿ

೧೦. ಮಹಿಳೆ ಮುನ್ನೆಡೆ ಮಲೆನಾಡಿನ ಯಕ್ಷಗಾನ ಕಲಾವಿದೆಯರು: ಸಾಧನೆ–ಸವಾಲು–ಡಾ. ಶುಭಾ ಮರವಂತೆ

೧೧. ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮಹಿಳೆಯ ಪಾತ್ರ– ಶಿವಮೂರ್ತಿ ಎಂ. ಶೊಂಭೈನೂರು

೧೨. ಮಹಿಳೆ ಮತ್ತು ಸಮಾಜ–ಡಾ.ಪಿ.ನಾಗರಾಜ ಮತ್ತು ಶ್ರೀ ಹನುಮಂತಪ್ಪ ಡಿ.ಜಿ

೧೩. ಜನಪದ ಸಾಹಿತ್ಯ ಮತ್ತು ಮಹಿಳಾ ಸಬಲೀಕರಣ–ಡಾ. ಸುಶೀಲಾ ನೆಲ್ಲಿಸರ

೧೪. ಮಹಿಳೆ: ಅವಕಾಶದತ್ತ ದಿಟ್ಟ ಹೆಜ್ಜೆ. . . . –ಡಾ. ಭಾರತಿ. ಎಂ.

೧೫. ಅಕ್ಕಮಹಾದೇವಿ ಮತ್ತು ಮಲೆನಾಡು –ದಿವ್ಯ ಕೆ. ಎಲ್.

೧೬. ಮಲೆನಾಡಿನ ಮಹಿಳಾ ಬರಹಗಾರರು –ಸುನಂದ ಕೆ.ಸಿ.

೧೭. ಮಲೆನಾಡಿನ ದಲಿತ ಮಹಿಳೆ –ನವೀನ ಮಂಡಗದ್ದೆ

೧೮. ಶಿಕ್ಷಣ ಮತ್ತು ಮಹಿಳೆ....ಭಾಗ್ಯಲಕ್ಷ್ಮಿ ಯೋಜನೆಯ ಅಧ್ಯಯನ(ಭದ್ರಾವತಿ ತಾಲೂಕಿನ ಪರಿಗಣನೆ) – ರೋಹಿತ್ ಎಲ್.ಎಸ್.

೧೯. ದೃಶ್ಯಮಾಧ್ಯಮ : ಹೆಣ್ಣಿನ ಪ್ರತಿನಿಧೀಕರಣ –ಶ್ವೇತ. ಸಿ

೨೦. ಮಲೆನಾಡ ಹೆಣ್ಣಿಗೆ ಸೌಂದರ್ಯ ವೃದ್ಧಿಸುವ ಉಡುಗೆ ತೊಡುಗೆಗಳು–ವಿಜಯಕುಮಾರ.ಹೆಚ್.

೨೧. ಚಂದ್ರಗುತ್ತಿ ಸ್ತ್ರೀ ಪರ ಹೋರಾಟ ಮರು ಚಿಂತನೆ –ರಾಜೀವ ನಾಯ್ಕ ಎಸ್

೨೨. ಮಲೆಯೊಡಲ ರುಚಿ ರಹಸ್ಯ –ಆಶಾರಾಣಿ.ಎಂ.ಪಿ

೨೩. ಮಲೆನಾಡಿನ 'ಚಿತ್ತಾರ' ಪ್ರತಿಭೆ ರಾಧಾ ಸುಳ್ಳೂರು– ಅನ್ನಪೂರ್ಣ ಹೆಚ್.ಎಸ್

೨೪. ಮಲೆನಾಡಿನ ಹಿಂದುಳಿದ ವರ್ಗಗಳ ಮಹಿಳೆಯರ ಸ್ಥಿತಿಗತಿಗಳು–ಗಿರಿಧರ್. ಎಸ್.

# ಹಿಂದುಳಿದ ವರ್ಗಗಳ ಮಹಿಳೆ

**ಡಾ. ಸಾರಾ ಅಬ್ಬೂಬಕರ್**

ಮಲೆನಾಡಿನ ಮಹಿಳೆಯರ ಕುರಿತು ಬರೆಯುವುದು ಕರಾವಳಿಯ ಮಹಿಳೆಯರಿಗೆ ಸ್ವಲ್ಪ ಕಷ್ಟವೆಂದೇ ಹೇಳಬಹುದು. ಮಲೆನಾಡಿನ ಹವಾಗುಣ, ಆಹಾರ ಪದ್ಧತಿ, ಸಂಸ್ಕೃತಿ ಎಲ್ಲವೂ ಕರಾವಳಿಯ ಮಹಿಳೆಯರಿಗಿಂತ ತೀರಾ ಭಿನ್ನವಾದುದೇ ಆಗಿದೆ. ಒಂದು ವಿಷಯದಲ್ಲಿ ಮಾತ್ರ ಸಮಾನತೆ ಇದೆಯೆನ್ನಬಹುದು. ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಶೋಷಣೆಗಳಿಗೆ ಈ ಎರಡೂ ಪ್ರದೇಶಗಳ ಮಹಿಳೆಯರೂ ಒಳಗಾಗುತ್ತಾರೆ. ಆ ಶೋಷಣೆಯಲ್ಲಿ ಭಿನ್ನತೆ ಇರಬಹುದು. ಇಡೀ ದೇಶದಲ್ಲಿಯೇ ಮಹಿಳೆಯರ ಮೇಲೆ ಎಂತೆಂತಹ ದೌರ್ಜನ್ಯಗಳು ನಡೆಯುತ್ತಿರುತ್ತವೆಯೆಂದು ಪ್ರತಿದಿನದ ಪತ್ರಿಕೆಯೋದಿದರೆ ನಮಗೆ ಮನದಟ್ಟಾಗುತ್ತದೆ. ಈ ದೌರ್ಜನ್ಯಗಳಿಗೆ ಹಳ್ಳಿ, ನಗರವೆಂದು, ಮಲೆನಾಡು, ಕರಾವಳಿಯೆಂದು ವ್ಯತ್ಯಾಸವೇನೂ ಇಲ್ಲ. ಧರ್ಮದ ವ್ಯತ್ಯಾಸವೂ ಇಲ್ಲ. ಪುರುಷ ಪ್ರಧಾನ ಸಮಾಜಗಳಲ್ಲಿ ಎಲ್ಲೆಡೆಗಳಲ್ಲೂ ಪುರುಷನು ಆಳುವವನೆಂದೂ ಮಹಿಳೆ ಆಳಿಸಿಕೊಳ್ಳುವವಳೆಂದೂ ಎಲ್ಲ ಸಮಾಜಗಳು ಒಪ್ಪಿಕೊಂಡುಬಿಟ್ಟಿವೆ. ಎಲ್ಲೆಡೆಯೂ ಯಜಮಾನ ಸಂಸ್ಕೃತಿ ರಾರಾಜಿಸುತ್ತಿದೆ.

ನಾನು ಮಲೆನಾಡಿನಲ್ಲಿರದಿದ್ದರೂ ಇತ್ತೀಚೆಗೆ ಮಲೆನಾಡು ಮತ್ತು ಉತ್ತರ ಕರ್ನಾಟಕದಿಂದ ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಿಗೆ ಉದ್ಯೋಗವನ್ನರಸಿ ಬಂದವರು ಇಲ್ಲೇ ಸ್ಥಿರವಾಗಿ ನೆಲೆ ಕಂಡುಕೊಂಡಿರುವುದನ್ನು ಕಂಡಿದ್ದೇನೆ. ಶಿಕ್ಷಣದಲ್ಲಿ ಬಹಳ ಮುಂದುವರಿದ ಜಿಲ್ಲೆಗಳೆಂದು ಹೆಸರು ಪಡೆದ ಈ ಜಿಲ್ಲೆಗಳಲ್ಲಿ ಇವರು ಬದುಕು ಕಟ್ಟಿಕೊಂಡಿದ್ದರೂ ಹೆಣ್ಣುಮಕ್ಕಳ ಶಿಕ್ಷಣದ ಕುರಿತು ಇವರಲ್ಲಿ ಹೇಳಿಕೊಳ್ಳುವಂತಹ ಜಾಗೃತಿ ಮೂಡಿರುವುದು ಕಂಡುಬರುವುದಿಲ್ಲ. ಹೆಣ್ಣುಮಕ್ಕಳ ವಿವಾಹವೇ ಇವರ ಗುರಿಯಾಗಿದ್ದು ಅದೇ ಇವರ ಮುಖ್ಯ ಸಮಸ್ಯೆಯಾಗಿರುತ್ತದೆ. ಇವರ ಕುಟುಂಬಗಳಲ್ಲಿ ಬಾಲ್ಯವಿವಾಹ ತೀರಾ ಸಾಮಾನ್ಯವಾಗಿದೆ. ತಮ್ಮೂರಿನಿಂದ ಬರುವಾಗ ಶಾಲೆಗೆ ಹೋಗುತ್ತಿರುವ ಹೆಣ್ಣು, ಗಂಡು ಮಕ್ಕಳನ್ನು ಕರೆದುಕೊಂಡು ಬರುತ್ತಾರೆ. ಇಲ್ಲಿಗೆ ಬಂದ ಬಳಿಕ ಗಂಡು ಮಕ್ಕಳನ್ನು ಶಾಲೆಗೆ ಸೇರಿಸಿ ಅವರ ಶಿಕ್ಷಣ ಮುಂದುವರಿಸುತ್ತಾರೆ. ಆದರೆ ಹೆಣ್ಣುಮಕ್ಕಳು ಕಲಿತ ಶಾಲೆಯಿಂದ ಅವರ ಸರ್ಟಿಫಿಕೇಟ್ ತರುವುದೇ ಇಲ್ಲ. ಮಗಳನ್ನು ಏಕೆ ಶಾಲೆಗೆ ಸೇರಿಸಲಿಲ್ಲವೆಂದರೆ ಅವಳು ಇಲ್ಲಿ ಮನೆಯಲ್ಲಿ ಕಲಿತು ನಮ್ಮೂರಿನ ಶಾಲೆಯಲ್ಲಿ ಪರೀಕ್ಷೆ ಬರೆಯುತ್ತಾರೆನ್ನುತ್ತಾರೆ. ಆ ಶಾಲೆಯ ಶಿಕ್ಷಕರು ಈ ಜನಗಳಿಗೆ ಸಮನಾಗಿ ಮಾರ್ಗದರ್ಶನ ಮಾಡದೆ, "ಅವಳು ಇಲ್ಲೇ ಬಂದು ಪರೀಕ್ಷೆ ಬರೆದರೆ ಸಾಕು" ಎನ್ನುತ್ತಾರೆ. ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಮ್ಮಿಯಾಗದಿರಲಿ ಎಂದು ಈ ಹೆತ್ತವರನ್ನು ಈ ರೀತಿ ಹಾದಿ ತಪ್ಪಿಸುತ್ತಿರಬಹುದು. ಆದರೆ ಗಂಡು ಮಕ್ಕಳಿಗೆ ಸಮನಾಗಿ ಸರ್ಟಿಫಿಕೇಟ್ ನೀಡಿ ಅವರ ಶಿಕ್ಷಣವನ್ನು ಶಾಲಾ ಶಿಕ್ಷಕರೂ ಪ್ರೋತ್ಸಾಹಿಸುತ್ತಾರೆ.

ನಮ್ಮ ಸಂವಿಧಾನ 70ರ ದಶಕದಲ್ಲಿಯೇ ಹೆಣ್ಣುಮಕ್ಕಳಿಗೆ 18 ವರ್ಷವಾಗದೆ ವಿವಾಹ ಮಾಡಬಾರದೆಂಬ ನಿಯಮವನ್ನು ಕಡ್ಡಾಯ ಮಾಡಿದೆ. ಈ ಜನರಿಗೆ ನಮ್ಮ ದೇಶಕ್ಕೊಂದು ಸಂವಿಧಾನವಿದೆಯೆಂದಾಗಲಿ, ಆ ಸಂವಿಧಾನಕ್ಕೆ ಬದ್ಧರಾಗಿ ಆ ನಿಯಮಗಳಿಗನುಸಾರವಾಗಿ ನಾವು ಬದುಕಬೇಕೆಂದಾಗಲಿ ಯಾವ ತಿಳುವಳಿಕೆಯೂ ಈ ಜನರಿಗಿಲ್ಲ. ಹೆಣ್ಣುಮಕ್ಕಳು ಮೈನೆರೆದೊಡನೆ ಅವರ ಮದುವೆಮಾಡಿ ಜವಾಬ್ದಾರಿ ಕಳೆದುಕೊಳ್ಳಬೇಕೆಂಬುದೇ ಈ ತಾಯಂದಿರ ಆಶಯವಾಗಿದೆ. ಹೆಣ್ಣುಮಕ್ಕಳಿಗೆ ಬಾಲ್ಯಕಾಲವೇ ಇಲ್ಲದೆ ಶೈಶವ ಮುಗಿದೊಡನೆ ತಾವೇ ತಾಯ್ತನದತ್ತ ಹೆಜ್ಜೆ ಇಡತೊಡಗುವುದು ಇವರ ಹೆಚ್ಚಿನ ಸಮಸ್ಯೆಗಳಿಗೆ ಕಾರಣವಾಗಿದೆ.

ಶಿಕ್ಷಣದ ಕೊರತೆಯಿಂದಾಗಿ ಇವರು ಹಲವಾರು ಮೂಢನಂಬಿಕೆಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಉತ್ತರಕರ್ನಾಟಕದಲ್ಲಿ ರೂಢಿಯಲ್ಲಿರುವ ಬೆತ್ತಲೆಸೇವೆ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇದನ್ನು ಕೊನೆಗೊಳಿಸಲು ಕೆಲವು ಸಾಮಾಜಿಕ ಕಾರ್ಯಕರ್ತೆಯರೂ ಮಹಿಳಾ ಸಂಘಟನೆಗಳೂ ಪ್ರಯತ್ನಿಸಿದ್ದು, ಆ ಪ್ರಯತ್ನವನ್ನು ಈ ಅನಕ್ಷರಸ್ಥ ಮಹಿಳೆಯರೇ ವಿರೋಧಿಸಿ ಪೋಲಿಸರೊಡನೆ ಹೋರಾಡಿದ ಘಟನೆಯನ್ನು ನಾವು ಮರೆಯುವಂತಿಲ್ಲ. ಆದರೆ ಬೆತ್ತಲೆಸೇವೆ ಇಂದಿಗೂ ಕೊನೆಗೊಂಡಿಲ್ಲ.

ಮಂಗಳೂರಿನಲ್ಲಿ ಮನೆ ಕೆಲಸ ಮಾಡುತ್ತಿದ್ದ ಹೆಣ್ಣುಮಗಳೊಬ್ಬಳು ಜ್ವರ ಬಂದ ಕಾರಣ ಆಸ್ಪತ್ರೆಗೆ ದಾಖಲಾದಳು. ಆಸ್ಪತ್ರೆಯಲ್ಲಿದ್ದವರಿಗೆ ಇವರು ಅನಕ್ಷರಸ್ಥರೆಂಬುದು ಗೊತ್ತಾಗಿತ್ತು. ಇವಳೊಡನೆ ಚಿಕಿತ್ಸೆಗೆ "ದೊಡ್ಡ ಡಾಕ್ಟರು ಬೇಕಾ ಚಿಕ್ಕ ಡಾಕ್ಟರು ಬೇಕಾ?" ಎಂದು ಕೇಳಿದರು "ಚಿಕ್ಕ ಡಾಕ್ಟರೇ ಸಾಕು" ಎಂಬ ಉತ್ತರ ಇವರದು. ಚಿಕ್ಕ ಡಾಕ್ಟರು ಎಂದರೆ ವೈದ್ಯಕೀಯ ವಿದ್ಯಾರ್ಥಿಗಳು ಅವರಿಗೆ ಕಮ್ಮಿ ಫೀಸ್ ಕೊಟ್ಟರೆ ಸಾಕು. ದೊಡ್ಡ ಡಾಕ್ಟರ್ ಎಂದರೆ ವೈದ್ಯಕೀಯ ಶಿಕ್ಷಣ ಮುಗಿಸಿದವರು. ಅವರಿಗೆ ಫೀಸು ಕೊಡುವಷ್ಟು ಬಲಾಢ್ಯರು ಇವರಲ್ಲ. ಹೀಗೆ ಇವರು ವೈದ್ಯಕೀಯ ವಿದ್ಯಾರ್ಥಿಗಳಿಂದಲೇ

ಔಷಧ ಬರೆಸಿಕೊಳ್ಳುತ್ತಾರೆ. ಆಕೆ ಕೆಲವು ದಿನ ಈ ಖಾಸಗಿ ಆಸ್ಪತ್ರೆಯಲ್ಲಿ ಮಲಗಿದರೂ ಜ್ವರ ಬಿಡಲಿಲ್ಲ. ಆಕೆಯ ತಾಯಿಯ ಮೂಢನಂಬಿಕೆ ತಲೆ ಎತ್ತಿತ್ತು. ತಮ್ಮೂರಿಗೆ ಹೋಗಿ ಬೆತ್ತಲೆಸೇವೆ ಮಾಡದಿದ್ದರೆ ಮಗಳ ರೋಗ ವಾಸಿಯಾಗುವುದಿಲ್ಲ! ಬೆತ್ತಲೆಯಾಗಿ ಓಡಿ ದೇವಿಯ ಸೇವೆ ಮಾಡದಿದ್ದುದ್ದರಿಂದಲೇ ದೇವಿಗೆ ಕೋಪವುಂಟಾಗಿ ಮಗಳ ರೋಗ ವಾಸಿಯಾಗಲಿಲ್ಲ. ತಾಯಿ ಮಗಳಿಬ್ಬರೂ ಊರಿಗೆ ಹೊರಟರು. ಉಟ್ಟ ಸೀರೆಯನ್ನು ಅಲ್ಲೇ ನದೀತೀರದಲ್ಲಿ ಬಿಚ್ಚಿಟ್ಟು ನದಿಯಲ್ಲಿ ಸ್ನಾನಮಾಡಿ ಬೆತ್ತಲೆಯಾಗಿ ಹಸಿರುಡುಗೆ (ಎಲೆಗಳು) ಉಟ್ಟು ದೇವಸ್ಥಾನಕ್ಕೆ ಓಡಿ ಅಲ್ಲಿ ಹೊಸ ಸೀರೆ ಉಟ್ಟುಕೊಂಡೆ ಎಂದು ಆ ಹುಡುಗಿ ನನ್ನೊಡನಂದಳು. ಈಗ ದೇವಿ ಪ್ರಸನ್ನಳಾದಳು ಎಂಬ ನಂಬಿಕೆ ತಾಯಿ ಮಗಳದು. ಹೆಣ್ಣುಮಕ್ಕಳಿಗೆ ಮುತ್ತು ಕಟ್ಟುವುದು (ದೇವದಾಸಿ ಪದ್ಧತಿ) ಎಂಬ ಪದ್ಧತಿ ಕೂಡ ಈಗಲೂ ನಿಂತಿಲ್ಲವೆನ್ನಲಾಗುತ್ತಿದೆ. ಜಾಗೃತ ಮಹಿಳೆಯರು ಈ ಪದ್ಧತಿಯ ವಿರುದ್ಧ ಕೂಡಾ ಹೋರಾಡಿದ್ದಾರೆ. ಆದರೆ ಇಂದಿಗೂ ಇಂತಹ ಪದ್ಧತಿಗಳನ್ನು ನಿಲ್ಲಿಸಲು ಸಾಧ್ಯವಾಗಿಲ್ಲವೆನ್ನಲಾಗುತ್ತಿದೆ. ಈ ಪದ್ಧತಿ ದೇವಸ್ಥಾನದಿಂದ ಪೂಜಾರಿಯ ಮನೆಗೆ ಅಥವಾ ಇನ್ನಾವುದಾದರೂ ನಿರ್ಜನಪ್ರದೇಶಕ್ಕೆ ಸ್ಥಳ ಬದಲಾವಣೆಯಾಗಿದೆ. ಈ ಹೆಣ್ಣುಮಕ್ಕಳು ಆ ಬಳಿಕ ಮುಂಬೈಯ ವೇಶ್ಯಾವಾಟಿಕೆಗೆ ಮಾರಾಟವಾಗುತ್ತಾರೆ.

ಒಂದೆಡೆಯಲ್ಲಿ ಧರ್ಮದ ಹೆಸರಿನಲ್ಲಿ ಹೆಣ್ಣುಮಕ್ಕಳ ಶೋಷಣೆ ನಿರಂತರವಾಗಿ ನಡೆಯುತ್ತಿದ್ದರೆ ಇನ್ನೊಂದೆಡೆಯಲ್ಲಿ ಕಟ್ಟಿಕೊಂಡ ಗಂಡಂದಿರಿಂದ ಅನುಭವಿಸುವ ದೌರ್ಜನ್ಯ ಮತ್ತು ದಬ್ಬಾಳಿಕೆಗೆ ಕೊನೆ ಮೊದಲಿಲ್ಲ. ಕೆಲವು ತಿಂಗಳುಗಳ ಹಿಂದೆ ನನ್ನ ಮನೆಗೆಲಸಕ್ಕೆ ಬರುತ್ತಿದ್ದ ಮಹಿಳೆಯೊಬ್ಬಳು ತನ್ನ ಮಗಳನ್ನು ಕೆಲಸಕ್ಕೆ ಕರೆದುಕೊಂಡು ಬರುತ್ತಿದ್ದಳು. ತುಂಬಿದ ಗರ್ಭಿಣಿಯಾಗಿದ್ದ ಆ ಹುಡುಗಿ ತಾಯಿಯ ಕೆಲಸದಲ್ಲಿ ನೆರವಾಗುತ್ತಿದ್ದಳು. “ಇನ್ನೂ ಯಾಕೆ ಇವಳಿಂದ ಕೆಲಸ ಮಾಡಿಸುತ್ತೀ? ಡಾಕ್ಟರಿಗೆ ತೋರಿಸಿಲ್ಲವೇ?” ಎಂದು ಕೇಳಿದಾಗ “ಇನ್ನೂ ಹತ್ತು ದಿನಗಳಲ್ಲಿ ಹೆರಿಗೆಯಾಗಬಹುದೆಂದಿದ್ದಾರೆ” ಎಂದಳು. ಆ ಹೆಣ್ಣು ಮಗಳು ಬಗ್ಗಿ, ಎದ್ದು ಕೆಲಸ ಮಾಡುವುದನ್ನು ನೋಡಿ ನನಗೆ ತಡೆಯಲಾಗಲಿಲ್ಲ. “ಆಕೆಯ ಗಂಡ ಎಲ್ಲಿ?” ಎಂದು ನಾನು ಕೇಳಿದಾಗ ಆಕೆಯ ಕೋಪ ಸ್ಫೋಟಗೊಂಡಿತು. ಅವಳು “ಇದ್ದಾನೆ ಮನೆಯಲ್ಲಿ ಅವನಿಗೆ ಡಿಗ್ರಿ ಪದವಿ ಇದೆಯಂತೆ! ಅವನು ಕೂಲಿ ಕೆಲಸಕ್ಕೆ ಹೋಗುವುದು ಅವನ ಮರ್ಯಾದೆಗೆ ಕಮ್ಮಿಯಂತೆ. ಆದ್ದರಿಂದ ಇವಳು ಕೂಲಿ ಕೆಲಸಮಾಡಿ ದುಡಿದು ಮನೆಗೆ ಹೋಗಿ ತನ್ನ ದುಡಿತದಿಂದ ಆಹಾರ ತಂದು ಅವನಿಗೆ ಅಡಿಗೆಮಾಡಿ ಹಾಕಬೇಕು” ಕೋಪದಿಂದ ಕುದಿಯುತ್ತಾ ಹೇಳಿದಳು. ಗರ್ಭಿಣಿ ಹೆಣ್ಣಿನ ಗರ್ಭದ ನೋವು, ಆಲಸ್ಯ, ಹೆರಿಗೆಯ ನೋವು, ಇವು ಯಾವುದನ್ನೂ ಓರ್ವ ಗಂಡಸು ಅರ್ಥ ಮಾಡಿಕೊಳ್ಳುವುದು ಸಾಧ್ಯವೇ ಇಲ್ಲವಲ್ಲ? ಅಂತಹ ಸಹಾನುಭೂತಿಗೆ ಓರ್ವ ಯಕಃಶ್ಚಿತ್ ಹೆಣ್ಣು ಅರ್ಹಳಲ್ಲ ಎಂಬುದು ಆತನ ಮನೋಭಾವವಾಗಿರಬಹುದು “ಅಂತಹ ಗಂಡ ಯಾಕೆ?” ಎಂದು ನಾನು ಕೇಳಿದಾಗ “ನಮ್ಮ ಗಂಡಸರು ಹೀಗೇ ಅಮ್ಮಾ ಅವರು ಸಮನಾಗಿ ದುಡಿಯುವುದಿಲ್ಲ, ದುಡಿದು ನಾಲ್ಕು ಕಾಸು ಕೈಯಲ್ಲಿದ್ದರೆ ಹೆಂಡದಂಗಡಿಗೆ ಹೋಗುತ್ತಾರೆ, ಅವರು ಸೋಮಾರಿಗಳು ನಾವು ದುಡಿದು ಅವನನ್ನು ಸಾಕಬೇಕಾಗುತ್ತದೆ” ಎಂದಳು.

ಚಿಕ್ಕಪ್ರಾಯದಲ್ಲಿ ಅಮಾಯಕ, ಅನಕ್ಷರಸ್ಥ ಹುಡುಗಿಯರನ್ನು ಮದುವೆ ಮಾಡಿ ಕಳುಹಿಸಿ ಹೆತ್ತವರು ಕೈತೊಳೆದುಕೊಳ್ಳುತ್ತಾರೆ. ಅವಳಿಗೇನಾದರೂ ಕಷ್ಟ, ತೊಂದರೆಯಾದರೆ ‘ಅದು ಅವಳ ಹಣೆಬರಹ’ ಎನ್ನುತ್ತಾರೆ. ಪರಿಣಾಮ ಇಂದು ನಾವು ಪತ್ರಿಕೆ ತೆರೆದೊಡನೆ ಕಾಣುತ್ತಿರುವ ಸುದ್ದಿಗಳು ‘ಇಬ್ಬರು ಮಕ್ಕಳನ್ನು ಅಥವಾ ಮೂವರು ಮಕ್ಕಳನ್ನು ಬಾವಿಗೆ ತಳ್ಳಿ ತಾಯಿ ಆತ್ಮಹತ್ಯೆ ಮಾಡಿಕೊಂಡಳು’ ಅಥವಾ ‘ಮಗುವನ್ನು ಅಥವಾ ಹೆಂಡತಿಯನ್ನು ಗಂಡ ಮಾರಾಟ ಮಾಡಿದನು’ ‘ಹೆಂಡ ಕುಡಿದು ಬಂದು ಪತ್ನಿಯ ಕೊಲೆ ಮಾಡಿದ ಗಂಡ’

ಈ ಗಂಡಸರು ದುಡಿಯಲು ಸೋಮಾರಿಗಳಾದರೂ ಹೆಂಡತಿಯರ ಮೇಲಿರುವ ಸಂದೇಹವೇ ಇಂತಹ ಕೊಲೆಗಳಿಗೆ ಕಾರಣವಾಗುತ್ತವೆ. ಪತಿಪತ್ನಿಯರು ಜೊತೆಯಲ್ಲೇ ಕೆಲಸ ಮಾಡುತ್ತಿದ್ದರೂ ಅಲ್ಲೇ ಇನ್ನೋರ್ವನೊಡನೆ ಹೆಂಡತಿ ಮಾತನಾಡಿದರೂ ಗಂಡನಿಗೆ ಸಹನೆಯಾಗುವುದಿಲ್ಲ. ಮನೆಗೆ ಬಂದೊಡನೆ ಆಕೆಗೆ ಹೊಡೆತ, ಬಡಿತ ಪ್ರಾರಂಭವಾಗುತ್ತದೆ. ಹೆಂಡತಿಗೆ ಹೊಡೆದರೆ ಪೋಲಿಸರಿಗೆ ತಿಳಿಸುತ್ತೇವೆ ಎಂದರೆ ‘ಆಕೆ ನನ್ನ ಹೆಂಡತಿ, ಕೇಳುವುದಕ್ಕೆ ನೀವ್ಯಾರು ನನ್ನ ಹೆಂಡತಿಯನ್ನು ನಾನು ಏನೂ ಬೇಕಾದರೂ ಮಾಡುತ್ತೇನೆ’ ಎಂಬ ಉತ್ತರ ಮಗು ಹುಟ್ಟಿದರೂ ಅದು ತನ್ನದಲ್ಲವೆಂಬ ಸಂದೇಹ ಹಾಗಾಗಿ ಮಹಿಳೆಯೊಬ್ಬಳು ಪುಟ್ಟಮಗುವನ್ನು ಊರಿನಲ್ಲಿ ತನ್ನ ತಾಯಿಯ ಬಳಿಬಿಟ್ಟು ಬಂದಿದ್ದಾಳೆ. “ಅಂತಹ ಗಂಡನನ್ನು ಬಿಟ್ಟುಬಿಡು” ಎಂದರೆ “ಗಂಡ ಬಿಟ್ಟವಳು” ಎಂಬ ಹೆಸರನ್ನು ಕೇಳಿಸಿಕೊಂಡು ಬದುಕಲು ಆಕೆ ಸಿದ್ಧಳಿಲ್ಲ.

ಹೆಂಗಸರು ವರ್ಷವಿಡೀ ದುಡಿದು ನಾಲ್ಕುಕಾಸು ಉಳಿತಾಯ ಮಾಡಿದರೆ ಅದನ್ನು ಶಬರಿಮಲೆಗೆ ಹೋಗಿ ಅಯ್ಯಪ್ಪನ ಸೇವೆಮಾಡಲು ಸೆಳೆದುಕೊಳ್ಳುತ್ತಾರೆ. (ಅಯ್ಯಪ್ಪನಿಗೆ ಹೆಂಗಸರನ್ನು ಕಂಡರಾಗದು) ಹೋಗುವ ಕೆಲವು ದಿನಗಳ ಮೊದಲೇ ಕುಡಿತ, ಮನೆ ಊಟವನ್ನು ನಿಲ್ಲಿಸಿ ಉತ್ತಮ ನಡವಳಿಕೆ ತೋರುತ್ತಾನೆ. ಶಬರಿಮಲೆಗೆ ಹೋಗಿ ಬಂದ ಮೇಲೆ ಒಳ್ಳೆಯವನಾಗಿರುತ್ತೇನೆಂಬ ಭರವಸೆಯನ್ನೂ ನೀಡುತ್ತಾನೆ. ಆ ಭರವಸೆಯಲ್ಲಿ ವಿಶ್ವಾಸವಿಟ್ಟು ತಾನು ದುಡಿದುದೆಲ್ಲವನ್ನು ನೀಡುತ್ತಾಳೆ. ಆತನು ಇನ್ನು ಮುಂದಾದರೂ ಹೆಂಡದ ಚಾಳಿ ಬಿಡುತ್ತಾನೆಂಬ ಆಶಯ ಆಕೆಯದು. ಆತ ಹಿಂತಿರುಗಿದ ಬಳಿಕ

ಎಲ್ಲ ಚಾಳಿಗಳನ್ನೂ ಪ್ರಾರಂಭಿಸುತ್ತಾನೆ. ಆದರೆ ಆಕೆಯೂ ಬುದ್ಧಿ ಕಲಿಯುವುದಿಲ್ಲ. ಮರುವರ್ಷ ಪುನಃ ಅವನ ವರಸೆ ಪ್ರಾರಂಭವಾಗುತ್ತದೆ. ಆಕೆಯ ವಿಶ್ವಾಸವೂ ಅಚಲವಾಗಿರುತ್ತದೆ. ಈ ಬಾರಿಯಾದರೂ ಆತನು ತಿದ್ದಿಕೊಳ್ಳುವನೆಂಬ ವಿಶ್ವಾಸದಿಂದ ತನ್ನಲ್ಲಿರುವುದೆಲ್ಲವನ್ನೂ ಕೊಡುತ್ತಾಳೆ. ಇದು ಪ್ರತೀವರ್ಷವೂ ನಡೆಯುತ್ತದೆ! ಕೆಲವು ಹಿಂದುಳಿದ ಮಹಿಳೆಯರಿಗಂತೂ ಈ ಗಂಡನೇ ಕತ್ತಿಗೆ ಕಟ್ಟಿದ ಕಲ್ಲಿನಂತಾಗುತ್ತಾನೆ. ಹೆಣ್ಣುಮಕ್ಕಳನ್ನು ಮಾತ್ರ ಹೆತ್ತರೆ ಅದಕ್ಕೂ ಶಿಕ್ಷೆ ಗಂಡ ಏನೇ ಮಾಡಿದರೂ ಹೆಸರಿಗೊಂದು ಗಂಡ ಇದ್ದರೆ ಸಾಕು ಎಂಬ ಮನೋಭಾವ ಇವರದು.

ಹಿಂದುಳಿದ ವರ್ಗಗಳ ಮಹಿಳೆಯರ ಮುಖ್ಯ ಸಮಸ್ಯೆ ಅವರ ಅನಕ್ಷರತೆ, ಅದರಿಂದಾಗಿ ಅವರಲ್ಲಿರುವ ಮೂಢನಂಬಿಕೆ, ಬಾಲ್ಯ ವಿವಾಹ, ಪ್ರಪಂಚದ ಕುರಿತು ಕಣ್ಣು ಬಿಡುತ್ತಿರುವಂತೆಯೇ ಮದುವೆ ಎಂಬ ನೊಗಕ್ಕೆ ಹೆಗಲು ಕೊಟ್ಟರೆ, ಅಲ್ಲಿಗೆ ಬದುಕಿನ ಕುರಿತ ಅವರ ಕನಸುಗಳು ಕಮರಿಹೋಗುತ್ತವೆ.

# ಕೃಷಿ ಮತ್ತು ಗ್ರಾಮೀಣ ಮಹಿಳೆ

**ಡಾ. ಬಸವರಾಜ ನೆಲ್ಲಿಸರ**

ಗ್ರಾಮೀಣ ಮಹಿಳೆ ಹಗಲಿರುಳೂ ಹೊಲಗದ್ದೆಗಳಲ್ಲಿ ದುಡಿಯುತ್ತಲೇ ಜೀವನವನ್ನು ಸಾಣೆಕಲ್ಲಿನಂತೆ ಸವೆಸುತ್ತಾಳಾದರೂ ಈ ಲೋಕದ ಸಹವಾಸ ಸಾಕೆಂದು ಬದುಕಿನ ಬಗ್ಗೆ 'ನಕಾರಾತ್ಮಕ' ದೃಷ್ಟಿ ಬೆಳೆಸಿಕೊಂಡವಳಲ್ಲ. ದನಕರುಗಳನ್ನು ಮಕ್ಕಳಂತೆ ಪೋಷಿಸುವ ಪ್ರತಿಭೆಯುಳ್ಳವಳು. ಯಾವ್ಯಾವ ಕಾಲಕ್ಕೆ ಯಾವ್ಯಾವ ಬಗೆಯ ತಿಂಡಿ,ತಿನಿಸು, ಊಟ–ಉಪಚಾರಗಳನ್ನು ಮಾಡಬೇಕು. ಕೃಷಿಯಲ್ಲಿ ಯಾವ ಬೆಳೆಗೆ ಹೇಗೆ ಗೊಬ್ಬರ ಕೊಡಬೇಕು ಎಂಬಿತ್ಯಾದಿ ವಿಚಾರಗಳು ಮತ್ತು ಬಂಧು ಬಳಗದವರನ್ನು ಹೇಗೆ ಉಪಚರಿಸಬೇಕೆಂಬ ವಿವೇಕವನ್ನು ನಿಸರ್ಗದಿಂದಲೇ ಕಲಿತಿರುತ್ತಾಳೆ. ಪ್ರಕೃತಿಯ ಆರಾಧಕರಾದ "ಬುಡಕಟ್ಟು ಮಹಿಳೆ ಪಂಚಭೂತಗಳಾದ ಭೂಮಿ, ಆಕಾಶ, ನೀರು, ಗಾಳಿ, ಮತ್ತು ಬೆಂಕಿಯಷ್ಟೇ ಪವಿತ್ರವಾದುದು 'ಕಾಡು' ಎಂದು ಭಾವಿಸುತ್ತಾರೆ". (ಬುಡಕಟ್ಟು ಅಧ್ಯಯನ, ಪು64 ರಾಜೇಶ್ವರಿ ಎನ್.) ಇವರ ಜೀವನ ಶೈಲಿ, ಸರಳ, ನೇರ, ಸ್ಪಷ್ಟ. ಕಾಡಿನ ಗಿಡಮರಗಳಲ್ಲಿ ದೈವವನ್ನು ಕಾಣುತ್ತಾರೆ. ಅಲೆಮಾರಿ ಜನಾಂಗಗಳ ಹೆಣ್ಣುಮಕ್ಕಳಿಗೆ ಶಿಕ್ಷಣದ ಗಂಧಗಾಳಿಯೇ ಇಲ್ಲ. ಅದರಲ್ಲೂ 'ಹಕ್ಕಿಪಿಕ್ಕಿ'ಗಳು ಬೇಟೆಯಾಡುವುದರಲ್ಲೇ ಸಿದ್ಧಹಸ್ತರು, ಗಂಡಂದಿರ ಜೊತೆ ಜೊತೆಯಲ್ಲೇ ಕುದುರೆ, ಎತ್ತು, ಹಸು ಮುಂತಾದ ಪ್ರಾಣಿಗಳ ಮೂಲಕ ತಮ್ಮ ಮನೆಯ ಸಾಮಾನು ಸರಂಜಾಮುಗಳನ್ನು ಸಾಗಿಸುತ್ತಾ ಅಲ್ಲಲ್ಲೇ ಉಳುಪಯಣ ಮಾಡುವ ಇವರಿಗೆ ಜೇನುಹುಳುಗಳು ಮತ್ತು ಸೀಳುನಾಯಿಗಳಿಗಿಂತಲೂ ಬಲಿಷ್ಠವಾದ ಸಂಘಟನಾ ಮನೋಭಾವವಿದೆ. ಜೊತೆಗೆ ಮಹಿಳೆಯರಲ್ಲಿ ಅಪಾರವಾದ ತಾಳ್ಮೆ ಮತ್ತು ಮಾನವೀಯ ಮೌಲ್ಯಗಳಿವೆ. ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಹೊಟ್ಟೆ ತುಂಬಿಸಿಕೊಳ್ಳುವಲ್ಲಿ ಜೊತೆಗೆ ಕಾಡಿನಲ್ಲಿರುವ ಬೇವು, ಮಾವು, ಹುಣಸೆ, ಮುಂತಾದವುಗಳಲ್ಲದೆ ಗಿಡಮೂಲಿಕೆಗಳನ್ನು ಸಂಗ್ರಹಿಸುವಾಗ ಪ್ರಕೃತಿ ಸಂಪತ್ತನ್ನು ದುರಾಸೆಯಿಂದ ದೋಚದೇ ಪ್ರಜ್ಞಾಪೂರ್ವಕವಾಗಿ ಹಿತಮಿತವಾಗಿ ಬಳಸುವ ಬುಡಕಟ್ಟು ಹೆಣ್ಣುಮಕ್ಕಳು ಪರಿಸರ ಸ್ನೇಹಿಗಳು. ಇವರ ಆಹಾರ, ಆಚರಣೆ, ನಂಬಿಕೆ, ನಿಷೇಧ, ಅಲಂಕಾರ, ಮನರಂಜನೆ, ಆರ್ಥಿಕತೆ ಪ್ರತಿಯೊಂದು ನೇರವಾಗಿ ಕಾಡಿನೊಂದಿಗೆ ಬೆಸೆದಿರುವುದರಿಂದ ಗಿಡಗಳಲ್ಲೇ ಇರುವ ತಾಜಾತನದ ಹಣ್ಣುಹಂಪಲುಗಳು, ಎಳೆಯಬಿದಿರು (ಕಳಲೆ), ಇವರ ಆಹಾರ ಹಾಗೂ ಆದಾಯದ ಮೂಲವಾಗಿರುತ್ತವೆ. (ಬುಡಕಟ್ಟು ಅಧ್ಯಯನ ಸಂ. 4 ಸಂಚಿಕೆ ಎ 2008) ಪ್ರಕೃತಿ ಜೊತೆಯಲ್ಲೇ ಬೆಳೆದದ್ದರಿಂದ ಪುರುಷರಷ್ಟೇ ಸಮಬಲಳಾಗಿರುತ್ತಾಳೆ. ಇವಳ ಜೀವನಾನುಭವಗಳು ಭಿನ್ನವಾಗಿರುತ್ತವೆ. ಹೆಣ್ಣೆಂದರೆ, ದೇಹ, ಉಪಭೋಗ, ಲೈಂಗಿಕತೆ, ಮಕ್ಕಳು, ಇಷ್ಟೇ ಆಗಿರದೆ ಸಮೂಹ ಜೀವನ, ಪ್ರಾಣಿಪಕ್ಷಿಗಳ ಪ್ರೀತಿ, ಆತ್ಮವಿಶ್ವಾಸ, ಕಾರ್ಯತತ್ಪರತೆ, ಮತ್ತು ಕುಟುಂಬದ ಜವಾಬ್ದಾರಿ ಮುಖ್ಯವಾಗಿರುತ್ತದೆ. ನಾನೊಬ್ಬಳೇ ಎನ್ನುವುದಕ್ಕಿಂತ ನಾವೆಲ್ಲರೂ ಬದುಕಬೇಕೆನ್ನುವ ತತ್ತ್ವ ಇವಳದಾಗಿರುತ್ತದೆ. ಬೆವರು ಸುರಿಸಿ ದುಡಿದು ದಣಿವಾರಿಸಿಕೊಳ್ಳಲು ಕುಣಿತ, ಮೆರೆತ, ಹಾಡು, ಹಸೆಗಳಲ್ಲಿ ತಲ್ಲೀನಳಾಗಿರುತ್ತಾಳೆ. ಸ್ತ್ರೀ ಪುರುಷರ ನಡುವೆ ಕಿಂಚಿತ್ತೂ ಬೇಧವಿಲ್ಲ.

ಗ್ರಾಮೀಣ ಮಹಿಳೆಯರು ಕೃಷಿಯ ಜೊತೆಗೆ ಪಶುಪಾಲನೆಯನ್ನು ಸಹ ಮಾಡುತ್ತಿರುತ್ತಾರೆ. ದನ,ಎಮ್ಮೆ,ಮೇಕೆ, ಮತ್ತು ಕುರಿಕೋಳಿಗಳನ್ನು ಸಾಕುತ್ತಾ ಆರ್ಥಿಕತೆಯನ್ನು ಸರಿದೂಗಿಸಿಕೊಳ್ಳುತ್ತಾರೆ. ಆಧುನಿಕ ಕೃಷಿಯ ನೇರ ಪರಿಣಾಮ, ನಮ್ಮ ಹಳ್ಳಿಯ ಹೆಣ್ಣುಮಕ್ಕಳ ಪಶುಪಾಲನೆಯ ಮೇಲಾಗಿದೆ. ಗ್ರಾಮಸಂಸ್ಕೃತಿಯನ್ನು ಸಮೃದ್ಧಗೊಳಿಸುತ್ತಿದ್ದ ಗುಡಿ ಕೈಗಾರಿಕೆಗಳು, ಆಯಗಾರರು ಮಾಯವಾದರು. ದೇವರ ಕಾಡು ನಾಶವಾಗುತ್ತಿದೆ. ಕೆರೆ ಕಟ್ಟೆಗಳಲ್ಲಿ ನೀರು ಸಂಗ್ರಹವಿಲ್ಲದೆ ಜೀವ ಸಂಕುಲಗಳು ಕಣ್ಮರೆಯಾಗುತ್ತಿವೆ. "ನಮ್ಮ ಜನಪದರರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿದ್ದ ಕಸುಬಾಗಿರಲಿಲ್ಲ. ನಿಸರ್ಗ ಧರ್ಮವನ್ನು ಗೌರವಿಸಿದಂತೆ ಕಟ್ಟಿಕೊಂಡ ಕಾಯಕವಾಗಿತ್ತು." (ಕೃಷಿ ಆಚರಣೆ ಮುನ್ನುಡಿ ಎಸ್.ಜಿ. ಸಿದ್ಧರಾಮಯ್ಯ 218) ಅನ್ನ, ಆಶ್ರಯ, ನೀಡುವ ಭೂಮಿತಾಯಿಯ ಬಗ್ಗೆ ಅಪಾರ ಶ್ರದ್ಧೆ, ಗೌರವವನ್ನುಳ್ಳವಳಾದ್ದರಿಂದಲೇ ಹೊಲಗದ್ದೆಗಳಲ್ಲಿ ಪೈರು ಬೆಳೆದುನಿಂತಾಗ ಭೂಮಿ ಹುಣ್ಣಿಮೆ, ಸಂಕ್ರಾಂತಿ ಮುಂತಾದ ಹಬ್ಬಾಚರಣೆ ಮಾಡಿ ಅವಳಿಗೆ ಕೃತಜ್ಞತೆ ಸಲ್ಲಿಸುತ್ತಿದ್ದಳು. ಅಷ್ಟೇ ಅಲ್ಲದೇ, ಸತ್ಯಸಂಗತಿ ಹೇಳುವಾಗೆಲ್ಲಾ ಭೂಮಿತಾಯಿಯ ಮೇಲೆ ಆಣೆ ಹಾಕುವ ಪದ್ಧತಿ ಕೂಡ ಉಂಟು. ಹೊಸ ವರ್ಷದಲ್ಲಿ ಮೊದಲ ಬೇಸಾಯ (ಹೊನ್ನಾರು) ಮಾಡುವಾಗ ನೇಗಿಲು, ಮೇಣಿ, ನೊಗ, ಎತ್ತುಗಳಿಗೆ ಅರಿಶಿಣ, ಕುಂಕುಮವನ್ನಿಟ್ಟು ಪೂಜೆ ಮಾಡಿ ಫಲಾಹಾರ ಎಡೆಮಾಡಿ 'ಭೂದೇವಿ'ಗಾರತಿ ಬೆಳಗಿ, ಬೆನಕ'ನಿಗೆ ನಮಸ್ಕರಿಸಿ ಸಾಂಕೇತಿಕವಾಗಿ ಮೂರುಗೆರೆ ಉಳುಮೆ ಮಾಡಲಾಗುತ್ತದೆ. ಇಲ್ಲೆಲ್ಲಾ ಮಹಿಳೆಯರದೇ ಪ್ರಧಾನ ಪಾತ್ರ. 'ಭೂಮಿ ಹುಣ್ಣಿಮೆ'ಯು ಭತ್ತ, ರಾಗಿ, ತೆನೆ ತುಂಬಿ ಪೈರು ಹುಲುಸಾಗಿ ಬೆಳೆದು ನಿಂತಾಗ ಮಾಡುವ ಸಂಭ್ರಮಾಚಾರಣೆ. ಮಲೆನಾಡಿನ ಭಾಗದಲ್ಲಿ ಮಹಿಳೆಯರು ಬುಟ್ಟಿಗಳ ಮೇಲೆ, ಬಿಳಿ ಜೇಡಿಮಣ್ಣು ಕೆಮ್ಮಣ್ಣಿನಿಂದ ಸೂರ್ಯ, ಚಂದ್ರ, ನಕ್ಷತ್ರ, ಗಿಡ, ಮರ, ಬಳ್ಳಿ ಮುಂತಾದ ನಾನಾ ಬಗೆಯ ಚಿತ್ತಾರಗಳನ್ನು ಬಿಡಿಸುತ್ತಾರೆ. ಆ ಕಾಲದಲ್ಲಿ ಬೆಳೆದು ನಿಂತ ವೈವಿಧ್ಯಮಯ ತರಕಾರಿಗಳಿಂದ

ಪಲ್ಯ ಪಚಡಿ, ಉಪ್ಪಿನಕಾಯಿ ಮುಂತಾದವುಗಳಲ್ಲದೆ ಇಪ್ಪತ್ತಕ್ಕೂ ಹೆಚ್ಚಿನ ತರಾವರಿ ಅಡುಗೆಗಳನ್ನು ಮಾಡಿ ಮೂರ್‍ನಾಲ್ಕು ಬುಟ್ಟಿಯಲ್ಲಿಟ್ಟುಕೊಂಡು ತಮ್ಮ ತಮ್ಮ ಹೊಲಗದ್ದೆಗಳಿಗೆ ಹೋಗಿ, ಒಂದು ಹಿಡಿ ಪೈರನ್ನು ಒಟ್ಟುಗೂಡಿಸಿ ಬಳೆ, ಬಿಚ್ಚೋಲೆ, ಮತ್ತು ತಾಳಿಯನ್ನು ಕಟ್ಟಿ, ಮಾವಿನತೋರಣ ಹಾಕಿ ಮತ್ತು ಕಬ್ಬಿನ ಜಲ್ಲೆಗಳನ್ನು ನೆಟ್ಟು ಕಳಸ ಹೂಡಿ ಮುತ್ತೈದೆಯರೆಲ್ಲಾ ಪೂಜಿಸಿ, ಇಡೀ ಪೈರಿಗೆಲ್ಲಾ 'ಚರಗ' ಚೆಲ್ಲಿ, ಮನೆ ಮಂದಿ ಬಂಧು ಬಳಗವೆಲ್ಲಾ ಕುಳಿತು ಸಹಪಂಕ್ತಿ ಭೋಜನ ಮಾಡುವ ವಿಶಿಷ್ಟ ಹಬ್ಬಾಚರಣೆಯಲ್ಲಿ ಆ ಮನೆಯ ಗರತಿಯರ ಶ್ರಮ, ಸಂತೋಷವನ್ನು ಗ್ರಾಮೀಣ ಪರಿಸರದಲಿ ಮಾತ್ರ ನೋಡಬಹುದಾಗಿದೆ. ಹೀಗೆಯೇ ಹುತ್ತರಿ, ಯುಗಾದಿ, ಕಂಬಳ ತಿಪ್ಪಪೂಜೆ, ರಾಶಿಪೂಜೆ, ಕರಿಭಂಟನ ಪೂಜೆ, ಮಣ್ಣೆತ್ತಿನ ಅಮಾವಾಸ್ಯೆ ಬೆಳದಿಂಗಳಪ್ಪನ ಪೂಜೆ, ಆಟಿಕಳೆಂಜ ಮುಂತಾದ ಹಬ್ಬಗಳೆಲ್ಲದರಲ್ಲೂ ಹೆಣ್ಣಿನ ಶ್ರಮ ಮತ್ತು ಸಂಭ್ರಮವಿರುತ್ತದೆ. ಕೃಷಿ ಆಚರಣೆಗಳೆಂದರೆ ಭೂಮಿ, ಮಳೆ, ಬೀಜ ಮತ್ತು ಪ್ರಕೃತಿಯ ಎಲ್ಲಾ ಸಂಕುಲಗಳೊಂದಿಗೆ ಗಾಢ ಸಂಬಂಧವನ್ನು ಬೆಸೆಯುವುದಾಗಿದೆ.

ಗ್ರಾಮೀಣ ಪರಿಸರದಲ್ಲಿ ಏನಿಲ್ಲ ಏನುಂಟು? ಹರಿಯುವ ನದಿ, ಕೆರೆ ಕಂಟೆ ಸುಂದರವಾದ ಹಸಿರು ಹೊಲಗದ್ದೆ, ತೆಂಗು, ಬಾಳೆ, ಅಡಿಕೆ, ತೋಟಗಳು, ಗುಡಿಗುಂಡಾರಗಳು ಗಿಡ ಮರ ಪಕ್ಷಿ ದನಕರು ಎತ್ತು ಎಮ್ಮೆ ಕುರಿ ಕೋಳಿ ಇಂತಹ ಸ್ವಚ್ಛಂದ ಪರಿಸರದಲ್ಲಿ ಬೆಳಗಿನಿಂದ ಸಂಜೆವರೆಗೂ ಬದುಕುವ ಹೆಣ್ಣಿನ ಅಂತರಾಳದಲ್ಲಿ ಮಾನವೀಯ ಮೌಲ್ಯಗಳು, ಪ್ರೀತಿ ವಿಶ್ವಾಸಗಳು ಮನೆ ಮಾಡಿರುತ್ತವೆ. ಅವಿಭಕ್ತ ಕುಟುಂಬಗಳಲ್ಲಿದ್ದು ಎಲ್ಲರ ಸುಖದುಃಖಗಳಿಗೆ ಸ್ಪಂದಿಸುತ್ತಾ ಸಾಮರಸ್ಯವನ್ನು ಬೆಸೆಯುತ್ತಾಳೆ. ನೆರೆಹೊರೆಯವರ ಜೊತೆ ಉತ್ತಮ ಒಡನಾಟವಿಟ್ಟುಕೊಂಡು ಸಾಮೂಹಿಕ ಆಚರಣೆಗಳಲ್ಲಿ ಮದುವೆ ಸಮಾರಂಭ ಮುಂತಾದವುಗಳಲ್ಲಿ ತೊಡಗಿಸಿಕೊಂಡು ತುಂಬು ಕುಟುಂಬದ ಮಾನಮರ್ಯಾದೆಗೆ ಭಂಗಬಾರದಂತೆ ನಡೆದುಕೊಳ್ಳುತ್ತಾ ಸಂಸಾರವನ್ನು ಸಮರ್ಥವಾಗಿ ಸರಿದೂಗಿಸಿಕೊಂಡು ಹೋಗುವ ಕರ್ತವ್ಯ ಈ ಗರತಿಯರದಾಗಿತ್ತು.

ತಮ್ಮ ಕೈಲಾದಷ್ಟು ಕೆಲಸ ಮಾಡುತ್ತಾ ಊರಿನವರೆಲ್ಲರ ಜೊತೆ ಅಣ್ಣ, ಅಪ್ಪ, ಅಜ್ಜ, ಅಜ್ಜಿ, ಅಕ್ಕ, ತಂಗಿಯರೆಂದು ಸಂಭೋದಿಸುತ್ತಾ ಸಂಸಾರಕ್ಕೆ ಬೇಕಾದಷ್ಟು ಮಾತ್ರ ಸಂಪಾದಿಸುವ ಸಂತೃಪ್ತ ಬದುಕು, ನಿಸ್ವಾರ್ಥ, ಜೀವನ ನಡೆಸುತ್ತಿದ್ದ ಗ್ರಾಮೀಣ ಹೆಣ್ಣಿಗೆ ತನ್ನೂರು, ತನ್ನದೈವ, ತನ್ನ ಹೊಲ ಮನೆ, ತನ್ನ ಕುಟುಂಬವಷ್ಟೇ ಪ್ರಪಂಚವಾಗಿತ್ತು. ಮನೆಯಲ್ಲಿನ ಹಿರಿಯರ ಸೇವೆಯೇ ದೇವರ ಪೂಜೆ ಎಂದು ಭಾವಿಸಿದ್ದಳು. ಮಕ್ಕಳ ಪೋಷಣೆಗಾಗಿ ಹಾಲು, ಮೊಸರು ಬೆಣ್ಣೆ ತುಪ್ಪಕ್ಕಾಗಿ ದನಕರುಗಳನ್ನು ಸಾಕುತ್ತಿದ್ದಳು. ಅಡಿಗೆಗೆ ಬೇಕಾದ ಹಣ್ಣು ತರಕಾರಿಗಳಿಗಾಗಿ ದೂರದ ಸಂತೆ ಪೇಟೆಗಳಿಗೆ ಹೋಗದೆ, ಮನೆಯ ಹಿತ್ತಲ ಕೈತೋಟದಲ್ಲೇ ಬೆಳೆಸಿಕೊಳ್ಳುತ್ತಿದ್ದಳು. ಹಿರಿಯರ ನಡೆ–ನುಡಿ ಆದರ್ಶಗಳನ್ನು ಕಿರಿಯರಿಗೆ ಅರ್ಥೈಸಲು ಪ್ರಯತ್ನಿಸುತ್ತಿದ್ದಳು. ಆಡಂಬರದ ಜೀವನ, ಸ್ವಾರ್ಥ ಲಾಲಸೆಗಳಿಗೆ ಮನ ಸೋಲದೆ ಗಾಣದೆತ್ತಿನಂತೆ ದುಡಿಯುತ್ತಿದ್ದಳು. ಹೀಗೆ ದೇಶೀ ಸಮುದಾಯಗಳಲ್ಲಿ ಜೀವನ ನಡೆಸುವವರಿಗೆ ಪರಂಪರೆಯ ಅರಿವಿರುತ್ತದೆ. ಅನುಕೂಲವಾದದ್ದನ್ನು ಸೇರಿಸಿಕೊಳ್ಳುತ್ತದೆ. 'ನೋಡಿ ಕಲಿ ಮಾಡಿ ತಿಳಿ' ಎಂಬುದೇ ಕೃಷಿ ಮಹಿಳೆಯ ಮಂತ್ರ. ಪಾಪ–ಪುಣ್ಯ ಸ್ವರ್ಗ–ನರಕಗಳು ಎಂಬ ನಾವು ಇತರರೊಂದಿಗೆ ಹೇಗೆ ಪ್ರಾಮಾಣಿಕ ಜೀವನ ನಡೆಸುತ್ತೇವೆಂಬುದರ ಮೇಲೆ ಅವಲಂಬಿಸಿರುತ್ತವೆ. ನೂರಾರು ಭಾಷೆಗಳನ್ನಾಡುವ ಜನರು ನೂರಾರು ವೃತ್ತಿಗಳಲ್ಲಿ ನಿರತರಾಗಿದ್ದಾರೆ. ಆಯಾ ವೃತ್ತಿ ಸಂಬಂಧವಾದ ಹಾಡು ಮತ್ತು ಆಚರಣೆಗಳಲ್ಲಿ ಹಾಗೂ ಸರಸ ವಿರಸಗಳಲ್ಲಿ ವಿನಯ ವಿನೋದಗಳಲ್ಲಿ ಸ್ಪರ್ಧಾತ್ಮಕ ಮನೋಭಾವಗಳು ಕಂಡುಬರುತ್ತವೆ. ತಾಯಿಯಿಂದ ಮಗಳಿಗೆ ಮೌಖಿಕವಾಗಿ ಹಾಗೂ ಅನುಕರಣೆಯಿಂದ ಹಾಡು ಹಸೆಗಳು ಅಡುಗೆ ವಿಧಾನಗಳು ಕಲಿಸಲ್ಪಡುತ್ತವೆ. ಹಾಗೆಯೇ ಮನೆಯ ಯಜಮಾನರುಗಳು, ಗುರುಹಿರಿಯರಿಗೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ತೋರಿಸಿಕೊಡಲಾಗುತ್ತದೆ. ಭೌತಿಕ ಸಂಸ್ಕೃತಿ, ಜೀವನಾವರ್ತನ ಹಬ್ಬಗಳು, ರಂಗಪ್ರದರ್ಶನ ಕಲೆಗಳ ಮೂಲಕ ತೋರಿಸಿಕೊಡುತ್ತಾರೆ. ಹೀಗೆ ಗರತಿಯ ಬೆನ್ನ ಹಿಂದೆ ಭಾವೈಕ್ಯತೆಯ ಬೆಸುಗೆ ಇದೆ. ಅವಳ ಮಾತುಕತೆಗಳಲ್ಲಿ ನಡೆ–ನುಡಿಗಳಲ್ಲಿ ಬಹು ಸಂಸ್ಕೃತಿಯ ಅನನ್ಯತೆಯನ್ನು ಕಾಣಬಹುದಾಗಿದೆ. ಮನೆಯ ಭೌತಿಕ ಪರಿಸರದಲ್ಲಿ ಸ್ವಚ್ಛತೆ ಮತ್ತು ಸಮೃದ್ಧಿ ಇದೆ. ಜಾಗತೀಕರಣದ ವ್ಯಾಮೋಹದಿಂದಾಗಿ ಕೃಷಿ ಮಹಿಳೆಯ ಬದುಕಿನಲ್ಲಿ ಸಂಘರ್ಷಗಳು ನಡೆಯುತ್ತಿದ್ದು ಸಾಂಸ್ಕೃತಿಕ ಬದಲಾವಣೆಗಳಾಗುತ್ತಿವೆ.

ಗ್ರಾಮೀಣ ಹೆಣ್ಣಿನ ಇಹಪರ ಲೋಕದೃಷ್ಟಿಯಲ್ಲಿ ಈ ನೆಲದ ಸಂಸ್ಕೃತಿ ಇದೆ. ಸಂತಾನ ಮತ್ತು ಸಮೃದ್ಧಿಯ ಆಶಯಗಳಿವೆ. ತಾಯ್ತನ ಮತ್ತು ದುಡಿಮೆಯ ಮಹತ್ವವಿದೆ. ಸಮಾನತೆಯ ಕನಸುಗಳೆಲ್ಲಾ ಮನುಷ್ಯ ಪ್ರಯತ್ನದಲ್ಲೇ ಇದ್ದಾವೆಂಬುದನ್ನು ಹಸಿದವರಿಗೆ ಅಶಕ್ತರಿಗೆ ವೃದ್ಧರಿಗೆ ಆರೈಕೆ ಮಾಡುವುದರಲ್ಲಿ ಮಾಡಿ ತೋರಿಸುತ್ತಾಳೆ. ಊರಿನಲ್ಲಿ ವರುಷಕ್ಕೊಮ್ಮೆ ನಡೆಯುವ ತೇರು ಜಾತ್ರೆಗಳಲ್ಲಿ ಅವಿಭಕ್ತ ಕುಟುಂಬದಲ್ಲಿ ಬಂಧು ಬಾಂಧವರ ಒಗ್ಗೂಡುವಿಕೆಯನ್ನು ಕಾಣುತ್ತೇವೆ. ಇಲ್ಲಿ ಹೆಣ್ಣಿನ ಅಂತರಂಗದ ಬಯಕೆಗಳಿಗೆ ಆಸೆ–ಆಕಾಂಕ್ಷೆಗಳಿಗೆ ಉತ್ತರವಿದೆ. ಹಾಗೆಯೇ ಪುರುಷ ಪ್ರಧಾನ ವ್ಯವಸ್ಥೆಯ ನಿರಾಕರಣೆ ಕೂಡ ಇದೆ. 'ಅಲ್ಲಿರುವುದು ನಮ್ಮನೆ ಇಲ್ಲಿಗೆ ಬಂದೆ ಸುಮ್ಮನೆ' ಎನ್ನದೆ, ದೇಹ ದಂಡಿಸಿ, ಬರುವ ಆದಾಯದಿಂದ ವಿಶ್ವಾತ್ಮರಾಗಿ ಬದುಕಿ ತೋರಿಸುವುದರಲ್ಲಿದೆ ಎನ್ನುತ್ತಾಳೆ. ಉದಾಹರಣೆಗೆ, ಉತ್ತಮ ಫಸಲಿಗೆ, ಭತ್ತದ

ಇಳುವರಿಗೆ ಪ್ರಾರ್ಥಿಸಲು ಆಚರಿಸುವ ವಿಶಿಷ್ಠ ಕೃಷಿ ಆಚರಣೆಯೊಂದಿದೆ. ಅದೆಂದರೆ, ಕಣದಲ್ಲಿ ರಾಶಿ ಮಾಡುವಾಗ ಕಟ್ಟುವ 'ಕರಿಭಂಟ'. ಹೊಲದ ಸುಗ್ಗಿಯ ಊರಿನ ಬಡವರೆಲ್ಲರಿಗೂ ದಾನಮಾಡಿ ನೆಮ್ಮದಿ ಪಡೆಯುತ್ತಾಳೆ. ಆದರೆ ಆಧುನಿಕ ಯಂತ್ರೋಪಕರಣಗಳಿಂದ ಮಾಡುವ ಕೆಲಸವೆಲ್ಲಾ ಜಾಗತೀಕರಣದ ಯಾಂತ್ರೀಕೃತ ಬದುಕಾಗಿದೆ. ಕೈಮುಟ್ಟಿ ಕೆಲಸ ಮಾಡುವವರೇ ಕಡಿಮೆಯಾಗುತ್ತಿದ್ದಾರೆ.

ಕೃಷಿಮಹಿಳೆ ಕಟ್ಟಿಕೊಂಡ ಪುರಾಣಗಳು ಶಿಷ್ಠ ಕಾವ್ಯಗಳದ್ದಲ್ಲ. ಅವಳು ಕಂಡುಂಡ ರಾಮಲಕ್ಷ್ಮಣರು ಭೀಮ ಧುರ್ಯೋಧನ ದ್ರೌಪದಿ ಸೀತೆಯರೇ ಬೇರೆ. ಉದಾಹರಣೆಗೆ ಜನಪದ ರಾಮಾಯಣದ ಒಂದು ಪ್ರಸಂಗ ಹೀಗಿದೆ. "ರಾಮಾಯಣದ ಮುಖ್ಯ ಕಥಾನಕ ಮುಗಿದು, ಶ್ರೀರಾಮಚಂದ್ರ ಸಂಭ್ರಮದಿಂದ ರಾಜ್ಯಭಾರ ಮಾಡುತ್ತಿರುವಾಗ ಕಾಡು ಪ್ರಾಣಿಗಳು ರೈತರ ಬೆಳೆಗಳ ಮೇಲೆ ದಾಳಿ ಮಾಡುತ್ತಿರುವಾಗ ಅದನ್ನು ರಕ್ಷಿಸಲು ರಾಮಲಕ್ಷ್ಮಣರು ಧಾವಿಸುತ್ತಾರೆ. ಅಲ್ಲಿ ಶೂರ್ಪನಖಿ ಭೇಟಿಯಾಗಿ ಮದುವೆಯಾಗೆಂದು ಒತ್ತಾಯ ಮಾಡಿ, ಅವರಿಂದ ಅವಮಾನಿತಳಾಗುತ್ತಾಳೆ. ನನಗೆ ಸಿಗದ ಸುಖ ಸೀತೆಗೂ ಸಿಗಬಾರದೆಂದು ಅಂತಃಪುರದಲ್ಲಿದ್ದ ಗರ್ಭವತಿ ಸೀತೆಯ ಬಳಿಗೆ ಯೋಗಿನಿಯಾಗಿ ಆಗಮಿಸಿ, ನೀನು ರಾವಣನ ಬಳಿ ಇದ್ದಾಗ ನೋಡಿದ ಆತನ ಚಿತ್ರ ಬಿಡಿಸಿಕೊಡಿ, ಭಿಕ್ಷೆ ಬೇಡಲು ಅನುಕೂಲವಾಗುತ್ತದೆಂದು ಅಂಗಲಾಚುತ್ತಾಳೆ. ಕಪಟವರಿಯದ ಸೀತಾಮಾತೆ ಹಾಗೆ ಮಾಡುತ್ತಾಳೆ. ಅದನ್ನು ಅಲ್ಲೇ ಪ್ರತಿಷ್ಠಾಪಿಸಿ ಪರಾರಿಯಾಗುತ್ತಾಳೆ. ಬೇಟೆಯಿಂದ ಮನೆಗೆ ಮರಳಿದ ಶ್ರೀರಾಮನಿಗೆ ರಾವಣನ ಚಿತ್ರದ ದರ್ಶನವಾಗುತ್ತದೆ. ಕಣ್ಣಾರೆ ಕಂಡರೂ ಪರಾಮರ್ಶಿಸಿ ನೋಡಬೇಕು ಈಗ ಸೀತೆ ಪ್ರಜೆಗಳ ಕಣ್ಣಲ್ಲಿ ಕಳಂಕಿತೆ ಆಗಿದ್ದಾಳೆಂದು ಸೀತೆಯನ್ನು ಕಾಡಲ್ಲಿ ಬಿಟ್ಟು ಬರಲು ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ. ಇದು ಜನಪದರು ಕಲ್ಪಿಸಿಕೊಂಡ ರಾಮಾಯಣದ ಪ್ರಸಂಗ. ಹಾಗೆಯೇ ಸೃಷ್ಟಿಯ ವೈಚಿತ್ರ್ಯಗಳಲ್ಲೆಲ್ಲಾ ರಾಮಾಯಣ ಮಹಾಭಾರತದ ಸನ್ನಿವೇಶಗಳನ್ನು ಜನರಿಗೆ ತಿಳಿಸಲು ಕಟ್ಟಿದ್ದಾರೆ. ಇಲ್ಲಿ ಪಾಂಡವರು ಬಂದು ಅಡಿಗೆ ಮಾಡಿ ಉಂಡು ಹೋಗಿದ್ದಾರೆ. ಹನುಮಂತ ಲಂಕೆಗೆ ಹೋಗಿ ಸೀತೆಯನ್ನು ಕಾಣಲು ಈ ಮಾರ್ಗವಾಗಿ ಬಂದಿದ್ದ ಮುಂತಾಗಿ ಹಲವಾರು ಸಂಗತಿಗಳನ್ನು ಮಕ್ಕಳಿಗೆ ಮನ ಮುಟ್ಟುವಂತೆ ಹೇಳುತ್ತಾರೆ. ಪರಂಪರಾಗತ ಜ್ಞಾನದ ಮೂಲಕ ಅಕ್ಷರವರಿಯದ ಮಹಿಳೆಯರು, ತಮ್ಮ ಮಕ್ಕಳಿಗೆ ಸತ್ಯ, ನ್ಯಾಯ ನೀತಿಯನ್ನು ಹೀಗೆ ಕಲಿಸುತ್ತಿದ್ದರು.

ಆಹಾರ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಕೃಷಿಯೇ ಪ್ರಮುಖವಾದುದು. ಗಂಡಸು ಭೂಮಿ ಉಳುಮೆ ಮಾಡಬಲ್ಲ. ಗಾಡಿ ಹೊಡೆಯಬಲ್ಲ. ಆದರೆ ಬೀಜ ಬಿತ್ತುವವಳು, ಮಕ್ಕಳ ಲಾಲನೆ ಪಾಲನೆ ಮಾಡುವವಳು, ದನಕರು ನೀರು ನಿಡೆ ನೋಡಿ ಅಡಿಗೆ ಮಾಡಿ ಗದ್ದೆಯಲ್ಲಿ ಉಳುಮೆ ಮಾಡುವ ಗಂಡನಿಗೆ ಉಣಬಡಿಸಿ, ತದನಂತರ ಪೈರು ಪಚ್ಚೆಯ ನಿಗಾನೋಡಿ ಬೆಳೆಯ ಕಳೆ ಕಿತ್ತು ಸಂಜೆ ಹೊತ್ತಿನವರೆಗೂ ಗಂಡಸಿನ ಸಮಾನವೇ ದುಡಿದು, ಮುಸ್ಸಂಜೆಗೆ ಮನೆಯಲ್ಲಿ ಎದುರಾಗುವ ಎಲ್ಲಾ ಸಮಸ್ಯೆಗಳು ಗರತಿಯ ಸುತ್ತಲೇ ಗಿರಕಿ ಹೊಡೆಯುತ್ತವೆ.

ಕೃಷಿಯಲ್ಲಿ ಸಂಪೂರ್ಣ ತನ್ನನ್ನು ತೊಡಗಿಸಿಕೊಂಡಿದ್ದರಿಂದ ಕಥೆ, ಗಾದೆ, ಒಗಟು, ಕಾವ್ಯಗಳಲ್ಲೆಲ್ಲಾ ಬೆಳೆಗಳನ್ನು ಕುರಿತ ವಿಚಾರಗಳು ಬರುತ್ತವೆ. ಅವೆಲ್ಲವನ್ನೂ ಇಲ್ಲಿ ಪ್ರಸ್ತಾಪಿಸದೇ ಒಗಟು ಮತ್ತು ಗಾದೆ ಪ್ರಕಾರಗಳಲ್ಲಿನ ಒಂದೆರಡು ಚಿತ್ರಣಗಳನ್ನು ಮಾತ್ರ ನೀಡಲಾಗಿದೆ.

**ಹೋಗುವಾಗ ಮಾವಿನ ತೋಟ**
**ಬರುವಾಗ ಬರೀ ತೋಟ**

ಬೆಳ್ಳಗೆ ಅರಳಿ ನಿಂತ ಹತ್ತಿ ಹೊಲದ ದೃಶ್ಯ ನೋಡಲು ಕಣ್ಣಿಗೊಂದು ಹಬ್ಬ. ಹತ್ತಿಯನ್ನು ಬಿಡಿಸಲು ಹೋಗುವಾಗ ಬಿಳಿಯ ಮಾವಿನ ತೋಟವಾಗಿ ಕಂಡದ್ದು, ಹತ್ತಿಯನ್ನೆಲ್ಲಾ ಬಿಡಿಸಿಕೊಂಡು ಹಿಂದಿರುಗಿ ಬರುವಾಗ ನೋಡಿದರೆ, ಬರಿಯ ಬೊಕ್ಕ ತಲೆಯಾಗಿ ಕಾಣುವುದನ್ನು ಇದು ಮಾರ್ಮಿಕವಾಗಿ ಸೂಚಿಸಿದೆ.

**ಅತ್ತೂರು ಹೆಣ್ಣೀಗೆ ನೆತ್ತೀಲಿ ಬಸಿರು**
**ಕಿತ್ತೂರು ಹೆಣ್ಣೀಗೆ ಮ್ಯಾತೇಲಿ ಬಸಿರು**
**ಮಂಡೆ ಬಸಿರು ಮೊಳಕೈಯಲ್ಲಿ**

ನವಣೆ, ಜೋಳ, ರಾಗಿ ಬೆಳೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ ರೈತನ ಮನಸ್ಸು ಅವುಗಳನ್ನು ಹೆಣ್ಣೆಂದು ಬಗೆದಿದೆ. ಅವು ಗರ್ಭಧರಿಸುವ ತೆನೆಯೊಡೆದು ಹೊರಬರುವ ವಿಧಾನವನ್ನು ವಿವರಿಸಿದೆ. ರಾಗಿಯ ಪೈರು ನೆತ್ತಿಯಲ್ಲಿ ಹೊರಬಂದರೆ, ಕಾಳು ಸಮೃದ್ಧವಾಗುವುದಿಲ್ಲ. ಒಂದೇ ತೆನೆಯಾಗುತ್ತದೆ. ಈ ಕಾರಣಕ್ಕೇ ರಾಗಿ ಗರ್ಭಧರಿಸುವ ಮುನ್ನ

ಎರಡು ಮೂರು ಸಾರಿ ದನ ಬಿಟ್ಟು ಮೇಯಿಸಿ, ಮಂಡೆ ಬೋಳಾಗುವಂತೆ ಮಾಡುತ್ತಾರೆ. ಆದ್ದರಿಂದ ಅದನ್ನು ಮಂಡೆ ಬಸಿರು ಎನ್ನಲಾಗಿದೆ.

**ಅಕ್ಕ ಅಕ್ಕ ಗಿಡ ನೋಡೆ**
**ಗಿಡದ ತುಂಬಾ ಕಾಯಿ ನೋಡೆ**
**ಕಾಯಿ ತಿಂದೋರ ಬಾಯಿ ನೋಡೆ (ಏಲಕ್ಕಿ)**
**ಹಗ್ಗ ಹಾಸಿದೆ ಕೋಣ ಮಲಗಿದೆ (ಕುಂಬಳಕಾಯಿ)**

ಮಹಿಳೆ ಕೃಷಿಯ ಚಟುವಟಿಕೆಯನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿ ಅವುಗಳ ಸೌಂದರ್ಯ ರಾಶಿಯನ್ನು ಬಗೆ ಬಗೆಯಾಗಿ ವರ್ಣಿಸಿದ್ದಾಳೆ. ಜನಪದ ಮಹಿಳೆಯ ಸ್ಮರಣಶಕ್ತಿ ಕಲ್ಪನಾಶಕ್ತಿ ವಾಚಿಕ ಪರಂಪರೆ ಕೇಳುವ ಸಂಸ್ಕೃತಿಗೆ ಸಂಬಂಧಿಸಿದ್ದು. ಕಂಡದ್ದನ್ನು ಕೇಳಿದ್ದನ್ನು ಅನುಭವಿಸಿದ್ದನ್ನು ಕಥೆ ಕಟ್ಟಿ ಹೇಳುವ ಭಾವನೆಗಳಲ್ಲಿ 'ಲೋಕದೃಷ್ಟಿ' ಅಡಗಿತ್ತು. ಭೂಮಿಯ ಮೇಲಿನ ಬದುಕೇ ಶ್ರೇಷ್ಠವೆಂದು ನಂಬಿದವಳು. ಸತ್ತಮೇಲೆ ಸ್ವರ್ಗನರಕ ಮುಂತಾದವೆಲ್ಲಾ ನಾವಿಲ್ಲಿ ಹೇಗೆ ಬದುಕಿ ಬಾಳಿದ್ದೇವೆಂಬುದರ ಮೇಲೆ ನಿರ್ಧರಿತವಾದವುಗಳು. ನಿಸರ್ಗದತ್ತವಾದ ಕಾಡು, ನೆಲ, ಜಲವನ್ನು ಆರಾಧಿಸುತ್ತಿದ್ದರು. ಆ ಕೃಷಿ ಮಹಿಳೆಗೆ ನೀರು, ಜೀವಜಲ, ಗಂಗಾಮಾತೆ. ಅರಳಿ, ಆಲ, ಅತ್ತಿ, ಮುಂತಾದ ಮರಗಳಲ್ಲಿ ಪ್ರಾಣವಾಯು ಇದೆ ಎಂದು ನಂಬಿ ಪೂಜಿಸುತ್ತಿದ್ದಳು. ತಾನು ಬದುಕುವುದರ ಜೊತೆಗೆ ಇಡೀ ಊರೇ ಚೆನ್ನಾಗಿ ಬದುಕಬೇಕೆಂದು ಸಮಷ್ಠಿ ಹಿತವನ್ನು ಬಯಸಿದವಳು. ಹಾಸಿಗೆ ಇದ್ದಷ್ಟು ಕಾಲು ಚಾಚಿ ಪರರ ಸೊತ್ತಿಗೆ ಆಸೆ ಪಡದೆ ಸಂತೃಪ್ತ ಬದುಕನ್ನು ನಡೆಸುತ್ತಾ ಮಾನಸಿಕ ಹಸಿವಿನಿಂದ ಬೆಳೆದವಳು.

**ಮುತ್ತು ಮಾಣಿಕ್ಯ ಬೇಡ ಮತ್ತೆ ಸಂಪದಬೇಡ**
**ಸುತ್ತು ಕೋಟೆಯ ವೈಭವ ಬೇಡ/ ನನ್ನವ್ವ**
**ಸುತ್ತೆಲ್ಲ ಜನಪದ ನಗುತಿರಲಿ**

ಈ ಜನಪದ ಗೀತೆ ಮುಖಾಂತರ ಗರತಿ ತನ್ನ ಸುತ್ತಲಿನ ಸಮಾಜವನ್ನು ಸುಖ ಸಮೃದ್ಧಿಯಿಂದ ಕಾಣಲೆತ್ನಿಸಿದ್ದಾಳೆ. ಇದು ಎಲ್ಲರ ಹರಕೆಯೂ ಆಗಬೇಕು. ಲೋಕದ ಜನತೆ ನೆಮ್ಮದಿಯಿಂದ ಬಾಳಬೇಕೆಂಬುದೇ ಅವಳ ಆಶಯ. ಕೃಷಿ ಸಂಸ್ಕೃತಿಯಲ್ಲಿ ಹೆಣ್ಣು ನಿಸರ್ಗಕ್ಕೆ ಹತ್ತಿರವಾಗಿ ಊಟ, ತಿಂಡಿ, ಉಡುಗೆ ತೊಡುಗೆ ನ್ಯಾಯ ನೀತಿ ಎಲ್ಲದರಲ್ಲೂ ದೇಶಿ ಜ್ಞಾನವನ್ನು ಮೆರೆದವಳು. ಸಾಂಪ್ರದಾಯಿಕ ಕೃಷಿ ಪದ್ಧತಿ, ಅಥವಾ ಸಾವಯುವ ಕೃಷಿ ಪದ್ಧತಿಯಿಂದ ಭೂಮಿಯ ಜೈವಿಕ ಸತ್ವವನ್ನು ಹಾಳು ಮಾಡದೆ ಹವಾಮಾನಕ್ಕೆ ಹೊಂದಿಕೊಂಡು ಸರಳ ಜ್ಞಾನ, ಪದ್ಧತಿಯಲ್ಲಿ ಉತ್ತಿ ಬಿತ್ತಿ ಬೆಳೆ ತೆಗೆಯುತ್ತಿದ್ದರು.

**ಸಾವೀಯ ಬಿತ್ತಿ ಸಾಹುಕಾರನಾದ**
**ಎಳ್ಳ ಬಿತ್ತೀ ಹಳ್ಳಿ ಗೌಡನಾದ/ ನನ ತಮ್ಮ**
**ಅರಿಶಿನ ಬಿತ್ತಿ ಅರಸನಾದ**
**ಬೆಳ್ಳನ ಬಿಳಿಯೆತ್ತು ಬೆಳ್ಳೀಯ ಬಾರುಕೋಲು**
**ಬಂಗಾರಸೆಡ್ಡಿ ಬಲಗೈಲೋ ಹಿಡಕೊಂಡು**
**ಹೊನ್ನ ಬಿತ್ತೋವೋ ಹೊಲಕೆಲ್ಲಾ**
**ಬಿತ್ತುವ ಅಣ್ಣಾಗ ಬುತ್ತಿ  ನಾ ಒಯ್ದೀನಿ**
**ಗುತ್ತಿ ಮ್ಯಾಲಾ ನಿಂತು ಕರಿದೀನಿ/ ಅಣ್ಣಯ್ಯ**
**ಬಿತ್ತೋದ ಬಿಟ್ಟು ಬರವೊಲ್ಲಾ**

ಗ್ರಾಮೀಣ ಹೆಣ್ಣಿನಲ್ಲಿ ವ್ಯಕ್ತವಾಗುವ ಜೀವನದೃಷ್ಟಿ, ಕಾಯಕನಿಷ್ಠೆ, ಭೂಮಿಗೆ ಬದ್ಧವಾದದ್ದು, ವೈವಿಧ್ಯಪೂರ್ಣ ಸಂಪ್ರದಾಯ ಆಚರಣೆಗಳಲ್ಲಿ ಸಂಸ್ಕೃತಿಸಂಪನ್ನ ಬದುಕಿದೆ. ಹಾಗಾಗಿಯೇ ನಮ್ಮ ರೈತ ಹೊನ್ನ ಬಿತ್ತೋವೋ ಹೊಲಕೆಲ್ಲಾ ಎನ್ನುವ ಮಾತಿನಲ್ಲಿ ಎಂಥ ಜೀವೋತ್ಪತ್ತಿಯಿದೆ? ಜಾನಪದ ಸಂಸ್ಕೃತಿ ಇಡೀ ಬದುಕನ್ನು ತಬ್ಬಿದೆ. ಇಂಥ ಸಾಂಸ್ಕೃತಿಕ ಕಣಜವಾಗಿದ್ದ ಮಹಿಳೆಯ ಕೌಟುಂಬಿಕ ಜೀವನದಲ್ಲಿ ಏರುಪೇರುಗಳಾಗಿವೆ. ಹದಿಬದೆಯ ಧರ್ಮದಲ್ಲಿ ಸಂಚಿ ಹೊನ್ನಮ್ಮ 'ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು' ಎಂದರು. ಹೆಣ್ಣು ಮಾಯೆಯಲ್ಲ, ಮನದ ಮಂದಣ ಆಸೆಯೇ ಮಾಯ ಕಣಾ ಎಂದ ಶರಣರು ಹೆಣ್ಣಿಲ್ಲದ ಸಂಸಾರ ಕಣ್ಣಿಲ್ಲದವನ ಬಾಳುವೆಯಂತೆ ಎಂದರು. ಕೃಷಿ ಬದುಕಿನಲ್ಲಿ ದುಡಿಯುವ ಗಂಡಸು ಯಜಮಾನನಾದ, ಹೆಣ್ಣಿನ ಗೃಹಕೃತ್ಯದ ಕೆಲಸ ನೋಡದೆ ಹೊಲದಲ್ಲಿ ಬೆಳೆದ ಬೆಳೆ ಮಾತ್ರ

ನೋಡುವಂತಾಯಿತು. ಅವಳ ತಾಳ್ಮೆ, ಸಹನೆ, ಸಮಯಪ್ರಜ್ಞೆ, ಅಡುಗೆ-ಉಡುಗೆ, ಮಕ್ಕಳ ಲಾಲನೆ ಬಂಧುತ್ವ ಇತ್ಯಾದಿಗಳಿಗೆಲ್ಲ ಈ ಪರಂಪರೆ ಬೆಲೆಯಿಲ್ಲದಂತೆ ಮಾಡಿದೆ. ಹೆಣ್ಣು ನಿರ್ಜೀವ ಆಟಿಕೆಯಲ್ಲ, ಬಾಯಿ ಸತ್ತವಳಲ್ಲ, ಮಾನವತೆಯಲ್ಲಿ ನೆಮ್ಮದಿ ಕಾಣಲು ಸಮಾನತೆ ಸೋದರತೆ ಪ್ರೀತಿ ಬಂಧುತ್ವ ಬದುಕಿನಲ್ಲಿ ಕಾಣಬೇಕಾದರೆ ಪ್ರತಿಯೊಬ್ಬರ ಬಾಳಿನಲ್ಲಿ ಹೆಣ್ಣು ಗೃಹಲಕ್ಷ್ಮಿಯಾಗಿ ಇರಲೇಬೇಕೆಂಬುದನ್ನು ಪ್ರತಿಯೊಬ್ಬರು ಮನಗಾಣಲೇಬೇಕು. ಕೃಷಿ ಸಂಸ್ಕೃತಿಯೆಂಬುದೇ ಸ್ತ್ರೀ ಸಮುದಾಯದ ಕರುಳ ಮಿಡಿತಗಳ ಪ್ರತಿರೂಪ, ಯಜಮಾನ್ಯ ಸಂಸ್ಕೃತಿ ದಾಖಲಿಸದೇ ನಿರ್ಲಕ್ಷಿಸಿದ ಚರಿತ್ರೆಯನ್ನು ಜನಪದ ಸಮುದಾಯಗಳ ಸಂಬಂಧಗಳ ಸ್ವರೂಪವನ್ನು ಕೃಷಿ ಮಹಿಳೆಯರ ನೆಲೆಯಿಂದ ಇಂದು ಪುನರ್‌ವ್ಯಾಖ್ಯಾನಿಸುವ, ಪುನರ್ ಮೌಲ್ಯಮಾಪನಕ್ಕೊಳಪಡಿಸುವ ಮಹತ್ವದ ಕೆಲಸ ಇಂದು ಆಗಬೇಕಾಗಿದೆ.

**ಆಕರ ಗ್ರಂಥಗಳು:**

ಕಿನ್ನರಿ ಜೋಗಿ ಕಾವ್ಯಗಳು: ಸಂ. ಅಂಬಳಿಕೆ ಹಿರಿಯಣ್ಣ ಪ್ರಸಾರಾಂಗ, ಮೈಸೂರು ವಿ.ವಿ.-2005
ಕೃಷಿ ಆಚರಣೆಗಳು: ಮಲ್ಲಿಕಾರ್ಜುನ ಹೊಸಪಾಳ್ಯ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2008.
ಕೃಷಿ ಜಾನಪದ : ಎಂ.ಎನ್.ವಾಲಿ, ಕನ್ನಡಸಾಹಿತ್ಯ ಪರಿಷತ್ತು ಬೆಂಗಳೂರು- 2006
ಜಾನಪದ ಪರಿಶೀಲನೆ: ಡಾ. ಕೆ. ಆರ್. ಸಂಧ್ಯಾರೆಡ್ಡಿ ಕ.ಸಾ.ಪ ಬೆಂಗಳೂರು-2006

ರೈತ ಮತ್ತು ಜಾನಪದ : ಸಂ ಮೃತ್ಯುಂಜಯ ಹೊರಕೇರಿ, ಕ. ಜಾ. ಅ. ಬೆಂಗಳೂರು- 1998
ಸಾಹಿತ್ಯ ಸಿರಿ: ಸಂ. ವೇದಮೂರ್ತಿ ತಾಳ್ಯ, ತೆರಳಬಾಳು ಹುಣ್ಣಿಮೆ ಮಹೋತ್ಸವ ಸಮಿತಿ 2008

# ಮಹಿಳೆ ಮತ್ತು ಸಮಕಾಲೀನ ಸವಾಲುಗಳು

**ಡಾ. ಜಿ. ಪ್ರಶಾಂತ ನಾಯಕ**

ಸಮಾನತೆಯ ಆಶಯವೆನ್ನುವುದನ್ನು ಸಹಜವಾಗಿ ನಿಸರ್ಗದ ನಿಯಮವಾಗಿ ತನ್ನೊಂದಿಗೆ ಪಡೆದುಕೊಂಡಂತಹ ಸತ್ಯ ಹೆಣ್ಣಿನದು. ಜಗತ್ತಿನ ಜೀವಜಾಲದ ಎರಡು ನೆಲೆಗಳಲ್ಲಿ ಗಂಡು ಮತ್ತು ಹೆಣ್ಣು ಎನ್ನುವುದನ್ನು ಪರಸ್ಪರ ಎಂಬ ಪೂರಕ ನೆಲೆಯಲ್ಲಿ ಸಮಾನವಾಗಿಯೂ ನೋಡಬೇಕಾದ್ದು, ಯಾರಿಂದಲೂ ಹೇಳಿ-ಕೇಳಿಸಿ ನಡೆಸುವಂತದ್ದಾಗಬೇಕಿಲ್ಲ. ಆದರೆ ಇಷ್ಟು ಸರಳವಾಗಿಲ್ಲ ಬದುಕು.

ಜೀವಪರಂಪರೆಯ ರೂಪಕವಾದ ಗಂಡು-ಹೆಣ್ಣು ಪರಸ್ಪರರ ಸಾರ್ಥಕ್ಯ ಸಂಬಂಧದಿಂದಲೇ ಜಗತ್ತನ್ನು, ಜಗತ್ತಿನ ಪೀಳಿಗೆಯನ್ನು ಮುಂದುವರಿಸಬೇಕಾದದ್ದು ನಿಸರ್ಗ ನಿಯಮ ಮತ್ತದು ಬದುಕಿನ ತುರ್ತು ಕೂಡ. ಇದೆಲ್ಲಾ ಗೊತ್ತಿದ್ದೂ ಮಹಿಳೆಯನ್ನು ಪುರುಷ ಅಧೀನತೆಯ ಅರ್ಥದಿಂದ ಪರಿಭಾವಿಸಿ ತಾನು ಶ್ರೇಷ್ಠನೆಂಬ ಅಹಂಕಾರವನ್ನು ಪೋಷಿಸಿಕೊಂಡದ್ದು ವಿಚಿತ್ರ ಸತ್ಯ. ಜೈವಿಕ ರಚನೆಯನ್ನೇ ಪ್ರಧಾನವಾಗಿರಿಸಿಕೊಂಡಿರುವ ಸಾಧ್ಯತೆಯಲ್ಲಿ ಹೆಣ್ಣು 'ಅಬಲೆ' ಎಂದು ವ್ಯಾಖ್ಯಾನಿಸಲ್ಪಟ್ಟದ್ದು ವಿಪರ್ಯಾಸ ಮತ್ತು ದುರಂತದ ಹಾದಿಯಂತಲ್ಲದೆ ಬೇರಲ್ಲ. ದೈಹಿಕ ಬಲಿಷ್ಠತೆಯನ್ನೇ ಒಂದು ಗುಣ-ಲಕ್ಷಣವನ್ನಾಗಿಸಿಕೊಂಡ ಪುರುಷನದು ಅಸ್ತಿತ್ವಕ್ಕಾಗಿ ಹೋರಾಟ ಎಂಬಂತೆ ಬೆಳೆಯುತ್ತಾ ತನ್ಮೂಲಕ ತನ್ನ ಹಿತಕಾಯುವ, ತನ್ನ ಆಶ್ರಯದಲ್ಲಿರುವ ಅನಿವಾರ್ಯತೆಯನ್ನು ಹೆಣ್ಣಿಗೆ ಸೃಷ್ಟಿಸಿದ್ದು ಬಹಳ ಸ್ಪಷ್ಟವಾದ ಸಮರ್ಥನೆ ಎನಿಸಬೇಕಿಲ್ಲ. ಆದರೆ ಇದು ಇತಿಹಾಸದುದ್ದಕ್ಕೂ ನಡೆದೇ ಹೋಗಿದೆ. ಮೂಲದಲ್ಲಿ ಎಲ್ಲ ಬಗೆಯ ಸೃಜನಶೀಲವೂ ಸ್ವೋಪಜ್ಞವೂ ಕ್ರಿಯಾಶೀಲವೂ ಆದ ಅವೆಷ್ಟೋ ಸಾರ್ಥಕ್ಯ ಪರಂಪರೆಯ ಸಾಧನೆಗೆ ಕಾರಣವಾದ ಜೀವಂತಿಕೆಯ ಅರ್ಥವೇ ಮಹಿಳೆಯಾಗಿದ್ದಳು ಎನ್ನುವುದನ್ನು ಸುಲಭವಾಗಿ ನಿರಾಕರಿಸುವಂತಿಲ್ಲ. ಹಾಗಿದ್ದೂ ಮತ್ತೆ ಮತ್ತೆ ಅವಳನ್ನು ಆಶ್ರಯದ ರೂಪದಿಂದ ನಿಧಾನವಾಗಿ ಶೋಷಣೆಯ ನೆಲೆಗೂ ತಂದು ನಿಲ್ಲಿಸಿದ್ದಕ್ಕೆ ಪರಂಪರೆ ಬಹುಶಃ ಎಂದಿಗೂ ತನ್ನನ್ನು ಕ್ಷಮಿಸಿಕೊಳ್ಳುವಂತಿಲ್ಲ. ಭಾರತದ ಸಂದರ್ಭದಲ್ಲಿ ಇದನ್ನು ಮತ್ತಷ್ಟು ಸೂಕ್ಷ್ಮವಾದ ನೆಲೆಯಲ್ಲೇ ನೋಡಬೇಕಿರುವುದು ಅನಿವಾರ್ಯತೆಯೇ ವಾಸ್ತವ.

ಧರ್ಮ ಎನ್ನುವುದನ್ನು ಜನಾಂಗವೊಂದು ತನ್ನ ಸಂಸ್ಕೃತಿಯ ಭಾಗವಾಗಿಯೇ ನೋಡಿಕೊಂಡು ಪೋಷಿಸಿಕೊಂಡು ಬಂದದ್ದು ಈಗ ಇತಿಹಾಸ. ಜೊತೆಗೆ ಒಂದು ಹಂತಕ್ಕೆ ಅದನ್ನು ಸಮಾಜದ, ನಾಡಿನ, ದೇಶದ ನಿಯಂತ್ರಕಶಕ್ತಿಯಾಗಿಯೂ ಪರಿಭಾವಿಸಿಕೊಂಡು, ಪ್ರಯೋಗಿಸಿದ್ದು ಈ ಹೊತ್ತಿಗೂ ಅಲ್ಲಲ್ಲಿ ನಡೆಯುತ್ತಲೇ ಬಂದಿದೆ. ಬದುಕಿಗೆ ಅನಿವಾರ್ಯ ಎಂಬಂತೆ ಕಾಲಕ್ರಮೇಣ ಗಟ್ಟಿಯಾಗುತ್ತಾ ಬಂದ ಧಾರ್ಮಿಕ ನಂಬಿಕೆಗಳು. ಸರ್ವಹಿತವನ್ನು ಸಾರ್ವಕಾಲಿಕ ಸತ್ಯವಾಗಿ ನೋಡಿದ್ದು ಕಡಿಮೆ. ಅಲ್ಲಿಯೂ ಅದರ ನಿಯಂತ್ರಕರಿಗೆ ಬೇರೆಯದ್ದೇ ಆದ ಚಿಂತನೆಯ ಆಯಾಮಗಳಿದ್ದವು, ಆಳುವ ಹಂಬಲದ ಹಲವು ನೆಲೆಗಳಿದ್ದವು. ಇದರಿಂದ ಭಾರತವೂ ಹೊರತಾಗಲಿಲ್ಲ, ಹೆಣ್ಣು ಎರಡನೆಯ ಪ್ರಜೆಯಂತೆಯೇ ನಿಯಂತ್ರಿಸಲ್ಪಡುತ್ತಾ ಬಂದಳು. ಈ ಕ್ಷಣಕ್ಕೂ ಮತ್ತೆ ಮತ್ತೆ, ಕೆಲವೊಮ್ಮೆ ಇದ್ದಕ್ಕಿದ್ದಂತೆ ಅವಳನ್ನು ಗುರಿಯಾಗಿಸಿಕೊಂಡೇ ಕಟ್ಟುಪಾಡುಗಳನ್ನು ಗಟ್ಟಿಗೊಳಿಸುತ್ತಲೋ ಪುನರ್‌ಸೃಷ್ಟಿಸುತ್ತಲೋ ವ್ಯವಸ್ಥೆಯ ರೂಪಗಳು ಶೋಷಿಸುತ್ತಲೇ ಬಂದಿವೆ ಎನ್ನುವುದು ವಿಚಿತ್ರ ಆದರೂ ಸತ್ಯ.

ಆದಿಶಕ್ತಿಯ ನಂಬಿಕೆಯಿದೆ ಅಂದರೆ ನಮ್ಮ ನೆಲದ ಎಲ್ಲಾ ದೇವರ ಅಂಶಗಳನ್ನು ಒಳಗೊಂಡ 'ಶಕ್ತಿ' ಅವಳು ಮತ್ತು ಬಹಳ ಮುಖ್ಯವಾಗಿ ಭೂಮಿ, ನಿಸರ್ಗ, ನದಿಗಳೇ ಮೊದಲಾದ ಜೀವವಾಹಕಗಳನ್ನೆಲ್ಲಾ ಹೆಣ್ಣಾಗಿಯೇ ಪರಿಕಲ್ಪಿಸುವುದೂ ಸುಲಭವಾಗಿದೆ. ಆದರೆ ಸಹಜವೂ ಸಾಮಾನ್ಯವೂ ವಾಸ್ತವವೂ ಆದ ಬದುಕಿನಲ್ಲಿ ಅವಳು ಅಷ್ಟರಮಟ್ಟಿಗೆ ಪ್ರಧಾನ ನೆಲೆಯಲ್ಲಿ ಉಳಿದುಕೊಂಡಿದ್ದಾಳೆಯೆ? ಎಂದು ಪ್ರಶ್ನಿಸಿಕೊಂಡರೆ ಅದಕ್ಕಿಂತ ಬಾಲಿಶವಾದದ್ದು ಮತ್ತೊಂದಿರಲಿಕ್ಕಿಲ್ಲ. ಸಮಯದ ಚರ್ಚೆಗೆಂದೂ ಒಂದೋ ಎರಡು ಉದಾಹರಣೆಗಳನ್ನು ತಕ್ಷಣಕ್ಕೆ ಎಲ್ಲಿಂದಲಾದರೂ ಪಡೆಯಬಹುದು. ಆದರೆ ಅವುಗಳನ್ನು ಪ್ರಾತಿನಿಧಿಕ ನೆಲೆಯಲ್ಲಿಯೂ ಗ್ರಹಿಸಬಹುದೇ ಎನ್ನುವುದಕ್ಕೆ ಹಲವಾರು ತೊಡಕುಗಳಿವೆ. ಆಧುನಿಕತೆಯ ಉತ್ಕರ್ಷದಲ್ಲಿದ್ದು ಅಪಾರ ಬದಲಾವಣೆಯನ್ನು ಕಂಡಿರುವ ಜಗತ್ತಿನಲ್ಲಿ ವೈಜ್ಞಾನಿಕ, ವೈಚಾರಿಕ ಪ್ರಜ್ಞೆ ಗಟ್ಟಿಗೊಂಡಿರುವ ಈ ಹೊತ್ತಿಗೆ ಮಹಿಳೆಯ ಸ್ಥಿತಿಗತಿ-ಎಷ್ಟರಮಟ್ಟಿಗೆ ಸುಧಾರಿಸಿದೆ ಎಂದರೆ ಉತ್ತರ ತುಂಬಾ ಆಶಾದಾಯಕ ಎನ್ನಿಸುವಂತಿಲ್ಲ. ಈ ಹೊತ್ತಿನ ಅವಳ ಸಮಸ್ಯೆಗಳೂ ಮತ್ತೂ ಭಿನ್ನವಾಗಿವೆ.

ಹತ್ತು-ಹಲವು ಅವೈಜ್ಞಾನಿಕವಾದ ತೊಡಕುಗಳನ್ನು, ತರ-ತಮಗಳನ್ನು ಜಾತಿ-ವರ್ಗ-ಲಿಂಗ ಎಂಬ ಪ್ರಧಾನ ನೆಲೆಯಲ್ಲಿ ಭಾರತ ಎದುರಿಸುತ್ತಲೇ ಬಂದಿದೆ. ಅಭಿವೃದ್ಧಿಗಿರುವ ಬಹುಮುಖ್ಯ ಆತಂಕಗಳಲ್ಲಿ ಈ ಭೇದಗಳದ್ದು ಸಿಂಹಪಾಲು.

ಬಹಳ ಹಿಂದಿನಂತಹ ಸಮಸ್ಯೆಗಳು ಈಗಿಲ್ಲ, ನಾವು ಸುಧಾರಿಸಿದ್ದೇವೆ ಎನ್ನುವ ಅಂಕಿ-ಅಂಶಗಳನ್ನು ಹೊಂದುತ್ತಿರುವಾಗಲೂ ವಾಸ್ತವದ ನೆಲೆಯಲ್ಲಿ ಮತ್ತಾವುದೋ ಅಮಾನವೀಯವಾದ ಘಟನೆಯೊಂದು ನಡೆದುಬಿಡುತ್ತದೆ. ನಾಗರೀಕ ಸಮಾಜದಲ್ಲಿ ತಲೆತಗ್ಗಿಸುವ ಅಸಹಾಯಕತೆಯೂ ಎದುರಾಗಿಬಿಡುತ್ತದೆ. ಮಹಿಳೆ ಇಂದಿಗೂ ಹತ್ತು ಹಲವು ತಲ್ಲಣಗಳಲ್ಲಿ ಬದುಕು ದೂಡುತ್ತಿದ್ದಾಳೆ.

ಸಾಂಪ್ರದಾಯಿಕ ಮನೆಯ ಸಾಮಾಜಿಕ ನಂಬಿಕೆಗಳಿಂದ ತುಸುದೂರ ಸಾಗುತ್ತಿರುವಲ್ಲಿ ಒಂದಿಷ್ಟು ಸ್ಪಷ್ಟತೆ ಇದೆ. ಈ ಹಿಂದಿನಂತೆ ಹೆಣ್ಣು ಮಗು ಏನಾದರೂ ಏನೇ ಓದಿದರೂ ಅಡುಗೆಮನೆಯಲ್ಲಿ ಉಳಿಯಬೇಕು ಎಂಬ ತಾತ್ಸಾರದ ಮಾತುಗಳು ನಿಧಾನವಾಗಿ ಧ್ವನಿ ತಗ್ಗಿಸಿಕೊಳ್ಳುತ್ತಿವೆ. ಶಿಕ್ಷಣ ತನ್ನ ಪ್ರಭಾವವನ್ನು ತುಸು ತಡವಾಗಿಯಾದರೂ ಬೀರತೊಡಗಿದೆ. ಹೆಣ್ಣುಮಕ್ಕಳ ಶಿಕ್ಷಿತ ಪ್ರಮಾಣದಲ್ಲಿ ತುಸು ಏರಿಕೆ ಕಾಣುತ್ತಿದೆ. ಶ್ರೀಸಾಮಾನ್ಯನ ಮನಸ್ಸಿನಲ್ಲಿ ತನ್ನ ಮಗಳು ಶಿಕ್ಷಣ ಪಡೆಯಲಿ, ಸಾಧ್ಯವಾದರೆ ವೃತ್ತಿ ಹೊಂದಲಿ ಎಂಬ ಕನಸೊಂದು ಕುಡಿಯೊಡೆಯುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ, ಸಂಘಸಂಸ್ಥೆಗಳು ಒಂದಷ್ಟು ಕೆಲಸ ಮಾಡುತ್ತಿವೆ.

ಶಿಕ್ಷಣ ಪಡೆಯುವ ವಿಚಾರದಲ್ಲಿ ಅವಕಾಶ ಸಿಕ್ಕಲ್ಲಿ ತಮ್ಮನ್ನು ಆದ್ಯವಾಗಿಸಿಕೊಳ್ಳುವ ನಿಟ್ಟಿನಲ್ಲಿ ನಮ್ಮ ಹೆಣ್ಣುಮಕ್ಕಳದು ದಿಟ್ಟ ಹೆಜ್ಜೆಯೇ ಸರಿ. ವೃತ್ತಿಪರತೆಯಲ್ಲಿಯೂ ಕೌಶಲ್ಯ, ದಿಟ್ಟತೆ, ಸೂಕ್ಷ್ಮತೆ ಮತ್ತು ಮುಖ್ಯವಾಗಿ ಬದ್ಧತೆಯನ್ನು ರೂಢಿಸಿಕೊಂಡು ತಾವು ಯಾರಿಗೇನು ಕಮ್ಮಿ? ಎಂಬಂತೆ ಸಾಗಿರುವುದು ಆಶಾವಾದದ ಸ್ಪಷ್ಟ ಬೆಳಕು. ಇಲ್ಲೆಲ್ಲಾ ಹೆಮ್ಮೆ ಪಟ್ಟುಕೊಳ್ಳುವ ನಾವು ಇಂದಿಗೂ ಶೇ.ಮೂವತ್ಮೂರು (33) ಮೀಸಲಾತಿಯನ್ನು ನೀಡಲು ಮೀನಾಮೇಷ ಎಣಿಸುವ ಶಾಸಕಾಂಗದೊಂದಿಗಿರುವುದು ವಿಪರ್ಯಾಸ.

ಈಗಲೂ ಗಂಡುಸಂತಾನಕ್ಕಾಗಿ ಮಾತ್ರ ಹಪಹಪಿಸುವ ಕುಟುಂಬಗಳಿವೆ. ಹೆಣ್ಣೆಂದು ತಿಳಿದು ಭ್ರೂಣಹತ್ಯೆಗೆ ಮುಂದಾಗುವ ಶಿಕ್ಷಿತವೆಂದುಕೊಂಡ ಮನಸ್ಸುಗಳಿವೆ. ವರದಕ್ಷಿಣೆಯನ್ನು ಮೂಲಭೂತ ಹಕ್ಕಿನಂತೆ ಪ್ರತಿಪಾದಿಸುವ ಶೋಷಕರಿದ್ದಾರೆ. ತನ್ನೊಂದಿಗಿದ್ದು ತನಗಿಂತ ಒಂದಿಷ್ಟು ಬುದ್ಧಿವಂತಳು, ವಿದ್ಯಾವಂತಳು ಎಂದಾದರೆ ಅವಳನ್ನು ಹಿಂಸಿಸುವ ಮಾನಸಿಕ ರೋಗಿಗಳಿದ್ದಾರೆ. ಜಾತಿಯಂತಹ ಅಮಾನವೀಯ ಅಹಂಕಾರ ತುಂಬಿಕೊಂಡು ಅನ್ಯಜಾತಿಯ ಪ್ರೀತಿಗೆ ಹಂಬಲಿಸಿದವರನ್ನು ಕಗ್ಗೊಲೆ ಮಾಡಿಬಿಡುವ ರಕ್ಕಸರಿದ್ದಾರೆ. ಸಾರ್ವಜನಿಕವಾಗಿ ಅತ್ಯಾಚಾರಮಾಡಿ ಬದುಕುವ ಮೃಗೀಯ ಜನರಿದ್ದಾರೆ. ಸಂಬಂಧಗಳನ್ನು ಮೀರಿ, ಮುಗ್ಧತೆಗಳನ್ನು ಲೆಕ್ಕಿಸದೆ, ಕೇವಲ ಕಾಮಾಂಧರಾಗಿ ಬದುಕು ನಾಶಮಾಡಿಬಿಡುವ ಪಾಪಿಗಳಿದ್ದಾರೆ.... ಇವೆಲ್ಲಾ ಕೇವಲ ಇತಿಹಾಸಗಳಲ್ಲ, ವರ್ತಮಾನದ ಆತಂಕಗಳು, ತಲ್ಲಣಗಳು ಮತ್ತು ಬಹುಮುಖ್ಯ ಸವಾಲುಗಳು. ಇವುಗಳ ಮಧ್ಯೆಯೇ ತನ್ನತನವನ್ನು ಉಳಿಸಿಕೊಂಡು ಬದುಕುವ ಹೋರಾಟದಲ್ಲಿ ನಮ್ಮ ಮನೆಯ ಹೆಣ್ಣುಮಗಳಿದ್ದಾಳೆ.

'ಉದ್ಯೋಗ ಪುರುಷ ಲಕ್ಷಣ' ಎಂದ ಮಾತನ್ನು ಮಹಿಳೆ ಹೊರಗೆ ದುಡಿಯಲಾರಳು ಅಥವಾ ದುಡಿಯಬಾರದು ಎಂಬ ಸ್ವಾರ್ಥದೊಳಗೆ ಪುರುಷಾಹಂಕಾರ ಒಂದು ನಿರ್ಬಂಧವನ್ನೇ ಹಾಕಿಕೊಂಡದ್ದಿರಬಹುದು. ಹಾಗಲ್ಲದೆ ಗಂಡಸಾದವನು ಸೋಮಾರಿಯಾಗಿ ಬದುಕದೆ ಕ್ರಿಯಾಶೀಲನಾಗಿರಲಿ ಎಂಬ ಆಶಯವೂ ಇಲ್ಲಿದ್ದಂತಿದೆ. ಈ ಹೊತ್ತಿಗೆ ಎಲ್ಲಾ ರಂಗದಲ್ಲಿಯೂ ತಾನು ದುಡಿದು ಸೈ ಎನಿಸಿಕೊಳ್ಳಬಲ್ಲೆ ಎನ್ನುತ್ತಿರುವ ಹೆಣ್ಣಿನ ದಕ್ಷತೆಯ ಭಯವೂ ಅವಳನ್ನು ಹೊರಗೆ ಕಾಲಿಡದಂತೆ ಬಂಧಿಸಬೇಕೆಂದು ಪುರುಷರನ್ನು ಕಾಡಿದ್ದಿರಬೇಕು. ಯಾವುದೇನೇ ಆಗಿರಲಿ ಇಂದು ಹೆಣ್ಣಿಗೆ ಹೊರಗಿನ ಯಾವ ದುಡಿಮೆಯೂ ಅನ್ಯ ಎಂದಾಗಲಿ, ಅಸಾಧ್ಯ ಎಂದಾಗಲಿ ಅನ್ನಿಸುವಂತಿಲ್ಲ. ವಿಶ್ವದ ಪ್ರಭಾವಿಗಳ ಸಾಲಿನಲ್ಲಿ ಮಹಿಳೆಯರೂ ಸ್ಥಾನಪಡೆಯುವಷ್ಟು ಕ್ರಾಂತಿ ಸಾಧ್ಯವಾಗಿಬಿಟ್ಟಿದೆ. ತನ್ನ ಕಾರ್ಯದಲ್ಲಿ ಏಕಾಗ್ರತೆ, ಶ್ರದ್ಧೆ, ದಕ್ಷತೆ, ಸಮಯಪ್ರಜ್ಞೆ, ಸಹನೆ ಇತ್ಯಾದಿ ತನ್ನ ಸಹಜ ಗುಣಗಳಿಂದಲೇ ಯಶಸ್ಸನ್ನು ತರಬಲ್ಲವಳು ಹೆಣ್ಣು ಎನ್ನುವುದು ಉದ್ಯೋಗ ಜಗತ್ತಿಗೆ ಖಾತ್ರಿಯಾಗಿದೆ. ಇಂದು ಅವಕಾಶಗಳು ಮಹಿಳೆಯರಿಗೆ ಮುಕ್ತವಾಗಿವೆ. ಹಾಗೆಯೇ ಈ ಹೊತ್ತಿನ ಆಧುನಿಕ ವೃತ್ತಿಪರತೆಯ ನಿರೀಕ್ಷೆಗಳು, ಗುಣಲಕ್ಷಣಗಳೂ ಬೇರೆಯದ್ದೇ ಆಗಿವೆ. ಕೌಶಲ್ಯವೆನ್ನುವುದನ್ನು ರೂಢಿಸುವ ವ್ಯವಸ್ಥೆಯೇ ದೊಡ್ಡ ಜಾಲವಾಗಿಬಿಟ್ಟಿದೆ.

ಈ ಎಲ್ಲಾ ಸಾಧ್ಯತೆಗಳಿಂದ ಪರಿಪೂರ್ಣವಾದ ಸ್ತ್ರೀಸ್ವಾತಂತ್ರ್ಯ, ಸ್ವಾವಲಂಬನೆ ಮುಕ್ತತೆ ಸಾಧ್ಯವಾಗಿದೆ ಎನ್ನುವುದು ಸಮಾಧಾನದ ಮಾತಲ್ಲ. ಈ ಬಗೆಯ ಸಾಧನೆಯ ಶೇಕಡವಾರು ಪ್ರಮಾಣವೆಷ್ಟು? ಅದರಲ್ಲಿ ಯಾವ ಮಟ್ಟವನ್ನು ಕಾಯ್ದುಕೊಳ್ಳಲಾಗಿದೆ? ಮಹಿಳೆಯರ ಹಕ್ಕು ಕರ್ತವ್ಯಗಳ ಸ್ವರೂಪದ ಸ್ಥಿತಿಗತಿ ಏನು? ತನ್ನ ಬದುಕಿನ ಸಾರ್ಥಕ ಆಸ್ವಾದನೆ ಅವಳಿಗೆ ಎಷ್ಟರಮಟ್ಟಿಗೆ ಸಾಧ್ಯವಾಗಿದೆ? ಅವಳು ನಿರ್ಭೀತವಾಗಿ, ಸ್ವತಂತ್ರವಾಗಿ, ಸಹಜವಾಗಿ ಬದುಕಬಹುದಾದ ವಾತಾವರಣವನ್ನು ನಿರ್ಮಿಸುವುದು ಸಾಧ್ಯವಾಗಿದೆಯೆ? ಹೀಗೆ ಸಾಲು ಪ್ರಶ್ನೆಗಳನ್ನು ಎತ್ತುವಲ್ಲಿಯೇ ಅವುಗಳು ಸಮಸ್ಯೆಗಳಾಗಿವೆ ಎಂಬ ಸುಳುಹು ದೊರೆತುಬಿಡುತ್ತದೆ.

ತುಂಬಾ ಸಹಜವಾಗಿ ಯೋಚಿಸಬಹುದಾದ ಮತ್ತು ವಿಚಿತ್ರ ಎನ್ನಿಸಬಹುದಾದ ಪ್ರಶ್ನೆ "ಹೆಣ್ಣನ್ನು ಸದಾ ಆಕರ್ಷಣೆಯ ಅರ್ಥವಾಗಿಯೇ ನೋಡುವುದು ಯಾಕಾಗಿ?" ಉತ್ತರ ಸುಲಭವಿದ್ದಂತಿಲ್ಲ. ಬಹುಪಾಲು ಪುರುಷ ಮನಸ್ಥಿತಿಗಳನ್ನು ಮನೋವಿಜ್ಞಾನದ ಸಂಶೋಧನೆಗೆ ಒಳಪಡಿಸಬೇಕಾದ ತುರ್ತಿದೆ. ಜೀವಂತಿಕೆಯ ರೂಪವಾದ, ತಾಯ್ತನದ ಮೂಲವಾದ, ಬದುಕಿನ ಅರ್ಥವಂತಿಕೆಯ ವ್ಯಾಖ್ಯಾನವಾದ ಹೆಣ್ಣನ್ನು ಕೇವಲ ಸೌಂದರ್ಯದ ಮೂಲವಾಗಿ ದೈಹಿಕ ಆಕರ್ಷಣೆಯ ಪ್ರತಿಮೆಯಾಗಿ ಮಾತ್ರ ನೋಡುವ ಮನಸ್ಥಿತಿ ಎಂದು ಆರಂಭವಾಗಿದ್ದೀತು? ಇಂತಹದ್ದೊಂದು ರೋಗಗ್ರಸ್ಥ ದೃಷ್ಟಿ ನಮ್ಮ ಮಾನಸಿಕ ಪರಂಪರೆಯಾದದ್ದು ಯಾಕೆ? ಆರಂಭದಿಂದ ಇಷ್ಟವಿದ್ದೋ ಇಲ್ಲದೆಯೋ 'ಮಹಿಳೆ' ಇದನ್ನು ಒಪ್ಪಿದಂತೆ ಬದುಕಿದ್ದಾದರೂ ಯಾಕೆ? ಮತ್ತವೇ ಉತ್ತರವಿಲ್ಲದ ಆದರೆ ಕೇಳಿಕೊಂಡು ಆತ್ಮಾವಲೋಕನ ಮಾಡಿಕೊಳ್ಳಲೇಬೇಕಾದ ಪ್ರಶ್ನೆಗಳಿವು.

ಬಾಲ್ಯದಲ್ಲಿ ಬಂಧನ, ಯೌವನಕ್ಕೆ ಆಕರ್ಷಣೆ, ಸಂಸಾರಕ್ಕೆ ತಾಯ್ತನ ನಂತರ ಮುಗಿದೇಹೋದ ಬದುಕು ಯಾಂತ್ರಿಕವಾಗಿ ಮನೆಯ, ಮನೆಮಂದಿಯ, ಸಂಬಂಧಗಳ ನಿರ್ವಹಣೆ. ನಿಯಮಗಳೆಲ್ಲ ಪುರುಷನದ್ದು. ಹೀಗೊಂದು ಸಾಂಪ್ರದಾಯಿಕ ಚೌಕಟ್ಟನ್ನು ನಿರ್ಮಿಸಿಕೊಟ್ಟವರು ಯಾರು? ಅವಳ ಜೈವಿಕ ದೇಹರಚನೆಯ ಕಾರಣಕ್ಕೆ ಹೀಗಾಗಿಬಿಡಬೇಕಾ? ತುಂಬಾ ಸೂಕ್ಷ್ಮವೂ ಸಂವೇದನಾಶೀಲವೂ ಆದ ಪ್ರಶ್ನೆಗಳಿವು, ಉತ್ತರ ಕಂಡುಕೊಳ್ಳುವ ತುರ್ತಿದೆ. ಜ್ಞಾನದಿಂದ, ಗಳಿಸಿಕೊಳ್ಳುವ ವಿದ್ಯೆಯಿಂದ ಪ್ರತಿಭೆ–ಕೌಶಲ್ಯಗಳನ್ನು ರೂಢಿಸಿಕೊಂಡ ನಮ್ಮ ಹೆಣ್ಣುಮಕ್ಕಳು ಇಂದು ಶಿಕ್ಷಣದಲ್ಲಿ, ಉನ್ನತಶಿಕ್ಷಣಗಳ ಪ್ರವೇಶಗಳಲ್ಲಿಯೂ ಸಿಂಹಪಾಲು ಪಡೆಯುತ್ತಿದ್ದಾರೆ. ಇದು ನಾಳಿನ ದಿನಗಳ ಬಗೆಗೆ ಮತ್ತಷ್ಟು ಸಾರ್ಥಕ ಭರವಸೆಯ ಬೆಳಕು. ಬಹುಶಃ ಅವಳಿಲ್ಲದ ಯಾವಕ್ಷೇತ್ರಗಳನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗುವತ್ತ ಇರುವ ಪುಟ್ಟಹೆಜ್ಜೆಗಳು ನಾಳೆಗೆ ಮತ್ತಷ್ಟು ಗಟ್ಟಿಹೆಜ್ಜೆಗಳಾಗಬಲ್ಲವು. ಅದಕ್ಕೆ ಪೂರಕವಾದ ಪ್ರೋತ್ಸಾಹ, ಭರವಸೆ ಪುರುಷ ವ್ಯವಸ್ಥೆಯಿಂದ ಒದಗಬೇಕಿದೆ. ಇದು ಬಹುಪಾಲು ಮಹಿಳೆಯ ಸಾರ್ವಕಾಲಿಕ ಸವಾಲುಗಳಿಗೆ, ಸಮಸ್ಯೆಗಳಿಗೆ ಉತ್ತರವಾಗಬಲ್ಲದು.

ಈ ಹಿನ್ನೆಲೆಯಲ್ಲಿ ತತ್‌ಕ್ಷಣಕ್ಕೆ ಆಗಬೇಕಿರುವುದು ಭಾವಸಂಬಂಧಿಯಾದ ಕ್ರಾಂತಿ, ಅಂದರೆ ಹೆಣ್ಣನ್ನು ನೋಡುವ, ಗ್ರಹಿಸುವ ದೃಷ್ಟಿಕೋನ ಬದಲಾಗಬೇಕು. ಗೌರವದಿಂದ ನೋಡುವ ಮನಸ್ಸಾಗಬೇಕು. ಈ ಕ್ಷಣಕ್ಕೆ ಪ್ರಬಲ ಸಮೂಹಮಾಧ್ಯಮವಾಗಿರುವ ದೃಶ್ಯಮಾಧ್ಯಮಗಳಲ್ಲಿ, ವಿಶೇಷವಾಗಿ ಸಿನಿಮಾಗಳಲ್ಲಿ ಹೆಣ್ಣನ್ನು ಹೇಗೆ ಬಿಂಬಿಸಲಾಗುತ್ತಿದೆ? ಅವಳನ್ನು 'ನಾಯಕಿ' ಎಂದು ನೋಡುವಲ್ಲಿ ಇರುವ ಗುಣಾತ್ಮಕವಾದ ಮನೋಭಾವಗಳೇನು? ಹೆಣ್ಣನ್ನು ಸೌಂದರ್ಯ–ವಯಸ್ಸಿನ ಹಿನ್ನೆಲೆಯಲ್ಲಿ ನೋಡುತ್ತಲೇ ಪ್ರದರ್ಶನವೇ ಬಂಡವಾಳವಾಗಿಸಿಕೊಳ್ಳುವ ಮೂಲಕ ಇಡೀ ಯುವ ಜನಾಂಗವನ್ನು ವಿಶೇಷವಾಗಿ ಪುರುಷವರ್ಗವನ್ನು ಹೇಗೆ ಪ್ರಭಾವಿಸಲಾಗುತ್ತಿದೆ. ಇಂತಹ ಪ್ರದರ್ಶನದ ಸಾಧ್ಯತೆಗೆ ಹೆಣ್ಣುಮಕ್ಕಳಾದರೂ ಸ್ಪರ್ಧಾತ್ಮಕ ನೆಲೆಯಲ್ಲಿ ನಾಮುಂದು ಎಂದು ಸರತಿಯಲ್ಲಿ ನಿಲ್ಲುವಂತಾಗುವ ಸ್ಥಿತಿಗೆ ಕಾರಣರಾರು? ಉತ್ತರ ಸುಲಭವಿರಬಹುದು, ಆದರೆ ಪರಿಹಾರ ಕಂಡುಕೊಳ್ಳಲಾದೀತೆ? ಪ್ರತಿಭೆ ಎನ್ನುವುದಕ್ಕೆ ಸೌಂದರ್ಯ ಮತ್ತು ಮುಕ್ತಗುಣವೇ ಮುಖ್ಯವಾಗುವುದಾದರೆ ಕಲೆಗೆ ನೆಲೆ ಯಾವುದು? ಇವರನ್ನು ಮಾದರಿ ಮಾಡಿಕೊಂಡು ಬದುಕಲು ನಮ್ಮ ಯುವಜನತೆ ಮಾನಸಿಕವಾಗಿ ಸಜ್ಜಾದರೆ ಅದಕ್ಕೆ ಹೊಣೆಯಾರು? ಇವುಗಳೆಲ್ಲವೂ ಸಮಕಾಲೀನವಾದ ಗಂಭೀರ ಸಮಸ್ಯೆಗಳು.

ಮನರಂಜನೆಯ ಸ್ವರೂಪಕ್ಕೆ ಮಾಧ್ಯಮವಾಗಹೊರಟ ದೃಶ್ಯಮಾಧ್ಯಮ ನಿರೀಕ್ಷೆಯನ್ನು ಮೀರಿ ಪ್ರಭಾವಬೀರಿದೆ. ಗಡಿ ಎಲ್ಲೆ ಮೀರಿದಂತೆ ಜಗತ್ತಿನೆಲ್ಲಾ ವಾಹಿನಿಗಳು ಬೆರಳತುದಿಗೆ ಬಂದುಬಿಟ್ಟಿದೆ. ಸಹಜವಾಗಿಯೇ ಆಯ್ಕೆಯ ಅವಕಾಶ ಮುಕ್ತವಾಗಿದೆ. ಜೊತೆಗೆ ಇದು ಗೊಂದಲವನ್ನು ಸೃಷ್ಟಿಸಲು ಕಾರಣವಾಗಿಬಿಟ್ಟಂತಿದೆ. ಮನಸ್ಸಿನ ದ್ವಂದ್ವಗಳು ಸಹಜವಾಗಿಯೇ ಆಕರ್ಷಣೆಯ ಸುಲಭಮಾರ್ಗವನ್ನು ಹುಡುಕಿಬಿಡಬಲ್ಲದು. ಹಾಗಾಗಿ ಗುಣಾತ್ಮಕ ಪರಿಣಾಮಕ್ಕಿಂತ ನೇತ್ಯಾತ್ಮಕವಾದ ಫಲಿತವೇ ಇಂದು ಕಣ್ಮುಂದಿದೆ. ಅಗತ್ಯಕ್ಕಿಂತ ಎಲ್ಲವೂ ಹೆಚ್ಚಾಗಿದೆ ಎನ್ನುವುದನ್ನು ದೃಶ್ಯಮಾಧ್ಯಮಗಳ ಸಂದರ್ಭದಲ್ಲಿ ಸ್ಪಷ್ಟವಾಗಿಯೇ ಹೇಳಬಹುದು. ವ್ಯಾಪಾರೀಕರಣವಾಗುವ ಮಾಧ್ಯಮದಲ್ಲಿ ಜನಪ್ರಿಯತೆಯ ಬೆನ್ನು ಹತ್ತುವುದು ಜಾಣತನದಂತೆ ವ್ಯಾಪಾರವೂ ಹೌದು. ಸಾಮಾಜಿಕ ಮೌಲ್ಯ, ಬದ್ಧತೆ, ಮಾನವೀಯ ಕಳಕಳಿ ಎಂಬೆಲ್ಲಾ ಇತ್ಯಾದಿ ಗುಣಗಳನ್ನಿಲ್ಲಿ ಸುಲಭಕ್ಕೆ ನಿರೀಕ್ಷಿಸುವಂತಿಲ್ಲ. ಈಚೆಗೆ 'ರಿಯಾಲಿಟಿ ಷೋ'ಗಳೆಂಬ ಹೊಸ ಕಾರ್ಯಕ್ರಮಗಳು ಮೇಲ್ನೋಟಕ್ಕೆ ಸ್ಪರ್ಧಾತ್ಮಕ ನೆಲೆಯಂತೆ ಕಂಡರೂ ಅವು ಉಂಟುಮಾಡುವ ಪರಿಣಾಮಗಳು ಕೆಲವೊಮ್ಮೆ ಆತಂಕವನ್ನು ಸೃಷ್ಟಿಸುತ್ತಿವೆ. ಈ ಹೊತ್ತಿಗೆ ಆಧುನಿಕ ಶಿಕ್ಷಣದ ಫಲಿತವಾಗಿರುವ ಯುವತಿಯರು ಈ ಬಗೆಯ ಮಾಧ್ಯಮಗಳ ಬಗೆಗೆ ಅಪಾರ ಒಲವು ಬೆಳೆಸಿಕೊಳ್ಳುತ್ತಿರುವುದು, ಅದನ್ನೇ ಬದುಕಿನ ಗುರಿ ಎಂದೆಲ್ಲಾ ಭಾವಿಸಿಕೊಂಡಂತಾಗುತ್ತಿರುವುದು ಖಂಡಿತಾ ಆರೋಗ್ಯಕರ ಬೆಳವಣಿಗೆಯಲ್ಲ. ಈ ವೇಗ ಹೀಗೆ ಮುಂದುವರಿದರೆ ಮುಂದೊಂದು ದಿನ ಇದು ಈ ನಾಡಿನ ಗಂಭೀರ ಸಮಸ್ಯೆಯಾಗುವುದರಲ್ಲಿ ಅಚ್ಚರಿಯಿಲ್ಲ.

ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನ ಅಸ್ತಿತ್ವ ಕಂಡುಕೊಳ್ಳುವುದರೊಂದಿಗೆ ತನ್ನ ಕಾರ್ಯಕ್ಷಮತೆಯಿಂದ ಅನಿವಾರ್ಯತೆಯ ಅರ್ಥವಾಗಿಯೂ ಬೆಳೆಯುತ್ತಿರುವ ಈ ಹೊತ್ತಿನ ಆಧುನಿಕ ಮಹಿಳೆ ಆರಂಭಕ್ಕೆ ಗಮನಿಸಿದಂತೆ ತನ್ನ ವೃತ್ತಿ ನಿರ್ವಹಣೆಯ ಸಂದರ್ಭದಲ್ಲಿ ಒಂದಿಷ್ಟು ಆತಂಕಗಳನ್ನು ಎದುರಿಸುತ್ತಿರುವುದು ಗಂಭೀರವಾದ ಸವಾಲೇ ಆಗಿದೆ. ಮತ್ತದೇ ಪುರುಷನ ಶೋಷಣೆಯೇ ಮುಖ್ಯಕಾರಣವಾಗುತ್ತಿದೆ. ಹೆಣ್ಣನ್ನು ಆಕರ್ಷಣೆಯ ರೂಪಕ್ಕೆ, ಆಸೆಯ ಪ್ರತೀಕಕ್ಕೆ ಎಂಬಂತೆ ಅವಳೊಂದಿಗೆ ಅನುಚಿತವಾಗಿ ವರ್ತಿಸುವ ಸಾಧ್ಯತೆಗಳು ಅವಳಲ್ಲಿ ಅಭದ್ರತೆಯ ಭಯವನ್ನುಂಟುಮಾಡುತ್ತಿವೆ. ಅಲ್ಲಲ್ಲಿ ಪ್ರತಿಭಟನೆಯ ಅವಕಾಶಗಳೂ ಕಂಡರೂ ಸಂಕೋಚದ ಕಾರಣಕ್ಕೆ, ಸಹಿಸಿಕೊಂಡು ಒಳಗೊಳಗೇ ಸಂಕಟಪಡುವ ಭಾವಗಳು ಮತ್ತೆಷ್ಟಿರಬಹುದು. ಅಂಕಿ-ಅಂಶಗಳಲ್ಲೆಲ್ಲಾ ಆತಂಕವೇ ಎದ್ದುಕಾಣುತ್ತದೆ. ಭದ್ರತೆಯ ರೂಪವಾಗಿ ನೆಮ್ಮದಿಯನ್ನು ಉಂಟುಮಾಡಬೇಕಾದ ಪುರುಷ ನಿರಂತರ ಭಯವನ್ನುಂಟುಮಾಡುವಂತಾದರೆ ಅದಕ್ಕಿಂತ ಅರಾಜಕಭಾವವೆಂದು ಮತ್ತಾವುದನ್ನು ಹೇಳಲಾದೀತು? ಈಚೆಗೆ ತುಸು ಹೆಚ್ಚೇ ಎಂಬಂತೆ ಕಾಣುತ್ತಿರುವ ಅತ್ಯಾಚಾರದಂತಹ ಘಟನೆಗಳು, ಪೋಷಕರು ಮತ್ತು ಹೆಣ್ಣುಮಕ್ಕಳ ಮನಸ್ಸಿನಲ್ಲಿ ಹೇಗೆ ನಿರಾಳತೆಯನ್ನು ತರಬಹುದು, ಇಂತಹದ್ದನ್ನು ತುಂಬಾ ಗಂಭೀರವಾಗಿ ಮತ್ತು ಆದ್ಯತೆಯ ಸಂಗತಿಯಾಗಿ ಪರಿಗಣಿಸಲಾಗದ ವ್ಯವಸ್ಥೆ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಬಗೆಗೆ ವಿಶ್ವಾಸ ಗಟ್ಟಿಯಾಗುವುದು ಹೇಗೆ? ಹೆಣ್ಣೆಂದರವಳು ಜೀವಕೇಂದ್ರ ಅಮ್ಮ, ಸಹೋದರಿ, ಮಗಳು -ಎಂಬೆಲ್ಲಾ ನಮ್ಮ ಬಂಧನಗಳು ನಮಗೇ ಅರ್ಥವಾಗದೆ ಹೋದರೆ ವನ್ಯಮೃಗಗಳಿಗಿಂತ ಭಿನ್ನವಾಗುವುದು ಹೇಗೆ ಸಾಧ್ಯ? ನಾಗರೀಕರು ಎನ್ನಿಸಿಕೊಂಡವರು ಇದಕ್ಕಿಂತ ವ್ಯಂಗ್ಯವಾಗಿ ಬದುಕುವುದು ಸಾಧ್ಯವೆ? ಆತಂಕಗಳೆಲ್ಲವೂ ಸಮಕಾಲೀನ ಸವಾಲುಗಳೇ ಆಗಿರುವುದು ಆಧುನಿಕ ಬದುಕಿನ ದುರಂತವೂ ಹೌದು.

ಮಹಿಳೆ ಎನ್ನುವವಳು ಬಹುಶಃ ಜಗತ್ತಿನಾದ್ಯಂತ ಆಚೀಚೆ ಬಹುಪಾಲು ಒಂದೇ ನೆಲೆಯಲ್ಲಿ ಗ್ರಹಿಸಲ್ಪಡುತ್ತಾಳೆ. ಪುರುಷ ತನ್ನ ಅಹಂಕಾರದಲ್ಲಿ ಅವಳನ್ನು ತನ್ನ ಸುಖದ ಸಾಧ್ಯತೆಯಾಗಿಯೇ ದುಡಿಸಿಕೊಳ್ಳಲು ಪ್ರಯತ್ನಿಸಿದ್ದಾನೆ ಮತ್ತು ಅವಳು ತನ್ನ ಅಧೀನದಲ್ಲಿರಬೇಕೆಂಬ ದುರುದ್ದೇಶವನ್ನು ಹೊಂದಿದವನಾಗಿದ್ದಾನೆ. ಈ ಬಗೆಯ ನಂಬಿಕೆ ಮತ್ತು ಅಹಂಕಾರಗಳನ್ನು ಮೀರಿ ಹೆಣ್ಣನ್ನು ಅವಳ ವ್ಯಕ್ತಿತ್ವಕ್ಕಾಗಿಯೇ ಗೌರವಿಸುವಂತಹ ಮನೋಭಾವ ರೂಢಿಯಾಗಬೇಕು. ಮಹಿಳೆಯಾದರು ತನ್ನ ಮಿತಿಯನ್ನು ಚೌಕಟ್ಟು ಎಂದುಕೊಳ್ಳದೇ ಆರೋಗ್ಯಪೂರ್ಣವಾಗಿ, ಅರ್ಥವಂತಿಕೆಯಿಂದ ಮೀರುತ್ತ ಒಂದು ಸಮ-ಸಂಬಂಧವನ್ನು ಸ್ಥಾಪಿಸಿಕೊಳ್ಳುವತ್ತ ದಾಪುಗಾಲಿಡಬೇಕು. ಸಮಾನತೆ ಅವಳಿಗೆ ಭಿಕ್ಷೆಯಲ್ಲ ಅದು ಅವಳ ಹಕ್ಕು ಮತ್ತು ನಿಸರ್ಗ ನಿಯಮ ಎನ್ನುವ ಸತ್ಯದಲ್ಲಿ ಅಖಂಡತೆಯನ್ನು ಸ್ಥಾಪಿಸಿಕೊಳ್ಳಬೇಕು. ಕೇವಲ ಶಿಕ್ಷಣವೇ ಇದನ್ನೆಲ್ಲಾ ಮಾಡಿಬಿಡುತ್ತದೆಂದು ನಂಬುವಂತಿಲ್ಲ. ಅರಿವು ಅನ್ನುವುದು ಕುಟುಂಬದೊಳಗಿನಿಂದ, ಸಮಾಜದ ನೆಲೆಯಿಂದ, ಸಾಮುದಾಯಿಕ ಪ್ರಜ್ಞೆಯ ರೂಪವಾಗಿಯೇ ಮೂಡಿಬೆಳೆದು, ಅಂತಃಸತ್ವದ ಧ್ವನಿಯಾಗಬೇಕು. ಹಾಗಾದಲ್ಲಿ ಮಾತ್ರ ಸಮಕಾಲೀನ ಸವಾಲುಗಳಿಗೆ ಮುಖಾಮುಖಿಯಾಗುವುದು ಸಾಧ್ಯವಾಗುತ್ತದೆ.

ಮಲೆನಾಡು ಕರ್ನಾಟಕದಲ್ಲಿ ಹತ್ತು-ಹಲವು ವೈವಿಧ್ಯತೆಗಳ ಕಾರಣದಿಂದ ತನ್ನನ್ನು ವಿಶಿಷ್ಟ ಎನ್ನುವಂತೆ ದಾಖಲಿಸಿಕೊಂಡಿದೆ. ರಮ್ಯ ನಿಸರ್ಗದ ದಟ್ಟವನಸಿರಿಯ ನಡುವೆ ಬದುಕುವ ಇಲ್ಲಿನ ಜನರ ಬದುಕು ಸಹಜವಾಗಿಯೇ ಸಾಹಸದ, ಶ್ರಮದ, ಬದ್ಧತೆಯ ರೂಪಕ. ಈ ನಾಡಿನ ಸಾಕಷ್ಟು ಶ್ರೇಷ್ಠ ಮಹನೀಯರು ಸಹ್ಯಾದ್ರಿ ಮಡಿಲಿನಿಂದ ಬೆಳೆದು ದೊಡ್ಡವರಾಗಿ ನಾಡು-ನುಡಿಗೆ ಕೀರ್ತಿತಂದಿದ್ದಾರೆ. ಇದರಲ್ಲಿ ಮಹಿಳೆಯರು ಹಿಂದೆ ಬಿದ್ದಿಲ್ಲ. ನಿಸರ್ಗದ ನಡುವೆ ಬದುಕು ಕಟ್ಟಿಕೊಂಡ ಕಾರಣಕ್ಕೂ ದಿಟ್ಟತೆ, ಶ್ರಮ ಅವರ ಸಹಜ ಗುಣಗಳಾಗಿವೆ. ಶಿಕ್ಷಣ, ವೃತ್ತಿಯಲ್ಲೂ ಸಾಕಷ್ಟು ಪ್ರಮಾಣದಲ್ಲಿ ಮುಂದಿರುವ ಮಲೆನಾಡಿನ ಮಹಿಳೆಯರು ತಮ್ಮ ಸಹಜ ಸೌಂದರ್ಯ, ಗುಣ ಮತ್ತು ಶ್ರಮದ ಕಾರಣಕ್ಕಾಗಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವವರಾಗಿದ್ದಾರೆ. ಇಂದು ಜಾಗತೀಕರಣ ಎಲ್ಲೆಡೆ ಭರಾಟೆಯಂತೆ ಪ್ರಭಾವ ಬೀರಿರುವಲ್ಲಿ ಮಲೆನಾಡು ಅದರಿಂದ ಹೊರತಾಗಿಲ್ಲ. ತನ್ನ ಮೂಲದ ಗುಣವನ್ನು, ರೂಪವನ್ನು ಕ್ರಮೇಣ ಮಸುಕಾಗಿಸಿಕೊಂಡ ಮಲೆನಾಡು ಆಧುನಿಕತೆಗೂ ತನ್ನನ್ನು ತೆರೆದುಕೊಳ್ಳುತ್ತಿದೆ.

ನಗರವ್ಯಾಮೋಹ, ಆಧುನಿಕ ಆಕರ್ಷಣೆಗಳ ಕಾರಣದಿಂದ ತಮ್ಮ ದೇಸೀತನಗಳಿಂದ ಹೊರತಾಗಿ ಬದುಕಿಗಾಗಿ, ಅಸ್ತಿತ್ವಕ್ಕಾಗಿ ಹೊಂದಿಕೊಳ್ಳುವ ತುರ್ತನ್ನು ಎದುರಿಸಿದ್ದಾರೆ. ಮಹಾನಗರಗಳು, ವಿದೇಶಗಳು, ಖಾಸಗಿವಲಯಗಳು, ಆಧುನಿಕ ಮಾಧ್ಯಮಗಳು ಈಚೆಗೆ ಆಕರ್ಷಣೆಯ ನೆಲೆಗಳಾಗಿವೆ. ನೆಲದ ಗುಣ, ಪ್ರಾದೇಶಿಕ ಕಲೆ, ಸಂಸ್ಕೃತಿ, ಭಾಷಾಸೊಗಡಿನ ನಡುವೆ ತಮ್ಮತನವನ್ನು ಕಾಯ್ದುಕೊಂಡೆ ಹೊಸತನ್ನು ಎದುರಾಗುವ ಸವಾಲು ಮಲೆನಾಡಿನ ಮಹಿಳೆಯರಿಗಿದೆ.... ಬಹುಶಃ ಒಂದಿಷ್ಟು ಎಚ್ಚರ-ಅರಿವುಗಳೊಂದಿಗೆ ಅವರು ಸಾಗಿದ್ದೇ ಆದಲ್ಲಿ, ಇತರ ಪ್ರದೇಶಗಳ ಮಹಿಳೆಯರಿಗಿಂತ ಭಿನ್ನವಾಗಿ ತಮ್ಮತನವನ್ನು ಪ್ರತಿಷ್ಠಾಪಿಸಿಕೊಂಡು ಯಶಸ್ವಿಯಾಗುವ ಶಕ್ತಿ ಮಲೆನಾಡಿನ ಮಹಿಳೆಯರಿಗಿದೆ....

ನಾಳೆಯ ಹೊಸ ಸಂವತ್ಸರಗಳು ಭಾರತೀಯ ಮಹಿಳೆಯರದ್ದಾಗಬೇಕು ಎನ್ನುವುದು ಸಹೃದಯ ಕಾಳಜಿ ಮತ್ತು ಒಂದಷ್ಟು ಒಳಿತಾಗಬಹುದೆಂಬ ಆಶಾವಾದ....

# ಮಲೆನಾಡ ಕೃಷಿ ಪರಿಸರದಲ್ಲಿನ ಮಹಿಳೆಯರು

**ಡಾ. ಕೆ.ಸಿ. ಶಶಿಧರ**

ಇಲ್ಲಿ..... ಈ..... ವಸುಂಧರೆಯ ಮೇಲೆ, ಎಲ್ಲೆಡೆಯೂ ಹಚ್ಚಹಸಿರಿತ್ತು. ಮಂಗ–ಮಾನವ ಸಂಸ್ಕೃತಿಗಿಂತಲೂ ಹಿಂದೆ ಈ ಪರಿಸರ ಅಕ್ಷತವಾಗಿತ್ತು. ಸುರಕ್ಷಿತವಾಗಿತ್ತು! ಹಸಿವನ್ನು ನೀಗಿಕೊಳ್ಳಲು ಮಾನವ ಮೊದಲು ಹಣ್ಣು ಕಿತ್ತನೋ ಅಥವಾ ಪ್ರಾಣಿಯನ್ನು ಕೊಂದನೋ ನಿಖರವಾಗಿ ಹೇಳಲಾಗದು. ಲಕ್ಷಾಂತರ ವರ್ಷಗಳ ಅನಂತರದ ದಿನಗಳ ಬದುಕಿನಲ್ಲಿ, ಹೊಟ್ಟೆ ತುಂಬಿಕೊಳ್ಳಲು ಮಾನವ ಅಲೆಮಾರಿಯಾಗಿ, ಆಹಾರಕ್ಕಾಗಿ ಅಲೆದಾಡುತ್ತಾ ಪರಿಸರ ಸಿದ್ಧಪಡಿಸಿದ ಆಹಾರ ಗೆಡ್ಡೆ ಗೆಣಸು, ಹಣ್ಣು ನಾರು ಬೇರುಗಳನ್ನು ತಿಂದು ಬದುಕಲು ಕಲಿತ. ಪ್ರಾಣಿಗಳ ಬೇಟೆಯನ್ನು ಆರಂಭಿಸಿದ. ಸುರಕ್ಷಿತ ವಾಸಕ್ಕೆ ಹಾಗೂ ಆಹಾರ ಸಂಗ್ರಹಣೆಗಾಗಿ ತನ್ನ ಬದುಕಿನ ಬಹುಭಾಗ ಸಮಯವನ್ನೂ ವ್ಯಯಿಸಿದ. ಶ್ರಮಪಟ್ಟು ಪ್ರಕೃತಿಯ ಕೂಸಾಗಿ ಬದುಕಿದ. ಈ ಅಲೆಮಾರಿ ಬದುಕಿಗೆ ನೆಲೆ ಕೊಟ್ಟವಳು ಮಹಿಳೆ, ಕಾರಣ ಪುರುಷ ಆಹಾರ ಸಂಗ್ರಹಣೆಗೆ ಹೊರಹೋದಾಗ ಬಿತ್ತಿ ಬೆಳೆಯ ಬಹುದೆಂಬುದನ್ನು ಕಂಡುಕೊಂಡವಳು ಮಹಿಳೆ. ಕೃಷಿಯಿಂದ ಒಂದೆಡೆ ನೆಲೆಸಿಕ್ಕು ಆಹಾರ ಪಡೆಯಲು ಸಾಧ್ಯವಾಯಿತು. ಆಗ ನಾಗರೀಕತೆಯ ಆರಂಭವಾಯಿತು. ಕೃಷಿಯ ಆವಿಷ್ಕಾರದಿಂದಾಗಿ ಪ್ರಕೃತಿಯ ರಹಸ್ಯಗಳನ್ನು ಹೆಚ್ಚು ತಿಳಿಯುತ್ತಾ ಪ್ರಾಕೃತಿಕ ಸಂಪನ್ಮೂಲಗಳ ಅಧ್ಯಯನ, ಬಳಿಕ ನಿಯಂತ್ರಣ ಅವನಿಗೆ ಸಾಧ್ಯವಾಯಿತು. ಹೀಗೆ ಕೃಷಿ ಹಾಗು ನಾಗರೀಕತೆ ಕಟ್ಟಿಕೊಟ್ಟವಳು ಮಹಿಳೆ. ಆದರೆ ಇಂದು ಸಹ ಮಹಿಳೆಯ ಕೃಷಿ ಕೆಲಸಗಳು ಆಟಕ್ಕೆ ಉಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ. ಗಂಡಿಗೆ ಸರಿಸಮಾನವಾಗಿ ಕಾರ್ಯನಿರ್ವಹಿಸಿದರೂ ಸಮಾನ ಕೂಲಿಯಾಗಲಿ, ಸಮಾನ ಸ್ಥಾನಮಾನವಾಗಲಿ, ಭೂ ಒಡೆತನವಾಗಲಿ ಮರೀಚಿಕೆಯಾಗಿದೆ. ಮಲೆನಾಡ ಮಡಿಲೂ ಇದಕ್ಕೆ ಹೊರತಾಗಿಲ್ಲ. ಕೃಷಿ ಪರಿಸರದಲ್ಲಿ ಮಹಿಳೆ ಹೊಲ ಮನೆ ಎರಡರಲ್ಲೂ ದುಡಿಯುತ್ತಾರೆ. ಭೂ ಹಿಡುವಳಿ ಇಲ್ಲದಿರುವ ಕುಟುಂಬಗಳಲ್ಲಿ ಮಹಿಳೆ ಅತಿ ಹೆಚ್ಚು ಹೊರೆ (1254 ಗಂಟೆಗಳು) ಹೊರುತ್ತಾಳೆ. ಇವಳ ನಂತರದ ಸ್ಥಾನ ಸಣ್ಣ ಹಿಡುವಳಿ ಹೊಂದಿರುವ ಕುಟುಂಬದ ಮಹಿಳೆಯರದ್ದು (1235 ಗಂಟೆ). ಇವರ ನಂತರ ಮಧ್ಯಮ ಹಿಡುವಳಿ ಹೊಂದಿರುವ ಕುಟುಂಬದ ಮಹಿಳೆಯದ್ದು (932 ಗಂಟೆ). ಆದರೆ, ದೊಡ್ಡ ಹಿಡುವಳಿ ಹೊಂದಿರುವ ಕುಟುಂಬಗಳಲ್ಲಿನ ಮಹಿಳೆಯರಿಗೆ ಹೆಚ್ಚು ಹೊರೆ ಇರುವುದಿಲ್ಲ ಎಂದು ಸಿಂಗ್ ಮತ್ತು ಇತರರು (1994) ಕಂಡುಕೊಂಡಿದ್ದಾರೆ. ಮಲೆನಾಡಲ್ಲಿ ಹಿಡುವಳಿ ಕಡಿಮೆ ಹಾಗು ವರ್ಷಪೂರ್ತಿ ಒಂದಿಲ್ಲೊಂದು ಕೃಷಿ ಚಟುವಟಿಕೆ ನಡೆಯುತ್ತಲೇ ಇರುವುದರಿಂದ ಮಹಿಳೆಯರ ದುಡಿಮೆಯ ದಿನಗಳು ಸಿಂಗ್ ಮತ್ತು ಇತರರು ವರದಿಮಾಡಿದ್ದಕ್ಕಿಂತ ಹೆಚ್ಚಾಗಿರುತ್ತದೆ. ಇದಕ್ಕಾಗಿ ಶಿವಮೊಗ್ಗ ಜಿಲ್ಲೆಯಲ್ಲಿ 2000ನೇ ಸಾಲಿನಲ್ಲಿ ಅಧ್ಯಯನ ಮಾಡಲಾಯಿತು. ಅಧ್ಯಯನವನ್ನು ತಮ್ಮಡಿಹಳ್ಳಿಯಲ್ಲಿ ಕೈಗೊಳ್ಳಲಾಯಿತು. ತಮ್ಮಡಿಹಳ್ಳಿ ಶಿವಮೊಗ್ಗ ತಾಲ್ಲೂಕಿನ ಒಂದು ಹಳ್ಳಿ. ಶಿವಮೊಗ್ಗ ನಗರದಿಂದ ವಾಹನದಲ್ಲಿ ಒಂದೂವರೆ ಘಂಟೆಯ ಹಾದಿ ಕ್ರಮಿಸಿದರೆ ಸಿಗುವ ಈ ಹಳ್ಳಿ ಪಶ್ಚಿಮಘಟ್ಟಗಳ ಸಹ್ಯಾದ್ರಿ ಪರ್ವತ ಶ್ರೇಣಿಯ ಸೊಗಸಾದ ನೋಟಕ್ಕಾಗಿ ಅರಸಿ ಹೋಗುವವರಿಗೆ ಪ್ರವೇಶದ್ವಾರ. ಹಳ್ಳಿಯಲ್ಲಿ ನಿಂತು ನೋಡಿದರೆ ದಟ್ಟವಾದ ಕಾಡು ಗೋಚರವಾಗುತ್ತದೆ. ಅಧ್ಯಯನ ನಡೆಸಲು ಹಳ್ಳಿಯಲ್ಲಿರುವ ಎಲ್ಲಾ ಕುಟುಂಬಗಳನ್ನು ಪರಿಗಣಿಸಲಾಯಿತು. ಕೃಷಿಯಲ್ಲಿ ತೊಡಗಿರುವ ಮಾನವ ಸಂಪನ್ಮೂಲ ದೃಷ್ಟಿಯಿಂದ ಹಳ್ಳಿಯು ತುಂಬಾ ವಿಶೇಷತೆಯನ್ನು ತನ್ನದಾಗಿಸಿಕೊಂಡಿದೆ. ಹಳ್ಳಿಯಲ್ಲಿರುವ ಒಟ್ಟು 149 ಕುಟುಂಬಗಳಲ್ಲಿ 148 ಕುಟುಂಬಗಳು ಕೃಷಿಯಲ್ಲಿ ತೊಡಗಿಸಿ ಕೊಂಡಿವೆ. ಅಂದರೆ ಈ ಹಳ್ಳಿಯಲ್ಲಿನ ಕೃಷಿ ಕುಟುಂಬಗಳು ಪ್ರತಿಶತ 99.33 ರಷ್ಟು. ಪ್ರತಿ ಹೆಕ್ಟೇರಿಗೆ ಲಭ್ಯವಿರುವ ಕೃಷಿ ಕಾರ್ಮಿಕರನ್ನು ಮಾತ್ರ ಗಣಿಸಿದರೆ ಇದು ಶೇ.0.16 ಮಾತ್ರ. ಆದರೆ ಕೃಷಿಕರಾಗಿದ್ದು ಕೂಲಿ ಮಾಡುವವರುಗಳನ್ನು ಸೇರಿಸಿ ಗಣಿಸಿದರೆ ಈ ಪ್ರಮಾಣ 0.86. ಜಾಗತಿಕ ಮಟ್ಟದಲ್ಲಿ ಪ್ರತಿಶತ ಕೃಷಿಯನ್ನು ಅವಲಂಬಿಸಿರುವವರ ಹಾಗೂ ಕೃಷಿ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಇಳಿದಿರುವುದು ಕಂಡುಬರುತ್ತದೆ. 1961 ರಲ್ಲಿ ಪ್ರತಿಶತ 57.8 ಇದ್ದ ಕೃಷಿ ಅವಲಂಬಿತರ ಸಂಖ್ಯೆಯು 1994ರಲ್ಲಿ ಪ್ರತಿಶತ 43.5ಕ್ಕೆ ಇಳಿದಿತ್ತು. ಅದೇ ರೀತಿ 1961 ರಲ್ಲಿ ಪ್ರತಿಶತ 26.7 ಇದ್ದ ಕೃಷಿ ಕಾರ್ಮಿಕರ ಸಂಖ್ಯೆಯು 1994 ರಲ್ಲಿ ಪ್ರತಿಶತ 20 ಕ್ಕೆ ಇಳಿಯಿತು. ಪ್ರತಿಶತ ಕೃಷಿ ಕಾರ್ಮಿಕರ ಸಂಖ್ಯೆಯು ಗಣನೀಯವಾಗಿ ಇಳಿದರೂ ಸಹ ಈ ಸಮಯದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ತೀವ್ರ ಏರಿಕೆಯಾಗಿರುವುದರಿಂದ ಪ್ರತಿ ಹೆಕ್ಟೇರ್ ಪ್ರದೇಶಕ್ಕೆ ಲಭ್ಯವಿರುವ ಕೃಷಿ ಕಾರ್ಮಿಕರ ಸಂಖ್ಯೆ 1961 ರಲ್ಲಿ ಶೇ.0.67 ರಿಂದ 1994 ರಲ್ಲಿ ಶೇ.0.78 ಕ್ಕೆ ಏರಿದೆ. ಆದರೆ, ಈ ಹಳ್ಳಿಯಲ್ಲಿ ಲಭ್ಯ ಕೃಷಿ ಕಾರ್ಮಿಕರ ಸಂಖ್ಯೆ ಒಟ್ಟಾರೆ ಹೆಚ್ಚಾಗಿದ್ದರೂ ಭೂಮಿ ಇರದೆ ಬರೀ ಕೃಷಿ ಕಾರ್ಮಿಕರಾಗೇ ಇರುವವರ ಸಂಖ್ಯೆ ಗಣನೀಯವಾಗಿ ಇಳಿದಿದೆ ಎಂಬುದು ಗಮನಾರ್ಹ.

**ತಮಡಿಹಳ್ಳಿ ಕೃಷಿಯಲ್ಲಿ ತೊಡಗಿರುವ ಮಾನವ ಸಂಪನ್ಮೂಲ**

| ವಿವರ | ರೈತರು | ರೈತರಾಗಿದ್ದು ಕೃಷಿ ಕೂಲಿ ಮಾಡುವವರು | ರೈತರಾಗಿದ್ದು ಇತರ ಕೆಲಸ ಮಾಡುವವರು | ಕೃಷಿ ಕಾರ್ಮಿಕರು | ಕೃಷಿ ಕಾರ್ಮಿಕ ರಾಗಿದ್ದು ಇತರೆ ಕೆಲಸ | ಒಟ್ಟು |
|---|---|---|---|---|---|---|
| ಅ) ಕುಟುಂಬ ಗಳ ಸಂಖ್ಯೆ | 34 | 60 | 36 | 17 | 1 | 148 |
| ಆ) ಒಟ್ಟು ಮಹಿಳೆಯರು | 91 | 142 | 93 | 45 | 2 | 373 |
| ಇ) ಒಟ್ಟು ಪುರುಷರು | 102 | 175 | 99 | 36 | 3 | 415 |
| ಈ) ಒಟ್ಟು ಜನಸಂಖ್ಯೆ | 193 | 317 | 192 | 81 | 5 | 788 |
| ಉ) ಹಳ್ಳಿಯ ಲ್ಲಿನ ಕಾರ್ಮಿಕರ ಸಂಖ್ಯೆ | – | – | – | – | – | – |
| ಹೆಂಗಸರು | – | 60 | 18 | 25 | 1 | 93 |
| ಗಂಡಸರು | – | 88 | 14 | 15 | 1 | 117 |
| ಒಟ್ಟು | – | 148 | 32 | 40 | 2 | 210 |

**ಕೃಷಿ ಕಾರ್ಮಿಕರ ಕುಟುಂಬದಲ್ಲಿ ಮಹಿಳೆಯರ ಸ್ಥಿತಿಗತಿ**

ಹಳ್ಳಿಯ ಪ್ರತಿಶತ 44ರಷ್ಟು ಮಹಿಳಾ ಕಾರ್ಮಿಕರಿದ್ದು ಕೂಲಿಯಲ್ಲಿ ತೊಡಗುವ ದಿನ ಆಧರಿಸಿದರೆ ಪುರುಷರಿಗೆ ಸರಿಸಮನಾಗಿ ಕೂಲಿ ದಿನಗಳಿರುವುದು ಈ ಹಳ್ಳಿಯ ವಿಶೇಷ. ಕೇವಲ ಕೃಷಿಯ ಕೂಲಿಯನ್ನು ಅವಲಂಬಿಸಿದವರ ಸಂಖ್ಯೆ ಈ ಹಳ್ಳಿಯಲ್ಲಿ ಕಡಿಮೆ. ಒಟ್ಟು ಕುಟುಂಬಗಳಲ್ಲಿ ಪ್ರತಿಶತ 11.41 ರಷ್ಟು ಕುಟುಂಬಗಳಲ್ಲಿ ಕೂಲಿಯೊಂದೇ ಜೀವನಾಧಾರ ವೃತ್ತಿ. ಹಳ್ಳಿಯ ಒಟ್ಟು ಜನಸಂಖ್ಯೆಯ ಪ್ರತಿಶತ 10.28ರಷ್ಟು ಜನಸಂಖ್ಯೆಯು ಕೂಲಿ ಆದಾಯವನ್ನು ಅವಲಂಬಿಸಿದೆ. ಆದರೆ ಇವರಲ್ಲಿ 49.38 ರಷ್ಟು ಮಾತ್ರ ಕೂಲಿ ಮಾಡುತ್ತಾರೆ. ಉಳಿದವರು ಕೆಲಸವಿಲ್ಲದೆ ಕೂಲಿ ಆದಾಯ ಅವಲಂಬಿಸಿರುವರು. ಅವರೆಂದರೆ ಮನೆಯಲ್ಲಿರುವ ಸಣ್ಣ ಮಕ್ಕಳು, ವೃದ್ಧರು, ಓದುವವರು, ಗರ್ಭಿಣಿಯರು, ಅನಾರೋಗ್ಯದಿಂದ ಬಳಲುವವರು ಕೂಲಿ ಮಾಡುವುದಿಲ್ಲ. ಹಳ್ಳಿಯಲ್ಲಿ ಕೂಲಿ ಮಾಡುವವರಲ್ಲಿ ಮಹಿಳೆಯರ ಸಂಖ್ಯೆಯು ಗಣನೀಯವಾಗಿ ಜಾಸ್ತಿ ಇದೆ. ಒಟ್ಟು ಕೂಲಿ ಅವಲಂಬಿತ ಗಂಡಸರಲ್ಲಿ ಪ್ರತಿಶತ 41.67 ರಷ್ಟು ಕೂಲಿ ಮಾಡುತ್ತಿದ್ದಾರೆ. ಆದರೆ ಹೆಂಗಸರಲ್ಲಿ ಈ ಪ್ರಮಾಣ ಪ್ರತಿಶತ 55.56 ರಷ್ಟು. ಪ್ರತಿಶತ 82.25 ರಷ್ಟು ಕೂಲಿ ಕಾರ್ಮಿಕರಿಗೆ 8 ತಿಂಗಳು ಕೂಲಿ ದೊರೆಯುತ್ತಿದೆ. ಇದನ್ನು ಕುಮಾರಸ್ವಾಮಿ (1999) ಯವರ ಕೃಷಿ ಕಾರ್ಮಿಕನ ದುಡಿಮೆಗೆ ಸಾಧ್ಯವಿರುವ ದಿನಗಳಿಗೆ (250 ದಿನ) ಹೋಲಿಸಿದಲ್ಲಿ ಸರಿಯಾಗಿಯೇ ಇದೆ ಅಂತ ಮೇಲು ನೋಟಕ್ಕೆ ಅನಿಸುತ್ತದೆ. ಆದರೆ, ಕುಮಾರಸ್ವಾಮಿಯವರು ಉಳಿದ ದಿನಗಳ ಬಳಕೆ ಬಗ್ಗೆ ನೀಡಿರುವ ವಿಶ್ಲೇಷಣೆ ಗಮನಿಸಿದಲ್ಲಿ ಈ ಹಳ್ಳಿಯ ಮಾನವಸಂಪನ್ಮೂಲ ಬಳಕೆ ವಿವರ ಸ್ಪಷ್ಟವಾಗುತ್ತದೆ. ಈ ಹಳ್ಳಿಯಲ್ಲಿ 4 ತಿಂಗಳು ಕೆಲಸಗಳಿರದಿದ್ದರಿಂದ 8 ತಿಂಗಳು ಕೆಲಸ ಎಂದು ಕೃಷಿಕಾರ್ಮಿಕರ ಅಭಿಪ್ರಾಯ. ಆದರೆ, ಕುಮಾರಸ್ವಾಮಿಯವರು ಪ್ರಸ್ತಾಪಿಸಿದಂತೆ 115 ದಿನಗಳಲ್ಲಿ ವಾರಕ್ಕೊಂದು ದಿನದಂತೆ 52 ದಿನ ಮನೆ ಕೆಲಸ ವಾರಕ್ಕೆ 1/2 ದಿನದಂತೆ 26 ದಿನ ಸಂತೆ ಹಾಗೂ ಮಾರುಕಟ್ಟೆ ಕೆಲಸ, ಸಂಬಂಧಿಕರ ಭೇಟಿ 7 ದಿನ, ಹಬ್ಬಹರಿದಿನ ಜಾತ್ರೆ 15 ದಿನ, ಅನಾರೋಗ್ಯ 15 ದಿನ. ಇವುಗಳಲ್ಲಿ ಬಹುಪಾಲು ಎಲ್ಲವೂ ವರ್ಷವಿಡೀ ವ್ಯಾಪಿಸಿದಲ್ಲಿ ಮಾತ್ರ ಈ ಲೆಕ್ಕಾಚಾರ ಸರಿಯಾಗುತ್ತದೆ. ವಾರಕ್ಕೆ ಒಂದು ದಿನದಂತೆ 52 ದಿನ ಮನೆ ಕೆಲಸಕ್ಕೆ ಬೇಕು. ಆದರೆ ಒಟ್ಟಿಗೆ 52 ದಿನ ಸಿಕ್ಕರೆ ಅದನ್ನು ಕೆಲಸವಿಲ್ಲದ ಅವಧಿ ಎಂದೇ ಪರಿಗಣಿಸಬೇಕಾಗುತ್ತದೆ. ಸಂಬಂಧಿಕರ ಮನೆಭೇಟಿಯೊಂದನ್ನು ಬಿಟ್ಟು ಇನ್ನಾವುದೂ ಕಾರ್ಮಿಕನ ಹಿಡಿತದಲ್ಲಿ ಇರುವುದಿಲ್ಲ. ಹೀಗಾಗಿ ಪ್ರತಿಶತ 94.11 ರಷ್ಟು ಕೂಲಿ ಕಾರ್ಮಿಕರಿಗೆ ವರ್ಷಪೂರ್ತಿ ಕೆಲಸ ದೊರೆಯದೆ ಇರುವುದು ವ್ಯಕ್ತವಾಗುತ್ತದೆ. ಒಟ್ಟಾರೆ ಹಳ್ಳಿಯಲ್ಲಿರುವ 40 ಜನ ಕೃಷಿ ಕಾರ್ಮಿಕರು ಹಾಗೂ ಅವರು ವ್ಯಕ್ತಪಡಿಸಿದಂತೆ ಖಾಲಿ ಇರುವ ದಿನಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಒಟ್ಟು 3990 ಮಾನವ ದಿನಗಳಲ್ಲಿ ಉದ್ಯೋಗ ಒದಗಿಸುವ ಅವಶ್ಯಕತೆ ಇದೆ. ನಾನು ವೈಯಕ್ತಿಕವಾಗಿ ಗಮನಿಸಿದಂತೆ ಬೇಸಿಗೆಯಲ್ಲಿ ಲಭ್ಯ ಕೃಷಿ ಕೆಲಸ ಅತೀ ಕಡಿಮೆ. ಆದರೆ ಹಂಗಾಮಿನಲ್ಲಿ ಕೆಲಸಗಾರರ ಕೊರತೆ ಎದ್ದು ಕಾಣುತ್ತದೆ. ಕೆಲಸವಿಲ್ಲದ ದಿನಗಳು ಹಾಗು ಕೆಲಸದ ಒತ್ತಡ ಜಾಸ್ತಿ ಇರುವ ದಿನಗಳೆರಡರಲ್ಲೂ ಮಹಿಳೆಗೆ ಹೊರೆ ಜಾಸ್ತಿ ಕಾರಣ ಕೆಲಸ ವಿಲ್ಲಾದಾಗ ಗಂಡಸರು ಗುಳೆ ಹೋಗುವುದರಿಂದ ಮನೆ ಮತ್ತು ಕೂಲಿ ಎರಡನ್ನೂ ಒಬ್ಬರೇ ನಿಭಾಯಿಸಬೇಕು. ಕೆಲಸದ ಒತ್ತಡ ಜಾಸ್ತಿ ಇರುವ ದಿನಗಳಲ್ಲಿ ಕೂಲಿ ಸಿಕ್ಕಾಗ ದುಡಿದುಕೊಳ್ಳಬೇಕೆಂದು ಹೆಚ್ಚು ಕೆಲಸ ಮಾಡುವುದು, ಹೀಗೆ ಕೂಲಿ ಮಾಡುವ ಮಹಿಳೆ ಸದಾ ಒತ್ತಡದಲ್ಲಿ ಕೆಲಸಮಾಡುವರು. ವರ್ಷದ ಎಲ್ಲಾ ದಿನಗಳಲ್ಲಿ ಕೂಲಿ ಸಿಗದಿರುವುದೇ ಈ ವರ್ಗದವರ ಸಮಸ್ಯೆ . ಕನಿಷ್ಠ ನಾಲ್ಕು

ತಿಂಗಳು ಕೆಲಸ ಇಲ್ಲದೆ ಸಾಲ ಮಾಡಿಯೇ ಜೀವನ ಸಾಗಿಸಬೇಕಾಗುತ್ತದೆ. ಎಲ್ಲಾ ದಿನಗಳೂ ಕೂಲಿ ಸಿಗುವಂತಾದರೆ ನಮ್ಮ ಜೀವನ ಸ್ವಲ್ಪ ಸುಧಾರಿಸುತ್ತದೆ. ಗಂಡಾಳುಗಳು ಕೂಲಿ ಮುಗಿಸಿ ಬಂದ ನಂತರ ತಮ್ಮದೇ ಚಟ ಇರುವ ಗುಂಪಿನಲ್ಲಿ ವೇಳೆ ಕಳೆಯುವುದೇ ಹೆಚ್ಚು ಮತ್ತು ಮನೆ ಕೆಲಸಗಳಲ್ಲಿ ಸಹಕರಿಸುವುದು ಇಲ್ಲವೇ ಇಲ್ಲ. ಗಂಡಸರು, ಹೆಂಡತಿ ಮಕ್ಕಳ ಜೊತೆ ಹರಟುತ್ತಾ ಕಾಲಕಳೆಯುವುದು ಕೇವಲ ಊಟಕ್ಕೆ ಕುಳಿತಾಗ ಮಾತ್ರ. ಕೂಲಿ ಇಲ್ಲದ ಅವಧಿಯಲ್ಲಿ ಇದು ಇರುವುದಿಲ್ಲ. ಕಾರಣ ಊಟಕ್ಕೆ ಸಾಲ ಜೋಡಿಸುವಲ್ಲಿಯೇ ನೆಮ್ಮದಿ ಹೋಗಿರುತ್ತೆ. ಇನ್ನೆಲ್ಲಿಯ ನೆಮ್ಮದಿಯ ಮಾತು. ಹೆಂಗಸರು ಕೃಷಿ ಕೆಲಸವಲ್ಲದೆ ಮನೆಯ ಕೆಲಸ ಮಾಡುವುದರಿಂದ ಅವರಿಗೆ ಕಷ್ಟವಾಗುವುದಿಲ್ಲವೆ? ಎಂದು ಪ್ರಶ್ನಿಸಿದಾಗ ಯಾವ ಗಂಡಸರೂ ಅನುಕಂಪ ತೋರಿಸುವುದಾಗಲಿ, ಹೌದು ನಾವು ಸಹಕರಿಸುತ್ತೇವೆ ಎಂದಾಗಲೀ ಹೇಳಲಿಲ್ಲ. ಹೆಂಗಸರೂ ಸಹ ಇದು ನಾವು ಮಾಡೋ ಕೆಲಸ ಮಾಡದಿದ್ದರೆ ಹೊಟ್ಟೆ ತುಂಬಬೇಕಲ್ಲ ಅಂದವರೇ ಜಾಸ್ತಿ. ಅತಿಯಾಗಿ ಸುಸ್ತಾದಾಗ, ಅನಾರೋಗ್ಯದ ಸಂದರ್ಭಗಳಲ್ಲಿ ನಾವೇ ಮಾಡಬೇಕಲ್ಲಪ್ಪ ಅನಿಸುವುದೂ ಉಂಟು. ಆಗ ಮಕ್ಕಳಿಗೆ ಬಯ್ದು ನೆರವು ಕೋರುವುದಿದೆ. ಹೆಣ್ಣು ಮಕ್ಕಳಿದ್ದಲ್ಲಿ ಅಷ್ಟು ತೊಂದರೆಯಾಗದು ಎಂಬುದು ಹೆಂಗಸರ ಅನಿಸಿಕೆ. ಕೂಲಿ ಇಲ್ಲದಾಗ ಒಂದು ಹೊತ್ತು ಊಟ ಇಲ್ಲದ ದಿನಗಳು ಸಾಮಾನ್ಯ. ಮಕ್ಕಳಿಗೆ ಊಟ ಹೊಂದಿಸುವುದೇ ಕಷ್ಟ, ಇನ್ನು ನಮ್ಮ ಚಿಂತೆ ಮಾಡುವುದು ಹೇಗೆ ಎಂಬುದು ಅವರ' ಅಭಿಮತ.

ಕೃಷಿ ಕಾರ್ಮಿಕರ ಕುಟುಂಬದ ಮಾನವ ಸಂಪನ್ಮೂಲ ಬಳಕೆ ನೋಡಿದರೆ ಹಲವಾರು ಅಚ್ಚರಿಗಳು ಗೋಚರಿಸುತ್ತವೆ. ಕೃಷಿ ಕಾರ್ಮಿಕ ಮಲ್ಲೇಶಪ್ಪನವರ ಕುಟುಂಬ ಪುಟ್ಟದು. ನಾಲ್ಕು ಜನರಿರುವ ಈ ಪುಟ್ಟ ಕುಟುಂಬದಲ್ಲಿ ದುಡಿಯುವವರು ಎರಡು ಹೆಣ್ಣಾಳುಗಳು ಮಾತ್ರ. ಮನೆಯ ಹಿರಿಯ ಮಲ್ಲೇಶಪ್ಪನಿಗೆ ಅನಾರೋಗ್ಯ, ಲಕ್ವ ಹೊಡೆದಿದೆ. ಅವರ ಕೆಲಸ ಅವರೇ ಮಾಡಿಕೊಳ್ಳುವರಾದರೂ ಮನೆಬಿಟ್ಟು ಹೋಗುವಂತಿಲ್ಲ. ಐವತ್ತು ವರ್ಷದ ಲಕ್ಷ್ಮಮ್ಮ ಹಾಗೂ ಹದಿನೆಂಟು ವರ್ಷದ ಮಗಳು ಪಾರ್ವತಮ್ಮ ಕೂಲಿ ಮಾಡುತ್ತಾರೆ. ಹನ್ನೆರಡು ವರ್ಷದ ಮಗಳು ರೇಣುಕಮ್ಮ 7 ನೇ ತರಗತಿಯಲ್ಲಿ ಓದುತ್ತಿದ್ದಾಳೆ. ರೇಣುಕಮ್ಮ ಓದುತ್ತಿರುವುದರಿಂದ ಹಾಗೂ ಮನೆಯವರಿಗೆ ಓದಿಸಬೇಕೆಂಬ ಹಂಬಲ ಇರುವುದರಿಂದ ಯಾವ ಕೆಲಸ ಹಚ್ಚುವುದಿಲ್ಲ. ಹೀಗಾಗಿ ಮನೆ ಕೆಲಸ ಹಾಗೂ ಕೂಲಿ ಕೆಲಸ ಎರಡೂ ಲಕ್ಷ್ಮಮ್ಮ ಹಾಗೂ ಪಾರ್ವತಮ್ಮನ ಮೇಲಿದೆ. ಒಂದು ದಿನದಲ್ಲಿ ಇವರು ಮಾಡುವ ಕೆಲಸಗಳನ್ನು ಅಧ್ಯಯನ ಮಾಡಲು ಪ್ರಮುಖವಾಗಿ ಎರಡು ವಿಭಾಗ ಮಾಡಲಾಯಿತು ಒಂದು ಕೂಲಿ ಇರುವ ದಿನ, ಕೂಲಿ ಇರದೇ ಇರುವ ದಿನ. **ಕೂಲಿ ಇರುವ ದಿನ** ಇವರ ಕಾರ್ಯ ಚಟುವಟಿಕೆಗಳು ಬೆಳಿಗ್ಗೆ 5 ಗಂಟೆಗೆ ಪ್ರಾರಂಭ. ಸರಿಸುಮಾರು 9 ಕ್ಕೆ ಕೂಲಿ ಹೋಗುವವರೆಗೆ ಇಬ್ಬರಿಗೂ ಬಿಡುವಿಲ್ಲದ ಮನೆ ಕೆಲಸ ಕಾರಣ ಬೆಳಿಗ್ಗೆ ಅಡಿಗೆ ಮಾಡಿ ಮಧ್ಯಾಹ್ನ ಮಲ್ಲೇಶಪ್ಪ ಹಾಗೂ ರೇಣುಕಮ್ಮನಿಗೆ ಊಟ ಸಿದ್ಧಪಡಿಸಿಟ್ಟು ಹೋಗಬೇಕು. ಮನೆಯಲ್ಲಿ ಶೌಚಾಲಯವಿಲ್ಲದಿದ್ದರಿಂದ ಹೊರಗಡೆ ಹೋಗಬೇಕು. ಊರ ಹತ್ತಿರ ಹೆಚ್ಚು ಬಯಲಿರುವುದರಿಂದ ಸ್ವಲ್ಪ ದೂರವೇ ಹೋಗಿ ಬರಬೇಕಾದ್ದರಿಂದ ಕನಿಷ್ಠ ಅರ್ಧ ಗಂಟೆಯಾದರೂ ಈ ಕೆಲಸಕ್ಕೆ ಹೋಗುತ್ತದೆ. ನಂತರ ಕೈಕಾಲು ತೊಳೆದು ಮನೆ ಕೆಲಸ ಆರಂಭಿಸುವಲ್ಲಿಗೆ 6 ಗಂಟೆಯಾಗಿಯೇ ಬಿಡುತ್ತದೆ. ಇದು ಸಾಮಾನ್ಯವಾಗಿ ಕೂಲಿ ಹೋಗುವ ದಿನಗಳಲ್ಲಿ, ಆದರೆ ನಾಟಿ ಕೊಯ್ಲು, ಒಕ್ಕಲು ಇದ್ದಾಗ ಬೆಳಿಗ್ಗೆ 7 ಗಂಟೆಗೆ ಹೋದರೆ ಕೂಲಿ ಜಾಸ್ತಿಗಳಿಸಬಹುದೆಂದು ಬೇಗ ಹೋಗುತ್ತಾರೆ. ಈ ದಿನಗಳಲ್ಲಿ ಇವರು ವೈಯಕ್ತಿಕ ಸ್ವಚ್ಛತೆ ಬಗ್ಗೆ ಗಮನ ಹರಿಸುವುದೇ ಇಲ್ಲ ಎಂದರೆ ಅತಿಶಯೋಕ್ತಿಯೇನಿಲ್ಲ. ಸಂಜೆ ಮನೆಗೆ ಬರುವುದು 5–6 ಗಂಟೆಯಾಗುತ್ತದೆ. ಬಂದ ತಕ್ಷಣ ಸ್ವಲ್ಪವೂ ವಿಶ್ರಾಂತಿ ಇಲ್ಲದೆ ಪಾರ್ವತಮ್ಮ ಮನೆ ಸ್ವಚ್ಛತೆಗೆ ತೊಡಗಿದರೆ ಲಕ್ಷ್ಮಮ್ಮ ಅಡಿಗೆ ಮನೆಗೆ ಹೋಗುತ್ತಾರೆ. ಸ್ವಚ್ಛತೆ ಮುಗಿಸಿದ ಲಕ್ಷ್ಮಮ್ಮ ಅಡುಗೆ ಮನೆ ಸೇರಿದರೆ ಸರಿಸುಮಾರು 8 ಗಂಟೆಗೆ ಅಡಿಗೆ ಸಿದ್ಧವಾಗುತ್ತದೆ. ಅಂದಿನ ಸಾಮಾನುಗಳನ್ನು ತರುವ ಕೆಲಸ ರೇಣುಕಮ್ಮ ಮಾಡುತ್ತಾಳೆ. ಎಲ್ಲರೂ ಊಟಮಾಡಿ ಮುಗಿಸಿದರೆಂದರೆ 9 ಗಂಟೆಗೆ ಮಲಗಿ ಬಿಡುತ್ತಾರೆ. ಕೂಲಿ ಇಲ್ಲದ ದಿನಗಳಲ್ಲಿ ಸ್ವಲ್ಪ ನಿಧಾನಕ್ಕೆ ಏಳೋಣ ಅಂದರಾಗದು. ಕಾರಣ ಲೇಟಾದರೆ ಶೌಚಕ್ರಿಯೆಗೆ ಹೋಗಿ ಬರುವುದು ತೊಂದರೆ ಎನ್ನುತ್ತಾರೆ ಪಾರ್ವತಮ್ಮ. ಇಂತಹ ದಿನಗಳಲ್ಲಿ ಬೆಳಿಗ್ಗೆ ಅಡುಗೆ 10 ಗಂಟೆಗೆ ಸಿದ್ಧವಾಗುತ್ತದೆ. ಮನೆ ಸ್ವಚ್ಛತೆ, ಬಟ್ಟೆ ಸ್ವಚ್ಛ ಮಾಡುವುದು, ಸೌದೆ ತರುವುದು ಇತ್ಯಾದಿ ಮನೆ ಕೆಲಸಗಳು ಜಾಸ್ತಿ ವೈಯಕ್ತಿಕ ಸ್ವಚ್ಛತೆಗೂ ಆದ್ಯತೆ ಹೆಚ್ಚು. ಸಾಮಾನ್ಯ ದಿನಗಳಲ್ಲಿ ಅಡುಗೆ ಮಾಡಲು ಸಹ ಸ್ವಲ್ಪ ಜಾಸ್ತಿ ಸಮಯ ತೆಗೆದುಕೊಳ್ಳುವರು. ಸಾಮಾನ್ಯವಾಗಿ ಕೂಲಿ 220 ದಿನಗಳು. ಆದರೆ ಈ 220 ದಿನಗಳೂ ಕೆಲಸಕ್ಕೆ ಇಬ್ಬರು ಹೋಗಿರುವುದಿಲ್ಲ. ವಾರಕ್ಕೆ ಒಂದು ದಿನ ಇಬ್ಬರಲ್ಲಿ ಒಬ್ಬರು ಕೂಲಿಗೆ ಹೋಗದೆ ಮನೆ ಕೆಲಸ ನೋಡಿಕೊಳ್ಳುತ್ತಾರೆ. ಎರಡು ವಾರಗಳಿಗೆ ಒಮ್ಮೆ ಸಂತೆಗೆ ಹೋಗುವುದು ಸಾಮಾನ್ಯ. ಈ ಅವಧಿಯಲ್ಲಿ ಆರೋಗ್ಯದ ಏರುಪೇರಿನಿಂದಾಗಿ ಲಕ್ಷ್ಮಮ್ಮ 5 ದಿನ ಕೆಲಸ ಬಿಡುವುದು ಸಾಮಾನ್ಯ. ಇಬ್ಬರಿಂದ 440 ದಿನಗಳ ಕೂಲಿಯಾದರೆ ಇಬ್ಬರೂ ಸೇರಿ ಒಟ್ಟು ಕೂಲಿ ಹೋಗದ ದಿನಗಳು ವಾರದ ಮನೆಗೆಲಸ ಸಂತೆ ಸೇರಿ 32 ದಿನಗಳು. ಅನಾರೋಗ್ಯದ ಕಾರಣ ತಪ್ಪಿಸುವ ದಿನಗಳು 5. ಪಾರ್ವತಮ್ಮ ತಿಂಗಳಿಗೊಂದು ದಿನ ಬಿಡುವ ದಿನಗಳು 8, ಹೀಗೆ ಒಟ್ಟು 45 ಮಾನವ ದಿನಗಳು ಕೆಲಸ ಕಳೆದುಕೊಳ್ಳುವುದು ಸಾಮಾನ್ಯ. ಕೂಲಿ ಸಿಗುವಂತಿದ್ದರೆ ಹಬ್ಬ ಹರಿದಿನಗಳಲ್ಲೂ ಕೂಲಿ ಹೋಗುವುದು ಸಾಮಾನ್ಯ. ಹಾಗೆ ದುಡಿದಲ್ಲಿ ಕೂಲಿ ಇಲ್ಲದ ದಿನಗಳೂ

ಜೀವನ ಮಾಡಬಹುದೆನ್ನುತ್ತಾರೆ ಲಕ್ಷ್ಮಮ್ಮ. ಒಬ್ಬರ ಕೂಲಿಯಲ್ಲಿ ಒಬ್ಬರೇ ಜೀವನ ಮಾಡಲು ಸಾಧ್ಯ. ಇಬ್ಬರು ಕೂಲಿ ಮಾಡಿ ಎಲ್ಲಾ ದಿನ ಕೂಲಿ ಸಿಕ್ಕರೆ ಒಂದು ಮಗುವನ್ನು ಸಾಕಬಹುದು. ಆದರೆ ಮಗು ಸಣ್ಣದಿದ್ದಾಗ ಸಹ ಇಬ್ಬರು ದುಡಿದಲ್ಲಿ ಮಾತ್ರ ಸಾಧ್ಯ. ಆದರೆ, ಮಗುವಿದ್ದಾಗ ನೋಡಿಕೊಳ್ಳಲು ಕೆಲಸ ಬಿಡಬೇಕಾಗಿ ಒಬ್ಬರು ಕೆಲಸ ಬಿಟ್ಟು ಸಾಲ ಮಾಡಿದರೆ, ಇದು ಜೀವನಪರ್ಯಂತ ಕಾಡುತ್ತದೆ ಎಂಬ ತಮ್ಮ ಅನುಭವ ಹಂಚಿಕೊಂಡರು ಲಕ್ಷ್ಮಮ್ಮ.

**ಕೂಲಿ ಕುಟುಂಬಗಳು, ಜನಸಂಖ್ಯೆ ಹಾಗೂ ಕೂಲಿ ಮಾಡುವವರ ಸಂಖ್ಯೆ**

| ವಿವರ | ಗಂಡು | ಹೆಣ್ಣು | ಒಟ್ಟು |
|---|---|---|---|
| ಕುಟುಂಬಗಳು | – | – | 17 |
| ಒಟ್ಟು ಕೂಲಿ ಅವಲಂಬಿತರು | 36 | 45 | 81 |
| ಒಟ್ಟು ಕೂಲಿ ಮಾಡುವವರು | 15 | 25 | 40 |
| ಹಳ್ಳಿಯ ಒಟ್ಟು ಜನಸಂಖ್ಯೆ | 415 | 373 | 788 |
| ಒಟ್ಟು ಜನಸಂಖ್ಯೆಯಲ್ಲಿ ಬರಿ ಕೂಲಿ ಆದಾಯ ಆಶ್ರಯಿಸಿರುವವರು (ಪ್ರತಿಶತ) | 8.67 | 12.06 | 10.28 |
| ಒಟ್ಟು ಜನಸಂಖ್ಯೆಯಲ್ಲಿ ಬರಿ ಕೂಲಿ ಉದ್ಯೋಗವನ್ನು ಮಾಡುವವರು (ಪ್ರತಿಶತ) | 3.61 | 6.70 | 5.08 |

**ಮಾನವ ಸಂಪನ್ಮೂಲ ಬಳಕೆ ಬಗ್ಗೆ ಕೂಲಿ ಕುಟುಂಬಗಳ ಅನಿಸಿಕೆ**

| ವಿವರ | ಅನಿಸಿಕೆ<br>ಒಟ್ಟು ಕೂಲಿ ಕುಟುಂಬಗಳ ಪ್ರತಿಶತ (ಸಂಖ್ಯೆ) |
|---|---|
| 1. ವರ್ಷದ ಎಲ್ಲಾ ದಿನಗಳು ಕೂಲಿ ಸಿಗುವುದಿಲ್ಲ | 94.11 (16) |
| 2. ವರ್ಷದ ಹತ್ತು ತಿಂಗಳು ಮಾತ್ರ ಕೂಲಿ ಸಿಗುತ್ತದೆ | 11.76 (2) |
| 3. ವರ್ಷದಲ್ಲಿ ಎಂಟು ತಿಂಗಳು ಮಾತ್ರ ಕೂಲಿ ಸಿಗುತ್ತದೆ | 70.59 (12) |
| 4. ವರ್ಷದಲ್ಲಿ ಆರು ತಿಂಗಳು ಮಾತ್ರ ಕೂಲಿ ಸಿಗುತ್ತದೆ | 11.79 (2) |
| 5. ಹಂಗಾಮಿನ ದಿನದಲ್ಲಿ ಎಷ್ಟು ಗಂಟೆ ಕೂಲಿ ಮಾಡುತ್ತೀರಾ ? ನಾಟಿ ಹಂಗಾಮಿನಲ್ಲಿ<br>8 ಗಂಟೆ | 41.18 (7) |
| 10 ಗಂಟೆ | 41.18 (7) |
| 12 ಗಂಟೆ | 17.65 (3) |
| ಕೊಯ್ಲು ಹಂಗಾಮಿನಲ್ಲಿ ಹಾಗೂ ಒಕ್ಕಲು 8 ಗಂಟೆ | 5.88 (1) |
| 10 ಗಂಟೆ | 11.76 (2) |
| 12 ಗಂಟೆ | 41.18 (7) |
| >12 ಗಂಟೆ | 41.18 (7) |
| ಇತರೆ ಕೃಷಿ ಕಾರ್ಯಗಳಿದ್ದಾಗ 8 ಗಂಟೆ | 88.24 (15) |
| 10 ಗಂಟೆ | 5.88 (1) |
| 12 ಗಂಟೆ | 5.88 (1) |
| ವಲಸೆ ಹೋದಾಗ 8 ಗಂಟೆ | 11.76 (2) |
| 10 ಗಂಟೆ | 58.82 (10) |
| 12 ಗಂಟೆ | 29.41 (5) |
| ಕೃಷಿಯೇತರ ಕೂಲಿ ಹೋದಾಗ 8 ಗಂಟೆ | 100 (17) |
| 10 ಗಂಟೆ | – |
| 12 ಗಂಟೆ | – |
| 6.ಮಹಿಳೆಯರು ದಿನದಲ್ಲಿ ಮನೆ ಕೆಲಸಕ್ಕೆ ವಿನಿಯೋಗಿಸುವ ಅವಧಿ<br>ಕೂಲಿ ಹೋಗುವ ದಿನಗಳಲ್ಲಿ 4 ಗಂಟೆ | 88.24 (15) |
| 4–6 ಗಂಟೆ | 11.76 (2) |
| ಕೂಲಿ ಹೋಗದ ದಿನಗಳಲ್ಲಿ ಕನಿಷ್ಠ 4 ಗಂಟೆ | 11.76 (2) |
| 4–6 ಗಂಟೆ | 29.41 (5) |
| 6–8 ಗಂಟೆ | 58.82 (10) |
| 7. ಅತಿ ಹೆಚ್ಚು ಕೂಲಿ ಸಿಗುವ ಕೃಷಿ ಕಾರ್ಯಗಳು ನಾಟಿ | 5.88 (1) |
| ಕಳೆ | 0.00 (0) |
| ಕೊಯ್ಲು | 94.12 (16) |
| ಒಕ್ಕಲು | 94.12 (16) |
| 8. ಕೂಲಿಯ ಕೆಲಸದ ನಂತರ ಗಂಡಸರು ಏನೂ ಕೆಲಸ ಮಾಡುವುದಿಲ್ಲ | 88.24 (15) |

**ಕೃಷಿಕರಾಗಿದ್ದು ಕೂಲಿಯನ್ನು ಮಾಡುತ್ತಿರುವವರ ಕುಟುಂಬದಲ್ಲಿ ಮಹಿಳೆಯರ ಸ್ಥಿತಿಗತಿ**

ಕೃಷಿಕರಾಗಿದ್ದು, ಕೃಷಿಯಿಂದ ಬರುವ ವರಮಾನ ಜೀವನ ನಡೆಸಲು ಸಾಕಾಗದಿದ್ದಲ್ಲಿ ಸಾಮಾನ್ಯವಾಗಿ ಕೂಲಿ ಕೆಲಸಕ್ಕೆ ಇಳಿಯುತ್ತಾರೆ. ಇಂಥವರ ಸಂಖ್ಯೆ ಈ ಹಳ್ಳಿಯಲ್ಲಿ ಅತಿಯಾಗಿರುವುದು ಕಂಡುಬಂತು. ಇಂತಹ ಕುಟುಂಬಗಳ ಸಂಖ್ಯೆ ಒಟ್ಟು ಕುಟುಂಬಗಳ ಪ್ರತಿಶತ 40.73 ಇರುವುದು. ಇಂತಹ ಕುಟುಂಬಗಳು ಕೃಷಿಯಲ್ಲಿ ಕೃಷಿಕ ಹಾಗೂ ಕೂಲಿ ಆಳಿನ ಎರಡು ರೀತಿಗಳಲ್ಲಿ ಪಾತ್ರ ನಿರ್ವಹಿಸುತ್ತವೆ. ಈ ದ್ವಿಪಾತ್ರ ನಿರ್ವಹಣೆಯಿಂದಾಗಿ ಬಹಳಷ್ಟು ಕಷ್ಟಪಡುತ್ತಿರುವ ಕುಟುಂಬಗಳಿವು. ಇವರುಗಳ ಜೀವನಮಟ್ಟ ಕೂಲಿ ಕಾರ್ಮಿಕರಾಗಿರುವ ಜೀವನಮಟ್ಟಕ್ಕೂ ಯಾವುದೇ ವ್ಯತ್ಯಾಸಗಳಿಲ್ಲರದಿರುವುದನ್ನು ನಾನು ಗಮನಿಸಿದ್ದೇನೆ. ಹಳ್ಳಿಯ ಒಟ್ಟು ಜನಸಂಖ್ಯೆಯ ಪ್ರತಿಶತ 40.23 ರಷ್ಟು ಜನಸಂಖ್ಯೆಯು ಈ ವ್ಯಾಪ್ತಿಯಲ್ಲಿ ಬರುತ್ತದೆ. ಈ ಗುಂಪಿನಲ್ಲಿಯೂ ವಿದ್ಯಾಭ್ಯಾಸ ಹಾಗೂ ವೃದ್ಧಾಪ್ಯ ಇತ್ಯಾದಿ ಕಾರಣಗಳಿಂದ ಕೆಲಸ ಮಾಡದವರ ಸಂಖ್ಯೆಯು ಈ ಗುಂಪಿನ ಒಟ್ಟು ಜನಸಂಖ್ಯೆಯ ಪ್ರತಿಶತ 42.90 ರಷ್ಟು ಮಾತ್ರ. ಈ ಕುಟುಂಬಗಳಲ್ಲಿ ಕೃಷಿ ಕೆಲಸ ಮಾಡಲು ಸಶಕ್ತರಾದ ಎಲ್ಲರೂ ಕೂಲಿ ಹೋಗುವುದಿಲ್ಲ. ಪ್ರತಿಶತ 93.63 ರಷ್ಟು ಗಂಡಸರು ಹಾಗೂ ಪ್ರತಿಶತ 72.29 ರಷ್ಟು ಹೆಂಗಸರು ಮಾತ್ರ ಕೂಲಿ ಹೋಗುತ್ತಾರೆ. ಉಳಿದವರು ತಮ್ಮ ಹೊಲದಲ್ಲಿ ಕೆಲಸವಿದ್ದಾಗ ಮಾತ್ರ ಕೆಲಸ ಮಾಡಿ ಉಳಿದ ವೇಳೆಯಲ್ಲಿ ತಮ್ಮ ಮನೆಕೆಲಸ ನೋಡಿಕೊಳ್ಳುತ್ತಾರೆ. ಕೂಲಿ ಕಾರ್ಮಿಕರ ಅನಿಸಿಕೆಗಳಿಗೆ ಇವರ ಅನಿಸಿಕೆಗಳು ತೀರಾ ಹತ್ತಿರದಲ್ಲಿವೆ. ಈ ಗುಂಪಿನವರಿಗೂ ಲಭ್ಯಕೆಲಸದ ಕೊರತೆ ಕಾಣುತ್ತದೆ.

ಈ ವರ್ಗದ ರೈತರೂ ಕೂಲಿಗಾಗಿ ವಲಸೆ ಹೋಗುತ್ತಾರೆ. ಹೆಂಗಸರು ವಲಸೆ ಹೋಗುವುದಿಲ್ಲ. ಪ್ರತಿಶತ 42 ರಷ್ಟು ಗಂಡಸರು ವಲಸೆ ಹೋಗುತ್ತಾರೆ. ಹತ್ತಿರ ಇರುವ ಮಲೆನಾಡ ತೋಟಗಳಿಗೆ ಹೋಗುತ್ತಾರೆ. ವಾರಗಟ್ಟಲೆ ಅಲ್ಲೇ ಇದ್ದು ಕೂಲಿ ಮಾಡಿ ಹಿಂತಿರುಗುತ್ತಾರೆ. ಇಷ್ಟಾದರೂ ವರ್ಷಪೂರ್ತಿ ಕೆಲಸ ಇರದು ಎನ್ನುವುದು ಇವರುಗಳ ಅಭಿಪ್ರಾಯ.

ಈ ವರ್ಗದ ಬಹುಪಾಲು ಕೃಷಿಕರ ಕೆಲಸ ನಿರ್ವಹಣೆಯೊಂದನ್ನೇ ಮಾಡುವುದಿಲ್ಲ. ಕಾರ್ಮಿಕರೊಂದಿಗೆ ಕಾರ್ಮಿಕರಾಗಿ ಜೊತೆಜೊತೆಗೆ ನಿರ್ವಹಣೆ ಮಾಡುತ್ತಾರೆ. ಈ ಗುಂಪಿನ ಹೆಂಗಸರಿಗೆ ಕೂಲಿ ಕಾರ್ಮಿಕರ ಮನೆಯ ಹೆಂಗಸರಿಗಿಂತ ಕೆಲಸ ಜಾಸ್ತಿ. ಯಾಕೆಂದರೆ ಜಮೀನು ಮನೆ ಕೆಲಸ ಅಲ್ಲದೆ, ಕೂಲಿ ಕೆಲಸಕ್ಕೆ ಬರುವವರಿಗೆ ಊಟಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ.

ಕೃಷಿಕರಾಗಿದ್ದು ಕೂಲಿ ಮಾಡುವ ಕುಟುಂಬಗಳಲ್ಲಿ ಮಹಿಳೆ ಸ್ಥಿತಿ ಅವಲೋಕಿಸಲು ವೀರಬಸಪ್ಪನವರ ಕುಟುಂಬ ನೋಡೋಣ. ಸಣ್ಣದೂ ಅಲ್ಲ ಇತ್ತ ದೊಡ್ಡ ಕುಟುಂಬವೂ ಅಲ್ಲದ 7 ಜನ ಸದಸ್ಯರನ್ನೊಳಗೊಂಡ ಮಧ್ಯಮ ಗಾತ್ರದ ಕುಟುಂಬ. ಕುಟುಂಬದ ಹಿರಿಯರಾದ 70 ವರ್ಷದ ವೀರಬಸಪ್ಪ ಈ ಮನೆಯಲ್ಲಿ ವೃತ್ತಿ ಮಾಡದವರ ಗುಂಪಿಗೆ ಸೇರುತ್ತಾರೆ. ಇದಲ್ಲದೆ 8 ನೇ ತರಗತಿಯಲ್ಲಿ ಓದುತ್ತಿರುವ ಪ್ರೇಮ, 5 ನೇ ತರಗತಿಯಲ್ಲಿ ಓದುತ್ತಿರುವ ವೀರುಪಾಕ್ಷಿ ಹಾಗೂ 1 ನೇ ತರಗತಿಯಲ್ಲಿ ಓದುತ್ತಿರುವ ರುದ್ರೇಶಿ ಸಹ ಕೆಲಸದ ಸುಪರ್ದಿಯಿಂದ ಹೊರಗೆ ಇರುವವರು. 65 ವಯಸ್ಸಿನ ಶಾಂತಮ್ಮ ವೀರಬಸಪ್ಪನವರ ಪತ್ನಿ. ಇವರದ್ದು ಮನೆ ಕೆಲಸ ನೋಡಿಕೊಳ್ಳುವ ಜವಾಬ್ದಾರಿ. ಇವರ ಮಗ ಮಲ್ಲೇಶಪ್ಪ ಹಾಗೂ ಸೊಸೆ ಸುನಂದ ಇಬ್ಬರೇ ಕೃಷಿ ಕೆಲಸ ಮಾಡುವವರು. ಇವರಿಬ್ಬರೂ ಕೂಲಿ ಹೋಗುತ್ತಾರೆ. ಕೂಲಿ ಕೆಲಸ ಸಾಕಷ್ಟು ಸಿಗದಾಗ ವಲಸೆ ಸಹ ಹೋಗುತ್ತಾರೆ. ಇವರಿಗೆ 5 ಎಕರೆ ಖುಷ್ಕಿ, 3 ಎಕರೆ ನೀರಾವರಿ ಜಮೀನು ಇದೆ, ಎತ್ತು ಗಾಡಿ ಬೇಸಾಯ ಸಾಮಗ್ರಿಗಳನ್ನು ಇಟ್ಟಿದ್ದಾರೆ. ರೇಡಿಯೋ, ಟೆಲಿವಿಷನ್ ಸಾಧನಗಳನ್ನು ಇವರ ಮನೆಯಲ್ಲಿ ಕಾಣಬಹುದು. ಇವರಿಗೆ ಜಮೀನು ಪಿತ್ರಾರ್ಜಿತ ಆಸ್ತಿ. 8 ಎಕರೆ ಜಮೀನಿದ್ದು ಹೆಂಡತಿಯೂ ಸೇರಿದಂತೆ ತಾವು ಕೂಲಿ ಮಾಡಲು ಕಾರಣವೇನು ಎಂಬುದಕ್ಕೆ ಜಮೀನು ಮಾಡುವುದು ಏನು ಸುಖವಿಲ್ಲ. ನಮ್ಮ ಜಮೀನಿನಲ್ಲಿ ಉಳಿಯೋದು ನಾವು ಮಾಡಿದ ಕೂಲಿ ಮಾತ್ರ. ಏನೋ ಒಂದು ಹತ್ತು ಎಕರೆ ಕೆರೆ ನೀರಾವರಿ ಜಮೀನು ಇದ್ರೆ ಕೂಲಿ ಹೋಗದಂಗೆ ಇರಬಹುದು. ಖುಷ್ಕಿ ಜಮೀನು ಎಷ್ಟಿದ್ದರೂ ಕೂಲಿ ಹೋಗುವುದನ್ನು ಬಿಡಕೆ ಆಗಲ್ಲ, ಅನ್ನುತ್ತಾರೆ ಮಲ್ಲೇಶಪ್ಪನವರು. ಕೂಲಿ ಮಾಡೋದರ ಜತೆ ಒಂದು 3 ಹಸು ಕಟ್ಟಿದ್ದೇವೆ ಎನ್ನುತ್ತಾರೆ. ಇವರ ಮನೆಯಲ್ಲಿ ಸಹ ಓದುವ ಮಕ್ಕಳಿಗೆ ಯಾವುದೇ ಕೆಲಸ ಹಚ್ಚುವುದಿಲ್ಲ. ಇವರ ಮನೆಯಲ್ಲಿ ಚಟುವಟಿಕೆಗಳು ಬೆಳಿಗ್ಗೆ 6ಕ್ಕೆ ಪ್ರಾರಂಭ. ಮನೆಯಲ್ಲಿ ನಲ್ಲಿ, ಶೌಚಾಲಯವಿರುವುದರಿಂದ ಬೆಳಗಿನ ಕೆಲಸಕ್ಕೆ ಸಮಸ್ಯೆ ಕಡಿಮೆ. ಸುನಂದಮ್ಮನವರು ವೈಯಕ್ತಿಕ ಸ್ವಚ್ಛತೆ ಮುಗಿಸಿ ಅತ್ತೆಯೊಂದಿಗೆ ಅಡುಗೆ ಮನೆ ಸೇರುತ್ತಾರೆ. ಮಲ್ಲೇಶಪ್ಪನವರು ಕೊಟ್ಟಿಗೆ ಸ್ವಚ್ಛಮಾಡಿ ನಿತ್ಯ ಕೆಲಸ ಮುಗಿಸಿ ಸ್ನಾನ ಮಾಡಿಯೇ ಒಳಗೆ ಬರುತ್ತಾರೆ. ಬೇಸಾಯಕ್ಕೆ ಹೋಗುವುದಿದ್ದಲ್ಲಿ ಮಲ್ಲೇಶಪ್ಪ ಬೆಳಿಗ್ಗೆ 8 ಗಂಟೆಗೆ ಮನೆ ಬಿಡುತ್ತಾರೆ. ಸುನಂದಮ್ಮನವರು 9 ಗಂಟೆಗೆ ಬುತ್ತಿಗಂಟಿನೊಂದಿಗೆ ಹೊರಡುತ್ತಾರೆ. ಬೇಸಾಯ ಹೊರತುಪಡಿಸಿದ ಕೆಲಸವಾದಲ್ಲಿ ಸತಿ ಪತಿಯರಿಬ್ಬರೂ ಜೊತೆಗೆ 9 ಗಂಟೆಗೆ ಹೊರಡುತ್ತಾರೆ. ಇವರು ಹೊರಟ ನಂತರ ಮನೆ ಸ್ವಚ್ಛತೆ, ಮೊಮ್ಮಕ್ಕಳ ಚಾಕರಿ ಶಾಂತಮ್ಮನವರ ಪಾಲಿಗೆ. ಮಕ್ಕಳಿಗೆ ಶಾಲೆಗೆ ಕಳಿಸುವವರೆಗೂ ಅವರ ಕೆಲಸದಲ್ಲಿ ತಲ್ಲೀನವಾಗುವ ಶಾಂತಮ್ಮ

ಶಾಲೆಯಿಲ್ಲದಿದ್ದರೆ ಈ ಹುಡುಗರ ಕೆಲಸವೇ ಮುಗಿಯುವುದಿಲ್ಲ ಎನ್ನುತ್ತಾರೆ. ಮೊಮ್ಮಕ್ಕಳನ್ನು ಶಾಲೆಗೆ ಕಳಿಸಿದ ಮೇಲೆ ದನಗಳನ್ನು ಹಿಂಡಿಗೆ ಹೊಡೆದು ತಮ್ಮ ಯಜಮಾನರೊಂದಿಗೆ ತಿಂಡಿ ತಿಂದು ಮುಗಿಸುವ ವೇಳೆಗೆ ಹನ್ನೊಂದು ಹೊಡೆಯುತ್ತದೆ. ಆಮೇಲೆ ಮಕ್ಕಳು ಶಾಲೆಯಿಂದ ಬರುವವರೆಗೂ ಶಾಂತಮ್ಮನಿಗೆ ವಿಶ್ರಾಂತಿ, ಮಧ್ಯಾಹ್ನ ಮಕ್ಕಳು ಬಂದಾಗ ಪುನ: ಒಂದು ಗಂಟೆಯ ಕಾಲ ಅವರದ್ದೆ ಕೆಲಸ ಆಗಿಬಿಡುತ್ತೆ. ಪುನ: ಮಕ್ಕಳು ಸಂಜೆ ಮನೆ ಸೇರುವ ತನಕ ಎಡೆಬಿಡದೆ ಕೆಲಸವೇನಿರದು. ಸಂಜೆ ಮಕ್ಕಳು ಬರುವ ಹೊತ್ತಿಗೆ ದನಕರುಗಳು ಬರುತ್ತವೆ. ಅವುಗಳನ್ನು ಕಟ್ಟಿ ಸಂಜೆ ಕಸ ಮುಸುರೆಗೆ ತೊಡಗುತ್ತಾರೆ. ಅಷ್ಟರಲ್ಲಿ ಹೊಲದಿಂದ ಬರುವ ಸುನಂದಮ್ಮ ಅವರಿಗೆ ಕೈಜೋಡಿಸುತ್ತಾರೆ. ಮಲ್ಲೇಶಪ್ಪನವರು ಮನೆಗೆ ಸಾಮಾನು ಏನಾದರು ತರುವ ಕೆಲಸವಿದ್ದಲ್ಲಿ ಮಾಡುತ್ತಾರೆ. ಇಲ್ಲದಿದ್ದಲ್ಲಿ ಮಕ್ಕಳೊಡನೆ ಟಿವಿ ಮುಂದಕ್ಕೆ ಸರಿಯುತ್ತಾರೆ. ಒಂದೆರಡು ಗಂಟೆಯ ನಂತರ ಮಕ್ಕಳನ್ನು ಓದಿಗೆ ಹಚ್ಚಲು ಮರೆಯುವುದಿಲ್ಲ. ನಮಗಂತೂ ಓದೋ ಅವಕಾಶ ಇರಲಿಲ್ಲ, ನೀವು ಓದಿ ಎಂದು ಮಕ್ಕಳ ಓದಿನ ಬಗ್ಗೆ ಕಾಳಜಿ ವಹಿಸುತ್ತಾರೆ. ಹೊಲದ ಕೆಲಸ ಇಲ್ಲದಾಗ ಕೂಲಿ ಹೋಗುತ್ತಾರೆ. ಆದರೆ, ಕೂಲಿಯೂ ಸಿಗದಿದ್ದರೆ ಬೆಳಿಗ್ಗೆ ಎಂದಿನಂತೆ 9 ಗಂಟೆಗೆ ಎತ್ತುಗಳನ್ನು ಹಿಡಿದು ಹೊರಟರೆ ಮಲ್ಲೇಶಪ್ಪನವರು ಹಿಂತಿರುಗುವುದು ಮಧ್ಯಾಹ್ನ ಊಟದ ವೇಳೆಗೆ. ನಂತರ ವಿಶ್ರಾಂತಿ. ಕೃಷಿ ಕೆಲಸವಿಲ್ಲದ ದಿನಗಳಲ್ಲಿ ಸುನಂದಮ್ಮನಿಗೆ ಮನೆ ಕೆಲಸಗಳೂ ಹೆಚ್ಚು. ಮನೆ ಸ್ವಚ್ಛತೆ, ಬಟ್ಟೆ ತೊಳೆಯುವುದಕ್ಕೆ ಹೆಚ್ಚಿನ ಗಮನ ಕೊಡುತ್ತಾರೆ. ಇವರಿಗೆ ವಿಶ್ರಾಂತಿ ಸಿಗುವುದೇ ಈ ಕಾಲದಲ್ಲಿ. ವಾರಕ್ಕೊಮ್ಮೆ ಕೆಲಸವಿದ್ದಾಗ್ಯೂ ಮನೆ ಕೆಲಸಗಳಿಗಾಗಿ ಸುನಂದಮ್ಮ ಮನೆಯಲ್ಲಿ ಉಳಿಯುತ್ತಾರೆ. ಸಂತೆ ದಿನಗಳಂದು ಬೆಳಿಗ್ಗೆ 1 ಅಥವಾ 2 ಗಂಟೆವರೆಗೆ ಮಾತ್ರ ಕೆಲಸ ಮಾಡಿ ಮನೆಗೆ ಹಿಂದಿರುಗುವ ಮಲ್ಲೇಶಪ್ಪ ಸಂತೆಗೆ ಹೋಗುತ್ತಾರೆ. ಪ್ರಮುಖ ಹಬ್ಬಗಳಾದ ಯುಗಾದಿ, ದೀಪಾವಳಿ, ಗಣೇಶ ಚತುರ್ಥಿ, ಬಸವ ಜಯಂತಿ, ಶ್ರಾವಣದ ಕೆಲದಿನ ಹಬ್ಬದ ಹೆಸರಲ್ಲಿ ವಿಶ್ರಾಂತಿ ಪಡೆಯುತ್ತೇವೆ ಎನ್ನುತ್ತಾರೆ ಮಲ್ಲೇಶಪ್ಪ. ಬೇಸಿಗೆಯಲ್ಲಿ ಹೆಚ್ಚು ಕೆಲಸವಿರದಿದ್ದಾಗ ಜಾತ್ರೆಗಳಿಗೆ ದೇವಸ್ಥಾನಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಿಬರುತ್ತೇವೆ. ಊರು ಕೇರಿ ಎಲ್ಲಿಹೋದರೂ ನಾನು ಅಲ್ಲಿ ಉಳಿದುಕೊಳ್ಳೋದು ಅಪರೂಪ, ಕಾರಣ ಮನೆಯಲ್ಲಿ ದನಕರ ನೋಡಬೇಕು ಅನ್ನುತ್ತಾರೆ. ಸುಮಾರು ನಾಲ್ಕೈದು ದಿನವಾದರೂ ಮದುವೆ ಇತ್ಯಾದಿ ಸಮಾರಂಭಕ್ಕೆ ಹೋಗಲು ಬೇಕೇ ಆಗುತ್ತೆ. ಬೀಜ ತರಲು ವರ್ಷವೂ ಒಮ್ಮೆ ಶಿವಮೊಗ್ಗಕ್ಕೆ ಹೋಗುವುದಿದೆ. ಗೊಬ್ಬರ, ಔಷಧಿ ಮಾತ್ರ ಇಲ್ಲೇ ಸಾಹುಕಾರರ ಹತ್ತಿರ ಸಾಲ ತೆಗೆದುಕೊಂಡು ಬಳಸುತ್ತೇವೆ. ಬೆಳೆದಿದ್ದನ್ನೆಲ್ಲ ಸ್ಥಳೀಯ ಸಾಹುಕಾರರಿಗೆ ಮಾರುವುದರಿಂದ ಶಿವಮೊಗ್ಗಕ್ಕೆ ಹೋಗುವ ಗೋಜಿಲ್ಲ ಎನ್ನುತ್ತಾರೆ. ಇನ್ನೂ 2–3 ತಿಂಗಳು ಕೆಲಸ ಇದ್ದಿದ್ದರೆ ಮಾಡಬಹುದಾದ ದಿನಗಳು ಇವೆ ಎನ್ನುವುದನ್ನು ಇವರು' ಗುರುತಿಸಿದ್ದಾರೆ, ಜೊತೆಗೆ ಬೆಳೆ ಹಂಗಾಮಿನಲ್ಲಿ ಕೇವಲ ಅರ್ಧದಿನ ಕೆಲಸವಿದ್ದಾಗ ಇದನ್ನು ಬೇರೆ ಕೆಲಸವಿದ್ದರೆ ಹೊಂದಿಕೊಂಡು ಇಲ್ಲೂ ಸಹ ಬೇರೆ ಕೆಲಸ ಮಾಡಲು ಅವಕಾಶವಿದೆ ಎನ್ನುವುದು ಇವರ ಅಭಿಪ್ರಾಯ. ಈ ಕುಟುಂಬದಲ್ಲೂ 115 ದಿನಗಳು ಕೆಲಸವಿಲ್ಲ, ಅಂತಹ ದಿನ ಮನೆ ನಿರ್ವಹಣೆ ಇತ್ಯಾದಿ ಕೆಲಸಗಳಿಗೆ ಬೇಕು ಅನ್ನುವ ಕುಮಾರಸ್ವಾಮಿಯವರ ಲೆಕ್ಕ ಸರಿತೂಗಿರುವುದು ಕಾಣುತ್ತದೆ. ಆದರೆ ಇಬ್ಬರು ಕೆಲಸಗಳನ್ನು ವಿಂಗಡಿಸಿಕೊಂಡಿದ್ದರಿಂದ ಈ ದಿನಗಳು ವ್ಯಕ್ತಿಗೆ ಕಡಿಮೆ ಬರುತ್ತವೆ. ಸುಮಾರು 92 ದಿನಗಳು ಬರುತ್ತವೆ. ಇಷ್ಟು ಕಡಿಮೆ ಬರಲು ಕಾರಣ ಮನೆ ಕೆಲಸಕ್ಕೆ ಬೇಕಾದ 52 ದಿನಗಳು ಹಾಗೂ ಸಂತೆಗೆ ಬೇಕಾಗುವ 26 ದಿನಗಳು ಇಲ್ಲಿ ಇಬ್ಬರಿಗೂ ಹಂಚಿ ಹೋಗುತ್ತವೆ.

**ಕೃಷಿಕರಾಗಿದ್ದು ಕೂಲಿ ಮಾಡುವ ಕುಟುಂಬಗಳು, ಜನಸಂಖ್ಯೆ ಹಾಗೂ ಕೂಲಿ ಮಾಡುವವರ ಸಂಖ್ಯೆ**

| ವಿವರ | ಗಂಡು | ಹೆಣ್ಣು | ಒಟ್ಟು |
|---|---|---|---|
| ಕುಟುಂಬಗಳು | – | – | 60 |
| ಕುಟುಂಬದಲ್ಲಿನ ಒಟ್ಟು ಕೃಷಿ ಕೆಲಸ ಮಾಡುವವರು | 94 | 83 | 177 |
| ಕುಟುಂಬದಲ್ಲಿ ಬರೀಯ ಮನೆ ಕೆಲಸ ನೋಡಿ ಕೊಂಡಿರುವವರು | – | 4 | 4 |
| ಕೂಲಿ ಕೆಲಸಕ್ಕೆ ಹೋಗುವವರು | 88 | 60 | 148 |
| ಈ ಗುಂಪಿನ ಒಟ್ಟು ಜನಸಂಖ್ಯೆ | 175 | 142 | 317 |
| ಹಳ್ಳಿಯ ಒಟ್ಟು ಜನಸಂಖ್ಯೆ | 415 | 373 | 788 |
| ಒಟ್ಟು ಜನಸಂಖ್ಯೆಯಲ್ಲಿ ಈ ವರ್ಗದವರೆಷ್ಟು (ಪ್ರತಿ ಶತ) | 42.17 | 38.07 | 40.23 |

## ಮಾನವ ಸಂಪನ್ಮೂಲ ಬಳಕೆ ಬಗ್ಗೆ ಕೃಷಿಕರಾಗಿದ್ದು ಕೂಲಿ ಮಾಡುವ ಕುಟುಂಬಗಳ ಅನಿಸಿಕೆ

| ವಿವರ | ಅನಿಸಿಕೆ<br>ಈ ವರ್ಗದ ಕುಟುಂಬಗಳ ಪ್ರತಿಶತ (ಸಂಖ್ಯೆ) |
|---|---|
| 1. ವರ್ಷವಿಡೀ ಕೆಲಸವಿರುತ್ತದೆ (ಕೂಲಿಯಾಗಿರಬಹುದು ಅಥವಾ ಸ್ವಂತ : ಜಮೀನಿನ ಕೆಲಸವಾಗಿರಬಹುದು) | 95.00 (57) |
| 2. ವರ್ಷದ ಹತ್ತು ತಿಂಗಳು ಮಾತ್ರ ಕೆಲಸ | 13.33 (8) |
| 3. ವರ್ಷದಲ್ಲಿ ಎಂಟು ತಿಂಗಳು ಮಾತ್ರ ಕೆಲಸ | 48.33 (29) |
| 4. ವರ್ಷದಲ್ಲಿ ಆರು ತಿಂಗಳು ಮಾತ್ರ ಕೆಲಸ | 33.33 (20) |
| 5. ಹಂಗಾಮಿನ ದಿನದಲ್ಲಿ ಎಷ್ಟು ಗಂಟೆ ಕೂಲಿ ಮಾಡುತ್ತೀರಾ ?<br>ನಾಟಿ ಹಂಗಾಮಿನಲ್ಲಿ 8 ಗಂಟೆ | 31.67 (19) |
| 10 ಗಂಟೆ | 63.33 (38) |
| 12 ಗಂಟೆ | 5.00 (3) |
| ಕೊಯ್ಲು ಹಂಗಾಮಿನಲ್ಲಿ ಹಾಗೂ ಒಕ್ಕಲು 8 ಗಂಟೆ | 3.33 (2) |
| 10 ಗಂಟೆ | 10.00 (6) |
| 12 ಗಂಟೆ | 36.67 (22) |
| >12 ಗಂಟೆ | 50.00 (30) |
| ಇತರೆ ಕೃಷಿ ಕಾರ್ಯಗಳಿದ್ದಾಗ 8 ಗಂಟೆ | 96.67 (58) |
| 10 ಗಂಟೆ | 3.33 (2) |
| 12 ಗಂಟೆ | – |
| ವಲಸೆ ಹೋದಾಗ 8 ಗಂಟೆ | 30.00 (18) |
| 10 ಗಂಟೆ | 63.33 (38) |
| 12 ಗಂಟೆ | 6.67 (4) |
| ಕೃಷಿಯೇತರ ಕೂಲಿ ಹೋದಾಗ 8 ಗಂಟೆ | 70.00 (42) |
| 10 ಗಂಟೆ | 30.00 (18) |
| 12 ಗಂಟೆ | – |
| 6.ಮಹಿಳೆಯರು ದಿನದಲ್ಲಿ ಮನೆ ಕೆಲಸಕ್ಕೆ ವಿನಿಯೋಗಿಸುವ ಅವಧಿ<br>ಕೂಲಿ ಹೋಗುವ ದಿನಗಳಲ್ಲಿ ಕನಿಷ್ಠ 4 ಗಂಟೆ | 68.33 (41) |
| 4–6 ಗಂಟೆ | 31.67 (19) |
| ಕೂಲಿ ಹೋಗದ ದಿನಗಳಲ್ಲಿ ಕನಿಷ್ಠ 4 ಗಂಟೆ | 18.33 (11) |
| 4–6 ಗಂಟೆ | 41.67 (25) |
| 6–8 ಗಂಟೆ | 40.00 (24) |
| 7. ಅತಿ ಹೆಚ್ಚು ಕೂಲಿ ಸಿಗುವ ಕೃಷಿ ಕಾರ್ಯಗಳು<br>ನಾಟಿ | 6.67 (4) |
| ಕಳೆ | 0.00 (0) |
| ಕೊಯ್ಲು /ಒಕ್ಕಲು | 93.33 (56) |
| 8. ಕೃಷಿಯ ಕೆಲಸದ ನಂತರ ಗಂಡಸರು ಏನೂ ಕೆಲಸ ಮಾಡುವುದಿಲ್ಲ | 88.24 (35) |

## ಕೃಷಿಕರಾಗಿದ್ದು ಕೂಲಿ ಮಾಡುವ ಇವರ ಕೃಷಿ ಕಾರ್ಯ ನಿರ್ವಹಣೆ ಬಗ್ಗೆ ಅಭಿಪ್ರಾಯ

| ವಿವರ | ಹೌದು | ಇಲ್ಲ |
|---|---|---|
| 1. ನಿಮ್ಮ ಜಮೀನಿನಲ್ಲಿ ಕೆಲಸವಿದ್ದು ಕೂಲಿ ಹೆಚ್ಚಿದಾಗ ನೀವು ಬರೀ ನಿರ್ವಹಣೆ ಮಾಡುತ್ತೀರಾ? | 3.33<br>(2) | 96.67<br>(58) |
| 2. ನಿಮ್ಮ ಜಮೀನಿನಲ್ಲಿ ಕೆಲಸವಿದ್ದು ಕೂಲಿ ಹೆಚ್ಚಿದಾಗ ನೀವು ಬರೀ ನಿರ್ವಹಣೆ ಜೊತೆಗೆ ಕೂಲಿಯವರು ಮಾಡುವ ಕೆಲಸವನ್ನು ಮಾಡುತ್ತೀರಾ? | 96.67<br>(58) | 3.33<br>(2) |
| 3. ನೀವು ಬೇರೆಯ ಕೂಲಿ ತೆಗೆದುಕೊಳ್ಳದೆ ಕೆಲಸ ಮಾಡುವುದು ಇದೆಯಾ | 91.67<br>(55) | 8.33<br>(5) |
| 4. ನೀವು ಕೊಡುವ ಕೂಲಿಗೂ, ಬೇರೆಯವರು ನಿಮಗೆ ಕೊಡುವ ಕೂಲಿಗೂ ವ್ಯತ್ಯಾಸವಿದೆಯೇ? | 100.00<br>(60) | 0.00 |

### ಮಲ್ಲೇಶಪ್ಪನವರ ಕುಟುಂಬದ ದಿನಗಳ ವಾರ್ಷಿಕ ವಿನಿಯೋಗ

| ವಿವರ | ದಿನಗಳು |
|---|---|
| ಮಲ್ಲೇಶಪ್ಪನವರ ದಿನ ವಿನಿಯೋಗ | |
| 1. ಕೃಷಿ ಕೆಲಸ ಸ್ವಂತ ಜಮೀನಿನಲ್ಲಿ<br>ಅ) ಪೂರ್ಣ ಕೆಲಸ ವಿರುವ ದಿನಗಳು<br>ಆ) ಅರ್ಧ ಕೆಲಸವಿರವ ದಿನಗಳು | <br>90<br>60 |
| 2. ಕೂಲಿ ಹೋಗುವ ದಿನಗಳು | 60 |
| 3. ಸೌದೆ ತರಲು | 20 |
| 4. ಗೋಡು ಗೊಬ್ಬರ ಹೊಡೆಯಲು | 10 |
| 5. ಮದುವೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು | 5 |
| 6. ಸಂತೆ ವಾರಕ್ಕೆ 1/2 ದಿನ | 26 |
| 7. ಮಕ್ಕಳಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು | 10 |
| 8. ಊರು ಕೇರಿಗೆ | 7 |
| 9. ಜಾತ್ರೆ ಹರಿದಿನ | 3 |
| 10. ಹಬ್ಬಹರಿದಿನ | 10 |
| 11. ಕೆಲಸವಿದ್ದಿದ್ದರೆ ಮಾಡಬಹುದಾದ ದಿನಗಳು ಹಾಲಿ ಈ ದಿನಗಳಲ್ಲಿ ಬೆಳಿಗ್ಗೆ ಎತ್ತಾಡಿಸುವುದು ಮಾತ್ರ ಮಾಡುವುದು. | 64 |
| **ಸುನಂದಮ್ಮನವರ ದಿನ ವಿನಿಯೋಗ** | |
| 1. ಕೃಷಿ ಕೆಲಸ ಸ್ವಂತ ಜಮೀನಿನಲ್ಲಿ<br>ಅ) ಪೂರ್ಣ ಕೆಲಸ ವಿರುವ ದಿನಗಳು<br>ಆ) ಅರ್ಧ ಕೆಲಸವಿರವ ದಿನಗಳು | <br>90<br>35 |
| 2. ಕೂಲಿ ಹೋಗುವ ದಿನಗಳು | 40 |
| 3. ವಿಶೇಷ ಮನೆ ಕೆಲಸ ದಿನಗಳು | 52 |
| 4. ಗೋಡು ಗೊಬ್ಬರ ತರುವ ದಿನಗಳ ಕೂಲಿ | 5 |
| 5. ಸೌದೆ ತರುವ ದಿನಗಳಲ್ಲಿ ಅವರಿಗೆ ಕೊಂಡಯ್ಯಲು ಅಡಿಗೆ, ಮಧ್ಯಾಹ್ನ ಅವರು ಬಂದಾಗ ಸೌದೆ ಒಟ್ಟುವುದು | 10 |
| 6. ಮದುವೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು | 5 |
| 7. ಮಕ್ಕಳಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವುದ ಹಾಗೂ ಸ್ವಂತ: ಸಮಸ್ಯೆಗಳು | 10 |
| 8. ಊರು ಕೇರಿಗೆ | 7 |
| 9. ಜಾತ್ರೆ ದೇವಸ್ಥಾನ ಬೇಟಿ | 3 |
| 10. ಹಬ್ಬ ಹರಿದಿನ | 15 |
| 11. ಕೆಲಸವಿದ್ದಿದ್ದರೆ ಮಾಡಬಹುದಾದ ದಿನಗಳು ಹಾಲಿ ಈ ದಿನಗಳಲ್ಲಿ ಮನೆ ಕೆಲಸ ಮಾಡುತ್ತಾ ಕಳೆಯುತ್ತಾರೆ | 93 |

### ಕೃಷಿಕರ ಮನೆಯಲ್ಲಿ ಮಹಿಳೆಯ ಸ್ಥಿತಿಗತಿ

ಕೃಷಿಕರು, ಕೃಷಿಯ ಕೇಂದ್ರಬಿಂದು. ಇವರ ಮಾನವ ಸಂಪನ್ಮೂಲ ಬಳಕೆ ಹಲವಾರು ದೃಷ್ಟಿಯಿಂದ ವಿಶೇಷತೆ ಹೊಂದಿದೆ. ಕಾರಣ ಕೃಷಿಕನ ಸಮರ್ಥ ಕಾರ್ಯ ನಿರ್ವಹಣೆಯು ಇತರ ಕೃಷಿ ಪರಿಕರ ಬಳಕೆ, ಕಾರ್ಯದಕ್ಷತೆಯ ಮೇಲೆ ನೇರ ಪರಿಣಾಮ ಬೀರುವುದು. ಕೃಷಿ ವ್ಯವಸ್ಥೆಯ ನಿರ್ವಾಹಕನಾದ ಇವನು ಕೃಷಿ ನಿರಂತರತೆಯಲ್ಲಿಯೂ ನಿರ್ವಾಹಕನ ಪಾತ್ರವಹಿಸುವವ. ಇಂತಹ ನಿರ್ವಾಹಕನ ಸಾಮರ್ಥ್ಯ ಹಾಗು ಅವನ ಶಕ್ತಿಯ ಬಳಕೆ ಕೃಷಿಗೆ ವ್ಯವಸ್ಥಿತವಾಗಿ ಆಗುತ್ತಿದೆಯೇ ಎಂಬುದು ಕೃಷಿ ನಿರಂತರತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಜಮೀನು ಹೊಂದಿದವರೆಲ್ಲ ಕೃಷಿಕರು ಎಂದಾದಲ್ಲಿ ಈ ಊರಿನಲ್ಲಿ ಕೃಷಿ ಕುಟುಂಬಗಳ ಸಂಖ್ಯೆ 130. ಆದರೆ, ಇವುಗಳಲ್ಲಿ ಕೃಷಿ ಆದಾಯವನ್ನೇ ಅವಲಂಬಿಸಿರುವವರನ್ನು ಗಣಿಸಿದರೆ ಈ ಕುಟಂಬಗಳ ಸಂಖ್ಯೆ ಕೇವಲ 34. ಹಳ್ಳಿಯ ಒಟ್ಟು ಜನಸಂಖ್ಯೆ ಕೃಷಿ ಆದಾಯವನ್ನು ಮಾತ್ರ ಅವಲಂಬಿಸಿವೆ. ಆದರೆ, ಇವರಲ್ಲಿ ಪ್ರತಿಶತ 43.52 ರಷ್ಟು ಮಾತ್ರ ಹೊಲದಲ್ಲಿ ಕೆಲಸ ಮಾಡುತ್ತಾರೆ. ಬರಿ ಮನೆ ಕೆಲಸ ಮಾಡುವವರು ಪ್ರತಿಶತ 13.47 ರಷ್ಟು ಮಾತ್ರ ಇದ್ದಾರೆ. ಕೃಷಿಕರ ಕುಟುಂಬಗಳಲ್ಲಿ ಬರೀ ಮನೆ ಕೆಲಸ ಮಾಡುವ' ಹೆಂಗಸರ ಸಂಖ್ಯೆಯು ಗಣನೀಯವಾಗಿ ಹೆಚ್ಚಿದೆ. ಈ ಪ್ರಮಾಣ ಬರೀ ಕೂಲಿ ಕಾರ್ಮಿಕರಲ್ಲಿ ಹಾಗೂ ಕೃಷಿಕರಾಗಿದ್ದು ಕೂಲಿ ಮಾಡುವ ವರ್ಗಗಳಲ್ಲಿ ಗೌಣ. ನಂತರ ಕೃಷಿ ಕೆಲಸ ಮಾಡುವ ಮಹಿಳೆಯರು ತಮ್ಮ ಹೊಲದ ಕೆಲಸ ಮಾಡುವುದರಿಂದ ಹೊಲದ ಕೆಲಸವಿಲ್ಲದಾಗ ಕೂಲಿ ಹೋಗದಿದ್ದರಿಂದ ಉಳಿದೆರಡು ಗುಂಪುಗಳಿಗೆ ಹೋಲಿಸಿದರೆ ಕೃಷಿ ಕುಟುಂಬದ ಮಹಿಳೆಯರಿಗೆ ಕೆಲಸದ ಭಾರ ಕಡಿಮೆ. ಆದರೆ, ಮನೆ ಕೆಲಸದ ಒತ್ತಡ ಜಾಸ್ತಿ. ಕಾರಣ ಈ ಕುಟುಂಬಗಳಲ್ಲಿ ಅಡಿಗೆಗೆ ಹೆಚ್ಚು ಶ್ರಮ ಬೇಕಾಗುತ್ತದೆ. ಕಾರಣ ಕೂಲಿಗೆ ಬರುವವರಿಗೆಲ್ಲ ಊಟಕ್ಕೆ ಬೇಕಾಗುತ್ತದೆ.

ಕೃಷಿಕರಿಗೂ ವರ್ಷವಿಡೀ ಕೆಲಸವಿರದು. ಒಂದೇ ಬೆಳೆಯಾದ್ದರಿಂದ ಸುಮಾರು 4-6 ತಿಂಗಳು ಕೆಲಸವಿರದು. ಇವರ ಅನಿಸಿಕೆಗಳಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಕೃಷಿಕರ ನಿರ್ವಹಣೆಗೆ ಜಾಸ್ತಿ ಸಮಯ ಕೊಡಬೇಕು. ಆದರೆ ಕೂಲಿಗಳ ಜೊತೆ ಕೂಲಿಗಳಾಗಿ ದುಡಿಯುವ ರೈತರ ಸಂಖ್ಯೆ ಗಣನೀಯವಾಗಿದೆ. ಈ ಸಂಖ್ಯೆಗಳು ಭೂ ಹಿಡುವಳಿಗೆ ನೇರ ಸಂಬಂಧವಿದೆ. ಅತಿಸಣ್ಣ, ಹಾಗೂ ಅರೆ ಮಧ್ಯಮ ಗುಂಪಿನ ರೈತರು ಮಾತ್ರ ಕೂಲಿಗಳ ಜೊತೆಯಲ್ಲಿ ದುಡಿಯುತ್ತಾರೆ. ಬಹುಪಾಲು ಮಧ್ಯಮ ಹಾಗೂ ದೊಡ್ಡ ರೈತರು ನಿರ್ವಹಣೆಯಲ್ಲಿ ಕಳೆಯುತ್ತಾರೆ. ಯಂತ್ರೋಪಕರಣಗಳು ದೊರೆತಿದ್ದರೆ ಒಳ್ಳೆಯದು ಎಂಬ ಅಭಿಪ್ರಾಯ ಇವರಲ್ಲಿದೆ. ಇವರು ನಿರ್ವಹಣೆ ಮಾತ್ರ ಮಾಡುತ್ತಾರೆ. ಅಂದರೆ ರೈತರ ಸಂಪೂರ್ಣ ನಿರ್ವಹಣಾ ಶಕ್ತಿ ಸಾಮರ್ಥ್ಯವನ್ನು ಪೂರ್ಣಪ್ರಮಾಣದ ಲಾಭ ಪಡೆಯಬೇಕಾದರೆ ಈ ಪ್ರದೇಶದಲ್ಲಿ ಹಿಡುವಳಿಯು 10 ಹೆಕ್ಟೇರ್ ಮತ್ತು ಅದಕ್ಕಿಂತ ಜಾಸ್ತಿ ಇರಬೇಕು.

**ಕೃಷಿ ಕುಟುಂಬಗಳು, ಜನಸಂಖ್ಯೆ ಹಾಗೂ ಕೃಷಿ ಕೆಲಸ ಮಾಡುವವರು**

| ವಿವರ | ಗಂಡು | ಹೆಣ್ಣು | ಒಟ್ಟು |
|---|---|---|---|
| 1. ಒಟ್ಟು ಕೃಷಿ ಕುಟುಂಬಗಳು | - | - | 34 |
| 2. ಒಟ್ಟು ಕೃಷಿ ಕುಟುಂಬಗಳಲ್ಲಿನ ಜನಸಂಖ್ಯೆ | 102 | 91 | 193 |
| 3. ಕೃಷಿ ಕೆಲಸ ಮಾಡುವವರ ಸಂಖ್ಯೆ | 53 | 31 | 84 |
| 4. ಕೃಷಿಗೆ ಪೂರಕವಾಗಿ ಮನೆ ಕೆಲಸ ಮಾಡುವವರು | 0 | 26 | 26 |
| 5. ಮನೆಯಲ್ಲಿ ಇತರೆ ಕೆಲಸ ಮಾಡುವವರು | 2 | 1 | 3 |
| 6. ಹಳ್ಳಿಯ ಒಟ್ಟು ಜನಸಂಖ್ಯೆಯಲ್ಲಿ ಕೃಷಿ ಆದಾಯವನ್ನೇ ಅವಲಂಬಿಸಿರುವವರು (ಪ್ರತಿಶತ) | 24.58 | 24.40 | 24.49 |
| 7. ಒಟ್ಟು ಕೃಷಿ ಜನಸಂಖ್ಯೆಯಲ್ಲಿ ಕೃಷಿಗೆ ಲಭ್ಯ ಜನಸಂಖ್ಯೆ (ಪ್ರತಿಶತ) | 51.96 | 62.67 | 56.99 |

**ಮಾನವ ಸಂಪನ್ಮೂಲ ಬಳಕೆ ಬಗ್ಗೆ ಕೃಷಿ ಕುಟುಂಬಗಳ ಅನಿಸಿಕೆ**

| ವಿವರ | ಅನಿಸಿಕೆ<br>ಈ ವರ್ಗದ ಕುಟುಂಬಗಳ ಪ್ರತಿಶತ (ಸಂಖ್ಯೆ) |
|---|---|
| 1. ವರ್ಷವಿಡೀ ಕೆಲಸವಿರುವುದಿಲ್ಲ | 88.24 (30) |
| 2. ವರ್ಷದ ಹತ್ತು ತಿಂಗಳು ಮಾತ್ರ ಕೆಲಸ | 23.53 (8) |
| 3. ವರ್ಷದಲ್ಲಿ ಎಂಟು ತಿಂಗಳು ಮಾತ್ರ ಕೆಲಸ | 35.29 (12) |
| 4. ವರ್ಷದಲ್ಲಿ ಆರು ತಿಂಗಳು ಮಾತ್ರ ಕೆಲಸ | 29.41 (10) |
| 5. ಹಂಗಾಮಿನ ದಿನದ ಎಷ್ಟು ಗಂಟೆ ಕೂಲಿ ಮಾಡುತ್ತೀರಿ<br>ನಾಟಿ ಹಂಗಾಮಿನಲಿ – 8 ಗಂಟೆ | 64.71 (22) |
| – 10 ಗಂಟೆ | 35.29 (12) |
| – 12 ಗಂಟೆ | – |
| ಕೊಯ್ಲು ಹಾಗೂ ಒಕ್ಕಲು – 8 ಗಂಟೆ | 11.76 (4) |
| – 10 ಗಂಟೆ | 23.53 (8) |
| – 12 ಗಂಟೆ | 35.29 (12) |
| >12 ಗಂಟೆ | 29.42 (10) |
| ಇತರೆ ಕೃಷಿ ಕಾರ್ಯಗಳಿದ್ದಾಗ – 8 ಗಂಟೆ | 100.00 (34) |
| – 10 ಗಂಟೆ | – |
| – 12 ಗಂಟೆ | – |
| >12 ಗಂಟೆ | – |
| 6.ಮಹಿಳೆಯರು ದಿನದಲ್ಲಿ ಮನೆ ಕೆಲಸಕ್ಕೆ ವಿನಿಯೋಗಿಸುವ ಅವಧಿ<br>ಕೃಷಿ ಕೆಲಸಕ್ಕೆ ಹೋಗುವವರ/ಹೋಗುವದಿನಗಳಲ್ಲಿ ಕನಿಷ್ಠ 4 ಗಂಟೆ | 47.06 (16) |
| 4-6 ಗಂಟೆ | 52.94 (18) |
| ಕೂಲಿ ಹೋಗದವರು ದಿನಗಳಲ್ಲಿ ಕನಿಷ್ಠ 4 ಗಂಟೆ | 2.94 (1) |
| 4-6 ಗಂಟೆ | 11.76 (4) |
| 6-8 ಗಂಟೆ | 55.88 (19) |
| >8 ಗಂಟೆ | 29.42 (10) |
| 7. ನೀವು ಬರೀ ನಿರ್ವಹಣೆ ಮಾಡುತ್ತೀರಿ, ಕೃಷಿ ಕೆಲಸ ಮಾಡುವುದಿಲ್ಲ | 17.65 (6) |
| 8. ಕೂಲಿಯವರನ್ನು ನೇಮಿಸಿದಾಗ ಬರೀ ಮೇಲ್ವಿಚಾರಣೆ, ಅವರ ಜೊತೆ ಕೆಲಸ ಮಾಡುವುದಿಲ್ಲ, ಕೂಲಿ ನೇಮಿಸದೆ ಮಾಡುವ ಕೆಲಸಗಳಿದ್ದಾಗ ಮಾತ್ರ ಮಾಡುತ್ತೇವೆ. | 29.41 (10) |
| 9. ಕೂಲಿ ನೇಮಿಸಿದಗ ಅವರ ಜೊತೆಗೆ ನಾವೂ ಕೆಲಸ ಮಾಡುತ್ತೇವೆ. | 52.94 (18) |

ಮಲೆನಾಡ ಕೃಷಿ ಪರಿಸರದಲ್ಲಿ 12 ರಿಂದ 17 ಗಂಟೆ ಶ್ರಮವಹಿಸಿ ದುಡಿಯುವ ಮಹಿಳೆಯರು ವ್ಯವಸ್ಥೆಗೆ ಒಗ್ಗಿ ಹೋಗಿದ್ದಾರೆ. ನಮ್ಮ ಜೀವನಕ್ಕಾಗಿ ಇಷ್ಟು ಶ್ರಮವಹಿಸಿದರೂ ಅದನ್ನೇ ದೊಡ್ಡದಾಗಿ ಬಣ್ಣಿಸದಿರುವ ತಾಳ್ಮೆಗೆ ನಾವು ಇವರನ್ನು ಅಭಿನಂದಿಸಲೇಬೇಕು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಗಂಡ ಹೆಂಡಿರು ಬಂಡಿಗೆ ಕಟ್ಟಿದ ಜೋಡೆತ್ತೆಂದು ಹೇಳುವರು, ಅದನ್ನು ಅಳವಡಿಕೆಯಲ್ಲಿ ತಂದು, ಕೃಷಿ ಕೆಲಸದ ನಂತರ ಚಟಗುಂಪುಗಳಲ್ಲಿ ಕಾಲಕಳೆಯದೆ ಮಹಿಳೆಯರಿಗೆ ನೆರವಾದೆ, ಅಷ್ಟೇಕೆ ಅವಳ ಕಷ್ಟಗುರುತಿಸಿದ್ದೇನೆ ಎಂಬ ಪ್ರೋತ್ಸಾಹದ ಮಾತನ್ನಾಡಿದರೆ ಮಹಿಳೆಯರು ತಮ್ಮ ನೋವು, ಸುಧೀರ್ಘ ಆಯಾಸಗಳನ್ನು ಲೆಕ್ಕಿಸದೆ ಕೆಲಸ ಮಾಡುವರು. ಜೊತೆಗೆ ಕೃಷಿಯಲ್ಲಿ ಕಾರ್ಯ ಮಾಡುವ ಮಹಿಳೆಯರಿಗೆ, ಕೆಲಸಗಳು ಹೆಚ್ಚು ಆಯಾಸವಾಗದಂತೆ ಮಾಡಲು ನೆರವಾಗುವ ಸರಳ ಕೃಷಿ ಉಪಕರಣಗಳ ಅಭಿವೃದ್ಧಿ ಸಹ ಕೃಷಿಯಲ್ಲಿರುವ ಮಹಿಳೆಯರಿಗೆ ವರದಾನ ಆಗಬಲ್ಲವು. ಕೃಷಿಕರಿಗೆ ಹೆಣ್ಣು ಕೊಡಲು ಹಿಂದೆಮುಂದೆ ನೋಡುವ ವಾತಾವರಣ ಹೆಚ್ಚಿರುವುದು ಈ ಮೇಲಿನ ಕಾರಣಗಳಿಗಾಗಿಯೇ ಎಂಬುದು ವಿದಿತ. ಆದರೆ ಕೃಷಿಕ ಕೃಷಿಯಲ್ಲಿ ಉಳಿಯಲು, ಕೃಷಿಯಲ್ಲಿ ಸದೃಢವಾಗಿ ಕೃಷಿಕನಿಗೆ ಬೆಂಬಲವಾಗಿ ನಿಲ್ಲಬಲ್ಲ ಮಹಿಳೆ ಅತಿ ಅಗತ್ಯ. ಈ ಹಿನ್ನೆಲೆಯಲ್ಲಿ ಮಹಿಳಾ ಸಂವೇದಾನಾಶೀಲ ಪರಿಸರ ಕೃಷಿಯು ಇಂದಿನ ಅಗತ್ಯ. ಇದನ್ನು ಅರಿತು ಕೃಷಿನಿರತ ಮಹಿಳೆಯರಿಗೆ ಸಮಾಜ ಸ್ಪಂದಿಸಬೇಕಿದೆ. ಅವರ ದುಡಿಮೆಗೆ ಸಮಾನ ಕೂಲಿ, ಸಮಾನ ಗೌರವ ಕೃಷಿ ಸುಸ್ಥಿರತೆಯ ಮೊದಲ ಹೆಜ್ಜೆ. ಬನ್ನಿ ನಾವು ನೀವೆಲ್ಲ ಆ ದಿಟ್ಟಹೆಜ್ಜೆ ಇಡೋಣ.

# ಮಹಿಳೆ ಮತ್ತು ಮನೆ

**ಡಾ.ನೆಲ್ಲಿಕಟ್ಟೆ ಸಿದ್ಧೇಶ**

"ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದಕಾರಣ ಹೆಣ್ಣು ಹೆಣ್ಣಲ್ಲ: ಹೆಣ್ಣು ರಾಕ್ಷಸಿಯಲ್ಲ ನೋಡು
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ"

ಎಂಬ ಸಿದ್ಧರಾಮರ ವಚನವಾಣಿಯು ಹೆಣ್ಣಿನ ಹಿರಿಮೆಯ ಚಿತ್ರಣವನ್ನು ಕಣ್ಮುಂದೆ ನಿಲ್ಲಿಸುತ್ತದೆ. ಹೆಣ್ಣು ಸಾಧನೆಗೆ ಪ್ರೇರಕಿಯೂ ಮತ್ತು ಸಾಧಕಿಯೂ ಹೌದು. ಹೆಣ್ಣಿನೊಳಗೆ ವ್ಯಕ್ತಿ, ಕುಟುಂಬ, ಸಮಾಜ, ರಾಜ್ಯ, ರಾಷ್ಟ್ರ ಮತ್ತು ವಿಶ್ವದ ಹೆಣಿಕೆಯಿದೆ. ಹೆಣ್ಣಿನೊಳಗೆ ಪ್ರಗತಿ ಮತ್ತು ಅಧೋಗತಿಗಳ ಮೂಲ ಅವಿತುಕೊಂಡಿದೆ. ಗರತಿ, ಸ್ತ್ರೀ, ಹೆಣ್ಣು, ಕುಟುಂಬಿನಿ, ಪತಿವ್ರತೆ, ವನಿತೆ ಮೊದಲಾಗಿ ಕರೆಯಲ್ಪಡುವ ಮಹಿಳೆಗೆ ಮನೆಯೊಂದಿಗಿನ ಸಂಬಂಧ ಅವಿಭಾಜ್ಯವಾದುದು.

ಬೀಡು, ಆಶ್ರಯಸ್ಥಾನ, ವಾಸಸ್ಥಳ, ವಂಶ, ಮನೆತನ, ಕುಟುಂಬ, ಸಂಸಾರ ಎಂಬರ್ಥಗಳನ್ನು ಹೊಂದಿರುವ ಮನೆಯು ಮನುಕುಲದ ಅಸ್ತಿತ್ವಕ್ಕೆ ಮೂಲಘಟಕವಾಗಿದೆ. ಮಗಳಾಗಿ ಪೃಥ್ವಿಗೆ ಬಂದವಳು ಅಕ್ಕ, ತಂಗಿ, ಕುಮಾರಿ, ಹೆಂಡತಿ, ನಾದಿನಿ, ಸೊಸೆ, ಅತ್ತಿಗೆ, ಅವ್ವ, ಅತ್ತೆ, ಗೆಳತಿ, ಮೊಮ್ಮಗಳು ಮೊದಲಾದ ಪಾತ್ರಗಳನ್ನು ನಿರ್ವಹಿಸಿ ನಿರ್ಗಮಿಸುವಳು. ಜನನದಿಂದ ಮರಣದ ತನಕ ಮಹಿಳೆಯು ಇಳೆಯೊಳಗೆ ತನ್ಮಯಳಾಗಿ ಬಾಳುವವಳು.

"ಮಗುವಾಗಿ ತಾಯ್ತಂದೆಯರ ಮನವ ನಲಿಸಿ
ಸತಿಯಾಗಿ ಪತಿಯ ಹೃದಯಕ್ಕೆ ಸುಖವ ಸಲಿಸಿ
ಜಗದಂಬೆಯವತಾರದಂತೆ ಕಳಕಳಿಸಿ
ಸುತರ ಹಡೆದೆತ್ತಿ ಮುದ್ದಾಡಿ ಬೆಳೆಸಿ
ಲಲನೆ ಅಂದುದ್ದೇಶಿಸದೆ ಕಣ್ಣ ತಣಿಸಿ
ಸುಳಿದಳೆದುರಿಗೆ ನನ್ನ ಆತುಮವ ಮಣಿಸಿ॥"

–ಎಂಬ ಶ್ರೀನಿವಾಸರವರ ಕವಿವಾಣಿಯಂತೆ ಮಹಿಳೆಯು ಕುಟುಂಬದ ಕಣ್ಣಾಗಿರುವ ತ್ಯಾಗದ ಪುತ್ಥಳಿ. ಅಜ್ಜ–ಅಜ್ಜಿ, ಅಪ್ಪ–ಅಮ್ಮ, ಅಕ್ಕ–ತಂಗಿ, ಅಣ್ಣ–ತಮ್ಮ, ಅತ್ತಿಗೆ–ನಾದಿನಿ, ಅತ್ತೆ–ಸೊಸೆ ಮೊದಲಾದ ಸಂಬಂಧಗಳ ಗಣಿಯಾದ ಮನೆಯು ಮಹಿಳೆಗೆ ಉನ್ನತ ಸ್ಥಾನವನ್ನು ನೀಡಿರುವ ವ್ಯವಸ್ಥೆಯಾಗಿದೆ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಆಧ್ಯಾತ್ಮಿಕ ಮೊದಲಾದ ಸಂಬಂಧಗಳ ಕೇಂದ್ರಬಿಂದುವಾದ ಮನೆಯು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅಪೂರ್ವವಾದ ಸ್ಥಾನಮಾನವನ್ನು ಪಡೆದುಕೊಂಡಿದೆ. ಇಲ್ಲಿನ ಕುಟುಂಬ ವ್ಯವಸ್ಥೆಗೆ ಮನೆಯೇ ಮೂಲಾಧಾರ. ಮನೆಯೊಳಗಿನ ಪ್ರೀತಿ, ಗೌರವ, ಅಭಿಮಾನಗಳಿಗೆ ಬೆಲೆ ಕಟ್ಟಲಾಗದು. ಮನೆಯ ಪ್ರಗತಿ ಮತ್ತು ಅಧೋಗತಿಯು ಆ ಮನೆಯ ಮಹಿಳೆಯನ್ನು ಅವಲಂಬಿಸಿರುತ್ತದೆ. ಮನೆಯ ಗೌರವ ತಲತಲಾಂತರ ರವಾನೆಯಾಗುವುದು ಮನೆಯ ಮಹಿಳೆಯ ಮತಿಯನ್ನು ಅವಲಂಬಿಸಿರುತ್ತದೆ. ತನ್ನನ್ನು ಸಂಪೂರ್ಣ ಮನೆಗೆ ಸಮರ್ಪಿಸಿಕೊಂಡಿರುವ ತ್ಯಾಗದ ನಿಧಿಯಾಗಿರುವ ಮಹಿಳೆ ತನ್ನವರೆಂದರೆ ಅಪೂರ್ವವಾದ ಪ್ರೀತಿಯನ್ನು ಧಾರೆ ಎರೆಯುವಳು. ಮಕ್ಕಳಿಗೆ ತನ್ನ ಶಕ್ತಿ–ಯುಕ್ತಿಯನ್ನು ಕೊಡುವಳು. ಹೆತ್ತ ಮನೆಗೆ, ಕೊಟ್ಟ ಮನೆಗೆ ಹೆಸರು ತರಬೇಕೆಂಬ ಹಂಬಲದೊಳಗೆ ಕಾಲ ಕಳೆಯುವ ಮಹಿಳೆ ಇಳೆಯ ಮೇಲಿರುವ ಶಕ್ತಿ. ಶ್ರಮಸಂಸ್ಕೃತಿಯ ಪ್ರತೀಕವಾದ ಮಹಿಳೆ ಮನೆಯ ಅಂದಚಂದಕ್ಕೆ ಆಕೆಯೇ ರನ್ನಗನ್ನಡಿ.

"ನಾರಾಯಣಾ ನಿನ್ನ ನಾಮದ ಬೀಜವ ।
ನಾನೆಲ್ಲಿ ಬಿತ್ತಿ ಬೆಳೆಯಲಿ। ನಿನ ನಾಮ।
ನಾಲೀಗೆ ಮೇಲೆ ಬೆಳೆದೇನೋ॥"
"ಶಿವ ಶಿವ ಎಂದರೆ ಸಿಡಿಲೆಲ್ಲ ಬಯಲಾಗಿ।
ಕಲ್ಲು ಬಂದೆರಗಿ ಕಡೆಗಾಗಿ। ಎಲೆ ಮನವೆ।
ಶಿವನೆಂಬ ಶಬುದ ಬಿಡಬ್ಯಾಡ॥"

ಎಂಬ ಜನಪದವಾಣಿಯು ಮಹಿಳೆಯ ಮತಿಯ ಉನ್ನತಿಯನ್ನು ಅನಾವರಣಗೊಳಿಸುತ್ತದೆ. ಭಕ್ತಿಯಿಂದ ಶಕ್ತಿಯನ್ನು ಪಡೆದುಕೊಂಡು ಬಾಳಿ ಬೆಳಗುವ ಮಹಿಳೆಯು ಇಳೆಯಲ್ಲಿ ಕಳೆ ಕಟ್ಟುವಂತೆ ಬೆಳಕಾಗುವಳು. ದಿನದ ಜೀವನ ದೈವದ ಸ್ತುತಿಯೊಂದಿಗೆ ಆರಂಭವಾಗಿ, ಮನೆಯ ಕಾಯಕದೊಳಗೆ ನಿರತವಾಗಿ ಕೈಲಾಸ ಕಂಡಷ್ಟು ಸಂತಸಪಟ್ಟು, ನಿದ್ದೆಯೆಂಬ ತಪದೊಳಗೆ ಲೀನವಾಗುವ ಮಹಿಳೆ ಮಹಾದೇವನ ಒಲುಮೆಗೆ ಪಾತ್ರಳಾಗುವಳು.

ಕರುಣೆ ಬಂದರೆ ಕಾಯೋ ಮರಣ ಬಂದರೆ ಒಯ್ಯೊ।
ಕರುಣಿ ಕಲ್ಯಾಣ ಬಸವಣ್ಣ । ಕಾಸಿಲಿಂಗ ।
ಕಡೆತನಕ ಕಾಯೋ ಅಭಿಮಾನ॥

ಎಂಬಂತೆ ನಿರ್ಲಿಪ್ತವಾಗಿ ಬದುಕುವಳು. ಅಭಿಮಾನವನ್ನು ಕಡೆತನಕ ಜತನದಿಂದ ಕಾಯ್ದುಕೊಳ್ಳುವ ಮಹಿಳೆಯು ಅಭಿಮಾನದ ಪ್ರತೀಕವಾಗಿರುವಳು. ವರಾನ್ವೇಷಣೆಗಾಗಿ ತನ್ನ ತಂದೆಯ ಅನುಮತಿ ಪಡೆದು ತಾನೇ ಆಯ್ಕೆ ಮಾಡಿಕೊಂಡ ವರ ಸತ್ಯವಾನನಿಗೆ ಅಲ್ಪಾಯುಷಿಯೆಂದು ನಾರದರಿಂದ ತಿಳಿದರೂ ಕೂಡ, ಒಮ್ಮೆ ತನ್ನ ಮನವನ್ನು ಕೊಟ್ಟ ಸಾವಿತ್ರಿ ಆತನನ್ನೇ ವಿವಾಹವಾದವಳು. ತನ್ನ ಆತ್ಮಬಲದಿಂದ ಯಮಧರ್ಮರಾಯನಲ್ಲಿ ಸತ್ಯವಾನನನ್ನು ಸಾವಿನಿಂದ ಹಿಂದೆ ಪಡೆದುಕೊಂಡ ಸಾವಿತ್ರಿ, ತನ್ನ ಅತ್ತೆ ಮತ್ತು ಮಾವನವರ ಅಂಧತ್ವವನ್ನು ನಿವಾರಣೆಯಾಗುವ, ತೌರಿನವರಿಗೆ ಮತ್ತು ತನಗೆ ಮಕ್ಕಳಾಗುವಂತೆ ವರವನ್ನು ಪಡೆದು, ಹೆತ್ತ ಮನೆ ಮತ್ತು ಕೊಟ್ಟ ಮನೆಯನ್ನು ಉದ್ಧಾರ ಮಾಡಿದವಳು. ಹಾಗಾಗಿಯೇ ಸತಿಸಾವಿತ್ರಿಯೆಂದೇ ಅಮರಳಾಗಿದ್ದಾಳೆ.

"ಯಾರು ಇದ್ದರ ನನ್ನ ತಾಯವ್ವನ್ಹೋಲರ
ಸಾವಿರ ಕೊಳ್ಳಿ ಒಲಿಯಾಗ। ಇದ್ದರ
ಜ್ಯೋತಿ ನಿನ್ಯಾರು ಹೋಲರ॥"

ಎನ್ನುವ ಜನಪದ ಮಹಿಳೆಯು ತಾಯಿಯ ಮೇಲಿನ ಅಮರ ಪ್ರೇಮಕ್ಕೆ ಬೆಲೆ ಕಟ್ಟಲಾಗದು. ತಾಯಿ-ಮಗಳ ಸಂಬಂಧಕ್ಕೆ ಸರಿಸಾಟಿ ಮತ್ತೊಂದಿಲ್ಲ. 'ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ ತಾಯಿರಲಿ ನನಗೆ ತವರಿರಲಿ' ಎಂಬ ಹಂಬಲದ ಮಹಿಳೆಗೆ ಅಪ್ಪ- ಅಮ್ಮರೇ ಅಮೂಲ್ಯ ಆಸ್ತಿ. 'ಹೋಗಾಗ ಮಗಳೀಗೆ ಕರಕೊಟ್ಟ ಮರಿಕೊಟ್ಟ। ಈಗ ಬಂದಾಗ ನೀನಿಲ್ಲ। ಹಡದಪ್ಪ। ಕೂಗಿ ಅತ್ತಾಳ ನಿನ ಮಗಳ।-ಎಂಬ ಜನಪದವಾಣಿಯು ಅಪ್ಪ ಮತ್ತು ಮಗಳ ನಡುವಿನ ಸಂಬಂಧ ಎಂತಹದ್ದು ಎಂಬುದನ್ನು ಪರಿಚಯಿಸುತ್ತದೆ. "ಹೆಣ್ಣಿನ ಜನುಮಕ ಅಣ್ಣ ತಮ್ಮರು ಬೇಕು। ಬೆನ್ನು ಕಟ್ಟುವರು ಸಭೆಯೊಳಗೆ। ಸಾವಿರ ಹೊನ್ನ ಕಟ್ಟುವರು ಉಡಿಯೊಳಗ॥- ತನ್ನ ತಂದೆ, ತಾಯಿ, ಅಣ್ಣ, ತಮ್ಮ ನಡುವೆ ಬಾಂಧವ್ಯವನ್ನು ಹೊಂದಿರುವ ಮಹಿಳೆಯು "ಹಾಲುಂಡ ತವರೀಗೆ ಏನೆಂದು ಹಾಡಲೆ। ಹೊಳೆದಂಡೀಲಿರುವ ಕರಕೀಯ। ಕುಡಿಯಂಗ। ಹಬ್ಬಲೇ ಅವರ ರಸಬಳ್ಳಿ॥" - ಎಂದು ಹಾರೈಸುತ್ತಾಳೆ. ಹೆತ್ತ ಮನೆಯು ಆನಂದಮಯವಾಗಿರಲಿ, ಅಣ್ಣ-ತಮ್ಮ-ಅತ್ತಿಗೆ ಸೊಸೆಯಂದಿ'ರು, ಅಳಿಯಂದಿರು ಸಂತಸದಿಂದ ಸಂಭ್ರಮಿಸುತಿರಲೆಂಬ ಹೆಬ್ಬಯಕೆ ಆಕೆಯದು. ಇನ್ನು ಗಂಡನ ಮನೆಗೆ ಬಂದಾಗ "ಬಡತನ ನನಗಿರಲಿ ಭಾಳ ಮಕ್ಕಳಿರಲಿ। ಮ್ಯಾಗ ಗುರುವಿನ ದಯೆಯಿರಲಿ ನನ ಗುರುವೆ। ಬಡತನ ಚಿಂತೆ ನಿನಗಿರಲಿ॥ ಎನ್ನುವ ಮಹಿಳೆ ಮಕ್ಕಳಿಗಾಗಿ ಎಷ್ಟೇ ಕಷ್ಟ-ನಷ್ಟ ಬರಲಿ ಸಹಿಸಿಕೊಂಡು ಬಾಳುವ ತ್ಯಾಗಜೀವಿ.

ಕೆಲವು ವಿಕೃತ ಸ್ವಭಾವದ ಮಹಿಳೆಯರು ಸರ್ಕಾರ ಮತ್ತು ಸಮಾಜ ಕೊಟ್ಟ ವರದಕ್ಷಿಣೆ ಕಾಯ್ದೆಯನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಮಾಧ್ಯಮಗಳಲ್ಲಿ ಓದಿರುವ ಮತ್ತು ಕೇಳಿರುವಂತೆ ಉತ್ತಮ ಕುಟುಂಬದ ದುರಂತ ಘಟನೆಯೊಂದು ಹೀಗಿದೆ : ಸೌಜನ್ಯ, ಸೌಮ್ಯ ಮತ್ತು ಸೌಷ್ಠವದ ತ್ರಿವೇಣಿ ಸಂಗಮದಂತಿರುವ ನಿವೃತ್ತ ಉಪಾಧ್ಯಾಯರೊಬ್ಬರು ತನ್ನ ಒಬ್ಬನೇ ಮಗನಿಗೆ ತುಂಬಾ ಚಲುವಿ, ಈಕೆ ಸೊಸೆ ಮತ್ತು ಮಗಳೆಂದು ತಿಳಿದು ಮದುವೆ ಮಾಡಿದರು. ಮದುವೆಯಾಗಿ ಮೂರು ತಿಂಗಳ ನಂತರ ಆ ಮೇಷ್ಟ್ರು, ಅವರ ಹೆಂಡತಿ ಮತ್ತು ಮಗ ಜೈಲಿನ ಕಂಬಿಯೊಳಗೆ ತಲೆಯಿಟ್ಟುಕೊಂಡು ಸಾವನ್ನು ಕೈ ಬೀಸಿ ಬೀಸಿ ಕರೆಯುತ್ತಿದ್ದರಂತೆ. ಅವರ ಕಣ್ಣೀರ ಕೋಡಿ ಕಟ್ಟೆ ಹೊಡೆದುಕೊಂಡು ಹರಿಯಿತಂತೆ. ಆ ಕುಟುಂಬದವರೆಲ್ಲ ಸಾವನ್ನು ಆಹ್ವಾನಿಸುತ್ತಿದ್ದರಂತೆ. ಅವರ ಆ ಸ್ಥಿತಿಯನ್ನು ನೋಡಿ ಕೇಳಿದವರಿಗೆ ಕರುಳು ಕಿವಿಚಿದಂತಹ ಅನುಭವ. ಒತ್ತರಿಸಿ ಬರುವ ದುಃಖವನ್ನು ತಡೆದುಕೊಂಡು ಧೈರ್ಯ ಹೇಳಿ ಬಂದವರು ಹೆಣ್ಣಿನ ದುರ್ವರ್ತನೆಗೆ ಶಾಪ ಹಾಕುತಿದ್ದರಂತೆ, ಕೆಲವು ದಿನಗಳ ನಂತರ ಜೈಲಿನಿಂದ ಬಿಡುಗಡೆಯಾಗಿ ಬಂದು ಹಾಸಿಗೆ ಹಿಡಿದವರು, ಚೇತರಿಸಿಕೊಳ್ಳಲೇ ಇಲ್ಲವಂತೆ.

"ಆಸೆಯೆಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯ?
ರೋಷವೆಂಬುದು ಯಮದೂತರಿಗಲ್ಲದೆ ಅಜಾರಿತರಿಗುಂಟೆ ಅಯ್ಯ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ,
ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ"

ಎಂಬ ಆಯ್ದಕ್ಕಿಲಕ್ಕಮ್ಮನ ವಚನವು ಮಹಿಳೆಯ ಬೌದ್ಧಿಕಶಕ್ತಿಯ ಉತ್ತುಂಗಸ್ಥಿತಿಯನ್ನು ಸೂಚಿಸುತ್ತದೆ. ಹೆಣ್ಣಾದವಳು ಪುರುಷನ ಸಕಲ ಸಾಧನೆಗೆ ಪ್ರೇರಕಶಕ್ತಿಯಾದಂತೆ, ಆತನಲ್ಲಿನ ದುರ್ಗುಣಗಳನ್ನು ನಾಶಗೊಳಿಸಿ, ಕಬ್ಬಿಣವನ್ನು ಚಿನ್ನವಾಗಿಸುವ ಪರುಷದ ಮಣಿ. ಆಯ್ದಕ್ಕಿಲಕ್ಕಮ್ಮನ ಆಶಯದಂತೆ ಪ್ರತಿ ಮಹಿಳೆಯು ಆಶೆಯ ಅನಾಹುತವನ್ನು, ದುರಾಶೆಯ ದುರಂತವನ್ನು ತಮ್ಮ ತಮ್ಮ ಕುಟುಂಬದ ಪುರುಷರ ಮನೋಭೂಮಿಕೆಯಲ್ಲಿ ಬಿತ್ತಿದರೆ ಅನಂತರ ಬರುವ ಬೆಳೆಯಲ್ಲಿ ಕಲ್ಮಷವಿರಲು ಸಾಧ್ಯವಿಲ್ಲ. ಇವೊತ್ತಿನ ಭ್ರಷ್ಟಾಚಾರವನ್ನು ತೊಳೆಯುವ ಆದಮ್ಯ ಶಕ್ತಿ ಮಹಿಳೆಯಲ್ಲಿದೆ. ಆಕೆ ಮನಸ್ಸು ಮಾಡಿದರೆ ಭ್ರಷ್ಟ ವ್ಯವಸ್ಥೆಯನ್ನು ನಿರ್ನಾಮ ಮಾಡಬಹುದು. ಆಯ್ದಕ್ಕಿ ಲಕ್ಕಮ್ಮ-ಆಯ್ದಕ್ಕಿ ಮಾರಯ್ಯನಂತಹ ದಂಪತಿಗಳ ಮನೋಧರ್ಮವನ್ನು ರೂಪಿಸಿಕೊಂಡಿದ್ದೇ ಆದರೆ ಇಂದಿನ ಕುಟುಂಬಗಳು ನೆಮ್ಮದಿಯ ತಾಣಗಳಾಗಬಲ್ಲವು.

"ಕೂಲಿ ಮಾಡದರೇನ ಕೋರಿ ಹೊತ್ತರೇನ
ನಮಗೆ ನಮರಾಯ ಬಡವೇನ। ಬಂಗಾರ
ಮಾಲು ಇದ್ದಾಂಗ ಮನಿಯಾಗ"

ಎಂಬ ಜನಪದ ಗರತಿಯ ನಿಲುವು ತನ್ನ ಪತಿಯನ್ನೆ ಪರಮಾತ್ಮನೆಂದು, ನನ್ನೆಲ್ಲ ಒಡವೆ, ವಸ್ತ್ರವೂ ಆತನೆಂದು ಆರಾಧಿಸುವ, ಪ್ರೀತಿಸುವ, ಗೌರವಿಸುವುದನ್ನ ಕಾಣುತ್ತೇವೆ. ಈ ತೆರನಾದ ಹೆಣ್ಣಿನ ನಿಲುವು ಗಂಡು-ಹೆಣ್ಣಿನಲ್ಲಿ ಸಾಮರಸ್ಯ ಗಟ್ಟಿಗೊಳ್ಳಲು ಸಾಧ್ಯವಾಗುತ್ತದೆ.

"ಅತ್ತೆಯ ಮನೆಯಾಗೆ ಮುತ್ತಾಗಿ ಇರಬೇಕ
ಹೊತ್ತಾಗಿ ನೀಡಿದರೆ ಉಣಬೇಕು।ತವರಿಗೆ
ಉತ್ತಮ ಹೆಸರ ತರಬೇಕು॥

ಬಾಳ್ಯೇದಾಗಿದ್ದರ ಬಾ ತಂಗಿ ಎಂಬುವರು
ಬಾಳ್ಯೇವ ಗೆಟ್ಟು ಮತಿಗೆಟ್ಟು। ತಿರುಗಿದರ
ಒಡಹುಟ್ಟಿದಣ್ಣ ದುಸುಮಾನ॥"

ಎಂಬ ಈ ತ್ರಿಪದಿಗಳು ಮನೆಯನ್ನು ಕಟ್ಟುವ, ಸಂತಸ-ಸಂತೃಪ್ತಿಯ ಶಿಖರವನ್ನು ಮುಟ್ಟುವ, ಮನೆಯು ಮಂದಿರವಾಗಿಸುವ, ಮನ-ಮನಗಳು ಬೆರೆತು, ಬೆರಗಾಗುವಂತೆ ಬಾಳುವ ಸಾಧನ ಮಹಿಳೆಯ ಮನೋಧರ್ಮದಲ್ಲಿ ಅಡಗಿದೆ. ಪ್ರತಿ ಮಹಿಳೆಗೆ ಅವ್ವನ ಮನೆ ಮತ್ತು ಅತ್ತೆಮನೆಯನ್ನು ಬೆಳಗಿಸುವ ಪೂರ್ಣಹೊಣೆಗಾರಿಕೆಯಿದೆ. ಅವ್ವನ ಮನೆ ಶ್ರೇಷ್ಠ, ಅತ್ತೆಯ ಮನೆ ಕನಿಷ್ಠ ಎಂದಾಗಲಿ, ಅತ್ತೆ ಮನೆ ಶ್ರೇಷ್ಠ, ಅವ್ವನ ಮನೆ ಕನಿಷ್ಠ ಎಂದಾಗಲಿ ಆಕೆಯ ಮನೋಭೂಮಿಕೆಯಲ್ಲಿ ಚಿಗುರೊಡೆದರೆ ಅಂದಿನಿಂದಲೇ ಆಕೆಯ ಅವನತಿ, ಅತೃಪ್ತಿ, ಅಸಂತಸಗಳು ಆರಂಭವಾಗುತ್ತವೆ.

ಅತ್ತೆಯೊಳಗೆ ಅವ್ವ, ಅವ್ವನೊಳಗೆ ಅತ್ತೆ, ಮಾವನೊಳಗೆ ಅಪ್ಪ, ಅಪ್ಪನೊಳಗೆ ಮಾವರನ್ನ ಕಂಡದ್ದಾದರೆ ಆಕೆಯ ಬಾಳಿಗೆ ಬೆಲೆ ಕಟ್ಟಲಾಗದು, ಇಳೆಯೊಳಗೆ ಹೊಳೆಯುವುದು ಆದರ್ಶ ಮತ್ತು ಅನುಕರಣೀಯವಾದ ಮನೆ ಎಂಬ ಅಭಿದಾನಕ್ಕೆ ಪಾತ್ರವಾಗುವುದು. ಹಾಗಾಗಿ ಮಹಿಳೆಯೊಳಗೆ ಮನೆ, ಮನೆಯೊಳಗೆ ಮಹಿಳೆ ಒಂದಾಗಿ, ಚಂದವಾಗಿ ಬಾಳಿದರೆ ಇಡೀ ಸಮಷ್ಟಿಯು ಸಂತಸವಾಗಿರುವುದು. ಬುದ್ಧ, ಮಹಾವೀರ, ಶಂಕರಚಾರ್ಯ, ಬಸವಣ್ಣ, ಅಲ್ಲಮಪ್ರಭು, ಕನಕದಾಸರು, ಪುರಂದರದಾಸರು, ಷರೀಫರು, ನಿಜಗುಣರು, ರಾಮಕೃಷ್ಣಪರಮಹಂಸ, ಸ್ವಾಮಿವಿವೇಕಾನಂದ, ಗಾಂಧಿ, ಅಂಬೇಡ್ಕರ್ ಮೊದಲಾದ ಮಹಾಪುರುಷರನ್ನು ಈ ಇಳೆಗೆ ನೀಡಿದವಳು ಮಹಿಳೆಯೇ. ಈಕೆಯ ಕಾಣ್ಕೆಯು ವರ್ಣಿಸಲು ಅಸದಳ. ಕುಟುಂಬ, ಸಮಾಜ, ರಾಜ್ಯ, ರಾಷ್ಟ್ರ ಮತ್ತು ಜಗಕ್ಕೆ ಮಹಿಳೆಯ ಕೊಡುಗೆ ಅಪೂರ್ವವಾದದು. ಮಹಿಳೆ ಮಹಾನಿಧಿ. ಇಂದು ಕಾನೂನು ನಮ್ಮನ್ನು ಕಾಪಾಡುವುದೆಂದು ಕಾಡುವ ಮತ್ತು ಕೊಲ್ಲುವ ವಿಧಿಯಾಗದೆ, ಸದ್ಗುಣಗಳ ಅಕ್ಷಯನಿಧಿಯಾಗಿರಲಿ.

# ಮಲೆನಾಡಿನ ಕಥೆಗಳಲ್ಲಿ ಹೆಣ್ಣಿನ ಚಿತ್ರಣಗಳು
# (ಕಾರಂತ–ಕುವೆಂಪು–ತೇಜಸ್ವಿ)

**ಡಾ. ಎಂ. ಎನ್. ರಮೇಶ**

**ರವಿಶಂಕರ್ ಜಿ.**

**ಪೀಠಿಕೆ :**

ಸ್ತ್ರೀ ಸಂವೇದನೆಯೆಂದರೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂಗತಿಗಳ ಸ್ವರೂಪ, ಸ್ತ್ರೀ ಸಂವೇದನೆಯನ್ನು ಕೇವಲ ಭಾವನಾತ್ಮಕವಾದ ಪ್ರಕ್ರಿಯೆಯೆಂದು ನಾವು ಕಡೆಗಣಿಸುವಂತಿಲ್ಲ. ಬೇರೊಂದು ರೀತಿಯಲ್ಲಿ ಹೇಳುವುದಾದರೆ ಸ್ತ್ರೀ ಸಂವೇದನೆಯು ಕೂಡ ಗಂಡಿನ ಸಂವೇದನೆಯಂತೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ವರೂಪಗಳಿಂದ ಪರಿವರ್ತನೆ ಹೊಂದುತ್ತಿರುತ್ತದೆ. ಆದರೆ ಭಿನ್ನತೆ ಬರುವುದು ಹೊರ ಸನ್ನಿವೇಶಗಳನ್ನು ಹೆಣ್ಣೇ ಸ್ವೀಕರಿಸುವ ವಿಧಾನದಲ್ಲಿ, ಹೊರಸಮಾಜದ ಬಗೆಗೆ ಪ್ರತಿಕ್ರಿಯಿಸುವ ನೆಲೆಯಲ್ಲಿ. ಹೆಣ್ಣಿನ ನೋಟದಿಂದ ಹೊಸ ಸಮಾಜದ ಆಗಮನ ಮತ್ತು ಹಳೆಯ ಸಮಾಜದ ನಿರ್ಗಮನದ ದ್ವಂದ್ವವು ಪರಿಣಾಮಕಾರಿಯಾದ ಬಿಂಬವನ್ನುಂಟುಮಾಡಿದೆ.

**ಹಿನ್ನೆಲೆ :**

ಸಾಹಿತ್ಯವು ಬದುಕನ್ನು ಆವರಿಸುವ ಸಂದರ್ಭದಲ್ಲಿ ಹಲವಾರು ಮಾರ್ಪಾಡುಗಳನ್ನು ಹೊಂದುತ್ತದೆ. ಒಂದೊಂದು ತಲೆಮಾರುಗಳು ಸಹ ಬದುಕಿನ ಬಗೆಗಿನ ತನ್ನ ಚಿಂತನೆಯನ್ನು ವರ್ತಮಾನದಲ್ಲಿ ಜೀವಿಸುವ ಸ್ಥಿತಿಯೊಡನೆ ವಿಲೀನಗೊಳಿಸಿದೆ. ಸಾಹಿತ್ಯದ ವಸ್ತುನಿಷ್ಠ ಅಧ್ಯಯನ ನಡೆದರೂ ಅದು ಕೊನೆ ಮುಟ್ಟುವುದು ಸಮಾಜವನ್ನು ಕುರಿತು ಚಿಂತನೆಯಲ್ಲೇ. ಆದ್ದರಿಂದ ಅದು ಸಮಾಜದ ಇನ್ನಿತರ ಜ್ಞಾನಶಾಖೆಗಳ ನಡುವೆ ತನ್ನ ಸ್ವಂತಿಕೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಚಿಂತನೆಯನ್ನು ಒಂದು ಬಗೆಯ ಚೌಕಟ್ಟಿನಲ್ಲಿ ಹಿಡಿದು ಅಧ್ಯಯನ ಮಾಡುವ ಉತ್ಸಾಹವನ್ನು ಇಲ್ಲಿ ತೋರಲಾಗಿದೆ. 1970ರಿಂದೀಚೆಗಿನ ಕನ್ನಡ ಸಾಹಿತ್ಯದಲ್ಲಿ ಹಿಂದೆಂದೂ ಎದುರಿಸದ ಸಾಮಾಜಿಕ ಬದ್ಧತೆಯನ್ನು ಸ್ವೀಕರಿಸಿ ಮುಂದುವರೆಯುತ್ತಿರುವುದು ಎಲ್ಲರೂ ಗಮನಿಸಬಹುದು. ಇಂತಹ ಸನ್ನಿವೇಶದಲ್ಲಿ ಸಮಾಜವು ಏಕಕೇಂದ್ರಿತ ಘಟಕವಾಗದೇ ತನ್ನದೇ ನೆಲೆಯಲ್ಲಿ ಮುಖಾಮುಖಿಯಾಗುತ್ತಿದೆ. ಬದುಕನ್ನು ಕೆಳಹಂತದಿಂದ ಸಕ್ರಿಯವಾಗಿ ಅನಾವರಣಗೊಳಿಸಬೇಕೆಂದು ಸಾಹಿತ್ಯವು ನಿಶ್ಚಯಿಸಿರುವುದರಿಂದ ಸೃಜನಶೀಲ ಕ್ರಿಯೆಯು ಸಮೂಹ ಹೋರಾಟದ ನೆಲೆಗಳು ಒಟ್ಟಾರೆಯಾಗಿ ಸಾಂದರ್ಭಿಕ ಕಾಲಮಾನದ ಆಶಯಗಳನ್ನು ಚಲನಶೀಲಗೊಳಿಸುವ ದಿಕ್ಕಿನಲ್ಲಿ ನಡೆದಿದೆ. ಹೀಗಾಗಿ ಸಾಹಿತ್ಯದ ಉದ್ದೇಶವು ಹೋರಾಟದ ಸ್ಥಿತಿಯೊಡನೆ ತನ್ನನ್ನು ತಾನು ಗುರುತಿಸಿಕೊಳ್ಳುತ್ತಾ ತನಗೆ ಒಂದು ಅಥೆಂಟಿಸಿಟಿಯನ್ನು ದೊರಕಿಸಿಕೊಂಡಿದೆ.

ಇದೇ ಸಂದರ್ಭದಲ್ಲಿ ಪ್ರತ್ಯೇಕ ಶಕ್ತಿಯಾಗಿ ರೂಪುಗೊಳ್ಳಲು ಪ್ರಯತ್ನಿಸುತ್ತಿರುವ ಸ್ತ್ರೀವಾದಿ ದೃಷ್ಟಿಕೋನವು ಕಾಲಮಾನದ ಅರಿವಿಗೆ ಹೊರತಾಗಿ ಅಸ್ತಿತ್ವ ಪಡೆಯುತ್ತಿರುವ ಕ್ರಿಯೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಗಿಲ್ಲ. ನಮ್ಮಲ್ಲಿ ಸ್ತ್ರೀವಾದಿ ಅರಿವು ಬಂದಿದ್ದೇ ಇತ್ತೀಚೆಗೆ. ಸ್ತ್ರೀಯರಲ್ಲಿ ಅರಿವು ಉಂಟಾಗಿದ್ದೇ ಆಧುನಿಕ ವಿದ್ಯಾಭ್ಯಾಸದ ಮೂಲಕ. ಆದರೆ ಆಕೆಗೆ ಆಧುನಿಕತೆಯು ತಂದುಕೊಟ್ಟಿರುವ ಅರಿವಿನಲ್ಲಿ ಗೊಂದಲಗಳೇ ಹೆಚ್ಚಾಗಿವೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ತನ್ನ ಅಸ್ತಿತ್ವಕ್ಕಾಗಿ ಎದುರಿಸುವ ಸವಾಲುಗಳು ಪ್ರಾರಂಭದಲ್ಲಿ ಅಷ್ಟೇನೂ ಪರಿಣಾಮಕಾರಿಯಾದುದಾಗಿರಲಿಲ್ಲ. ಏಕೆಂದರೆ ಪುರುಷನೊಡನೆ ಅಲ್ಲದೇ ಬದುಕಿನೊಡನೆಯೂ ಸಂಘರ್ಷಕ್ಕಿಳಿಯಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ಆಧುನಿಕತೆಯ ಗೊಂದಲಗಳನ್ನು ಎದುರಿಸುತ್ತಿದ್ದಾಳೆ. ಇದರಿಂದಾಗಿ ಅವಳಲ್ಲಿರುವ ಶಕ್ತಿ ಸಾಮರ್ಥ್ಯಗಳು ಹಲವು ಕಡೆಗಳಲ್ಲಿ ಹಂಚಿಹೋಗಿವೆ. ಜೀವನದ ಧೋರಣೆಗಳು ಬದಲಾಗಿರುವ ಸಂದರ್ಭದಲ್ಲಿ ಅವಳ ಶಕ್ತಿ ಸಾಮರ್ಥ್ಯಗಳು ಎಲ್ಲಾ ದಿಕ್ಕುಗಳಿಗೂ ವಿಸ್ತರಿಸಿಕೊಳ್ಳಬೇಕಾಗಿರುವುದು ಇಂದು ಅನಿವಾರ್ಯವಾಗಿದೆ. ಎಂತಹ ಸಂದರ್ಭದಲ್ಲಿ, ಯಾವ ಸ್ಥಿತಿಗೆ ತನ್ನ ಅಸ್ತಿತ್ವ ಕಂಡುಕೊಳ್ಳಬೇಕು ಎಂಬುದು ಆಕೆಗೆ ತಿಳಿದರೆ ಅವಳಿಗೆ ಎದುರಾಗುವ ಯಾವುದೇ ಗೊಂದಲಗಳಿಂದ ಪಾರಾಗಬಹುದು.

ಸ್ತ್ರೀ ಸಂವೇದನೆಯೆಂದರೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂಗತಿಗಳ ಸ್ವರೂಪ. ಸ್ತ್ರೀ ಸಂವೇದನೆಯನ್ನು ಕೇವಲ ಭಾವನಾತ್ಮಕವಾದ ಪ್ರಕ್ರಿಯೆಯೆಂದು ನಾವು ಕಡೆಗಣಿಸುವಂತಿಲ್ಲ. ಬೇರೊಂದು ರೀತಿಯಲ್ಲಿ ಹೇಳುವುದಾದರೆ ಸ್ತ್ರೀ ಸಂವೇದನೆಯು ಕೂಡ ಗಂಡಿನ ಸಂವೇದನೆಯಂತೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ವರೂಪಗಳಿಂದ ಪರಿವರ್ತನೆ ಹೊಂದುತ್ತಿರುತ್ತದೆ. ಆದರೆ ಭಿನ್ನತೆ ಬರುವುದು ಹೊರ ಸನ್ನಿವೇಶಗಳನ್ನು ಹೆಣ್ಣೇ ಸ್ವೀಕರಿಸುವ ವಿಧಾನದಲ್ಲಿ ಹೊರಸಮಾಜದ

ಬಗೆಗೆ ಪ್ರತಿಕ್ರಿಯಿಸುವ ನೆಲೆಯಲ್ಲಿ ಹೆಣ್ಣಿನ ನೋಟದಿಂದ ಹೊಸ ಸಮಾಜದ ಆಗಮನ ಮತ್ತು ಹಳೆಯ ಸಮಾಜದ ನಿರ್ಗಮನದ ದ್ವಂದ್ವವು ಪರಿಣಾಮಕಾರಿಯಾದ ಬಿಂಬವನ್ನು ಉಂಟುಮಾಡಿದೆ.

ಕನ್ನಡ ಸಾಹಿತ್ಯದಲ್ಲಿ ನಿರಂತರವಾಗಿ ಇಂತಹ ಪ್ರಕ್ರಿಯೆಯನ್ನು ದಾಖಲುಗೊಳಿಸುವ ಕೆಲಸ ನಡೆದುಕೊಂಡು ಬರುತ್ತದೆ. ಭವಿಷ್ಯದ ಉದ್ದೇಶಗಳನ್ನು ಅರಳಿಸುವ ಕ್ರಿಯೆಗೆ ವರ್ತಮಾನವು ಅಡ್ಡಿಯಾಗಬಾರದು ಎಂದು ಸಮಕಾಲೀನ ಸಾಹಿತ್ಯವು ತುಂಬಾ ಶ್ರಮಿಸುತ್ತಿದೆ. ಆಯಾ ಘಟ್ಟದಲ್ಲಿ ಪ್ರಮುಖ ಎಂದು ಕಂಡುಬರುವ ಧೋರಣೆಗಳನ್ನು ಗುರುತಿಸುತ್ತಾ ಅದಕ್ಕೆ ಒತ್ತಾಸೆಯಾಗಿ ಹಾಗೂ ಸಾಂಸ್ಕೃತಿಕವಾಗಿ ಗಮನಿಸಿ ನನ್ನ ಅಧ್ಯಯನದ ಮಿತಿಗೆ ನಿಲುಕುವ ಕೃತಿಗಳನ್ನು ಮಾತ್ರವೇ ಈ ಪರಿಧಿಯೊಳಗೆ ಆಯ್ಕೆಮಾಡಿಕೊಂಡಿದ್ದೇನೆ.

ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಸ್ತ್ರೀ ಸಂವೇದನೆಯನ್ನು ಎರಡು ನೆಲೆಗಳಲ್ಲಿ ಗುರುತಿಸಬಹುದು.

1. ಮೊದಲನೆಯದಾಗಿ ಸ್ತ್ರೀಯರೇ ಬರೆದಿರುವ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಹೆಣ್ಣಿನ ಅನಿಸಿಕೆಗಳು.
2. ಎರಡನೆಯದಾಗಿ ಪುರುಷ ಲೇಖಕರು ಬರೆದಿರುವ ಸಾಹಿತ್ಯದಲ್ಲಿ ಬರುವ ಸ್ತ್ರೀ ಪಾತ್ರಗಳು ಅಭಿವ್ಯಕ್ತಿಗೊಳಿಸುವ ಸಂವೇದನೆಗಳು.

ಆಧುನಿಕ ಎಂದು ಕರೆಯುವ ಸಾಹಿತ್ಯದ ಆವರಣಕ್ಕೆ ಕಾಲಿಡುತ್ತಿದ್ದಂತೆ ಅನ್ಯಪ್ರಾಂತೀಯ ಮತ್ತು ಅನ್ಯದೇಶೀಯ ಪ್ರಭಾವಗಳು ಪ್ರವೇಶ ಮಾಡಿರುವುದನ್ನು ನಾವು ಗಮನಿಸಬಹುದು. ಇಂತಹ ಪ್ರಭಾವಗಳನ್ನು ಕನ್ನಡದ ಆರಂಭದ ಹಲವು ಸ್ಥಳೀಯ ಲೇಖಕರು ಸಾಂಸ್ಕೃತಿಕ ವಾಹಕವಾಗಿ ದುಡಿಸಿಕೊಂಡ ರೀತಿ ಕುತೂಹಲವಾಗಿದೆ. ಕೆರೂರು ವಾಸುದೇವಾಚಾರ್ಯ, ಗುಲ್ವಾಡಿ ವೆಂಕಟರಾಯ, ಎಂ.ಎಸ್. ಪುಟ್ಟಣ್ಣ, ಶಿವರಾಮ ಕಾರಂತ, ಕುವೆಂಪು, ತೇಜಸ್ವಿ, ಕೊಡಗಿನ ಗೌರಮ್ಮ ಮೊದಲಾದ ಲೇಖಕರು ಅನ್ಯದೇಶೀಯ ಮತ್ತು ಅನ್ಯಪ್ರಾಂತೀಯ ಪ್ರಭಾವಗಳನ್ನು ಸ್ವಂತಿಕೆಯ ಆಶಯದಲ್ಲಿ ದೇಶೀಯಗೊಳಿಸಲು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಅವರುಗಳ ಅಭಿವ್ಯಕ್ತಿ ಮಾಧ್ಯಮಗಳು ಬೇರೆ ಮಾರ್ಗವನ್ನು ಶೋಧಿಸಿತು. ಅವರುಗಳ ಅಭಿವ್ಯಕ್ತಿ ಸಂಸ್ಕೃತಿಯನ್ನು ಅರ್ಥೈಸುವ ಆಶಯವಾಗಿ ಬದುಕಿನೊಡನೆ ಮುಖಾಮುಖಿಯಾಗುತ್ತಾ ಹೋಗಿರುವುದನ್ನು ಅವರ ಕೃತಿಗಳ ಅಧ್ಯಯನದಿಂದ ತಿಳಿಯಬಹುದು. ಆದ್ದರಿಂದಲೇ ಕಾರಂತ, ಕುವೆಂಪು, ತೇಜಸ್ವಿಯಂತಹ ಲೇಖಕರು ಯಾವುದೇ ಭಾಷೆಗೆ ಸವಾಲಾಗಿ ನಿಲ್ಲುವ ಹಾಗೆ ಕನ್ನಡಕ್ಕೆ ಗೌರವ ತಂದುಕೊಡುವ ಶ್ರೇಷ್ಠ ಪ್ರತಿಭೆಗಳೆನಿಸಿವೆ.

**ಶಿವರಾಮ ಕಾರಂತರ ಕೃತಿಗಳಲ್ಲಿ ಮೂಡಿಬಂದಿರುವ ಹೆಣ್ಣಿನ ಚಿತ್ರಣ :**

ಶಿವರಾಮ ಕಾರಂತರು ವಿಶಿಷ್ಟ ಪ್ರತಿಭೆ. ಅವರು ಕನ್ನಡ ಸಾಹಿತ್ಯದಲ್ಲಿ ದೈತ್ಯ ಪ್ರತಿಭೆ ಎಂದೇ ಗುರುತಿಸಿಕೊಂಡಿದ್ದಾರೆ. ಅವರ ಸೃಜನಶೀಲ ಪ್ರತಿಭೆ ಪೂರ್ಣಾರ್ಥದಲ್ಲಿ ತನ್ನನ್ನ ತಾನು ತೆತ್ತುಕೊಂಡಿರುವುದು ಕಾದಂಬರಿ ಪ್ರಕಾರದಲ್ಲಿ. ಒಂದು ಸಂಸ್ಕೃತಿಯು ಒಬ್ಬ ವ್ಯಕ್ತಿಯ ಸೃಜನಶೀಲ ಪ್ರತಿಭೆಯನ್ನು ಅದರೆಲ್ಲ ಸಾಧ್ಯತೆಯಲ್ಲಿ ದುಡಿಸಿಕೊಳ್ಳುವುದು ಕಥಾ ಮಾಧ್ಯಮದಲ್ಲಿ ಮಾತ್ರ. ಅವರು ಬದುಕಿನ ದೈನಂದಿನ ಘಟಕಗಳನ್ನು ಅದು ಸರಳವಾಗಿ ಇದ್ದರೂ ಅದನ್ನು ಗಂಭೀರವಾಗಿಯೇ ತೆಗೆದುಕೊಳ್ಳುತ್ತಾರೆ. ವ್ಯಕ್ತಿಯು ಬಾಳುವ ವೈಯಕ್ತಿಕ–ಕೌಟುಂಬಿಕ–ಸಾಮಾಜಿಕ ಸ್ತರಗಳನ್ನು ಅದರ ಅನನ್ಯತೆಯಲ್ಲೇ ಹಿಡಿದುಕೊಡುತ್ತಾರೆ. ಇದನ್ನು ಅವರ ಕೃತಿಗಳು ಸಮಂಜಸವಾಗಿ ಮಾಡಿವೆ. ಆಧುನಿಕತೆಯು ತರುವ ಗೊಂದಲಗಳನ್ನು ಯುವ ಪೀಳಿಗೆಗೆ ಪ್ರಧಾನವಾಗಿ ಮುಖಾಮುಖಿಯಾಗಿಸುತ್ತಾರೆ. ಇಳಿವಯಸ್ಸಿನ ವ್ಯಕ್ತಿಗಳು ತಾವು ನಂಬಿದ ಮೌಲ್ಯಗಳಲ್ಲಿ ನಿರುಮ್ಮಳವಾಗಿ ಬದುಕುವುದನ್ನು ಶಾಶ್ವತವನ್ನಾಗಿಸಿಕೊಳ್ಳುತ್ತಾರೆ. ಇಲ್ಲಿ ಪರಂಪರೆಯ ಸಾಂಸ್ಕೃತಿಕ ಆಶಯಗಳು ಮೇಲುಗೈ ಸಾಧಿಸುತ್ತಾರೆ.

ಕಾರಂತರ ಕೃತಿಗಳಲ್ಲೇ ಧೋರಣೆಯ ವಿಷಯವಾಗಿ ಜೀವನ ರೀತಿಯನ್ನು ಸೂಕ್ಷ್ಮವಾಗಿ ಅವಲೋಕಿಸುವ ಏಕೈಕ ಕೃತಿಯೆಂದರೆ *ಚೋಮನ ದುಡಿ*. ದೇಶೀಯ ವಸಾಹತುಶಾಹಿಯ ಪ್ರತಿನಿಧಿಯಾದ ಸಂಕಪ್ಪಯ್ಯನು ತನ್ನ ಜಾತಿ ಮತ್ತು ಆರ್ಥಿಕ ಶಕ್ತಿಯ ಆಧಾರದ ಮೇಲೆ ತನ್ನ ಸುತ್ತಿನ ಪರಿಸರವನ್ನು ನಿಯಂತ್ರಿಸುತ್ತಿರುತ್ತಾನೆ. ತಾಯಿಯ ಪ್ರತಿನಿಧಿಯಾದ ಈತ, ಕೆಳವರ್ಗದ ಮೇಲ್ಮುಖ ಚಲನೆಯನ್ನು ತನಗೆ ತೋಚಿದಂತೆ ನಡೆದುಕೊಳ್ಳುವ ರೀತಿಯಲ್ಲಿದೆ. ಚೋಮನಿಗೆ ಭೂಮಿಯನ್ನು ನೀಡಲು ಸಂಕಪ್ಪಯ್ಯ ಕೊಡುವ ಕಾರಣಗಳಲ್ಲಿ ನಮಗೆ ಈ ಅಂಶ ಗೊತ್ತಾಗುತ್ತದೆ.

1. "ಚೋಮ ಇದುವರೆಗೂ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗೆ ಗದ್ದೆ ಕೊಟ್ಟಿಲ್ಲ. ಈಗ ಹಾಗೆ ಕೊಡಲಿಕ್ಕೆ ಬರುವ ಹಾಗೆ ಇಲ್ಲ".
   "ಚೋಮ, ಅವಸರವೇನು? ನಾಳೆ ನಾಡಿದ್ದು ಅಮ್ಮನನ್ನು ಕೇಳಿ ಕೊಡುತ್ತೇನೆ".
2. ಮತ್ತೊಂದು ಸನ್ನಿವೇಶದಲ್ಲಿ ಚೋಮನ ಹೆಂಡತಿಯ ಸಾವು ಅವನನ್ನು ಕನಿಷ್ಠ 4 ವರ್ಷದವರೆಗೆ ಶಿಕಾರಿಗೆ ಹೋಗದಂತೆ ಮಾಡಿದೆ. ಆದರೆ ಅದು ಅವನನ್ನು ನೋಯಿಸಿದಷ್ಟು ಓದುಗರನ್ನು ತಟ್ಟುವುದಿಲ್ಲ.
3. ಅಣ್ಣಂದಿರು ತೀರಿಸದೇ ಉಳಿದ ಸಾಲ ತೀರಿಸಲು ತೆರಳಿದ ಬೆಳ್ಳಿ ಲೈಂಗಿಕ ಶೋಷಣೆಗೆ ಒಳಗಾಗುತ್ತಾಳೆ. ಬೆಳ್ಳಿ ವಾಸ್ತವಕ್ಕೆ ತೀರಾ ಹತ್ತಿರವಾಗಿ ಪ್ರತಿಕ್ರಿಯಿಸುವುದರಿಂದ ಚೋಮನ ಕುಡಿತದ ಬದುಕನ್ನು ಅಷ್ಟು ದಿನ ನೂಕಲು ಮತ್ತು ಕಳಸದ ಸಾಲ ತೀರಸಲು ಸಾಧ್ಯವಾಗುತ್ತದೆ.

ಕಾರಂತರು ವ್ಯಕ್ತಿಗತವಾಗಿ ಅಡಗಿರುವ ದೋಷಗಳನ್ನು ವ್ಯವಸ್ಥೆಯಲ್ಲಿ ಶೋಧಿಸಲು ಪ್ರಯತ್ನಿಸಿದ್ದಾರೆ. ಬೆಳ್ಳಿಯ ಆಡುವ ಮಾತುಗಳು ಸಹ ವ್ಯವಸ್ಥೆಯತ್ತಲೇ ಬೊಟ್ಟು ಮಾಡಿ ತೋರಿಸುತ್ತದೆ.

**ಮರಳಿ ಮಣ್ಣಿಗೆ :**

ಈ ಕಥೆಯು ಮೂರು ತಲೆಮಾರುಗಳ ಆಶಯಗಳಾದ ಸ್ಥಿರತೆ, ಗೊಂದಲ ಮತ್ತು ಸ್ಥಿತ್ಯಂತರಗಳ ನೆಲೆಗಳನ್ನು ಆ ಕಾಲಮಾನದ ಪರಿಸರದಲ್ಲಿ ಕಟ್ಟಿಕೊಡುತ್ತದೆ. ಮನೆಯ ಒಳಗಿನ ಪೂರ್ಣ ಹೊಣೆಗಾರಿಕೆ ಸಾಗುವಳಿಯು ಸೇರಿದಂತೆ ಜವಾಬ್ದಾರಿಯು ಹೆಂಗಸರದು. ಆದರೆ ಸಾಗುವಳಿಯ ಆದಾಯವನ್ನು ತಮ್ಮ ವ್ಯವಹಾರಿಕ ಕಲೆಯಲ್ಲಿ ಮೂಲ ಹಕ್ಕುದಾರರಾದ ಹೆಂಗಸರಿಂದ ಗಂಡಸರು ಕಿತ್ತುಕೊಳ್ಳುತ್ತಾರೆ. ಹೆಣ್ಣಿನ ಹಿನ್ನೆಲೆಯಲ್ಲಿ ಪುರುಷಪ್ರಧಾನ ಸಮಾಜದ ದೊಡ್ಡ ಕೊಡುಗೆಯೆಂದರೆ ಆಕೆಯ ದುಡಿತದ ಫಲವನ್ನು ಕಿತ್ತುಕೊಂಡು ತನ್ನ ದಾಸ್ಯದಲ್ಲಿರುವಂತೆ ಮಾಡಿರುವುದು. ಸಮಾಜವು ಒಪ್ಪಿಕೊಂಡ ಮೌಲ್ಯಗಳನ್ನು ತಮ್ಮ ದಿನನಿತ್ಯದ ನಡವಳಿಕೆಯಲ್ಲಿ ಬಹಳ ಶ್ರದ್ಧೆಯಿಂದ ಪಾಲಿಸುತ್ತಾ ವೈಯಕ್ತಿಕ ಅಭಿಪ್ರಾಯ ಮತ್ತು ತೀರ್ಮಾನಗಳನ್ನು ಬದಿಗೊತ್ತಿ ತಮ್ಮದಲ್ಲದ ಬೇರೊಂದು ಬದುಕಿಗಾಗಿ ಬಾಳುತ್ತಿದ್ದೇವೆ ಎಂಬುದನ್ನು ನಡೆ–ನುಡಿಗಳೆರಡರಲ್ಲೂ ತೋರಿಸಿಕೊಳ್ಳುತ್ತಾ ಬದುಕುವ ಒಂದು ವರ್ಗದ ಹೆಂಗಸರು, ಪುರುಷ ಸಮಾಜಕ್ಕಿಂತ ಆಪ್ತರಾಗುತ್ತಾರೆ.

**ಮೈಮನಗಳ ಸುಳಿಯಲ್ಲಿ :**

ಇದರಲ್ಲಿ ಕಾರಂತರು ಸಂಪ್ರದಾಯದ ಪ್ರಕಾರ ಶಾಸ್ತ್ರೋಕ್ತ ವಿಧಿವಿಧಾನಗಳ ಮೂಲಕ ಮಾತ್ರವೇ ಅಸ್ತಿತ್ವದಲ್ಲಿರುವ "ಗರತಿ" ಕಲ್ಪನೆಯನ್ನು ನಿರಾಕರಿಸಿ, ಮೈಮನಸ್ಸುಗಳಲ್ಲಿ ಪ್ರಾಮಾಣಿಕವಾದದ್ದು. ಮಾನವೀಯ ಸಂಬಂಧಕ್ಕಾಗಿ ಹಾತೊರೆಯುವ ಮತ್ತು ಅದನ್ನಷ್ಟೇ ಕಾಯ್ದುಕೊಂಡರೆ ಜೀವನ ಪೂರ್ಣ ಎನ್ನುವ ವೇಶ್ಯೆಯೊಬ್ಬಳನ್ನು ಗರತಿ ಎಂದು ಸಂಪ್ರದಾಯಕ್ಕೆ ಭಿನ್ನವಾದ ನೆಲೆಯಲ್ಲಿ ಗುರುತಿಸುತ್ತಾರೆ.

**ಮೂಕಜ್ಜಿಯ ಕನಸುಗಳು :**

ಹೆಣ್ಣಿನ ಆಸೆ–ಆಕಾಂಕ್ಷೆಗಳು ಗಂಡಿನ ನಿಯಂತ್ರಣದಲ್ಲಿ ಇದ್ದಿತು. ಆದರೆ ಸಾಂಸ್ಕೃತಿಕವಾಗಿ ಲಿಂಗ–ಯೋನಿಯ ಆರಾಧನೆಯಲ್ಲಿ ತೊಡಗಿದ್ದ ವ್ಯವಸ್ಥೆ, ಹೆಣ್ಣಿನ ವೈಧವ್ಯವನ್ನು ಚಿರಗೊಳಿಸುವುದಕ್ಕೆ ಅಂಟಿಕೊಂಡುಬಿಟ್ಟಿತು. ಇಂಥಹ ಕೆಲವು ಸಂಸ್ಕೃತಿವಿರೋಧಿ ಆಶಯಗಳನ್ನು ಬದುಕಿನ ಸಂದರ್ಭದಲ್ಲೇ ಪ್ರತಿಭಟಿಸುವ ಈ ಕೃತಿಯು ತನ್ನ ಚಲನಶೀಲತೆಯನ್ನು ಅಂತಹ ಮೌಲ್ಯಗಳನ್ನು ಒಡೆಯುವ ಮೂಲಕ ದೊರಕಿಸಿಕೊಳ್ಳುತ್ತದೆ. ಇದನ್ನು ತಿಪ್ಪಜ್ಜಿ ಮತ್ತು ಮೂಕಜ್ಜಿ ವಿಭಿನ್ನ ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ದೈವವೇ ಬತ್ತಲಾಗಿರುವಾಗ, ಆಕೆಗಿಲ್ಲದ ಬಡಿವಾರ ತನಗೇಕೆ ಎಂದು ಆಕೆ ಬತ್ತಲಾದಳು ಎಂಬುದು ಮೂಕಜ್ಜಿಯನ್ನು ವ್ಯವಸ್ಥೆಯು ರೂಢಿಸಿಕೊಂಡು ಬಂದಿರುವ ನಿಯಮಗಳಡಿ ಗೌರವಯುತವಾಗಿ ಉಳಿಸಿಕೊಂಡು ಬರಬೇಕೆಂಬುದೇ ಆಗಿದೆ. ವ್ಯವಸ್ಥೆಗೆ ಮೂಕಜ್ಜಿ ತೋರಿರುವ ಪ್ರತಿಭಟನೆ, ಲೈಂಗಿಕ ಅರಿವಿನ ಅತೃಪ್ತಿಯ ಮೇಲ್ ತೋರಿಕೆ ಎನಿಸಿದೆ. ಹಾಗೆಯೇ ಪ್ರಾಚೀನ ಆಕರಗಳನ್ನಾಧರಿಸಿ ಲಿಂಗ–ಯೋನಿಯ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸುವುದು, ಅದು ಪಲ್ಲಟಗೊಂಡ ಆಶಯಗಳನ್ನು ಗುರುತಿಸುವುದು ಮೂಕಜ್ಜಿಯ ವೈಯಕ್ತಿಕ ಬದುಕಿನ ಹಿನ್ನೆಲೆಯಲ್ಲಿ ಅರ್ಥಪೂರ್ಣವಾಗಿದೆ. ಕೃತಿಯಲ್ಲಿ ಪುರುಷಪ್ರಧಾನ ಸಮಾಜದ ಆಶಯಗಳನ್ನು ತಿರಸ್ಕರಿಸುವ ಕೊಂಡಿ ಉದ್ದಕ್ಕೂ ಎಚ್ಚರವಾಗಿದೆ. ಮೂಕಜ್ಜಿಯು ಪ್ರಾಚೀನ ವಸ್ತುಗಳಲ್ಲಿ ತನ್ನ ಬದುಕಿನ ನಿಯಂತ್ರಣಗಳನ್ನು ಮೀರುವ ಸ್ಥಿತಿಯನ್ನು ಪ್ರಮುಖವಾಗಿ ಗುರುತಿಸುತ್ತಾಳೆ.

**ಕುವೆಂಪು ಅವರ ಕಾದಂಬರಿಗಳಲ್ಲಿ ಹೆಣ್ಣಿನ ಚಿತ್ರಣ:**

**ಮಲೆಗಳಲ್ಲಿ ಮದುಮಗಳು :**

ಕನ್ನಡ ನಾಡಿನ ಮಲೆನಾಡಿನ ಬದುಕನ್ನು ತೆರೆದ ಕಣ್ಣುಗಳಿಂದ ಅರಿಯಲು ಕುವೆಂಪು ಅವರ ಕಾದಂಬರಿಗಳು ಬಹುದೊಡ್ಡ ಮಾದರಿಗಳಾಗಿವೆ. ಕುವೆಂಪು ಅವರು ತಮ್ಮ ಕಾದಂಬರಿಗಳ ಜಗತ್ತನ್ನು ಒಂದು ಸೀಮಿತ ಪ್ರದೇಶಕ್ಕೆ ಮಾತ್ರವೇ ಅಡಕಗೊಳಿಸುತ್ತಾರೆ. ಆ ಪ್ರದೇಶದಲ್ಲಿ ಎದುರಾಗುವ ಸಮಸ್ಯೆಗಳನ್ನು ಯಾವುದೇ ವರ್ಗಕ್ಕೆ ಸೀಮಿತಗೊಳಿಸದೇ ಸಮಗ್ರವಾಗಿ ಗಮನಿಸುವ ತಾಳ್ಮೆಯಿಂದ ಅವುಗಳ ಸಾಂಸ್ಕೃತಿಕ ಆಶಯಗಳನ್ನು ಗುರುತಿಸುವ ಅಪರೂಪದ ಕ್ರಿಯೆಗಳನ್ನು ಹೊರಚೆಲ್ಲುತ್ತಾರೆ.

ಹೆಣ್ಣು–ಗಂಡಿನ ಸಂಬಂಧದಲ್ಲಿ ಸಾಂಪ್ರದಾಯಿಕವಾಗಿ ನಿರ್ಮಾಣಗೊಳ್ಳುವ ಮಾನವೀಯ ಆವರಣವನ್ನು ಕುವೆಂಪು ಗುತ್ತಿ–ತಿಮ್ಮಿ, ಮುಕುಂದಯ್ಯ–ಚಿನ್ನಮ್ಮ, ಐತ–ಪಿಂಚಲು ಇವರ ಕೌಟುಂಬಿಕ ಸೂಚನೆಯಲ್ಲಿ ಗುರುತಿಸುತ್ತಾರೆ. ಗುತ್ತಿ–ತಿಮ್ಮಿಗೆ ವಿವಾಹ ಪೂರ್ವದಲ್ಲಿ ಲೈಂಗಿಕ ಸಂಬಂಧವು ಅನ್ಯ ನೆಲೆಗಳಲ್ಲಿ ಆಗಿದ್ದರೂ ಅವು ಕೇವಲ ದೈಹಿಕ ತೃಪ್ತಿಗೆ ಸಂಬಂಧಿಸಿದ ಆಶಯವಾಗಿದೆ.

ಪ್ರಜ್ಞೆ ಕಳೆದುಕೊಂಡು ಕೂಡಿಕೆಯಾಗುವ ನಾಗಕ್ಕ ಬಸಿರಾಗದೆ ಆಕೆಯನ್ನು ಬಲವಂತದಿಂದ ಕೂಡಿಕೆ ಮಾಡಿದ ನಾಗತ್ತೆ ಬಸಿರಾಗುವ ಸನ್ನಿವೇಶ, ಚಿನ್ನಮ್ಮ ತಂದೆಯ ವೈಯಕ್ತಿಕ ಉದ್ದೇಶಕ್ಕಾಗಿ ಬಲಿಯಾಗುವುದು, ಇದೆಲ್ಲ ಗೊತ್ತಿದ್ದೂ ಅಜ್ಜಿ ಮೌನವಾಗಿರುವುದು ಎಲ್ಲರ ನೋವುಗಳನ್ನು ಅರ್ಥಮಾಡಿಕೊಳ್ಳುವ ಪ್ರಬುದ್ಧತೆಯನ್ನು ತೋರುತ್ತಾಳೆ. ಮದುವೆಯಾಗದ ಚಿನ್ನಮ್ಮ ಮುಕುಂದಯ್ಯನ ಪರಿಸ್ಥಿತಿ ಗೊತ್ತಿದ್ದರೂ ಮೈ ಒಪ್ಪಿಸುವ ಮೂಲಕ ಸಾಂಪ್ರದಾಯಿಕ ಆವರಣದೊಳಗೆ ತನ್ನದೇ ಆದ ವೈಯಕ್ತಿಕ ಸಾಹಸ ತೋರುತ್ತಾಳೆ.

“ಗುತ್ತಿಗೆ” ಕೂಲಿಯೇ ಜೀವನಾಧಾರವಾಗಿರುವುದರಿಂದ ಹೆಣ್ಣನ್ನು ಪಡೆಯಲು ಪ್ರಬಲ ವಿರೋಧ ವ್ಯಕ್ತಪಡಿಸಬೇಕಾಗಿದೆ.

ಕೆಳವರ್ಗದ ಹೆಣ್ಣು ಮೇಲುವರ್ಗಕ್ಕೆ ದೃಷ್ಟಿಗೆ ನಿಲುಕದ ಲೈಂಗಿಕ ಪಾತಾಳಿಯಲ್ಲಿ ಗ್ರಹಿಕೆಗೆ ಒಳಗಾಗುತ್ತಾಳೆ. ತಿಮ್ಮಿ, ಪಿಂಚಲು, ಅಕ್ಕಣಿ ಇಂಥ ಸಂಸ್ಕೃತಿ ಪ್ರತಿನಿಧಿಗಳು ತಮ್ಮ ಬದುಕಿನಲ್ಲಿ ಚಲನಶೀಲವಾಗುವಾಗ ಕೆಳವರ್ಗದ ಬದುಕಿನ ಆಕರಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ವಿವಾಹೇತರ ಲೈಂಗಿಕ ಸಂಬಂಧವು ಈ ಸ್ತರದ ಹೆಣ್ಣಿನ ಪ್ರಜ್ಞೆಗೆ ಆಘಾತವನ್ನೇನೂ ಮಾಡುವುದಿಲ್ಲ.

**ಕಾನೂರು ಹೆಗ್ಗಡತಿ :**

ಹೂವಯ್ಯ ಮಲೆನಾಡಿಗೆ ಕಾಲಿಡುತ್ತಿದ್ದಂತೆ ಸೀತೆಯನ್ನು ಅವಳ ಅವರಣದಿಂದ ಹೊರಗೆ ಯೋಚಿಸುವಂತೆ ತಂತ್ರ ಹೆಣೆಯಲಾಗಿದೆ. ಈ ಮೊದಲೇ ಹೂವಯ್ಯ ಭಾವನನ್ನು ಮದುವೆಯಾಗುತ್ತೇನೆ ವ್ಯಕ್ತಿತ್ವ ಪುಳಕಗೊಳ್ಳುತ್ತಿರುವುದನ್ನು ಅನುಭವಿಸುತ್ತಿರುತ್ತಾಳೆ. ವಿದ್ಯಾವಂತನಾದ ಹೂವಯ್ಯನಿಗೆ ಸೀತೆಯು ಹಳ್ಳಿಯ ಮುಗ್ಧಬಾಲೆಯಾಗಿ ಸೀತೆ ಪರಕೀಯ ನೆಲೆಯಲ್ಲಿ ನಿಂತು ಪ್ರತಿಕ್ರಿಯಿಸುತ್ತಾಳೆ.

ವ್ಯವಹಾರಿಕ ಲೋಕಕ್ಕೆ ಮುಗ್ಧ ಪ್ರತಿಕ್ರಿಯೆ ತೋರುವ ಸುಬ್ಬಮ್ಮ, ದೈಹಿಕ ಬಯಕೆಯನ್ನು ಬುದ್ಧಿವಂತಿಕೆಯಿಲ್ಲದ ಅನ್ಯನೆಲೆಯಲ್ಲಿ ತೃಪ್ತಿಪಡಿಸಿಕೊಂಡು ದುಡುಕಿನ ಸಾವು ತಂದುಕೊಳ್ಳುತ್ತಾಳೆ. ಇದರ ಹಿನ್ನೆಲೆಯಲ್ಲಿ ಆಕೆಯ ತವರು ಮನೆಯ ಒರಟು ಸಂಸ್ಕೃತಿಯೂ, ಕಾನೂರಿಗೆ ಹೆಗ್ಗಡಿತಿಯಾಗಿ ಬಂದ ಮೇಲೂ ತನ್ನ ಸ್ವಭಾವವನ್ನು ನಿಯಂತ್ರಿಸಿಕೊಳ್ಳದೇ ಇರುವ ಅವಿವೇಕವೂ ಮತ್ತು ಆ ಎರಡೂ ನೆಲೆಗಳನ್ನು ಗ್ರಹಿಸುವ ಸ್ಥಿತಿಯಲ್ಲಿರುವ ಗೊಂದಲಗಳು ಸುಬ್ಬಮ್ಮನ ದುರಂತವನ್ನು ಸೂಚಿಸುತ್ತವೆ.

**ಪೂರ್ಣಚಂದ್ರ ತೇಜಸ್ವಿ ಕಥೆಗಳಲ್ಲಿ ಹೆಣ್ಣಿನ ಚಿತ್ರಣ:**

ಪೂರ್ಣಚಂದ್ರ ತೇಜಸ್ವಿ ಅವರ ಬರಹದ ಒಡಲಿನಲ್ಲಿ ನಿಗೂಢತೆಯು ಪ್ರತಿಯೊಂದು ಕತೆಯನ್ನು ಸ್ವತಂತ್ರ ಆಶಯದಿಂದ ರೂಪಿಸಲು ಪ್ರಯತ್ನಿಸಿದೆ. ಬದುಕಿನೊಳಗಣ ಪ್ರಕೃತಿಯ ಸ್ಥಿತಿಯ ಸಂಘರ್ಷವನ್ನು ಸ್ಥಳೀಯ ಪ್ರತಿಕ್ರಿಯೆಗಳೊಂದಿಗೆ ಸೇರಿಸುವ ಪ್ರಯತ್ನ ತೇಜಸ್ವಿಯವರದ್ದಾಗಿದೆ.

**ಕಿರಗೂರಿನ ಗಯ್ಯಾಳಿಗಳು :**

ಪುರುಷರ ಶೋಷಣೆಯನ್ನು ವಿನೂತನ ಶೈಲಿಯಲ್ಲಿ ಮಹಿಳೆ ವಿರೋಧಿಸುವುದು ಮತ್ತು ಸಾಮಾಜಿಕ ಸ್ಥಿತಿಯಂತೆಯೇ ಮಹಿಳೆಯನ್ನು ತಾನು ಶೋಷಿಸುತ್ತಿದ್ದೇನೆ ಎಂಬ ಅರಿವಿಲ್ಲದ ಪುರುಷರ ಮುಗ್ಧ ಸ್ಥಿತಿಯನ್ನು ಈ ಕೃತಿಯು ತಿಳಿಸಿಕೊಡುತ್ತದೆ. ಇಲ್ಲಿ ಪುರುಷನ ಶೋಷಣೆಯನ್ನು ಮಹಿಳೆಯು ಲೈಂಗಿಕ ನೆಲೆಯಲ್ಲಿ ಗ್ರಹಿಸಿದ್ದಾಳೆ. ಗದ್ದೆಯಲ್ಲಿ ನಾಟಿ ಮಾಡುತ್ತಿದ್ದಾಗ ಉಂಟಾಗುವ ಮಾತುಗಳಲ್ಲಿ ಅವರ ಗಯ್ಯಾಳಿತನ ವ್ಯಕ್ತವಾಗುತ್ತದೆ. ಗಂಡಸಿನ ಎದುರು ಅವರು ಎಂದಿಗೂ ಶಾಂತವಾಗಿ ನಡೆದುಕೊಂಡದ್ದೇ ಇಲ್ಲ ಎನ್ನುವಂತೆ ಯಾವಾಗಲೂ ಮುಖ ಸಿಂಡರಿಸಿಕೊಂಡೇ ಕೆಣಕುವ ಸ್ವಭಾವದವರು. ಕಿರಗೂರಿನ ಗಂಡಸರ ಲೈಂಗಿಕ ಅಸಮರ್ಥತೆಯನ್ನು ಅವರ ಮೇಲ್ಮೆಯನ್ನು ತಿಳಿದಿರುವ ಇವರುಗಳು ನಂಬೂದರಿ ಪಂಡಿತನ ಲೈಂಗಿಕ ವಂಚನೆಯನ್ನು ತಿಳಿಯುವಲ್ಲಿ ವಿಫಲವಾಗುತ್ತಾರೆ. ಅದನ್ನು ತಮ್ಮ ಗಂಡಂದಿರ ಲೈಂಗಿಕ ದೌರ್ಬಲ್ಯದ ದೆಸೆಯಿಂದಾಗಿ ಸಹಜವಾಗಿ ಎದುರಾಗುವ ಕ್ರಿಯೆ ಎನ್ನುವಂತೆ ಸುಮ್ಮನಾಗುತ್ತಾರೆ.

**ಕರ್ವಾಲೋ :**

ರಾಮಿಯನ್ನು ಸಾಮಾಜಿಕವಾಗಿ ಯಾವುದೇ ಕೋನದಲ್ಲಿ ಅಧ್ಯಯನ ಮಾಡಿದರೂ ಅವಳು ಕೆಳಸ್ತರದ ಹೆಣ್ಣುಮಗಳು. ನಿರೂಪಕನೇ ತಿಳಿಸುವಂತೆ ಬಾಹ್ಯನೋಟಕ್ಕೆ ಕಾಣುತ್ತಿದ್ದುದು "ಅವಳ ವಯಸ್ಸಿಗೂ ಗಾತ್ರಕ್ಕೂ ತಾಳಮೇಳವಿಲ್ಲದಂತಿದ್ದ ಬೃಹದಾಕಾರದ ಎರಡು ಮೊಲೆಗಳು"(   ) ಆಕೆ ಕೆಳವರ್ಗದ ತೀರಾ ಕಡೆಗಣಿಸಲ್ಪಟ್ಟ ವರ್ಗದ ಮನತನದವಳಾಗಿದ್ದಾಳೆ. ಯಾವುದೇ ಪ್ರಬಲವಾದ ಅಂಶ ಇವಳನ್ನು ಪೋಷಿಸುವ–ಬೆಂಬಲಿಸುವ ಸ್ಥಿತಿ ಇಲ್ಲವಾಗಿದೆ. ಈ ಎಲ್ಲಾ ಕಾರಣಗಳಿಂದ ಇವಳನ್ನು ಸಹಜವಾಗಿ ಸಾಮಾಜಿಕ ವರ್ಗವು "ರಾಮಿ ರಾಮಿ ಹರಾಮಿ" ( ) ಎನ್ನುವ ಕೀಟಲೆ ಶುರುಮಾಡುತ್ತದೆ. ಆದರೆ ಇದೇ ಸ್ವಭಾವದ ಮೇಲ್ವರ್ಗದ ಹೆಣ್ಣನ್ನು ಗೌರವದಿಂದ ಕಾಣುವುದು ನಮ್ಮ ಸಮಾಜದ ರೀತಿಯಾಗಿದೆ. ನಿರೂಪಕನು ರಾಮಿಯ ವ್ಯಕ್ತಿತ್ವದ ಬಗ್ಗೆ ಹೆಚ್ಚೇನೂ ಮಾಹಿತಿ ಕೊಡುವುದಿಲ್ಲ. ಮದುವೆಯ ಸಂದರ್ಭದಲ್ಲಿ ಅವಳ ದೈಹಿಕವಾದ ಅಸಹಜ ಬೆಳವಣಿಗೆಯೊಂದನ್ನು ಮಾತ್ರ ಪ್ರಧಾನವಾಗಿಟ್ಟುಕೊಂಡು ಮಂದಣ್ಣ ಅವಳನ್ನು ನಿರಾಕರಿಸುತ್ತಾನೆ.

**ಸಮಾರೋಪ :**

ಭಾರತೀಯರ ಬದುಕಿಗೆ ಸಂಘರ್ಷ ಒಗ್ಗುವುದಿಲ್ಲ ಎಂಬುದನ್ನು ಮೊದಲನೇ ತಲೆಮಾರಿನ ಅನೇಕ ಬರಹಗಾರರು ತಮ್ಮ ಬರವಣಿಗೆಯಲ್ಲಿ ತೋರಿಸಿದ್ದಾರೆ. ಆದರೆ ಸಾಂಸ್ಕೃತಿಕವಾಗಿ ತನ್ನ ಅಸ್ತಿತ್ವವನ್ನು ಬೇರೆಯದೇ ಆದಂತಹ ರೀತಿಯಲ್ಲಿ ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾರೆ.

ಇಲ್ಲಿ ವ್ಯಕ್ತಿಯ ಆಂತರಿಕ ಸಂಘರ್ಷದ ನೆಲೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಇದನ್ನು ಆಯಾ ಪಠ್ಯದ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಗಮನಿಸುವ ಪ್ರಯತ್ನ ಮಾಡಲಾಗಿದೆ.

**ಪರಾಮರ್ಶನ ಗ್ರಂಥಗಳು :**

ಕುವೆಂಪು : ಕಾನೂರು ಹೆಗ್ಗಡತಿ: ಉದಯರವಿ ಪ್ರಕಾಶನ– ಮೈಸೂರು–02, 1997

ಕುವೆಂಪು : *ಮಲೆಗಳಲ್ಲಿ ಮದುಮಗಳು* : ಉದಯರವಿ ಪ್ರಕಾಶನ– ಮೈಸೂರು–02, 1997

ಜಿ. ಎಸ್. ಅಮೂರ : *ಸಮಕಾಲೀನ ಕಥೆ*, ಕಾದಂಬರಿ– ಹೊಸ ಪ್ರಯೋಗಗಳು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು, 1981.

ಜಿ. ಎಸ್. ಶಿವರುದ್ರಪ್ಪ (ಸಂ) : *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ* ಸಂಪುಟ–3, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಟಿ. ಪಿ. ಅಶೋಕ : *ಸಾಹಿತ್ಯ ಸಂದರ್ಭ*, ಅಕ್ಷರ ಪ್ರಕಾಶನ, ಸಾಗರ. 1991

ಡಾ.ಶಿವರಾಮ ಕಾರಂತ : *ಚೋಮನದುಡಿ* ಪ್ರಕಾಶಕರು– ಎಸ್. ಬಿ. ಎಸ್.ಪಬ್ಲಿಷರ್ಸ್ ಡಿಸ್ಟ್ರೀಬ್ಯೂಟರ್ಸ್, ಬೆಂಗಳೂರು–01.

ಡಾ. ಶಿವರಾಮ ಕಾರಂತ : *ಮೂಕಜ್ಜಿಯ ಕನಸುಗಳು*. ಪ್ರಕಾಶಕರು :–ಎಸ್. ಬಿ. ಎಸ್.ಪಬ್ಲಿಷರ್ಸ್ ಡಿಸ್ಟ್ರೀಬ್ಯೂಟರ್ಸ್, ಬೆಂಗಳೂರು–01,1996.

ಡಾ. ಶಿವರಾಮ ಕಾರಂತ: ಮೈ *ಮನಗಳ ಸುಳಿಯಲ್ಲಿ*, ಪ್ರಕಾಶಕರು–ಎಸ್. ಬಿ. ಎಸ್.ಪಬ್ಲಿಷರ್ಸ್ ಡಿಸ್ಟ್ರೀಬ್ಯೂಟರ್ಸ್, ಬೆಂಗಳೂರು–01. 1998

ಡಾ. ಎನ್. ಕೆ. ಕೋದಂಡರಾಮ : *ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ*. ಗಾಯಿತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, 1996.

ಪೂರ್ಣಚಂದ್ರ ತೇಜಸ್ವಿ : *ಕರ್ವಾಲೋ*, ಪುಸ್ತಕ ಪ್ರಕಾಶನ, ಸರಸ್ವತಿ ಪುರಂ, ಮೈಸೂರು, 2007

ಪೂರ್ಣಚಂದ್ರ ತೇಜಸ್ವಿ : *ಕಿರಗೂರಿನ ಗಯ್ಯಾಳಿಗಳು*, ಪುಸ್ತಕ ಪ್ರಕಾಶನ, ಸರಸ್ವತಿ ಪುರಂ, ಮೈಸೂರು, 2005.

# ಮಲೆನಾಡಿನ ಬುಡಕಟ್ಟು ಮಹಿಳೆ : ಒಂದು ಹಿನ್ನೋಟ

**ಡಾ.ಎಸ್.ಎಂ.ಮುತ್ತಯ್ಯ**

ಮಹಿಳೆಯರನ್ನು ಭಾರತೀಯ ಶ್ರೇಣೀಕೃತ ಸಮಾಜದಲ್ಲಿ ಎರಡನೇ ದರ್ಜೆಯ ಪ್ರಜೆಗಳನ್ನಾಗಿ ನೋಡಿರುವ ಕ್ರಮ ಎಲ್ಲರಿಗೂ ತಿಳಿದಿರುವ ಸಂಗತಿಯೇ. ಆದರೆ ಈ ಕ್ರಮ ಎಲ್ಲಾ ಕಾಲಕ್ಕೂ ಪ್ರದೇಶಕ್ಕೂ ಸಮುದಾಯಕ್ಕೂ ಒಂದೇ ಆಗಿದೆ ಎನ್ನುವಂತಿಲ್ಲ. ಭಾರತದ ದೀರ್ಘ ಪರಂಪರೆಯಲ್ಲಿ ಹೆಣ್ಣನ್ನು ಗೌರವದ ತುತ್ತ ತುದಿಯಲ್ಲಿರಿಸಿ ಪೂಜಿಸಿರುವುದೂ ಇದೆ. ಹಾಗೆಯೇ ಸೇವಕಿಯಂತೆ ಅತ್ಯಂತ ಕೀಳಾಗಿ ಕಂಡಿರುವ ನಿದರ್ಶನಗಳೂ ಇವೆ. ಇಂಥ ವಿಷಯದ ಚರ್ಚೆಯ ಸಂದರ್ಭದಲ್ಲಿ ಪದೇ ಪದೇ ಪ್ರಸ್ತಾಪವಾಗಿರುವ ಒಂದು ಸಂಗತಿಯೆಂದರೆ ಮಹಿಳೆ ಎಲ್ಲಿ ಉತ್ಪಾದನೆಯ ವ್ಯವಸ್ಥೆಯ ಪಾಲುದಾರಳಾಗಿದ್ದಾಳೋ ಅಲ್ಲಿ ಪುರುಷನಷ್ಟೇ ಸಮಾನವಾದ ಸ್ಥಾನಮಾನಗಳು ದೊರೆತಿವೆ. ಅಂತೆಯೇ ಉತ್ಪಾದನಾ ವ್ಯವಸ್ಥೆಯ ಬಳಕೆದಾರಳು ಮಾತ್ರ ಆಗಿರುವಲ್ಲಿ ಮಹಿಳೆ ಕೇವಲ ಸೇವಕಿಯಂತಾಗಿದ್ದಾಳೆ. ಈ ಮಾತನ್ನು ಸ್ವಲ್ಪ ಸರಳಗೊಳಿಸಿ ಹೇಳುವುದಾದರೆ : ದುಡಿಯುವ, ಶ್ರಮಿಕ ಗ್ರಾಮೀಣ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆಗೆ ಉನ್ನತ ಸ್ಥಾನಮಾನಗಳು ದೊರಕಿದ್ದರೆ ನಾಗರೀಕ ಸಮಾಜಗಳಲ್ಲಿ ಮಹಿಳೆ ಪುರುಷನ ಅಧೀನಳಾಗಿ ಬದುಕುವಂತಾಗಿದೆ.

ಶ್ರಮಿಕ ಸಮುದಾಯಗಳಲ್ಲಿ ಮಹಿಳೆಯರನ್ನು ಎಲ್ಲಾ ಕಾಲದಲ್ಲೂ ಪುರುಷನಷ್ಟೇ ಸಮಾನವಾಗಿ ಕಾಣಲಾಗಿದೆ ಎಂದು ಹೇಳುವಂತಿಲ್ಲ. ಏಕೆಂದರೆ ಅಲ್ಲಿಯೂ ಕೂಡ ಮಹಿಳೆ ನಾಗರೀಕ ಸಮಾಜಗಳಲ್ಲಿರುವಂತೆ ಶೋಷಿತಳಾಗಿರುವುದು ಕಂಡುಬರುತ್ತದೆ. ಇದಕ್ಕೆ ಪ್ರಧಾನವಾದ ಎರಡು ಕಾರಣಗಳಿವೆ. ಅವುಗಳಲ್ಲಿ ಮೊದಲನೆಯದು ಅವು ನಂಬಿರುವ ನಂಬಿಕೆಯ ಜಗತ್ತು, ಎರಡನೆಯದು ವೈದಿಕ ಸಂಸ್ಕೃತಿಯ ಪ್ರಭಾವ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಜನ ಸಮುದಾಯಗಳ ಬದುಕಿನ ಕ್ರಮಗಳನ್ನು ಪರಿಶೀಲಿಸುವುದು ಅತ್ಯಂತ ಕುತೂಹಲದ ಸಂಗತಿ. ಇಂಥ ಪ್ರಯತ್ನದ ಭಾಗವಾಗಿ ಕರ್ನಾಟಕದ ಮಲೆನಾಡು ಪ್ರದೇಶದಲ್ಲಿ ನೆಲೆನಿಂತಿರುವ ಬುಡಕಟ್ಟು ಸಮುದಾಯಗಳ ಬದುಕುಗಳನ್ನು ಪರಿಶೀಲಿಸುವ ಪ್ರಯತ್ನ ಈ ಲೇಖನದ್ದು.

**ಮಲೆನಾಡು ಮತ್ತು ಬುಡಕಟ್ಟು ಸಮುದಾಯಗಳು**

ಅರಣ್ಯ ಮತ್ತು ಬೆಟ್ಟಗಳಿಗೂ, ಬುಡಕಟ್ಟುಗಳಿಗೂ ಅವಿನಾಭಾವ ಸಂಬಂಧ. ಬುಡಕಟ್ಟುಗಳು ತಮ್ಮ ನಂಬಿಕೆ ಹಾಗೂ ಆಹಾರ ಅಗತ್ಯಗಳನ್ನು ಈಡೇರಿಸಿಕೊಳ್ಳಲು ಇಂಥ ಪ್ರದೇಶಗಳು ಅತೀ ಪ್ರಶಸ್ತವಾದ ತಾಣಗಳು. ಹಾಗಾಗಿಯೇ ಜಗತ್ತಿನ ಬಹುತೇಕ ಬುಡಕಟ್ಟುಗಳು ಅರಣ್ಯಗಳಲ್ಲಿಯೇ ತಮ್ಮ ನೆಲೆಗಳನ್ನು ಕಂಡುಕೊಂಡಿವೆ. ಅದರಲ್ಲೂ ಮಲೆನಾಡಿನ ಸಹ್ಯಾದ್ರಿ ತಪ್ಪಲುಗಳಲ್ಲಿ ಹಲವಾರು ಪ್ರಧಾನ ಬುಡಕಟ್ಟುಗಳು ತಮ್ಮ ಬದುಕನ್ನು ರೂಪಿಸಿಕೊಂಡು ಬದುಕುತ್ತಿವೆ. ಮಲೆನಾಡಿನ ಜಿಲ್ಲೆಗಳಲ್ಲಿ ಉತ್ತರ ಕನ್ನಡ ಜಿಲ್ಲೆ ಅತೀ ಹೆಚ್ಚು ಬುಡಕಟ್ಟುಗಳಿಗೆ ಆಶ್ರಯ ತಾಣವಾಗಿದೆ. ಹಾಗೆಯೇ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿಯೂ ಕೆಲವಾರು ಸಮುದಾಯಗಳು ನೆಲೆನಿಂತಿವೆ. ಮಲೆನಾಡಿನ ಅಂಥ ಕೆಲವು ಬುಡಕಟ್ಟುಗಳನ್ನು ಹೆಸರಿಸುವುದಾದರೆ : ಹಸಲರು, ಗೌಳಿಗರು, ಗೌಡಾಲು, ಹಕ್ಕಿಪಿಕ್ಕಿಗಳು, ಸಿದ್ಧಿಗಳು, ಕೊರಗರು, ಮಾಲೇರು, ಮಲೆಕುಡಿಯರು, ಕರೆಒಕ್ಕಲು, ಕುಡುಬಿಗಳು ಇತ್ಯಾದಿ. ಈ ಸಮುದಾಯಗಳು ಇಂದಿಗೂ ತಮ್ಮ ಅಸ್ಮಿತೆಯೊಂದಿಗೆ ಜೀವನ ನಡೆಸುತ್ತಿವೆ. ಆಧುನಿಕತೆ ತೀವ್ರತರವಾದ ಹೊಡೆತಗಳಿಗೆ ಸಿಕ್ಕು ಅಧಿಕಾರ ಹಾಗೂ ಆಸೆಯ ಮನೋಭಾಗಳ ಮಧ್ಯೆ ಹೊಸದನ್ನು ಪಡೆಯುವ ಹಂಬಲ, ಪರಂಪರೆಯನ್ನು ಮೀರಲಾರದ ತಲ್ಲಣಗಳ ನಡುವೆ ಹೆಣಗಾಡುತ್ತಿರುವ ಈ ಸಮುದಾಯಗಳು ಹಳೆಯ ಮತ್ತು ಹೊಸದರ ಸಮ್ಮಿಶ್ರವಾದ ಬದುಕನ್ನು ಸಾಗುಸುತ್ತಿವೆ.

**ಬುಡಕಟ್ಟುಗಳು ಮತ್ತು ಮಹಿಳೆ**

ಬುಡಕಟ್ಟುಗಳು ಮೂಲತಃ ಪ್ರಕೃತಿಗೆ ಹತ್ತಿರವಾಗಿ ಬದುಕುವ ಜನಗುಂಪುಗಳಾಗಿದ್ದು, ಶ್ರಮವನ್ನೇ ಆಧರಿಸಿ ಬದುಕುವಂತಹವುಗಳು. ಹಾಗಾಗಿ ಬಹುತೇಕ ಬುಡಕಟ್ಟುಗಳಲ್ಲಿ ಲಿಂಗಬೇಧದ ಕಲ್ಪನೆ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಪ್ರಮಾಣದಲ್ಲಿರುತ್ತದೆ. ಆದರೆ ಇವರ ಪರಿಶುದ್ಧತೆಯ ಪರಿಕಲ್ಪನೆಗಳು, ಅಲೌಕಿಕ ಭಾವನೆಗಳು ಮತ್ತು ಹೊರಗಿನ ಸಂಸ್ಕೃತಿಯ ಪ್ರಭಾವಗಳ ಕಾರಣದಿಂದ ಸ್ತ್ರೀಯರ ಬಗೆಗಿನ ನಂಬಿಕೆಗಳು ನಾಗರೀಕ ಜಗತ್ತಿನ ಸಮಾಜಗಳಲ್ಲಿರುವಂತೆ ಶೋಷಕ ನೆಲೆಯವು ಎನ್ನುವ ಅನುಮಾನಗಳನ್ನು ಸೃಷ್ಟಿಸುತ್ತವೆ. ಈ ಸಂದರ್ಭಗಳಲ್ಲಿ ಇಂಥ ವಿಷಯಗಳನ್ನು ಪರಿಶೋಧಿಸುವಾಗ ಶೋಧಕರಿಗೆ ಎಚ್ಚರದ ದೃಷ್ಟಿಯೊಂದು ಇರಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಹೊರಗಿನ ಪ್ರಭಾವಗಳಿಂದ ಬಂದಿರುವ ಶೋಷಕ ದೃಷ್ಟಿ ಇವರಲ್ಲಿ ಅಳವಡಿಕೆಯಾಗಿರುವ ಕ್ರಮಗಳನ್ನು ಗಮನಿಸದರೆ ಮೂಲಕ್ಕಿಂತ ಭಿನ್ನವಾಗಿ ತಮ್ಮದೇ ಆದ ಸಮಾನತೆಯ ದೃಷ್ಟಿಯನ್ನು ಪ್ರಕಟಪಡಿಸುತ್ತವೆ. ಇಂಥ ಸೂಕ್ಷ್ಮ ಬದಲಾವಣೆಗಳನ್ನು ಗಮನಿಸುವುದು ಸಾಧ್ಯವಾಗದಿದ್ದರೆ

ಬುಡಕಟ್ಟು ಸಮುದಾಯಗಳು ಎಲ್ಲ ನಾಗರೀಕ ಸಮುದಾಯಗಳಂತೆ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿ ನೋಡಿವೆ ಎಂಬ ಅಪಕ್ವತೆಯ ತೀರ್ಮಾನಗಳಿಗೆ ಬರುವ ಅಪಾಯವಿರುತ್ತದೆ. ಈ ಸ್ಪಷ್ಟ ತಿಳುವಳಿಕೆಯೊಂದಿಗೆ ಮಲೆನಾಡಿನ ಕೆಲವು ಬುಡಕಟ್ಟುಗಳ ಜೀವನ ವಿಧಾನಗಳನ್ನು ಗಮನಿಸುವ ಪ್ರಯತ್ನವನ್ನು ಇಲ್ಲಿ ಮಾಡಬಹುದಾಗಿದೆ.

ಯಾವುದೇ ಒಂದು ಸಮುದಾಯದ ಬದುಕಿನಲ್ಲಿ ಮಹಿಳೆಯರಿಗೆ ಇರುವ ಸ್ಥಾನಮಾನಗಳನ್ನು ತಿಳಿಯಬೇಕಾದರೆ ಆ ಸಮುದಾಯದ ಬದುಕಿನ ಕ್ರಮಗಳನ್ನು ಗಮನಿಸಬೇಕಾಗುತ್ತದೆ. ಮುಖ್ಯವಾಗಿ ಬುಡಕಟ್ಟುಗಳಲ್ಲಿ ಬಳಕೆಯಲ್ಲಿರುವ ನಂಬಿಕೆ–ಸಂಪ್ರದಾಯ–ಆಚರಣೆಗಳು, ಕಟ್ಟು–ಕಟ್ಟಳೆ, ವಿಧಿ ವಿಧಾನಗಳು, ವೈವಾಹಿಕ ನಡಾವಳಿಗಳು, ಉಡುಗೆ ತೊಡುಗೆ, ಆಭರಣಗಳು ಇವೇ ಮೊದಲಾದ ಸಂಗತಿಗಳಲ್ಲಿ ಹುಡುಕಾಡಬೇಕೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಮಲೆನಾಡಿನ ಬುಡಕಟ್ಟುಗಳಲ್ಲಿ ಮಹಿಳೆಯರಿಗೆ ಇರುವ ಗೌರವ ಮತ್ತು ಸ್ಥಾನಮಾನಗಳನ್ನು ಮುಂದಿನಂತೆ ಪರಿಶೀಲಿಸಬಹುದು.

**ಸೂತಕದ ಕಲ್ಪನೆ**

ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ನೋಡಬಹುದಾದ ಬಹುಮುಖ್ಯ ವಿಷಯ ಸೂತಕಕ್ಕೆ ಸಂಬಂಧಿಸಿದ್ದು. ಹೆಣ್ಣಿನ ಜೀವನದ ಮಹತ್ವದ ಘಟ್ಟ ಋತುಮತಿ ಮತ್ತು ಹೆರಿಗೆ ಸಂದರ್ಭದ್ದು. ಇವೆರಡು ಸಂದರ್ಭಗಳಲ್ಲಿ ಮಹಿಳೆಯರನ್ನು ಮನೆಯಿಂದ ಹೊರಗಿಡುವ ಸಂಪ್ರದಾಯಗಳು ಬಹುತೇಕ ಎಲ್ಲಾ ಬುಡಕಟ್ಟುಗಳಲ್ಲಿ ಆಚರಣೆಯಲ್ಲಿವೆ. ಹಾಗಾಗಿ ಮಲೆನಾಡಿನ ಬುಡಕಟ್ಟುಗಳಲ್ಲಿಯೂ ಈ ಸಂಪ್ರದಾಯಗಳು ಜೀವಂತ ಆಚರಣೆಗಳಾಗಿ ಕ್ವಚಿತ್ತಾಗಿ ಮುಂದುವರೆದಿವೆ. ಮಡಿವಂತಿಕೆಯ ಭಾವನೆಯಿರುವ ಈ ಸಮುದಾಯಗಳಲ್ಲಿ ಋತುಮತಿ ಮತ್ತು ಹೆರಿಗೆ ನಾಗರೀಕ ಸಮುದಾಯಗಳಿಗಿಂತ ಚೂರು ಹೆಚ್ಚಿನ ಮೈಲಿಗೆಯಾಗಿ ಕಂಡಿವೆ. ಹಾಗಾಗಿಯೇ ಈ ಸಂದರ್ಭಗಳಲ್ಲಿ ಮಹಿಳೆಯರನ್ನು ದಿನನಿತ್ಯದ ವಾಸದ ಮನೆಯಿಂದ ಬೇರ್ಪಡಿಸಿ ಅದಕ್ಕೆಂದೇ ಮನೆಯಿಂದ ತುಸು ದೂರದಲ್ಲಿ ನಿರ್ಮಿಸಿದ ಪ್ರತ್ಯೇಕ ಗುಡಿಸಲಲ್ಲಿ ಇರಿಸುವ ಪದ್ಧತಿಗಳಿದ್ದವು. ಇನ್ನೂ ಕೆಲವು ಪಂಗಡಗಳಲ್ಲಿ ಪ್ರತೀ ತಿಂಗಳು ಮನೆಯ ಹೊರಗಡೆ ಇಡುವ ಪದ್ಧತಿ ಇತ್ತು. ಆದರೆ ಈಗ ಬಹುತೇಕ ಗುಂಪುಗಳಲ್ಲಿ ಈ ಆಚರಣೆಗಳು ಇಂದು ಯಥಾವತ್ತಾಗಿ ಉಳಿದುಬಂದಿಲ್ಲ. ನಿದರ್ಶನಕ್ಕೆ ಗಮನಿಸುವುದಾದರೆ :

1. ಮಲೆನಾಡಿನ ಪ್ರಮುಖ ಬುಡಕಟ್ಟುಗಳಲ್ಲಿ ಒಂದಾದ ಹಸಲರಲ್ಲಿ ಹಿಂದೆ ಈ ಪದ್ಧತಿ ಕಟ್ಟುನಿಟ್ಟಾಗಿ ಆಚರಣೆಗೊಳ್ಳುತ್ತಿದ್ದು ಈಗ ಬದಲಾವಣೆಯಾಗಿದೆ. ಪ್ರಸ್ತುತ ಹಸಲರಲ್ಲಿ ಋತುಮತಿಯಾದ ಹೆಣ್ಣನ್ನು ಮನೆಯ ಒಳಗಡೆ ಸ್ನಾನ ಮಾಡಿಸುವುದಿಲ್ಲ ಅಷ್ಟೇ. ಹಳ್ಳದಲ್ಲಿಯೋ ಅಥವಾ ಹತ್ತಿರ ಕೆರೆಯಲ್ಲಿಯೋ ಸ್ನಾನ ಮಾಡಿಸಿ ಮನೆಯ ಒಳಗಡೆ ಕರೆದುಕೊಳ್ಳುತ್ತಾರೆ. ಇನ್ನೂ ಮನೆಯಲ್ಲಿಯೇ ಹೆರಿಗೆ ಮಾಡಿಸುತ್ತಾರೆ. ಮಗು ಜನನವಾದ ಮೂರು, ಏಳು ಮತ್ತು ಹನ್ನೊಂದನೇ ದಿನಗಳಲ್ಲಿ ತಮ್ಮನ್ನು ತಮ್ಮ ಮನೆಯನ್ನು ಶುದ್ಧಗೊಳಿಸಿಕೊಳ್ಳುತ್ತಾರೆ.
2. ಮಲೆನಾಡಿನ ಮತ್ತೊಂದು ಬುಡಕಟ್ಟು ಗೌಡಾಲು ಸಮುದಾಯದಲ್ಲಿ ಋತುಮತಿಯಾದ ಹೆಣ್ಣನ್ನು ತಮ್ಮ ಮನೆಯ ಪಕ್ಕದಲ್ಲೇ ಒಂದು ಪ್ರತ್ಯೇಕ ಗುಡಿಸಲು ನಿರ್ಮಿಸಿ ಅಲ್ಲಿರಿಸುತ್ತಾರಾದರೂ ಅವಳನ್ನು ಅಸ್ಪೃಶ್ಯಳಂತೆ ಕಾಣುವುದಿಲ್ಲ. ಬದಲಿಗೆ ದಿನಂಪ್ರತಿ ಮುತ್ತೈದೆಯರು ಸೇರಿ ಅರಿಶಿನ ಸ್ನಾನ ಮಾಡಿಸುತ್ತಾರೆ. ಅವಳಿಗೆ ಪ್ರಿಯವಾದ ಆಹಾರ ಕೊಡುತ್ತಾರೆ. ಅಷ್ಟೇ ಅಲ್ಲದೆ ಸೋಬಾನೆ ಪದಗಳನ್ನು, ತಮಾಷೆಯ ಮಾತುಗಳನ್ನು ಹೇಳಿ ಸಂತೃಪ್ತಿಗೊಳಿಸುತ್ತಾರೆ. ಹೆರಿಗೆ ಸಮಯದಲ್ಲೂ ಹೀಗೆ ಮನೆಯಿಂದ ಪ್ರತ್ಯೇಕಿಸಿದರೂ ಅವಳಿಗೆ ಬೇಕಾದ ಉಪಚಾರವನ್ನು ಮಾಡುತ್ತಾರೆ.

ಇಂಥ ಸಂದರ್ಭಗಳಲ್ಲಿ ಗಮನಿಸಲೇ ಬೇಕಾಗಿರುವ ಸಂಗತಿಯೆಂದರೆ – ಈ ಸಮುದಾಯಗಳಲ್ಲಿ ಋತುಮತಿ ಹಾಗೂ ಹೆರಿಗೆ ಸಂದರ್ಭದಲ್ಲಿ ಮನೆಯಿಂದ ಹೊರಗಿಡುತ್ತಾರೆ ಎಂಬುದನ್ನು ಕೇವಲ ಒಂದು ದೋಷವೆಂಬಂತೆ ಗ್ರಹಿಸುವುದು ನಮ್ಮಲ್ಲಿ ಸಾಮಾನ್ಯವಾಗಿದೆ. ಆದರೆ ನಿಜ ಸ್ಥಿತಿಯನ್ನು ನೋಡಿದರೆ ಅವರು ಮನೆಯಿಂದ ಹೊರಗಿಡುವ ಪದ್ಧತಿ ಒಂದು ಕಾಲಕ್ಕೆ ಅಗತ್ಯವಾಗಿ ಮಾಡಬೇಕಿದ್ದ ಕ್ರಮವಾದಂತಿದೆ. ಹೊರಗಿಟ್ಟವರು ಅವಳ ಯೋಗಕ್ಷೇಮದ ಬಗ್ಗೆ ಚಿಂತಿಸದೆ ಇದ್ದಿದ್ದರೆ ನಮ್ಮ ಈ ನಿಲುವು ಸರಿಯೆನಿಸುತ್ತಿತ್ತು. ಆದರೆ ಹೊರಗಿಟ್ಟ ಹೆಣ್ಣಿನ ಬಗ್ಗೆ ಅವರ ಪೋಷಕರು ಹೊಂದಿರುವ ಕಾಳಜಿ ಅಪಾರ. ಅಷ್ಟಕ್ಕೂ ಹೊರಗಿಡುವ ಈ ಪದ್ಧತಿಯಲ್ಲಿ ಪಾರಂಪರಿಕ ದೇಸಿ ಜ್ಞಾನವೊಂದಿದೆ ಎನ್ನುವುದನ್ನು ನಾವು ನಂಬಲೇಬೇಕು. ಪ್ರತ್ಯೇಕವಾಗಿ ನಿರ್ಮಿಸುವ ಗುಡಿಸಲುಗಳ ನಿರ್ಮಾಣಕ್ಕೆ ಬಳಸುತ್ತಿದ್ದ ಸೊಪ್ಪು, ಬೇವು, ಹೊಂಗೆ ಮತ್ತಿತರ ಔಷಧೀಯ ಗುಣವಿರುವ ಮರಗಿಡಗಳಿಂದ ಪಡೆದದ್ದು, ಇನ್ನೂ ಹೆಣ್ಣಿನ ಈ ಜೈವಿಕ ಬದಲಾವಣೆಯ ಸೂಕ್ಷ್ಮ ಸಮಯಕ್ಕೆ ಸ್ವತಃ ಆ ಹೆಣ್ಣಿಗೂ ಕೂಡ ಸಾಮಾನ್ಯ ಜನರಿಂದ ತಗಲಬಹುದಾದ ಸಾಂಕ್ರಮಿಕ ರೋಗಗಳ ಬಗೆಗಿನ ಅರಿವು ಇದಾಗಿರಲು ಸಾಧ್ಯ. ಈ ಕ್ರಮಗಳು ವಿಫುಲ ಆರೋಗ್ಯ ಸೌಲಭ್ಯಗಳಿರುವ ಇಂದಿನ ನಾಗರೀಕ ಸಮಾಜಕ್ಕೆ ಅನಗತ್ಯ ಎನಿಸಿರುವುದು ಸಹಜವೇ ಆದರೂ ಒಂದು ಕಾಲ ಸಂದರ್ಭಕ್ಕೆ ಈ ಆಚರಣೆಗಳು ಅಗತ್ಯವಾಗಿದ್ದವು ಎಂಬುದನ್ನು ನಿರಾಕರಿಸಲಾದೀತೆ?

ಆಧುನಿಕ ಚಿಕಿತ್ಸಾ ಸೌಲಭ್ಯಗಳನ್ನು ಪಡೆಯಲು ಸಾಧ್ಯವಿಲ್ಲದಿರುವ ಅದೆಷ್ಟೋ ಸಮುದಾಯಗಳಿಗೆ ಇವು ಅನುಸರಣಾ ಯೋಗ್ಯವೆಂದೆನಿಸದರೆ ಅದರಲ್ಲಿ ತಪ್ಪೇನು? ಎಂಬ ಪ್ರಶ್ನೆಗಳನ್ನು ಇಲ್ಲಿ ಕೇಳಿಕೊಳ್ಳಬೇಕಾದುದು ಇಂದಿನ ತುರ್ತಾಗಿದೆ. ಹಾಗಾಗಿ ಆದಿವಾಸಿ ಸಮುದಾಯಗಳು ಹಾಗೂ ನಾಗರೀಕ ಸಮಾಜಗಳು ಇಲ್ಲಿ ಬಳಸುವ ಮೈಲಿಗೆ, ಸೂತಕ ಎಂಬ ಪದಗಳನ್ನು ಮತ್ತೊಮ್ಮೆ ಬಹುಮುಖೀ ವ್ಯಾಖ್ಯಾನಕ್ಕೆ ಒಳಪಡಿಸಬೇಕಿದೆ. ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಆರಂಭವಾದ ಈ ಆಚರಣೆಗಳು ಕಾಲಾನಂತರ ಆಚರಣೆ ಮಾಡುವವರಿಗೆ ಕೇವಲ ಸಂಪ್ರದಾಯದ ಮುಂದುವರಿಕೆಗಳಾಗಿ ಮಾರ್ಪಾಡಾಗಿರುವುದರ ಬಗ್ಗೆಯೂ ವಿಚಾರ ಮಂಥನ ಮಾಡಬೇಕಿದೆ. ಈ ಸಂದರ್ಭಗಳೆಲ್ಲ ನಾವು ನೆನಪಿಡಬೇಕಾದ ಅಂಶವೆಂದರೆ ಪರಂಪರೆಯ ಯಾವ ಆಚರಣೆಯೂ ದುರುದ್ದೇಶದಿಂದಾಗಲೀ, ನಿರರ್ಥಕವಾಗಿಯಾಗಲೀ ಆರಂಭಗೊಂಡಿರುವುದಿಲ್ಲ. ಕೆಲವೊಮ್ಮೆ ಅನ್ಯ ಸಂಸ್ಕೃತಿಗಳ ಶೋಷಕ ಪ್ರವೃತ್ತಿ ಇಂತಹ ಆಚರಣೆಗಳನ್ನು ತಮಗೆ ಅನುಕೂಲವಾಗುವಂತೆ ಮಾರ್ಪಡಿಸಿ ಚಾಲ್ತಿಗೆ ಬಿಟ್ಟಿರುತ್ತವೆ. ಈ ಬಗ್ಗೆ ಎಚ್ಚರದ ನೋಟಗಳ ಅಗತ್ಯತೆ ತುಂಬಾ ಇದೆ.

**ಬಾಲ್ಯ ವಿವಾಹ**

ನಮ್ಮ ನಾಗರೀಕ ಸಮಾಜವನ್ನು ಕಾಡುತ್ತಿರುವ ಸಾಮಾಜಿಕ ಪಿಡುಗುಗಳಲ್ಲಿ ಬಾಲ್ಯವಿವಾಹ ಬಹುಮುಖ್ಯವಾಗಿತ್ತು. ಈಗಲೂ ಕೆಲವೊಂದು ಕಡೆ ಇರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗುವುದನ್ನು ನಾವು ಕಾಣುತ್ತಿದ್ದೇವೆ. ಬುಡಕಟ್ಟು ಸಮುದಾಯಗಳಲ್ಲಿ ಬಹುಪಾಲು ಸಮುದಾಯಗಳಲ್ಲಿ ಬಾಲ್ಯ ವಿವಾಹ ಪದ್ಧತಿ ಇತ್ತೆಂದು ತಿಳಿದುಬರುತ್ತದೆ. ಹಾಗೆಯೇ ಅನೇಕ ಸಮುದಾಯಗಳಲ್ಲಿ ಈ ಪದ್ಧತಿ ಬಳಕೆಯಲ್ಲಿರಲಿಲ್ಲ. ಉದಾ : ಹಸಲರು ಮತ್ತಿತರ ಬುಡಕಟ್ಟು ಸಮುದಾಯಗಳಲ್ಲಿ ಈ ಪದ್ಧತಿ ಇಲ್ಲ. ಈ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದ ಸಮುದಾಯಗಳಲ್ಲಿ ಕಾಲಾನಂತರ ಸಾಕಷ್ಟು ಬದಲಾವಣೆಗಳಾಗಿವೆ. ಉದಾ : ಗೌಳಿಗರಲ್ಲಿ ತೊಟ್ಟಿಲಲ್ಲಿ ಇರುವ ಮಕ್ಕಳಿಗೆ ವಿವಾಹ ಮಾಡುತ್ತಿದ್ದವರು ಬರುಬರುತ್ತಾ ಮೈನೆರೆಯುವ ಮುನ್ನವೇ ಮದುವೆ ಮಾಡಲಾರಂಭಿಸಿದರು. ಇವರಲ್ಲಿ ಇತ್ತೀಚೆಗೆ ಸಾಮಾನ್ಯವಾಗಿ ಸೂಕ್ತ ವಯೋಮಾನಕ್ಕೆ ಅನುಗುಣವಾಗಿ ಮದುವೆಗಳು ನಡೆಯುತ್ತಿವೆ.

**ವೈವಾಹಿಕ ನಡಾವಳಿಗಳು**

ಯಾವುದೇ ಪುರಷ ಮತ್ತು ಮಹಿಳೆಗೆ ತಮ್ಮ ಜೀವನದ ಬಹಳ ಮಹತ್ವದ ಘಟ್ಟ ವಿವಾಹ. ವಿವಾಹದ ಈ ಪ್ರಕ್ರಿಯೆಯಲ್ಲಿ ಸಂಗಾತಿಯ ಆಯ್ಕೆಯಿಂದ ಹಿಡಿದು ಸಮಬಾಳ್ವೆಯವರೆಗೂ ಮಹಿಳೆ ಸಾಕಷ್ಟು ಸಂಕಟ ಸಂಭ್ರಮಗಳನ್ನು ಅನುಭವಿಸುತ್ತಾಳೆ. ಅದರಲ್ಲಿ ಮುಖ್ಯವಾಗಿ ಆಯ್ಕೆಯ ಸ್ವಾತಂತ್ರ್ಯ, ಮನೆಯಲ್ಲಿ ಗಂಡನಷ್ಟೇ ಗೌರವದ ಸ್ಥಾನಮಾನ, ವರದಕ್ಷಿಣೆಯೆಂಬ ಹಿಂಸಾತ್ಮಕ ಪ್ರವೃತ್ತಿ, ಗಂಡನನ್ನು ಕಳೆದುಕೊಂಡ ವೈಧವ್ಯದ ನೋವು ಮತ್ತಿತರ ವಿಷಯಗಳಲ್ಲಿ ನಾಗರಿಕ ಎಂದುಕೊಂಡಿರುವ ಸಮಾಜದ ಮಹಿಳೆಯರ ಸ್ಥಿತಿಯನ್ನು ನಾವೆಲ್ಲರೂ ಇಂದು ದಿನಬೆಳಗಾದರೆ ಕಾಣುತ್ತಿದ್ದೇವೆ. ಇಂತಹ ಸಂದರ್ಭಗಳಲ್ಲಿ ಅನಾಗರಿಕ ಸಮುದಾಯಗಳೆಂದು ಕರೆಸಿಕೊಂಡಿರುವ ಬುಡಕಟ್ಟು ಸಮುದಾಯಗಳು ಇಂಥ ವಿಷಯದಲ್ಲಿ ಅನುಸರಿಸಿದ ಮಾದರಿಗಳನ್ನು ನೋಡಬೇಕು. ಈ ಹಿನ್ನೆಲೆಯಲ್ಲಿ ನೋಡಲೇಬೇಕಾದ ಒಂದೆರಡು ಮಾದರಿಗಳೆಂದರೆ: ತೆರ ಕೊಡುವ ಪದ್ಧತಿ, ಅಂತರ್‌ಕುಲದ ವಿವಾಹ, ಸೀರುಡಿಕೆ ಪದ್ಧತಿ, ಸ್ವಗೋತ್ರ ವಿವಾಹ ನಿಷೇಧ. ಇವುಗಳ ವಿಶೇಷತೆಗಳೇನು ಎಂಬುದನ್ನು ಮುಂದಿನಂತೆ ವಿವರಿಸಿಕೊಳ್ಳಬಹುದು

**ಅ. ತೆರ ಪದ್ಧತಿ**

ಇಂದಿನ ಸಮಾಜದ ಬಹುದೊಡ್ಡ ಸಮಸ್ಯೆ ವರದಕ್ಷಿಣೆ. ವರದಕ್ಷಿಣೆಯ ಕಾರಣಕ್ಕಾಗಿ ಹಲವಾರು ಮಹಿಳೆಯರು ಇನ್ನಿಲ್ಲದಂತಹ ಸಂಕಷ್ಟಗಳನ್ನು ಎದುರಿಸುತ್ತಿರುವುದು ಸಮಾನ್ಯವೆಂಬಂತಾಗಿದೆ. ಈ ಪಿಡುಗನ್ನು ಹೋಗಲಾಡಿಸಲು ಸಾಕಷ್ಟು ಕಾಯಿದೆಗಳನ್ನು ಜಾರಿಗೆ ತಂದಿದ್ದಾಗ್ಯೂ ಪರಿಸ್ಥಿತಿ ಸುಧಾರಿಸಿಲ್ಲ. ಇಂಥ ಸಂಕಟದ ಕಾಲದಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ಚಾಲ್ತಿಯಲ್ಲಿರುವ ತೆರ ಪದ್ಧತಿಯ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವೆನಿಸುತ್ತಿದೆ. ಮಲೆನಾಡಿನ ಬುಡಕಟ್ಟುಗಳಲ್ಲಿ ಹಿಂದೆ ಗಟ್ಟಿಯಾಗಿ ಅಸ್ತಿತ್ವದಲ್ಲಿದ್ದು ಈಗ ಸ್ವಲ್ಪಮಟ್ಟಿಗೆ ಹಿನ್ನೆಲೆಗೆ ಸರಿದಿರುವ ತೆರ ಕೊಡುವ ಸಂಪ್ರದಾಯ ನಮ್ಮ ಭವಿಷ್ಯದ ಕಗ್ಗತ್ತಲ ಬದುಕಿಗೆ ಬೆಳಕಾಗುವಂತೆ ಕಾಣಿಸುತ್ತಿದೆ. ಪ್ರಾಚೀನ ಕಾಲದಿಂದಲೂ ಆದಿಮಾ ಸಮುದಾಯಗಳಲ್ಲಿ ಪ್ರಚಲಿತವಿದ್ದ ತೆರ ಪದ್ಧತಿಯಲ್ಲಿ ಗಂಡಿನ ಕಡೆಯವರು ಹೆಣ್ಣಿನ ತಂದೆ ತಾಯಿಗೆ ತಮ್ಮ ಶಕ್ತಿಗನುಸಾರವಾಗಿ ಹಣ ಮತ್ತು ಧಾನ್ಯಗಳನ್ನು ನೀಡುವ ಪದ್ಧತಿಯನ್ನೇ ತೆರ ಕೊಡುವ ಪದ್ಧತಿ ಎನ್ನುವರು. ಇದನ್ನು ಆಧುನಿಕರು ವಧುದಕ್ಷಿಣೆ ಪದ್ಧತಿಯೆಂತಲೂ ಕರೆದುಕೊಂಡಿರುವುದುಂಟು. ಇದು ಅತ್ಯಂತ ಸಾಂಕೇತಿಕ ಆಚರಣೆಯಾಗಿದ್ದು ಇಂತಿಷ್ಟೇ ಕೊಡಬೇಕೆಂಬ ಕಟ್ಟುನಿಟ್ಟಿನ ನಿಯಮಗಳಿಲ್ಲ. ಉದಾ : ಗೌಳಿಗರ ಜಾಜ್ ಎಂಬ ಹೆಸರಲ್ಲಿ ಕರೆಯುವ ತೆರ ಕೊಡುವ ಪದ್ಧತಿಯಲ್ಲಿ 1500–3000 ರೂಗಳನ್ನು ನೀಡುವುದು ಒಂದು ಕ್ರಮವಾದರೆ; ಕುಡಬಿಗಳಲ್ಲಿ ದೇವರ ಮರ್ಯಾದೆ ಎಂದು ಕೇವಲ 25 ರೂಪಾಯಿ

ದುಡ್ಡು ಮತ್ತು ಒಂದಿಷ್ಟು ವಸ್ತುಗಳನ್ನು ನೀಡುತ್ತಾರೆ; ಕರೆ ಒಕ್ಕಲರು 32 ಬೆಳ್ಳಿ ನಾಣ್ಯಗಳು( 500 ರೂ.ಗೆ ಸಮ), 15-20 ಚೀಲ ಬತ್ತ, 4-5 ಡಬ್ಬಿ ಬೆಲ್ಲ ನೀಡುತ್ತಾರೆ. ಹಾಗೆಯೇ ಗೌಡಾಲು ಜನಾಂಗದಲ್ಲಿ 12 1/4 ರೂ. ಮಾತ್ರ ತೆರ ಕೊಡುವ ಕ್ರಮವಿದೆ. ಈ ಪದ್ಧತಿ ಹೆಣ್ಣುಗಳು ಸಿಗುವುದೇ ಅಪರೂಪವಾಗಿರುವ ಸಂದರ್ಭದಲ್ಲಿ ಹುಟ್ಟಿಕೊಂಡು ಇಂದಿಗೂ ಕೆಲವಡೆ ಯಥಾವತ್ತಾಗಿ ಇನ್ನೂ ಕೆಲವೆಡೆ ಸಾಂಕೇತಿಕವಾಗಿ ಉಳಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ತೆರ ಪದ್ಧತಿ ಸಂಬಂಧಗಳಲ್ಲಿ ವಿರಸವನ್ನು ಉಂಟುಮಾಡಿದ್ದು ಅತೀ ವಿರಳವೆನ್ನಬಹುದು. ಇಂದಿನ ವರದಕ್ಷಿಣೆಯಂತೆ ಬಹಿರಂಗವಾಗಿಯೋ ಇಲ್ಲವೇ ಗುಪ್ತವಾಗಿಯೋ ಕುಳಿತು ಮಾತನಾಡುವ ಕ್ರಮಗಳು ಇದ್ದಂತಿಲ್ಲ. ಹಾಗಾಗಿ ಯಾರನ್ನು ಯಾರು ಇಂತಿಷ್ಟೇ ಕೊಡಬೇಕೆಂದು ಒತ್ತಾಯಿಸುವ ಪ್ರಮೇಯವೇ ಇಲ್ಲಿರುವುದಿಲ್ಲ. ಇದೊಂದು ಆರೋಗ್ಯಪೂರ್ಣ ಪದ್ಧತಿ ಎನ್ನುವುದಕ್ಕೆ ಅಡ್ಡಿಯಿಲ್ಲ.

**ಆ. ಸೀರುಡಿಕೆ**

ಪ್ರಸ್ತುತ ಭಾರತೀಯ ಸಮಾಜದಲ್ಲಿ ಇಂದಿಗೂ ಜಾರಿಯಲ್ಲಿರುವ ವಿಧವಾ ಪದ್ಧತಿ ಮಹಿಳೆಯರ ದೊಡ್ಡ ಶತೃ. ಸಹಜವಾಗಿ ಪರಸ್ಪರ ಸಂಗಾತಿಗಳನ್ನು ಕಳೆದುಕೊಂಡಾಗ ಅಥವಾ ಸುಗಮ ಸಂಸಾರ ಸಾಗಿಸಲು ಸಾಧ್ಯವಾಗದೇ ವಿಚ್ಛೇದನ ಪಡೆದು ಪರಿತ್ಯಕ್ತರಾದ ಸಂಧರ್ಭಗಳಲ್ಲಿ ಗಂಡಿಗೆ ಮರುಮದುವೆಯಾಗುವ ಮುಕ್ತ ಅವಕಾಶವನ್ನು ನೀಡಲಾಗಿದೆ. ಆದರೆ ಈ ಅವಕಾಶ ಮಹಿಳೆಯರಿಗೆ ಇಂದಿನವರೆಗೂ ಪರಿಪೂರ್ಣವಾಗಿ ಸಿಕ್ಕಿಲ್ಲ ಎಂಬುದು ಅತ್ಯಂತ ಅಶ್ಚರ್ಯಕರ ಸಂಗತಿ. ನಾಗರಿಕ ಸಮಾಜ ಯಾವ ಸಮುದಾಯಗಳನ್ನು ಅನಾಗರಿಕ ಗಿರಿಜನ ಸಮುದಾಯಗಳೆಂದು ಕರೆದಿದೆಯೋ ಅಂಥ ಸಮುದಾಯಗಳಲ್ಲಿ ಈ ಅವಕಾಶಗಳು ಹೇಗಿದ್ದವು ಎಂದು ತಿಳಿಯುವುದು ಆಸಕ್ತಿ ಮೂಡಿಸುವ ಸಂಗತಿ. ಈ ಹಿನ್ನೆಲೆಯಲ್ಲಿ ಮಲೆನಾಡಿನ ಬಹುತೇಕ ಬುಡಕಟ್ಟು ಸಮಾಜಗಳಲ್ಲಿ ಪರಿತ್ಯಕ್ತರಾದ ಪುರುಷ ಮಹಿಳೆಯರಿಬ್ಬರಿಗೂ ಮರುಮದುವೆಯಾಗುವ ಮುಕ್ತ ಅವಕಾಶಗಳಿದ್ದವು ಎಂಬುದು ಗಮನಾರ್ಹ. ಗಂಡನನ್ನು ಕಳೆದುಕೊಂಡ ಹೆಣ್ಣು, ಹೆಂಡತಿಯನ್ನು ಕಳೆದುಕೊಂಡ ಗಂಡು ಪರಸ್ಪರ ಒಪ್ಪಿ ಸಮುದಾಯದ ಹಿರಿಯರ ಸಮ್ಮಿತಿಯೊಂದಿಗೆ ವಿವಾಹವಾಗುವುದು ಈ ಗುಂಪುಗಳಲ್ಲಿ ಸಹಜವಾದ ಪ್ರಕ್ರಿಯೆಗಳು. ಇಲ್ಲಿ ಗಂಡ ಹೆಂಡತಿಯ ಮಧ್ಯೆ ಹಲವಾರು ಕಾರಣಗಳಿಗಾಗಿ ಸುಖ ಸಂಸಾರ ಸಾಧ್ಯವಾಗದೇ ಇದ್ದರೆ ವಿಚ್ಛೇದನ ಪಡೆದು ಮರು ಮದುವೆಯಾಗುವ ಅವಕಾಶಗಳು ಇವೆ. ಮತ್ತೊಂದು ಮುಖ್ಯ ಸಂಗತಿಯೆಂದರೆ ಈ ಸಮುದಾಯಗಳಲ್ಲಿ ಬಹುಪತಿತ್ವ ಅಥವಾ ಬಹುಪತ್ನಿತ್ವ ಪದ್ಧತಿಗಳಿಗೆ ಅವಕಾಶವಿಲ್ಲ. ಹಾಗೇನಾದರೂ ಆದರೆ ಬುಡಕಟ್ಟಿನಿಂದಲೇ ಬಹಿಷ್ಕಾರ ಮಾಡುತ್ತಿದ್ದ ಬಗ್ಗೆ ವಿವರಗಳು ದೊರೆಯುತ್ತವೆ. ಇದರಲ್ಲಿ ಇರುವ ಒಂದು ದೋಷವೆಂದರೆ ಹೀಗೆ ಮರುಮದುವೆ ಆದವರಿಗೆ ಮಂಗಳಕಾರ್ಯಗಳಲ್ಲಿ ಪ್ರವೇಶವನ್ನು ನಿರಾಕರಿಸಿರುವುದು. ಆದರೆ ಸಮಾಧಾನದ ಸಂಗತಿಯೆಂದರೆ ಇತ್ತೀಚೆಗೆ ಈ ಭಾವನೆ ಮರೆಯಾಗಿ ಅವರನ್ನೂ ಎಲ್ಲರಂತೆ ಕಾಣುವ ಮನೋಧರ್ಮವನ್ನು ರೂಢಿಸಿಕೊಳ್ಳುತ್ತಿದ್ದಾರೆ.

**ಇ. ಸಗೋತ್ರ ವಿವಾಹ ನಿಷೇಧ**

ಬಹುಪಾಲು ಬುಡಕಟ್ಟುಗಳಲ್ಲಿ ಮದುವೆ ಮಾಡುವಾಗ ಗಮನಿಸುವ ಬಹುಮುಖ್ಯ ಸಂಗತಿ ಬಳಿಗಳಿಗೆ ಸಂಬಂಧಿಸಿದ್ದು. ಇವರಲ್ಲಿ ಸೋದರ ಬಳಿಗಳಲ್ಲಿ ಹೆಣ್ಣು ಗಂಡಿನ ಸಂಬಂಧಗಳನ್ನು ಮಾಡುವುದು ಸಂಪೂರ್ಣ ನಿಷಿದ್ಧ. ಈ ಆಚಾರ ಮಾನವೀಯ, ರಕ್ತ ಸಂಬಂಧಗಳಿಗೆ ಆದಿವಾಸಿ ಸಮುದಾಯಗಳು ನೀಡಿದ ಪ್ರಾಮುಖ್ಯತೆಯನ್ನು ಪ್ರಕಟಪಡಿಸುತ್ತದೆ. ಮಲೆನಾಡಿನ ಹಸಲರು, ಗೌಳಿಗರು, ಕುಡಬಿಗಳು, ಕರೆಒಕ್ಕಲರು ಹಾಗೂ ಗೌಡಾಲು ಬುಡಕಟ್ಟು ಸಮುದಾಯಗಳಲ್ಲಿ ಇಂದಿಗೂ ಈ ನಿಷೇಧಗಳು ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ. ಸಗೋತ್ರ ಗುಂಪುಗಳಲ್ಲಿ ವಿವಾಹವಾದರೆ ಒಂದೇ ಹೊಟ್ಟೆಯಲ್ಲಿ ಜನಿಸಿದ ಸೋದರ ಸೋದರಿಯರನ್ನೇ ವಿವಾಹವಾದಂತೆ ಎಂಬ ನಂಬಿಕೆ ಇಲ್ಲಿ ಗಟ್ಟಿಯಾಗಿ ನೆಲೆಯೂರಿದೆ. ಹೀಗೆ ಬುಡಕಟ್ಟುಗಳು ಸೋದರ ಬಳಿಗಳಲ್ಲಿ ವೈವಾಹಿಕ ಸಂಬಂಧಗಳನ್ನು ನಿಷೇಧಿಸುವ ಮೂಲಕ ವಂಶೋತ್ಪತ್ತಿಯನ್ನು ಕಾಪಾಡಿಕೊಂಡು, ರಕ್ತ ಸಂಕರದಿಂದಾಗುವ ತೊಂದರೆಗಳನ್ನು ನಿವಾರಿಸಿಕೊಂಡು ಬಂದಿವೆ ಎಂಬುದು ಇಂದಿನ ಸಮಾಜ ಗಮನಿಸಲೇಬೇಕಾದ ಅಂಶವಾಗಿದೆ.

**ಮಹಿಳಾ ಸಮಾನತೆಗೆ ಇನ್ನಷ್ಟು ನಿದರ್ಶನಗಳು**

ಬುಡಕಟ್ಟುಗಳಲ್ಲಿ ಬಳಕೆಗೊಳ್ಳುತ್ತಿರುವ ಆಚರಣೆಗಳಲ್ಲಿ ಮಹಿಳೆಯರ ಸಮಾನತೆಯನ್ನು ಸಾರುವ ಇನ್ನು ಕೆಲವು ಅಂಶಗಳನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತ. ವಿಶೇಷವಾಗಿ ದೇವರ ಹೆಸರಿನಲ್ಲಿ ಮಹಿಳೆಯರನ್ನು ಬಸವಿ, ದೇವದಾಸಿಯರನ್ನಾಗಿಸುವ ಕ್ರಮಗಳಿಲ್ಲ. ಹಾಗೆಯೇ ಪ್ರೇಮ ವಿವಾಹಕ್ಕೂ ಅವಕಾಶಗಳುಂಟು. ಗಂಡು ಹೆಣ್ಣು ಪರಸ್ಪರ ಅನುರುಕ್ತರಾಗಿ ಹಟ್ಟಿಬಿಟ್ಟು ಹೋದಾಗ ಅವರನ್ನು ಕರೆತಂದು ಸರಳವಾಗಿ ವಿವಾಹಮಾಡುವುದುಂಟು. ಇಲ್ಲಿ ಹೇಳಲೇ

ಬೇಕಿರುವ ಮಹತ್ವದ ಅಂಶವೆಂದರೆ ಅತೀ ಮಡಿವಂತಿಕೆಯ ಭಾವನೆಯಿರುವ ಬುಡಕಟ್ಟುಗಳಲ್ಲಿ ಅನ್ಯ ಸಮುದಾಯದ ಹೆಣ್ಣನ್ನು ವಿವಾಹ ಮಾಡಿಕೊಳ್ಳುವ ಸಂದರ್ಭಗಳು ಸೃಷ್ಟಿಯಾದಾಗ ಹೊರಗಿನಿಂದ ಬಂದ ಹೆಣ್ಣನ್ನು ಅವರದೇ ಕ್ರಮಗಳಲ್ಲಿ ಶುದ್ಧಿಮಾಡಿಕೊಳ್ಳುತ್ತಾರೆ. ಇನ್ನೂ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಮಹಿಳೆ ಪುರುಷನಂತೆಯೇ ಎಲ್ಲಾ ಸಂದರ್ಭಗಳಲ್ಲೂ ಭಾಗಿಯಾಗುವುದನ್ನು ಕಾಣಬಹುದು.

**ಅಪವಾದಗಳು**

ಬುಡಕಟ್ಟು ಸಮುದಾಯಗಳಲ್ಲಿ ಹೆಣ್ಣು ಸಂಪೂರ್ಣವಾಗಿ ಸರ್ವ ಸಮಾನಳು, ಸ್ವತಂತ್ರಳು ಎಂದು ಹೇಳಿದರೆ ತಪ್ಪಾಗುತ್ತದೆ. ಈ ವ್ಯವಸ್ಥೆಯಲ್ಲೂ ಮಹಿಳೆ ಹಲವಾರು ಸಂದರ್ಭಗಳಲ್ಲಿ ದಮನಿತಳಾಗಿರುವುದು ಉಂಟು. ಅಂಥ ಕೆಲವು ಸಂದರ್ಭಗಳನ್ನು ನೋಡುವುದಾದರೆ : ಮೂಲದಲ್ಲಿ ಮಾತೃಮೂಲಿಯ ಈ ಸಮುದಾಯಗಳು ಬರುಬರುತ್ತಾ ಪಿತೃಪ್ರಧಾನ ಸಮಾಜಗಳಾಗಿ ಬದಲಾದ ಕಾರಣದಿಂದಾಗಿ ನಾಗರಿಕ ಸಮಾಜಗಳಲ್ಲಿ ಕಾಣುವಂತೆ ಇಲ್ಲಿಯೂ ಕೆಲವಾರು ಸಂದರ್ಭಗಳಲ್ಲಿ ಮಹಿಳೆಯನ್ನು ಗೌಣವಾಗಿ ಪರಿಗಣಿಸಲಾಗಿದೆ. ಹೆಣ್ಣನ್ನು ಸೋದರಮಾವನ ಆಸ್ತಿಯೆಂಬ ಭಾವನೆಯನ್ನು ಹೊಂದಿರುವುದು, ಹಿರಿಯರ ಪೂಜೆಯಲ್ಲಿ ಕೇವಲ ಗಂಡಸರಿಗೆ ಮಾತ್ರ ಗೌರವ ನೀಡುತ್ತಿರುವುದು, ಹೆಣ್ಣಿನ ಹೆಸರುಗಳನ್ನು ಏಕವಚನದಲ್ಲಿ ಕರೆಯುವ ರೀತಿ, ಅನೇಕ ಆಚರಣೆಗಳಲ್ಲಿ ಮಹಿಳೆಯರನ್ನು ನಡೆಸಿಕೊಳ್ಳುವ ಪರಿ ಇಂಥ ಸಂಗತಿಗಳು ಬುಡಕಟ್ಟುಗಳಲ್ಲಿ ಹೆಣ್ಣನ್ನು ನೋಡಿರುವ ರೀತಿ ಒಂದೇ ತೆರನಾಗಿಲ್ಲ ಎಂಬುದನ್ನು ನೆನಪಿಸುತ್ತವೆ.

**ಸಮಾರೋಪ**

ಮೇಲೆ ವಿವರಿಸಿದಂತೆ ಮಲೆನಾಡಿನ ಬುಡಕಟ್ಟು ಸಮುದಾಯಗಳಲ್ಲಿ ಹೆಣ್ಣನ್ನು ಕೆಲವೊಮ್ಮೆ ಸಮಾನವಾಗಿ ಇನ್ನೂ ಕೆಲವೊಮ್ಮೆ ಅಸಮಾನ ನೆಲೆಯಲ್ಲಿ ಕಾಣಲಾಗಿದೆ. ಈ ದೃಷ್ಟಿಗಳಲ್ಲಿ ಕೆಲವು ನಿಸ್ಸಂಶಯವಾಗಿ ಹೊರಗಿನ ಶಿಷ್ಟ ಸಂಸ್ಕೃತಿಗಳ ಪ್ರಭಾವದಿಂದ ಬಂದಿರುವಂತಹವು. ಮತ್ತೆ ಕೆಲವು ತಮಗೆ ತಾವೇ ತಮ್ಮ ಲೋಕದೃಷ್ಟಿಯ ಅನುಗುಣವಾಗಿ ರೂಢಿಸಿಕೊಂಡವುಗಳಾಗಿವೆ. ಇವು ಏನೇ ಇದ್ದರೂ ಈ ಸಮುದಾಯಗಳು ತಮ್ಮ ಮಹಿಳೆಯರನ್ನು ಭೂಮಿಯಂತೆ ಫಲವಂತಿಕೆಯ ಶಕ್ತಿಯಾಗಿ ಕಾಣುವ ದೃಷ್ಟಿಯನ್ನು ಕಳೆದುಕೊಂಡಿಲ್ಲ. ಏನೇ ಇದ್ದರೂ ಬುಡಕಟ್ಟಿನ ಮಹಿಳೆಯರ ಒಟ್ಟಾರೆ ಜೀವನವನ್ನು ಗಮನಿಸಿದಾಗ ನಾಗರಿಕ ಎಂದುಕೊಂಡಿರುವ ಸಮುದಾಯಗಳಲ್ಲಿ ಹೆಣ್ಣಿನ ಬಗ್ಗೆ ಇರುವಷ್ಟು ಅಮಾನವೀಯತೆ ಇಲ್ಲಿಲ್ಲ ಎಂಬುದು ಸಮಾಧಾನದ ಸಂಗತಿ. ಒಟ್ಟಾರೆ ಬುಡಕಟ್ಟುಗಳ ಜೀವನಕ್ರಮದಲ್ಲಿ ಸಿಗುವ ಒಳ್ಳೆಯ ಮಾದರಿಗಳನ್ನು ಸ್ವೀಕರಿಸಿ ಮನ್ನಡೆಯಬೇಕಾದ ಅನಿವಾರ್ಯತೆಯನ್ನು ನಮ್ಮ ಕಾಲ ಸೃಷ್ಟಿಸಿದೆ. ಈ ಜವಾಬ್ದಾರಿಯನ್ನು ನಾವೆಲ್ಲರೂ ನಿಷ್ಠೆಯಿಂದ ನಿರ್ವಹಿಸಬೇಕಿದೆ.

**ಪರಾಮರ್ಶನ ಗ್ರಂಥಗಳು**


ಇದು ನಮ್ಮ ಕರ್ನಾಟಕ, 2010, ಸಂ : ಅರವಿಂದ ಚೊಕ್ಕಾಡಿ, ಚಾಣುಕ್ಯ ಪ್ರಕಾಶನ, ವಿಜಾಪುರ

ಕರ್ನಾಟಕ ಜನಪದ ಕಲೆಗಳು, 1996, ಸಂ : ಹಿ.ಚಿ. ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಕರ್ನಾಟಕದ ಬುಡಕಟ್ಟುಗಳು ಸಂಪುಟ-01, 1998, ಸಂ: ಎಚ್.ಜೆ ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಗಿರಿಜನ ನಾಡಿಗೆ ಪಯಣ, 2010, ಹಿ.ಚಿ. ಬೋರಲಿಂಗಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ-01, 2011, ಸಂ : ಸ.ಚಿ.ರಮೇಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಬುಡಕಟ್ಟು ಕುಲಕಸುಬುಗಳು, 2002, ಕೆ.ಎಂ. ಮೈತ್ರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಮಹಿಳಾ ಜಾನಪದ, 2003, ಸಂ : ಕೆ.ಆರ್. ಸಂಧ್ಯಾರೆಡ್ಡಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

# ಮಾಧ್ಯಮ ಮತ್ತು ಮಹಿಳಾ ನಿರೂಪಣೆ

**ಡಾ. ಸಬಿತಾ ಬನ್ನಾಡಿ**

ಮಲೆನಾಡಿನ ಮಹಿಳೆಗೊಂದು ವಿಶಿಷ್ಟ ಚಹರೆ ಇದೆಯೇ? ಎಂದ ಕೂಡಲೇ ನಮ್ಮ ಮನಸ್ಸಿಗೆ ಬರುವುದು ಅಲ್ಲಿನ ಗೊಬ್ಬೆಸೀರೆ ಉಟ್ಟ, ದುಂಡು ಮುಖದ ಲಕ್ಷಣದ ಹೆಣ್ಣು. ಆದರೆ ಈಗ ಅಲ್ಲಿನ ಅಜ್ಜಿಯರೂ ಇಂತಹ ವೇಷ ಭೂಷಣದಲ್ಲಿ ಕಾಣಸಿಗಲು ಸಾಧ್ಯವಿಲ್ಲ. ಕುವೆಂಪು ಕಾದಂಬರಿಗಳನ್ನು ಓದಿಕೊಂಡವರಿಗೆ ತಿಮ್ಮಿ, ಚಿನ್ನಮ್ಮ, ಸೀತೆಯರು ಕಣ್ಮುಂದೆ ಬರುವುದು ಸಹಜ. ಅದೇ ಕ್ಷಣದಲ್ಲಿ ಕಾರಂತರ ಸರಸೋತಿ, ನಾಗವೇಣಿಯರಿಗಿಂತ ಇವರು ಭಿನ್ನವೇ ಎಂಬೊಂದು ಆಲೋಚನೆಯೂ ಬಂದು ಹೋಗುತ್ತದೆ. ಗ್ರಾಮಾಯಣದ ಚಿಮಣಾಳೂ ನೆನಪಾಗುತ್ತಾಳೆ. ನಮ್ಮ ಸೃಜನಶೀಲ ಕೃತಿಗಳಲ್ಲಿ ಹೀಗೆ ವಿಶಿಷ್ಟವಾಗಿ ದಾಖಲಾದ ಇವರು ಇಂದಿನ ದೃಶ್ಯ ಮಾಧ್ಯಮಗಳಲ್ಲಿ ಎಲ್ಲೂ ತಮ್ಮತನವನ್ನು ತೋರಿಸುವಂತೆ ಚಿತ್ರಿತವಾಗಿಲ್ಲ. ಅಂತಹ ಯಾವ ಜವಾಬ್ದಾರಿಯನ್ನೂ ಇಂದಿನ ದೃಶ್ಯಮಾಧ್ಯಮಗಳು ಹೊತ್ತಿಲ್ಲ. ಬದಲಾಗಿ ಎಲ್ಲ ಹೆಣ್ಣುಮಕ್ಕಳನ್ನು ಸರಕು ಎಂಬ ನೆಲೆಯಲ್ಲಿ ಇವುಗಳು ಕಾಣುವುದು ಮತ್ತು ಅದನ್ನು ನಮ್ಮ ಮೇಲೆ ಹೇರುವುದು ನಿರಂತರವಾಗಿ ನಡೆದಿದೆ.

ಮಾಧ್ಯಮಗಳೆಂದರೆ ಪತ್ರಿಕೆಗಳೂ ಇವೆ. ದೃಶ್ಯಮಾಧ್ಯಮಗಳೂ ಇವೆ. ಹಾಗೆ ನೋಡಹೋದರೆ ಪತ್ರಿಕೆಗಳು ಒಂದು ಕಾಲಕ್ಕೆ ಮಹಿಳೆಯರು ಆಧುನಿಕ ಸವಲತ್ತುಗಳನ್ನು ಬಳಸಿಕೊಳ್ಳಲು ಅನುವುಮಾಡಿಕೊಡುವ ವಿಚಾರಗಳಿಗೆ ಒತ್ತುಕೊಟ್ಟು ಅವಳು ಮನೆಯಿಂದ ಹೊರಬರಲು ಒತ್ತಾಸೆಯನ್ನು ನೀಡಿದವು. ರೇಡಿಯೋ ಕೂಡ ಆ ಕೆಲಸಮಾಡಿತು. ಇವೆಲ್ಲದರ ಫಲವಾಗಿ ಹೆಣ್ಣು ಸಾರ್ವಜನಿಕ ರಂಗದಲ್ಲಿ ಮುಂಚೂಣಿಗೆ ಬಂದ ಮೇಲೆ ಬಂದ ದೂರದರ್ಶನವು ಸರಕಾರೀ ಹಿಡಿತದಲ್ಲಿದ್ದಾಗ ಇದೇ ಕೆಲಸವನ್ನು ಮುಂದುವರಿಸಿತು. ಆದರೆ ಯಾವಾಗ ಮಾಧ್ಯಮಗಳಲ್ಲಿ ಖಾಸಗೀ ಮತ್ತು ವಿದೇಶೀ ಸಂಸ್ಥೆಗಳ ಪ್ರವೇಶವಾಯಿತೋ ಅಲ್ಲಿಂದ ಹೆಣ್ಣು ಅವರಿಗೆ ಟಿ.ಆರ್.ಪಿ ಹೆಚ್ಚಿಸಿಕೊಳ್ಳಲು ಒಂದು ಮಾಧ್ಯಮವಾದಳು. ಹೀಗಾಗಿ, ಒಂದೆಡೆ ಹೆಣ್ಣಿನ ಬಿಡುಗಡೆಗಾಗಿ, ಅವಳ ಅರಿವನ್ನು ಹೆಚ್ಚಿಸುವುದಕ್ಕಾಗಿ ಸಿದ್ಧಾಂತಗಳು, ಚಳುವಳಿಗಳು, ಕಾನೂನುಗಳು ಕೆಲಸ ಮಾಡುತ್ತಿದ್ದರೆ ಇನ್ನೊಂದೆಡೆ, ಹೆಣ್ಣಿನ ದೇಹ ಸೌಂದರ್ಯವನ್ನು ಬಂಡವಾಳ ಮಾಡಿಕೊಳ್ಳುತ್ತಾ, ಅದನ್ನೇ ಆಧುನಿಕತೆಯೆಂದು ಬಿಂಬಿಸುತ್ತಾ ವ್ಯವಸ್ಥೆಗೆ ಮತ್ತು ಸಾಂಪ್ರದಾಯಿಕತೆಗೆ ಪೂರಕಳಾದ ಹೆಣ್ಣನ್ನು ನಿರೂಪಿಸುವುದರ ಕಡೆಗೇ ಈ ಮಾಧ್ಯಮಗಳು ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಇವುಗಳು ನಿರಂತರವಾಗಿ ಇಂತಹ ಪಾತ್ರಗಳನ್ನು ಒಪ್ಪಿಕೊಳ್ಳಲು ಸಿದ್ಧಳಾಗುವಂತೆ ಹೆಣ್ಣಿನ ಮನ ಒಲಿಸುವ ಕೆಲಸವನ್ನು ಮಾಡುತ್ತಿವೆ. ಮಾತ್ರವಲ್ಲ, ಹೆಣ್ಣಿನೊಳಗೆ ಗಂಡು ಚಿಂತನೆಗಳನ್ನು ಕಸಿಮಾಡುತ್ತಾ ಪುರುಷ ಯಜಮಾನಿಕೆಯ ಧೋರಣೆಯನ್ನು ಸಮರ್ಥಿಸುವ ಕೆಲಸವನ್ನು ಮಾಡುತ್ತಿವೆ. ಈ ಬಲೆಯೊಳಗೆ ಮಲೆನಾಡನ್ನೂ ಸೇರಿಸಿಕೊಂಡು ಎಲ್ಲ ಪ್ರದೇಶಗಳ ಗಂಡು ಹೆಣ್ಣುಗಳು ಸಿಲುಕಿಕೊಳ್ಳುತ್ತಿದ್ದಾರೆ. ಹೀಗಾಗಿ ಇಂದು ಎಲ್ಲ ವಯೋಮಾನದವರಿಗೂ ಮನರಂಜನೆಯೇ ಮುಖ್ಯವಾಗಿದೆಯೇ ಹೊರತು ಗಂಭೀರ ಚಿಂತನೆಗಳಲ್ಲ.

ಆದರೆ ಒಂದು ಕಾಲದಲ್ಲಿ ಇದೇ ಮಾಧ್ಯಮಗಳು ಹೆಣ್ಣಿನ ಸಮಗ್ರ ಬೆಳವಣಿಗೆಗಾಗಿ ಎಷ್ಟು ಮಹತ್ವವನ್ನು ನೀಡಿದುವು ಎಂದು ನೋಡಿದಾಗ ಇಂದಿನ ಪ್ರಭಾವೀ ಮಾಧ್ಯಮಗಳ ಹೊಣೆಗೇಡಿತನ ಬಯಲಾಗುತ್ತದೆ. ಹೆಣ್ಣು ಇಂದು ಹಲವು ರಂಗಗಳಲ್ಲಿ ಸಾಧನೆಯ ಮೆಟ್ಟಿಲೇರಿದ್ದರೆ ಅದಕ್ಕೆ ಹಲವು ಹೋರಾಟಗಾರರ ಕೊಡುಗೆ ಇದೆ. ಒಂದು ಕಾಲದಲ್ಲಿ ಪತ್ರಿಕಾ ಮಾಧ್ಯಮಗಳು ಇದಕ್ಕೆ ಕೊಟ್ಟ ಕೊಡುಗೆ ಅನನ್ಯವಾದುದು. ಹೆಂಗಸರ ಶಿಕ್ಷಣಕ್ಕಾಗಿ, ಅವರು ಉದ್ಯೋಗಕ್ಕೆ ಹೋಗುವುದಕ್ಕಾಗಿ ಎಷ್ಟೆಲ್ಲ ತೊಡರುಗಳನ್ನು ದಾಟಬೇಕಾಯಿತು. ಸ್ವಾತಂತ್ರ್ಯಹೋರಾಟದ ಸಂದರ್ಭದಲ್ಲಿ, ಸಾಮಾಜಿಕ ಹೋರಾಟಗಳೂ ನಡೆಯುತ್ತಿದ್ದಾಗ ಹೆಂಗಸರನ್ನು ಕುರಿತಾದ ಇಂತಹ ಪ್ರಶ್ನೆಗಳೂ ಮುಂಚೂಣಿಗೆ ಬಂದವು. ಕನ್ನಡದ ಆರಂಭದ ಲೇಖಕಿಯರಾದ ತಿರುಮಲಾಂಬ, ಕಲ್ಯಾಣಮ್ಮ, ಸರಸ್ವತಿಬಾಯಿ ರಾಜವಾಡೆ ಮೊದಲಾದವರು ಸ್ವತಃ ಪತ್ರಿಕೆಗಳನ್ನು ತಂದು ಅದರಲ್ಲಿ ಇಂತಹ ವಿಚಾರಗಳನ್ನು ಚರ್ಚೆಗೆ ತಂದರು. ಕಮಲಾದೇವಿ ಚಟ್ಟೋಪಾಧ್ಯಾಯ ಈ ಕುರಿತು ನಿರಂತರ ಹೋರಾಟ ಮಾಡಿದರು. ಅಂದಿನ ಮಾಧ್ಯಮಗಳು ಈ ವಿಷಯದಲ್ಲಿ ಮಾಡಿದ ಕೆಲಸ ಅತ್ಯಂತ ಗಮನಾರ್ಹವಾದುದು. ಅವುಗಳಲ್ಲಿ ಕೆಲವು ಚರ್ಚೆಗಳನ್ನು ಇಲ್ಲಿ ಗಮನಿಸಬಹುದು.

ಭಾರತದಲ್ಲಿ ಬ್ರಿಟಿಷ್ ಆಡಳಿತ ಬೇರುಬಿಟ್ಟ ಮೇಲೆ ಶಿಕ್ಷಣದ ಎಲ್ಲೆಗಳು ವಿಶಾಲವಾಯಿತು. ಸ್ತ್ರೀಯರಿಗೂ ಶಿಕ್ಷಣದ ಅವಕಾಶ ಲಭ್ಯವಾಯಿತು. ಈ ಸಂದರ್ಭದಲ್ಲಿ ಸ್ತ್ರೀಗೆ ಕೊಡಬೇಕಾದ ಶಿಕ್ಷಣದ ಮಾದರಿ ಯಾವುದಾಗಿರಬೇಕು ಮತ್ತು ಆಕೆಗೆ ಉದ್ಯೋಗಕ್ಕೆ ಅವಕಾಶ ನೀಡಬೇಕೇ ಎಂಬ ಕುರಿತು ದೇಶದಾದ್ಯಂತ ನಡೆದ ಚರ್ಚೆಗಳು ನಡೆದುವು. ಸ್ತ್ರೀಯರಿಗೆ ಶಿಕ್ಷಣದ ಅವಶ್ಯಕತೆಯೇ ಇಲ್ಲ ಎಂಬ ನಿಲುವಿನಿಂದ ಸಾಮಾಜಿಕರ ಮನಸ್ಸನ್ನು ಬದಲಿಸಲಿಕ್ಕಾಗಿ ಹಲವರು ಸ್ತ್ರೀಗೆ ಶಿಕ್ಷಣದ

ಅವಶ್ಯಕತೆಯನ್ನು ಮನಗಾಣಿಸಲು ಪ್ರಯತ್ನಿಸುತ್ತಾರೆ. ಈ ಸಂದರ್ಭದಲ್ಲಿ ಅನೇಕರು ಆಕೆ ಮುಂದೆ ಒಳ್ಳೆಯ ತಾಯಿಯೆನಿಸಿಕೊಳ್ಳಲು ಅವಳಿಗೆ ಶಿಕ್ಷಣ ಬೇಕು ಎಂದು ಪ್ರತಿಪಾದಿಸುತ್ತಾರೆ. ಹಾಗೆಯೇ ಆಕೆ ಒಳ್ಳೆಯ ಪತ್ನಿಯೆನಿಸಿಕೊಳ್ಳಲು ಕೂಡ ಶಿಕ್ಷಣದ ಅವಶ್ಯಕತೆ ಇದೆ ಎಂದು ಭಾವಿಸುತ್ತಾರೆ. ನಿಜ, ಇದು ಒಂದು ಹೆಜ್ಜೆ ಮುಂದಿಡಲು ಅನುಕೂಲ ಮಾಡುತ್ತದೆ. ಆದರೆ ಹೆಣ್ಣು ತನಗಾಗಿ ಅಥವಾ ಹೆಣ್ಣಿಗೆ ಹೆಣ್ಣಿನದೇ ಅವಶ್ಯಕತೆ ಇದೆ ಎಂದು ಭಾವಿಸುವುದೇ ಅಪರಾಧವಾಗಿ ಕಾಣುವ ಮನಸ್ಥಿತಿಯ ಪರಿಣಾಮವೇ ಈ ರೀತಿಯ ಚಿಂತನೆಗಳಾಗಿರುತ್ತವೆ. ಇರಲಿ, ಹೀಗೆ ಒಪ್ಪಿಸಿದ ಮೇಲೆ ಮುಂದಿನ ನಡೆ ಯಾವುದು ಎಂಬ ಬಗ್ಗೆ ಚರ್ಚೆಗಳು ಆರಂಭವಾಗುತ್ತವೆ. 1907ರಲ್ಲಿ ಸ್ವದೇಶಾಭಿಮಾನಿ ಎಂಬ ಪತ್ರಿಕೆಯಲ್ಲಿ ಬರೆದ ಬಾಲಿಕಾ ಶಿಕ್ಷಣ ಎಂಬ ಲೇಖನವೊಂದರಲ್ಲಿ "ಸ್ತ್ರೀಯರಿಗೆ ಶಿಕ್ಷಣವು ಪುರುಷರಷ್ಟೇ ಅವಶ್ಯಕವೆಂದು ತೋರಿಸಿದ್ದಾಯಿತು. ಆದರೆ ಪುರುಷರಿಗೆ ಕೊಡತಕ್ಕ ವಿದ್ಯಾಭ್ಯಾಸಗಳು ಬೇರೆ ಬೇರೆ ಸ್ವಭಾವದ್ದಾಗಿರಬೇಕು."(ಲೇಖಕರ ಹೆಸರು ಉಲ್ಲೇಖವಾಗಿಲ್ಲ. "ಕನ್ನಡ ಪತ್ರಿಕೆಗಳು ಮತ್ತು ಮಹಿಳೆ"; ಸಂ:ಎನ್.ಕೆ.ಲೋಲಾಕ್ಷಿ; 2006; ಪು:127) ಎನ್ನುತ್ತಾ ಅದಕ್ಕೆ ನೀಡುವ ಕಾರಣಗಳು ಇಂತಿವೆ:" ಹುಡುಗಿಯರು ಮಮತೆಯುಳ್ಳ ಭಾರ್ಯೆಯರೂ, ವಿವೇಕವುಳ್ಳ ಮಾತೆಯರೂ, ದಯೆಯುಳ್ಳ ಯಜಮಾನಿಯರೂ ಆಗುವ ತೆರದಲ್ಲಿ ಅವರಿಗೆ ಶಿಕ್ಷಣ ದೊರೆಯಬೇಕು."(ಅದೇ) ಇದೇ ಮಾದರಿಯ ಬರಹಗಳು ಮುಂದೆ ಮೂವತ್ತು ನಲವತ್ತು ವರ್ಷಗಳ ಕಾಲ ಕಂಡು ಬರುತ್ತವೆ. ಇಂತಹ ಅನುನಯದ ಧಾಟಿಯಲ್ಲಿ ಶಿಕ್ಷಣದ ಹಕ್ಕನ್ನು ಪಡೆದುಕೊಂಡರೂ ಅದರ ಕುರಿತು ವಿರೋಧವು ಸುಪ್ತವಾಗಿ ಮಾತ್ರವಲ್ಲ ವ್ಯಕ್ತವಾಗಿಯೂ ಕಾಣುತ್ತವೆ. 1946ರಲ್ಲಿ ಶ್ರೀ.ದೊಂತಿ ಲಕ್ಷ್ಮೀನಾರಾಯಣ ಶೆಟ್ಟಿ ಬಿ.ಎ ಎಂಬವರು "ಆಧುನಿಕ ವಿದ್ಯಾಭ್ಯಾಸದ ಕ್ರಮದಿಂದ ನಮ್ಮ ದೇಶದ ಸ್ತ್ರೀಯರಿಗೆ ಯಾವ ಪುರುಷಾರ್ಥವೂ ಇಲ್ಲ. ವಿದ್ಯೆಯಿಂದ ಅಜ್ಞಾನವು ತೊಲಗುವುದಕ್ಕೆ ಬದಲಾಗಿ, ಪಾಶ್ಚಾತ್ಯರ ಆಡಂಬರ, ಮೂಢತನ ಇವುಗಳು ನಮ್ಮ ಸ್ತ್ರೀಯರಲ್ಲಿ ಬಂದಿವೆ. ಆಧುನಿಕ ವಿದ್ಯಾಭ್ಯಾಸ ತರುಣಿಯರಿಗಲ್ಲದೆ, ತರುಣರಿಗೂ, ನಗುಮೊಗದ ವೈರಿ ಎಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಬಹಳ ವರ್ಷಗಳಿಂದ ನಮ್ಮ ನಾಡುಭಾಷೆ, ನಾಡಿನ ಆಚಾರ ವ್ಯವಹಾರಗಳು ಇವುಗಳು ಜೀವಂತವಾಗಿರುವುದು ನಮ್ಮ ದೇಶದ ಮಾತೆಯರಿಂದ. ನಮ್ಮ ಮಾತೆಯರೇ ಕ್ಷೀಣ ದೆಸೆಗೆ ಬಂದರೆ ನಮ್ಮ ಭಾರತಮಾತೆಯನ್ನು ಕೇಳುವವರ್‍ಯಾರು! (ಅದೇ; ಪು:151-152) ಎಂದು ಬರೆಯುತ್ತಾರೆ.

ಶಿಕ್ಷಣದ ಕುರಿತೇ ಆಕ್ಷೇಪವಿರುವಲ್ಲಿ ಉದ್ಯೋಗದ ಕುರಿತು ಹೆಚ್ಚಿನ ನಿರೀಕ್ಷೆ ಇಟ್ಟುಕೊಳ್ಳುವುದಂತೂ ಅಸಾಧ್ಯದ ಮಾತು. ಸ್ತ್ರೀ ನೌಕರಿ ಮಾಡುವುದರ ಕುರಿತು ಇಲ್ಲೊಂದು ಅಭಿಪ್ರಾಯ ಹೀಗಿದೆ: "ಗಿರಣಿ ಕಚೇರಿ ಮೊದಲಾದ ಗಂಡುಗೆಲಸಗಳಲ್ಲಿ ಹೆಣ್ಣು ಮಕ್ಕಳೂ ಸೇರಿಕೊಂಡರೆ ಅದರಿಂದ ಅವರ ಮೈಮನಗಳ ಮೇಲೆ ದುಷ್ಪರಿಣಾಮಗಳು ಆಗದೆ ಇರಲಾರವು. ಯುರೋಪದಲ್ಲಿ ಸ್ತ್ರೀಯರ ಆರ್ಥಿಕ ಸ್ಥಿತಿಯು ಅವರ ನೈತಿಕ ಅಧಃಪತನಕ್ಕೆ ಕಾರಣವಾಗಿದೆಯೆಂದೂ, ಮಾತೃಪದಕ್ಕೆ ಅನರ್ಹರನ್ನು ಮಾಡುವುದೆಂದೂ ಅಲ್ಲಿ ಅನುಭವವು." (ಅದೇ, ಪು:168) ಇದೇ ಲೇಖನವು ಮುಂದುವರಿದು ಸ್ತ್ರೀಗೆ ಉದ್ಯೋಗಕ್ಕೆ ಅವಕಾಶ ನೀಡುವುದೆಂದರೆ ಅವಳ ವೈವಾಹಿಕ ಜೀವನವನ್ನು ಹಾಳುಗೆಡವುದೆಂದೇ ಅರ್ಥ ಎಂಬ ದಾಟಿಯಲ್ಲಿ ಮಾತನಾಡುತ್ತದೆ. " ಒಂದುವೇಳೆ ಇಂತವರು(ಉದ್ಯೋಗಸ್ಥರು) ಮದುವೆ ಮಾಡಿಕೊಂಡರೂ ಅವರು ಗಂಡನ ಮನೆಮುರಿಯಲಿಕ್ಕೆ- ವಿಭಕ್ತಕುಟುಂಬಿಯರನ್ನಾಗಿ ಮಾಡಲಿಕ್ಕೆ ಕಾರಣರಾಗುತ್ತಾರೆ. ಯುರೋಪಿನಲ್ಲಿ ಇದರಿಂದ ವೃದ್ಧಕುಮಾರಿಗಳದೊಂದು ಹೊಸ ಬಣವೆ ಉಂಟಾಗಿದೆ." 1928-29ರಲ್ಲಿ ಬರೆಯಲಾದ ಈ ಲೇಖನದ ಹಲವು ಭಯಗಳು ಇಂದು ಸುಳ್ಳೆಂದು ಸಾಬೀತಾಗಿದೆ. ಆದರೆ ಇಂತಹ ಯೋಚನೆಗಳು ಅದೆಷ್ಟೋ ವರ್ಷಗಳ ಕಾಲ ತನ್ನ ಆಳ್ವಿಕೆಯನ್ನು ಮಾಡಿರುತ್ತದೆಯೆಂದರೆ ಪ್ರತಿ ಹೊಸ ಬದಲಾವಣೆಗಳ ಸಂದರ್ಭದಲ್ಲೂ ಇಂತಹದೇ ಪ್ರಶ್ನೆಗಳನ್ನು ಬೇರೆ ಬೇರೆ ಧ್ವನಿಯಲ್ಲಿ ಕೇಳಲಾಗುತ್ತದೆ. ಹೀಗಿದ್ದೂ ಇಂತಹ ವಿಚಾರದ ಬಗ್ಗೆ ಸ್ಪಷ್ಟ ನಿಲುವುಗಳನ್ನು ಮಹಿಳೆಯರು ಆಗಲೇ ಮಂಡಿಸಿದ್ದಾರೆ. ಆದರೆ ಅದನ್ನು ಸಂಪೂರ್ಣ ನಿರ್ಲಕ್ಷ್ಯಮಾಡಲಾಯಿತು. ಹೀಗೆ ನಿರ್ಲಕ್ಷ್ಯಮಾಡುವುದೂ ಕೂಡ ಸ್ತ್ರೀಯನ್ನು ತಮ್ಮಿಚ್ಛೆಯಂತೆ ನಿರೂಪಿಸುವ ರಾಜಕಾರಣದ ಒಂದು ಭಾಗವೇ ಆಗಿರುತ್ತದೆ. ಸ್ತ್ರೀ ಶಿಕ್ಷಣ ಮತ್ತು ಉದ್ಯೋಗಗಳ ಕುರಿತು ಬಂದ ಇಂತಹ ಅರೆಸತ್ಯದ ವಾದಗಳು ಮರೆಮಾಚುವ ಸಂಗತಿಗಳನ್ನು ತೆರೆದಿಡಲು ಮತ್ತು ಅದನ್ನು ಸ್ತ್ರೀಯದೇ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸಿದ ಲೇಖನಗಳೂ ಆ ಕಾಲದಲ್ಲಿಯೇ ಪ್ರಕಟವಾಗಿವೆ. 1940ರಲ್ಲಿ ಜಯಕರ್ನಾಟಕ ಪತ್ರಿಕೆಗೆ ಬರೆದ ಲೇಖನದಲ್ಲಿ ಶ್ರೀಮತಿ ಕಮಲಾಬಾಯಿ ಜಮಖಂಡಿಯವರು ಹೇಳುವ ಮಾತುಗಳು ಗಮನಾರ್ಹ

"ದೊಡ್ಡೂರಿನ 'ಕಾರಕೂನೀ' ಕುಟುಂಬಗಳಲ್ಲಿ ಮಾತ್ರ ಮನೆಗೆಲಸವೆಂಬುದು ಹೆಣ್ಣುಮಕ್ಕಳು ಮಾಡಬೇಕಾದ ಕೆಲಸ. – ಅದಾದರೂ ಆಳು ಹೋಳುಗಳ ಸಹಾಯದಿಂದ. ಹಳ್ಳಿಯ ಹೆಣ್ಣುಮಕ್ಕಳು ಮನೆಯ ಕೆಲಸ ಹೊಲದ ಕೆಲಸಗಳೆರಡನ್ನೂ ಮಾಡುವರು; ಅಂಗಡಿ ಮುಂಗಡಿಗಳನ್ನೂ ನೋಡುವರು; ತರುವುದು-ಕೊಡುವುದು ಮೊದಲಾದ ಮನೆತನದ ವ್ಯವಹಾರವನ್ನೂ ನಡೆಸುವರು. . . . . .ಚಿಕ್ಕಂದಿನಲ್ಲಿಯೇ ಪ್ರಾರಂಭವಾಗುವ ಅವರ ಈ ದುಡಿತಕ್ಕೆ ತಕ್ಕ ಸಂಸ್ಕಾರವನ್ನು ಕೊಟ್ಟು ಅದನ್ನೇ ಅವರ ಜ್ಞಾನದ ಸಂಸ್ಕೃತಿಯ ಸಾಧನವನ್ನಾಗಿ ಮಾಡುವುದು ಅತ್ಯವಶ್ಯವಾಗಿದೆ." (ಅದೇ;ಪು:157) ಗಾಂಧೀಜಿಯ ವರ್ಧಾ ಯೋಜನೆಯ ಪರವಾಗಿ ಅವರು ಈ ಮಾತುಗಳನ್ನು ಹೇಳುತ್ತಾರೆ. ಸ್ತ್ರೀಯರ ದೇಹಧರ್ಮ ಮತ್ತು ಮನೋಧರ್ಮಕ್ಕನುಗುಣವಾಗಿ ಅವರ ಶಿಕ್ಷಣವ್ಯವಸ್ಥೆ ಇರಬೇಕು ಎಂದು ಅವರು ಹೇಳುತ್ತಾರೆ. ಅವರ ಈ ಮಾತುಗಳಲ್ಲಿ

ಹೆಣ್ಣು ಗಂಡು ಭೇದವಿಲ್ಲದೆ ಹೆಣ್ಣುಗಂಡು ಹೊಂದಿಕೊಂಡು ಹೋಗುವಂತಹ ಶಿಕ್ಷಣದ ಕಡೆ ಗಮನವಿದೆ. ಇದು ಸ್ತ್ರೀ ಪ್ರತಿನಿಧೀಕರಣದ ಸರಿಯಾದ ದಾರಿ ಕೂಡ ಆಗಿದೆ. ಹಾಗೆಯೇ ಧಾರವಾಡದ ಶ್ರೀಮತಿ ಪಣಜೀಕರ್ ಕೃಷ್ಣಾಬಾಯಿಯವರು 1940 ರಲ್ಲಿ ಸ್ತ್ರೀಯರು ಮತ್ತು ಆರ್ಥಿಕ ಸ್ವಾತಂತ್ರ್ಯ ಎಂಬ ಲೇಖನದಲ್ಲಿ ಅತ್ಯಂತ ಆಧುನಿಕ ನಿಲುವುಗಳನ್ನು ತಳೆಯುತ್ತಾರೆ. "ಸ್ತ್ರೀಯರು ತಮ್ಮ ಸ್ವಾತಂತ್ರ್ಯ ಸೂರ್ಯನಿಗೆ ಗ್ರಹಣಹತ್ತಿ ಕವಿದ ಕತ್ತಲೆಯನ್ನು ಕುಗ್ಗಿಸಿ, ಅರುಣೋದಯವನ್ನು ಕಾಣಬೇಕಾದರೆ ಅವರೇ ಶ್ರಮಪಡಬೇಕಾಗಿದೆ. ಹಿಂದೂ ಧರ್ಮಶಾಸ್ತ್ರಗಳಲ್ಲಿಯ ತರ್ಕ – ವಿತರ್ಕಗಳನ್ನು ವಿಚಾರಿಸಿ, ನಿಜವಾದ ಪರಿಸ್ಥಿತಿಯನ್ನು ಬಯಲಿಗೆಳೆಯುವುದು ಒಂದು ಮಾರ್ಗ. ರಜಿಸ್ಟರ್ ಪದ್ಧತಿಯಿಂದ ವಿವಾಹಗಳನ್ನು ಮಾಡಿಕೊಂಡು, ಸಕ್ಸೆಶನ್ ಆಕ್ಟಿನ ಪ್ರಕಾರ ಆರ್ಥಿಕ ಅಧಿಕಾರಗಳನ್ನು ಪಡೆಯುವುದು ಇನ್ನೊಂದು ಮಾರ್ಗ. ಈ ಬಗೆಯ ವಿವಾಹ ಪದ್ಧತಿಯಿಂದ ಇನ್ನಿತರ ಸುಧಾರಣೆಗಳ ಲಾಭವೂ ಸಿಕ್ಕುವುದು. ಸ್ತ್ರೀಯರಲ್ಲಿ ಸಹಜವಾಗಿದ್ದ ಕಲೆಗಳ ಉಪಯೋಗದಿಂದ ಅವರು ಧನಾರ್ಜನೆ ಮಾಡಬೇಕೆಂದರೂ ಶೀಲವೆಂಬ ಶಬ್ದದ ವಿಪರ್ಯಾಸವು ಅವರಿಗೆ ತಡೆಹಾಕುವುದು. ಆದುದರಿಂದ ಸ್ತ್ರೀಯರೇ ನೀತಿ, ಶೀಲ, ಆಚಾರ, ವಿಚಾರಗಳ ಸಮಂಜಸವಾದ ಪರ್ಯಾಲೋಚನೆಯನ್ನು ಮಾಡಬೇಕಾಗಿದೆ" (ಅದೇ; ಪು:164) ಇಂತಹ ನಿಲುವುಗಳನ್ನು ಸ್ವತಃ ಸ್ತ್ರೀಯರೇ ತೆಗೆದುಕೊಂಡಾಗಲೂ ಇವುಗಳು ಮುಂಚೂಣಿಗೆ ಬರದೇ ಸ್ತ್ರೀ ಮಾಧುರ್ಯದ ಅಂಶಗಳನ್ನೇ ವೈಭವೀಕರಿಸಿದ ಮಾದರಿಯೊಂದು ಮುಂದೆ ಸುಮಾರು ಐವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಅಂದಿನ ಬೇರೆ ಬೇರೆ ಮಾಧ್ಯಮಗಳ ಮೂಲಕ ಸ್ಥಾಪಿತವಾಯಿತು.

ಕನ್ನಡದ ಜನಪ್ರಿಯ ಸಿನಿಮಾಗಳಲ್ಲಿ, ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಧಾರಾವಾಹಿಗಳಲ್ಲಿ, ಅಂದಿನ ಪಠ್ಯಪುಸ್ತಕಗಳಲ್ಲಿ ಬಂದ ವಿವರಗಳಲ್ಲಿ ಮೇಲಿನ 'ಕಲ್ಪಿತ' ಮಾದರಿಗಳನ್ನೇ ಪೋಷಿಸಲಾಯಿತು. ಈ ಮಾದರಿಯ ಪ್ರಕಾರ ಹೆಣ್ಣು ಕುಟುಂಬದ ಒಳಿತಿಗೆ ಎಷ್ಟು ಬೇಕೋ ಅಷ್ಟೇ ವಿದ್ಯಾಭ್ಯಾಸ ಪಡೆದುಕೊಂಡು ಸುಶೀಲ ಗುಣಗಳಿಂದ, ಅಪಾರ ತ್ಯಾಗದಿಂದ ಕುಟುಂಬ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಕೆಲಸ ಮಾಡಬೇಕು. ಅವಳೊಬ್ಬ ಅಚ್ಚುಕಟ್ಟಾಗಿ ಮನೆನಿರ್ವಹಣೆ ಮಾಡುವ ಆದರ್ಶ ಸತಿಯಾಗಿ, ಆದರ್ಶ ಮಾತೆಯಾಗಿ ಇದ್ದರೆ ಸಾಕು. ಇದನ್ನು ಮೀರಿದರೆ ಅವಳು ಸೊಕ್ಕಿನ ಹೆಣ್ಣು ಎಂಬಂತೆ ಅವಳನ್ನು ಚಿತ್ರಿಸುವ ಅನೇಕ ಕೃತಿಗಳೂ ಸಿನಿಮಾಗಳು ರೂಪುಗೊಂಡವು. ಇಂತಹ ಸೊಕ್ಕಿದ ಹೆಣ್ಣನ್ನು ಪಳಗಿಸುವ ಗಂಡಿನ ಜನಪ್ರಿಯ ಮಾದರಿ ತೀರಾ ಈಚಿನವರೆಗೂ ಪುನಾರಾವರ್ತನೆಗೊಂಡವು. ಇವೆಲ್ಲವೂ ಗಂಡಸರು ಮಾತ್ರವಲ್ಲ, ಹೆಂಗಸರೂ ಕೂಡ ಈ ಮಾದರಿಯನ್ನು ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾದವು.

ಹೆಣ್ಣಿನ ಪ್ರತಿನಿಧೀಕರಣದ ನಿರೂಪಣೆಗಳ ಇನ್ನೊಂದು ರಾಜಕಾರಣವೆಂದರೆ, ಹೆಣ್ಣಿನ ಅಪಾತ್ರಗಳಿಗೆ ಮನ್ನಣೆ ಕೊಡುವುದು. ಇದನ್ನು ಇಂದಿನ ಟಿ.ವಿ ಮತ್ತು ಜಾಹೀರಾತು ಹಾಗು ಸಿನಿಮಾ ಕ್ಷೇತ್ರಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಇಂತಹ ಅಪಾತ್ರ ಮನ್ನಣೆ ಹೆಣ್ಣೇ ಸ್ವತಃ ತಪ್ಪು ದಾರಿಯನ್ನು ಅಪ್ಪಿಕೊಳ್ಳುವಂತೆ ಪ್ರಚೋದಿಸ ತೊಡಗುತ್ತವೆ. ಉದಾಹರಣೆಗಾಗಿ ಹೆಂಗಸರ ಉಡುಗೆ ತೊಡುಗೆಗಳಿಗೆ ಸಂಬಂಧಿಸಿದಂತೆ ನಮ್ಮ ಮಾಧ್ಯಮಗಳಲ್ಲಿ ಇರುವ ನಿಲುವುಗಳನ್ನು ಗಮನಿಸಬಹುದು. ಹೆಣ್ಣು ಅರೆನಗ್ನವಾಗಿ ಅಲಂಕಾರ ಮಾಡಿಕೊಂಡಾಗ ' ಯು ಆರ್ ಲುಕಿಂಗ್ ವೆರಿ ಸೆಕ್ಸಿ' ಎಂಬೊಂದು ಮೆಚ್ಚಿಗೆಯ ಮಾತುಗಳು ಟಿ.ವಿ ಶೋಗಳಲ್ಲಿ ಬಹಳ ಸಾಮಾನ್ಯವಾಗಿದೆ. ಇಂದಿನ ಪೀಳಿಗೆಯವರು ಇದರಲ್ಲಿ ಮುಜುಗರವಾಗುವ ಮಾತು ಏನಿದೆ? ಎಂದು ಕೇಳುತ್ತಾರೆ. ಅವರ ಪ್ರಕಾರ ಸೆಕ್ಸಿ ಎಂದರೆ ಆಕರ್ಷಕ ಎಂದಷ್ಟೇ ಅರ್ಥ. ಅದೇನು ಆಕಾಶ ತಲೆಮೇಲೆ ಬೀಳುವ ವಿಚಾರವಲ್ಲ. ಆದರೆ ವಿಷಯ ಇಷ್ಟು ಸರಳವಾಗಿದೆಯೇ? ಹೆಣ್ಣನ್ನು ಎಲ್ಲಿಡಬೇಕು ಹೇಗಿಡಬೇಕು ಎಂಬ ಹುನ್ನಾರವು ಇದರ ಹಿಂದಿಲ್ಲವೇ? ಹೆಣ್ಣು ಮತ್ತೆ ತನ್ನ ಬುದ್ಧಿಗಿಂತಲೂ ದೇಹವನ್ನೇ ಪ್ರೀತಿಸುವಂತೆ ಮಾಡುವ ಎಲ್ಲ ದಾರಿಗಳನ್ನು ಈ ಮಾಧ್ಯಮಗಳು ಮುಕ್ತವಾಗಿಟ್ಟಿವೆ. ಅದನ್ನು ಸ್ತ್ರೀ ಪುರುಷರು ಒಪ್ಪಿಕೊಳ್ಳುವಂತೆ ಮಾಡಲಾಗುತ್ತಿದೆ. ಎಲ್ಲರೂ ಮಾರುಕಟ್ಟೆಯ ಸರಕುಗಳಾಗಿ, ಗ್ರಾಹಕರಾಗಿ ಬದಲಾಗುವಂತೆ ಮಾಡುವುದರ ಒಂದಂಗವಾಗಿ ಹೆಣ್ಣನ್ನು ಹೀಗೆ ನಿರೂಪಿಸಲಾಗುತ್ತಿದೆ.

ಇನ್ನೊಂದೆಡೆ ಇದಕ್ಕೆ ತದ್ವಿರುದ್ಧವಾದ ವಾದವು ಸದಾ ಚರ್ಚೆಯಲ್ಲಿರುತ್ತದೆ. ಅದೆಂದರೆ ಹೆಣ್ಣಿಗೆ ವಿಧಿಸುವ ವಸ್ತ್ರ ಸಂಹಿತೆಯದು. ಇತ್ತೀಚಿನ ದಿನಗಳಲ್ಲಿ ಇದು ಎಷ್ಟು ಅತಿರೇಖಕ್ಕೆ ಹೋಗಿದೆಯೆಂದರೆ ಅರೆನಗ್ನವಾಗಿ ಕಾಣಿಸಿಕೊಳ್ಳುವ ಹೆಣ್ಣಿನ ಚಾಳಿಯಿಂದಾಗಿ ಇನ್ನೆಲ್ಲೋ ಪಾಪದ ಹೆಣ್ಣುಗಳ ಮೇಲೆ ಅತ್ಯಾಚಾರವಾಗುತ್ತಿದೆ ಎನ್ನುವಷ್ಟು. ಇಂತಹ ವಾದಗಳನ್ನು ಮುಂದಿಟ್ಟು ಅವಳ ಮೇಲೆ ವಸ್ತ್ರ ಸಂಹಿತೆಯ ಅಸ್ತ್ರ ಪ್ರಯೋಗಿಸಿ ಅವಳನ್ನು ಮತ್ತೊಮ್ಮೆ ಸಾರ್ವಜನಿಕ ಜೀವನದಿಂದ ಮುಚ್ಚಿಡುವ ಸಂಚನ್ನು ರೂಪಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಈ ವಾದದ ಪರವಾಗಿಯೂ ಕೆಲವು ಹೆಂಗಸರೇ ಮಾತನಾಡುವುದೂ ಕಾಣುತ್ತಿದೆ. ಗಂಡಸರನ್ನು ಮೆಚ್ಚಿಸುವ ಅಥವಾ ಗಂಡಸರು ತಮ್ಮ ಪರವಾಗಿಯೇ ಮಾತನಾಡುತ್ತಾರೆ ಎಂದು ನಂಬುವ ವಲಯದಿಂದ ಇದಾಗುತ್ತಿದೆ. ಸಂಕೋಲೆಗೆ ತಾವೇ ಕೈಗಳನ್ನು ಒಪ್ಪಿಸುವ ಈ ಪರಿ ಹೊಸದೇನೂ ಅಲ್ಲ. ಆದರೆ ಎಲ್ಲರೂ ಮರೆಯುವ ವಿಚಾರವೆಂದರೆ, ಇವರ ಈ ವಾದ ಇಲ್ಲಿ ನಡೆಯುತ್ತಲೇ ಇರುವಾಗ

ಅಲ್ಲಿ ಅತ್ಯಾಚಾರಿ ತನಗೆ ಸಿಗುತ್ತಿರುವ ಈ ಬೆಂಬಲಕ್ಕೆ ಮೀಸೆಯ ಮರೆಯಲ್ಲೇ ನಗುತ್ತಿದ್ದಾನೆ ಎಂಬುದು. ಹೆಣ್ಣಿನ ದೇಹಕ್ಕೆ ಮಾತ್ರ ಮನ್ನಣೆ ನೀಡಿ ಹೆಣ್ಣಿನ ಚಿಂತನೆಗಳಿಗೆ ಮನ್ನಣೆ ನೀಡದೇ ಇದ್ದುದರ ಪರಿಣಾಮ ಈ ವಾದಗಳಾಗಿವೆ. ಹೆಣ್ಣು ಬತ್ತಲೆ ತಿರುಗಿದರೂ ಅವಳ ಮೇಲೆ ಅತ್ಯಾಚಾರ ಮಾಡಲು ಯಾರಿಗೂ ಹಕ್ಕಿಲ್ಲ ಎಂಬುದನ್ನು ಧ್ವನಿ ಎತ್ತಿ ಹೇಳಲು ಯಾಕೆ ಸಾಧ್ಯವಾಗುತ್ತಿಲ್ಲ ಎಂಬುದು ವಿಚಾರ ಮಾಡಬೇಕಾದ ಸಂಗತಿಯಾಗಿದೆ.

ಮೇಲಿನ ಎರಡೂ ನೆಲೆಗಳು ಮೇಲ್ನೋಟಕ್ಕೆ ಪರಸ್ಪರ ವಿರುದ್ಧ ಎಂದು ಕಂಡರೂ ಪರಿಣಾಮದಲ್ಲಿ ಮಾತ್ರ ಎರಡೂ ಒಂದೇ ಆಗಿರುತ್ತವೆ. ಮಾರುಕಟ್ಟೆ ಪ್ರಣೀತ ನೆಲೆ ಹೆಣ್ಣಿನ ದೇಹವನ್ನು ಆಧರಿಸಿ ನೈತಿಕ ಎಲ್ಲೆಯನ್ನು ಮೀರಿ ಅವಳನ್ನು ಬಳಸಿ ಎಸೆಯುತ್ತದೆ. ಹೆಣ್ಣನ್ನು ಮುಚ್ಚಿಡುವ ನೆಲೆ ಹೆಣ್ಣಿನ ದೇಹದ ಮೇಲೆ ಸಂಪೂರ್ಣ ಹಕ್ಕನ್ನು ಗಂಡಿಗೆ ನೀಡಿ ಅವನು ಅವಳನ್ನು ಇಷ್ಟ ಬಂದಂತೆ ಬಳಸಿ ಎಸೆಯಲು ಅನುಮತಿ ನೀಡುತ್ತದೆ. ಈ ಎರಡೂ ನೆಲೆಗಳನ್ನು ಸಂಪೂರ್ಣ ನಿರಾಕರಿಸಬೇಕಾಗಿದೆ. ಆದರೆ ವಿಪರ್ಯಾಸವೆಂದರೆ ಇಂದಿನ ಪ್ರಬಲ ಮಾಧ್ಯಮವಾದ ಟಿ.ವಿ.ಗಳಲ್ಲಿ ಬರುವ ಎಲ್ಲ ಜನಪ್ರಿಯ ಧಾರಾವಾಹಿಗಳು ಹೆಣ್ಣಿನ ಕುರಿತಾದ ಈ ನೆಲೆಗಳನ್ನೇ ಎಲ್ಲರ ತಲೆಯಲ್ಲಿ ತುರುಕುತ್ತಿವೆ. ಹೀಗಾಗಿ ಹೆಣ್ಣಿನ ಕುರಿತಾದ ಪುರುಷನ ಅನುಕೂಲಕ್ಕೆ ತಕ್ಕ ನಿರೂಪಣೆಗಳನ್ನೇ ಹೆಣ್ಣೂ ಒಪ್ಪಿಕೊಂಡು ಮುಂದುವರಿಸುವುದು ಅನೂಚಾನವಾಗಿದೆ. ಹೆಣ್ಣಿನ ಒಟ್ಟು ಸಮಸ್ಯೆಯ ಮೂಲವನ್ನು ಹುಡುಕುವುದರ ಬದಲಿಗೆ ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ನೆಲೆಯನ್ನೇ ವೈಭವೀಕರಿಸುತ್ತಾ ಹೆಣ್ಣು ಹೆಣ್ಣನ್ನೇ ದ್ವೇಷಿಸಲು ವಾತಾವರಣವನ್ನು ಇನ್ನಷ್ಟು ಸಜ್ಜುಗೊಳಿಸುವುದರಲ್ಲಿ ಈ ಮಾಧ್ಯಮಗಳು ವ್ಯಸ್ತವಾಗಿವೆ. ದೃಶ್ಯ ಮಾಧ್ಯಮಗಳಲ್ಲಿ ನಮ್ಮ ಸುತ್ತಲೂ ಜೀವಂತವಾದ ಹಲವು ಬೌದ್ಧಿಕವಾದ, ಸಾಮಾಜಿಕವಾದ ಚಳುವಳಿಗಳಲ್ಲಿ ಭಾಗಿಯಾಗಿರುವ ಮಹಿಳೆಯರು ಮತ್ತು ಪುರುಷರು ಎಷ್ಟು ಬಾರಿ, ಯಾವುದೇ ಸಮಯದಲ್ಲಿ ಕಾಣಿಸಿಕೊಂಡಿದ್ದಾರೆ,ಸ್ತ್ರೀವಾದೀ ಚಿಂತನೆಗಳಿಗೆ ಎಷ್ಟು ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ ಎಂಬುದನ್ನು ಗಮನಿಸಿದರೂ ಇದು ಸ್ಪಷ್ಟವಾಗುತ್ತದೆ. ಈಗಲೂ ಕೆಲವು ಗಂಭೀರ ಬರಹ ಮಾಧ್ಯಮಗಳೇ ನಮ್ಮ ಆಶಾಕಿರಣಗಳಾಗಿದ್ದಾವೆ. (ಗೃಹಶೋಭಾ, ಪ್ರಿಯಾಂಕ ಗಳಂತ ಪತ್ರಿಕೆಗಳು ಮಾಡುವುದು ಟಿ.ವಿ.ದಾರಾವಾಹಿಗಳ ಕೆಲಸವನ್ನೇ. ಇಂತಹ ನಿರುಪಯುಕ್ತ ಪತ್ರಿಕೆಗಳ ಕುರಿತು ಇಲ್ಲಿ ಹೇಳುತ್ತಿಲ್ಲ.) ಆದರೆ ಅವುಗಳನ್ನು ಓದುವವರನ್ನೂ ಈ ದೃಶ್ಯಮಾಧ್ಯಮಗಳು ಕಿತ್ತುಕೊಂಡಿವೆ ಎಂಬುದೂ ನಿಜ. ಈ ಹಿನ್ನೆಲೆಯಲ್ಲಿ ಮಲೆನಾಡಿಗೆ ವಿಶಿಷ್ಟವಾದ ಪರಿಸ್ಥಿತಿಗಳಾಗಲೀ, ಅಲ್ಲಿನ ಹೆಣ್ಣಿನ ನಿಜ ಸ್ಥಿತಿಗಳಾಗಲೀ ಇಂದಿನ ಯಾವ ಮಾಧ್ಯಮಗಳಲ್ಲೂ ಬೆಳಕು ಕಾಣುತ್ತಿಲ್ಲ. ಇನ್ನೊಂದೆಡೆಗೆ, ಮಾಧ್ಯಮಗಳು ನಿರೂಪಿಸುತ್ತಿರುವ ಹೆಣ್ಣಿನ ಅಪಾತ್ರ ನಿರೂಪಣೆಗಳನ್ನು ಒಪ್ಪಿಕೊಳ್ಳುವುದರಲ್ಲಿ ಇತರ ಭಾಗದವರಂತೆ ಮಲೆನಾಡಿನ ಹೆಣ್ಣುಮಕ್ಕಳೇನೂ ಹಿಂದೆಬಿದ್ದಿಲ್ಲ. ದೃಶ್ಯಮಾಧ್ಯಮಗಳ ಈ ಬೇಜವಾಬ್ದಾರೀ ನಿಲುವನ್ನು ನಿರಾಕರಿಸುವ, ಪ್ರಶ್ನಿಸುವ ಎಚ್ಚರ ಎಲ್ಲರಲ್ಲಿ ಬರಬೇಕಾಗಿದೆ. ಮತ್ತು ತಮ್ಮತನವನ್ನು ಕಾಪಾಡಿಕೊಳ್ಳಬೇಕಾಗಿದೆ.

*ತೊಂಬತ್ತರ ದಶಕದಲ್ಲಿ ಟಿ.ವಿ. ಮತ್ತು ಜಾಗತೀಕರಣಗಳು ಒಂದರ ಸಂಗಾತಿ ಇನ್ನೊಂದು ಎಂಬಂತೆ ನಮ್ಮ ಸಮಾಜವನ್ನು ಆಕ್ರಮಿಸಿಕೊಂಡವು. ಇವು ಮಹಿಳೆಯನ್ನು ಗ್ರಹಿಸಿಕೊಂಡ ಬಗೆಯಲ್ಲೂ ಸಾಮ್ಯತೆ ಇದೆ. ಅದೆಂದರೆ ಹೆಣ್ಣು 'ಸರಕು' ಎಂಬ ಜಾಗತೀಕರಣದ ಮುಖ್ಯ ಕಾರ್ಯಕ್ಷೇತ್ರವಾದ ಮಾರುಕಟ್ಟೆ ಭಾವಿಸಿದರೆ, ಆ ಭಾವನೆಯನ್ನು ಪೋಷಿಸುವ ಕೆಲಸವನ್ನು ಟಿ.ವಿ. ಮಾಧ್ಯಮಗಳು ಮಾಡಿದವು. ಈ ಎರಡು ಸನ್ನಿವೇಶಗಳಿಗಿಂತ ಹಿಂದೆ ಹೆಣ್ಣಿನ ಪರಿಸ್ಥಿತಿಯ ಕುರಿತಾಗಿ ಯಾವ ದೋರಣೆಗಳನ್ನು ಮುಂಚಾಚಲು ಪ್ರಯತ್ನಿಸಲಾಗುತ್ತಿತ್ತು ಎಂಬದನ್ನು ನೆನಪಿಸಿಕೊಳ್ಳುವುದು ಸೂಕ್ತ.

# ಮಲೆನಾಡು: ಮಹಿಳೆ ಮತ್ತು ಕೃಷಿ

**ಡಾ. ಅಂಜಲಿ**

> "ಮಣ್ಣನ್ನು ನಂಬಿ ನಾ ಮಣ್ಣಿಂದ ಬದುಕೇನ
> ಮಣ್ಣಿನಗೆ ಮುಂದೆ ಹೊನ್ನು ! ಅಣ್ಣಯ್ಯ
> ಮಣ್ಣೆ ಲೋಕದಲಿ ಬೆಲೆಯಾದ್ದು"

ಎಂದು ಭಾವಿಸಿ ಬದುಕುತ್ತಿರುವ ಜನರ ಸಂಖ್ಯೆ ನಮ್ಮ ನಾಡಿನಲ್ಲಿ ಅಪಾರ. ಅಲೆಮಾರಿಯಾಗಿದ್ದ ಮಾನವನನ್ನು ಒಂದೆಡೆ ನೆಲೆ ನಿಲ್ಲಿಸಿದ್ದೇ ಕೃಷಿ. ನೀರಿನ ಆಶ್ರಯವಿರುವ ಸ್ಥಳಗಳಲ್ಲಿ ಆಹಾರ ಒದಗಿಸುವ ಸಸ್ಯಗಳನ್ನು ನೆಟ್ಟು ಬೆಳೆಸಬಹುದೆಂದು ಕಂಡುಕೊಂಡಿದ್ದು ಮಾನವ ವಿಕಾಸ ಪಥದ ಪ್ರಮುಖ ಹೆಜ್ಜೆ. ಆಧುನಿಕ ಕೃಷಿಯ ಮೂಲ ಅಥವಾ ಆರಂಭವನ್ನು ನಾವು ಅಲ್ಲಿಂದಲೇ ಗುರುತಿಸಬಹುದು. ಆಹಾರ ಉತ್ಪಾದನೆಯೇ ಮುಖ್ಯ ಗುರಿಯಾದ ಈ ಚುಟುವಟಿಕೆ ಸಾವಿರಾರು ವರ್ಷಗಳಲ್ಲಿ ತೀವ್ರ ಸ್ವರೂಪದ ಬದಲಾವಣೆಗೆ ಒಳಗಾಗಿದೆ.

ನೀರಿನ ನಿರ್ಧಾರಿತ ಅಂಶವಾದ ಬೆಟ್ಟ-ಗುಡ್ಡಗಳಿಂದ ಕೂಡಿದ, ಅಪಾರ ಮಳೆಗೆ ಕಾರಣವಾಗಿರುವ ಪ್ರದೇಶ ಮಲೆನಾಡು. ಕರ್ನಾಟಕದಲ್ಲಿ ಪಶ್ಚಿಮಘಟ್ಟಗಳ ಮಡಿಲಲ್ಲಿರುವ ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ , ತೀರ್ಥಹಳ್ಳಿ; ಚಿಕ್ಕಮಗಳೂರಿನ ಮೂಡಿಗೆರೆ, ಕೊಪ್ಪ, ಶೃಂಗೇರಿ, ಬಾಳೆಹೊನ್ನೂರು; ಉತ್ತರ ಕನ್ನಡದ ಸಿರ್ಸಿ, ಯಲ್ಲಾಪುರ; ಹಾಸನದ ಸಕಲೇಶಪುರ, ಕೊಡಗಿನ ಮಡಿಕೇರಿ, ಸೋಮವಾರಪೇಟೆ ಅಪ್ಪಟ ಮಲೆನಾಡೆಂದು ಗುರುತಿಸಲ್ಪಟ್ಟಿವೆ. ಮಲೆನಾಡು ಮಳೆಯ ನಾಡು ಕೂಡ. ಸದಾ ಹದವಾಗಿರುವ ನೆಲ ಹಚ್ಚ ಹಸುರಿನ ಬೆಳೆಗೆ ಕಾರಣ ಆದ್ದರಿಂದ ಇಲ್ಲಿ ಮಣ್ಣಿಗೂ ಮಾನವನಿಗೂ ಅವಿನಾಭಾವ ಸಂಬಂಧ. ಇಲ್ಲಿನ ಜನ ಜೀವನದ ಮುಖ್ಯ ಉದ್ಯೋಗ ಕೃಷಿ.

"ಭೂಮಿಯನ್ನು ಉತ್ತು, ಬೀಜವನ್ನು ಬಿತ್ತಿ, ಪೈರನ್ನು ಬೆಳೆಸಿ, ಫಸಲು ಕೊಯ್ಲು ಮಾಡಿ ಬೆಳೆ ತೆಗೆಯುವ ಮತ್ತು ಪಶು ಸಂಪತ್ತನ್ನು ವರ್ಧಿಸುವ ಕಲೆ ಹಾಗೂ ವಿಜ್ಞಾನವೇ ಕೃಷಿ".[1] "ಕೃಷಿತೋ ನಾಸ್ತಿ ದುರ್ಭಿಕ್ಷ:" ಎಂದು ನಂಬಿದವರು ಇವರು. ಲಭ್ಯ ಅಂಕಿ ಅಂಶದಂತೆ ಶಿವಮೊಗ್ಗ ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿರುವ ಕುಟುಂಬಗಳಲ್ಲಿ ಒಟ್ಟು ಭೂ ಹಿಡುವಳಿದಾರರ ಸಂಖ್ಯೆ ಮತ್ತು ಕೃಷಿ ಭೂಮಿಯ ವಿಸ್ತೀರ್ಣ ಹೀಗಿದೆ. [2(ಎ)]

| ತಾಲ್ಲೂಕು | ಪುರುಷರು ಸಂಖ್ಯೆ | ಮಹಿಳೆಯರು ಸಂಖ್ಯೆ | ಪು. ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಮ. ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|---|---|
| ತೀರ್ಥಹಳ್ಳಿ | 19065 | 5021 | 21481 | 5835 |
| ಹೊಸನಗರ | 13303 | 3148 | 17596 | 4332 |
| ಸಾಗರ | 22970 | 6396 | 25827 | 7089 |

ಹಾಗೆಯೇ ಕೊಡಗುಜಿಲ್ಲೆಯಲ್ಲಿ ಕೃಷಿಸಾಗುವಳಿದಾರರ ಮತ್ತು ಕೃಷಿಕಾರ್ಮಿಕರ ಸಂಖ್ಯೆ ಹೀಗಿದೆ. [2(ಬಿ)]

| ತಾಲ್ಲೂಕು | ಸಾಗುವಳಿದಾರರ ಸಂಖ್ಯೆ | | | ಕೃಷಿ ಕಾರ್ಮಿಕರ ಸಂಖ್ಯೆ | | |
|---|---|---|---|---|---|---|
| | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ಮಡಿಕೇರಿ | 1346 | 1072 | 2418 | 1307 | 1032 | 2339 |
| ಸೋಮವಾರಪೇಟೆ | 2655 | 2707 | 5362 | 2619 | 2667 | 5286 |

ಹೀಗೆ ಅಪಾರ ಸಂಖ್ಯೆಯಲ್ಲಿ ಕೃಷಿಯಲ್ಲಿ ತೊಡಗಿರುವ ಇವರು ಮುಖ್ಯವಾಗಿ ಆಹಾರ ಬೆಳೆಗಳಾದ ಭತ್ತ, ಜೋಳ, ಮತ್ತು ವಾಣಿಜ್ಯ ಬೆಳೆಗಳಾದ ಅಡಿಕೆ, ಕಾಫಿ, ಜೊತೆಗೆ ತರಕಾರಿ, ಹೂವು, ಹಣ್ಣು ಬೆಳೆಯುತ್ತಾರೆ. ಹೀಗೆ ಕೃಷಿಯಲ್ಲಿ ತೊಡಗಿರುವ ಪ್ರದೇಶದಲ್ಲಿ ಮಹಿಳೆಯ ಕಾರ್ಯಕ್ಷೇತ್ರವೇನು? ಸ್ಥಿತಿಗತಿ ಏನು?, ಸಾಧನೆಗಳೇನು? ಸಮಸ್ಯೆಗಳೇನು? ಎಂಬುದು ಬಹಳ ಕುತೂಹಲಕಾರಿಯಾದುದು.

ಮಲೆನಾಡಿನ ಪ್ರದೇಶದಲ್ಲಿ ಅದರಲ್ಲೂ ಮುಖ್ಯವಾಗಿ ಸಾಗರ, ತೀರ್ಥಹಳ್ಳಿ, ಹೊಸನಗರ ಭಾಗದಲ್ಲಿ ಮುಖ್ಯ ಬೆಳೆ ಅಡಿಕೆ, ಕೃಷಿಯಾಧಾರಿತ ಕುಟುಂಬಗಳಲ್ಲಿ ಮಹಿಳೆಯ ಜವಾಬ್ದಾರಿ ಮಹತ್ತರವಾದುದು. ಇಲ್ಲಿನ ಮಹಿಳೆಯರು ಸೂರ್ಯೋದಯಕ್ಕಿಂತ ಮೊದಲೇ ದೈನಂದಿನ ಕೆಲಸ ಕಾರ್ಯ ಆರಂಭಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಕೌಟುಂಬಿಕ ಕೆಲಸಗಳೂ ಅಪಾರ. ಅದರೊಂದಿಗೆ ಕೃಷಿಗೆ ಪೂರಕವಾದ ಕಾರ್ಯಗಳಲ್ಲೂ ಇವರು ಮುಳುಗುತ್ತಾರೆ. ಅಡಿಕೆ ಬೆಳೆಗೆ ಔಷಧಿ ಹೊಡೆಸುವುದು ಪುರುಷನ ಕೆಲಸವಾದರೆ, ಮರಕ್ಕೆ ಮಣ್ಣು ಗೊಬ್ಬರ ಹಾಕಿ ಬೇಸಾಯ ಮಾಡುವುದು ಮಹಿಳೆಯ ಕೆಲಸ. ಹಾಗೆಯೇ ಕಳೆ ತೆಗೆಯುವ ಕಾರ್ಯವೂ ಸಹ ಮಹಿಳೆಯದ್ದೇ.

ಅಡಿಕೆ ಬೆಳೆಯ ಕೊಯ್ಲು ಸಮಯ ಬಂದಿತೆಂದರೆ, ಬಹುದೊಡ್ಡ ಜವಾಬ್ದಾರಿ ಮಹಿಳೆಯ ಮೇಲೆ ಬೀಳುತ್ತದೆ. ಆ ಸಮಯದಲ್ಲಿ ಕೃಷಿ ಕುಟುಂಬಗಳಲ್ಲಿ ಭರದ ಸಿದ್ಧತೆ ಸಾಗುತ್ತದೆ. ಕೊಯ್ಲಿಗೆ ಬರುವಂತಹ ಕೆಲಸಗಾರರಿಗೆ ತಿಂಡಿ, ಊಟ ಸಿದ್ಧಪಡಿಸುವುದು, ಮನೆಯಂಗಳದಲ್ಲಿ ರಾಶಿ ಬಿದ್ದಿರುವ ಅಡಿಕೆಗೊನೆಗಳನ್ನು ವಿವಿಧ ವಿಧಕ್ಕನುಗುಣವಾಗಿ ವಿಂಗಡಿಸಿ, ಅಂದವಾಗಿ ಕುತ್ರೆ ಹಾಕುವುದು; ಮನೆಗೆಲಸಗಳನ್ನೆಲ್ಲ ಬೇಗನೆ ಮುಗಿಸಿ ಅಡಿಕೆ ಸುಲಿಯುವುದು; ಸುಲಿದ ಅಡಿಕೆಯನ್ನು ಬೇಯಿಸಲು ದೊಡ್ಡ ಒಲೆಗೆ ಬೆಂಕಿ ಹಾಕುವುದು; ಬೆಂದ ಅಡಿಕೆಯನ್ನು ಬಿಸಿಲಿನಲ್ಲಿ ಒಣಗಿಸುವುದು; ಒಣಗಿದ ಅಡಿಕೆಯನ್ನು ಆರಿಸಿ, ವಿಧ–ವಿಧವಾಗಿ ಗುಂಪಲ್ಲಿ ವಿಂಗಡಿಸಿ ಚೀಲಕ್ಕೆ ತುಂಬಿ ಮಾರಾಟಕ್ಕೆ ಸಿದ್ಧಪಡಿಸುವುದು, ಹೀಗೆ ಮಹಿಳೆಗೆ ಕೈ ತುಂಬಾ ಕೆಲಸ. ಅದನ್ನು ಮಾರುಕಟ್ಟೆಗೆ ಒಯ್ದು ವ್ಯಾಪಾರ ಮಾಡಿ ಹಣ ತರುವುದು ಪುರುಷನ ಕೆಲಸವಾಗಿರುತ್ತದೆ.

ಇದರೊಂದಿಗೆ ಕೊಯ್ಲಿಗೆ ಬರುವ ಸಹಾಯಕ ಕೆಲಸಗಾರರಿಗೆ ಹೊತ್ತು – ಹೊತ್ತಿಗೆ ಊಟೋಪಚಾರ ಮಾಡುವುದು ಮಹಿಳೆಯ ಕೆಲಸದ ಇನ್ನೊಂದು ಭಾಗ. ಒಟ್ಟಾರೆ ಅಡಿಕೆ ಕೊಯ್ಯುವ ಸಮಯದಲ್ಲಿ ಮಹಿಳೆಗೆ ಕ್ಷಣವೂ ವಿರಾಮವಿರುವುದಿಲ್ಲ. ಊಟ, ನಿದ್ರೆ, ವಿಶ್ರಾಂತಿಯನ್ನು ಆಕೆ ತ್ಯಾಗ ಮಾಡಲೇಬೇಕಾಗುತ್ತದೆ. ಅವಳ ಎಲ್ಲಾ ಕೆಲಸಕಾರ್ಯಗಳಲ್ಲಿ ಪುರುಷ ಪಾಲ್ಗೊಂಡು ಸಹಕರಿಸುವನಾದರೂ ಮಹಿಳೆಯ ತೊಡಗಿಸಿಕೊಳ್ಳುವಿಕೆ ಗಮನಾರ್ಹವಾದುದು.

ಇವು ಸ್ವಂತ ಅಡಿಕೆ ತೋಟ ಹೊಂದಿದ ಕುಟುಂಬದ ಮಹಿಳೆಯ ಪಾಲ್ಗೊಳ್ಳುವಿಕೆಯಾದರೆ ಸ್ವಂತ ಅಡಿಕೆ ತೋಟವಿಲ್ಲದ ಬಡ ಕುಟುಂಬದ ಮಹಿಳೆಯರು ಭಿನ್ನವೇ ಆದ ರೀತಿಯಲ್ಲಿ ಭಾಗವಹಿಸುತ್ತಾರೆ. ಅವರು ಮುಂಜಾನೆ ಬೇಗನೆ ಎದ್ದು ಒಲೆಯುರಿಹಾಕಿ, ಅನ್ನ/ತಿಂಡಿ ಮಾಡಿ ಕೂಲಿ ಕೆಲಸಕ್ಕೆ ಹೊರಡುತ್ತಾರೆ. ಅಡಿಕೆ ತೋಟದಲ್ಲಿ ಕಳೆ ತೆಗೆಯುವುದು; ಬಿದ್ದಿರುವ ಅಡಿಕೆ ಕಾಯಿಗಳನ್ನು ಆರಿಸಿ ತರುವುದು ಹೀಗೆ ಅಡಿಕೆ ಕೊಯ್ಲಿಗೆ ಪೂರಕವಾದ ಕಾರ್ಯ ಮುಗಿಸಿ ಮಧ್ಯಾಹ್ನ 3 ಗಂಟೆಗೆ ಮನೆಗೆ ಹಿಂದಿರುಗುತ್ತಾರೆ. ಸ್ನಾನ ಮಾಡಿ, ಊಟ ಮಾಡಿ, ಮನೆಗೆಲಸ ಮುಗಿಸಿ 5 ಗಂಟೆಯ ಸುಮಾರಿಗೆ ಪುನ; ಅಡಿಕೆ ಸುಲಿಯಲು ಹೊರಡುತ್ತಾರೆ. ಇವರು ಹಿಂದಿರುಗುವುದು ರಾತ್ರಿ 11–12 ಗಂಟೆಗಾಗಿರುವುದರಿಂದ ಚಿಕ್ಕ ಮಕ್ಕಳನ್ನು ಜೊತೆಗೆ ಕರೆದೊಯ್ಯುತ್ತಾರೆ. ಶಾಲೆಗೆ ಹೋಗುವ ಮಕ್ಕಳಾದರೆ ಅಡಿಕೆ ಸುಲಿಯುವ ಅಂಗಳದಲ್ಲಿಯೇ ಗೋಣಿ ಚೀಲ ಹಾಸಿಕೊಂಡು ಓದುತ್ತಾ ಬರೆಯುತ್ತ ಕಾಲ ಕಳೆಯುತ್ತಾರೆ. ಅಲ್ಲಿ ನೀಡುವ ತಿಂಡಿ/ಊಟವೇ ಅವರ ಅಂದಿನ ರಾತ್ರಿಯ ಹೊಟ್ಟೆಪಾಡಾಗುತ್ತದೆ. ಮಕ್ಕಳು ಅಲ್ಲಿಯೇ ಮಲಗಿ ನಿದ್ರಿಸುವುದೂ ಇದೆ.

ಅಡಿಕೆ ಸುಲಿಯುವ ವಿಶಾಲ ಅಂಗಳದಲ್ಲಿ 6 ರಿಂದ 15–20ರವರೆಗೆ ಜನರಿರುತ್ತಾರೆ. ಅಲ್ಲಿ ಸಂಭ್ರಮದ ವಾತಾವರಣವಿರುತ್ತದೆ. ಅವರು ಪರಸ್ಪರ ಒಗಟು ಕೇಳುವುದು, ಗಾದೆ, ಹಾಸ್ಯ ಹೇಳುವುದು, ಸಾಮಾಜಿಕ, ಕೌಟುಂಬಿಕ ವಿಷಯಗಳನ್ನು ಚರ್ಚೆ ಮಾಡುವುದು, ಯಕ್ಷಗಾನ, ಹರಿಕಥೆಯ ಧ್ವನಿ ಮುದ್ರಣ ಹಾಕಿಕೊಂಡು ಕೇಳುವುದು ಹೀಗೆ ಜನಪದ ಕಲೆಗಳ ಆಕರ್ಷಕ ಪ್ರದರ್ಶನ ಅಲ್ಲಾಗುತ್ತದೆ ಇದರಿಂದ ದುಡಿಮೆಯ ಶ್ರಮ ಅರಿವಾಗುವುದಿಲ್ಲ. ಹಗಲೆಲ್ಲ ದುಡಿದು ದಣಿದಿದ್ದರೂ ನಿದ್ರೆ ಬರುವುದಿಲ್ಲ. ನಡುರಾತ್ರಿಯವರೆಗೂ ಅಡಿಕೆ ಸುಲಿತ ಸಾಗುತ್ತದೆ ನಂತರ ಅವರು ಸುಲಿದ ಅಡಿಕೆಯನ್ನು ಅವರ ಸಮ್ಮುಖದಲ್ಲೇ ಡಬ್ಬಿ ಅಥವಾ ಕೊಳಗದಲ್ಲಿ ಅಳೆದು, ಲೆಕ್ಕ ಬರೆದಿಡಲಾಗುತ್ತದೆ. ಕೊನೆಕೊಯ್ಲು ಮುಗಿದ ನಂತರ ಒಟ್ಟು ಎಷ್ಟು ಡಬ್ಬಿಯೆಂದು ಲೆಕ್ಕ ಮಾಡಿ ನಿಗದಿತ ಹಣ ಪಡೆಯುತ್ತಾರೆ. ತುರ್ತು ಹಣದ ಅಗತ್ಯವಿದ್ದಾಗ ಕೊನೆ ಕೊಯ್ಲಿನಲ್ಲಿ ತೀರಿಸುತ್ತೇನೆಂದು ಮಾತು ಕೊಟ್ಟು ಮುಂಗಡ ಹಣ ಪಡೆಯುವವರೂ ಇದ್ದಾರೆ. ಅಡಿಕೆ ಸುಲಿದು ಗಳಿಸಿದ ಹಣವನ್ನು ಹಾಗೆಯೇ ಒಟ್ಟುಗೂಡಿಸಿ ಮನೆ ಕಟ್ಟಿಸಿದ, ಮದುವೆ ಮಾಡಿದ, ಸಾಲ ತೀರಿಸಿದ, ಚಿನ್ನ ಖರೀದಿಸಿದ ಮಹಿಳೆಯರೂ

ಇದ್ದಾರೆ. ಈ ಕೆಲಸ ಬಡ ಗ್ರಾಮೀಣ ಮಹಿಳೆಯ ಆರ್ಥಿಕಸ್ಥಿತಿಯ ಸುಧಾರಣೆಯಲ್ಲಿ ಅತ್ಯಂತ ಪ್ರಮುಖವಾದುದು. ಬೇರೆ ಪ್ರದೇಶದಿಂದ ಅದರಲ್ಲೂ ಹೆಚ್ಚಾಗಿ ಬಯಲು ಸೀಮೆಯಿಂದ 7–8 ಮಹಿಳೆಯರು ತಂಡ ಮಾಡಿಕೊಂಡು ಮಲೆನಾಡಿಗೆ ಬಂದು ಅಡಿಕೆ ಸುಲಿದು ತನ್ಮೂಲಕ ತಮ್ಮ ಜೀವನಕ್ಕೆ ದಾರಿ ಮಾಡಿಕೊಳ್ಳುವ ಪರಿಯೂ ಇದೆ. ಇವರು ಅದೇ ಮನೆಯಲ್ಲಿ ವಾಸವಾಗಿದ್ದು, ಹಗಲಿರುಳು ಅಡಿಕೆ ಸುಲಿದು, ಕೊಯ್ಲು ಮುಗಿದ ನಂತರ ಊರಿಗೆ ತೆರಳುತ್ತಾರೆ. ಹೀಗೆ ಅಡಿಕೆ ಕೊಯ್ಲಿನಲ್ಲಿ ಮಹಿಳೆಯ ಪಾತ್ರ ಅತ್ಯಂತ ಪ್ರಮುಖವಾಗಿದ್ದು ಮಹಿಳೆಯನ್ನು ಹೊರತುಪಡಿಸಿ ತೋಟ/ಕೊಯ್ಲನ್ನು ಊಹಿಸುವುದು ಅಸಾಧ್ಯವಾಗಿದೆ.

ಮಲೆನಾಡಿನ ಇನ್ನೊಂದು ಪ್ರಮುಖವಾದ ಬೆಳೆ 'ಕಾಫಿ' ದಕ್ಷಿಣ ಭಾರತದ ಜನಪ್ರಿಯ ಪಾನೀಯವಾಗಿರುವ ಕಾಫಿಯನ್ನು ಚಿಕ್ಕಮಗಳೂರು, ಮೂಡಿಗೆರೆ, ಸಕಲೇಶಪುರ, ಬಾಳೆಹೊನ್ನೂರು, ಮಡಿಕೇರಿ, ಮುಂತಾದ ಇಳಿಜಾರು ಗುಡ್ಡದ ಪ್ರದೇಶದಲ್ಲಿ ಬೆಳೆಯುತ್ತಾರೆ. ಅಂದವಾಗಿ ಬೆಳೆದು ನಿಂತ ಕಾಫಿಗಿಡ ಮನಸ್ಸನ್ನು ಸೂರೆಗೊಳ್ಳುತ್ತದೆ. ಹೂವು ಬಿಡುವ ಸಮಯದಲ್ಲಂತೂ ಅದರ ಅಂದ ನೋಡಲೆಂದೇ ಪ್ರವಾಸಿಗರು ಬರುವುದಿದೆ.

ಕಾಫಿ ಕೃಷಿಯಲ್ಲಿ ಕೂಡ ಮಹಿಳೆಯರ ಕೆಲಸ ಮಹತ್ತರವಾದುದು. ಸಮಾನ ಅಂತರದಲ್ಲಿ ಗುಂಡಿ ತೋಡಿ, ಕಸಿ ಮಾಡಿದ ಗಿಡಗಳನ್ನು ನೆಡುವುದರಿಂದ ಮಹಿಳೆಯ ಕೆಲಸ ಪ್ರಾರಂಭವಾಗುತ್ತದೆ. ಗಿಡ ಬೆಳೆದಂತೆಲ್ಲ ಅದಕ್ಕೆ ಕೀಟನಾಶಕ ಸಿಂಪಡಿಸಿ ಆರೋಗ್ಯ ಕಾಪಾಡುವುದು, ದೊಡ್ಡ ಮರವಾಗಲು ಬಿಡದೆ ಅದರ ಕೊಂಬೆಗಳನ್ನು ಕತ್ತರಿಸಿ ಅಂದವಾದ ಪೊದೆಯ ರೂಪ ಕೊಡುವುದು; ಕೊಂಬೆಗಳು ಮೇಲೆ ಹೋಗದೇ ಕೆಳಗೆ ಬಾಗುವಂತೆ ಕಲ್ಲು ಕಟ್ಟುವುದು; ನೀರು ಹನಿಸುವುದು; ಕಾಫಿ ಬೀಜ ಹಣ್ಣಾದಾಗ ಕೊಯ್ದು ಒಣಗಿಸುವುದು; ಚೆನ್ನಾಗಿ ಒಣಗಿದ ನಂತರ ಆರಿಸಿ ಮಾರುಕಟ್ಟೆಗೆ ಒಯ್ಯಲು ಸಿದ್ಧಪಡಿಸುವುದು ಹೀಗೆ ವಿವಿಧ ಹಂತಗಳಲ್ಲಿ ಮಹಿಳೆ ಸಂಪೂರ್ಣ ಕಾರ್ಯೋನ್ಮುಖಳಾಗುತ್ತಾಳೆ. ಅಲ್ಲಿ ಮಹಿಳೆಗೆ ಬೇಕಾದಷ್ಟು ಉದ್ಯೋಗ ಇರುತ್ತದೆ. ಕಾಫಿ ತೋಟದ ಕೆಲಸಕ್ಕೆಂದೇ ಬೇರೆಡೆಯಿಂದ ಕುಟುಂಬಸಹಿತ ಹೋಗಿ, ಅಲ್ಲಿಯೇ ನೆಲೆಸಿ ದುಡಿಯುವ ವಲಸಿಗರು ಇದ್ದಾರೆ.

ಮಲೆನಾಡಿನಲ್ಲಿ ಎಲ್ಲಕ್ಕಿಂತ ಮುಖ್ಯವಾದ ಇನ್ನೊಂದು ಕೃಷಿಯೆಂದರೆ ಆಹಾರ ಬೆಳೆಗಳಾದ ಭತ್ತ ಜೋಳ, ಬೆಳೆಯುವುದು. ಈ ಗದ್ದೆ ಕೆಲಸಗಳಲ್ಲಂತೂ ಮಹಿಳೆಯ ಪಾತ್ರ ಮಹತ್ತರವಾದುದು. ಮಲೆನಾಡಿನ ಮಹಿಳೆ ಎಂದೊಡನೆ ಕಣ್ಮುಂದೆ ಮೂಡುವುದೇ ಗದ್ದೆಗಳಲ್ಲಿ "ನೆಟ್ಟಿ" (ನಾಟಿ) ಕೊಯ್ಲು ಮಾಡುತ್ತಿರುವ ಮಹಿಳೆಯರ ದೃಶ್ಯ. ಭತ್ತ ಬೆಳೆಯುವ ಭೂಮಿಯನ್ನು ಹಸನು ಮಾಡುವುದು, ಮುಳ್ಳು ಬೇಲಿ ಒಂದೆಡೆ ಹಾಕಿ ಸುಡುವುದು, ಉಳುಮೆ ಮಾಡಿದ ನಂತರ ನಾಟಿ ಮಾಡುವುದು ಮಹಿಳೆಯರೇ. ತಲೆಗೆ ಹಾಳೆ ಟೊಪ್ಪಿ ಹಾಕಿಕೊಂಡು, ಪ್ಲಾಸ್ಟಿಕ್ ಅಥವಾ ಕಂಬಳಿ ಚೀಲ ಹೊದ್ದುಕೊಂಡು ಸೀರೆಯನ್ನು ಮೊಣಕಾಲಿನವರೆಗೆ ಮಡಸಿ ಕಟ್ಟಿಕೊಂಡು, ಬಾಯೊಳಗೆ ಎಲೆ – ಅಡಿಕೆ ಹಾಕಿಕೊಂಡು ಗದ್ದೆಗಿಳಿದರೆ ಜಡಿ ಮಳೆ, ಗುಡುಗು – ಸಿಡಿಲು ಇದ್ಯಾವುದಕ್ಕೂ ಜಗ್ಗುವ ಮಾತೇ ಇಲ್ಲ. ಮನೆಯಿಂದ ಕಟ್ಟಿಕೊಂಡು ಬಂದ ಬುತ್ತಿ ಮಧ್ಯಾಹ್ನ ಮರದ ನೆರಳಿನಲ್ಲಿ ಹೊಟ್ಟೆ ಸೇರಿದರೆ ಮತ್ತೆ ವಿಶ್ರಾಂತಿ ಬಯಸದೇ ಕತ್ತಲಾಗುವವರೆಗೂ  ನೆಡುವುದರಲ್ಲೇ ನಿರತರು. ಉತ್ತುವ, ಬಿತ್ತುವ, ಹಾಡುಗಳು, ಇವರ ಚೈತನ್ಯವನ್ನು ಇಮ್ಮಡಿಸುತ್ತವೆ. ಸಂಜೆಯವರೆಗೆ ಗದ್ದೆಯಲ್ಲಿದ್ದು, ಮನೆ ಸೇರುವ ಮಹಿಳೆ ಬಿಸಿ ನೀರಿನ ಸ್ನಾನ ಮಾಡಿ, ರಾತ್ರಿಯೂಟದ ತಯಾರಿಯಲ್ಲಿ ತೊಡಗುತ್ತಾಳೆ. ಮುಂಜಾನೆ ಮತ್ತದೇ ದಿನಚರಿ. ಊರಿನ ಎಲ್ಲಾ ಗದ್ದೆಯ ನೆಟ್ಟಿ ಮುಗಿಯುವವರೆಗೂ ಇವರದೇ ಜವಾಬ್ದಾರಿ.

ನೆಟ್ಟಿ ಮುಗಿದ ನಂತರ 'ಕೊಯ್ಲು' ಬರುವವರೆಗೆ ಮಹಿಳೆಯರಿಗೆ ಅಷ್ಟೇನೂ ಕೆಲಸದ ಒತ್ತಡ ಇರುವುದಿಲ್ಲ. ಬೆಳೆದು ನಿಂತ ತೆನೆಯನ್ನು ಕೊಯ್ಯುವುದು, ರಾಶಿ ಮಾಡುವುದು, ಹೊರೆ ಹೊತ್ತು ತರುವುದು ; ಕಣಜ ಹಾಕುವುದು; ಕಣ ಬಳಿಯುವುದು, ಒಕ್ಕಲು ಮಾಡಿದ ನಂತರ ತೂರುವುದು, ಗಟ್ಟಿ ಕಾಳು ಆಯ್ದು ರಾಶಿ ಮಾಡುವುದು ಈ ಕೆಲಸಗಳೆಲ್ಲ ಮಹಿಳೆಯ ಪಾತ್ರ ಪ್ರಧಾನವಾದುದು.

ಅದೇ ರೀತಿ ಜೋಳ ಬೆಳೆಯುವಲ್ಲಿ ಕೂಡ ಮಹಿಳೆ ಬೀಜ ಬಿತ್ತುವುದು ಕಳೆ ತೆಗೆಯುವುದು, ಜೋಳ ಮುರಿಯುವುದು, ಒಣಗಿಸುವುದು ಎಂದು ಎಲ್ಲಾ ಹಂತದ ಪ್ರಕ್ರಿಯೆಯಲ್ಲೂ ಪಾಲ್ಗೊಳ್ಳುತ್ತಾಳೆ. ವರ್ಷವೆಲ್ಲ ನಡೆಯುವ ಕೃಷಿ ಚಟುವಟಿಕೆಯಲ್ಲಿ ಅವಳದು ಸಂಪೂರ್ಣ ಪಾಲ್ಗೊಳ್ಳುವಿಕೆ.

ಜೊತೆಗೆ ಕುಟುಂಬ ಪೋಷಣೆ. ಇವರದು ಗಟ್ಟಿ ಜೀವ, ಬಿಸಿಲಿಗೆ ಬಾಡದೇ, ಚಳಿ ಮಳೆಗೆ ನಡುಗದೇ ಪ್ರಕೃತಿಯೊಂದಿಗೆ ಹೊಂದಿಕೊಂಡು ದುಡಿವ ಶ್ರಮಜೀವಿಗಳವರು. ಲೋಕದಲೇನೇ ನಡೆಯುತಲಿರಲಿ, ರಾಜ್ಯಗಳಳಿಯಲಿ, ರಾಜ್ಯಗಳುದಿಸಲಿ  ಅವರ ಕಾರ್ಯ ಬಿಡದ ಕರ್ಮಯೋಗಿಗಳವರು. ಶ್ರಮದ ಕೆಲಸಕ್ಕೆ ಅಗತ್ಯವಾದ ಗಟ್ಟಿ ಆಹಾರ ಇವರಿಗೆ

ರೂಢಿ. ಕಡುಬು, ಮುದ್ದೆ, ವಿಧ–ವಿಧದ ಚಟ್ನಿ, ಪಲ್ಯ ತಯಾರಿಕೆಯಲ್ಲಿ ಇವರು ನಿಪುಣರು. ಕೃಷಿ ಕೆಲಸಕ್ಕೆ ವಿರಾಮವಿದ್ದಾಗ ಬುಟ್ಟಿ ನೇಯುವುದು, ಬೇರೆಯವರ ಮನೆಗೆಲಸ ಮಾಡುವುದು ಎಂದು ಏನಾದರೊಂದು ಉಪಕಸಬು ಕೈಗೊಳ್ಳುತ್ತಾರೆ.

ಕೃಷಿಯ ಜೊತೆಗೆ ಮಲೆನಾಡಿನ ಭಾಗದ ಮುಖ್ಯ ಉಪಕಸುಬು ಪಶುಪಾಲನೆ. ಹಾಲು ಉತ್ಪಾದನೆಗಾಗಿ ಹೈನುಗಾರಿಕೆ, ಮೊಟ್ಟೆ, ಮಾಂಸಕ್ಕಾಗಿ ಕೋಳಿ ಸಾಕಾಣಿಕೆ, ಉಣ್ಣೆಗಾಗಿ ಮತ್ತು ಮಾಂಸಕ್ಕಾಗಿ ಕುರಿ ಸಾಕುವುದು ಉಪಯುಕ್ತ ಉದ್ಯಮವೆನಿಸಿದೆ. ವರ್ಷವಿಡೀ ಆದಾಯ ನೀಡುವ ಲಾಭದಾಯಕ ಉದ್ಯಮವಿದು. ಪಶುಪಾಲನೆಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾದುದು.

ಮುಂಜಾನೆ ಹಸು–ಎಮ್ಮೆಯ ಹಾಲು ಕರೆಯುವುದರಿಂದಲೇ ಮಹಿಳೆಯ ದಿನಚರಿ ಆರಂಭ. ಚಳಿಯಿರಲಿ, ಮಳೆಯಿರಲಿ, ಹಬ್ಬ ಹರಿದಿನವಿರಲಿ, ರೋಗ ರುಜಿನವಿರಲಿ ಇದರಿಂದ ಬಿಡುಗಡೆಯಿಲ್ಲ. ಹಸುಗಳಿಗೆ ಸಮಯಕ್ಕೆ ಸರಿಯಾಗಿ ಮೇವು, ನೀರು ನೀಡುತ್ತಾ ಆರೈಕೆ ಮಾಡುವಲ್ಲಿ ಮಹಿಳೆಗೆ ಮಗುವಿನಷ್ಟೆ ಕಾಳಜಿ. ಗೌರಿ, ಕಾಳಿ, ದುರ್ಗಿ, ಶಾರದೆ, ಕುಂತಿ ಎಂದು ನಾಮಕರಣ ಮಾಡಿ ಮನೆಯ ಮಕ್ಕಳಂತೆ ಭಾವಿಸುವಲ್ಲಿಯೇ ಅವಳಿಗೆ ಅದೇನೋ ತೃಪ್ತಿ. ಹಸುಗಳು ಕೂಡ ಸಮಯಕ್ಕೆ ಸರಿಯಾಗಿ ತಮ್ಮೊಡತಿ ಕಾಣಿಸದಿದ್ದರೆ ಅಂಬಾ ಎಂದು ಕೂಗಿ ಕರೆಯುವುದು ಅವುಗಳ ಭಾವನಾತ್ಮಕ ಸಂಬಂಧಕ್ಕೆ ಸಾಕ್ಷಿ.

ಮಲೆನಾಡಿನಲ್ಲಿ ಬಹಳಷ್ಟು ಕುಟುಂಬಗಳು ಹೈನುಗಾರಿಕೆಯಿಂದಲೇ ನಡೆಯುತ್ತವೆ. ಹಾಲು, ಮೊಸರು, ಬೆಣ್ಣೆ, ತುಪ್ಪವೆಂದು ಮನೆಯ ಅಗತ್ಯ ಪೂರೈಸುವುದರೊಂದಿಗೆ ಹಾಲನ್ನು ಮಾರಾಟ ಮಾಡಿ ಆದಾಯಗಳಿಸಲಾಗುತ್ತದೆ. ಹಾಲಿನ ಜೊತೆಗೆ ಕೃಷಿ ಭೂಮಿಯನ್ನು ಉತ್ತಲು, ಬಿತ್ತಲು, ಹೊರೆ ಹೊರಲು ಹಸು/ಎತ್ತುಗಳು ನೆರವಾಗುತ್ತವೆ. ಅವುಗಳಿಂದ ಗೊಬ್ಬರವು ಲಭ್ಯ. ಸದೃಢ ಹಸುಗಳಿದ್ದರೆ ಕುಟುಂಬಕ್ಕೆ ನಾಲ್ಕಾಳಿನ ಬಲ. ಹಸುಗಳ ಸಂಖ್ಯೆ ಮತ್ತು ಗುಣಮಟ್ಟ ಮನೆಯ ಆರ್ಥಿಕ ಸ್ಥಿತಿಯ ನಿರ್ಧಾರಕ ಅಂಶವಾಗಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಹಸುಗಳಿಲ್ಲದ ಮನೆಯೇ ಇಲ್ಲವೆನ್ನಬಹುದು.

"ಹಸುವಿನ ಹಾಲು, ತುಪ್ಪ ಮಾರಾಟದಿಂದ ಬರುವ ಹಣ ನನಗೆ ಸೇರಿದ್ದು, ಅದು ನನ್ನ ದುಡಿಮೆ ಆದ್ದರಿಂದ ನನಗದರಲ್ಲಿ ಅಪಾರ ಆಸಕ್ತಿ"[3] ಎಂಬುದು ಪಶುಪಾಲನೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡ ಮಹಿಳೆಯೊಬ್ಬರ ಅನಿಸಿಕೆ. ಹೀಗೆಯೇ ಮಲೆನಾಡಿನ ಬಹಳಷ್ಟು ಕುಟುಂಬಗಳಲ್ಲಿ ಪಶುಪಾಲನೆ ಮಹಿಳೆಯನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸಿದೆ. ಕೃಷಿಯಂತೆ ಒಂದು ಅವಧಿಗೆ ಸೀಮಿತವಾಗಿರದೇ ವರ್ಷವೆಲ್ಲ ಶ್ರಮಿಸಬೇಕಾದ ವೃತಿಯಿದು. ಇದು ಮಹಿಳೆಗೆ ಒಂದು ದಿನವೂ ಪ್ರವಾಸ, ಬಂಧುಗಳ ಮನೆಯೆಂದು ಹೋಗಿ ಉಳಿಯಲಾರದ ಸ್ಥಿತಿಯನ್ನು ತಂದಿದೆ. ಆದರೂ ಅವಳ ಆರ್ಥಿಕ ಪ್ರಗತಿಗೆ ಸ್ವಾವಲಂಬಿತನಕ್ಕೆ ಕಾರಣವಾದ ಅವಳ ನೆಚ್ಚಿನ ಹೆಮ್ಮೆಯ ಕಸುಬು ಇದಾಗಿದೆ.

ಅಂತೆಯೇ ಕೋಳಿ ಸಾಕಾಣಿಕೆ ಕುರಿ ಸಾಕಾಣಿಕೆಯಲ್ಲಿ ಕೂಡ ಮಹಿಳೆ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಸ್ವಲ್ಪ ಸಿರಿವಂತ ಕುಟುಂಬದಲ್ಲಿ ಪಶುಪಾಲನೆ ಕಂಡು ಬಂದರೆ ಬಡ ಕುಟುಂಬಗಳಲ್ಲಿ ಕೋಳಿ, ಕುರಿ ಸಾಕಾಣೆ ಕಂಡು ಬರುತ್ತದೆ. ಮಾಂಸಕ್ಕೆ ಅತ್ಯಂತ ಬೇಡಿಕೆಯಿರುವುದರಿಂದ ಇದು ಮಹಿಳೆಯ ಸಬಲೀಕರಣಕ್ಕೆ ಕಾರಣವಾಗಿದೆ.

ಹೀಗೆ ಕೃಷಿ ಪ್ರಧಾನವಾದ ಮಲೆನಾಡಿನಲ್ಲಿ ಮಹಿಳೆ ಸಂಪೂರ್ಣವಾಗಿ ವಿವಿಧ ಕೆಲಸ ಕಾರ್ಯ ವೃತ್ತಿಯಲ್ಲಿ ತನ್ನನ್ನು ತೊಡಗಿಸಿಕೊಂಡು ಅತ್ಯಂತ ಕ್ರಿಯಾಶೀಲಳಾಗಿದ್ದಾಳೆ. ಆದರೆ ಅವಳ ಸುತ್ತ ಸಮಸ್ಯೆಗಳ ಸರಮಾಲೆಯೇ ಇದೆ. ಮುಖ್ಯವಾದ ಸಮಸ್ಯೆಗಳು ಹೀಗಿವೆ.

**1. ಅಪಾರ ಕೆಲಸದ ಒತ್ತಡ:–** ಕೃಷಿ ಮಹಿಳೆಯ ದಿನಚರಿಯನ್ನು ಗಮನಿಸಿದರೆ ಅವರಿಗೆ ವಿರಾಮ ಎಂಬುದೇ ಇಲ್ಲ. ಮುಂಜಾನೆ ನಾಲ್ಕು ಐದು ಗಂಟೆಗೆ ಅವರ ಕೆಲಸ ಆರಂಭವಾದರೆ ಮನೆ, ಮಕ್ಕಳು, ಊಟ, ಸ್ನಾನ, ತಿಂಡಿ, ಹಸು, ಕೊಟ್ಟಿಗೆ, ತೋಟ, ಗದ್ದೆ ಎಂದು ರಾತ್ರಿ 11– 12 ರವರೆಗೆ ಅವಳಿಗೆ ಬಿಡುವಿಲ್ಲ. ಕುಟುಂಬದ ಸದಸ್ಯರೆಲ್ಲರ ಅನುಕೂಲಕ್ಕೆ ಅಗತ್ಯಕ್ಕೆ ತಕ್ಕಂತೆ ಕೆಲಸ ಮಾಡುವ ಅವಳಿಗೆ ಅವಳ ಬಗ್ಗೆ ಕಾಳಜಿ ವಹಿಸಲು ಸಮಯವೇ ಇಲ್ಲ. ಊಟ, ನಿದ್ದೆ, ಯಾವುದಕ್ಕೂ ಸಮಯ ನಿಗದಿತವಿಲ್ಲ. ಅವಳದು ವೇತನ ರಹಿತ ದುಡಿಮೆ. ಈ ಅವಿಶ್ರಾಂತ ದುಡಿಮೆ ಕೆಲಸದ ಒತ್ತಡ ಅವಳ ದೈಹಿಕ ಮತ್ತು ಮಾನಸಿಕ ಅನಾರೋಗ್ಯಕ್ಕೆ ಕಾರಣವಾಗಿದೆ.

**2. ಉದ್ಯೋಗಶೀಲತೆಯನ್ನು ಚುರುಕುಗೊಳಿಸುವ ತರಬೇತಿ ಇಲ್ಲ:–** ಕೃಷಿ ಆಧುನೀಕರಣಗೊಳ್ಳುತ್ತಿದ್ದು, ನೂತನ ಕೃಷಿ ಉಪಕರಣಗಳು, ಪದ್ಧತಿಗಳು ಹೆಚ್ಚಾಗುತ್ತಿವೆ. ಆದರೆ ಅದಕ್ಕೆ ಸಂಬಂಧಿಸಿದಂತೆ ನಡೆಯುವ ಬಹಳಷ್ಟು ತರಬೇತಿಗಳು ಪುರುಷನಿಗೇ ಮೀಸಲು. ಮಹಿಳೆಯ ಉದ್ಯೋಗಶೀಲತೆಯನ್ನು ಚುರುಕುಗೊಳಿಸುವಂತಹ ತರಬೇತಿಗಳು ಕಂಡುಬರುತ್ತಿಲ್ಲ. ಹೆಂಗಸರೇ ಹೆಚ್ಚು ದುಡಿಯುತ್ತಿದ್ದರೂ ತರಬೇತಿ ಪಡೆಯುವುದು ಗಂಡಸರಾದ್ದರಿಂದ, ಗಂಡಸರು ಯಂತ್ರ ಬಳಸುವಂತಾದರೆ ಹೆಂಗಸರು ದೈಹಿಕ ಶ್ರಮದಲ್ಲೇ ಉಳಿದಿದ್ದಾರೆ. ಉದಾಹರಣೆಗೆ, ಗೊಬ್ಬರ ಸಿಂಪಡಣೆ, ಗಂಡಸರ ಕೆಲಸ, ಜೈವಿಕ ಗೊಬ್ಬರ ಹರಡುವುದು ಹೆಂಗಸರ ಕೆಲಸ. ಯಂತ್ರದಿಂದ ಕಳೆ ತೆಗೆಯುವುದು ಗಂಡಸರ ಕೆಲಸ; ಕಳೆ ಕೀಳುವುದು ಹೆಂಗಸರ ಕೆಲಸ. ಬೈಸಿಕಲ್ ಅಥವಾ ಲಾರಿ ಬಳಸಿ ಹೊರೆ ಹೊರುವುದು ಗಂಡಸರ ಕೆಲಸ; ತಲೆ ಮೇಲೆ ಹೊರೆ ಹೊತ್ತು ತರುವುದು ಹೆಂಗಸರ ಕೆಲಸ, ಇದರಿಂದ ಗಂಡಸರ ಪ್ರತಿಷ್ಠೆ ಹೆಚ್ಚಾದರೆ ಹೆಂಗಸರು ನಗಣ್ಯವಾಗಿಯೇ ಉಳಿದು. ಅವರ ಶ್ರಮವೂ ಹಾಗೆಯೇ ಉಳಿಯುತ್ತಿದೆ.

**3. ಆರ್ಥಿಕ ಸ್ವಾವಲಂಬನೆ ಇಲ್ಲದಿರುವುದು:–** ಕೃಷಿ ಕುಟುಂಬಗಳಲ್ಲಿ ಹೆಚ್ಚಿನ ಕೌಟುಂಬಿಕ ಜವಾಬ್ದಾರಿಗಳ ಜೊತೆಗೆ ಕೃಷಿ ಸಂಬಂಧಿತ ಕೆಲಸಗಳು ಮಹಿಳೆಯ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿರುತ್ತವೆ. ಅಂದರೆ ಅಲ್ಲಿ ಪುರುಷ ಮಾಡುವ ಕೆಲಸಗಳು 'ಉದ್ಯೋಗ' ಎಂಬ ಮಾನ್ಯತೆ ಪಡೆದಿಲ್ಲ. ದುಡಿಮೆಯಲ್ಲಿ ಪಾಲ್ಗೊಳ್ಳುವಿಕೆ ಎಂದು ಗುರುತಿಸಲ್ಪಟ್ಟಿಲ್ಲ. ಅವಳ ದುಡಿಮೆಗೆ ವೇತನವೂ ಇಲ್ಲ. ಕುಟುಂಬದ ಆದಾಯ ಹೆಚ್ಚುವಲ್ಲಿ ಅವಳ ಪಾತ್ರ ಅಪಾರವಾದರೂ ಹಣಗಳಿಸುವುದು **ಪುರುಷನೆ**. ತನ್ನ ಅಗತ್ಯಕ್ಕೆ ಹಣ ಬೇಕಾದರೆ ಪುರುಷನನ್ನು ಕೇಳಿ ಪಡೆಯಬೇಕೇ ವಿನಾ ಅವಳೆಂದು ಸ್ವಾವಲಂಬಿ ಅಲ್ಲ. ಈ ಬಗೆಗೆ ಅವಳಿಗೆ ಅಪಾರ ನೋವಿದೆ.

**4. ನಿರ್ಲಕ್ಷಿತ ಸಂಪನ್ಮೂಲ:–** ಕೃಷಿ ಮಹಿಳೆಯರಲ್ಲಿ ಅಗಾಧ ಮಾನವ ಸಾಮರ್ಥ್ಯವಿದೆ. ದುಡಿಯುವ ಮನಸ್ಸು ಉತ್ಸಾಹ ಎರಡೂ ಇದೆ. ಆದರೆ ಅವಳ ಶಕ್ತಿ ಅಗೋಚರವಾಗಿದೆ. ಸಮಾಜ ವಿಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿ ಕೈಗೊಂಡ ಸಂಶೋಧನಾ ಅಧ್ಯಯನಗಳಿಂದ ಕೃಷಿ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ದುಡಿಯುತ್ತಿರುವುದು ಕಂಡು ಬಂದಿದೆ. "ಅತ್ಯಂತ ಬಡ ಕುಟುಂಬಗಳಲ್ಲಿ ಮೂಲಭೂತ ಅಗತ್ಯಗಳನ್ನು ಒದಗಿಸುತ್ತಿರುವವರು ಮಹಿಳೆಯರು. ಅತೀ ಹೊರೆಯನ್ನು ಹೊತ್ತಿರುವ ಅಪಮೌಲ್ಯಕ್ಕೆ ಒಳಗಾಗಿರುವ ಸಂಪನ್ಮೂಲ ಅವಳು." ಉದ್ಯೋಗಸ್ಥ ಮಹಿಳೆಗೆ ಸಿಗುವ ಗೌರವ ಪುರಸ್ಕಾರ, ಕೀರ್ತಿ ಇವಳಿಗೆ ಸಿಗುವುದಿಲ್ಲ. ಗಾಣದೆತ್ತಿನಂತೆ ಬಾಳು ಹುಟ್ಟಿದ ಮೇಲೆ ತಪ್ಪಿದ್ದಲ್ಲ ಗೋಳು ಎಂಬ ವೇದನೆ ಇವರದು.

**5) ಸಂಘಟನೆಯ ಅಭಾವ:–** ನಮ್ಮ ಮಲೆನಾಡಿನ ಭಾಗದಲ್ಲಿ ಕೃಷಿಕ ಮಹಿಳೆಯರ ಸಂಖ್ಯೆ ಅಪಾರವಾಗಿದ್ದರೂ ಅವರಲ್ಲಿ ಅವರದೇ ಆದ ಸಂಘಟನೆ ಕಡಿಮೆ ಇದೆ. ಅವರ ಭಾವನೆ ಹಾಗೂ ಅನುಭವಗಳ ವಿನಿಮಯಕ್ಕೆ ಅವಕಾಶವಾಗಲೀ, ಸಮಸ್ಯೆಗಳ ಪರಿಹಾರಕ್ಕೆ ಸಾಮೂಹಿಕ ಹೋರಾಟವಾಗಲೀ ಕಂಡು ಬರುತ್ತಿಲ್ಲ. ದಿನವೆಲ್ಲ ದುಡಿಮೆಯಲ್ಲಿಯೇ ಕಳೆದುಹೋಗುವ ಅವರಿಗೆ ಇದಕ್ಕೆ ಅವಕಾಶವೂ ಕಡಿಮೆ. ಇದರಿಂದಾಗಿ ದೀರ್ಘ ಕಾಲದಿಂದಿರುವ ಚಿಕ್ಕ ಸಮಸ್ಯೆಗಳು ಇಂದಿಗೂ ಪರಿಹಾರವಾಗದೇ ಸಮಸ್ಯೆಯಾಗಿಯೇ ಉಳಿದಿವೆ.

**6) ಪುರುಷರಿಂದ ಶೋಷಣೆ:–** ಕೃಷಿ ಆಧಾರಿತ ಮಹಿಳೆಯರಲ್ಲಿ ನಾವು 2 ಬಗೆಯನ್ನು ನೋಡುತ್ತೇವೆ. ಮೊದಲನೇಯದಾಗಿ ಸ್ವಂತ ಕೃಷಿ ಭೂಮಿ ಹೊಂದಿರುವ ಜಾತಿ ವ್ಯವಸ್ಥೆಯಲ್ಲಿ ಮೇಲ್ಪಟ್ಟ ಭೂಮಿಯಲ್ಲಿ ಕೂಲಿಗಾಗಿ ಕೆಲಸ ಮಾಡುವ ಮಹಿಳೆಯರು, ಎರಡನೆಯ ಬಗೆಯ ಮಹಿಳೆಯರು ಮೇಲ್ವರ್ಗ ಮತ್ತು ಮೇಲ್ಜಾತಿಯ ಅರ್ಥಾತ್ ತಮಗೆ ಉದ್ಯೋಗ ನೀಡುವ ಪುರುಷರಿಂದ ನಿರಂತರ ಶೋಷಣೆಗೆ ಒಳಗಾಗುತ್ತಾರೆ. ಕುಟುಂಬದ ಕನಿಷ್ಠ ಅವಶ್ಯಕತೆ ಪೂರೈಸಲು ಹೆಣಗಾಡುವ ಮಹಿಳೆಯರನ್ನು ಹಣದ ಆಮಿಷ ನೀಡಿ ಭೋಗ ವಸ್ತುವಾಗಿ ಬಳಸಿಕೊಳ್ಳಲು ಪ್ರಯತ್ನಿಸುವ ಪುರುಷ ವರ್ಗ ನಮ್ಮಲ್ಲಿ ಅಪಾರವಾಗಿದೆ. ಮಹಿಳೆ ಒಂಟಿಯಾಗಿ ಕೆಲಸ ಮಾಡುವಾಗ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳುವವರೂ ಅಪಾರ. ತೋಟ, ಗದ್ದೆ, ಕಾಫಿ ಎಸ್ಟೇಟ್‌ಗಳಲ್ಲಿ ದುಡಿಯುವ ಬಡ ಮಹಿಳೆಯ ಮುಂದಿರುವ ಜ್ವಲಂತ ಸಮಸ್ಯೆಯಿದು.

**7) ಮಹಿಳೆಯ ಹೆಸರಿನಲ್ಲಿ ಜಮೀನು ಇಲ್ಲ:–** ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯ ಫಲವಾಗಿ ಇಂದಿಗೂ ನಮ್ಮಲ್ಲಿ ಕೃಷಿ ಜಮೀನೆಲ್ಲ ಪುರುಷನ ಹೆಸರಿಗೆ ಇರುವುದು ಕಂಡುಬರುತ್ತದೆ. ಪುರುಷ ಕುಡಿತದಂತಹ ಅವ್ಯವಹಾರದಲ್ಲಿದ್ದರೂ, ಕೃಷಿ ಭೂಮಿಯಲ್ಲಿ ಉತ್ತುವ, ಬಿತ್ತುವ, ಹೊಣೆ ಮಹಿಳೆಯದಾದರೂ ಅದು ಅವಳ ಹೆಸರಿಗೆ ಇರುವುದಿಲ್ಲ. ಇದು ಮಹಿಳೆಯ ಸ್ಥಾನಮಾನವನ್ನು ಕೆಳದರ್ಜೆಗೆ ಇಳಿಸಿದೆ.

**8) ಯಾಂತ್ರೀಕರಣದಿಂದ ನಿರುದ್ಯೋಗ ಸಮಸ್ಯೆ:–** ಆಧುನೀಕರಣದ ಫಲವಾಗಿ ಕೃಷಿಯಲ್ಲಿ ಯಂತ್ರೋಪಕರಣಗಳು ಬಳಸಲ್ಪಡುತ್ತಿವೆ. ಪರಿಣಾಮವಾಗಿ ಕೃಷಿ ಕೆಲಸಕ್ಕೆ ಅನಿವಾರ್ಯವಾಗಿದ್ದ ಮಾನವ ಸಂಪನ್ಮೂಲ ಇಂದು ಕೆಲಸವಿಲ್ಲದೇ

ತತ್ತರಿಸಿದೆ. ಉದಾಹರಣೆಗೆ, ಕಳೆ ಕೀಳುವ ಯಂತ್ರ, ಅಡಿಕೆ ಸುಲಿಯುವ ಯಂತ್ರ ಮುಂತಾದ ಯಂತ್ರಗಳಿಂದ ನೂರಾರು ಮಹಿಳೆಯರು ಕೆಲಸವಿಲ್ಲದೇ ಪರದಾಡುವಂತಾಗಿದೆ. ಅದರಿಂದಲೇ ಬದುಕು ಕಟ್ಟಿಕೊಂಡಿದ್ದ ಅವರಿಗೆ ಈಗ ಜೀವನೋಪಾಯದ ಮಾರ್ಗವೇ ಮುಚ್ಚಿದಂತಾಗಿದೆ. ಕಡಿಮೆ ವೇತನಕ್ಕೆ ದುಡಿಯಬೇಕಾದ ಅನಿವಾರ್ಯತೆ ಬಂದಿದೆ.

ಹೀಗೆ ಮಲೆನಾಡಿನ ಮಹಿಳೆಯರು ಹಲವು ಸವಾಲುಗಳಿಗೆ ಮುಖಾಮುಖಿಯಾಗುತ್ತಲೇ ಬದುಕು ಸಾಗಿಸುತ್ತಿದ್ದಾರೆ. ಸಮಸ್ಯೆಗಳ ವಿರುದ್ಧ ತೀವ್ರ ಹೋರಾಟಕ್ಕಿಳಿಯದೇ ಅದೇ ಜೀವನ ಎಂದು ಭಾವಿಸಿ ಮುಂದೆ ಸಾಗುವ ಸ್ವಭಾವ ಅವರಲ್ಲಿ ಹೆಚ್ಚಾಗಿದೆ. ಆಧುನೀಕರಣ, ಶಿಕ್ಷಣದ ಪರಿಣಾಮವಾಗಿ ಕೃಷಿ ಮಹಿಳೆಯರ ಜೀವನ ಶೈಲಿಯೂ ಬದಲಾಗತೊಡಗಿದೆ. ಸಮಸ್ಯೆಗಳು, ಪರಿವರ್ತನೆಗಳು ಏನೇ ಇದ್ದರೂ ಕೃಷಿಯಲ್ಲಿ ಅವಳ ಭಾಗವಹಿಸುವಿಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲಿದೆ. ಮೂಲಭೂತ ಅಗತ್ಯಗಳ ಪೂರೈಕೆ, ಜೀವನ ಮಟ್ಟದ ಹೆಚ್ಚಳವೇ ಅಭಿವೃದ್ಧಿ ಎಂದು ಭಾವಿಸುವುದಾದರೆ ಅಭಿವೃದ್ಧಿಯಲ್ಲಿ ಅವಳ ಪಾತ್ರ ಗಣನೀಯವಾದುದಾಗಿದೆ. ತೋಟ-ಗದ್ದೆಗಳಲ್ಲಿ ಅವಳ ಕಾರ್ಯನಿರ್ವಹಣೆ ಕೆಲಸಗಾರರ ಮೇಲ್ವಿಚಾರಣೆಯಲ್ಲಿ ಅವಳ ಚಾಕಚಕ್ಯತೆ ಜವಾಬ್ದಾರಿ ಗಮನಾರ್ಹವಾದುದು. ಮುಖ್ಯ ಕೃಷಿಯೊಂದಿಗೆ ತರಕಾರಿ, ಹೂವು, ಹಣ್ಣು ಬೆಳೆದು ಹಣ ಗಳಿಸುವವರೂ ಇದ್ದಾರೆ. ಇದು ಅವರಿಗೆ ಆನಂದದಾಯಕ ಹವ್ಯಾಸ ಕೂಡ. ತೀರ್ಥಹಳ್ಳಿ ತಾಲ್ಲೂಕಿನ ಕನ್ನಂಗಿಯ ಆಶಾ ಶೇಷಾದ್ರಿ ಪಟ್ಟಣದಲ್ಲಿ ಹುಟ್ಟಿ, ಓದಿ, ಬೆಳೆದವರು, ಮದುವೆಯಾಗಿ, ಕೃಷಿಕನ ಮಡದಿಯಾಗಿ ಸಂಸಾರ ಆರಂಭಿಸಿದೊಡನೆ ಪುಷ್ಪಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಲೆನಾಡಿನಲ್ಲಿ ಸದಾ ಜಿನುಗುಟ್ಟುವ ಮಳೆ, ಹಚ್ಚ ಹಸಿರಿನ ಗಿಡ, ಮರ, ಗದ್ದೆ ತೋಟಗಳ ನಡುವೆ ದಿನಗಳೆಯುತ್ತಿದ್ದಂತೆಯೇ ಏನನ್ನಾದರೂ ಸಾಧಿಸಬೇಕೆಂಬ ಛಲ ಅವರಲ್ಲಿ ಮೂಡಿತು. ಆಂಥೋರಿಯಂ ಪುಷ್ಪ ಬೆಳೆಯಬೇಕೆಂದು ತೀರ್ಮಾನಿಸಿ ಅದಕ್ಕೆ ಬೇಕಾದ ಎಲ್ಲಾ ಯೋಜನೆ ಕೈಗೊಂಡರು. ಆಂಥೋರಿಯಂ ಬೆಳೆಗೆ ಬೇಕಾದ ವಾತಾವರಣವನ್ನು ನಿರ್ಮಿಸಲು ಹೈಟೆಕ್ ತಂತ್ರಗಳನ್ನು ತಂದರು. ಗಿಡ ನೆಟ್ಟು, ಸ್ಪಿಂಕ್ಲರ್, ಫಾಗರ್‌ಗಳನ್ನು ಬಳಸಿ ಆಂಥೋರಿಯಂ ಬೆಳೆಯತೊಡಗಿದರು.

ಆಶಾ ಅವರು ಶ್ರಮವಹಿಸಿ, ಶ್ರದ್ಧೆ, ಆಸಕ್ತಿ, ಛಲದಿಂದ ಆಂಥೋರಿಯಂ ಕೃಷಿ ಮಾಡಿ ಲಕ್ಷಾಂತರ ರೂ. ಆರ್ಥಿಕ ಲಾಭ ಪಡೆಯಲಾರಂಭಿಸಿದರು. ಇವರ ಪ್ರಯೋಗಶೀಲತೆ ಮತ್ತು ಸಾಧನೆಗಾಗಿ ಎಂ.ಎಚ್. ಮರೀ ಗೌಡ ರಾಜ್ಯ ಪ್ರಶಸ್ತಿ ಪಡೆದರು. ಇವರಿಗೆ ಆಸ್ಪಿ ಅವಾರ್ಡ್ ಕೂಡ ದೊರಕಿದ್ದು, ಕರ್ನಾಟಕದಲ್ಲಿ ಆಸ್ಪಿ ಅವಾರ್ಡ್ ಪಡೆದ ಪ್ರಥಮ ಮಹಿಳೆ ಅವರಾಗಿದ್ದಾರೆ.

ಕಲಿತ ಹೆಣ್ಣು ಕೃಷಿಯಲ್ಲೂ ಸಾಧಿಸಬಲ್ಲಳು ಎಂಬುದಕ್ಕೆ ಆಶಾ ಸಾಕ್ಷಿಯಾಗಿದ್ದಾರೆ. ಬೇರೆ- ಬೇರೆ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯನ್ನು ಗುರುತಿಸಲಾಗುತ್ತದೆ, ಗೌರವಿಸಲಾಗುತ್ತದೆ. ಆದರೆ ಕೃಷಿಯಲ್ಲಿನ ಮಹಿಳೆಯ ದುಡಿಮೆ ನಗಣ್ಯವಾಗಿದ್ದುದೇ ಹೆಚ್ಚು. ಕೃಷಿಯಲ್ಲೂ ಸೃಜನಶೀಲತೆಯಿಂದ ಸಾಧನೆ ಮಾಡಿ ಹಣ, ಕೀರ್ತಿ ಆನಂದ ಎಲ್ಲವನ್ನು ಗಳಿಸಿಕೊಂಡ ಆಶಾ ಮಲೆನಾಡಿನ ಮಹಿಳೆಯರಿಗೆ ಮಾದರಿಯಾಗಿದ್ದಾರೆ.

ಅಂತೆಯೇ ಕೀರ್ತಿ ಪ್ರಸಿದ್ಧಿ ಲಭಿಸದಿದ್ದರೂ ಹಣ, ಆನಂದ, ತೃಪ್ತಿ ಪಡೆದ ಲಕ್ಷಾಂತರ ಮಹಿಳೆಯರು ಮಲೆನಾಡಿನಲ್ಲಿದ್ದಾರೆ. ವಿಧ-ವಿಧದ ತರಕಾರಿ ಬೆಳೆದು ಮಾರುವ, ಚಿಪ್ಸ್ , ಉಪ್ಪಿನಕಾಯಿಯಂತಹ ತಿನಿಸು ತಯಾರಿಸಿ ಮಾರುವ ಹವ್ಯಾಸ ಹೊಂದಿದವರಿದ್ದಾರೆ. ಪ್ರಕೃತಿಯೊಂದಿಗೆ ಬದುಕುವ ಇವರಿಗೆ ಪ್ರಕೃತಿಯೇ ಪರಮಾಪ್ತ ಮಿತ್ರ. ಅದರ ಸೊಬಗು ವೈಪರೀತ್ಯಗಳಲ್ಲೇ ಅಚ್ಚರಿ ಆನಂದ. ಪ್ರಕೃತಿಯ ಹಸಿರಿನಂತೆಯೇ ಆಚರಣೆ, ನಂಬಿಕೆ , ಹಬ್ಬ, ಉತ್ಸವ , ಪದ್ಧತಿ, ಸಂಪ್ರದಾಯ, ಸಂಸ್ಕೃತಿ ಹಸಿರಾಗಿರುವುದು ಈ ಮಲೆನಾಡಿನ ಮಹಿಳೆಯರಿಂದಲೇ. ಮನೆ – ಮನೆಯಲಿ ದೀಪ ಉರಿಸಿ , ಹೊತ್ತು –ಹೊತ್ತಿಗೆ ಅನ್ನ ಉಣಿಸಿ ಕುಟುಂಬ ಸಲಹುವ ಇವರಿಗೆ ಮನೆ ಮತ್ತು ಕೃಷಿಯೇ ಬದುಕು. ದುಡಿಮೆಯೇ ಸಂಭ್ರಮದ ಅಭಿವ್ಯಕ್ತಿ.

"ಕೃಷಿ ಕುಟುಂಬಗಳಲ್ಲಿ ಅತ್ಯಂತ ಗಟ್ಟಿ ಸ್ವರೂಪದಲ್ಲಿ ಸ್ತ್ರೀ ನೆಲೆ ನಿಂತಿದ್ದಾಳೆ. ಅಲ್ಲಿ ಸ್ತ್ರೀ ಅನಧಿಕೃತ ಯಜಮಾನಿ ಆಗಿರುತ್ತಾಳೆ. ಅದೊಂದು ಬಗೆಯ ಆಂತರಿಕ ಪ್ರಭುತ್ವ ಸ್ಥಿತಿ"[5] ಎಂಬ ಮಾತಲ್ಲಿ ಅವಳ ಸ್ಥಾನದ ಮಹತ್ವವನ್ನು ಮನಗಾಣಬಹುದು.

## ಅಡಿ ಟಿಪ್ಪಣಿಗಳು

1. ಬೆ.ಗೋ.ರಮೇಶ್, ಕೃಷಿ ಉದ್ದಿಮೆಗಳು, ಪುಟ 5 2004
2(ಎ). ಶಿವಮೊಗ್ಗ ಜಿಲ್ಲೆಯ ಅಂಕಿ ಅಂಶಗಳ ನೋಟ; 2011-12 ಜಿಲ್ಲಾ ಸಾಂಖ್ಯಿಕ ಅಧಿಕಾರಿಯವರ ಕಛೇರಿ ಜಿಲ್ಲಾ ಪಂಚಾಯತ್ ಶಿವಮೊಗ್ಗ.
2(ಬಿ). ಕೊಡಗು ಜಿಲ್ಲೆಯ ಅಂಕಿ- ಅಂಶಗಳ ನೋಟ, 2011-12 ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಜಿಲ್ಲಾ ಪ, ಮಚಾಯತ್, ಕೋಟ ಆವರಣ, ಮಡಿಕೇರಿ, ಕೊಡಗು ಜಿಲ್ಲೆ.
3.ಸಮಿಕ್ಷೆಯ ಸಂದರ್ಭದಲ್ಲಿ ಹೊಸನಗರದಲ್ಲಿ ಪಶು ಉತ್ಪನ್ನಗಳಿಂದ ಪ್ರಸಿದ್ಧರಾದ ಶ್ರೀಮತಿ ಭಾರತಿ ಪ್ರಭಾಕರ್ ಅವರನ್ನು ಸಂದರ್ಶಿಸಿದಾಗ ನೀಡಿದ ಮಾಹಿತಿ.
4. ಡಾ. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ 2 , ಪುಟ 7.
5. ಶಿವರಾಮು ಕಾಡನಕುಪ್ಪೆ, ಭೂಮಿ ತೂಕದ ಕಣ್ಣೀರು. ಪುಟ 9, 2001.

## ಪರಾಮರ್ಶನಾ ಗ್ರಂಥಗಳು


1.ಡಾ॥ ಆಂಜನಪ್ಪ : ಮಹಿಳೆ ಮತ್ತು ದುಡಿಮೆ, 2006, ಸೃಷ್ಟಿ ಪಬ್ಲಿಕೇಷನ್,
ಗೋವಿಂದಪ್ಪ ಲೇಔಟ್, ನಾಗಶೆಟ್ಟಿ ಹಳ್ಳಿ, ಬೆಂಗಳೂರು
2. ಡಾ॥ ಎ.ಎಸ್.ಕುಮಾರಸ್ವಾಮಿ: ಕೃಷಿ ವ್ಯವಸ್ಥೆಯಲ್ಲಿ ಮಾನವ ಸಂಪನ್ಮೂಲ, 2004, ಡಾ॥ ಕೆ.ಸಿ.ಶಶಿಧರ, ಕೃಷಿ ಕಿರಣ ಚಂದ್ರಕಮಲ, ಶರಾವತಿ ನಗರ, ಶಿವಮೊಗ್ಗ.
3. ಎ.ಎಸ್.ಗೌರಿದತ್ : ಸಾಧನಾ, 2008, ಶ್ರೀನಿವಾಸ ಪುಸ್ತಕ ಪ್ರಕಾಶನ,
ಕನಕಪುರ, ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು 04.
4.ಬಿ.ಎಸ್.ವೆಂಕಟಲಕ್ಷ್ಮೀ: ಬದುಕು-ಭವಣೆ-ಭರವಸೆ, ಎಸ್.ಟಿ.ಶ್ಯಾಂ ಪ್ರಕಾಶನ,
ಎಚ್ಎ ಎಲ್ 2ನೇ ಹಂತ, ಬೆಂಗಳೂರು.
5. ಬೆ.ಗೋ.ರಮೇಶ್ : ಕೃಷಿ ಉದ್ದಿಮೆಗಳು – 2004. ನೇತ್ರಾವತಿ ಪ್ರಕಾಶನ
ತ್ಯಾಗರಾಜ ನಗರ , ಬೆಂಗಳೂರು.
6. ಹಳೆಮನೆ ರಾಜಶೇಖರ್: ಮಹಿಳೆ ಮತ್ತು ಸಂಸ್ಕೃತಿ 2008, ಸ್ನೇಹ ಪ್ರಿಂಟರ್, ಬಿಸಿಸಿ ಬಡಾವಣೆ, ಅತ್ತಿಗುಪ್ಪೆ, ವಿಜಯನಗರ, ಬೆಂಗಳೂರು 104.
7. ಡಾ. ಹೇಮಲತಾ ಎಚ್.ಎಂ: ಮಹಿಳಾ ಅಧ್ಯಯನ 2 – 2004 ಡಿವಿಕೆ ಮೂರ್ತಿ, ಮೈಸೂರು – 4.
8. ಡಾ.ಹೇಮಲತಾಎಚ್.ಎಂ:(ಅನು): ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ, ಸಮತಾ ಅಧ್ಯಯನ ಕೇಂದ್ರ 1, ಮೈಸೂರು.
9. ಶಿವರಾಮ ಕಾಡನಕುಪ್ಪೆ : ಭೂಮಿ ತೂಕದ ಕಣ್ಣೀರು. 2001 ಶ್ರೀಮತಿ ಯಶೋದಾ, ರಾಗೌಟ್ರಸ್ಟ್, ಜಯಲಕ್ಷ್ಮೀ ಪುರಂ, ಮೈಸೂರು.
10. ಶಿವಮೊಗ್ಗ ಜಿಲ್ಲೆಯ ಅಂಕಿ-ಅಂಶಗಳ ನೋಟ, 2011-12.ಜಿಲ್ಲಾ ಸಾಂಖ್ಯಿಕ, ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್ , ಶಿವಮೊಗ್ಗ.

# ಮಹಿಳೆ ಮುನ್ನಡೆ ಮಲೆನಾಡಿನ ಯಕ್ಷಗಾನ ಕಲಾವಿದೆಯರು: ಸಾಧನೆ-ಸವಾಲು

**ಡಾ. ಶುಭಾ ಮರವಂತೆ**

ಕರಾವಳಿ ಮತ್ತು ಮಲೆನಾಡಿನ ಹೆಮ್ಮೆಯ ಕಲೆಯಾದ ಯಕ್ಷಗಾನ ಹಲವು ವೈವಿಧ್ಯಮಯ ಸ್ವರೂಪಗಳ ಮೂಲಕ ವಿಸ್ತೃತಗೊಳ್ಳುತ್ತಿರುವುದು ಸಂತೋಷದ ಸಂಗತಿ. ಅದರಲ್ಲೂ ಮಹಿಳೆಯರು ಈ ಕ್ಷೇತ್ರವನ್ನು ಪ್ರವೇಶಿಸಿ ಮುನ್ನಡೆ ಕಾಣುತ್ತಿರುವುದು ಆಶಾದಾಯಕ ಬೆಳವಣಿಗೆ. ನಮ್ಮ ಜನಪದ ಕಲಾ ಪ್ರಕಾರಗಳಾದ ಡೊಳ್ಳು ಕುಣಿತ, ವೀರಗಾಸೆ, ಸೋಮನ ಕುಣಿತ, ಯಕ್ಷಗಾನ ಮೊದಲಾದವು 'ಗಂಡು ಕಲೆ'ಗಳೆಂದೇ ಪ್ರಸಿದ್ಧ. ಇವುಗಳನ್ನು ನಿರ್ವಹಿಸುವುದರಲ್ಲಿ ಪುರುಷರೇ ಪ್ರಧಾನ ಭೂಮಿಕೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಊರಿಂದ ಊರಿಗೆ ಪರ್ಯಟನಗೈಯುತ್ತಾ ಸಾಗುವ ಯಕ್ಷಗಾನ ಕಲಾಪ್ರಕಾರಕ್ಕೂ ಇತರ ಕಲಾ ಪ್ರಕಾರಗಳಿಗೂ ಹೆಚ್ಚು ಸೂಕ್ಷ್ಮ ವ್ಯತ್ಯಾಸಗಳಿವೆ. ತಮ್ಮ ಹೊಟ್ಟೆಪಾಡಿಗಾಗಿ ಕಲೆಯನ್ನು ನಂಬಿಕೊಂಡ ಜನರು ತಮ್ಮ ಬದುಕಿನ ಒಂದು ಭಾಗವಾಗಿ, ದುಡಿಮೆಯ ಒಂದು ಸಾಧನವಾಗಿ ಕಾಣುತ್ತಾರೆ. ಊರಿನ ಪ್ರಮುಖ ಸ್ಥಳಗಳಲ್ಲಿ ರಂಗಸ್ಥಳ ಕಟ್ಟಿ ರಾತ್ರಿ ಪೂರ್ತಿ ಕಲಾರಂಜನೆಯನ್ನು ನೀಡುವ ಜನಪ್ರಿಯತೆಯನ್ನು ಇಂದಿಗೂ ಯಕ್ಷಗಾನ ಉಳಿಸಿಕೊಂಡಿದೆ. ಉಳಿದ ಯಾವುದೇ ಕಲಾ ಪ್ರಕಾರ ಯಕ್ಷಗಾನದಷ್ಟು ವಿಸ್ತಾರವಾದ ಸಂಘಟನಾತ್ಮಕ ಚಲನಶೀಲ ಕಲೆಯಾಗಿಲ್ಲ. ಏನಿಲ್ಲವೆಂದರೂ ಮುಮ್ಮೇಳ, ಹಿಮ್ಮೇಳವೆಂದು ಸರಿಸುಮಾರು 20 ರಿಂದ 25 ಜನರಾದರೂ ತಿರುಗಾಟದ ತಂಡದಲ್ಲಿರುತ್ತಾರೆ. ಕಂಪೆನಿ ನಾಟಕಗಳ ತಿರುಗಾಟದ ಸ್ವರೂಪಕ್ಕೂ ಯಕ್ಷಗಾನದ ತಿರುಗಾಟದ ಸ್ವರೂಪಕ್ಕೂ ಸಾಕಷ್ಟು ಭಿನ್ನತೆಗಳಿವೆ. ಕಂಪೆನಿ ನಾಟಕಗಳು ತಿಂಗಳುಗಟ್ಟಲೆ ಒಂದೂರಿನಲ್ಲಿ ನೆಲೆನಿಲ್ಲಬಲ್ಲವು. ಆದರೆ ಯಕ್ಷಗಾನವು ಪಡೆದುಕೊಂಡ ಧಾರ್ಮಿಕ ಸ್ವರೂಪದ ಕಾರಣದಿಂದ ಅದು ಒಂದೆಡೆ ಖಾಯಂ ಆಗಿ ನೆಲೆ ನಿಲ್ಲುವುದು ಅಸಾಧ್ಯವಾಗಿರುವುದು ಇದರ ಕೆಲವು ತಾತ್ವಿಕ ಸ್ವರೂಪವನ್ನು ನಿರ್ಣಯಿಸುವಲ್ಲಿ ಕಾರಣವಾಗಿವೆ. ಹೀಗಾಗಿ ಕಂಪೆನಿ ನಾಟಕಗಳಲ್ಲಿ ಕಾಣುವಷ್ಟು ಮಹಿಳಾ ಕಲಾವಿದರು ವ್ಯವಸಾಯಿ ಮೇಳಗಳಲ್ಲಿ ಕಾಣಸಿಗುವುದೇ ಇಲ್ಲ. ಸಿಕ್ಕರೂ ಅದು ಒಂದೆರಡು ಮಾತ್ರ. ಸುಮಾರು ಐದು ಶತಮಾನಗಳ ಇತಿಹಾಸವಿರುವ ಈ ಕಲೆಗೆ ಆದಿಯಿಂದಲೂ ಮಹಿಳೆಯರ ಪ್ರವೇಶ ನಿರ್ಬಂಧಿಸಿರುವುದೇ ಒಂದು ರಾಜಕೀಯ. ಪಿತೃರೂಪಿ ಪ್ರಭುತ್ವದ ಆಲೋಚನೆಗಳನ್ನು ಹರಡುವಲ್ಲಿ ಇತರ ಕಲೆಗಳಂತೆ ಯಕ್ಷಗಾನವೂ ಮಹತ್ತರವಾದ ಪಾತ್ರವಹಿಸಿದೆ.

ಹೆಂಗಸರು ರಂಗಭೂಮಿಯನ್ನು ಕಟ್ಟಿ ಬೆಳೆಸಿದ ಹಾಗೆ ಯಕ್ಷಗಾನವನ್ನು ಯಾಕೆ ಕಟ್ಟಿ ಬೆಳಸಲಿಲ್ಲ? ಎಂಬ ಪ್ರಶ್ನೆ ಎದುರಾಗುವುದು ಸಹಜ. ಸಿನೆಮಾ, ನಾಟಕಗಳಲ್ಲಿ ಸ್ತ್ರೀಪಾತ್ರಗಳನ್ನು ಸ್ತ್ರೀಯರೇ ನಿರ್ವಹಿಸುವ ಸಂಪ್ರದಾಯ ಬಂದರೂ ಯಕ್ಷಗಾನದಲ್ಲಿ ಈ ಬದಲಾವಣೆ ಯಶಸ್ವಿಯಾಗಲಿಲ್ಲ. ಸಿನೆಮಾ ತಾರೆ ಹಾಗೂ ನೃತ್ಯ ಕಲಾವಿದೆಯರಾದ ಶ್ರೀಮತಿ ಸುಜಾತಾ ಧಾರೇಶ್ವರ, ಜಯಲಕ್ಷ್ಮೀ ಯಕ್ಷರಂಗದ ವಿಶೇಷ ಆಕರ್ಷಣೆಯಾಗಿ ಪಾತ್ರ ನಿರ್ವಹಿಸಿದರು. ಪ್ರಸಿದ್ಧ ಕಲಾವಿದರಾದ ಚಿಟ್ಟಾಣಿ ಮೊದಲಾದವರ ಜೊತೆಗೆ ವೇಷ ಕಟ್ಟುತ್ತಿದ್ದರು. ಕಲ್ಲಾಡಿ ಕೊರಗ ಶೆಟ್ಟರು ತಮ್ಮ 'ಇರಾ' ಮೇಳದಲ್ಲಿ ಈ ಪ್ರಯೋಗ ಮಾಡಿದ್ದರು. ಆದರೆ ಈ ಬಗ್ಗೆ ವ್ಯಾಪಕವಾದ ಟೀಕೆಗಳು ಬಂದವು. ಪುರುಷ ಪ್ರಧಾನವಾದ ಕಲಾ ಪ್ರಕಾರದಲ್ಲಿ ಸ್ತ್ರೀ ಪಾತ್ರವನ್ನು ಸ್ತ್ರೀಯರು ನಿರ್ವಹಿಸುವುದನ್ನು ಕಲಾ ಸಂಪ್ರದಾಯವಾದಿಗಳು ಒಪ್ಪಲಿಲ್ಲ. ಪತ್ರಿಕೆಗಳಲ್ಲಿ ಈ ಪ್ರಯೋಗದ ವಿರುದ್ಧ ಅನೇಕ ಪತ್ರಗಳು ಬಂದವು. ಸ್ತ್ರೀ-ಪುರುಷರು ವೇಷಧಾರಿಗಳಾದರೆ ಶೃಂಗಾರದಂತಹ ಸಂದರ್ಭದಲ್ಲಿ ವೇದಿಕೆಯಲ್ಲಿ ಸಹಜ ರಸಾಭಿವ್ಯಕ್ತಿ ಪ್ರಕಟವಾಗುವುದು ಸಾಧ್ಯವಿಲ್ಲ. ಇದು ಪ್ರೇಕ್ಷಕರ ಮುಜುಗರಕ್ಕೂ ಕಾರಣವಾಗುತ್ತದೆ ಎಂಬ ಅಭಿಪ್ರಾಯ ವ್ಯಾಪಕವಾಗಿ ಬಂತು. ಕಲಾವಿದೆ ಜಯಲಕ್ಷ್ಮಿಯವರು, ಪುರುಷರು ನಿರ್ವಹಿಸುವ ಸ್ತ್ರೀ ಪಾತ್ರಗಳಷ್ಟು ಭಾವಾಭಿವ್ಯಕ್ತಿ, ನೃತ್ಯ ಕುಶಲತೆ ತಮ್ಮಿಂದ ಸಾಧ್ಯವಾಗುತ್ತಿಲ್ಲ ಎಂದು ಒಪ್ಪಿಕೊಂಡರು. ಅದರಿಂದಾಗಿ ಕಲ್ಲಾಡಿಯವರು ಈ ಪ್ರಯೋಗವನ್ನು ನಿಲ್ಲಿಸಿದರು.

ಸಾಮಾನ್ಯವಾಗಿ ಯಕ್ಷಗಾನದಲ್ಲಿ ಸ್ತ್ರೀವೇಷವನ್ನು ಹಾಕುವವರು ಪುರುಷರೇ. ಅಲ್ಲಿಯ ಸ್ತ್ರೀವೇಷದ ವೈಖರಿಯನ್ನು ಮಹಿಳೆಯರೂ ಅನುಸರಿಸುವುದು ತುಂಬಾ ಕಷ್ಟ. ಆ ಬೆಡಗು, ಬಿನ್ನಾಣ ಸ್ತ್ರೀಯರನ್ನೂ ನಾಚಿಸುವಂತಿರುತ್ತದೆ. ಹಾಗಾಗಿ ಅಲ್ಲಿ ಸ್ತ್ರೀವೇಷ ಮಾಡಲು ಮಹಿಳೆ ಅವಶ್ಯವೆನಿಸುವುದಿಲ್ಲ. ಇನ್ನು ಬಣ್ಣದ ವೇಷ, ಪುರುಷ ವೇಷಗಳಿಗಂತೂ ಮಹಿಳೆ ಬೇಡ. ಹಿಮ್ಮೇಳದಲ್ಲೂ ಅಷ್ಟೇ ಭಾಗವತ, ಚಂಡೆ, ಮದ್ದಳೆಗೆ ಗಂಡಸರೆ ತುಂಬಾ ಯೋಗ್ಯರೆಂದು ಭಾವಿಸಿ ನಂಬಲಾಗಿದೆ. ಮಹಿಳೆಯ ಸ್ವರ ಸಾಮಾನ್ಯವಾಗಿ ಕೀರಲು, ಪುರುಷರ ಸ್ವರದಲ್ಲಿರುವ ಗಡಸುತನ ಹೆಣ್ಣಿನಲ್ಲಿಲ್ಲ. ಹಾಗಾಗಿ ಭಾಗವತರೆಂದರೆ ಅದು ಗಂಡಸರೆ. ಭಾಗವತನಿಗೆ ಪರ್ಯಾಯವಾದ ಸ್ತ್ರೀಲಿಂಗದ ಶಬ್ದವೇ ಇಲ್ಲ. ಹೆಣ್ಣು ಮಕ್ಕಳು ಮೇಳ ಸೇರುವುದು ಅಂದರೆ ಸುಲಭದ ಮಾತಲ್ಲ. ಧಾರ್ಮಿಕ ಭಾವನೆಗಳಿಂದ ಪುರಸ್ಕರಿಸಲ್ಪಟ್ಟ ಈ ಆರಾಧನಾ ಕಲೆಯಲ್ಲಿ ಮಡಿ ಮೈಲಿಗೆಯ ಪ್ರತಿರೂಪಳಾದ ಹೆಣ್ಣು ಪ್ರವೇಶ ಪಡೆಯುವುದಂತೂ ದೂರದ ಮಾತೇ ಆಗಿತ್ತು. ಇನ್ನು ಗಂಡಮಕ್ಕಳು, ಸಂಸಾರ ಬಿಟ್ಟು

ರಾತ್ರಿ ಎಲ್ಲಿಯೋ ಇದ್ದು ಬೆಳಿಗ್ಗೆ ಬಂದು ನಿದ್ದೆ ಮಾಡಿ ದಣಿವಾರಿಸಿಕೊಳ್ಳುವ ಸಾಮಾಜಿಕ ವಾತಾವರಣವನ್ನು ಹೆಂಗಸರಿಗೆ ನೀಡಿ ಪ್ರೋತ್ಸಾಹಿಸುವವರೂ ಯಾರು? ಯಕ್ಷಗಾನದ ರಂಗರಚನೆಯು ತನ್ನ ಚೌಕಟ್ಟಿಗೆ ಹೆಣ್ಣುಮಕ್ಕಳು ಬೇಕು ಎನ್ನುವ ಯಾವ ಕನಿಷ್ಟ ಅನಿವಾರ್ಯತೆಯೂ ಸೃಷ್ಟಿಯಾಗದ' ಹಾಗೆ ರೂಪಿಸಲ್ಪಟ್ಟಿರುವುದರಿಂದ ಮೂಲತಃ ಅದು ಪುರುಷಪರವಾದುದು, ಸ್ತ್ರೀವಿರೋಧಿಯಾದುದು. ಸ್ತ್ರೀಯರ ಮೇಲೆ ಹೇರಲ್ಪಟ್ಟ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳು, ಪ್ರಾದೇಶಿಕ ಪರಿಸರದ ಹಿತಾಸಕ್ತಿಗಳು, ದೈಹಿಕ ಸಂರಚನೆಯೂ ಸೇರಿದಂತೆ ಒಟ್ಟಾರೆಯಾಗಿ ಮಹಿಳೆಯನ್ನು ಈ ವಿಷಯದಲ್ಲಿ ನಿಯಂತ್ರಿಸಿವೆ.

ಯಕ್ಷಗಾನ ವಾಚಿಕ ಮತ್ತು ಆಂಗಿಕ ಈ ಎರಡೂ ನೆಲೆಯಲ್ಲಿ ವಿಶಿಷ್ಟವೆನ್ನಿಸುವ ಕಲೆ. ಹಾಡು, ಕುಣಿತ, ಭಾವಾಭಿನಯ, ಆಂಗಿಕ ಅಭಿವ್ಯಕ್ತಿ, ರಂಗಸಜ್ಜಿಕೆ, ಶ್ರುತಿ– ರಾಗ– ತಾಳ ಜ್ಞಾನ, ಸಾಹಿತ್ಯ ಪ್ರಜ್ಞೆ, ವೇಷ–ಭೂಷಾ, ಬಣ್ಣಗಳ ಪರಿಜ್ಞಾನ, ಚಿತ್ರಕಲೆ, ಧ್ವನಿ, ಬೆಳಕು, ಸೌಂದರ್ಯ ಪ್ರಜ್ಞೆ, ದೈವ ಶ್ರದ್ಧೆ, ಸಭಾ ಪರಿಣಿತಿ, ಪಾತ್ರ, ಸನ್ನಿವೇಶ ನಿರ್ಮಾಣದಲ್ಲಿ ಕಾಯ್ದುಕೊಳ್ಳಬೇಕಾದ ಎಚ್ಚರ, ವಾದನ ಪರಿಕರಗಳ ನಿರ್ಮಾಣ ಕೌಶಲ ಹೀಗೆ ಹತ್ತು ಹಲವು ರಂಗತಂತ್ರಗಳು ಸೇರಿ ಈ ಕಲೆಯು ರೂಪಿತವಾಗಿದೆ. ಇವೆಲ್ಲವುಗಳಲ್ಲಿ ಮಹಿಳೆ ಪಾಲ್ಗೊಳ್ಳುವಿಕೆಯ ಅವಕಾಶ ಪುರುಷರಿಗೆ ಹೋಲಿಸಿದರೆ ಶೂನ್ಯವೆನಿಸುವಷ್ಟು ನಿರಾಶಾದಾಯಕವಾಗಿದೆ. ವಾಚಿಕೆಯನ್ನೇ ಗಮನಿಸಿದರೆ ಇಲ್ಲಿನ ಪ್ರಸಂಗಗಳು ನಿರೂಪಿಸುವ ಹಾಗೆ ಪತಿಗೆ ನಿಷ್ಠಳಾಗಿ ಬದುಕುವ, ಪತಿ ಸೇವೆಯೇ ತನ್ನ ಗುರಿ ಎಂದು ಭಾವಿಸುವ, ಪುರುಷನ ಅಡಿಯಾಳಾಗಿ ಬದುಕುವ ಸ್ತ್ರೀ ಪಾತ್ರ ಚಿತ್ರಣಗಳೇ ಹೆಚ್ಚು. 'ಕರುಣಾಳು ರಾಘವನಲ್ಲಿ ತಪ್ಪಿಲ್ಲ' ಎನ್ನುವ ಸೀತೆಯರ ಪತಿವ್ರತಾ ಮೌಲ್ಯ ವಿಜೃಂಭಿಸುತ್ತದೆ. ಸಾಮಾಜಿಕ, ಕಾಲ್ಪನಿಕ ಪ್ರಸಂಗಗಳಲ್ಲಿ ಇಂದಿನ ಧಾರಾವಾಹಿಗಳಲ್ಲಿ ಕಂಡುಬರುವ 'ಲೇಡಿ ವಿಲನ್'ಗಳಿಗೂ ಇಲ್ಲಿ ಅವಕಾಶವಿದೆ. ಕನ್ನಡದ ಇತರ ಕಾವ್ಯ ವರ್ಣನೆಗಳಲ್ಲಿ ಬಳಸಲಾಗುವ ಹೆಣ್ಣಿನ ಅಂಗಾಂಗ ವರ್ಣನೆಗೆ ಪುರುಷ ಕವಿಗಳು ಶೃಂಗಾರದ ಹೆಸರಿನಲ್ಲಿ ಬಹಳಷ್ಟು ಮಹತ್ವ ನೀಡಿದ್ದಾರೆ. ಕೋಮಲೆ, ಅಬಲೆ, ಚದುರೆ, ಅಂಗನೆ, ಗಜಗಾಮಿನಿ, ನಿತಂಬಿನಿ ಮೊದಲಾದ ಹೆಸರುಗಳು ಪಾತ್ರದ ನಿಜ ನಾಮಧೇಯವನ್ನು ಮರೆಮಾಚುವಷ್ಟು ಬಳಕೆಯಾಗುತ್ತವೆ. ಹೆಣ್ಣಿನ' ಬಳೆ–ಸೀರೆಗಳು ಗಂಡು ಧರಿಸುವುದೆಂದರೆ ಪುರುಷತ್ವಕ್ಕೆ ಅಪಚಾರವೆಂಬಂತೆ ಬಿಂಬಿಸುವುದು, ಗಂಡುತನದ ಅಹಮಿಕೆಯೆ ವಿಜೃಂಭಿಸುವಂತೆ ಮಾಡುವುದು ಈ 'ಗಂಡು ಕಲೆ'ಯ ವಿಶೇಷತೆ ಎನ್ನಬಹುದು. ಆದರೆ ಅಂಬೆ, ದ್ರೌಪದಿಯಂತಹ ದಿಟ್ಟ ಹೆಣ್ಣುಗಳಿಗೆ ದನಿಯಾಗಿರುವುದಂತೂ ನಿಜ. ಜೊತೆಗೆ ಸೀತೆ, ಸಾವಿತ್ರಿಯರ ಮೌಲ್ಯಗಳನ್ನು ಪುರುಷನಿಷ್ಠ ದೃಷ್ಟಿಕೋನದಲ್ಲಿ ಸಮಾಜಕ್ಕೆ ವರ್ಗಾಯಿಸುವುದರಲ್ಲಿ ಇತರ ಎಲ್ಲಾ ಕಲಾಪ್ರಕಾರಗಳಂತೆ ಇದೂ ಕೆಲಸ ಮಾಡಿರುವುದೂ ಸತ್ಯ.

ವೃತ್ತಿರಂಗ ಭೂಮಿಯಲ್ಲಿ ಮಹಿಳೆ ಪಡೆದ ಅವಕಾಶ, ಸಿನೆಮಾ ರಂಗದಲ್ಲಿ ಮಹಿಳೆಯರಿಗೆ ಒದಗಿಬಂದ ಅವಕಾಶದಿಂದಾಗಿ ಪುರುಷ ಪ್ರಧಾನವಾದ ಯಕ್ಷಗಾನದ ಭದ್ರಕೋಟೆಯನ್ನು ಮಹಿಳೆ ತನ್ನ ಆತ್ಮಶಕ್ತಿಯ ಬಲದಿಂದ ಬೇಧಿಸಿ ಮುನ್ನುಗ್ಗುವಂತಾಗಿದೆ. ಕಳೆದ ಶತಮಾನದ 30–40ರ ವೇಳೆಗೆ ಕುಂಜಾಲು ಯಮುನೆ, ಕಾಸರಗೋಡು ನರ್ಮದಾ ಮೊದಲಾದವರು ಅರ್ಥಧಾರಿಗಳಾಗಿ ಯಕ್ಷರಂಗವನ್ನು ಪ್ರವೇಶಿಸಿದರೆ ವೆಂಕಮ್ಮ ಎಂಬ ಮಹಿಳೆ ಪಾತ್ರಧಾರಿಯಾಗಿ ಕಾಣಿಸಿಕೊಂಡ ಮೊದಲಿಗರಾಗಿ ದಾಖಲಾಗುತ್ತಾರೆ. 50 60ರ ದಶಕದಲ್ಲಿದ್ದ ಯಕ್ಷಗಾನದ ಸ್ವರೂಪದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಆಗಿನ ಸ್ವರೂಪ ಈಗಿಲ್ಲ. ಮಹಿಳಾ ಭಾಗವತರು, ಚಂಡೆವಾದಕರು, ಮೃದಂಗವಾದಕರು ಹಿಮ್ಮೇಳದಲ್ಲಿ ಮಿಂಚಿದರೆ, ಮುಮ್ಮೇಳದಲ್ಲಿ ಎಂತಹ ಪಾತ್ರಗಳಿಗೂ ಸೈ ಎನಿಸಿಕೊಳ್ಳುವಷ್ಟು ಪ್ರಾವೀಣ್ಯತೆ ಪಡೆದ ಕಲಾವಿದೆಯರಿದ್ದಾರೆ. 18ನೇ ಶತಮಾನದ ಕೊನೆಯ ಭಾಗದಲ್ಲಿಯೇ ಕಾಣಿಸಿಕೊಂಡ ಮಹಿಳಾ ಪ್ರಸಂಗಕರ್ತರಿದ್ದಾರೆ. ಇವರೆಲ್ಲರೂ ತೀರಾ ಸಹಜವಾಗಿ ಈ ಕ್ಷೇತ್ರವನ್ನು ದಕ್ಕಿಸಿಕೊಂಡವರಲ್ಲ. ಸತತ ಪರಿಶ್ರಮ, ಛಲ, ಮುನ್ನುಗ್ಗುವ ಹಂಬಲ, ಗುರುತಿಸಿಕೊಳ್ಳುವ ತವಕ ಒಟ್ಟಾಗಿ ಅವರನ್ನು ಸಾರ್ಥಕ್ಯದೆಡೆಗೆ ನಡೆಸಿದೆ.

ಮಲೆನಾಡು ಕರಾವಳಿಯಂತೆಯೇ ಯಕ್ಷಗಾನ ಕಲೆಯನ್ನು ಬಹು ಜತನದಿಂದ ಪೋಷಿಸಿಕೊಂಡು ಬಂದಿದೆ. ಮಲೆನಾಡು ಮಳೆನಾಡೆಂಬುದಕ್ಕಾಗಿ ಈ ಜೀವನ ಶೈಲಿಯ ಏಕತಾನತೆ ಮುರಿಯುವ ಸಾಂಪ್ರದಾಯಿಕ ಕಲೆಯಾಗಿ ಯಕ್ಷಗಾನ ಪ್ರಾಧಾನ್ಯತೆ ಪಡೆದಿದೆ. ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಮನೆಗೊಬ್ಬರಾದರೂ ಕಲಾವಿದರಿರುತ್ತಿದ್ದರು. ಕೃಷಿಪ್ರಧಾನ ಬದುಕಿನ ಹಿನ್ನಲೆಯಿಂದ ಬಂದ ಇಲ್ಲಿನ ಜನರಿಗೆ ಒಂದು ಕಾಲದಲ್ಲಿ ಬಿಡುವಿನ ಸಮಯದ ಅತ್ಯಂತ ಪ್ರಿಯವಾದ ಮನರಂಜನೆಯ ಸಾಧನವಾಗಿತ್ತು. ಶಿವಮೊಗ್ಗ, ಸಾಗರ, ಉತ್ತರ ಕನ್ನಡ ಜಿಲ್ಲೆಯ ಶಿರಸಿ,ಸಿದ್ದಾಪುರ, ಕುಮಟಾ, ಹೊನ್ನಾವರ, ಯಲ್ಲಾಪುರ, ತೀರ್ಥಹಳ್ಳಿ, ನಗರ, ಹೊಸನಗರ ಮೊದಲಾದ ಹಲವು ಭಾಗಗಳಿಂದ ಬಂದ ಕಲಾವಿದರು, ಮೇಳಗಳಿಂದ ವೈಭವದ ಕಲಾ ಪ್ರದರ್ಶನಗಳು ನಡೆದಿವೆ. ಇತ್ತೀಚಿನ ದಿನಮಾನಗಳಲ್ಲಿ ಮಹಿಳೆಯರೂ ಇದರಲ್ಲಿ ಭಾಗವಹಿಸುವ ಕೆಚ್ಚು ತೋರಿಸುತ್ತಿರುವುದು ಮಹತ್ವಪೂರ್ಣ ಬೆಳವಣಿಗೆ. ಯಕ್ಷರಂಗದಲ್ಲಿ ಲೇಖಕಿ, ಕಲಾವಿದೆ, ಸಂಘಟಕರಾಗಿ ಮಲೆನಾಡಿನ ಮಹಿಳೆಯರು ಮಾಡಿದ ಸಾಧನೆ ಉಲ್ಲೇಖನೀಯವಾದುದು.

**ಯಕ್ಷರಂಗದ ಕವಯತ್ರಿಯರು/ಯಕ್ಷ ಲೇಖಕಿಯರು:**

ಯಕ್ಷಗಾನ ಕವಿಗಳ ಸಂಖ್ಯೆ ಸಾವಿರ ದಾಟಿದರೂ ಅದರಲ್ಲಿ ಮಹಿಳೆಯರ ಸಂಖ್ಯೆ ಎಷ್ಟೆಂಬುದು ಕುತೂಹಲದ ಸಂಗತಿ. ಬೆರಳೆಣಿಕೆಯ ಸಂಖ್ಯೆಯಲ್ಲಾದರೂ ಪ್ರಸಂಗ ರಚನೆ, ಯಕ್ಷಗಾನ ಸಾಹಿತ್ಯ ರಚನೆಯಲ್ಲಿ ತೊಡಗಿದ ಯಕ್ಷ ಕವಯಿತ್ರಿಯರು, ಲೇಖಕಿಯರು ದೊರೆಯುತ್ತಾರೆ. ಉಡುಪಿ, ಮಂಗಳೂರು, ಬಳ್ಳಾರಿ, ಶಿವಮೊಗ್ಗ, ಮೈಸೂರು, ಉತ್ತರ ಕನ್ನಡ ಜಿಲ್ಲೆಯ ಯಕ್ಷಲೇಖಕಿಯರ ಎಲ್ಲಾ ಹೆಸರು ಸೇರಿಸಿ ಹೇಳಿದರೂ 25ರ ಸಂಖ್ಯೆ ಮೀರುವುದಿಲ್ಲ. ಮಲೆನಾ಼ಡಿನಲ್ಲಿ ಮಹಿಳೆಯರು ಯಕ್ಷರಂಗ ಪ್ರವೇಶಿಸಿರುವ ಕುರುಹು 18ನೇ ಶತಮಾನದ ಮಧ್ಯಭಾಗದಿಂದಲೇ ದೊರೆಯುತ್ತದೆ. **ಕಿಬ್ಬಚ್ಚಲ ಮಂಜಮ್ಮ** ಈ ದೃಷ್ಟಿಯಿಂದ ಗಮನಿಸಬೇಕಾದ ಹೆಸರು. ಇವರು ಸಾಗರ ತಾಲೂಕಿನ ಹಂಸಗಾರು ಸಮೀಪದ ಕಿಬ್ಬಚ್ಚಲಿನವರು. ಇವರ ಕಾಲ 1830 ರಿಂದ 1900 ಎಂದು ಊಹಿಸಲಾಗಿದೆ. ಅನಕ್ಷರಸ್ಥೆಯಾದ ಇವರು ಶುದ್ಧ ಯಕ್ಷಗಾನ ಛಂದಸ್ಸನ್ನು ಬಳಸಿ ದೇವರ ನಾಮಗಳನ್ನು ರಚಿಸುತ್ತಿದ್ದರು. ಅವರು ಆಶು ಕವಯಿತ್ರಿ. ಪರಮ ದೈವ ಭಕ್ತೆ. ದೇವರ ಮುಂದೆ ಧ್ಯಾನಕ್ಕೆ ಕುಳಿತು ಕಣ್ಣು ಬಿಟ್ಟು ನುಡಿದರೆ ಅವರ ಬಾಯಿಯಿಂದ ವೇದಾಂತ, ಕಾವ್ಯ, ಯಕ್ಷಗಾನದ ಪದ್ಯಗಳು ಸಹಜವಾಗಿ ಹೊಮ್ಮುತ್ತಿದ್ದವಂತೆ. ಅವರ ದೂರದ ಸಂಬಂಧಿ ಹಿರೆಮನೆಯ ರಾಮನಾಥಯ್ಯ ಎಂಬವರು ಅದನ್ನೆಲ್ಲಾ ಬರೆದಿಟ್ಟುಕೊಳ್ಳುತ್ತಿದ್ದರಂತೆ. ದೇವರ ಸೇವೆಗಳಲ್ಲಿ, ಉತ್ಸವಗಳಲ್ಲಿ ತಾನೇ ಪದ್ಯ ಕಟ್ಟಿ ಹಾಡುತ್ತಿದ್ದ ಮಂಜಮ್ಮನವರ ಕೀರ್ತಿ ಸುತ್ತಮುತ್ತಲಿನ ಹಳ್ಳಿಗಳಿಗೆ ಹಬ್ಬಿತ್ತು. ವೇದಾಂತವನ್ನು ಯಕ್ಷಗಾನಕ್ಕೆ ಬಳಸಿದವರಲ್ಲಿ ಇವರೇ ಮೊದಲಿಗರೆಂದು ಕಾಣುತ್ತದೆ. ಯಾವ ಕವಿಯೂ ಇಂತಹ ಪ್ರಯೋಗಕ್ಕೆ ಕೈ ಹಾಕಿದಂತಿಲ್ಲ. 'ಜೀವ ಪರಮರ ಕಲ್ಯಾಣ' ಮತ್ತು 'ಮನೋಬುದ್ಧಿ ಸಂವಾದ' ಎಂಬ ಎರಡು ಕೃತಿಗಳನ್ನು ಅವರು ರಚಿಸಿದ್ದಾರೆ. ಅಲ್ಲದೆ 'ಯಕ್ಷಲೋಕ ವಿಜಯ' ಎಂಬ ಇನ್ನೊಂದು ಕೃತಿಯನ್ನೂ ಅವರು ರಚಿಸಿದ್ದರು. ಇಂದಿಗೂ ಮಂಜಮ್ಮ ಬರೆದ ಅನೇಕ ಹಾಡುಗಳು ಸಾಗರದ ಹವ್ಯಕ ಕುಟುಂಬಗಳ ಹೆಂಗಸರ ಬಾಯಲ್ಲಿ ನಲಿದಾಡುತ್ತಿವೆ. ಮಂಜಮ್ಮ ಹಳೆಯ ತಲೆಮಾರಿನ ಪ್ರತಿನಿಧಿಯಾದರೆ ಶ್ರೀಮತಿ ದಿವ್ಯಾ ಜಯರಾಂ(1982) ಹೊಸ ತಲೆಮಾರಿನ ಪ್ರತಿನಿಧಿಯಾಗಿದ್ದಾರೆ. ಸಾಗರ ತಾಲೂಕಿನ ತಲವಾಟ ಇವರ ಹುಟ್ಟೂರು. ಹೊಸ್ತೋಟ ಮಂಜುನಾಥ ಭಾಗವತರ ಶಿಷ್ಯೆಯಾದ ಇವರು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ 'ಧ್ರುವ ಚರಿತ್ರೆ' ಎಂಬ ಪ್ರಸಂಗ ರಚಿಸಿದ್ದರು. ಇದು ಧಾರವಾಡದ ಆಕಾಶವಾಣಿಯಿಂದಲೂ ಪ್ರಸಾರವಾಗಿದೆ. ಯಕ್ಷಗಾನ ಕಲಾವಿದೆಯಾದ ಅರ್ಪಿತಾ ಹೆಗಡೆಯವರು 'ಪೂರ್ಣಚಂದ್ರ' ಎಂಬ ಪ್ರಸಂಗಕ್ಕೆ ಕಥಾ ಸಂಯೋಜನೆ ಮಾಡಿದ್ದಾರೆ. ಅಪೂರ್ವಕ್ಕೆ ಅಲ್ಲಿಲ್ಲಿ ಯಕ್ಷಗಾನ ಪ್ರಸಂಗ ರಚನೆಯಲ್ಲಿ ತಮ್ಮನ್ನು ಮಹಿಳೆಯರು ತೊಡಗಿಸಿಕೊಂಡಿದ್ದಾರೆ.

ಯಕ್ಷಗಾನವನ್ನು ಅಕಾಡೆಮಿಕ್ ಅಧ್ಯಯನದ ಶಿಸ್ತಿಗೆ ಒಳಪಡಿಸುವ ಪ್ರಯತ್ನವನ್ನೂ ಮಹಿಳೆಯರು ಮಾಡಿರುವುದು ವಿಶೇಷ. ತಾಳಮದ್ದಳೆಯಂತಹ ಗಂಭೀರ ವಿಷಯಗಳನ್ನು ಅಧ್ಯಯನ ಮಾಡುವ ಸಾಹಸಕ್ಕೆ ಬಹಳ ಹಿಂದೆಯೆ ಶಿರಸಿಯ ಡಾ.ವಿಜಯ ನಳಿನಿ ರಮೇಶ್ ಮುಂದಾಗಿದ್ದರು. ಅವರ ಮಗಳು ಡಾ. ಪ್ರಜ್ಞಾ ಮತ್ತಿಹಳ್ಳಿಯವರೂ ಕೂಡ ಗಮನಾರ್ಹ ಸಾಧನೆ ಮಾಡಿದ್ದಾರೆ. . ವಿಜಯನಳಿನಿಯವರು 'ತಾಳ ಮದ್ದಳೆಯಲ್ಲಿ ಸೃಜನಶೀಲತೆ' ಎಂಬ ವಿಷಯದ ಮೇಲೆ ಪಿಹೆಚ್.ಡಿ. ಪ್ರಬಂಧ ರಚಿಸಿದ್ದಾರೆ. ಈ ಸಂಪ್ರಬಂಧವು ತಾಳಮದ್ದಳೆ ಕುರಿತ ಮೊದಲ ಸಂಶೋಧನೆಯಾಗಿದೆ. ಅಲ್ಲದೆ ಯಕ್ಷಗಾನ ಕಲೆಯ ಮೌಖಿಕ ಸೌಂದರ್ಯದ ಕುರಿತು ಹಲವು ಕೃತಿ ರಚಿಸಿದ್ದಾರೆ. ವಿಜಯ ನಳಿನಿ ರಮೇಶ್ ಅವರ ಮಾರ್ಗದರ್ಶನದಲ್ಲಿ , ಡಾ. ವಸುಧಾ ಹೆಗಡೆಯವರು ಯಕ್ಷಗಾನ ಕ್ಷೇತ್ರಕ್ಕೆ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಕೊಡುಗೆ' ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿದ್ದಾರೆ. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಶುಭಾ ಮರವಂತೆಯವರು ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳ ಭಾಷಿಕ ವಿಶ್ಲೇಷಣೆಯನ್ನು ಯು.ಜಿಸಿ. ಯ ಕಿರು ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದ್ದಾರೆ. ಅಲ್ಲದೆ 'ಬಲ್ಲಿರೇನಯ್ಯ' ಯಕ್ಷಮಾಸಿಕಕ್ಕೆ 'ಭಾವಭಾಮಿನಿ' ಎಂಬ ಅಂಕಣವನ್ನೂ ಬರೆಯುತ್ತಿದ್ದಾರೆ. ಕಲಾ ಪ್ರಕಾರವನ್ನು ಅಧ್ಯಯನದ ವಸ್ತುವಾಗಿ ಆಯ್ದುಕೊಳ್ಳುವ ಸವಾಲನ್ನು ಮಹಿಳೆಯರು ಸ್ವೀಕರಿಸಿರುವುದು ವಿಶೇಷವೆನಿಸುತ್ತದೆ. ಕ್ಷೇತ್ರ ಕಾರ್ಯವನ್ನು ಆಧರಿಸಿ ಕಲಾವಿದರ ಜೀವನ ವಿಧಾನವನ್ನು ಬಹಳ ಹತ್ತಿರದಿಂದ ಗಮನಿಸುವ ಇಂತಹ ಅಧ್ಯಯನಗಳು ಹೆಚ್ಚಾಗಿ ಸಂಶೋಧಕರ ಸಂಯಮ, ಸೈರಣೆ, ಸಮಯ ಎಲ್ಲವೂ ನಿರೀಕ್ಷಿಸುತ್ತದೆ.

**ಯಕ್ಷಗಾನ ಕಲಾವಿದೆಯರು:**

ಹಿಮ್ಮೇಳ ಮತ್ತು ಮುಮ್ಮೇಳ ಯಕ್ಷಗಾನದ ಒಟ್ಟು ಸ್ವರೂಪದ ಎರಡು ಅಂಗಗಳು. ತಾಳಮದ್ದಳೆ, ಹೂವಿನಕೋಲು, ಚಿಕ್ಕಮೇಳ ಇವೆಲ್ಲವೂ ಅದರ ಇತರ ಉಪ ಕಲೆಗಳು. ಇವುಗಳೆಲ್ಲದರಲ್ಲಿ ಭಾಗವಹಿಸುವವರನ್ನು ಕಲಾವಿದರೆಂದು ಕರೆಯುವುದು ವಾಡಿಕೆ. ಒಂದು ಕಾಲದಲ್ಲಿ ಸಮಾಜದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಈ ಕಲೆಗೆ ವಿದ್ಯಾವಂತರ ಪ್ರವೇಶ ಹೊಸ ಚೈತನ್ಯವನ್ನು ನೀಡಿತು. ವೃತ್ತಿರಂಗದ ಕಲಾವಿದರಿಂತ ಈಗ ಹವ್ಯಾಸಿ ಕಲಾವಿದರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವಿವಿಧ

ಉದ್ಯೋಗಗಳನ್ನು ಮಾಡುತ್ತಾ ತಮ್ಮ ಬಿಡುವಿನ ವೇಳೆಯಲ್ಲಿ ಗೆಜ್ಜೆ ಕಟ್ಟಿ ಕುಣಿಯುವ ಹವ್ಯಾಸ ರೂಢಿಸಿಕೊಂಡ ಅನೇಕ ಮಹಿಳೆಯರು ನಮ್ಮಲ್ಲಿದ್ದಾರೆ. ಬೆಂಗಳೂರು ಕೇಂದ್ರೀಕೃತ ಯಕ್ಷಗಾನ ತಂಡಗಳಲ್ಲಿ ಮಲೆನಾಡಿನ ಅನೇಕ ಮಹಿಳೆಯರು ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಈಗಾಗಲೇ ಗುರುತಿಸಲ್ಪಟ್ಟಿದ್ದಾರೆ. ಹಿಮ್ಮೇಳದಲ್ಲಿ ಪೂರ್ಣ ಪ್ರಮಾಣದಲ್ಲಿ ಹೆಸರು ಮಾಡಿದ ಮಹಿಳಾ ಕಲಾವಿದರು ಅಷ್ಟಾಗಿ ದೊರೆಯದಿದ್ದರೂ ಅಲ್ಲಲ್ಲಿ ಸಣ್ಣಪುಟ್ಟ ಪ್ರಯತ್ನ, ಪ್ರಯೋಗಗಳು ನಡೆದಿವೆ. ಉತ್ತರ ಕನ್ನಡದ ಶ್ರೀಮತಿ ಶಾರದಾ ಭಟ್ಟ ಅವರು ಭಾಗವತಿಕೆ ಮತ್ತು ಮದ್ದಳೆ ನುಡಿಸುವುದರಲ್ಲಿ ತರಬೇತಿ ಪಡೆದಿದ್ದಾರೆ. .

ಅಚ್ಚ ಮಲೆನಾಡಿನ ಪ್ರಾಂತ್ಯವಾದ ಶಿವಮೊಗ್ಗ ಜಿಲ್ಲೆಯ ಕಲಾವಿದೆಯರ ಸಾಧನೆ ನಾವೆಲ್ಲರೂ ಹೆಮ್ಮೆ ಪಡುವಂತಿದೆ. ಸಂಘಟನೆ, ತಾಳಮದ್ದಳೆ ಎಲ್ಲದಕ್ಕೂ ಇವರದ್ದು ಎತ್ತಿದ ಕೈ. ಈ ಭಾಗದ ಹಲವು ಕಲಾವಿದೆಯರಲ್ಲಿ ಶ್ರೀಮತಿಯರಾದ ವರದಾ ಮಧುಸೂದನ ಐತಾಳ, ಕಿರಣ್ ಆರ್. ಪೈ, ರಾಜೇಶ್ವರಿ ಉದಯಸಿಂಹ, ಸರಸ್ವತಿ ನಾಗರಾಜ್, ಉಷಾ ಜಯರಾಂ, ಶಶಿಕಲಾ ಹೆಬ್ಬಾರ್, ಸೌಮ್ಯಾ ಗೋಟಗಾರು,  ನಳಿನೀ ರಾವ್, ವಿದ್ಯಾ, ಶಾಂತಲಾ, ಮಧುನಿಶಾ, ನಾಗಶ್ರೀ, ಪಲ್ಲವಿ, ವೀಣಾ ಪ್ರಸನ್ನ, ಪ್ರತಿಮಾ ನಾಯಕ್, ಡಾ. ಪ್ರಕೃತಿ, ರಮಾ ಶಾಸ್ತ್ರೀ, ಮಣಿಮಾಲಾ ವಾಸುದೇವ್, ಸುಶೀಲಾ ನಾಯಕ್, ಅಹಲ್ಯಾ, ನಾಗರತ್ನ, ದಿ.ಹೇಮಾ ರಾಜ ಗೋಪಾಲ್, ಮಂಜುಳಾ ಸ್ವಾಮಿ ಮುಂತಾದವರು ಮುಖ್ಯರು. ಬಾಲ ಕಲಾವಿದೆಯರಾದ ಕು. ನವ್ಯಾ ಭಟ್, ಕು. ಬೃಂದಾ ಭವಿಷ್ಯದ ಕಲಾವಿದೆಯರಾಗುವ ಭರವಸೆ ಮೂಡಿಸುತ್ತಿದ್ದಾರೆ. ರಾಜೇಶ್ವರಿ ಉದಯಸಿಂಹ ಅವರು 'ನೀನಾಸಂ'ನಿಂದ ತರಬೇತಿ ಪಡೆದವರು. ಸುಭದ್ರೆಯಂತಹ ಪಾತ್ರ ಹಾಗೂ ಮಾತುಗಾರಿಕೆಯಲ್ಲಿ ಅವರು ಉಳಿದವರಿಗೆ ಮಾದರಿ. ಭರತನಾಟ್ಯ ಕಲಾವಿದೆಯಾದ ವರದಾ ಕರಾವಳಿಯ ಕೊಲ್ಲೂರಿನವರು. ಈಗ ಮದುವೆಯಾಗಿ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ. ಉಡುಪಿ ಕೇಂದ್ರದಿಂದ  ಹೆಜ್ಜೆ ಕಲಿತು ಯಕ್ಷಗಾನದ ಸೂಕ್ಷ್ಮತೆ ಅರಿತು ಅಭಿನಯಿಸುವ ಕಲಾವಿದೆ. ಏಕವ್ಯಕ್ತಿ ಪ್ರದರ್ಶನದ ವಿಕ್ರಮ ಸಾಧಿಸಿದ ಪ್ರತಿಭಾವಂತೆ. ವರದಾ ಅವರ ಕೃಷ್ಣನ ಪಾತ್ರ ಬಹು ಜನಪ್ರಿಯ. ಈಗೀಗ ಸ್ತ್ರೀ ಪಾತ್ರವನ್ನೂ ಅಷ್ಟೇ ಸೊಗಸಾಗಿ ನಿರ್ವಹಿಸುತ್ತಿದ್ದಾರೆ. 2012 ರಲ್ಲಿ ಬೆಂಗಳೂರಿನ ನೃಪತುಂಗ ಕಲಾನಿಕೇತನದಿಂದ 'ಕರ್ನಾಟಕ ಭೂಷಣ' ಪ್ರಶಸ್ತಿಯನ್ನೂ ಪಡೆದಿದ್ದಾರೆ. ಸೌಮ್ಯ ಅವರ ಸಾಧನೆಯೂ ಏಕವ್ಯಕ್ತಿ ಪ್ರದರ್ಶನಗಳ ಹಿನ್ನಲೆಯಲ್ಲಿ ಗಮನಿಸತಕ್ಕಂತದ್ದು ವೃತ್ತಿರಂಗದ ಕಲಾವಿದರನ್ನೂ ಮೀರಿಸುವ ಕಂಸನಂತಹ ಪಾತ್ರಗಳ ಕಲಾವಿದೆ ಸಾಗರದ ಸರಸ್ವತಿ ನಾಗರಾಜ್. ಇತ್ತೀಚೆಗೆ ನಿಧನರಾದ ಹೇಮಾ ರಾಜಗೋಪಾಲ್ ಹಾಸ್ಯ ಕಲಾವಿದೆಯಾಗಿ ಗುರುತಿಸಲ್ಪಟ್ಟಿದ್ದಾರೆ.

ಮಲೆನಾಡಿನ ಇನ್ನೊಂದು ಪ್ರಮುಖ ಪ್ರಕೃತಿ ಸೌಂದರ್ಯದ ತಾಣವಾದ ಉತ್ತರ ಕನ್ನಡ ಜಿಲ್ಲೆಯ ಮಹಿಳೆಯರ ಸಾಧನೆ ಗಮನಾರ್ಹವಾದುದು. 1980-90ರ ಸುಮಾರಿಗೆ 'ಭಸ್ಮಾಸುರ ಮೋಹಿನಿ' ಯಲ್ಲಿ ಮೋಹಿನಿಯ ಪಾತ್ರ ಮಾಡಿ ಚಿಟ್ಟಾಣಿ ಮೊದಲಾದ ಪ್ರಸಿದ್ಧ ಕಲಾವಿದರ ಮೆಚ್ಚುಗೆ ಗಳಿಸಿದ ಶ್ರೀಮತಿ ಸುಜಾತಾ ಧಾರೇಶ್ವರ, ಈಶ್ವರ ಮೊದಲದ ಪಾತ್ರ ಮಾಡಿ ಸೈ ಎನಿಸಿಕೊಂಡ ವಿಜಯ ನಳಿನಿ ರಮೇಶ, ಪ್ರತಿಭಾವಂತ ಕಲಾವಿದೆಯರಾದ ಡಾ. ಪ್ರಜ್ಞಾ ಮತ್ತಿಹಳ್ಳಿ, ಗಡಿಗೆಹೊಳೆಯ ಸುಮಾ ವಿ ಹೆಗಡೆ, ಅನ್ನಪೂರ್ಣ ವಿ ಭಟ್ಟ, ವಿನೋದಾ ಎಂ ಭಟ್ಟ, ಸರಸ್ವತಿ ಪಿ ಹೆಗಡೆ, ಗೀತಾ ಕೆ. ಹೆಗಡೆ, ನಿರ್ಮಲಾ ಎಂ ಹೆಗಡೆ,  ಕೊಡೆಮನೆಯ ಜಯಶ್ರೀ, ಕೊಂಡದಕುಳಿ ಅಶ್ವಿನಿ ಮೊದಲಾದವರು ಉತ್ತಮ ಪ್ರಯೋಗಗಳನ್ನು ನೀಡಿದ್ದಾರೆ. ಈಗ ಬೆಂಗಳೂರು ನಿವಾಸಿಯಾಗಿರುವ ಹೊಲನಗದ್ದೆಯ ಶ್ರೀಮತಿ ಮಯೂರಿ ಉಪಾಧ್ಯಾಯ ಖಳಪಾತ್ರಗಳಿಗಾಗಿ ಜನಪ್ರಿಯತೆ ಪಡೆದ ಕಲಾವಿದೆ. ಭೀಮ, ಕಂಸ, ವೀರಭದ್ರನಂತಹ ಪಾತ್ರಗಳ ಗತ್ತು ಗಮ್ಮತ್ತು ಪುರುಷರನ್ನೂ ನಾಚಿಸುವಂತಿದೆ. ಎಷ್ಟೋಜನ ಇವರ ವೇಷ ನೋಡಿ, 'ಮಹಿಳಾ ಯಕ್ಷಗಾನವೆಂದು ಹೇಳಿ ಗಂಡಸರನ್ನೂ ಕರೆ ತಂದಿದ್ದೀರಾ?' ಎಂದು ಆಯೋಜಕರನ್ನು ತರಾಟೆಗೆ ತೆಗೆದುಕೊಂಡದ್ದೂ ಇದೆ. ಅಂಕೋಲೆಯ ರಾಜಮ್ಮ ಹಿಚ್ಕಡ, ಸಿದ್ಧಾಪುರದ ಗೌತಮಿ ಹೆಗಡೆ, ಹೊನ್ನಾವರದ ಸುಮಾ ಎನ್. ಹೆಗಡೆ, ಪ್ರೀತಿ ಚಿಟ್ಟಾಣಿ ಇವರ ಸಾಧನೆಯೂ ಗಮನಾರ್ಹ. ಮೂಡುಗೆರೆ ತಾಲೂಕಿನ ಹಳುವಳ್ಳಿಯಲ್ಲಿ ಒಂದು ಮಹಿಳಾ ಮೇಳವೇ ಇದೆ. ಇವರು ತೆಂಕು ಹಾಗೂ ಬಡಗು ಎರಡೂ ತಿಟ್ಟಿನ ವೇಷಧಾರಿಗಳು. ತಮಗೆ ಬೇಕಾದ ಪ್ರಸಾಧನ, ವೇಷದ ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡಿರುವುದು ಪ್ರಶಂಸನೀಯ.

**ಮಹಿಳೆಯರು ಮತ್ತು ತಾಳಮದ್ದಳೆ:**

ತಾಳಮದ್ದಳೆ ಎನ್ನುವುದು ಯಕ್ಷಗಾನದ ವಾಚಿಕ ಪ್ರಭೇದ. ಆಂಗಿಕ ಅಭಿನಯಗಳಿಲ್ಲದೆ, ಭಾಷೆಯಲ್ಲಿ ಭಾವಾಭಿನಯ ತರಬಲ್ಲ ಕಲೆ. ಮಾತುಗಾರಿಕೆಯೇ ಇದರ ಹೃದಯ. ಕಲಾವಿದನಿಗೆ ತನ್ನ ವಾಕ್‌ಪ್ರತಿಭೆಯ ಮೂಲಕ ಕಥಾ ಸನ್ನಿವೇಶವನ್ನು ನಿರ್ಮಾಣಮಾಡಬಲ್ಲ ಕೌಶಲವಿರಬೇಕು. ಈ ತಾಳಮದ್ದಲೆ ಕ್ಷೇತ್ರದಲ್ಲೂ ಕೂಡ ಮಲೆನಾಡಿನ ಮಹಿಳೆಯರು ಮಂಚೂಣಿಯಲ್ಲಿದ್ದಾರೆ. ತಮ್ಮದೇ ಆದ ತಂಡ ಕಟ್ಟಿ ಊರಿಂದೂರಿಗೆ ಹೋಗಿ ಪ್ರದರ್ಶನ ನೀಡಬಲ್ಲ ಸಮರ್ಥರು. ಹೊಸನಗರ ತಾಲೂಕಿನ ನಿಟ್ಟೂರು ಮಹಿಳಾ ತಂಡ, ಕೋಡೂರು, ಸಾಗರ, ನಗರ, ಸೊರಬದ ಬನದಕೊಪ್ಪ, ಶಿವಮೊಗ್ಗ

ನಗರ, ಸಿದ್ಧಾಪುರದ ದಂಟ್‌ಕಲ್, ಶಿರಸಿಯ ಮತ್ತಿಹಳ್ಳಿ, ಯಲ್ಲಾಪುರದ ಗಡಿಗೆಹೊಳೆ ಹೀಗೆ ಅನೇಕ ಮಹಿಳಾ ತಂಡಗಳು ಕಾರ್ಯನಿರತವಾಗಿವೆ. ಪುರುಷರ ಕೂಟದಲ್ಲಿಯೂ ಮಹಿಳಾ ಅರ್ಥಧಾರಿಗಳು ಭಾಗವಹಿಸುತ್ತಿದ್ದಾರೆ. ಶಿವಮೊಗ್ಗದಲ್ಲಿ 'ಯಕ್ಷಕೂಟ' ಎಂಬ ತಾಳಮದ್ದಲೆ ಕೂಟ ರಚಿಸಿಕೊಂಡು ಶ್ರೀಮತಿ ಶಶಿಕಲಾ ಹೆಬ್ಬಾರ್, ಪತಿ ಶ್ರೀ ಮರವಂತೆ ಅಚ್ಯುತ ಹೆಬ್ಬಾರ್ ಸಂಚಾಲಕತ್ವದಲ್ಲಿ ಅನೇಕ ಪ್ರದರ್ಶನ ನೀಡುತ್ತಿದ್ದಾರೆ. ಶ್ರೀಮತಿಯರಾದ ಶ್ರೀಲಕ್ಷ್ಮೀ ಶಾಸ್ತ್ರೀ, ವೀಣಾ ಉದಯ ಕುಮಾರ್, ರಶ್ಮಿ ಜೋಯ್ಸ, ಮಾನಸ ಶಿವರಾಮಕೃಷ್ಣ ಮೊದಲಾದವರು ಈ ತಂಡದಲ್ಲಿದ್ದಾರೆ.

**ಮಹಿಳೆಯರು ಮತ್ತು ಯಕ್ಷಸಂಘಟನೆ:**

ಪುರುಷರ ತಂಡಗಳಲ್ಲಿ ಮಹಿಳೆಯರು ಪಾತ್ರ ನಿರ್ವಹಿಸುವುದಕ್ಕಿಂತ ತಮ್ಮದೇ ತಂಡ ಕಟ್ಟಿ ಪ್ರದರ್ಶನ ನೀಡುತ್ತಿರುವುದು ಒಂದು ವಿಶಿಷ್ಟ ಬೆಳವಣಿಗೆ. ಕಲೆಯಲ್ಲಿ ತಮ್ಮ ಅನನ್ಯತೆಯನ್ನು ಸಾಧಿಸಿಕೊಳ್ಳುವುದಕ್ಕೆ ಇದು ಉತ್ತಮ ಅವಕಾಶ. ಮಲೆನಾಡಿನಲ್ಲಿಯೇ ಸುಮಾರು 12 ರಿಂದ 15 ರವರೆಗೆ ಯಕ್ಷ ಮಹಿಳಾ ತಂಡಗಳು ದೊರೆಯುತ್ತವೆ. 'ಶ್ರೀ ಸಾಯಿ ಯಕ್ಷಗಾನ ಪ್ರತಿಷ್ಠಾನ ಶಿವಮೊಗ್ಗ', 'ಯಕ್ಷಕೂಟ ಶಿವಮೊಗ್ಗ', 'ಶ್ರೀ ಮಹಮಾಯಿ ಮಹಿಳಾ ಯಕ್ಷಗಾನ ಮಂಡಳಿ(ರಿ.) ಸಾಗರ., ಯಕ್ಷಸಿರಿ ಬೆಂಗಳೂರು (ರಿ.) ಮೊದಲಾದ ಹಲವು ಸಂಸ್ಥೆಗಳನ್ನು ಮಲೆನಾಡಿನ ಮಹಿಳೆಯರು ತಾವಿರುವ ಸ್ಥಳಗಳಲ್ಲಿ ಕಟ್ಟಿದ್ದಾರೆ. ಸಾಗರದ ಬೇಳೂರಿನವರಾದ ಶ್ರೀಮತಿ ಮಮತಾ ಜಿ. ಇವರು ತಾಳ ಮದ್ದಲೆ ಗಾಗಿಯೇ 'ಅನೇಕ ನಾರಾಯಣ ಜೋಷಿ ಚಾರಿತೇಬಲ್ ಟ್ರಸ್ಟ್' ಸ್ಥಾಪಿಸಿದ್ದಾರೆ. ಪ್ರಾದೇಶಿಕವಾಗಿ ತಮ್ಮನ್ನು ಗುರುತಿಸಿಕೊಳ್ಳುವುದಲ್ಲದೆ, ಅಂತರ್‌ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಇವರ ಸಾಧನೆ ಗಮನಿಸುವಂತಾಗಿದೆ. ಮುಂಬೈ, ದೆಹಲಿಯಂತಹ ಮಹಾನಗರಗಳಲ್ಲಿರುವ ಕನ್ನಡ ಸಂಘಟನೆಗಳು ಮಹಿಳಾ ಪ್ರತಿಭೆಗಳನ್ನು ಪ್ರೋತ್ಸಾಹಿಸುತ್ತವೆ. ಒಟ್ಟಿನಲ್ಲಿ ಕಲಾ ಸಂಘಟನೆಯಲ್ಲೂ ಮಲೆನಾಡಿನ ಮಹಿಳೆಯರು ಹಿಂದೆ ಬಿದ್ದಿಲ್ಲ ಎನ್ನುವುದು ಸಂತೋಷದ ಸಂಗತಿ.

**ಉಪಸಂಹಾರ:**

ಯಕ್ಷಗಾನವನ್ನು ನಾವಿನ್ನು 'ಗಂಡು ಕಲೆ' ಎಂಬ ವಿಶೇಷಣ ಹಚ್ಚಿ ಹೇಳಬೇಕಾದ ಅವಶ್ಯಕತೆ ಇಲ್ಲ ಎನಿಸುತ್ತದೆ. ಈಗ ಅದು ಮಹಿಳಾ ಕಲೆಯೂ ಆಗಿದೆ. ಗಂಡು ಎನ್ನುವುದು ಪುರುಷವಾಚಕ ಅಲ್ಲ; ಅದು ಕೆಚ್ಚು ಧೈರ್ಯದ ಸಂಕೇತವೆಂದು ಪರಿಭಾವಿಸಿದರೂ ಎಲ್ಲೂ ಹೆಣ್ಣಿನ ಆತ್ಮಗೌರವಕ್ಕೆ ಧಕ್ಕೆ ತರಬಹುದೆನ್ನುವ ಕಾರಣಕ್ಕಾಗಿ ಈ 'ಗಂಡು' ಎನ್ನುವ ಪದ ಬಳಕೆಗೆ ಸ್ತ್ರೀವಾದದ ತಕರಾರುಗಳಿವೆ. ಭಾಷಿಕ ಸ್ತ್ರೀವಾದಿ ಅಧ್ಯಯನ ಈ ಬಗೆಯ ಪದಗಳನ್ನು ನಿರಚನಗೊಳಿಸುತ್ತವೆ. ಅಭೇದ್ಯ, ಅಸಾಧ್ಯ ಎನ್ನುವ ಎಲ್ಲಾ ಕ್ಷೇತ್ರವನ್ನು ಮಹಿಳೆಯರು ಇಂದು ಪ್ರವೇಶಿಸುತ್ತಿರುವುದನ್ನು ನೋಡಿದರೆ ಅವಕಾಶದ ಆಕಾಶ ಸ್ವಚ್ಛವಾಗಿದೆ ಎಂಬುದು ಸ್ಪಷ್ಟ. ಯಕ್ಷಗಾನವೂ ಇದಕ್ಕೆ ಹೊರತಲ್ಲ. ಆದರೆ ಸಂಪೂರ್ಣವಾದ ಮಹಿಳಾ ತಂಡಗಳು ಹುಟ್ಟುವುದಕ್ಕೆ ಇನ್ನೂ ಸಾಧ್ಯವಾಗದಿರುವುದು ಬೇಸರದ ಸಂಗತಿ. ಈ ನಿಟ್ಟಿನಲ್ಲಿ ಪ್ರಯತ್ನಗಳು ಮುಂದುವರಿಯುತ್ತಿರುವುದು ಆಶಾದಾಯಕ ಬೆಳವಣಿಗೆ. ಪುರುಷ ಹಾಗೂ ಸ್ತ್ರೀಯರ ಸ್ವರಸ್ಥಾಯಿಗಳು ಬೇರೆ ಬೇರೆ ಆಗಿರುವುದರಿಂದ ಭಾಗವತರು ಎತ್ತಿದ ಪದಕ್ಕೆ ಕೆಲವು ಮಹಿಳಾ ಪಾತ್ರಧಾರಿಗಳಿಗೆ ಶ್ರುತಿ ಸೇರಿಸಿ ಹೇಳಲು ಸಾಧ್ಯವಾಗದೆ ಪ್ರದರ್ಶನ ಪೇಲವವಾಗುವ ಸಾಧ್ಯತೆ ಇರುತ್ತದೆ. ಅದಕ್ಕಿರುವ ಉಪಾಯವೆಂದರೆ ಮಹಿಳೆಯರೇ ಭಾಗವತರಾಗುವುದು. ಸ್ವತಂತ್ರವಾಗಿ ಬಣ್ಣ ಹಚ್ಚಿಕೊಳ್ಳಲು, ವೇಷ ಕಟ್ಟಿಕೊಳ್ಳಲು ಸಾಧ್ಯವಾಗದ ಹೊರತು ಲೈಂಗಿಕವಾಗಿ ಎದುರಿಸಬೇಕಾದ ಕಿರಿಕಿರಿಗಳಿಗೆ ಮೋಕ್ಷ ಸಿಗುವುದಿಲ್ಲ. ಇಂದಿನ ಮಹಿಳಾ ಚಳುವಳಿಯ ಆಶಯಗಳನ್ನು ಸಮಾಜಕ್ಕೆ ಬಿತ್ತರಿಸುವುದರಲ್ಲೂ ಪಾತ್ರಧಾರಿಗಳ ಹೊಣೆಗಾರಿಕೆ ಇದೆ. ಅದೇ ಪುರುಷನಿರ್ಮಿತ ಪ್ರಸಂಗ ಸಾಹಿತ್ಯಗಳಿಗೆ ಅರ್ಥ ಬರೆದುಕೊಡುವ ಗುರುಗಳ ಆಲೋಚನೆಗಳನ್ನು ರಂಗಸ್ಥಳದಲ್ಲಿ ಉರು ಹೊಡೆಯದೆ ತನ್ನ ಅಸ್ಮಿತೆಗೂ ಪ್ರಸಂಗದ ಚೌಕಟ್ಟಿಗೂ ಧಕ್ಕೆ ಬರದ ರೀತಿಯಲ್ಲಿ ಮಾತಿನ ಚಾಕಚಕ್ಯತೆಯನ್ನು ತೋರಬೇಕಾಗಿದೆ. ಈ ನಿಟ್ಟಿನಲ್ಲಿ ಇಂದಿನ ಕಲಾವಿದೆಯರು ಎದುರಿಸಬೇಕಾದ ಸವಾಲುಗಳು ಸಾಕಷ್ಟಿವೆ.

ಆಧಾರ ಗ್ರಂಥಗಳು:


1. ಯಕ್ಷಗಾನ ಕವಿ–ಕಾವ್ಯ ವಿಹಾರ: ಭಾಗ–1: ಡಾ.ಕಬ್ಬಿನಾಲೆ ವಸಂತ ಭಾರದ್ವಾಜ, ಯಕ್ಷ ಗುರುಕುಲ ಶಿಕ್ಷಣ ಟ್ರಸ್ಟ್, ಹಯಗ್ರೀವನಗರ, ಉಡುಪಿ – 03 (2010)
2. ತಿಳಿನೋಟ: ಡಾ. ಎಂ.ಕೆ. ರಾಘವ ನಂಬಿಯಾರ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ–02.
3. ಯಕ್ಷಗಾನ ವಾಚಿಕಾಧ್ಯಯನ: ಡಾ. ಮೋಹನ ಕುಂಟಾರು, ಹಂಪಿ ವಿಶ್ವವಿದ್ಯಾನಿಲಯ (2000)
4. 'ಬಲ್ಲಿರೇನಯ್ಯ' ಮಾಸ ಪತ್ರಿಕೆ– ಜೂನ್ 2013, ಆಜ್ಞಾ ಸೋಹಮ್ ಪ್ರಕಾಶನ, ಬೆಳ್ಮಣ್ಣು, ಕಾರ್ಕಳ, ಉಡುಪಿ
5. 'ಯಕ್ಷರಂಗ' ಮಾಸ ಪತ್ರಿಕೆ– ಸೆಪ್ಟಂಬರ್ 2013 'ಯಕ್ಷಲೋಕ (ರಿ), ಹಳದೀಪುರ, ಹೊನ್ನಾವರ, ಉ.ಕ.

# ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮಹಿಳೆಯ ಪಾತ್ರ

**ಶಿವಮೂರ್ತಿ ಎಂ. ಶೊಂಭೈನೂರು**

**ಪೀಠಿಕೆ:**

ಅಭಿವೃದ್ಧಿಯೇ ಅಭ್ಯುದಯದ ಅಡಿಗಲ್ಲು ಎಂಬ ಮಾತಿಗೆ ಪ್ರತಿಮಾ ಸಾಕ್ಷಿಯಾಗಿ, ಮನುಷ್ಯನ ಆರ್ಥಿಕ ಚಟುವಟಿಕೆ ಆತನ ಸಂಸ್ಕೃತಿ ನಿರ್ಮಾಣದಲ್ಲಿ ಅಪೂರ್ವವಾದ ಪಾತ್ರವಹಿಸುತ್ತದೆ. ಸಂಸ್ಕೃತಿಯ ವಿಕಾಸದ ವಿವಿಧ ಹಂತಗಳಲ್ಲಿ ಕೃಷಿ ಹಾಗೂ ಪಶುಪಾಲನೆ ಪ್ರಮುಖವಾದ ಘಟ್ಟಗಳು. ಶಿಲಾಯುಗದಲ್ಲಿ ಬೇಟೆಯ ಮೂಲಕ ಮಾನವರು ತಮ್ಮ ಆಹಾರ ಅವಶ್ಯಕತೆಯನ್ನು ಪೂರೈಸಿಕೊಳ್ಳುತ್ತಿದ್ದರು. ಈ ದೆಸೆಯಲ್ಲಿಯೇ ಅವರು ಮುಂದೆ ಪಶುಪಾಲನೆಯನ್ನು ಕೈಗೊಂಡರು. ಪಶುಗಳ ತ್ಯಾಜ್ಯ ಭೂಮಿಯ ಮೇಲೆ ಶೇಖರವಾದ ಪ್ರದೇಶದಲ್ಲಿ ಫಲವತ್ತತೆಯಾಗಿದ್ದನ್ನು ಕಂಡುಕೊಂಡು ಕೃಷಿಪದ್ಧತಿಯನ್ನು ಪ್ರಾರಂಭಿಸಿದರು. ಕಾಲಾನಂತರದಲ್ಲಿ ಕೃಷಿಯ ಜೊತೆಯಲ್ಲಿ ಹೈನುಗಾರಿಕೆಯನ್ನು ಉಪಕಸುಬಾಗಿ ಅಳವಡಿಸಿಕೊಂಡರು. ಈ ರೀತಿ ಮಾನವನಿಗೆ ಜೀವನೋಪಾಯದ ಕಸುಬಾಗಿದ್ದ ಕೃಷಿ ಇಂದು ಲಾಭದಾಯಕ ವೃತ್ತಿಯಾಗಿದೆ. ಜೊತೆಗೆ ಹೈನುಗಾರಿಕೆಯೂ ಕೂಡಾ ಗ್ರಾಮೀಣ ರೈತರಿಗೆ ಆದಾಯ ತರುವ ಪ್ರಮುಖ ಉದ್ಯಮವಾಗಿ ರೂಪುಗೊಂಡಿದೆ.

ಗ್ರಾಮೀಣ ಭಾರತೀಯ ಸಮಾಜದಲ್ಲಿ ಕೃಷಿ ಮತ್ತು ಹೈನುಗಾರಿಕೆಯು ಪುರುಷ ಮತ್ತು ಮಹಿಳೆಯರಿಬ್ಬರಿಗೂ ಉದ್ಯೋಗವನ್ನು ಒದಗಿಸುತ್ತಿರುವ ಪ್ರಮುಖ ಮೂಲವಾಗಿವೆ. ಭಾರತದಲ್ಲಿ ಇಂದಿಗೂ ಶೇ.70ರಷ್ಟು ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ. ಭಾರತೀಯ ಕೃಷಿ ಉತ್ಪಾದನಾ ಕ್ಷೇತ್ರವು ಪ್ರಮುಖವಾಗಿ ನೀರಿನ ಸಂಪನ್ಮೂಲಗಳು, ಮಳೆ ಹಂಚಿಕೆ, ನೀರಾವರಿ ಮಾದರಿ, ಮಣ್ಣಿನ ಗುಣಲಕ್ಷಣಗಳು ಮತ್ತು ಬೆಳೆ (ಪೈರು) ಮಾದರಿಗಳ ಆಧಾರದ ಮೇಲೆ ರೂಪಿತವಾಗಿರುತ್ತದೆ. ಈ ದೃಷ್ಟಿಯಿಂದ ಕೃಷಿ ಮತ್ತು ಹೈನುಗಾರಿಕೆಯು ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿವೆ. ಕೃಷಿಕನ ಬದುಕಿನಲ್ಲಿ ಇವೆರಡು ತಾಯಿ ಮಕ್ಕಳ ಸಂಬಂಧವಿದ್ದಂತೆ; ಒಂದನ್ನಗಲಿ ಇನ್ನೊಂದಿರಲಾರವು. ಆದ್ದರಿಂದ ಹೈನುಗಾರಿಕೆಯು ವ್ಯವಸಾಯಕ್ಕೆ ಪೋಷಕವಾದಂತಹ ಉದ್ಯೋಗವೇ ಆಗಿದೆ. 'ಕೃಷಿ ಮತ್ತು ಪಶುಸಂಗೋಪನೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ' **(ಪ್ರೊ.ಎಸ್.ಎಸ್. ಕಟಗಿಹಳ್ಳಿಮಠ, ಸಾವಯವ ಕೃಷಿ: ದಿಕ್ಸೂಚಿ ಲೇಖನಗಳು, 2006, ಪು.ಸಂ.14)**. ಇದು ಕೃಷಿಯ ಅವಿಭಾಜ್ಯ ಅಂಗವಾಗಿದ್ದು, ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇಂದು ಕೃಷಿ ಮತ್ತು ಹೈನುಗಾರಿಕೆಯಲ್ಲಿ ಅಳವಡಿಸಿಕೊಂಡಿರುವ ಆಧುನಿಕ ತಂತ್ರಜ್ಞಾನಗಳಿಂದ ಉತ್ಪಾದನೆಯಲ್ಲಿ ಹಾಗೂ ಕೃಷಿ ಮತ್ತು ಪೋಷಕ ಚಟುವಟಿಕೆಗಳಲ್ಲಿ ಮಹತ್ತರ ಬದಲಾವಣೆಗಳು ಕಂಡು ಬರುತ್ತಿವೆ.

ಪ್ರಾಚೀನ ಕಾಲದಿಂದಲೂ ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮಹಿಳೆಯ ಪಾತ್ರ ವಿಭಿನ್ನ ದೃಷ್ಟಿಕೋನಗಳಲ್ಲಿ ಪ್ರಭಾವಯುತವಾಗಿದೆ. ಕೃಷಿ ಮತು ಹೈನುಗಾರಿಕೆಯಲ್ಲಿ ಪುರುಷ ಮತ್ತು ಮಹಿಳೆ ಇಬ್ಬರು ಸಮಾನರು. ಅವರು ಗ್ರಾಮೀಣ ಬದುಕಿನ ಬಂಡಿಯ ಎರಡು ಗಾಲಿಗಳು. ಒಬ್ಬರಿಗೊಬ್ಬರು ಪ್ರೇರಕ ಮತ್ತು ಪೂರಕ. ಆದರೂ ಕೃಷಿಗೆ ಪಶುಸಂಗೋಪನೆಯು ಪೋಷಕ ಕಸುಬಾದಂತೆ ಮಹಿಳೆಯೂ ಪೋಷಕ ವ್ಯಕ್ತಿತ್ವವೇ ಆಗಿದ್ದಾಳೆ. ಭಾರತದಲ್ಲಿ ಸ್ತ್ರೀ ಮಾನ್ಯತೆಯು ಕೃಷಿಯ ಆರಂಭದೊಡನೆ ಸಂಬಂಧ ಹೊಂದಿದೆ. 'ವಿವಿಧ ಮೂಲಗಳ ಪ್ರಕಾರ ಸ್ತ್ರೀಯೇ ಕೃಷಿಯನ್ನು ಆವಿಷ್ಕರಿಸಿದ್ದು; ಕೃಷಿಯ ಆವಿಷ್ಕಾರದ ಪರಿಣಾಮವಾಗಿ ಮಾನವ ಸಮುದಾಯದಲ್ಲಿ ಅನೇಕ ಪರಿವರ್ತನೆಗಳಾದವು.'**(ಸಂ, ಸುನಂದ ಎಂ. ನಿಷೇಧಗಳು ಮತ್ತು ಲಿಂಗ ವ್ಯವಸ್ಥೆ.2011. ಪುಟ.65)**

ಕೃಷಿ ಕಾರ್ಯಕ್ಕೆ ಪ್ರಾರಂಭದಲ್ಲಿ ಸ್ತ್ರೀಯೇ ಪ್ರಧಾನವಾಗಿದ್ದಳು. 'ಮೊದಲ ಕೃಷಿ ಕೈಗುದ್ದಲಿಯಲ್ಲಿ ನಡೆಯಿತು. ಅದು ತೋಟ ಕೃಷಿ. ಈ ವ್ಯವಸಾಯವನ್ನು ಕಂಡುಹಿಡಿದ ಕೀರ್ತಿ ಹೆಣ್ಣಿಗೇ ಸಲ್ಲಬೇಕು. ಕೃಷಿಯ ತಂತ್ರಗಳು ಗಂಡಿಗಿಂತ ಹೆಣ್ಣಿಗೆ ಚೆನ್ನಾಗಿ ಗೊತ್ತಿತ್ತು' **(ಡಾ|| ಕೆ.ಆರ್. ಸಂಧ್ಯಾರೆಡ್ಡಿ, ಮಹಿಳಾ ಜನಪದ, 2003 ಪು.ಸಂ.31)**. ಕೃಷಿ ಕೆಲಸವನ್ನು ಸಾಕುಪ್ರಾಣಿಗಳ ಸಹಾಯದಿಂದ ಮಾಡಲಾಗುತ್ತಿತ್ತು. ಕಾಲಾಂತರದಲ್ಲಿ ನೇಗಿಲಿನ ಬಳಕೆಯ ಅನಂತರದಲ್ಲಿ ಕೃಷಿಯಲ್ಲಿ ಪುರುಷನೇ ಮೇಲುಗೈ ಸಾಧಿಸಿದನು. ಆದರೆ ಬಿತ್ತುವ, ಕಳೆ ಕೀಳುವ, ನೀರು ಹಾಯಿಸುವ, ಬೀಜ ಸಂರಕ್ಷಿಸುವ ಮುಂತಾದ ಕೆಲಸಗಳು ಮಾತ್ರ ಸ್ತ್ರೀಯದ್ದಾಯಿತು.

ವ್ಯವಸಾಯದಲ್ಲಿ ನಿರತರಾಗಿರುವ ಒಟ್ಟು ಜನರಲ್ಲಿ 51.2% ಪ್ರತಿಶತ ಮಹಿಳೆಯರಿದ್ದಾರೆ. ಪುರುಷರ ಸಂಖ್ಯೆ 48.8 ಪ್ರತಿಶತ ಮಾತ್ರ, ಅಂದರೆ ಪುರುಷರಿಗಿಂತ ಆರು ಲಕ್ಷದಷ್ಟು ಅಧಿಕ ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿರುವುದಾಗಿ

ಒಂದು ಅಧ್ಯಯನ ತಿಳಿಸುತ್ತದೆ.' **(ಡಾ. ವಿಜಯಕುಮಾರಿ ಎಸ್. ಕರಿಕಲ್, ಮಹಿಳೆ ಮತ್ತು ಸಮಾಜ. ಪುಟ-27. 2007)** ಈ ಅಧ್ಯಯನದಿಂದಲೇ ನಮಗೆ ತಿಳಿಯುತ್ತದೆ ಕೃಷಿಯಲ್ಲಿ ಮಹಿಳೆಯದ್ದೇ ಸಿಂಹಪಾಲು. ವ್ಯವಸಾಯ ಮೂಲ ವೃತ್ತಿಯಲ್ಲಿ ಹೆಣ್ಣು ಉತ್ಪತ್ತಿಯ ಮೂಲ ಸಾಧನ. ಭೂಮಿಯನ್ನು ಉತ್ಪತ್ತಿ ಸಾಧನವನ್ನಾಗಿ ಬಳಸಿಕೊಂಡು ಉತ್ಪತ್ತಿ ಮಾಡುವ ಮೂಲ ಆರ್ಥಿಕ ಶ್ರಮದ ಘಟಕಗಳಾದ ಸಂತಾನಗಳನ್ನು ಉತ್ಪತ್ತಿ ಮಾಡುವವಳು. ಆದ್ದರಿಂದ ಆಕೆ ಬೇಸಾಯ ಸಮಾಜದ "ಉತ್ಪತ್ತಿ ಪಾವಿತ್ರ್ಯ" ಪರಿಕಲ್ಪನೆಗೆ ಒಳಗಾದವಳು. **(ಡಾ॥ ಕೆ.ಆರ್. ಸಂಧ್ಯಾರೆಡ್ಡಿ, ಮಹಿಳಾ ಜನಪದ, 2003,ಪು.ಸಂ. 48)**. ಗ್ರಾಮೀಣ ಭಾರತದಲ್ಲಿ ಮಹಿಳಾ ಕೂಲಿ ಕಾರ್ಮಿಕರಿಗೆ ಕೃಷಿ ಕಾರ್ಯಗಳೇ ಉದ್ಯೋಗವನ್ನು ಒದಗಿಸುವ ಪ್ರಮುಖ ಮೂಲವಾಗಿದ್ದು, ಒಟ್ಟು ಮಹಿಳಾ ಕಾರ್ಮಿಕರಲ್ಲಿ ಶೇ 89.5 ರಷ್ಟು ಮಹಿಳೆಯರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. **(ಅಂತರ್ಜಾಲ ಕೃಪೆ)**.

ಬಹುತೇಕ ಗ್ರಾಮೀಣ ಅಲ್ಪಾದಾಯದ ಕುಟುಂಬಗಳಲ್ಲಿ ವಿಕಾಸಶೀಲ ದೇಶಗಳಲ್ಲಿ ಪುರುಷರ ಪ್ರಾಥಮಿಕ ಪಾತ್ರವೇ ಆದಾಯವನ್ನು ಗಳಿಸುವುದಾಗಿದ್ದು, ಇದಕ್ಕೆ ತದ್ವಿರುದ್ಧವಾಗಿ ಮಹಿಳೆಯರಿಗೆ ಮೂರು ಪಾತ್ರಗಳಿವೆ:

(1) ಪ್ರಜನನ ಕಾರ್ಯದ ಜವಾಬ್ದಾರಿಯನ್ನು ನಿರ್ವಹಿಸುವುದು (ಮಕ್ಕಳನ್ನು ಹೆರುವುದು, ಮಕ್ಕಳನ್ನು ಪೋಷಿಸುವುದು & ಕುಟುಂಬ ಕಲ್ಯಾಣ ಚಟುವಟಿಕೆಗಳನ್ನು ಕೈಗೊಳ್ಳುವುದು)
(2) ಉತ್ಪಾದಕ ದುಡಿಮೆ ಕೈಗೊಳ್ಳುವುದು (ಬೆಳೆ ಯೋಜನೆ ಮತ್ತು ಸಂಸ್ಕರಣೆ, ಹೈನುಗಾರಿಕೆ ಇತ್ಯಾದಿ)
(3) ಸೌಲಭ್ಯಗಳನ್ನು ಸಮುದಾಯದ ನಿರ್ವಹಣೆಗೆ ಒಪ್ಪಿಸುವುದು.
**(ಎನ್ ಅನ್ನಪೂರ್ಣೇಶ್ವರಿ, ಒಡೆಯರ್ ಡಿ. ಹೆಗ್ಗಡೆ, ಜಾಗತೀಕರಣ ಮತ್ತು ಮಹಿಳೆ,2008,ಪು.ಸಂ. 127)**

ಈ ಎಲ್ಲಾ ಕಾರ್ಯಗಳನ್ನು ಮಹಿಳೆಯು ಕುಟುಂಬದಲ್ಲಿ ಸರಿತೂಗಿಸಿಕೊಂಡು ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವಳು. ಒಂದು ಅಧ್ಯಯನದ ಪ್ರಕಾರ ಭಾರತದ ಹಿಮಾಲಯ ಪ್ರದೇಶಗಳಲ್ಲಿ ಒಂದು ಹೆಕ್ಟೇರ್ ಕೃಷಿ ಜಮೀನಿನಲ್ಲಿ ಒಂದು ವರ್ಷಕ್ಕೆ ಒಂದು ಜೊತೆ ಎತ್ತುಗಳು 1064 ಗಂಟೆಗಳ ಅವಧಿ ಕೆಲಸ ಮಾಡಿದರೆ , ಒಬ್ಬ ಪುರುಷ 1212 ಗಂಟೆಗಳ ಅವಧಿ ಕೆಲಸ ನಿರ್ವಹಿಸುವನು. ಆದರೆ ಒಬ್ಬ ಮಹಿಳೆ 3485 ಗಂಟೆಗಳ ಅವಧಿಯವರೆಗೆ ಕೃಷಿ ಕೆಲಸಗಳನ್ನು ನಿರ್ವಹಿಸುವಳು ಎಂದು ಈ ಅಧ್ಯಯನವು ತಿಳಿಸುವುದು (ಅಂತರ್ಜಾಲ ಕೃಪೆ). ಈ ಅಧ್ಯಯನವು ಕೃಷಿ ಉತ್ಪಾದನೆಯಲ್ಲಿ ಮಹಿಳೆಯರ ಕೊಡುಗೆಯು ಎಷ್ಟು ಪ್ರಾಮುಖ್ಯತೆ ಪಡೆದಿದೆ ಎಂಬುದಕ್ಕೆ ಒಂದು ಉದಾಹರಣೆಯಾಗಿದೆ.

ಜಾನಪದದಲ್ಲಿ ಸ್ತ್ರೀಯರ ಭಾಗವಹಿಸುವಿಕೆಯೇ ಪ್ರಧಾನವಾದ ಅನೇಕ ಆಚರಣೆಗಳಿವೆ. ಉತ್ತರ ಕರ್ನಾಟಕದ ಮಣ್ಣೆತ್ತಿನ ಅಮಾವಾಸ್ಯೆ, ಗುಳ್ಳವ್ವನ ಪೂಜೆ, ಶೀಗಿ ಹುಣ್ಣಿಮೆ, ಚಂಗಳವ್ವನ ಆಚರಣೆ, ಜೋಕುಮಾರ ಪೂಜೆ, ನಾಗರಪಂಚಮಿ, ದಕ್ಷಿಣ ಕರ್ನಾಟಕದ ಕೊಂತಿ ಪೂಜೆ, ಬೆಳದಿಂಗಳಪ್ಪನ ಪೂಜೆ, ಮಲೆನಾಡಿನ ಭೂಮಿ ಹುಣ್ಣಿಮೆ ಮೊದಲಾದುವನ್ನು ಹೆಂಗಸರ ಆಚರಣೆಗಳೆಂದೇ ಗುರುತಿಸಲಾಗುತ್ತದೆ. ಈ ಆಚರಣೆಗಳ ಸ್ವರೂಪ, ಆಚರಣಾ ವಿಧಿಗಳು, ಆಚರಣೆಯ ಕಾಲ ಮೊದಲಾದುವನ್ನೆಲ್ಲಾ ಗಮನಿಸಿದಾಗ ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಮಣ್ಣು, ಭೂಮಿ, ಹಾಗೂ ನೀರಿಗೆ ಸಂಬಂಧಿಸಿದ ಆಚರಣೆಗಳಾಗಿರುವುದು ಕಂಡುಬರುತ್ತದೆ. ಕೃಷಿ ಬದುಕಿನ ಮೂಲ ಉತ್ಪಾದಕ ವಸ್ತುಗಳಾದ ಮಣ್ಣು ಮತ್ತು ನೀರನ್ನು ಹೆಂಗಸರು ಸದಾ ಪೂಜ್ಯನೀಯವಾಗಿ ಕಂಡಿದ್ದಾರೆ. ಇದರಿಂದ ಮೂಲದಲ್ಲಿ ಕೃಷಿಯು ಹೆಣ್ಣಿನ ಕಾರ್ಯಕ್ಷೇತ್ರವಾಗಿತ್ತು. ಕೃಷಿಯ ಎಲ್ಲಾ ತಂತ್ರಗಳನ್ನೂ ಅವಳೇ ರೂಪಿಸಿದವಳು ಎಂಬುದನ್ನು ಈ ಆಚರಣೆಗಳು ಸಮರ್ಥಿಸುತ್ತವೆ **(ಡಾ॥ ಕೆ.ಆರ್. ಸಂಧ್ಯಾರೆಡ್ಡಿ, ಮಹಿಳಾ ಜಾನಪದ, 2003, ಪು.ಸಂ.19)**.

ಮಹಿಳೆಯರು ಕೃಷಿ ಮತ್ತು ಕೃಷಿ ಪೋಷಕ ಕಾರ್ಯಗಳಲ್ಲಿಯೂ ತೊಡಗಿದ್ದಾರೆ. ಸಾಂಪ್ರದಾಯಿಕ ಕೃಷಿ ವ್ಯವಸ್ಥೆಗಳಲ್ಲಿ ಪ್ರಾಣಿ ಮತ್ತು ಬೆಳೆ ತ್ಯಾಜ್ಯಗಳನ್ನು ಮಹಿಳೆಯರೇ ಸಂಗ್ರಹಿಸುವರು; ಅವರು ಹಳ್ಳಿಗಳಲ್ಲಿ ಗೊಬ್ಬರವನ್ನು ಸಿದ್ಧಪಡಿಸುತ್ತಾರೆ. ತಮ್ಮ ಹೊಲ-ಗದ್ದೆಗಳಿಗೆ ರಸಗೊಬ್ಬರ ಮತ್ತು ಹಟ್ಟಿ ಗೊಬ್ಬರವನ್ನು ಪೂರೈಸುವರು. ಈ ರೀತಿ ಮಹಿಳೆಯರು ತಮ್ಮ ಕೌಟುಂಬಿಕ ಮತ್ತು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವಾಗ ಪ್ರತಿ ದಿನವೂ ನಿಸರ್ಗದೊಂದಿಗೆ ಪ್ರತಿಕ್ರಿಯಿಸುತ್ತಿರುತ್ತಾರೆ. ಇದರಿಂದ ಪರಿಸರಕ್ಕೆ ಏರ್ಪಟ್ಟ ಗಾಯಗಳನ್ನು ಮಹಿಳೆಯರು ಸರಿಪಡಿಸುವರು. ಹೀಗೆ ಕೃಷಿಯ ವಿವಿಧ ಕಾರ್ಯಾಚರಣೆಗಳಲ್ಲಿ ಮಹಿಳೆಯರು ದಕ್ಷವಾಗಿ ಪಾಲುಗೊಂಡರೆ ಅದರಿಂದ ಪರಿಸರದ ಮೇಲೆ ಉತ್ತಮ ಪರಿಣಾಮ ಬೀರುವುದು ಸಾಧ್ಯ.

ಮಹಿಳೆಯು ತನ್ನ ಕುಟುಂಬದ ಪುರುಷ ಸದಸ್ಯರ ಜೊತೆಯಲ್ಲಿ ಕೃಷಿ ಮತ್ತು ಪಶುಪಾಲನಾ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಳು. ಮಹಿಳಾ ಕೂಲಿ ಕಾರ್ಮಿಕರೂ ಕೂಡ ಕೃಷಿ ಪ್ರಧಾನ ಕಾರ್ಯಗಳಲ್ಲಿ ಸಿಂಹಪಾಲನ್ನು

ಪಡೆಯುವರು. ಬೇಸಾಯ ಪದ್ಧತಿಯಲ್ಲಿ ಪ್ರಥಮ ಚಟುವಟಿಕೆಯಾದ ಭೂಮಿಯನ್ನು ಹಸನುಗೊಳಿಸುವ ಕಾರ್ಯದಲ್ಲಿ ಆಕೆಯ ಪಾತ್ರ ಪ್ರಮುಖವಾದುದು. ಪುರುಷನು ನೇಗಿಲು ಹೊಡೆದು ಭೂಮಿಯನ್ನು ಬಿತ್ತನೆಗೆ ತಯಾರಿ ಮಾಡಿದರೆ, ಮಹಿಳೆಯು ಜಮೀನಿನ ಮೇಲೆ ಬಿದ್ದ ಅನುಪಯುಕ್ತ ಕಳೆ, ಕಸಕಡ್ಡಿಗಳನ್ನು ತೆಗೆದು ಭೂಮಿಯನ್ನು ಬಿತ್ತನೆಗೆ ಹಸನುಗೊಳಿಸುವಳು. ಉಳುಮೆಯ ಕಾರ್ಯದಲ್ಲಿ ಪುರುಷನ ಪಾತ್ರವೇ ಪ್ರಮುಖವಾದರೂ, ಸ್ತ್ರೀಯು ಪುರುಷನಿಗೆ ಉಳುಮೆಯ ಕೆಲಸದಲ್ಲಿ ಸರಿಸಮಾನವಾಗಿ ಸಹಕರಿಸುವಳು. ಕೆಲವು ಕಡೆ ಮಹಿಳೆಯರೇ ನೇಗಿಲು ಹಿಡಿದು ಉಳುಮೆಯನ್ನೂ ಮಾಡುವರು. ಅಷ್ಟೇ ಅಲ್ಲದೆ ಈಗಿನ ಮಹಿಳೆಯರು ಟ್ರ್ಯಾಕ್ಟರ್‌ನ್ನು ಸ್ವತ: ತಾವೇ ಚಾಲನೆ ಮಾಡಿ ಉಳುಮೆ ಮಾಡುವವರೂ ಇದ್ದಾರೆ. ಬೀಜ ಮೊಳೆತು ಬೆಳೆಯಾಗಲು ಭೂಮಿಯೇ ಆಧಾರ. ಹಸನಾದ, ಫಲವತ್ತಾದ ಮಣ್ಣು ಸಸ್ಯಗಳ ಬೆಳವಣಿಗೆಗೆ ಅತ್ಯಾವಶ್ಯಕ. ಭೂಮಿಯ ಮಣ್ಣನ್ನು ಸರಿಯಾದ ರೀತಿಯಲ್ಲಿ ಸಂರಕ್ಷಿಸಿ ಫಲವತ್ತತೆಯನ್ನು ಕಾಯ್ದುಕೊಂಡು, ಬೆಳೆ ಉತ್ಪಾದನೆಯಲ್ಲಿ ತೊಡಗಿಸುವುದು ಕೃಷಿಗೆ ಮೊದಲ ಮೆಟ್ಟಿಲು. ಈ ಕೆಲಸದಲ್ಲಿ ಮಹಿಳೆಯ ಪಾತ್ರ ದೊಡ್ಡದು. ಮಣ್ಣಿನಲ್ಲಿ ಎರೆಹುಳು, ಗೊಬ್ಬರದ ಹುಳು ಮತ್ತು ಇತರ ಸೂಕ್ಷ್ಮ ಜೀವಿಗಳು ಬೆಳೆದು ವೃದ್ಧಿಯಾಗಲು ಸಹಕಾರಿಯಾಗುವಂತೆ ಮಹಿಳೆಯು ಭೂಮಿಗೆ ಕಸಕಡ್ಡಿ ಆರಿಸಿ ತಂದುಹಾಕುವುದು, ತರಗಲೆ, ಸೊಪ್ಪು ಸದೆ ಮುಂತಾದ ಸಾವಯವ ಪದಾರ್ಥಗಳ ಹೊದಿಕೆ ಮಾಡಲು ಸಹಕರಿಸುವಳು.

ಕೃಷಿ ಕಾರ್ಯದಲ್ಲಿ ಬಿತ್ತನೆಗೆ ಅವಶ್ಯಕವಾದ ಬೀಜಗಳ ಆಯ್ಕೆ ಪ್ರಮುಖವಾದುದು. **"ರೈತ ದೇಶದ ಬೆನ್ನೆಲುಬಾದರೆ, ಗುಣಮಟ್ಟದ ಬೀಜ ರೈತನ ಬೆನ್ನೆಲುಬು"**. ಉತ್ತಮ ಬಿತ್ತನೆ ಬೀಜಗಳನ್ನು ಬಳಸುವುದರಿಂದ ಶೇ.20 ರಷ್ಟು ಹೆಚ್ಚು ಇಳುವರಿ ಪಡೆಯಲು ಸಾಧ್ಯ. **'ಬೀಜದಂತೆ ಬೆಳೆ, ಬೆಳೆಯಂತೆ ಬೀಜ' ಎಂಬ ಮಾತಿದೆ (ಪ್ರಜಾವಾಣಿ, 2008).** ಅವಶ್ಯಕತೆಗೆ ತಕ್ಕಂತಹ ತಳಿ, ಬಿತ್ತನೆ ಬೀಜಗಳನ್ನು ಆಯ್ದುಕೊಂಡು ಬೇಸಾಯ ಮಾಡುವುದು ರೈತನ ಹೊಣೆ. ಮಹಿಳೆಯು ತನ್ನ ಪರಿಸರದಲ್ಲಿರುವ ಉತ್ತಮ ಜಾತಿ ಹಾಗೂ ಉತ್ತಮ ತಳಿಯ ಸಸ್ಯಗಳನ್ನು ಗುರುತಿಸಿ ಅವುಗಳನ್ನು ಅಭಿವೃದ್ಧಿಗೊಳಿಸಿ ಮುಂದಿನ ಬಿತ್ತನೆಗೆ ಶೇಖರಿಸಿಟ್ಟುಕೊಳ್ಳುವ ಕೆಲಸವನ್ನು ಅತ್ಯಂತ ಜತನದಿಂದ ಮಾಡುವಳು. ತಲೆಮಾರುಗಳಿಂದ ಕೃಷಿಯಲ್ಲಿ ನಿರತನಾಗಿರುವ ರೈತ ಸಮುದಾಯಕ್ಕೆ ತಮ್ಮ ಮಧ್ಯೆ ಇರುವ, ಸ್ಥಳೀಯ ಹವಾಗುಣಕ್ಕೆ ಹೊಂದಿಕೊಂಡು ಬೆಳೆಯುವ ಉತ್ತಮ ಬೀಜ, ತಳಿಗಳ ಅರಿವು ಇದೆ. ಇದರಲ್ಲಿ ಸಿದ್ಧಹಸ್ತರಾಗಿರುವ ಮಹಿಳೆಯರು ಮುಂದಿನ ಬಿತ್ತನೆಗೆ ಅವಶ್ಯಕವಾದ ಬೀಜಗಳನ್ನು ಶೇಖರಿಸಿಟ್ಟು ಬಿತ್ತನೆ ಬೀಜಕ್ಕಾಗಿ ಬೀಜ ಕಂಪನಿಗಳನ್ನು ಅವಲಂಬಿಸುವುದನ್ನು ತಪ್ಪಿಸುವಳು. ಅಲ್ಲದೆ ಕೆಲವು ಮಹಿಳೆಯರು ಬೀಜೋತ್ಪಾದನೆ ಮಾಡಿ ಬೀಜಗಳ ಮಾರಾಟವನ್ನೇ ಒಂದು ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಇಷ್ಟೇ ಅಲ್ಲದೆ ನಾಟಿ ಮಾಡುವ, ಕಳೆ ತೆಗೆಯುವ, ಬೀಜ ಬಿತ್ತನೆ ಮಾಡುವ, ಬೆಳೆ ಕೊಯ್ಲು ಮುಂತಾದ ಕೆಲಸಗಳನ್ನು ಮಹಿಳಾ ಕೂಲಿ ಕಾರ್ಮಿಕರೇ ದಕ್ಷವಾಗಿ ನಿರ್ವಹಿಸುವರು. ಸುಗ್ಗಿಯ ಕಾಲದಲ್ಲಿ ಪುರುಷರಷ್ಟೇ ಸಮಾನವಾಗಿ ಮಹಿಳೆಯರೂ ಸುಗ್ಗಿಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಮಾಡುವರು. ಒಟ್ಟಿನಲ್ಲಿ ಕೃಷಿ ಕೆಲಸಗಳಿಗೆ ಮಹಿಳೆಯರ ಶ್ರಮದ ಕೊಡುಗೆ ಅತ್ಯಧಿಕವಾಗಿದೆ.

ಸಾಂಪ್ರದಾಯಿಕ ಕೃಷಿಯಲ್ಲಿ ಮಹಿಳೆಯು ಕೃಷಿಯ ಒಂದು ಅವಿಭಾಜ್ಯ ಅಂಗವೇ ಆಗಿದ್ದಳು. ಕೃಷಿಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಂಡಂತೆ, ಬದಲಾದ ಸನ್ನಿವೇಶದಲ್ಲಿ ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮಹಿಳೆಯ ಪಾತ್ರವೂ ಬದಲಾಗುತ್ತಾ ಬಂದಿದೆ. ಇಂದು ಮಹಿಳೆಯು ಶಿಕ್ಷಿತಳಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧನೆಗೈದಂತೆ ಕೃಷಿ ಮತ್ತು ಹೈನುಗಾರಿಕೆ ಕ್ಷೇತ್ರದಲ್ಲಿಯೂ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಪ್ರಸ್ತುತ ಹಳ್ಳಿಯಲ್ಲಿರುವ ಕೃಷಿ ಭೂಮಿ ಮಾರಿ ನಗರಕ್ಕೆ ವಲಸೆ ಹೋಗುವ ಪ್ರವೃತ್ತಿ ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ, ಕೆಲವು ಮಹಿಳೆಯರು ನಗರದಿಂದ ಹಳ್ಳಿಗೆ ವಾಪಸ್ಸಾಗಿ ಕೃಷಿ ಕಾರ್ಯದಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿರುವ ಅನೇಕ ಉದಾಹರಣೆಗಳು ನಮಗೆ ಸಿಗುತ್ತವೆ.

ಇಂದು ಕೃಷಿಯಲ್ಲಿ ತೋಟಗಾರಿಕೆಯು ವಿವಿಧ ವೃತ್ತಿಯ ಜನರ ಪ್ರತಿಷ್ಠೆಯ ಹವ್ಯಾಸವಾಗುತ್ತಿದೆ. ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿರುವ ವೃತ್ತಿಪರ ಮಹಿಳೆಯರು ತಮ್ಮ ವೃತ್ತಿಯ ಜೊತೆಯಲ್ಲಿ ತೋಟಗಾರಿಕೆಯನ್ನು ಒಂದು ಹವ್ಯಾಸವನ್ನಾಗಿ ಬೆಳೆಸಿಕೊಂಡು ಅದರಲ್ಲಿ ನೆಮ್ಮದಿ ಕಂಡುಕೊಂಡಿದ್ದಾರೆ. ಈ ಹವ್ಯಾಸ ಕೇವಲ ಮನೆಯ ಕೈತೋಟಕ್ಕಷ್ಟೇ ಸೀಮಿತವಾಗದೆ ಜಮೀನಿನಲ್ಲಿ ಅಳವಡಿಸಿಕೊಳ್ಳುವಷ್ಟು ಆಸಕ್ತಿಯನ್ನು ಮಹಿಳೆಯರು ಬೆಳೆಸಿಕೊಂಡಿದ್ದಾರೆ. ಪ್ರಸ್ತುತ ಪಾಲಿ ಹೌಸ್ (ಸಂರಕ್ಷಿತ ಹೂವು ಬೇಸಾಯ) ಕೃಷಿ ಪದ್ಧತಿ ಜನಪ್ರಿಯವಾಗುತ್ತಿದ್ದು, ಮಹಿಳೆಯರು ಈ ಕೃಷಿಪದ್ಧತಿಯನ್ನು ಕೈಗೊಂಡು ಸ್ವಾವಲಂಬನೆಯ ಹಾದಿ ಕಂಡುಕೊಂಡಿದ್ದಾರೆ. ಉಳಿದ ಕ್ಷೇತ್ರಗಳಿಗಿಂತ ಕೃಷಿ ಕ್ಷೇತ್ರವು ಅತ್ಯಂತ ಜಟಿಲ ಹಾಗೂ ಜ್ವಲಂತ ಸಮಸ್ಯೆಗಳನ್ನು ನಿರಂತರವಾಗಿ ಎದುರಿಸುತ್ತಿದೆ. ಈ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಸಂಸೋಧನೆಗಳ ಮೂಲಕ ಕೃಷಿ ವಿಜ್ಞಾನಿಗಳು ಒದಗಿಸುತ್ತಿದ್ದು, ಈ ರೀತಿಯ ಸಂಶೋಧನೆಯಲ್ಲಿ ಮಹಿಳಾ ಕೃಷಿ ವಿಜ್ಞಾನಿಗಳೂ ತೊಡಗಿದ್ದಾರೆ. **(ಅನ್ನದಾತನ ಅಂಗಳದಿಂದ ಕೃಷಿ ತಾಂತ್ರಿಕತೆಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಸೆಪ್ಟಂಬರ್, 2011)** ಈ ಮೂಲಕ ಕೃಷಿ ಉತ್ಪಾದನೆಯಲ್ಲಿನ ಹೆಚ್ಚಳಕ್ಕೆ ಕಾರಣೀಭೂತರಾಗಿದ್ದಾರೆ.

ಸಾವಯವ ಕೃಷಿಯತ್ತಲೇ ಇಂದಿನ ಮಹಿಳೆಯರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಬೆಳೆಗಳನ್ನು ಹಾಳು ಮಾಡುವ ಹುಳುಗಳ ನಿಯಂತ್ರಣಕ್ಕಾಗಿ ಹಕ್ಕಿ ಪಕ್ಷಿಗಳನ್ನು ಆಕರ್ಷಿಸುವುದು, ಹಣ್ಣಿನ ಗಿಡಗಳಿಗೆ ಜೀವಾಮೃತ ಪ್ರಯೋಗ, ಇಂಗು ಗುಂಡಿಗಳ ನಿರ್ಮಾಣ, ಬದುಗಳ ನಿರ್ಮಾಣ, ಕೃಷಿ ಹೊಂಡಗಳ ನಿರ್ಮಾಣ, ಹನಿ ನೀರಾವರಿ ವ್ಯವಸ್ಥೆ, ಎರೆಗೊಬ್ಬರ ತಯಾರಿಕೆ, ಎರೆಹುಳು ಘಟಕ, ಬಯೋಗ್ಯಾಸ್ ನಿರ್ಮಾಣ, ಟ್ರ್ಯಾಕ್ಟರ್ ಮೂಲಕ ಭೂಮಿ ಉಳುಮೆ ಮಾಡುವುದು ಈ ಎಲ್ಲಾ ರೀತಿಯ ಕೃಷಿಕೆಲಸಗಳಲ್ಲಿ ಇಂದಿನ ಅನೇಕ ಮಹಿಳೆಯರು ಪರಿಣಿತಿಯನ್ನು ಪಡೆದಿದ್ದಾರೆ. ಮಹಿಳೆಯರು ತಮ್ಮ ಕ್ಷೇತ್ರಕ್ಕೆ ಹೊಂದಾಣಿಕೆಯಾಗುವ ಹಾಗೂ ಇರುವ ಕ್ಷೇತ್ರದಿಂದಲೇ ಅಧಿಕ ಲಾಭ ಹೊಂದುವ ತಾಂತ್ರಿಕತೆಗಳನ್ನು ಆಯ್ಕೆ ಮಾಡಿಕೊಂಡು ಅಳವಡಿಸಿಕೊಳ್ಳುವುದರಲ್ಲಿ ಹಾಗೂ ನವೀನ ತಾಂತ್ರಿಕತೆಗಳನ್ನು ಅನ್ವೇಷಿಸುವಲ್ಲಿಯೂ ಮಹಿಳಾ ರೈತರು ಪ್ರಬುದ್ಧರಾಗಿದ್ದಾರೆ. ಬೀಜೋತ್ಪಾದನೆ, ಕೀಟ ನಿಯಂತ್ರಣ, ಮಣ್ಣಿನ ಸಂರಕ್ಷಣೆ, ನೀರಾವರಿ ಮಾದರಿ, ಕೃಷಿ ಭೂಮಿ ಆರೈಕೆ, ಕೃಷಿ ತಂತ್ರಜ್ಞಾನ ಅಭಿವೃದ್ಧಿ ಮುಂತಾದ ಕಾರ್ಯಗಳನ್ನು ಕೈಗೊಂಡು, ಕೃಷಿಯ ಬಗ್ಗೆ ಮಾರ್ಗದರ್ಶನ ನೀಡುವ ಸಂಪನ್ಮೂಲ ವ್ಯಕ್ತಿಯಾಗಿ, ಕೃಷಿ ವಿಜ್ಞಾನಿಗಳಾಗಿ ಹಲವು ಮಹಿಳೆಯರು ಇತರರಿಗೆ ಮಾದರಿಯಾಗಿದ್ದಾರೆ.

ಕೃಷಿಯಲ್ಲಿ ಯಾಂತ್ರೀಕರಣ ಮತ್ತು ಹೊಸ ತಂತ್ರಜ್ಞಾನದಿಂದಾಗಿ ಪುರುಷ ಮತ್ತು ಮಹಿಳೆಯರ ಉದ್ಯೋಗದಲ್ಲಿ ಬದಲಾವಣೆಗಳು ಉಂಟಾಗಿವೆ. ಯಾಂತ್ರೀಕರಣದಿಂದುಂಟಾಗುವ ಬದಲಾವಣೆಗಳಿಗೆ ಮಹಿಳೆಯರು ಹೆಚ್ಚಾಗಿ ಒಳಪಡುತ್ತಾರೆ. ಕೃಷಿ ಕ್ಷೇತ್ರದಲ್ಲಿ ಪುರುಷರು ಮಹಿಳಾ ಕಾರ್ಮಿಕರನ್ನು ಉದ್ಯೋಗದಿಂದ ಬದಲಿಸಿದ್ದಾರೆ ಅಥವಾ ಹೊರದೂಡಿದ್ದಾರೆ. ಆಗ ಉಳಿದೆಲ್ಲಾ ಶ್ರಮ-ಪ್ರಧಾನ ಕೆಲಸಕಾರ್ಯಗಳೆನ್ನೆಲ್ಲಾ ಮಹಿಳೆಯರಿಗೇ ಬಿಟ್ಟುಕೊಡಲಾಗುತ್ತಿತ್ತು. ಆದರೆ ಇಂದು ಟ್ರ್ಯಾಕ್ಟರ್‌ಗಳು, ಕೊಯ್ಲು ಯಂತ್ರಗಳು, ಔಷಧಗಳು/ಕೀಟನಾಶಕಗಳು, ಕಳೆನಿವಾರಕಗಳು, ಹಾರ್ಮೋನ್ ವೇಗವರ್ಧಕಗಳು, ಅಧಿಕ ಇಳುವರಿ ಬಿತ್ತನೆ ಬೀಜಗಳು, ಯಾಂತ್ರಿಕ ಹತ್ತಿ ಕೊಯ್ಲುಕಾರಕಗಳು ಇತ್ಯಾದಿ ಎಲ್ಲವೂ ಸಾಂಪ್ರದಾಯಿಕವಾಗಿ ಮಹಿಳೆಯರು ಮಾಡುತ್ತಿದ್ದ ಕೆಲಸ ಕಾರ್ಯಗಳಿಂದ ಅವರನ್ನು ಹೊರದೂಡಿವೆ. ಆದರೆ ಈ ಯಂತ್ರಗಳು ಮಾಡುವ ಕೆಲಸಗಳನ್ನು ನಿರ್ವಹಿಸುತ್ತಿದ್ದ ಮಹಿಳಾ ಕಾರ್ಮಿಕರು ಇಂದು ನಿರುದ್ಯೋಗಿಗಳಾಗುತ್ತಿದ್ದಾರೆ. ಈ ಬಡ ಗ್ರಾಮೀಣ ಮಹಿಳೆಯರ ಜೀವನಾಧಾರವು ಕೃಷಿ ಯಾಂತ್ರೀಕರಣದಿಂದ ನಾಶಗೊಳ್ಳುತ್ತಿದೆ. ಕೃಷಿಯಲ್ಲಿನ ತಾಂತ್ರಿಕ ಬದಲಾವಣೆಯು ಸಾಂಪ್ರದಾಯಿಕವಾಗಿ ಮಹಿಳೆಯರು ಮಾಡುತ್ತಿದ್ದ ಕೆಲಸಗಳನ್ನು ಅವರಿಂದ ಕಸಿದುಕೊಂಡಿದೆ. ಆದರೆ ಅದೇ ವೇಳೆಯಲ್ಲಿ ಹೊಸ ತಂತ್ರಜ್ಞಾನವು ಪುರುಷರಿಗೆ ಸೃಷ್ಟಿಸಿದಷ್ಟು ಉದ್ಯೋಗಾವಕಾಶಗಳನ್ನು ಮಹಿಳೆಯರಿಗಾಗಿ ಸೃಷ್ಟಿಸುತ್ತಿಲ್ಲ. ಭತ್ತ ಬೆಳೆಯುವ ಪ್ರದೇಶಗಳಲ್ಲಿ ಕಳೆ ತೆಗೆಯುವುದು ಪ್ರಮುಖವಾಗಿ ಮಹಿಳೆಯರ ಕೆಲಸ ಆದರೆ ರಾಸಾಯನಿಕಗಳ ಸಿಂಪರಣೆಯು ಕಳೆನಾಶಕ್ಕೆ ಕಾರಣವಾಗುವಾಗ, ಅದು ಮಹಿಳೆಯರನ್ನು ಉದ್ಯೋಗದಿಂದ ಹೊರದೂಡುತ್ತದೆ. ಹೇಗೆಂದರೆ ಕೀಟನಾಶಕ, ಕಳೆನಾಶಕ ಸಿಂಪರಣೆ ಕಾರ್ಯವನ್ನು ಪುರುಷರೇ ಮಾಡುತ್ತಾರೆ. ಕೃಷಿ ಕ್ಷೇತ್ರದಲ್ಲಿ ಬಳಸುವ ಯಂತ್ರಚಾಲಿತ ಉಪಕರಣಗಳಲ್ಲಿ ಮುಖ್ಯವಾದವು ಟ್ರ್ಯಾಕ್ಟರ್, ಕ್ರಾಲರ್ ಟ್ರ್ಯಾಕ್ಟರ್, ಪಂಪ್ಸೆಟ್, ಪವರ್ ಡೆಸ್ಸರ್, ಪವರ್ ಸ್ಪ್ರೇಯರ್, ಡಿಸ್ಕ್ ಹ್ಯಾರೋ, ಸೀಡ್ ಡ್ರಿಲ್, ಹಸ್ಕರ್ ಮುಂತಾದವು **(ಡಿ.ವೆಂಕಟರಾವ್, ಕೃಷಿ ಬೆಳವಣಿಗೆ, 2009, ಪು.ಸಂ.56)** ಇಂತಹ ಬೃಹತ್ ಯಂತ್ರಗಳನ್ನು ನಿರ್ವಹಿಸಲು ಪುರುಷ ಕಾಮಿಕರೇ ಬೇಕಾಗಿದ್ದು ಮಹಿಳೆಯರನ್ನು ಕೃಷಿ ಕ್ಷೇತ್ರದಲ್ಲಿ ಉದ್ಯೋಗ ವಂಚಿತರನ್ನಾಗಿ ಮಾಡಿವೆ. ಅಲ್ಲದೆ ಕೃಷಿ ವಿಸ್ತರಣಾ ಸೇವೆಗಳು ಕೃಷಿ ಕಾರ್ಮಿಕರಾದ ಮಹಿಳೆಯರಿಗೆ ಹೆಚ್ಚು ಪ್ರಯೋಜನವಿಲ್ಲ. ವಿಸ್ತರಣಾ ಏಜೆಂಟರೂ ಹೆಚ್ಚಾಗಿ ಪುರುಷರೇ, ಹೀಗಾಗಿ ಅವರು ಪುರುಷರು ಬೆಳೆಯುವ ಬೆಳೆಗಳು ಮತ್ತು ಚಟುವಟಿಕೆಗಳ ಮೇಲೆ ಗಮನ ಕೇಂದ್ರೀಕರಿಸುವರು. ಇಂತಹ ಪರಿಸ್ಥಿತಿಗಳು ಮಹಿಳೆಯ ಆರ್ಥಿಕ ಪಾಲ್ಗೊಳ್ಳುವಿಕೆಗೆ ಬರೀ ಸಮಸ್ಯೆಗಳ ಸರಮಾಲೆಯನ್ನೇ ಸೃಷ್ಟಿಸುತ್ತದೆ. **(ಎನ್ ಅನ್ನಪೂರ್ಣೇಶ್ವರಿ, ಒಡೆಯರ್ ಡಿ. ಹೆಗ್ಗಡೆ, ಜಾಗತೀಕರಣ ಮತ್ತು ಮಹಿಳೆ,2008,ಪು.ಸಂ.4).**

ಕೃಷಿ ಕ್ಷೇತ್ರದಲ್ಲಿ ಮಹಿಳೆಯರಿಗೆ ಎಷ್ಟೇ ಸಮಸ್ಯೆಗಳಿದ್ದರೂ, ಆ ಸಮಸ್ಯೆಗಳ ನಡುವೆಯೂ ಸ್ವತಂತ್ರವಾಗಿ ಸಾಧನೆ ಮಾಡಿ, ರಾಜ್ಯ, ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು, ಕೀರ್ತಿ, ಪ್ರಶಸ್ತಿ ಪಡೆದ ದಿಟ್ಟ ಮಹಿಳೆಯರು ನಮ್ಮೊಂದಿಗಿದ್ದಾರೆ. ಆ ಮೂಲಕ ಸಂಪನ್ಮೂಲಗಳ ಸದ್ಬಳಕೆ ಹಾಗೂ ಅವುಗಳ ಸಮರ್ಥ ನಿರ್ವಹಣೆಯಿಂದ ಸುಸ್ಥಿರ ಕೃಷಿ ಸಾಧ್ಯ ಎಂದು ಬಿಂಬಿಸಿದ್ದಾರೆ. 'ತಮ್ಮಲ್ಲಿರುವ ಭೂಮಿ, ನೀರು, ಹಣಕಾಸು, ಮನುಷ್ಯ ಸಂಪನ್ಮೂಲಗಳನ್ನು ಸಮರ್ಥವಾಗಿ ನಿರ್ವಹಣೆ ಮಾಡಿಕೊಂಡು, ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಇತರರಿಗೂ ಮಾದರಿಯಾಗಿದ್ದಾರೆ'. **(ಸುರೇಖಾ ಸಂಕನಗೌಡರ ಮತ್ತು ಈರಮ್ಮ ಗೌಡರ, ಕೃಷಿ ಮುನ್ನಡೆ, ಕೃಷಿ ವಿ.ವಿ.ದಾರವಾಡ, 2012, ಪು.ಸಂ. 35)**

ಇತ್ತೀಚಿನ ವರ್ಷಗಳಲ್ಲಿ ಹೈನುಗಾರಿಕೆ ರೈತರ ಆರ್ಥಿಕ ಅಭಿವೃದ್ದಿಗೆ ಪೂರಕವಾಗಿದೆ. 'ಮೂಲತ: ಪಶುಸಂಗೋಪನೆ ಕೃಷಿಯ ಸಹವೃತ್ತಿ ಬೆನ್ನೆಲುಬು ಕೂಡ' **(ಡಾ॥ ಬಿ.ಪಿ.ಮಂಜುನಾಥ, ಪಶುಪಾಲನೆ,2010, ಪು.ಸಂ.7)**. ಗ್ರಾಮಾಂತರ ಆರ್ಥಿಕ ವ್ಯವಸ್ಥೆಯಲ್ಲಿ ಬಹು ಹಿಂದಿನಿಂದಲೂ ಇದು ಮುಖ್ಯ ಪಾತ್ರ ವಹಿಸಿದೆ. ಮಹಿಳೆಯು ಕೃಷಿಯ ಜೊತೆಯಲ್ಲಿ ಉಪ ಕಸುಬಾಗಿ ಹೈನುಗಾರಿಕೆಯನ್ನೂ ಕೈಗೊಂಡು ಅದರಲ್ಲಿ ಪ್ರಮುಖ ಪಾತ್ರ ವಹಿಸುವಳು. ಕುಟುಂಬದೊಳಗೆ ಹೈನುಗಾರಿಕೆ

ಚಟುವಟಿಕೆಗಳನ್ನು ನಡೆಸಲಾಗುವುದು. ಹೀಗಾಗಿ ಅದರಲ್ಲಿ ಮಹಿಳೆಯ ಪಾತ್ರವೇ ಪ್ರಧಾನವಾಗಿರುತ್ತದೆ. 'ಎಮ್ಮೆ, ಆಕಳಿನ ಹಾಲಿನಿಂದ ಮೊಸರು, ಬೆಣ್ಣೆ, ಮಜ್ಜಿಗೆಯಂತಹ ಆಹಾರ ಪದಾರ್ಥಗಳನ್ನು ತಯಾರಿಸುವುದು, ಮಾರುವುದು ಮುಂತಾದ ಜವಾಬ್ದಾರಿಯನ್ನು ಮಹಿಳೆ ವಹಿಸಿಕೊಂಡಳು. ಇದರಿಂದ ಉತ್ಪಾದನೆಯಲ್ಲಿ ಮಹಿಳೆಗೂ ಪಾಲು ದಕ್ಕುವಂತಾಗಿ ಕುಟುಂಬದಲ್ಲಿ ಅವಳ ಪ್ರತಿಷ್ಠೆಯನ್ನು ಹೆಚ್ಚಿಸಿತು' **(ಡಾ. ಮೃತ್ಯುಂಜಯ ಹೊರಕೇರಿ, ರೈತ ಜಾನಪದ, 1998, ಪು.ಸಂ.60)**. ರೈತ ಕುಟುಂಬಗಳ ಮಹಿಳೆಯರು ಹಸುಗಳನ್ನು ಸಾಕಿ ಹಾಲು ಉತ್ಪಾದಿಸಿ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. 'ಕೃಷಿಗೆ ಪೋಷಕವಾದ ಕಸುಬು ಎಂದರೆ ಪಶುಪಾಲನೆ. ವೇದಗಳ ಕಾಲದಿಂದಲೂ ಪಶುಗಳಲ್ಲಿ ಗೋವುಗಳನ್ನು ಅತ್ಯಂತ ಶ್ರದ್ಧೆಯಿಂದ ನೋಡಿಕೊಳ್ಳಲಾಗುತ್ತಿತ್ತು' **(ಬಿ.ವಿ. ವೀರಭದ್ರಪ್ಪ, ವೇದಗಳಲ್ಲಿ ಜನಸಾಮಾನ್ಯರು,2009, ಪು.ಸಂ.43)**. ಮಹಿಳೆಯರು ಈ ಗೋವುಗಳನ್ನು ಅತ್ಯಂತ ಪ್ರೀತಿ, ಕಾಳಜಿಯಿಂದ ನೋಡಿಕೊಳ್ಳುವರು. ಹಾಲು ಕರೆಯುವುದು, ದನ ಎಮ್ಮೆಗಳಿಗೆ ಮೇವು ಹಾಕುವುದು, ಸ್ನಾನ ಮಾಡಿಸುವುದು, ಹಾಲಿನ ಸಂಸ್ಕರಣೆ, ದನದ ಕೊಟ್ಟಿಗೆಗಳನ್ನು ಶುಚಿಗೊಳಿಸುವುದು ಮುಂತಾದ ಕೆಲಸ ಕಾರ್ಯಗಳಲ್ಲಿ ಮಹಿಳೆಯರೇ ಪ್ರಧಾನವಾಗಿ ತೊಡಗುವರು.

ಪ್ರಾಚೀನ ಕಾಲದಿಂದ ಇಂದಿನವರೆಗೂ ರಾಸುಗಳಿಗೆ ಯಾವುದಾದರೂ ರೋಗ ಬಂದರೆ ಪ್ರಾಥಮಿಕವಾಗಿ ಮನೆಮದ್ದನ್ನೇ (ಜನಪದ ವೈದ್ಯ ವಿಧಾನ) ನೀಡುವರು. ಈ ಮನೆಮದ್ದನ್ನು ಮಾಡುವ ಕುಟುಂಬದ ನಿಜವಾದ ವೈದ್ಯರು ಮಹಿಳೆಯರು. ಪಶುಗಳಿಗೆ ಸಾಮಾನ್ಯವಾಗಿ ಹಿರೇಬೇನೆ, ಗಂಟಲು ರೋಗ, ಚಪ್ಪೆ ರೋಗ, ನರಡೀ ರೋಗ, ಕಾಲು ಬಾಯಿ ಜ್ವರ ಮುಂತಾದ ತೊಂದರೆಗಳು ಕಂಡು ಬರುತ್ತವೆ. **(ಪ್ರೊ.ಎಸ್. ಗುರುಪ್ರಕಾಶ್, ಜನಪದ ಪಶುವೈದ್ಯ, ಪು.ಸಂ.17)** ಪಶು ವೈದ್ಯದಲ್ಲಿ ಅನುಭವವುಳ್ಳ ಹಿರಿಯ ಮಹಿಳೆಯರು ಈ ಕಾಯಿಲೆಗಳ ಚಿನ್ಹೆಗಳನ್ನು ಚೆನ್ನಾಗಿ ಅರಿತುಕೊಂಡಿದ್ದು, ಯಾವ ರೋಗಕ್ಕೆ ಯಾವ ಮದ್ದು ಸೂಕ್ತವೆಂದು ಪತ್ತೆಹಚ್ಚಿ ಅದಕ್ಕೆ ಬೇಕಾದ ಔಷಧಿ ಹಾಕಿ ಕಾಯಿಲೆ ಗುಣಪಡಿಸುವರು. ಹೈನುಗಾರಿಕೆಯಲ್ಲಿ ರಾಸುಗಳ ಗರ್ಭಾವಸ್ಥ ಸಮಯದಲ್ಲಿ ಮತ್ತು ಕರುವನ್ನು ಹಾಕಿದ ನಂತರದಲ್ಲಿ ಅವುಗಳ ಆರೈಕೆಯನ್ನು ಜಾಗರೂಕವಾಗಿ ಮಾಡಬೇಕಾಗಿದ್ದು, ಮಹಿಳೆಯರು ಈ ಕೆಲಸವನ್ನು ಅತ್ಯಂತ ಜಾಗೃತೆಯಿಂದ ಮಾಡುವರು. ಪ್ರಸ್ತುತ ಹೈನುಗಾರಿಕೆ ಒಂದು ವ್ಯವಸ್ಥಿತವಾದ ಲಾಭ ತರುವ ಉದ್ಯಮವಾಗಿ ಬೆಳೆಯುತ್ತಿದೆ. ಹಲವು ಮಹಿಳೆಯರಿಗೆ ಸ್ವಯಂ ಉದ್ಯೋಗವನ್ನು ಒದಗಿಸಿದೆ. ಮಹಿಳೆಯರು ಹೈನುಗಾರಿಕೆಯಲ್ಲಿ ವೈಜ್ಞಾನಿಕ ಕ್ರಮಗಳನ್ನು ಅಳವಡಿಸಿಕೊಳ್ಳುವ ಜಾಣ್ಮೆಯನ್ನೂ ಬೆಳೆಸಿಕೊಂಡಿದ್ದಾರೆ. ಅಂದರೆ ಕೊಠಡಿಯ ಸ್ವಚ್ಛತೆ, ಉತ್ತಮ ತಳಿಗಳ ಆಯ್ಕೆ, ಸಮತೋಲನ ತಿಂಡಿ, ಹಸಿರು ಮೇವಿನ ಬಳಕೆ, ಮಾರುಕಟ್ಟೆ ಹಾಗೂ ಸಮಯ ಪರಿಪಾಲನೆ ಮುಂತಾದ ವಿಷಯಗಳಲ್ಲಿ ಪರಿಣಿತಿ ಸಾಧಿಸಿದ್ದಾರೆ.

ಗ್ರಾಮದಲ್ಲಿ ಮಹಿಳೆಯರು ರಚಿಸಿಕೊಂಡಿರುವ ಮಹಿಳಾ ಸ್ವ ಸಹಾಯ ಸಂಘಗಳು ಮಹಿಳೆಯರ ಕೃಷಿ ಮತ್ತು ಹೈನುಗಾರಿಕೆಯ ಚಟುವಟಿಕೆಗಳಿಗೆ ಪೂರಕವಾಗಿ ಸಹಕರಿಸುತ್ತವೆ. 'ಮಹಿಳೆಯರಿಗೆ ಸ್ವತಂತ್ರವಾದ ವರಮಾನದ ಮೂಲವನ್ನು ಒದಗಿಸುವುದು ಮಹಿಳಾ ಸ್ವ ಸಹಾಯ ಗುಂಪುಗಳ ಮೂಲದಲ್ಲಿರುವ ಒಂದು ಉದ್ದೇಶವಾಗಿದೆ' **(ಡಾ. ಟಿ.ಆರ್. ಚಂದ್ರಶೇಖರ್, ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ, 2004, ಪು.ಸಂ.47)** ಮಹಿಳೆಯರು ಸರ್ಕಾರದ ಸಬ್ಸಿಡಿ ಯೋಜನೆಯಲ್ಲಿ ಸಾಲ ಪಡೆದು, ಹಸುಗಳನ್ನು ಖರೀದಿಸಿ ಹೈನುಗಾರಿಕೆ ಮಾಡುತ್ತಿದ್ದಾರೆ. ಅಲ್ಲದೆ ಮಹಿಳೆಯರು ತಮ್ಮದೇ ಆದ ಮಹಿಳಾ ಹಾಲು ಉತ್ಪಾದಕರ ಸಂಘಗಳನ್ನು ಮತ್ತು ಹಾಲು ಒಕ್ಕೂಟಗಳನ್ನು ರಚಿಸಿಕೊಂಡು ಅದರಲ್ಲಿ ಯಶಸ್ವಿಯಾಗಿ ಕಾರ್ಯ ಪ್ರವೃತ್ತರಾಗಿದ್ದಾರೆ. 'ಕರ್ನಾಟಕದಲ್ಲಿ ಸುಮಾರು 1200 ಮಹಿಳಾ ಹಾಲು ಉತ್ಪಾದಕರ ಸಂಘಗಳು ಇವೆ, 13 ಕ್ಕೂ ಹೆಚ್ಚು ಮಹಿಳಾ ಹಾಲು ಒಕ್ಕೂಟಗಳಿವೆ. ಇವುಗಳಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಮಹಿಳಾ ಸದಸ್ಯರಿದ್ದು ಹಾಲು ಉತ್ಪಾದಕರ ಸಂಘಗಳನ್ನು ಪುರುಷರಿಗಿಂತ ಹೆಚ್ಚು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ' **(ರವೀಂದ್ರ ಭಟ್ಟ, ಪ್ರಜಾವಾಣಿ, 2006, ಜನವರಿ 7)**. ಹಾಲು ಕರೆದು ಡೇರಿಗಳಿಗೆ ಮಾರಾಟ ಮಾಡುವುದರಿಂದ ಹಿಡಿದು ಹಸುಗಳ ಪಾಲನೆ, ಆರೋಗ್ಯ, ಗೊಬ್ಬರ ಉತ್ಪಾದನೆ, ಕೃಷಿ ಚಟುವಟಿಕೆ, ಹಾಲಿನ ಮಾರಾಟ, ಪಶು ಆಹಾರ ಮಾರಾಟ ಮುಂತಾದ ಕಾರ್ಯಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಪುರುಷರು ನಿರ್ವಹಿಸಲು ಸಾಧ್ಯವಾಗದೇ ಮುಚ್ಚಿದ ಸಂಘಗಳನ್ನೂ ತಮ್ಮ ಕೈಗೆ ತೆಗೆದುಕೊಂಡು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ತಮ್ಮ ತಮ್ಮ ಸಂಘಗಳಲ್ಲಿಯೇ ಧರ್ಮನಿಧಿ ಸ್ಥಾಪನೆ ಮಾಡಿಕೊಂಡು ಊರಿಗೆ ಉಪಕಾರಿಯಾದ ಉದಾಹರಣೆಗಳೂ ಇವೆ. ಕೆಎಂಎಫ್ ಮತ್ತು ಇತರ ಹಾಲು ಮಹಾಮಂಡಳಿಗಳಿಂದ ಹೈನುಗಾರಿಕೆಗಾಗಿ ಸಾಲವನ್ನು ಪಡೆದು ಸರಿಯಾಗಿ ತೀರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈಗ ಕೆಎಂಎಫ್ ಆಡಳಿತ ಮಂಡಳಿಯಲ್ಲಿಯೂ ಮಹಿಳೆಯರಿಗೆ ಸ್ಥಾನ ಲಭ್ಯವಾಗಿದೆ. ಮೈಸೂರು-ಚಾಮರಾಜನಗರ ಹಾಲು ಉತ್ಪಾದಕರ ಮಹಾಮಂಡಳಿ (ಮೈಮುಲ್) ನಲ್ಲಿ ಮಹಿಳಾ ನಿರ್ದೇಶಕರಿಗೆ ಮೀಸಲಾತಿ ಕೂಡ ನೀಡಲಾಗಿದೆ.

ಮನೆಯಲ್ಲಿ 4-5 ಹಸುಗಳನ್ನು ಸಾಕಿಕೊಂಡು ಜೀವನ ನಿರ್ವಹಣೆ ಮಾಡುತ್ತಿರುವ ಮಹಿಳೆಯರು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಲೂ ಸಹಕಾರಿಯಾಗಿದ್ದಾರೆ. ಹಾಲು ಉತ್ಪಾದಕರ ಸಂಘಗಳಲ್ಲಿ ಮಹಿಳೆಯರು ಹಲವಾರು ಸಾಧನೆಗಳನ್ನು ಮಾಡಿದ್ದಾರೆ. ಸಂಘಗಳ ನಿರ್ವಹಣೆಯನ್ನು ಜಾಣ್ಮೆಯಿಂದ ಮಾಡುವರು. ಇದಕ್ಕೆ ಅಗತ್ಯ ತರಬೇತಿಯನ್ನು

ಮಹಿಳೆಯರಿಗೆ ನೀಡಲಾಗುತ್ತದೆ. ಮಹಿಳಾ ಹಾಲು ಉತ್ಪಾದಕರ ಸಂಘಗಳಲ್ಲಿ ನಂದಿನಿ ಸ್ವ ಸಹಾಯ ಸಂಘಗಳನ್ನೂ ಸ್ಥಾಪನೆ ಮಾಡಿ, ಸಾಮಾಜಿಕ ಕಾರ್ಯಗಳನ್ನೂ ಕೈಗೊಳ್ಳಲಾಗುತ್ತಿದೆ. ಮುಖ್ಯವಾಗಿ ಉಳಿತಾಯ ಪ್ರಜ್ಞೆಯನ್ನು ಬೆಳೆಸಲಾಗುತ್ತಿದ್ದು ಸ್ವ ಸಹಾಯ ಸಂಘದ ಸದಸ್ಯರು ತಮ್ಮತಮ್ಮಲ್ಲೇ ಹಣಕಾಸು ನೆರವು ಪಡೆಯುತ್ತಿರುವುದರಿಂದ ಕುಟುಂಬ ಸಾಲದ ಕೂಪಕ್ಕೆ ಬೀಳುವುದನ್ನು ತಪ್ಪಿಸುತ್ತಿದ್ದಾರೆ. ಇನ್ನು ಕೆಲವು ಕಡೆ ಸ್ತ್ರೀ ಶಕ್ತಿ ಸಂಘಗಳೇ ಹಾಲಿನ ಡೇರಿ ನಡೆಸಲು ಮುಂದೆ ಬಂದಿವೆ. ಈ ರೀತಿ "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ  ಎಂಬ ಮಾತೊಂದಿದೆ. ಈಗ ಮಹಿಳೆಯರು ಹಾಲಿನ ಸಂಘ ತೆರೆದರೆ ಅದು ಗ್ರಾಮೋದ್ಧಾರದ ರಹದಾರಿ ಎಂಬ ಘೋಷಣೆಯನ್ನು ನಿಶ್ಚಯವಾಗಿ ಮಾಡಬಹುದು **(ರವೀಂದ್ರ ಭಟ್ಟ, ಪ್ರಜಾವಾಣಿ, 2006, ಜನವರಿ 7).**

ಇಂದು ಹೈನುಗಾರಿಕೆಯನ್ನೇ ಮುಖ್ಯ ವೃತ್ತಿಯನ್ನಾಗಿ ಆರಿಸಿಕೊಂಡ ಅನೇಕ ಮಹಿಳೆಯರಿದ್ದಾರೆ.  ಸ್ವತಂತ್ರವಾಗಿ, ವ್ಯವಸ್ಥಿತವಾದ ಹೈನುಗಾರಿಕೆ ಮಾಡಿ ಅದರಲ್ಲಿ ಯಶಸ್ಸನ್ನು ಸಾಧಿಸುತ್ತಿರುವವರಿದ್ದಾರೆ. ಹಸುಗಳಿಗೆ ಅವಶ್ಯಕವಾದ ಹಸಿರು ಮೇವನ್ನು ತಮ್ಮ ಜಮೀನಿನಲ್ಲಿಯೇ ಬೆಳೆಯುವುದು, ತೋಟಗಳಿಗೆ ಬೇಕಾಗುವ ಸಾವಯವ ಗೊಬ್ಬರದ ಜೊತೆಯಲ್ಲಿ ಗೊಬ್ಬರ ಗ್ಯಾಸ್ ತಯಾರಿಸಿ ಉರುವಲು ಉಳಿತಾಯದೊಂದಿಗೆ ಬಯೋವಿದ್ಯುತ್ ಮೂಲಕ ದೀಪವನ್ನೂ ಬೆಳಗಿಸುತ್ತಿರುವುದು ಮುಂತಾದ ಉಪಯುಕ್ತತೆಯನ್ನು ಪಡೆದುಕೊಂಡಿದ್ದಾರೆ. ಇಂದು ಹೈನುಗಾರಿಕೆಯಲ್ಲಿ ಆಕಳುಗಳ ಮತ್ತು ಕರುಗಳ ಮಾರಾಟವೂ ಒಂದು ಪ್ರತ್ಯೇಕ ಉದ್ಯೋಗದಂತೆ ಪರಿಗಣಿತವಾಗಿದೆ. ಆಕಳುಗಳಿಗೆ ಜನಿಸಿದ ಹೋರಿ ಕರುಗಳನ್ನು ಕೆಲವು ವರ್ಷಗಳವರೆಗೆ ಚೆನ್ನಾಗಿ ಸಾಕಿ ಉಳುಮೆ ಮಾಡುವ ರೈತರಿಗೆ ಮಾರಾಟ ಮಾಡುವರು, ಹೆಣ್ಣು ಕರುಗಳು ಜನಿಸಿದರೆ ಅವು ಗರ್ಭಾವಸ್ಥೆಗೆ ಬರುವವರೆಗೆ ಸಾಕಿ ಗರ್ಭ ಕಟ್ಟಿದ ನಂತರ ಲಾಭದಾಯಕ ಬೆಲೆಗೆ ಮಾರಾಟ ಮಾಡುವರು. ಈ ಕೆಲಸದಲ್ಲಿಯೂ ಮಹಿಳೆಯರು ಸೈ ಎನಿಸಿಕೊಂಡಿದ್ದಾರೆ. ಹೈನುಗಾರಿಕೆಯಿಂದ ಹಾಲನ್ನು ಮಾರಿ ಲಾಭ ಗಳಿಸುವುದಲ್ಲದೆ, ಹೈನುಗಾರಿಕೆಯಿಂದ **ಲಬ್ಧವಾದ** ಸಗಣಿ, ಗಂಜಲಗಳಿಂದ ಸಾವಯವ ಗೊಬ್ಬರ ತಯಾರಿಸಿ ಮಾರಾಟ ಮಾಡುವುದು, ಎರೆಹುಳು ಘಟಕ ನಿರ್ಮಾಣದ ಮೂಲಕ ಎರೆಹುಳುವಿನ ಮಾರಾಟ, ಆಕಳುಗಳ, ಕರುಗಳ ಮಾರಾಟ, ಹಸಿರು ಮೇವಿನ ಬೀಜಗಳ ಮಾರಾಟ, ಹಾಲಿನ ಉಪಉತ್ಪನ್ನಗಳ ಮಾರಾಟ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿ ಹೈನುಗಾರಿಕೆಯ ಜೊತೆಯಲ್ಲಿ ಅದಕ್ಕೆ ಪೂರಕವಾದ ಇತರೆ ಚಟುವಟಿಕೆಗಳಿಂದಲೂ ಇಂದು ಮಹಿಳೆಯರು ಲಾಭವನ್ನು ಗಳಿಸುತ್ತಿದ್ದಾರೆ.

ಆದರೂ ಹೈನುಗಾರಿಕೆಯ ವೃತ್ತಿಯಲ್ಲಿಯೂ ಕೂಡಾ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವರು. ಇಂದು ನಾಟಿ ಹಸುಗಳ ಮತ್ತು ಎಮ್ಮೆಗಳ ಹೈನುಗಾರಿಕೆಗಿಂತ ಹೆಚ್ಚಾಗಿ ಮಿಶ್ರ ತಳಿ ಹಸುಗಳ ಹೈನುಗಾರಿಕೆಯೇ ಹೆಚ್ಚಾಗಿದೆ. ಈ ಮಿಶ್ರ ತಳಿ ರಾಸುಗಳು ನಾಟಿ ಹಸುಗಳಂತೆ ಸ್ಥಳೀಯ ವಾತಾವರಣಕ್ಕೆ ಹೊಂದಿಕೊಂಡು, ರೋಗರುಜಿನಗಳಿಂದ ಮುಕ್ತವಾಗಿರುವುದು ಕಡಿಮೆ. **(ಸುಧಾರಿತ ಸಮಗ್ರ ಜಾನುವಾರು ಸಾಕಣೆ, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ, ಪು.ಸಂ.29)** ಹೀಗಾಗಿ ಮಿಶ್ರತಳಿ ಹಸುಗಳ ಆರೈಕೆ, ಆರೋಗ್ಯ ನಿರ್ವಹಣೆ, ಆಹಾರ ಕ್ರಮ, ಕೊಟ್ಟಿಗೆ ನಿರ್ವಹಣೆ ಮುಂತಾದ ವಿಷಯಗಳಲ್ಲಿ ಹೆಚ್ಚಿನ ಜ್ಞಾನ, ತರಬೇತಿಯ ಅವಶ್ಯಕತೆಯಿದ್ದು, ಮಹಿಳೆಯರಿಗೆ ಈ ವಿಷಯವಾಗಿ ಸೂಕ್ತ ತರಬೇತಿಯ ಕೊರತೆಯಿದೆ. ಅಲ್ಲದೇ ಇಂದಿಗೂ ಭಾರತೀಯ ಸಮಾಜದಲ್ಲಿ ಮಹಿಳೆಯು ಕೌಟುಂಬಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ವಿವಿಧ ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾಳೆ.  ಹೀಗಾಗಿ ಅನೇಕ ಅವಕಾಶಗಳು, ನೆರವುಗಳು ಇದ್ದರೂ ಗ್ರಾಮೀಣ ಮಹಿಳೆ  ಅವುಗಳನ್ನು ಪಡೆಯಲು ಮುಂದೆ ಬರುವುದಿಲ್ಲ. ಇದ್ದ ಅವಕಾಶಗಳನ್ನು ಬಳಸಿಕೊಂಡಿಲ್ಲ.**(ಡಾ.ಕೆ.ಜಿ. ಗುರುಮೂರ್ತಿ, ಗ್ರಾಮೀಣ ಸಮಾಜ ಸಂಸ್ಕೃತಿ, 2007. ಪು.ಸಂ.98)** ಹೀಗಾಗಿ ಗ್ರಾಮೀಣ ಮಹಿಳೆಯರ ಒಳಿತಿಗೆ ಸರಕಾರ ತಂದಿರುವ ಅನೇಕ ಅಭಿವೃದ್ಧಿ ಕಾರ್ಯಗಳು ಹೆಚ್ಚು ಫಲಕಾರಿಯಾಗಿಲ್ಲ.

ಈ ರೀತಿ ಮಹಿಳೆಯರು ಕೃಷಿ ಮತ್ತು ಹೈನುಗಾರಿಕೆಯಲ್ಲಿ ಪ್ರಧಾನವಾದ ಪಾತ್ರ ವಹಿಸಿದ್ದಾರೆ. ಸಾಂಪ್ರದಾಯಿಕ ಕೃಷಿಯ ಜೊತೆಯಲ್ಲಿ ಆಧುನಿಕತೆಯನ್ನೂ ಮೈಗೂಡಿಸಿಕೊಂಡು ಯಶಸ್ವಿಯಾಗಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸ್ವಯಂ ಸೇವಾ ಸಂಸ್ಥೆಗಳು, ಕೆಲವು ವಿಶ್ವವಿದ್ಯಾಲಯಗಳು ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಮಹಿಳಾ ಸಬಲೀಕರಣ ಯೋಜನೆಗಳಡಿಯಲ್ಲಿ ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮಹಿಳೆಯರ ಕ್ರಿಯಾತ್ಮಕ ಸಹಭಾಗಿತ್ವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿವೆ. ಧಾರವಾಡ ಕೃಷಿ ವಿಶ್ವವಿದ್ಯಾಲಯವು 2003ರಿಂದ ಪ್ರತಿ ವರ್ಷ ತನ್ನ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಜಿಲ್ಲೆಯಲ್ಲಿ ಕೃಷಿಯಲ್ಲಿ ಮಾಡಿದ ಒಟ್ಟಾರೆ ಸಾಧನೆಯ ಮೇರೆಗೆ ಒಬ್ಬ ರೈತ ಮಹಿಳೆಯನ್ನು ಆಯ್ಕೆ ಮಾಡಿ ವರ್ಷದ **"ಶ್ರೇಷ್ಠ ಕೃಷಿ ಮಹಿಳೆ"** ಪ್ರಶಸ್ತಿ ನೀಡಿ ಗೌರವಿಸುತ್ತದೆ **(ಕೃಷಿ ಮುನ್ನಡೆ, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ).** ಸರ್ಕಾರ, ರುಡ್ ಸೆಟ್ ನಂತಹ ಸಂಸ್ಥೆಗಳು ಮಹಿಳೆಯರ ಕೃಷಿ ಮತ್ತು ಹೈನುಗಾರಿಕೆ ಚಟುವಟಿಕೆಗಳಿಗೆ ಸಾಲ ನೀಡುವವು. ಕೃಷಿ ವಿಜ್ಞಾನ ಕೇಂದ್ರಗಳು ಕೃಷಿ ಮತ್ತು ಹೈನುಗಾರಿಕೆಗೆ ಸಂಬಂಧಿಸಿದಂತೆ ಮಹಿಳಾ ಸ್ವ ಸಹಾಯ ಸಂಘದ ಸದಸ್ಯರಿಗೆ

ತರಬೇತಿಯನ್ನು ನೀಡುವುದು ಮುಂತಾದ ಕ್ರಮಗಳು ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮಹಿಳೆಯರ ಕಾರ್ಯಭಾರವನ್ನು, ಪಾತ್ರವನ್ನು ಹೆಚ್ಚಿಸಿವೆ.

**ಉಪಸಂಹಾರ**

ದೇಶದ ಸಮಗ್ರ ಜನತೆಯ ಆರ್ಥಿಕ ಪ್ರಗತಿಯಾಗಬೇಕಾದರೆ ಕೃಷಿ ವಲಯ ವಿಪುಲವಾದ ಅಭಿವೃದ್ಧಿಯಾಗಬೇಕು. ಭಾರತದ ಕೃಷಿ ಮತ್ತು ಕ್ಷೀರೋದ್ಯಮದಲ್ಲಿ ಮಹಿಳೆಯರ ಪಾತ್ರವು ಮಹತ್ವದ್ದಾಗಿದ್ದು, ಅವರು ಅಪಾರ ಸಂಖ್ಯೆಯಲ್ಲಿ ಇದ್ದಾರೆ. ಹೀಗಿದ್ದರೂ ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮಹಿಳೆಯರನ್ನು ಪ್ರಮುಖ ಕಾರ್ಮಿಕರೆಂದು ನಮೂದಿಸುತ್ತಿಲ್ಲ. ಆರ್ಥಿಕ ಜನಗಣತಿಯಲ್ಲಿ ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮಹಿಳೆಯರ ಪಾತ್ರಗಳು ಮತ್ತು ಸಮಸ್ಯೆಯನ್ನು ಸರಿಯಾಗಿ ಉಲ್ಲೇಖಿಸುತ್ತಿಲ್ಲ. ಜೊತೆಗೆ ಆಧುನಿಕ ರೀತಿಗಳಲ್ಲಿ ಕೃಷಿ ಮತ್ತು ಹೈನೋದ್ಯಮವನ್ನು ನಡೆಸಲು ಸಾಧ್ಯವಾಗುವಂತೆ ಮಹಿಳೆಯರಿಗೆ ಹೊಸ ತಂತ್ರಜ್ಞಾನದಲ್ಲಿ ಸರಿಯಾಗಿ ತರಬೇತಿಯನ್ನೂ ನೀಡುತ್ತಿಲ್ಲ. ಇದರಿಂದ ಎಷ್ಟೋ ಮಹಿಳೆಯರಿಗೆ ಈ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಯಾಂತ್ರೀಕರಣದ ಪ್ರಭಾವದಿಂದ ಮಹಿಳಾ ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ದುರಂತವೆಂದರೆ ಕೃಷಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಲಾಗದೆ ಯುವಕರು ನಗರಗಳತ್ತ ಮುಖ ಮಾಡುತ್ತಿದ್ದಾರೆ..

ಗ್ರಾಮ ಮಟ್ಟದಲ್ಲಿಯೇ ಕೃಷಿ ಮತ್ತು ಹೈನುಗಾರಿಕೆಯ ಬಗ್ಗೆ ಕಾರ್ಯಾಗಾರಗಳನ್ನು ಏರ್ಪಡಿಸುವುದು, ಸಮೂಹ ಮಾಧ್ಯಮಗಳಲ್ಲಿ ಕೃಷಿ ಮತ್ತು ಹೈನುಗಾರಿಕೆಯ ಕುರಿತು ಸಮಗ್ರ ಮಾಹಿತಿಯನ್ನು ನೀಡುವುದು, ಕೃಷಿ ಮಾರುಕಟ್ಟೆ ಸೌಲಭ್ಯ ವಿಸ್ತರಣೆ, ಅನ್ನದಾತನ ಕಾರ್ಯವನ್ನು, ಆತ ಎದುರಿಸುವ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರವನ್ನು ಒದಗಿಸುವ ಹಿನ್ನಲೆಯುಳ್ಳ 'ಬಂಗಾರದ ಮನುಷ್ಯ' ದಂತಹ ಸಿನಿಮಾಗಳ ನಿರ್ಮಾಣ ಮತ್ತು ಪ್ರಮುಖವಾಗಿ ದೇಶದ ಅತ್ಯುನ್ನತ ಪ್ರಶಸ್ತಿಗಳನ್ನು ಕೃಷಿ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ ಶ್ರೇಷ್ಠ ಕೃಷಿಕನಿಗೂ ನೀಡುವುದು ಮುಂತಾದ ಕ್ರಮಗಳನ್ನು ಅನುಸರಿಸಿದಾಗ ಮಾತ್ರ ದೇಶದ ಬೆನ್ನೆಲುಬಾದ ರೈತನು ಕೃಷಿಯಿಂದ ವಿಮುಖನಾಗದೆ ದೇಶಕ್ಕೆ ಅನ್ನ ನೀಡುವ ಕಾರ್ಯದಲ್ಲಿ ಸಕ್ರಿಯನಾಗುವಂತೆ ಮಾಡಬಹುದು. ಕೃಷಿ ಮತ್ತು ಹೈನುಗಾರಿಕೆ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಅತ್ಯವಶ್ಯಕವಾಗಿದ್ದು, ಈ ಕ್ಷೇತ್ರಗಳಲ್ಲಿ ಮಹಿಳೆಯರ ಸ್ಥಾನವನ್ನು ಪುನರ್ ಸ್ಥಾಪಿಸುವ ಕಾರ್ಯವನ್ನು ಅಗತ್ಯವಾಗಿ ಮಾಡಬೇಕಾಗಿದೆ ಮಹಿಳೆಯರ ಶ್ರಮದ ದಕ್ಷತೆಗೆ ಸಮಾಜ ಮತ್ತು ಸರ್ಕಾರ ಗೌರವಯುತವಾದ ಮನ್ನಣೆ ನೀಡಿದರೆ ಮಹಿಳೆಯರ ಜೊತೆ ಗ್ರಾಮೀಣ ಸಮಾಜವೂ ಸ್ವಾಸ್ಥ್ಯ ರೀತಿಯಲ್ಲಿ ಉದ್ಧಾರವಾಗುವುದು.

**ಆಧಾರ ಗ್ರಂಥಗಳು:**

ಸುನಂದ ಎಂ., ನಿಷೇಧಗಳು ಮತ್ತು ಲಿಂಗ ವ್ಯವಸ್ಥೆ, 2011. ಪುಟ.65

ಡಾ. ವಿಜಯಕುಮಾರಿ ಎಸ್. ಕರಿಕಲ್, ಮಹಿಳೆ ಮತ್ತು ಸಮಾಜ. ಪುಟ–27. 2007

ಡಾ॥ ಕೆ.ಆರ್. ಸಂಧ್ಯಾರೆಡ್ಡಿ, ಮಹಿಳಾ ಜನಪದ, 2003

ಎನ್ ಅನ್ನಪೂರ್ಣೇಶ್ವರಿ, ಒಡೆಯರ್ ಡಿ. ಹೆಗ್ಗಡೆ, ಜಾಗತೀಕರಣ ಮತ್ತು ಮಹಿಳೆ

ಸುರೇಖಾ ಸಂಕನಗೌಡರ ಮತ್ತು ಈರಮ್ಮ ಗೌಡರ, ಕೃಷಿ ಮುನ್ನಡೆ, ಕೃಷಿ ವಿ.ವಿ.ದಾರವಾಡ, 2012, ಪು.ಸಂ. 35

ರವೀಂದ್ರ ಭಟ್ಟ, ಪ್ರಜಾವಾಣಿ, 2006, ಜನವರಿ 7

ಕೃಷಿ ಮುನ್ನಡೆ, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ)

ಸುಧಾರಿತ ಸಮಗ್ರ ಜಾನುವಾರು ಸಾಕಣೆ, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ, ಪು.ಸಂ.29

ಬಿ.ವಿ. ವೀರಭದ್ರಪ್ಪ, ವೇದಗಳಲ್ಲಿ ಜನಸಾಮಾನ್ಯರು,2009, ಪು.ಸಂ.43

ಪ್ರೊ.ಎಸ್.ಎಸ್. ಕಟಗಿಹಳ್ಳಿಮಠ, ಸಾವಯವ ಕೃಷಿ: ದಿಕ್ಸೂಚಿ ಲೇಖನಗಳು, 2006, ಪು.ಸಂ.14

ಪ್ರೊ.ಎಸ್. ಗುರುಪ್ರಕಾಶ್, ಜನಪದ ಪಶುವೈದ್ಯ, ಪು.ಸಂ.17

ಡಿ.ವೆಂಕಟರಾವ್, ಕೃಷಿ ಬೆಳವಣಿಗೆ, 2009, ಪು.ಸಂ.56

ಡಾ. ಟಿ.ಆರ್. ಚಂದ್ರಶೇಖರ್, ಗ್ರಾಮೀಣ ಅಭಿವೃದ್ದಿ ಮತ್ತು ವಿಕೇಂದ್ರೀಕರಣ, 2004, ಪು.ಸಂ.47

ಡಾ.ಕೆ.ಜಿ. ಗುರುಮೂರ್ತಿ, ಗ್ರಾಮೀಣ ಸಮಾಜ ಸಂಸ್ಕೃತಿ, 2007. ಪು.ಸಂ.98

ಡಾ॥ ಬಿ.ಪಿ.ಮಂಜುನಾಥ, ಪಶುಪಾಲನೆ,2010, ಪು.ಸಂ.7

ಡಾ. ಮೃತ್ಯುಂಜಯ ಹೊರಕೇರಿ, ರೈತ ಜಾನಪದ, 1998, ಪು.ಸಂ.60
ಅನ್ನದಾತನ ಅಂಗಳದಿಂದ ಕೃಷಿ ತಾಂತ್ರಿಕತೆಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಸೆಪ್ಟಂಬರ್, 2011.

# ಮಹಿಳೆ ಮತ್ತು ಸಮಾಜ

**ಡಾ.ಪಿ.ನಾಗರಾಜ**
**ಶ್ರೀ ಹನುಮಂತಪ್ಪ ಡಿ.ಜಿ**

ಭಾರತೀಯ ಸ್ತ್ರೀಯರು ದೇವರು ಧರ್ಮ ಮತ್ತು ಕಂದಾಚಾರಗಳ ಹೆಸರಿನಲ್ಲಿ ಶೋಷಣೆಗೆ ಒಳಪಟ್ಟ ಮಹಿಳೆಯರನ್ನು ಬಿಡುಗಡೆಗೊಳಿಸಿ ಅವರ ಸಬಲೀಕರಣಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಭಾರತೀಯ ಸಂವಿಧಾನದ ರಾಜ್ಯ ನಿರ್ದೇಶನದ ತತ್ವಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸುತ್ತವೆ. ಭಾರತದ ಸಂವಿಧಾನದ ಆಶಯಗಳು ಮತ್ತು ಸೂಚನೆಗಳಿಗನುಸಾರವಾಗಿ ಸ್ವಾತಂತ್ರ್ಯಾನಂತರದಲ್ಲಿ ಮಹಿಳೆಯರಿಗಾಗಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿರುವುದನ್ನು ಕಾಣುತ್ತೇವೆ. ಭಾರತೀಯ ಮಹಿಳೆಯರಲ್ಲಿ ಹೆಚ್ಚಿನವರು ಭೂಮಿ ಬಂಡವಾಳ, ಶಿಕ್ಷಣ, ಉದ್ಯೋಗ, ಅಧಿಕಾರ, ರಾಜಕೀಯ ಸ್ಥಾನಮಾನ ಮೊದಲಾದ ಮೂಲಭೂತ ಸಬಲೀಕರಣ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರನ್ನು ವ್ಯವಸ್ಥಿತ ರೀತಿಯಲ್ಲಿ ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಕೆಲವು ವಿಪರ್ಯಾಸಗಳು ಹಾಗೂ ವಿಲಕ್ಷಣತೆಗಳು ನಮ್ಮ ಗಮನವನ್ನು ಸೆಳೆಯುವವು. ಇವರನ್ನು ಪೂಜ್ಯಭಾವನೆಯಿಂದ ನೋಡುತ್ತಾ ಇವರನ್ನು ದೇವತೆಯ ಸ್ವರೂಪದ'ವರೆಂದು ಕೊಂಡಾಡುತ್ತಾ ಬಂದಿರುವ ಸಮಾಜದಲ್ಲಿ ಸ್ತ್ರೀಯರು ಸಮಾನತೆಗೆ ಅನರ್ಹರಾಗಿ ಹಲವಾರು ಬಗೆಯ ದೌರ್ಬಲ್ಯಗಳಿಗೆ ಒಳಗಾಗಿರುವುದು ನಮಗೆ ಕಂಡುಬರುತ್ತದೆ.

ಸಮಕಾಲೀನ ಸಂದರ್ಭದಲ್ಲಿ ಸ್ತ್ರೀಯರ ಸ್ಥಾನಮಾನ ಯಾವುದೇ ಸಮಾಜ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತು ನಾಗರೀಕತೆಯ ಮುನ್ನಡೆಯನ್ನು ಅಳೆಯುವ ಮಾನದಂಡವಿದ್ದಂತೆ ಎನ್ನುವ ಮಾತಿದೆ. ಸ್ತ್ರೀಯರನ್ನು ಗೌರವಿಸದ' ಮತ್ತು ಅವರಿಗೆ ಸರಿಯಾದ ಸ್ಥಾನಮಾನ ಹಾಗೂ ಅವಕಾಶಗಳನ್ನು ಕಲ್ಪಿಸಿಕೊಡದೇ ಇರುವ ಸಮಾಜವು ಎಂದಿಗೂ ಪ್ರಗತಿ ಸಾಧಿಸಲಾರದು ಎಂದು–ಸ್ವಾಮಿ ವಿವೇಕಾನಂದರು ಅಭಿಪ್ರಾಯಪಟ್ಟಿರುವುದು ನಮಗೆ ಗೊತ್ತಿರುವ ಸಂಗತಿಯಾಗಿದೆ. ಹೆಣ್ಣು ಭ್ರೂಣಹತ್ಯೆ, ಅತ್ಯಾಚಾರ, ವರದಕ್ಷಿಣೆ ಸಾವು, ಲೈಂಗಿಕ ಕಿರುಕುಳ, ಅವಹೇಳನಕಾರಿಯಾದಂತಹ ಮಾತುಗಳು ದಿನೇದಿನೇ ಹೆಚ್ಚುತ್ತಲೇ ಇವೆ. ಇವುಗಳನ್ನು ಗಮನಿಸಿದಾಗ ಮಹಿಳಾ ಶೋಷಣೆಗೆ ಕೊನೆಯೇ ಇಲ್ಲವೇ? ಎಂಬಂತಾಗಿದೆ. ಆರ್ಥಿಕ ಬೆಳವಣಿಗೆಯು ಹೆಚ್ಚಿದಂತೆಲ್ಲಾ ಮಹಿಳೆಯರ ಮೇಲಿನ ಹಿಂಸೆಯು ಹೊಸರೂಪ ಪಡೆದುಕೊಳ್ಳುತ್ತಿರುವ ಸಂಗತಿ ಕಂಡುಬರುತ್ತಿದೆ. ಈ ಪುರುಷ ಪ್ರಧಾನವಾದ ಸಮಾಜದಲ್ಲಿ ಬೆಳಕಿಗೆ ಬರದೇ ಮುಚ್ಚಿಹೋಗುವ ಪ್ರಕರಣಗಳು ಅದೆಷ್ಟೋ ಕಾಲಗರ್ಭದಲ್ಲಿ ಹುದುಗಿಹೋಗಿವೆ.

ಸಮಾಜದ ಮುಖ್ಯವಾಹಿನಿಯಲ್ಲಿ ಮಹಿಳೆಯನ್ನು ಒಳಗುಮಾಡಿಕೊಳ್ಳುವ ಪ್ರಕ್ರಿಯೆ ಬಹಳ ಕಡಿಮೆ. ವಿವಿಧ ಶಾಖೆಗಳಲ್ಲಿ ಸಂಸ್ಥೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಸಂಖ್ಯಾದೃಷ್ಟಿಯಿಂದ ತಕ್ಕಮಟ್ಟಿಗೆ ಪರವಾಗಿಲ್ಲ ಎನಿಸಿದರೂ, ಹೀಗೆ ಸಂಖ್ಯೆಯ ನೆಲೆಗಳಲ್ಲಿ ಕಾಣಿಸಿಕೊಳ್ಳುವ ಮಹಿಳೆಯರು ಆಯಾ ಕ್ಷೇತ್ರಗಳಲ್ಲಿ ಗುಣಾತ್ಮಕ ನೆಲೆಯಲ್ಲಿ ಅವರ ಕೊಡುಗೆ ಎಷ್ಟರಮಟ್ಟಿಗೆ ಸಾಕಾರಗೊಳ್ಳುತ್ತದೆ ಎನ್ನುವ ಪ್ರಶ್ನೆ ಎದ್ದುಕಾಣುತ್ತದೆ. ಮಹಿಳೆಯರನ್ನು ಸೌಂದರ್ಯ ಪ್ರಜ್ಞೆಯಿಂದ ಇವರನ್ನು ಪ್ರಧಾನವಾಹಿನಿಯಲ್ಲಿ ಕಾಣಲಾಗುತ್ತಿದೆ. ಆದರೆ ಮಹಿಳೆಯರು ಪ್ರಶ್ನಿಸುವ ಮನೋಭಾವ, ಸ್ವಂತಿಕೆಯನ್ನು ಮರೆಯುವ ಪ್ರಯತ್ನ ಹಾಗೂ ಸೃಜನಶೀಲವಾಗಿ ಚಿಂತಿಸುವ ಎಲ್ಲ ಹಂತಗಳನ್ನೂ ನಿರುತ್ಸಾಹಗೊಳಿಸುವ ನಿಯಂತ್ರಿಸುವ ಹಾಗೂ ದ'ಮನಿಸುವ ಪ್ರಯತ್ನಗಳು ಉದ್ದಕ್ಕೂ ಕಂಡುಬರುತ್ತವೆ.

ಕುಟುಂಬವು ಸ್ತ್ರೀ ಪುರುಷರ ಸಮಾನ ಸಹಾಯದಿಂದ ಬೆಳೆಯಬಹುದಾದರೂ, ಈ ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ಮೌಲ್ಯಗಳನ್ನು ಆಧರಿಸಿ ಬೆಳೆದ ಸಾಮಾನ್ಯ ಹಾಗೂ ಉದ್ಯೋಗಸ್ಥ ಸ್ತ್ರೀಯರಿಬ್ಬರೂ ಸಹ ಇಂದಿನವರೆಗೂ ಇದನ್ನೊಂದು ಅಭಾವವಾಗಿ ಪರಿಗಣಿಸುತ್ತಿಲ್ಲ. ಆದ್ದರಿಂದ ವಿವಾಹ ವಿಚ್ಛೇದನಗಳ ಸಂದರ್ಭಗಳಲ್ಲಿ ಸ್ತ್ರೀಯು ತನ್ನದೇ ಆದ ಹಕ್ಕನ್ನು ಸ್ಥಾಪಿಸಿಲ್ಲವಾದ್ದರಿಂದ ಜೀವನಾಂಶಕ್ಕೆ ಗಂಡಂದಿರ ಮೊರೆ ಹೋಗಬೇಕಾದ ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಮಹಿಳೆಯರಿಗೆ ಕಾನೂನುಗಳ ಕುರಿತಾದ ಮಾಹಿತಿ ಸಂವಿಧಾನದಲ್ಲಿ ಮಹಿಳೆಯರಿಗಾಗಿ ರೂಪಿಸಲಾದ ಹಕ್ಕುಗಳ ತಿಳುವಳಿಕೆಯು ಅತ್ಯಗತ್ಯವಾಗಿದ್ದು, ಇವುಗಳನ್ನು ಅರಿತು ಮಹಿಳೆಯರೆಲ್ಲರೂ ತಮ್ಮ ಹಕ್ಕನ್ನು ಪ್ರಶ್ನಿಸುವ ಮನೋಭಾವವು ಬೆಳೆದು ಬರಬೇಕು. ಈ ನಿಟ್ಟಿನಲ್ಲಿ ಮಹಿಳೆಯರಿಗೆ 'ಶಿಕ್ಷಣ' ಹಾಗೂ ಉದ್ಯೋಗಾವಕಾಶವನ್ನು ಅತಿ ಹೆಚ್ಚಿನ ರೀತಿಯಲ್ಲಿ ಸಮಾಜ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ ಎಂದು ಹೇಳುತ್ತಲೇ ಬರುತ್ತಿದ್ದೇವೆ. ಈ ಮಾತುಗಳು ಕೇವಲ ವೇದಿಕೆಯ ಮೇಲಿನ ಮಾತುಗಳೇ ಹೊರತು ಕರ್ತೃತ್ವದ ಮಾತುಗಳಲ್ಲ.

ಒಂದು ಕಡೆ ಎಚ್.ಜೆ.ಲಕ್ಕಪ್ಪಗೌಡ್ರರು (2001) ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ ಮುನ್ನುಡಿಯಲ್ಲಿ ಹೀಗೆ ಪ್ರಸ್ತಾಪಿಸುತ್ತಾರೆ. ಭಾರತೀಯ ಇತಿಹಾಸದಲ್ಲಿ ಮಾತ್ರವಲ್ಲದೆ ಜಗತ್ತಿನ ಎಷ್ಟೋ ದೇಶಗಳ ಸಾಂಸ್ಕೃತಿಕ ಇತಿಹಾಸದಲ್ಲಿ ಮಹಿಳೆ ದಲಿತ ಪದಕ್ಕೆ ಪರ್ಯಾಯ ಉದಾಹರಣೆಯಾಗಿದ್ದಾಳೆ. ಪುರುಷ ಪ್ರಧಾನ ಸಮಾಜದ 'ಸಾರ್ವಭೌಮತ್ವದ' ಒತ್ತಡ, ದೇಹಶಕ್ತಿಯ ಬರ್ಬರ ಅಭಿವ್ಯಕ್ತಿ ಮತ್ತು ದೈಹಿಕವಾಗಿ ಪುರುಷನಿಗಿಂತ ಮಹಿಳೆ ನೈಸರ್ಗಿಕವಾಗಿಯೇ ದುರ್ಬಲಳೆಂಬ ಕಾರಣಕ್ಕಾಗಿ ಪುರುಷನಲ್ಲಿ ಬೆಳೆದ ಅಹಂ ಪ್ರವೃತ್ತಿ, ಸಹಸ್ರಾರು ವರ್ಷಗಳಿಂದ ಆಕೆಯ ಬದುಕಿಗೆ ಮಿತಿಗಳನ್ನು ಕೀಳರಿಮೆಯನ್ನು ಭಯಗಳನ್ನು ಒತ್ತಡಗಳನ್ನು ತುಂಬುತ್ತ ಬಂದ ಪುರುಷ ಪರಂಪರೆಯ ನಿರಂತರ ಪ್ರಯತ್ನ ಆಕೆಯ ಪುರುಷಾಧೀನ ಅಸ್ವತಂತ್ರ ಪ್ರವೃತ್ತಿಯ ಬಗ್ಗೆ ಹೆಣೆಯಲಾದ ಲಕ್ಷಲಕ್ಷ ಪುಟಗಳ ಒಕ್ಕಣ್ಣಿನ 'ರಂಜಕ' ಸಾಹಿತ್ಯ ಲೋಕವನ್ನು ಅದಕ್ಕೆಲ್ಲಾ ಸೂಕ್ಷ್ಮಸ್ಥೂಲಗಳಲ್ಲಿ ಆಕೆ ಕಳೆದುಕೊಳ್ಳಲು ಬಿಡದ 'ಉದ್ದೇಶಪೂರ್ವಕ' ನಿರಂಕುಶ ಅಧಿಕಾರಶಾಹಿ ಪ್ರವೃತ್ತಿ, ಪ್ರಾಕೃತಿಕ ಕಾರಣದಿಂದಲೂ ಬದುಕಿಗೆ ಕ್ರೌರ್ಯವನ್ನು ಹತ್ತಿಕ್ಕಬಲ್ಲ ದೇಹ ಮತ್ತು ಮನೋದಾರ್ಢ್ಯಗಳು ತನಗೇ ಮೀಸಲೆಂಬ ಮೇಲರಿಮೆ ಹೆಣ್ಣಿನ ಮಾತೃಸಹಜ ಮಾರ್ದವತೆಯ ದುರುಪಯೋಗಕಾಂಕ್ಷೆ ಪರಲೋಕದಲ್ಲಿ ಸ್ಥಾನ ತಡೆಯಲು ಗಂಡಿನ ಅಡಿಯಾಳಾಗಿರುವುದು ಅತ್ಯಗತ್ಯವೆಂಬ ಭ್ರಮೆ ಮೂಡಿಸುವ ಪರಂಪರಾಗತ ಮೆದುಳು ತೊಳೆತ, ಪರಮ ಪತಿವ್ರತೆಯಾಗಿರುವುದು ಮೋಕ್ಷ ಸಾಧನೆಯ ದೃಷ್ಟಿಯಿಂದ ಮಹತ್ವಪೂರ್ಣ ಎಂಬ ನಂಬಿಕೆ, ನಿರಂತರ ಮದ್ಯಪಾನ ಎಲ್ಲ ನೋವು ದಬ್ಬಾಳಿಕೆಗಳನ್ನು ಸಹಿಸುವ ಪ್ರತಿಫಲವಾಗಿ ಆಕೆಯನ್ನು ನಂಬಿಸಲಾದ ಟೊಳ್ಳು ದೈವತ್ವದ ಪಟ್ಟ ಈ ಎಲ್ಲ ಕಾರಣಗಳಿಂದಾಗಿ ಹೆಣ್ಣು ಇತಿಹಾಸದುದ್ದಕ್ಕೂ ಅನಿವಾರ್ಯವಾಗಿ ದೀನಳಾಗಿ ದ್ವಿತೀಯ ದರ್ಜೆಯ ಜೀವಿಯಾಗಿ ನಲುಗುತ್ತ ದಟ್ಟಬೆಳಕಿನಲ್ಲೂ ಕಣ್ಣಿಗೆ ಬಲವಂತ ಕತ್ತಲೆಯ ಪಟ್ಟಿಯನ್ನು ಕಟ್ಟಿಕೊಂಡೇ ಬದುಕುತ್ತಾ ಬಂದಿದ್ದಾಳೆ. ಒಂದು ಕಡೆ ದಾಸಿಯ, ಇನ್ನೊಂದು ಕಡೆ ಮಾತೆಯ ಮತ್ತೊಂದು ಕಡೆ ಮಹಾದೇವತೆಯ ವಿಭಿನ್ನ ಸ್ತರಗಳನ್ನು ಆಕೆಯ ಜೀವನದಲ್ಲಿ ಸೃಷ್ಟಿಸಿ ಅಜ್ಞಾನದ ನರಕದಲ್ಲಿ ಆಕೆಯನ್ನು ದೂಡಲಾಗಿದೆ. ಗಂಡು ಆಕೆಯ ಬಗ್ಗೆ ತೋರುವ ಕರುಣೆ, ಪ್ರೀತಿ, ಪ್ರೇಮಗಳೆಲ್ಲ ಗಂಡಿನ ಸ್ವಾರ್ಥದ ಸಂಚಿನ ರೇಷ್ಮೆರೂಪಗಳಾಗಿ ಕಾಣಿಸಿಕೊಳ್ಳುತ್ತಾ ಬಂದಿವೆ, ಹೀಗಾಗಿ ಅಲ್ಲಲ್ಲಿ ಬೆರಳಣಿಕೆಯ ಅಪವಾದಗಳನ್ನು ಹೊರತುಪಡಿಸಿದರೆ ವಿಶ್ವದ ಇತಿಹಾಸದುದ್ದಕ್ಕೂ ಗಂಡಿನಂತೆ ಬೆಳಕು ಮುಖವಾಗದೇ ಅಂಧಮುಖವಾಗಿಯೇ ಮಹಿಳೆ ಉಳಿದು ಬಂದು ಗುಪ್ತಗಾಮಿನಿಯಾಗಿದ್ದಾಳೆ. ಆಕೆಯ ಅಪರಿಮಿತ ಅಂತ:ಸತ್ವ, ಬುದ್ಧಿಶೀಲತೆ, ಸೂಕ್ಷ್ಮ ಅನುಭವ, ಭಾವಶೀಲತೆ ಮತ್ತು ಕ್ರಿಯಾಶೀಲತೆಗಳ ಬೆಸುಗೆಯ ತೊರೆಯಾಗಿಬಿಟ್ಟಿವೆ. ಹೀಗೆ ಹತ್ತು ಹಲವು ಕಾರಣಗಳಿಗಾಗಿ ಇತಿಹಾಸದ ತುಂಬ ಗಂಡು ವಿಜೃಂಭಿಸುವಂತೆ ಹೆಣ್ಣು ವಿಜೃಂಭಿಸಿಲ್ಲ.

ಮಹಿಳೆಯ ಸಾಮಾಜಿಕ ಸ್ತ್ರೀವಾದದ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾ ತಮ್ಮ ಪಾತ್ರಗಳನ್ನು ಬಲಪಡಿಸತೊಡಗಿದರು, ಸಾಂಪ್ರದಾಯಿಕ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಬಾಧ್ಯತೆಯನ್ನು ಪ್ರಶ್ನಿಸಿ ಮಹಿಳೆಯರ ಹಕ್ಕುಗಳಿಗಾಗಿ ಸಾಮಾಜಿಕ ಸ್ತ್ರೀವಾದಿಗಳು ವಾದಿಸತೊಡಗಿದರು. ವಿಲಿಯಂಬೆಂಟಿಂಕ್, ರಾಜಾರಾಮ್ ಮೋಹನರಾಯ್, ಜ್ಯೋತಿಬಾಫುಲೆ, ಮಹಾತ್ಮಾಗಾಂಧಿ, ರಾಮಸ್ವಾಮಿ ಪೆರಿಯಾರ್, ನಾರಾಯಣ್‌ಗುರು, ಅಂಬೇಡ್ಕರ್ ಮೊದಲಾದವರು ಮಹಿಳೆಯರು ಸಾರ್ವಜನಿಕರ ರಂಗದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಉತ್ತೇಜಿಸಿದರು. ಅವರು ಮಹಿಳೆಯರ ಸಾಮರ್ಥ್ಯ ವಿಕಸನಕ್ಕೆ ಅಡ್ಡಗಲ್ಲುಗಳಾಗಿ ನಿಂತ ಹಲವು ಕಂದಾಚಾರಗಳನ್ನು ಬಲವಾಗಿ ಖಂಡಿಸಿದ್ದಾರೆ.

ಬ್ರಿಟಿಷ್ ಆಡಳಿತಗಾರರು ಭಾರತೀಯ ಪುರುಷ ಸಮಾಜ ಸುಧಾರಕರು ಹಾಗೂ ವಿದ್ಯಾವಂತ ಭಾರತೀಯ ಮಹಿಳೆಯರು ರಾಷ್ಟ್ರದಲ್ಲಿ ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಸುಧಾರಣವಾದಿಗಳಿಗೆ ಸ್ತ್ರೀ ಶಿಕ್ಷಣವು ಪ್ರಗತಿಶೀಲ ಸಮಾಜ ನಿರ್ಮಾಣಕ್ಕೆ ಸಾಧನವಾಗಿ ಕಂಡಿತು. ಶಿಕ್ಷಣ ಪಡೆದ ಮೊದಲ ತಲೆಮಾರಿನ ಮಹಿಳೆಯರು ಭಾರತೀಯ ಮಹಿಳೆಯರ ಸ್ಥಿತಿಗತಿಗಳನ್ನು ಕುರಿತು ಸಾಹಿತ್ಯ ರಚಿಸಿ ಮಹಿಳೆಯರ ಸಂಘಟನೆಗೆ ಬೌದ್ಧಿಕ ನೆರವು ನೀಡಿದರು. ಅನೇಕ ಮಹಿಳಾ ಸಂಘಟನೆಗಳು ರಾಷ್ಟ್ರೀಯ ಮಹಿಳಾ ಸಂಸ್ಥೆಗಳು ಎಂಬ ಹೆಸರಿನಲ್ಲಿ ಒಗ್ಗೂಡಿ ಮಹಿಳಾ ಕಾಳಜಿಗಳನ್ನು ಕೇಂದ್ರವಾಗಿಸಿಕೊಂಡು ಹೋರಾಟ ನಡೆಸಿದರು. ಈ ಸಂಸ್ಥೆಗಳು ಮಹಿಳೆಯರ ಅಭಿಪ್ರಾಯಗಳನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸುವ ವೇದಿಕೆಗಳಾದವು. ಅಲ್ಲದೇ ಭವಿಷ್ಯದಲ್ಲಿ ಸಾಮಾಜಿಕ ಹಾಗೂ ರಾಜಕೀಯ ಸಂಸ್ಥೆಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಮಹಿಳಾ ನಾಯಕಿಯರಿಗೆ ಅವಶ್ಯಕವಾದ ನೈತಿಕ ಸ್ಥೈರ್ಯ ಪ್ರಾಯೋಗಿಕ ತರಬೇತಿ ಮತ್ತು ಮಾರ್ಗದರ್ಶನಗಳನ್ನು ಒದಗಿಸಿದವು.

ಮಹಿಳೆಯರು ದುಡಿಮೆ ಕ್ಷೇತ್ರಗಳಲ್ಲಿಯೂ ಸಹ ಸಕ್ರಿಯವಾಗಿ ಭಾಗಿ ಯಾಗಿದ್ದರೂ, ವಸಾಹತು ಆಡಳಿತದ ಪರಿಣಾಮವಾಗಿ ರೂಪುಗೊಂಡ ಆಧುನಿಕ ಆರ್ಥಿಕ ಕ್ಷೇತ್ರವು ವಿದ್ಯಾವಂತ ಮಹಿಳೆಯರಿಗೆ ಹೊಸ ಉದ್ಯೋಗವಕಾಶವನ್ನು ಒದಗಿಸಿತು. ಆದರೆ ಅಸಂಘಟಿತ ಕೃಷಿ ಗುಡಿಕೈಗಾರಿಕೆ ಮತ್ತು ಸಣ್ಣಕೈಗಾರಿಕೆಗಳಲ್ಲಿ ದುಡಿತದ ಮಹಿಳೆಯರ ಸ್ಥಿತಿಗತಿ ತೀರಾ ಶೋಚನೀಯ ಹಾಗೂ ಕಷ್ಟದಾಯಕವಾಗಿತ್ತು. ಭಾರತೀಯ ಮಹಿಳಾ ಸಂಘಟನೆಗಳು ಮಹಿಳೆಯರ ದುಡಿಯುವ ಹಕ್ಕನ್ನು ಸಮರ್ಥವಾಗಿ ಪ್ರತಿಪಾದಿಸಿದರು.

ಭಾರತದಲ್ಲಿ ಸಾಕಷ್ಟು ಸಂಖ್ಯೆಯ ಮಹಿಳೆಯರು ಚಿಂತಕರು ಹಾಗೂ ಚಳುವಳಿಗಾರರಾಗಿ ಬೆಳೆಯಲು ಬ್ರಿಟಿಷರ ಆಳ್ವಿಕೆಯು ಭಾರತದಲ್ಲಿ ತಂದ ಕೆಲವಾರು ಸುಧಾರಣಾ ಕ್ರಮಗಳು ಮುಖ್ಯ ಕಾರಣಗಳಾದವು. ಮಹಿಳೆಯರಿಗೆ ದೊರಕಿದ ಶೈಕ್ಷಣಿಕ ಸೌಲಭ್ಯಗಳಿಂದಾಗಿ ಹಲವಾರು ಮಹಿಳೆಯರು ಸಮಾನತೆಗಾಗಿ ಚಳುವಳಿಗಳನ್ನು ಸಂಘಟಿಸಲು ಸಾಧ್ಯವಾಯಿತು. ವಿದೇಶಿಯರ ಸಂಪರ್ಕ, ಔಪಚಾರಿಕ ಶಿಕ್ಷಣ, ನಗರೀಕರಣ, ಮಹಿಳಾ ಸಾಹಿತ್ಯ ರಚನೆ, ಮಹಿಳೆಯರ ಸಂಘಟನೆ, ಸುಧಾರಣಾವಾದಿ ಪುರುಷರ ಪ್ರೋತ್ಸಾಹ, ಬ್ರಿಟಿಷರ ಸಹಕಾರ ಸುಧಾರಣಾ ಕ್ರಮಗಳು, ಇವೇ ಮೊದಲಾದ ಅಂಶಗಳು ಮಹಿಳಾ ನಾಯಕಿಯರ ಹೊಸ ತಲೆಮಾರನ್ನೇ ಸೃಷ್ಟಿಸಲು ಸಹಕಾರಿಯಾದವು, ಹಾಗೂ ಮಹಿಳೆಯರ ಸಮಾನತೆಯ ಹೋರಾಟಕ್ಕೆ ಚಾಲನೆ ಸಿಕ್ಕಿತು. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗಳು ಈ ವ್ಯವಸ್ಥೆಯು ಎಲ್ಲ ವರ್ಗದ ಜನರಿಗೂ ಎಲ್ಲಾ ಬಗೆಯ ಮೂಲಭೂತವಾದ ಅಗತ್ಯತೆ ಸೌಲಭ್ಯಗಳನ್ನು ತಾರತಮ್ಯ ಮಾಡದೆ ಅವರಿಗೆ ಒದಗಿಸಿಕೊಡುವುದು. ಇಂದು ಸಮಾಜೀಕರಣದ ಪ್ರಭಾವ ಹೆಚ್ಚಾದಂತೆ ಅವಳು ನಿರ್ವಹಿಸುವ ಪಾತ್ರ ಅಸಾಧಾರಣವಾಗಿದೆ. ಆದಕಾರಣ ಅವಳಿಗೆ ಸಮಾನ ಅವಕಾಶ ನೀಡುವ ಅಗತ್ಯ ಇದೆ ಎನ್ನಬಹುದಾಗಿದೆ.

ಪುರುಷರಿಗೆ ಸಮಾನವಾಗಿ ಮಹಿಳೆಯರಿಗೂ ಸೂಕ್ತ ಅವಕಾಶ ಮತ್ತು ಸ್ವಾತಂತ್ರ್ಯ ಕಲ್ಪಿಸಿಕೊಡುವುದು. ಸಾತ್ವಿಕ ದೃಷ್ಟಿಕೋನದಲ್ಲಿ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳ ವಿವಿಧ ಸ್ಥರಗಳಲ್ಲಿ ಸಕ್ರಿಯವಾಗಿ ಮಹಿಳೆಯರು ತೊಡಗಿಸಿಕೊಳ್ಳುವಂತಹ ಮುಕ್ತ ವಾತಾವರಣ ಕಲ್ಪಿಸಿಕೊಡುವುದು ಅವರನ್ನು ಸಬಲೀಕರಣಗೊಳಿಸುವ ಗುರಿ ಎಲ್ಲಾ ಕ್ಷೇತ್ರಗಳಲ್ಲಿ ಆಗಬೇಕಾಗಿದೆ.

ಯಾವುದೇ ಒಂದು ದೇಶದ ವ್ಯವಸ್ಥೆಯಲ್ಲಾದರೂ ಅಲ್ಲಿನ ಸಶಕ್ತ ಆಡಳಿತಕ್ಕೆ ಎಲ್ಲಾ ವರ್ಗದವರ ಪ್ರಾತಿನಿಧ್ಯ ಬೇಕಾಗುತ್ತದೆ. ಮಹಿಳೆಯರಿಗೆ ವಿಶೇಷ ಮೀಸಲಾತಿ ನೀಡುವುದು, ಸಂಖ್ಯಾತ್ಮಕ ಸಾಫಲ್ಯವೇ ವಿನಃ ಆಗಾಧ ಬದಲಾವಣೆಯೇ ಅಲ್ಲ ಎನ್ನಬಹುದು. ಇದು ಪುರುಷರಿಗೂ ಅನ್ವಯಿಸುತ್ತದೆ. ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೂ ಒಂದು ವರ್ಗವನ್ನೇ ರಾಜಕೀಯ ಪ್ರಕ್ರಿಯೆಯಿಂದ ಕಾರ್ಯನಿರ್ವಹಿಸುವುದು ಶ್ರಮದಾಯಕ ಕೆಲಸ. ತಾಳ್ಮೆ, ಸಂಯಮ, ಮಿತವ್ಯಯಗಳ ಪ್ರತೀಕವಾಗಿ ಸಮಾನತೆಯ ಹೋರಾಟಕ್ಕೆ ಒಂದು ನಿಶ್ಚಿತ ಗುರಿ ನೀಡಬಲ್ಲಂತಹ ಮಹಿಳೆಯರ ರಾಜಕೀಯ ಮೀಸಲಾತಿಯಿಂದ ಮುಂದೆ ಬರದಿದ್ದರೆ, ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆ ಎಸೆಯುವ ಮತ್ತೊಂದು ದಾಳಕ್ಕೆ ಭವಿಷ್ಯದಲ್ಲಿ ಸಿಲುಕಿಕೊಳ್ಳಬೇಕಾಗುತ್ತದೆ ಎಂಬುದು ಚಿಂತನೆಗೊಳಪಡಿಸುತ್ತದೆ.

ಪ್ರಖ್ಯಾತ ಮಹಿಳಾವಾದಿಗಳಾದ ಶಕುಂತಳಾ ನರಸಿಂಹನ್ (1999) ಮಹಿಳೆಯರ ಸ್ಥಿತಿಗತಿಯನ್ನು ಕುರಿತು ಹೀಗೆ ಹೇಳಿದ್ದಾರೆ. "ಬಹಳಷ್ಟು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಮಾಹಿತಿ ಕೊರತೆ, ಸೇವಾಜಾಲದ ಕೊರತೆ, ಸಮುದಾಯ ಸಹಭಾಗಿತ್ವದ ಕೊರತೆ ಮತ್ತು ವೈಜ್ಞಾನಿಕ ಮೌಲ್ಯಮಾಪನಗಳ ಕೊರತೆಯಿಂದ ಸೂಕ್ತ ರೀತಿಯಲ್ಲಿ ಅನುಷ್ಠಾನಗೊಂಡಿಲ್ಲ. ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸಾಮಾಜಿಕ-ಆರ್ಥಿಕ ಬದುಕಿನ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ತೊಡಗಿಸಲು ಈ ಕಾರ್ಯಕ್ರಮಗಳಿಂದ ಸಾಧ್ಯವಾಗಿಲ್ಲದಿರುವುದು ಶೋಚನೀಯ ಸಂಗತಿಯಾಗಿದೆ. ಬಹಳಷ್ಟು ಸರ್ಕಾರಿ ಮಹಿಳಾ ಪುರ್ನವಸತಿ ಕಾರ್ಯಕ್ರಮಗಳು ಮಾನವೀಯ ಸ್ಪರ್ಶವನ್ನು ಕಳೆದುಕೊಂಡಿವೆ" (  ) ಎಂದು ತಿಳಿಸುತ್ತಾರೆ.

ಸ್ವಾತಂತ್ರ್ಯಾನಂತರದಲ್ಲಿ ರಾಷ್ಟ್ರಾಡಳಿತದ ಎಲ್ಲಾ ವರ್ಗದ ಜನರನ್ನು ತಾರತಮ್ಯಕ್ಕೆ ಅವಕಾಶ ಇಲ್ಲದಂತೆ ಸಕ್ರಿಯವಾಗಿ ತೊಡಗಿಸಿಕೊಳ್ಳುವ ದಿಸೆಯಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿದರು. ಇದರಿಂದ 1948ರಲ್ಲಿ ಸ್ಥಾಪಿತವಾದ ಗ್ರಾಮೀಣ ಅಭಿವೃದ್ಧಿ ಇಲಾಖೆಯು ಸಹ ಸ್ಥಳೀಯ ಹಂತದಲ್ಲಿ ಮಹಿಳಾ ಪಾಲುಗಾರಿಕೆಯನ್ನು ಸಮಾನ ದೃಷ್ಟಿಯಿಂದ ಕಾಣಲಿಲ್ಲ. 1949ರಲ್ಲಿ ಅಸ್ತಿತ್ವದಲ್ಲಿ ಬಂದ ವಿ.ವೆಂಕಟಪ್ಪ ಸಮಿತಿ ಪ್ರಾತಿನಿಧ್ಯತೆ ಇಲ್ಲದವರಿಗೆ ಸ್ಥಳೀಯ ಆಡಳಿತದಲ್ಲಿ ಅವಕಾಶ ದೊರಕಿಸಿಕೊಡಬೇಕೆಂಬ ಸಲಹೆಯನ್ನು ಮಾತ್ರ ನೀಡಿತ್ತು. ಈ ಅನ್ವಯ 1952ರ ಅಧಿನಿಯಮ ಮಹಿಳಾ ಮೀಸಲಾತಿ ವ್ಯವಸ್ಥೆಯನ್ನು ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ನೀಡಬೇಕೆಂದಿತೇ ವಿನ: ಈ ಬಗ್ಗೆ ಖಚಿತತೆ ವ್ಯಕ್ತಪಡಿಸಲಿಲ್ಲ. 1953ರಲ್ಲಿ ಅಸ್ತಿತ್ವಕ್ಕೆ ಬಂದ ಸಿ.ಚಂದ್ರಶೇಖರಯ್ಯ ಸಮಿತಿಯು ಮಹಿಳೆಯರು ಸೇರಿದಂತೆ ದುರ್ಬಲ ವರ್ಗದವರಿಗೆ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯತೆ ಇರಬೇಕೆಂದು ತಿಳಿಸಿ ಪ್ರತ್ಯಕ್ಷ ಹಾಗೂ ಪರೋಕ್ಷ ಚುನಾವಣೆಗಳಿಗೆ ಅವಕಾಶ ಮಾಡಿಕೊಟ್ಟಿತು.

ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಇಂದು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆ ಅತ್ಯಂತ ಇತ್ತೀಚಿನದಾಗಿದೆ. ಈ ಕ್ಷೇತ್ರ 1994ರಿಂದ ಮಹತ್ವ ಮತ್ತು ಪ್ರಗತಿಯನ್ನು ಹೊಂದುತ್ತಿದೆ. ಈ ಹಿನ್ನೆಲೆಯಲ್ಲಿ ಮಾಹಿತಿ ತಂತ್ರಜ್ಞಾನದ ಮುನ್ನಡೆಯೊಂದಿಗೆ ಮಾಹಿತಿಯನ್ನು ನಾಲ್ಕನೇಯ ಉತ್ಪಾದನಾ ಘಟಕವೆಂದು ಪರಿಗಣಿಸಲಾಗಿದೆ. ಇಂದು ಅರ್ಥವ್ಯವಸ್ಥೆಯಲ್ಲಿ ತಂತ್ರಜ್ಞಾನ ಕ್ಷೇತ್ರದ ಉದ್ದಿಮೆಗಳನ್ನು ನಾಲ್ಕನೇಯ ವಲಯದ ಉದ್ದಿಮೆಗಳೆಂದು ಪರಿಗಣಿಸಲಾಗಿದೆ. ಈ

ಕ್ಷೇತ್ರವು ಅತ್ಯಧಿಕ ಗುಣಮಟ್ಟದ ಉದ್ಯೋಗವಕಾಶಗಳನ್ನು ಸೃಷ್ಟಿಸಿದೆಯಲ್ಲದೆ ರಾಷ್ಟ್ರೀಯ ಆದಾಯದ ಹೆಚ್ಚಳ ಮತ್ತು ರಫ್ತು ಹೆಚ್ಚಳಕ್ಕೂ ಕಾರಣವಾಗಿದೆ. ಈ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವ್ಯಾಪಕವಾಗಿ ಮಹಿಳೆಯರು ತೊಡಗಿಸಿಕೊಂಡಿದ್ದು ವಿಶೇಷ ಸಾಧನೆ ಮಾಡುತ್ತಿದ್ದಾರೆ. ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ವಿಷಯವನ್ನು ಆಧುನಿಕ ಉನ್ನತ ತಂತ್ರಜ್ಞಾನದ ಪ್ರಭಾವದಿಂದ ಕ್ಷಣಮಾತ್ರದಲ್ಲಿ ತಿಳಿಯುವಂತಾಗಿದೆ. ಇದರ ಪರಿಣಾಮವಾಗಿ ಇಡೀ ಜಗತ್ತನ್ನೇ ಕಿರಿದಾಗಿಸಿದೆ. ಭಾರತದಲ್ಲಿ ಟೆಲಿಕಾನ್ಫರೆನ್ಸ್, ಟೆಲಿಕಮ್ಯುನಿಕೇಷನ್, ಬ್ಯಾಂಕಿಂಗ್, ಶಾಪಿಂಗ್, ಶಿಕ್ಷಣ, ಆರೋಗ್ಯ, ಡಾಟಾ ಎಂಟ್ರಿ ಟೆಲಿಮೆಡಿಸಿನ್, ಮುಂತಾದ ವಿಭಾಗಗಳಲ್ಲಿ ಮಹಿಳೆಯರಿಗೆ ಉದ್ಯೋಗಗಳು ಸೃಷ್ಟಿಯಾಗಿವೆ. ಇಂಜಿನಿಯರಿಂಗ್ ಪದವೀಧರರು, ಸ್ನಾತಕೋತ್ತರ ಪದವೀಧರರು ಮತ್ತು ತಂತ್ರಜ್ಞಾನದಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳಲ್ಲಿ ಜ್ಞಾನ ಪಡೆದುಕೊಂಡವರು ಹಾಗೂ ತಾಂತ್ರಿಕ ಕೌಶಲ್ಯಗಳನ್ನು ಕಲಿತುಕೊಂಡವರು ಸಹ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗ ಪಡೆದುಕೊಳ್ಳುತ್ತಿದ್ದಾರೆ.

ಇಂದು ಉದ್ಯೋಗಸ್ಥ ಮಹಿಳೆಯರ ಸಂಖ್ಯೆ ಗಣನೀಯವಾಗಿ ಎಲ್ಲ ಕ್ಷೇತ್ರಗಳಲ್ಲಿ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲಿ ಪುರುಷನು ಸ್ತ್ರೀಯ ಜೊತೆ ಹೊಂದಾಣಿಕೆಯ ಮನೋಭಾವ ಬೆಳೆಸಿಕೊಳ್ಳುತ್ತಿರುವುದನ್ನು ನಾವು ಕಾಣುತ್ತೇವೆ. ಮನೆಗಳಲ್ಲಿ ಅಡುಗೆ, ಬಟ್ಟೆ ತೊಳೆಯುವುದು, ಮನೆಗೆಲಸ ಮಾಡುವುದು ಸರಿಸಮನಾಗಿ ಗಂಡ ಮತ್ತು ಹೆಂಡತಿ ಹಂಚಿಕೊಂಡು ಮಾಡುವ ಸಂಸಾರದ ನೊಗ'ಕ್ಕೆ ಇಬ್ಬರು ಸಹಕರಿಸುತ್ತಿರುವುದನ್ನೂ ನಾವು ಕಾಣುತ್ತಿದ್ದೇವೆ. ಗಂಡು ಹೆಣ್ಣು ಇಬ್ಬರೂ ಸಾಮಾಜೀಕರಣದ ಬಲಿಪಶುಗಳು. ಹೀಗಾಗಿ ಬದಲಾವಣೆ ಇಬ್ಬರಲ್ಲೂ ಆಗಬೇಕಿದೆ, ಲಿಂಗತ್ವ ಸೂಕ್ಷ್ಮತೆಯನ್ನು ಇಬ್ಬರಲ್ಲೂ ಮೂಡಿಸಬೇಕಿದೆ. ಹಾಗಾದಾಗ ಮಾತ್ರ ಸಮಾಜದ ಎಲ್ಲ ಸ್ತರ'ಗಳಲ್ಲಿ ಸಂಘ–ಸಂಸ್ಥೆಗಳಲ್ಲಿ ಮಹಿಳೆಯರು ಭಾಗವಹಿಸುವ ಪ್ರಮಾಣವು ಹೆಚ್ಚುತ್ತದೆ. ಅದರ ಜೊತೆಗೆ ಗುಣಾತ್ಮಕವಾದ ಅಂಶಗಳು ಸಮಾಜಕ್ಕೆ ಮಾದರಿಯಾಗುತ್ತವೆ.

ಒಟ್ಟಾರೆಯಾಗಿ ಮಹಿಳೆ ತಾಯಿ, ಹೆಂಡತಿ, ಅಕ್ಕ, ತಂಗಿ ಇವರಲ್ಲಿ ಒಂದು ಮಗುವಿನ ಮೊದಲ ಗುರುವಾಗಿ ಕಂಡುಬರುತ್ತಾಳೆ. ಜೀವನದ ಎಲ್ಲಾ ವಿಸ್ತಾರದ ಸ್ಥಾನವನ್ನು ತುಂಬಬಲ್ಲವಳಾಗಿದ್ದಾಳೆ. ಹಾಗೆಯೇ ಆಧುನಿಕ ಜಗತ್ತಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಶೇ.33ರಷ್ಟು ಮಾತ್ರವಲ್ಲದೆ ಶೇ.50ರಷ್ಟು ಮೀಸಲಾತಿ ನೀಡಬೇಕಾದ ಅನಿರ್ವಾಯತೆ ಇದೆ ಎಂದು ಹೇಳಿದರು. ಅದು ಸಮರ್ಪಕವಾಗಿ ಜಾರಿಗೆ ಬರಬೇಕಾದರೆ ಸ್ಥಳೀಯ ಚುಣಾವಣೆಗಳಲ್ಲಿ ಈ ಮೀಸಲಾತಿಯ ಪ್ರಕಾರ ಮಹಿಳೆಯರು ಸ್ಪರ್ಧಿಸಿ ಜಯಗಳಿಸಿ ಬಂದಾಗ ಅವರ ಎಲ್ಲಾ ಅಧಿಕಾರವನ್ನು ಅವಳ ಪತಿ  ನಿಭಾಯಿಸುವುದನ್ನು ಕಾಣುತ್ತೇವೆ. ಆದ್ದರಿಂದ ಬರೀ ಮೀಸಲಾತಿಗೆ ಪಟ್ಟು ಹಿಡಿಯುವುದಕ್ಕಿಂತ ಅವಳಿಗೆ ಸರಿಯಾದ ಶಿಕ್ಷಣ, ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ಸಬಲೀಕರಣದ ಜೊತೆ ಜಾಗೃತಿ ಮೂಡಿಸುವ ಕಾರ್ಯ ಅತ್ಯಗತ್ಯವಾಗಿ ಆಗಬೇಕಾಗಿದೆ. ಹಾಗಾದಾಗ ಮಾತ್ರ ಈ ಸಮಾಜದಲ್ಲಿ ಪುರುಷ ಮತ್ತು ಮಹಿಳೆಯರ ಸಮಾನ ಸಹಭಾಗಿತ್ವದ ಬದುಕು ಸಾಧ್ಯವಾಗುತ್ತದೆ. ಇದರ ಜೊತೆಗೆ ದೃಶ್ಯ ಮಾದ್ಯಮಗಳು ಹೆಣ್ಣನ್ನು ಚಿತ್ರಿಸುವ ಪರಿ ತೀರ ಕೆಳಮಟ್ಟದ್ದಾಗಿರುವ' ಸನ್ನಿವೇಶಗಳನ್ನು ನಾವು ಕಾಣುತ್ತಿದ್ದೇವೆ. ಹೆಣ್ಣನ್ನು ಭೋಗದ ವಸ್ತುವಾಗಿ ನೋಡುತ್ತಿರುವುದು ಮಾಧ್ಯಮದ ಮಾಡಲ್‌ಗಳ ನೆಪದಲ್ಲಿ. ಅವಳನ್ನು ಅಶ್ಲೀಲವಾಗಿ ಚಿತ್ರಿಸುವ ರೀತಿ ಸರಿಯಾದುದಲ್ಲ. ವಿಪರ್ಯಾಸವೆಂದರೆ, ಅದರ ನಿರೂಪಕಿ ಕೂಡ ಒಂದು ಹೆಣ್ಣಾಗಿ ಯಾವುದೇ ಮುಜುಗರಕ್ಕೆ ಒಳಗಾಗದೇ ಮಾತನಾಡುತ್ತಿರುತ್ತಾಳೆ. ಎಲ್ಲೋ ಒಂದು ಕಡೆ ಮಾಧ್ಯಮಕ್ಕಿರುವ ಅಭಿವ್ಯಕ್ತಿ ಸ್ವಾತಂತ್ರ್ಯವು ಹಾದಿ ತಪ್ಪುವ ಕೆಲಸವನ್ನು ಮಾಡುತ್ತಿರುತ್ತದೆ. ಸಮಾಜದ ಆಶಯಗಳಿಗೆ ತಕ್ಕಂತೆ ಕಾರ್ಯಕ್ರಮ ರೂಪಿಸುವ ಮತ್ತು ಪ್ರಸಾರ ಮಾಡುವ ಜವಾಬ್ದಾರಿಯುತ ಹೊಣೆಗಾರಿಕೆ ವಿವಿಧ ಚಾನಲ್‌ಗಳನ್ನು ನಿರ್ವಹಿಸುವವರ ಮೇಲಿದೆ. ಒಂದು ವಿಚಾರವನ್ನು ಬಿತ್ತ'ರಿಸುವಾಗ ಅಥವಾ ಜನತೆಗೆ ಮುಟ್ಟಿಸುವಾಗ ಮಹಿಳೆಯರನ್ನು ಸಭ್ಯರೀತಿಯಲ್ಲಿ ನಡೆಸಿಕೊಳ್ಳುವ ಅನಿವಾರ್ಯತೆ ಎಂದಿಗಿಂತ ಈ ಹೊತ್ತು ತುಂಬ ಪ್ರಸ್ತುತವಾಗಿದೆ.

## ಪರಾಮರ್ಶನ ಗ್ರಂಥಗಳು


ಆಧುನಿಕ ಭಾರತದ ಮಹಿಳೆ, 2001–ಎಚ್.ಜೆ.ಲಕ್ಕಪ್ಪಗೌಡ

ಮಹಿಳೆ ಪಡಿಯಚ್ಚುಗಳು, ಸಮಾಜೀಕರಣ ಮತ್ತು ಪಾಲ್ಗೊಳ್ಳುವಿಕೆ, ಡಾ. ಸಬಿಹಾ ಭೂಮೀಗೌಡ

ಮೀಸಲಾತಿ ಹಾಗೂ ಮಹಿಳೆಯರು– ಡಾ.ಎನ್. ಡಿ. ಯೋಗರಾಜ್

ಮಹಿಳಾ ಅಧ್ಯಯನದ ನೆಲೆಗಳು ಸಂಪಾದಕ– ಡಾ.ಸಿ.ಡಿ. ವೆಂಕಟೇಶ್

# ಜನಪದ ಸಾಹಿತ್ಯ ಮತ್ತು ಮಹಿಳಾ ಸಬಲೀಕರಣ

ಡಾ. ಸುಶೀಲಾ ನೆಲ್ಲಿಸರ

ಜಾನಪದವೆನ್ನುವುದು ಎಂದೋ ಆಗಿಹೋದ ಗತಕಾಲದ ಸಂಗತಿಯಲ್ಲ. ಭೂತಕಾಲದ ವಸ್ತು ವಿಷಯಗಳೊಂದಿಗೆ ವರ್ತಮಾನದ ಸಂಗತಿಗಳನ್ನು ಸೇರಿಸಿಕೊಂಡು, ಅಂದಂದಿನ ಜೀವನ ವಿಧಾನಕ್ಕೆ ಅನುಕೂಲವಾಗುವಂತೆ ವೈಚಾರಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಅಂಶಗಳನ್ನು ನೀಡುತ್ತಾ ಬಂದಿರುವ ವಟವೃಕ್ಷವಾಗಿದೆ. ಇದು ಸಂಸ್ಕೃತಿ ಮತ್ತು ಪರಂಪರೆಗೆ ಸಂಬಂಧಿಸಿದ್ದಾದರೂ ಸಮಷ್ಟಿಯಿಂದ ಅಂಗೀಕರಿಸಲ್ಪಟ್ಟ ಆಚಾರ–ವಿಚಾರ–ಸಂಪ್ರದಾಯ, ನಂಬಿಕೆ–ನಡವಳಿಕೆಗಳನ್ನು ಒಳಗೊಂಡುದಾಗಿದೆ. ಇಲ್ಲಿಯ ಸಾಮೂಹಿಕ ಚಿಂತನೆಗಳು ಆಯಾ ಸಮೂಹದ ಆಶೋತ್ತರಗಳನ್ನು ಅಭಿವ್ಯಕ್ತಿಸುತ್ತವೆನ್ನುವುದನ್ನು ಅವರವರ ಜೀವನ ವಿಧಾನದಲ್ಲೇ ಗುರುತಿಸುತ್ತೇವೆ. ಇಂಥ ಸಮುದಾಯದ ಬದುಕಿನ ವಿವರಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕು.

ಈಗ ನಡೆದಿರುವ ಅಧ್ಯಯನಗಳಲ್ಲಿ ದೇಶಭಕ್ತಿ ನಾಡಪ್ರೇಮ, ಹೆಣ್ಣಿನ ಪಾತಿವ್ರತ್ಯ, ತ್ಯಾಗ ಬಲಿದಾನ, ಆದರ್ಶಮಯ ಜೀವನಕ್ಕೆ ಹೆಚ್ಚು ಒತ್ತು ನೀಡಿದ್ದೇವೆ. ಉದಾಹರಣೆಗೆ, ಹೆಣ್ಣನ್ನು ಕುರಿತ ಪರಿಕಲ್ಪನೆಗಳಲ್ಲಿ ಆಕೆಯನ್ನು ಆದರ್ಶಯುತವಾಗಿ ಮಾಡಿ ಮಾತೆ, ಭೂದೇವಿ, ಸಿರಿದೇವಿ ಇತ್ಯಾದಿಯಾಗಿ ಏಕಮುಖ ಗ್ರಹಿಕೆಯಲ್ಲಿ ಕಂಡಿದ್ದಾರೆಯೇ ವಿನಃ, ಆಕೆಯೂ ಕೂಡ ಪುರುಷನಂತೆ ಕಾಮ–ಪ್ರೇಮ, ಆಸೆ–ಆಕಾಂಕ್ಷೆ, ಹಟ–ಚಟಗಳೆಲ್ಲವುಗಳನ್ನೊಳಗೊಂಡವಳೆಂದು ಹೇಳಲು ಪ್ರಯತ್ನಿಸಿಲ್ಲ. ಹೆಣ್ಣು ಮಾಯೆಯಲ್ಲ ಎಂದರು ಶರಣರು. ಆದರೆ ಸಮಾಜ ಹೆಣ್ಣನ್ನು ಕಡೆಗಣಿಸಿ 'ಹೆಣ್ಣು ಹುಟ್ಟಿದರೆ ಹೆಗ್ಗಣ್ಣುತ್ತಿದಂತೆ' ಎಂದು ನಿಂದಿಸಿ ಬಳೆತೊಟ್ಟ ಹೆಣ್ಣಿಗಿಂತ 'ಮೀಸೆ ಹೊತ್ತ ಗಂಡಸೇ ಶ್ರೇಷ್ಠ' ಎಂದು ಪ್ರತಿಪಾದಿಸುತ್ತಾ ಹೆಣ್ಣಿನ ಭಾವನೆಗಳನ್ನು ಹಳಿದು ತುಳಿಯಿತು.

ನೀರಿನಲ್ಲಿರುವ ಮೀನಿನ ಹೆಜ್ಜೆಯನ್ನಾದರೂ ಗುರುತಿಸಬಹುದು ಹೆಣ್ಣಿನ ಮನಸ್ಸನ್ನು ಅರಿಯಲಾಗದು ಎಂಬ ಸಂದೇಹವಾದದಿಂದಲೇ ಆಕೆಯನ್ನು ಕಂಡರು. ದುಡಿಯುವ ಗಂಡಸಿಗಿರುವ ಬೆಲೆ, ಮನೆಯೊಳಗಿನ ಹೆಣ್ಣಿನ ಕೆಲಸಕ್ಕೆ ಇಲ್ಲದಾಯ್ತು. ಮಕ್ಕಳನ್ನು ಹೊತ್ತು ಹೆತ್ತು ಸಾಕಿ ಸಲಹಿ ನೀತಿ ಪ್ರೀತಿಗಳನ್ನು ತುಂಬುವ ಇವಳ ಲಾಲನೆ ಪಾಲನೆಗೆ ಪುರಸ್ಕಾರ ದೊರಕದಾಯ್ತು.

ಇನ್ನು ಬೌದ್ಧಿಕ ನೆಲೆಯಲ್ಲಿ ಆಕೆಯನ್ನು ಗುರುತಿಸಿದ್ದೆಷ್ಟು? ಜಾನಪದ ಸೃಷ್ಟಿ ಕಾರ್ಯದಲ್ಲಿ ಬಹುಪಾಲು ಕೊಡುಗೆ ಇವಳದ್ದೇ ಆದರೂ ಆಕೆಯ ಶ್ರಮ ಗೌಣವಾಗಿ, ಪರಿಭಾವಿಸುವ ಕ್ರಮ ಗಂಡಿನ ಮೂಲಕವೇ ನಡೆದುದು ವಿಪರ್ಯಾಸವೇ ಸರಿ. ತ್ವರಿತವಾಗಿ ಬದಲಾಗುತ್ತಿರುವ ಈ ಪ್ರಕ್ರಿಯೆಯಲ್ಲಿ ಹೆಣ್ಣು, ಹೆಣ್ತನ, ಅಲ್ಲಿ ಹುಟ್ಟುವ ಭಾವನೆಗಳೇನೆಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ಹೆಣ್ಣು, ವೇಶ್ಯೆ, ರಾಕ್ಷಸಿ, ಬಂಜೆ, ಗಯ್ಯಾಳಿ ಹೀಗೆ ಅನಂತ ರೂಪದಲ್ಲಿ ಕಂಡದ್ದೇ ಹೆಚ್ಚು. ಸಂಸ್ಕೃತಿ ದೃಷ್ಟಿಯಿಂದ ಆರೋಪಿಸಲ್ಪಡುವ ರೀತಿ ಏನು? ಅವಳು ಸಾಂಸ್ಕೃತಿಕವಾಗಿ ಕಟ್ಟಿಕೊಡುವುದೇನು? ಗೃಹಿಣಿಯಾಗಿ, ಕನ್ಯೆಯಾಗಿ ಅವಳ ಭಾವನೆಗಳೇನು? ಮುಂತಾಗಿ ಆಲೋಚಿಸಲೇ ಇಲ್ಲ. ಮಾತೃತ್ವಕ್ಕೇ ಹೆಚ್ಚು ಒತ್ತು ನೀಡಿ ಬಂಜೆ ಹೆಣ್ಣನ್ನು ನಿಕೃಷ್ಟವಾಗಿ ಕಂಡ ಸಮಾಜ ತಾಯ್ತನಕ್ಕೆ ಅಥವಾ ಬಂಜೆತನಕ್ಕೆ ಕಾರಣವನ್ನೇ ಕಂಡುಕೊಳ್ಳಲಿಲ್ಲ. ಸ್ತ್ರೀ, ಸ್ತ್ರೀಯ ನೆಲೆಯಲ್ಲೇ ಹೇಗೆ ಶೋಷಿತಳಾದಳೆಂಬುದರ ಸಾಮಾಜಿಕ ಅಧ್ಯಯನಕ್ಕೆ, ಆರ್ಥಿಕ ನೆಲೆಯೊಂದಲ್ಲದೆ ಜಾತಿ, ವರ್ಗ, ಎಂದು ನೋಡುತ್ತಾ, ಹೋಗಿದ್ದಾರೆಯೇ ವಿನಃ ಮಾನವೀಯ ಬಿಡುಗಡೆಯ ಆಶಯಗಳೇ ಕಣ್ಮರೆಯಾಗಿವೆ. ಸಾವು ಮತ್ತು ಸೃಷ್ಟಿಯ ಸಂದರ್ಭಗಳನ್ನು ಈಕೆಯೊಂದಿಗೆ ತಳುಕು ಹಾಕಲಾಯ್ತು. ವ್ಯಕ್ತಿಯೊಳಗಿನ ಸಂತೃಪ್ತಿ ಮೂಲದ ಅರ್ಥ ಹುಡುಕಲಿಕ್ಕೆ ಹೋಗಿ, ಹೆಣ್ಣು ಮತ್ತು ಗಂಡನ್ನು ಪೃಥಕ್ಕರಿಸಿದರು. ಹೆಣ್ಣು, ಗಂಡಿನ ಉಪಭೋಗಕ್ಕೇ ಇರುವುದು. ಗಂಡಿಗಿರುವ ಸಹಜವಾದ ಜೀವನಶೈಲಿ ಇವಳಿಗಿರಬಾರದು. ಹಾಗೇನಾದರೂ ಇದ್ದರೆ ಬೇರೊಂದು ಅರ್ಥ ಕಲ್ಪಿಸುತ್ತಾರೆ. ಕೌಟುಂಬಿಕ ಬದ್ಧತೆಯೆಂದರೆ, ಪ್ರೀತಿ ಇರುವವರೆಗೆ ನಿಷ್ಠೆ ಇರಬೇಕು. ಲೈಂಗಿಕ ಆಸಕ್ತಿಗಳನ್ನು ಮುಕ್ತವಾಗಿ ಪ್ರಕಟಿಸುವಂತಿಲ್ಲ. ಸಾಮಾಜಿಕವಾಗಿ, ಧಾರ್ಮಿಕವಾಗಿ ಎಲ್ಲವೂ ಹತ್ತಿಕ್ಕಲ್ಪಟ್ಟದ್ದೇ ಆಗಿದೆ. ಹೆಂಗಸರು ಮಾಡುವ ಕೆಲವು ಆಚರಣೆಗಳನ್ನು, ಕುಣಿತಗಳನ್ನು ಮನೋವಿಶ್ಲೇಷಣಾತ್ಮಕವಾಗಿ ನೋಡಬೇಕಾದ ಅವಶ್ಯಕತೆ ಇದೆ. ಇಂತಹ ಸಂದರ್ಭಗಳ ಅನುಭವಗಳೆಂತದ್ದೆಂಬುದನ್ನು ಮುಕ್ತವಾಗಿ ಅವಳು ಎಲ್ಲೂ ಹೇಳಿಕೊಂಡೇ ಇಲ್ಲ. ಸಂಶೋಧಕರೂ ಗುರುತಿಸಲಿಲ್ಲ. ಬುಡಕಟ್ಟಿನ ಮತ್ತು ಅಲೆಮಾರಿ ಹೆಣ್ಣು ಮಕ್ಕಳಲ್ಲಿ ಕಾಣುವ ಜೀವನ ಸ್ಥೈರ್ಯ ಮತ್ತು ಲೈಂಗಿಕಾಸಕ್ತಿ ದಿಟ್ಟತನದಿಂದ ವ್ಯಕ್ತಪಡಿಸುವ ಮಾತುಗಳು, ಹಾಡುಗಳು, ಈವರೆಗಿನ ನಮ್ಮ ಮಧ್ಯಮ ವರ್ಗದ ಜನಪದ ಸಾಹಿತ್ಯದಲ್ಲಿ ಎಲ್ಲಿ ಕಂಡಿದ್ದೇವೆ ಹೇಳಿ?

ಸಂಸ್ಕೃತಿಯಲ್ಲಿ ಸ್ಥಿರತೆ ಮತ್ತು ಚಲನಶೀಲತೆ ಎರಡೂ ಒಟ್ಟಿಗೆ ಇರುತ್ತವೆಂದು ಹರ್‌ಸ್ಕೋವಿಟ್ಸ್ ಎಂಬ ವಿದ್ವಾಂಸ ಹೇಳುತ್ತಾನೆ. ಹಾಗೆಯೇ ವೈಟ್ ಎನ್ನುವ ಮತ್ತೊಬ್ಬ ವಿದ್ವಾಂಸ ಶ್ರಮದ ವಿಭಜನೆಯ ಮೂಲಕ ಜಾನಪದ ಉತ್ಪತ್ತಿಯಾಗುತ್ತದೆ ಎಂದಿದ್ದಾನೆ. ಆದರೆ ಈ ಗ್ರಹಿಕೆಗಳು ಸ್ತ್ರೀ ಪರಂಪರೆಗೆ ಎಷ್ಟರಮಟ್ಟಿಗೆ ಅನ್ವಯಿಸಿ ನೋಡಿದ್ದೇವೆಂಬುದನ್ನು ಯೋಚಿಸಬೇಕಾಗಿದೆ. 'ಅಜ್ಜಿಯೊಬ್ಬಳು' ಕಥೆ ಹೇಳುತ್ತಾಳೆಂದರೆ, ಅವಳು ಅದರಲ್ಲಿ ತನ್ನೆಲ್ಲಾ ಕನಸುಗಳು, ಕಲ್ಪನೆಗಳು, ಆಸೆಗಳು ಮುರುಟಿಹೋದ ಭಾವನೆಗಳು ಮುಂತಾದವನ್ನು ನಿರೂಪಿಸುತ್ತಾಳೆ. ಇಲ್ಲೆಲ್ಲಾ ಮಧ್ಯಮ ವರ್ಗದ ನೀತಿ, ಪ್ರೀತಿ, ತ್ಯಾಗ ಮುಂತಾದವುಗಳನ್ನು ಕಾಣುತ್ತೇವೆಯೇ ವಿನಾ ಅವಳ ಯೌವ್ವನದ ಬದುಕು, ಬಯಕೆಗಳು ಏನು? ಅಲ್ಲಿನ ಪರಿಸರ ಎಂತಹದು? ವಿನೋದ ವ್ಯಂಗ್ಯಗಳ ಅಂತರಾಳದ ನೋವಿನ ನೆಲೆ ಏನು? ಮುಂತಾಗಿ ಬದಲಾದ ಪರಿಸರಕ್ಕನುಗುಣವಾದ ಆಯಾ ಸಮಾಜದ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಅಧ್ಯಯನಗಳು ನಡೆದದ್ದು ತುಂಬಾ ವಿರಳ.

ಜನಪದ ಗೀತೆಗಳ ಸೃಷ್ಟಿಕ್ರಿಯೆ ಆಗಿರುವುದೇ ದುಡಿತದ ಸಂದರ್ಭದಲ್ಲಿ. ಆ ದಣಿವನ್ನು ನೀಗಿಸಿಕೊಳ್ಳಲು ತನ್ನ ಹೊಟ್ಟೆಯೊಳಗಿನ ಕಡು ದುಃಖವೇ ಹಾಡಾಗಿದೆ. ಇದರ ಆಳದಲ್ಲಿ ನೋವು, ನಿರಾಶೆ ದುಃಖ ಹೆಪ್ಪುಗಟ್ಟಿನಿಂತಿದೆ. "ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಮೇಲು-ಕೀಳು ಎಂಬ ವರ್ಗಬೇಧವಿಲ್ಲದೆ ಹೆಣ್ಣು ನೋವನ್ನುಂಡಿದ್ದಾಳೆ. ಬಂಜೆಯಾದಾಗ ಅಣ್ಣ,ತಮ್ಮ, ತಂದೆ, ತಾಯಿಯಿಂದ ದೂರವಾದಾಗ, ಅತ್ತಿಗೆ ನಾದಿನಿ, ಅತ್ತೆಯವರ ದಬ್ಬಾಳಿಕೆಗೆ ಸಿಕ್ಕಾಗ ಗಂಡನಿಂದ ತಿರಸ್ಕರಿಸಲ್ಪಟ್ಟಾಗ, ಸಾಮೂಹಿಕ ಒಪ್ಪಿಗೆಗೆ ಬಲಿಯಾದಾಗ, ಅನಿಷ್ಠ ಪದ್ಧತಿಗಳಿಗೆ ಕೊರಳೊಡ್ಡುವಾಗ, ಅವಳು ಅನುಭವಿಸಿದ ನೋವು ಬಿಡಿ ಬಿಡಿ ಗೀತೆಗಳಲ್ಲಿ ಹರಿದಿದೆ." (ರಂಗಾರೆಡ್ಡಿ ಪು 16)

**ಗಂಡ್ನಲ್ ಗುಣವಿಲ್ಲ**
**ಕೆಂಡದೇರ್ ತನವಿಲ್ಲ**
**ಗಡಗೇಲ್ ಅಕ್ಕಿಲ್ಲ**
**ಅಯ್ಯೆಯ್ಯೋ ಏದ್ಕೆ ನಾ ಬಂದುದೇ ಇದ್ಕೆ?**
**ಹೆಣ್ಣಿನ ಗೋಳುಟ್ಟೆ ಬನ್ನಿಯ ಮರಬೆಂದೋ**
**ಅಲ್ಲಿ ಸಂನ್ಯಾಸಿ ಮಠ ಬೆಂದೋ ಹಾರಾವ್ರ**
**ಪಂಚಾಂಗ ಕತ್ತಿ ಉರಿದಾವೋ**

ಸಾಮಾಜಿಕ ಕಟ್ಟುಪಾಡುಗಳು, ಶಾಸ್ತ್ರ, ಸಂಪ್ರದಾಯಗಳು ಹೆಣ್ಣಿನ ಒಡಲನ್ನು ಉರಿಸುತ್ತಿರುವ ಚಿತ್ರ ಇಲ್ಲಿದೆ. ಧರ್ಮ ಮತ್ತು (ಕತ್ತಿ) ಅಧಿಕಾರಶಾಹಿ ಮುಂತಾದವೆಲ್ಲವೂ ಹೆಣ್ಣಿನ ಗೋಳಿಗೆ ಸಿಕ್ಕು ಉರಿದು ಹೋಗುತ್ತಿವೆ ಎಂಬ ಅವಳ ಉದ್ಗಾರ ತೀವ್ರತರವಾದ ನೋವನ್ನು ಪ್ರಕಟಿಸುವಂಥದ್ದಾಗಿದೆ. ಸಿಟ್ಟು ಬಂದಾಗ ಆ ಯಮನನ್ನೂ ಅವಳು ತರಾಟೆಗೆ ತೆಗೆದುಕೊಳ್ಳುತ್ತಾಳೆ.

**ಒಬ್ಬಳನ್ನು ಅಳಸೀದ, ಒಬ್ಬಳನ್ನು ನಗಿಸೀದ**

**ಇಬ್ಬಂದಿಕಾರ ಜವರಾಯ್ನ ಮಗ್ಗುಲಿಗೆ**

**ನೆಗ್ಗಲು ಮುಳ್ಳು ಮುರಿಯಾಲಿ**

ದೇವತೆಯಾದರೇನು? ಮನುಷ್ಯ ಮಾತ್ರದ ಹೆಣ್ಣಿನಿಂದ ಶಾಪ ಸಿಂಚನವಾಗುತ್ತಿರುವ ಅಪರೂಪದ ಗೀತೆ ಇದು. ಅವಳ ಎದೆಯಾಳದ ನೋವು ಈ ಗೀತೆಯಲ್ಲಿ ಹೊಮ್ಮಿದೆ. ಇಡೀ ಕುಟುಂಬದ ಸದಸ್ಯರೆಲ್ಲರನ್ನೂ ಹೆಣ್ಣು ಪ್ರೀತಿಯಿಂದ ಕಂಡಿದ್ದಾಳೆ. ಅಕ್ಕರೆಯಿಂದ ಸಲಹಿದ್ದಾಳೆ. ಅಂತಹ ವೇಳೆ 'ಸಾವು' ಇದ್ದಕ್ಕಿದ್ದಂತೆ ಬಂದರೆ, ಆ ಗರತಿಗೇನಾಗಿರಬೇಡ? ಒಳ ಹೊರಗೆ ಒಂದೇ ಸುಮ್ಮನೆ ದುಡಿದು, ಇಡೀ ಸಂಸಾರದ ಜವಾಬ್ದಾರಿಯನ್ನೇ ಹೊತ್ತು ಎಲ್ಲರಿಗೂ ಸುಖವನ್ನೇ ಕೊಟ್ಟರೂ ತಾನು ಮಾತ್ರ ಕಣ್ಣೀರಲ್ಲೇ ಕೈ ತೊಳೆಯುತ್ತಿರುತ್ತಾಳೆ.

ಕೆಲವು ಬುಡಕಟ್ಟು ಜನಾಂಗಗಳ ಮತ್ತು ಸಂಸ್ಕೃತೀಕರಣಗೊಂಡ ಜನಾಂಗಗಳ ಹೆಣ್ಣಿನ ಭಾವನೆಗಳಲ್ಲಿ ಭಿನ್ನತೆಯನ್ನು ಸ್ಪಷ್ಟವಾಗಿ ಗುರುತಿಸುವುದರ ಮೂಲಕ ಹೆಣ್ಣಿನ ಸಾಂಪ್ರದಾಯಿಕ ಸಿದ್ಧ ಚಿತ್ರಕ್ಕಿಂತ ವಿಭಿನ್ನವಾದ ಚಿತ್ರವನ್ನು ಕಂಡುಕೊಳ್ಳಲು ಸಾಧ್ಯವಿದೆ. ಬಗ್ಗರು, ಗೋಸಾಯಿಗಳು, ಹಕ್ಕಿಪಿಕ್ಕ, ಹಾವಾಡಿಗರು, ಜೋಗಿಗಳು, ದೊಂಬರು, ಸಿದ್ಧರು ಇನ್ನೂ ಮುಂತಾದ ಜನಾಂಗಗಳಲ್ಲಿನ ಹೆಣ್ಣು ತನ್ನ ಸೀಮಿತ ಕೌಟುಂಬಿಕ ಚೌಕಟ್ಟಿನಲ್ಲಿಯೇ ಬದುಕು ನಡೆಸುತ್ತಾಳಾದರೂ, ವ್ಯಾಪಾರ ವ್ಯವಹಾರ, ನೀತಿ ನಿಯಮಗಳ ಅನುಸರಣೆ, ಇವುಗಳಲ್ಲಿ ಗಂಡು ಹೆಣ್ಣಿನ ಮಧ್ಯೆ ಮಾನವೀಯ ಹೊಂದಾಣಿಕೆ ಇರುತ್ತದೆ. ಇಷ್ಟವಿಲ್ಲದ ಗಂಡನೊಡನೆ ಸಂಸಾರ ಸಾಧ್ಯವಿಲ್ಲವೆಂದಾಗ, ಇಷ್ಟಪಡುವ ಮತ್ತೊಬ್ಬ ಜೊತೆಗಾರನನ್ನು

ಹುಡುಕಿಕೊಳ್ಳುತ್ತಾಳೆ. ವೈಧವ್ಯದ ಬಾಧೆಯೆಂಬುದು ಇರುವುದಿಲ್ಲ. ಗಂಡ ಸತ್ತರೆ ಕೂಡಾವಳಿ ಮುದುವೆಯುಂಟು. ಬಂಜೆತನದ ಸಮಸ್ಯೆ ಇವರಿಗೆ ಕಾಡುವುದೇ ಇಲ್ಲ. ಏಕೆಂದರೆ ಮದುವೆಯಾಗಿ ಮೊದಲ ರಾತ್ರಿಗೆ ಇಬ್ಬರನ್ನು ಸೇರಿಸುವಾಗ

**ಬಿತ್ತೋಣ ಬಾರೋ ಮಾವ ಬಿತ್ತೋಣ ಬಾರೋ**
**ಇಬ್ಬರೂ ಕೂಡಿ ಬೀಜ ಬಿತ್ತೋಣ**

ಎಂದು ಹಾಡುತ್ತಾ ಹೊಲದಲ್ಲಿ ಇಬ್ಬರೂ ಉತ್ತಿ ಬಿತ್ತಿ ಬೀಜ ಹಾಕುವ ಸಂಪ್ರದಾಯ ಮಾಡಿಸುತ್ತಾರೆ. ಇದರಿಂದ ಸಂತಾನಕ್ರಿಯೆ ಹೆಣ್ಣಿಗಷ್ಟೇ ಸಂಬಂಧಿಸಿದ್ದಲ್ಲವೆಂಬುದನ್ನು ಆಚರಣೆ ಮೂಲಕ ಸ್ಪಷ್ಟಪಡಿಸುತ್ತಾರೆ. ಒಂದು ವೇಳೆ ಮದುವೆಯಾದ ತನ್ನ ಗಂಡ ನಪುಂಸಕನಾಗಿದ್ದರೆ, ಧೈರ್ಯವಾಗಿ ಪ್ರತಿಭಟಿಸುತ್ತಾ–

ಎಂತವ್ನಿಗೆ ಕೊಟ್ಟೆವ್ವ ಕ್ವಾಡಗೆ
ಉಲ್ಡುಲ್ದೇ ಹೋಗುತಾನೆ ಕ್ವಾಣೆಗೆ

ಎಂದು ಮೂದಲಿಸುತ್ತಾಳೆ. ಆದರೆ ಇಂಥ ಮುಕ್ತ ವಾತಾವರಣವಿಲ್ಲದ ಲೈಂಗಿಕ ಸ್ವಾತಂತ್ರ್ಯವಿಲ್ಲದ ಮೇಲುವರ್ಗದ ಗರತಿಯಾದವಳು ಒಳಗೊಳಗೇ ಕೊರಗುತ್ತಾಳೆ. ಪ್ರೇಮಿಸಿದವನನ್ನು ಮದುವೆಯಾಗದೆ, ಮನಸ್ಸೊಬ್ಬನಿಗೆ, ದೇಹವನ್ನೊಬ್ಬನಿಗೆ ಅರ್ಪಿಸಿ–

ದನಿಹೆಂಗೆ ತೋರಾಲಿ ಕದಹೆಂಗೆ ತೆಗೆಯಾಲಿ
ಮಗ್ಗುಲಲ್ಲವನೆ ಮನೆ ಪುರುಷ ನನ ಗೆಣೆಯ
ಮೊಗ್ಗಾಗಿ ಬಾರೋ ತುರುಬೀಗೆ
ಗಿಣಿಯಾಗಿ ಬಾರೋ ಹೊಸಲೀಗೆ

ಎಂದು ಕಣ್ಣೀರಿಡುತ್ತಾಳೆ. ಆದರೆ ಬುಡಕಟ್ಟು ಜನಾಂಗದಲ್ಲಿನ ಹೆಣ್ಣು ಅಕ್ರಮ ಪ್ರಣಯ ಸಂಬಂಧವನ್ನು ಸ್ವಲ್ಪವೂ ಬಚ್ಚಿಡದೆ ಪ್ರಕಟಿಸುವ ಒಂದು ಗೀತೆ ಹೀಗಿದೆ.

ಗೆಣೆಯ ಬರುತಾನಂತ ಗೆಣಸಿನೋಳಿಗೆ ಮಾಡಿ
ನೆನಸೀದ ಗೆಣೆಯ ಬರಲಿಲ್ಲ ಮನಿಯಾನ
ತಿಂದೋಡಿ ಗಂಡ ತಿನ ಏಳ–ಎನ್ನುತ್ತಾಳೆ.

ಹೀಗೆಯೇ ಸೋಮಾರಿ ಗಂಡನ ಭಂಡತನವನ್ನು ಛೇಡಿಸುವ ಗೀತೆ ಬಹಳ ಸ್ವಾರಸ್ಯವಾಗಿದೆ. "ಎವ್ವಾ ಎವ್ವಾ ನಾ ಹೆಂಗೆ ಮಾಡಲೇ, ಇಂಥಹ ಗಂಡಾನ ಕಟ್ಟಿಕೊಂಡು ಹೇಗೆ ಬಾಳುವೆ ಮಾಡಲೆ? ಎಂದು ಕೇಳುತ್ತಾ ಮೂರು ಮುದ್ದೆ ಉಣ್ಣುತ್ತಾನೆ. ಮೂಲೇಲಿ ಕೂರುತ್ತಾನೆ. ಊರು ಮುಂದಕೆ ಹೋಗಂದ್ರೆ ಊರುಗೋಲ ಬೇಡುತ್ತಾನೆ. ಇಂತ ಮುಕ್ಕುನ್ನ ಮೂಳುನ್ನ ಕಿವಿ ಹರುಕನ್ನ ಕೆಪ್ಪನ್ನ" ಕಟ್ಟಿಕೊಂಡು ತನ್ನಿಂದ ಬಾಳುವೆ ಮಾಡಲು ಸಾಧ್ಯವಿಲ್ಲ ಎಂದು ಆತನ ದೌರ್ಬಲ್ಯಗಳೆಲ್ಲವನ್ನು ಜಗಜ್ಜಾಹೀರು ಮಾಡುವುದರೊಂದಿಗೆ ಇಂತಹ ಗಂಡರೂ ಇದ್ದರೆಂಬುದನ್ನು ತೋರಿಸಿಕೊಟ್ಟಿದ್ದಾಳೆ. ಆದ್ದರಿಂದಲೇ ಇಂಥ ಗಂಡನಿಗಿಂತ ಕಿನ್ನರಿ ನುಡಿಸುವವನ ದನಿಚೆಂದಕ್ಕೆ ಮರುಳಾಗಿ ಎಲ್ಲವನ್ನು ತೊರೆದು ಅವನ ಹಿಂದೆಯೇ ಹೋಗಿಬಿಡುವ ದಿಟ್ಟ ಹೆಣ್ಣಾಗಿ ಕಂಡು ಬರುತ್ತಾಳೆ.

ಉದ್ದಿನ ಹೊಲವ ಬಿಟ್ಟೆ
ಮುದ್ದಾಡೋ ಗಂಡನ ಬಿಟ್ಟೆ
ಕದ್ದೋಡಿ ಜೋಗಿಕ್ಕುಟ್ಟೆ ಬರಬಹುದೇ

ಕರಿಯ ಕಂಬಳಿ ತಂದು ಹೊದಿಯಲಾಗ'ದ ಮ್ಯಾಲೆ
ಅದನ್ಯಾಕೆ ತಂದೆ ಬಿಕನಾಸಿ? ಬಾಲೆಯ
ಮದುವ್ಯಾಗಿ ಗೋಳ ಕಟಗೊಂಡಿ

ಇದಕ್ಕೆ ತದ್ವಿರುದ್ಧವಾಗಿರುವ ಸಂಸ್ಕೃತಿ, ಕಟ್ಟುಕಟ್ಟಳೆಗಳನ್ನು ಕಾಣುತ್ತೇವೆ. 'ಮಲ್ಲಿಗೆ ದಂಡೆ' ಸಂಗ್ರಹದಲ್ಲಿನ ಒಂದು ಗೀತೆ ಹೆಣ್ಣನ್ನು ಕುರಿತು ಹೀಗೆ ಹೇಳುತ್ತದೆ.

ಹಣ್ಣ ಬಂದಾವ ಹಣ್ಣಾ, ಮಗಿಯ ಮಾವಿನ ಹಣ್ಣಾ ಜಾಣ
ಹಣ್ಣ ಕೊಳತೇವ ಹೆಣ್ಣಿನ ಬೆಲಿಯ ಹೇಳ ಜಾಣೆ"

ಎಂದು ವ್ಯಾಪಾರಕ್ಕೆ ಹೋದ ಗಂಡ ಮಾರುವೇಷದಲ್ಲಿ ಬಂದು ಹೆಂಡತಿಯ ಶೀಲದ ಬಗ್ಗೆ ಶಂಕಿಸಿ ಪ್ರಶ್ನಿಸಿದಾಗ ಈ ಗರತಿ ಹೇಳುವ ಮಾತುಗಳು. ಪತಿಯೇ ಪರದೈವವೆನ್ನುವ, ಮತ್ತು ಗಂಡನಿಲ್ಲದ ಬಾಲೆಗೆ ಗಂಧ ಕುಂಕುಮವ್ಯಾಕೆ ಎನ್ನುವಂತೆ ಸರ್ವವನ್ನು ಅವನಿಗೇ ಅರ್ಪಿಸಿಕೊಂಡಿರುವ ಸಮರ್ಪಣಾ ಮನೋಭಾವದ ಮಾತಾಗಿದೆ ಅಷ್ಟೇ ಅಲ್ಲದೆ–

ಬೆಲಿಯ ಹೇಳುವ ಜಾಣ ಮಲ್ಲಾಡ ದೇಶಕ್ಕೋಗಿದನಲ್ಲೋ

ತನ್ನ ದೇಹದ ಬೆಲೆ ಗಂಡನಿಗೊಬ್ಬನಿಗೆ ಮಾತ್ರ ಗೊತ್ತು. ಗಂಡನಿದ್ದರೆ ಮಾತ್ರ ತನಗೆ ಬೆಲೆ ಇದೆ ಎಂದಿದ್ದಾಳೆ. (ಕಾಪಸೆ ರೇವಪ್ಪ ಪು 13)

ಹೆಣ್ಣಿನ ಜನುಮಾನ ಮಣ್ಣು ಮಾಡಲಿಬೇಕು
ಮಣ್ಣಾಗಿ ಮರ್ತ್ಯ ಗೆದಿಬೇಕು–

ಇಂಥ ಆದರ್ಶದ ಮಾತುಗಳನ್ನೇ ಹೇಳಿ ಸ್ಥಾಪಿತ ಮೌಲ್ಯಗಳಿಗೆ ಬದ್ಧಳಾಗುವಂತೆ ಮಾಡಿದ್ದಾಳೆ. ಪ್ರತಿಭಟನೆಯನ್ನೇ ತಣ್ಣಗೆ ಮಾಡಿದ್ದಾರೆ.

ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣಿಗಾಗಿಯೇ ರೂಢಿಸಿದ ಸಾಮಾಜಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬರುವ ಮತ್ತು ಅವನ್ನೇ ಗಟ್ಟಿಗೊಳಿಸುವಂತಹ ಗೀತೆಗಳನ್ನು ಗರತಿಯ ಹಾಡು, ಮಲ್ಲಿಗೆ ದಂಡೆ, ಜೀವನ ಸಂಗೀತ ಇನ್ನೂ ಮುಂತಾದ ಸಂಕಲನಗಳಲ್ಲಿ ಕಾಣುತ್ತೇವೆ.

ಸಂಸ್ಕೃತೀಕರಣಗೊಳ್ಳುತ್ತಾ ಬಂದ ಹೆಣ್ಣು ಪುನಃ ಅವೇ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಿರುವುದು ಇಲ್ಲಿನ ವಿಪರ್ಯಾಸ. ಏಕೆಂದರೆ "ಇಂತಹ ಗುಣಗಳನ್ನು ಕಾಪಾಡಿಕೊಂಡು ಬರುವುದೇ ಆದರ್ಶ ಸ್ತ್ರೀಯ ಧ್ಯೇಯವಾಗಿರುತ್ತದೆ. ಈ ಅಂಶ ಜನಪದ ಗೀತೆಗಳ ಬೇರೆ ಬೇರೆ ಪ್ರಕಾರಗಳಲ್ಲಿ ಬೇರೆ ಬೇರೆ ಧಾಟಿಯಲ್ಲಿ ವ್ಯಕ್ತವಾಗಿದೆ." ಅತ್ತೆ ಮನೆಯ ಕಷ್ಟ, ಪ್ರೀತಿ ಒಲುಮೆಗಳ ಕೊರತೆ, ಕೈಹಿಡಿದ ಗಂಡನ ಅನಾದರ, ಕೌಟುಂಬಿಕ ಕಿರುಕುಳ ದುಃಖದ ಮೂಲಗಳು. ಹೆತ್ತ ತಾಯಿಯೊಬ್ಬಳನ್ನು ಬಿಟ್ಟು ತನ್ನ ಕಷ್ಟಕ್ಕೆ ಸ್ಪಂದಿಸುವ ಜೀವಿಗಳೂ ಇಲ್ಲ. ಹೀಗಿದ್ದರೂ ನೆನೆಸಿಕೊಂಡಾಗ ತವರುಮನೆಗೆ ಹೋಗುವ ಅವಕಾಶವೂ ಇಲ್ಲ."

ಸಕ್ಕರಿ ಹೇರಿಕೊಂಡು ಸೊಲಗಕ್ಕೋಗೋ ಜಾಣಾ
ನಮ್ಮವ್ವಗೇಳೋ ಮರೀಬ್ಯಾಡ ಅತ್ತಿಮನಿ
ಬೆಳದಿಂಗಳು ನಮಗೆ ಬಿಸಲಾಯ್ತು

ಬಂದದ್ದು ಬರಲಿ ಎದೆಗೊಟ್ಟು ನಿಲ್ಲು, ಒದಗಿದರೆ ದುಃಖ ಒಳನುಂಗಿ ಎನ್ನುವ ಬುದ್ಧಿಮಾತೇ ವಿನಾಃ ಬೇರೇನೂ ಪರಿಹಾರವಿಲ್ಲ.

ಬಿಡಿಗೀತೆಗಳಲ್ಲಿ ಪಾತಿವ್ರತ್ಯ, ತಾಯ್ತನದ ಪದವಿ ಬಹಳ ಮುಖ್ಯವಾಗಿ ಗೋಚರಿಸುತ್ತವೆ. ಹಾಗಾಗಿ ಇಲ್ಲಿನ ಗರತಿ 'ಮಕ್ಕಳ ಕೊಡು ಶಿವನೆ, ಮುತ್ತೈದೆತನ ಕೊಡು ಶಿವನೆ ಎಂದು ಹಂಬಲಿಸುತ್ತಾಳೆ. ಇಲ್ಲಿ ಬಹಳ ಮುಖ್ಯವಾದದ್ದೆಂದರೆ ಮದುವೆಯಾದ ಹೆಣ್ಣು ಗಂಡನಿಗಿಂತಲೂ ವಯಸ್ಸಿನಲ್ಲಿ ಚಿಕ್ಕವಳಾಗಿದ್ದು ಸಂಸಾರದ ಕಹಿ ಸಿಹಿಗಳನ್ನೆಲ್ಲಾ ಹೊಟ್ಟೆಯಲ್ಲಿಟ್ಟುಕೊಂಡು ಗಾಣದೆತ್ತಿನಂತೆ ದುಡಿಯುತ್ತಿದ್ದರೂ ಸಮಾಜ ಅವಳಿಗೆ ಕೊಡುವ ಚಿತ್ರಹಿಂಸೆ ಊಹಾತೀತ. ಆದ್ದರಿಂದಲೇ ಅವಳು ಮದುವೆಯಾದ ಕೂಡಲೇ ಮಕ್ಕಳನ್ನು ಬೇಡುತ್ತಾಳೆ. ಮಕ್ಕಳಾಗದಿದ್ದರೆ ಬಂಜೆಯ ಬದುಕು 'ಬಾಡೀಗಿ ಎತ್ತು ದುಡಿದಂಗೆ, ಬಾಳೆಲೆಯ ಹಾಸುಂಡು ಬೀಸಿ ಒಗೆದಂಗೆ' ಮಾಡುತ್ತದೆ. ಹೆಣ್ಣು ತಾನು ಬದುಕಿರುವಾಗಲೇ ಗಂಡನನ್ನು ಕಳೆದುಕೊಂಡರೆ ತಾಳಿ ಬಳೆ ಕಿತ್ತು, ತಲೆ ಬೋಳಿಸಿ ಮುಂಡೆ ಎನ್ನುವ ಮಾತು ಕೇಳಲಾರದೆ, ಬದುಕಿದ್ದೂ ಸತ್ತಂತಿರುವ ಜೀವನ ನಡೆಸಲಾಗದೆ, ಸಮಾಜದ ಕ್ರೂರ ನಡವಳಿಕೆಗಳಿಗೆ ಹೆದರಿ "ಮಾರಾಯ್ರ ಮುಂದೆ ಮರಣವ ಕೊಡು" ಎಂಬ ಸ್ಥಿತಿಗೆ ಇಳಿದಿದ್ದಾಳೆ. ಏಕೆಂದರೆ ಹೆಣ್ಣಾಗಿ ಹುಟ್ಟುವುದೇ ಶಾಪ ಎಂಬಂತಹ ಅನಿಸಿಕೆ ಬೇರೂರಿ ಬಿಟ್ಟಿದೆ.

ಹೆಣ್ಣು ಹುಟ್ಟಿದ ಮನೆ ಹೆಗ್ಗಣತ್ತಿದ್ದಾಂಗ
ಗಂಡು ಮಗ ಗಜಭೀಮ ಹುಟ್ಟಿದರ
ಚಿಲಕ ಚಿತ್ತಾರ ನಗುತಾವ

ಹೆಣ್ಣಿನ ಹೃದಯ ಸಹನೆಯ ಕರುಣೆಯ, ತಾಳ್ಮೆಯ, ಒಲ್ಮೆಯ, ತ್ಯಾಗದ ಆಗರ. ಹಾಗಾಗಿಯೇ ಪುರುಷ ಸಮಾಜದ ಮೌಲ್ಯಗಳು ಅವಳಲ್ಲಿ ನ್ಯಾಯವಾಗಿ ವಿಧೇಯತೆಯ ಬದಲು ವಿನಯವನ್ನು ಪೂಜ್ಯತೆಯ ಬದಲು ಪ್ರಜ್ಞೆಯನ್ನು ಸ್ಥಾಪಿಸಬೇಕಿತ್ತು. ವಿನಯ, ಪ್ರಜ್ಞೆ, ಸೌಜನ್ಯ, ಸ್ವಾಭಿಮಾನಗಳ ಬದಲು ವಿಧೇಯತೆ, ಪೂಜ್ಯತೆ ಶರಣಾಗತಿಯನ್ನು ಕಲಿಸಿ ದಾಸಳನ್ನಾಗಿ ಮಾಡಿತು. ಆದ್ದರಿಂದಲೇ ಅತ್ತೇಯ ಮನೆಯಲ್ಲಿ ಹತ್ತೆಂಟು ಬೈದರೂ ಅಂಜಿಕೊಂಡಿರುವುದು, ಹೆಣ್ಣು ಹುಟ್ಟಿದರೆ ಭಯಪಡುವುದು, ಕೂಲಿ ಮಾಡಿದರೂ ನನ್ನ ಗಂಡ ಬಂಗಾರ ಮಾಲು ಎನ್ನುವುದು, ಗಂಡ ಇನ್ನೊಬ್ಬಳ ಸಂಗ ಮಾಡುತ್ತಿದ್ದರೂ "ನಾ ಮೆಚ್ಚಿ ಮುಡಿವ ಪರಿಮಳದಾ ಹೂವ ಅವಳೊಂದು ಗಳಿಗೆ ಮುಡಿಯಾಲಿ" ಎನ್ನುವ ಔದಾರ್ಯ ತೋರುವುದು. ಇವೇ ಮುಂತಾದ ನೂರಾರು ಬಗೆಯ ವ್ಯವಸ್ಥೆಯ ಸುಳಿಯಲ್ಲಿ ಸಿಲುಕಿ ಸಂಸ್ಕೃತಿಯ ಸೋಗಿನಲ್ಲಿ ಮನೆತನದ ಹಿರಿಮೆಯಲ್ಲಿ, ಹಿರಿಯರು ಗಟ್ಟಿಗೊಳಿಸಿದ ಮೌಲ್ಯಗಳ ಬಲೆಯಲ್ಲಿ ತಾನೇ ಬಂಧಿಯಾಗಿ ಬಳಲುವುದನ್ನು ಕಾಣಬಹುದು. ಈ ಸಮಾಜ ಹೆಣ್ಣಿಗೆ ಲಕ್ಷ್ಮೀ, ಸರಸ್ವತಿ, ಗೋದಾವರಿ, ತುಂಗೆ, ಕಾವೇರಿ ಎಂಬ ದೊಡ್ಡ ದೊಡ್ಡ ಹೆಸರುಗಳಿಂದ ಕರೆದಿದೆಯೇ ವಿನಃ ಕಣ್ಣೀರಿಗೆ ಕಾರಣವನ್ನು ಹುಡುಕಲಿಲ್ಲ. ಪುರುಷ ಪ್ರಧಾನ ವ್ಯವಸ್ಥೆ ಸೃಷ್ಟಿಸಿದ ಸ್ಥಾಪಿತ ಮೌಲ್ಯಗಳ ಕಪಿಮುಷ್ಠಿಯಲ್ಲೇ ಸಿಲುಕಿ ಬಾಳು ಸಾಗಿಸಬೇಕಾದ ಅನಿವಾರ್ಯ ಸ್ಥಿತಿ ಜನಪದ ಹೆಣ್ಣಿನದಾಗಿತ್ತು. ವಿದ್ಯೆ, ಉದ್ಯೋಗ ಸಿಕ್ಕು, ಇಂದಿನ ಮಹಿಳೆ ಈ ಬಂಧನದಿಂದ ಸ್ವಲ್ಪ ಮುಕ್ತಿಯನ್ನು ಪಡೆಯುತ್ತಿದ್ದಾಳೆ. ಆದರೆ ಜನಪದರ ಹಳ್ಳಿಯ ಮುಗ್ಧ ಹೆಣ್ಣಿಗೆ ಮಕ್ಕಳ ಸಾಕುವುದು, ಗಂಡನಿಗೆ ಸೇವಕಿಯಾಗಿರುವುದು. ಪುರುಷರು ಸೈಸೈ ಅನ್ನುವಂತೆ ಪತಿವ್ರತೆಯಾಗಿರುವುದಷ್ಟೇ ಪ್ರಪಂಚವಾಗಿತ್ತು.

**ಆಕರ ಗ್ರಂಥಗಳು**


1. ಜಾನಪದ ಪರಿಶೀಲನೆ :ಕೆ.ಆರ್ ಸಂಧ್ಯಾರೆಡ್ಡಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 2006
2. ಮಲ್ಲಿಗೆ ಬಂಡೆ : ಕಾಪಡೆ ರೇವಪ್ಪ ಮತ್ತು ಸಂಗಡಿಗರು
3. ಗರತಿಯ ಹಾಡು : ಹಲಸಂಗಿ ಸಹೋದರರು
4. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು: ಜೀ.ಶಂ ಪರಮಶಿವಯ್ಯ–ಪ್ರಸಾರಾಂಗ ಮೈಸೂರು ವಿ.ವಿ.–1980

# ಮಹಿಳೆ: ಅವಕಾಶದತ್ತ ದಿಟ್ಟ ಹೆಜ್ಜೆ. . . .

**ಡಾ. ಭಾರತಿ. ಎಂ.**

ಭಾರತದಲ್ಲಿ ಮಹಿಳಾ ಚಳುವಳಿಯನ್ನು ಮಹಾತ್ಮಾ ಗಾಂಧಿ ಅವರ ರಾಷ್ಟ್ರೀಯ ರಾಜಕಾರಣದ ಅವಿಭಾಜ್ಯ ಅಂಗ ಎಂದೇ ಹೇಳಬೇಕು. ಮಹಿಳೆಯರಲ್ಲಿ ಮೂಡಿದ ರಾಷ್ಟ್ರೀಯ ಮನೋಭಾವ ಅವರ ಜೀವನದಲ್ಲಿ ಬದಲಾವಣೆಯನ್ನು ತಂದುದೇ ಅಲ್ಲದೆ ಅವರನ್ನು ಕ್ರಿಯಾಶೀಲರನ್ನಾಗಿ ಮಾಡಿತು. ತಮಗೆ ಹೊಸತಾದ ವಿಭಿನ್ನ ಪಾತ್ರವಹಿಸುವಂತೆ, ಪ್ರಚೋದಿಸಿತು. ಈ ಸಮಯದಲ್ಲಿ ಮಹಿಳೆ ಹೊಸ ಪಾತ್ರದಲ್ಲಿ ಕ್ರಾಂತಿಕಾರಿಯಾಗಿ ಕಂಡಳು. ಮೆರವಣಿಗೆಗಳಲ್ಲಿ ಭಾಗವಹಿಸಿದಳು. ರಾಜಕೀಯ ಸಮಾವೇಶಗಳಲ್ಲಿ ಭಾಗವಹಿಸಿದಳು, ಜೈಲಿಗೆ ಹೋದಳು, ಕಾಂಗ್ರೆಸ್ ಸಭೆಗಳನ್ನು ಸಮಾವೇಶಗೊಳಿಸಿದಳು. ಆದರೆ ಮಹಿಳೆ ತನಗಿರುವ ಸ್ವಾತಂತ್ರ್ಯವನ್ನು ಗೃಹಣಿಯಾಗಿ ತನ್ನ ಕರ್ತವ್ಯಕ್ಕೆ ಭಂಗ ಬರದ ರೀತಿಯಲ್ಲಿ ನಿರ್ವಹಿಸಬೇಕಿತ್ತು. ತನ್ನ ಹೊಸ ಪಾತ್ರ ಹಾಗೂ ಸಾಂಪ್ರದಾಯಿಕವಾದ ತನ್ನ ಗೃಹಿಣಿಯ ಪಾತ್ರಗಳ ನಡುವೆ ಯಾವುದೇ ರೀತಿಯ ಸಂಘರ್ಷ ಉಂಟಾಗದಂತೆ ಅವಳು ಎಚ್ಚರವಹಿಸಬೇಕಾಗಿತ್ತು. ಮಹಾತ್ಮ ಗಾಂಧಿಯವರಿಗೆ ರಾಷ್ಟ್ರೀಯ ಚಳುವಳಿ ಕೇವಲ ರಾಜಕೀಯ ಚಳುವಳಿಯಾಗದೆ ಸಮಾಜವನ್ನು ಪುನರ್‌ರಚಿಸುವ ಪುನಶ್ಚೇತನಗೊಳಿಸುವ ಸಾಧನವೂ ಆಗಿತ್ತು. ಆದ್ದರಿಂದಲೇ ಅವರು ಮಹಿಳೆಯರಿಗೆ ತಾವೇ ಸ್ವತಃ ಯೋಚಿಸುವಂತೆ ತರಬೇತಿ ಹಾಗೂ ತಿಳಿವನ್ನು ನೀಡಿದರು. ಭಾರತೀಯ ಸಮಾಜದಲ್ಲಿ ಮಹಿಳೆಯರಿಗಿರುವ ಸ್ಥಾನಮಾನವನ್ನು ಹಾಗೂ ಅವರು ವಹಿಸುವ ಪಾತ್ರವನ್ನು ಉತ್ತಮಗೊಳಿಸಲು ಮಹಾತ್ಮಗಾಂಧಿ ಅವರಿಗೆ ಅತ್ಯಂತ ಕಾಳಜಿ ಇತ್ತು. ಈ ಕಾಳಜಿಯೇ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲು ಮಹಿಳೆಯರಿಗೆ ಪ್ರಚೋದನೆಯಾಯಿತು. ಅವರ ನಾಯಕತ್ವ ಹಾಗೂ ಕಾರ್ಯಕ್ರಮಗಳ ಸ್ವರೂಪದಿಂದಾಗಿ ಸಂಪ್ರದಾಯಬದ್ಧ ಮಹಿಳೆಯರು ಸ್ವಾತಂತ್ರ್ಯಚಳುವಳಿಗಳಲ್ಲಿ ಭಾಗವಹಿಸುವಂತಾಯಿತು. ಹೀಗಾಗಿ ಪುರುಷರಂತೆಯೇ ಅನೇಕ ಮಹಿಳೆಯರ ರಾಜಕೀಯ ಜೀವನವು ಮಹಾತ್ಮಾ ಗಾಂಧಿಯವರೊಡನೆ ಇದ್ದ ಪ್ರತ್ಯಕ್ಷ ಹಾಗೂ ಪರೋಕ್ಷ ಸಂಪರ್ಕದೊಂದಿಗೆ ಪ್ರಾರಂಭವಾಗುತ್ತದೆ".

ಸ್ವತಂತ್ರ ಚಳುವಳಿಯಲ್ಲಿ ಮಹಿಳೆಯರು ಸಾಮೂಹಿಕವಾಗಿ ಭಾಗವಹಿಸಿದ್ದರಿಂದ ಇದರಲ್ಲಿ ಅನೇಕ ಮಹಿಳೆಯರು ಪಾಲ್ಗೊಳ್ಳಲು ಅವಕಾಶದೊರೆತಂತಾಗಿ ಆ ಮೂಲಕ ಮಹಿಳೆಗೂ ರಾಜಕೀಯ ಸಮಾನತೆ ಪಡೆಯಲು ಸೂಕ್ತ ವೇದಿಕೆ ದೊರೆಯಿತು. ಇಂತಹ ಸಾಮಾಜಿಕ ಸುಧಾರಣಾ ಚಳುವಳಿಯ ಫಲವಾಗಿ ಹಲವಾರು ಮಹಿಳಾ ಸಂಘಟನೆಗಳು ಪ್ರವರ್ಧಮಾನಕ್ಕೆ ಬಂದು ಸ್ತ್ರೀಯರು ತಮ್ಮ ಅಭಿವೃದ್ಧಿಯ ಬಗೆಗೆ ಜಾಗೃತಗೊಳ್ಳಲು ಪ್ರಾರಂಭಿಸಿದರು. 1910ರಲ್ಲಿ ಭಾರತ ಮಹಿಳಾ ಮಹಾಮಂಡಲವು ಹಲವಾರು ಸ್ತ್ರೀ ಸಂಘಟನೆಗಳನ್ನು, ಗುಂಪುಗಳನ್ನು ಒಗ್ಗೂಡಿಸುವಲ್ಲಿ ಸಫಲವಾಯಿತು. ಹಾಗೂ 1917ರಲ್ಲಿ ಮದ್ರಾಸಿನಲ್ಲಿ 'ಭಾರತೀಯ ಮಹಿಳಾ ಸಂಘ' ಸ್ಥಾಪನೆಯಾಯಿತು.

ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಹಕ್ಕು ಪ್ರತಿಯೊಬ್ಬ ನಾಗರೀಕನಿಗೂ ಇದೆ. ಇದು ಅವಳ ಮೂಲಭೂತ ಹಕ್ಕು, ಅಲ್ಲದೇ ಅದನ್ನು ಚಲಾಯಿಸುವುದು ಅವಳ ಕರ್ತವ್ಯವೂ ಆಗಿರುತ್ತದೆ. ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಮಾಜದಲ್ಲಿ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ವಾತಾವರಣ ಹಾಗೂ ಅವಕಾಶ ಪ್ರತಿಯೊಬ್ಬ ನಾಗರಿಕರಿಗೂ ಇದೆ ಎಂದು ಭಾವಿಸಿ ಈ ಹಕ್ಕನ್ನು ಅವರಿಗೆ ನೀಡಲಾಗಿದೆ. ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಯನ್ನು ನಾವು ಈ ದೃಷ್ಟಿಯಿಂದ ನೋಡಬೇಕಾಗುತ್ತಿದೆ.

ರಾಜಕೀಯದಲ್ಲಿ ಭಾಗವಹಿಸುವಿಕೆ ಎಂಬ ಪದ ಬಳಕೆಗೆ ಇರುವ ಸಾಂಪ್ರದಾಯಿಕ ಅರ್ಥದಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆಯನ್ನು ಅರ್ಥೈಸಿದರೆ, ಅವಳು ರಾಜಕೀಯದ ಹೊರ ಆವರಣದಲ್ಲಿಯೇ ಉಳಿದಿದ್ದಾಳೆ ಎಂದೇ ಹೇಳಬಹುದು. ಇದಕ್ಕೆ ಕಾರಣ ಅವಳಿಗೆ ಇರುವ ಸಾಮಾಜಿಕ ಹಾಗೂ ಆರ್ಥಿಕ ಕಟ್ಟುಪಾಡುಗಳು ಹೀಗಾಗಿ ಸ್ಥಳೀಯ ಗ್ರಾಮೀಣ ಜಿಲ್ಲಾ ಹಾಗೂ ರಾಷ್ಟ್ರಮಟ್ಟದಲ್ಲಿ ಮಹಿಳೆಯ ಪ್ರಾತಿನಿಧ್ಯ ಅತ್ಯಂತ ಕಡಿಮೆ. ಭಾರತದಲ್ಲಿ 1973ರಲ್ಲಿ ಮಹಿಳೆಗೆ ಸೀಮಿತ ಮತದಾನದ ಹಕ್ಕನ್ನು ನೀಡಲಾಯಿತು. ಅಂದಿನಿಂದೀಚೆಗೆ ಮತದಾರಳಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಯಾಗಿ ರಾಜ್ಯ ವಿಧಾನಮಂಡಲದ ಹಾಗೂ ರಾಷ್ಟ್ರಮಟ್ಟದಲ್ಲಿ ಸಂಸತ್ತಿನ ಚರ್ಚೆಗಳಲ್ಲಿ ಭಾಗವಹಿಸುವ ಮೂಲಕ ಹಾಗೂ ಕಾರ್ಯಾಂಗ ಹಾಗೂ ನ್ಯಾಯಾಂಗಗಳಲ್ಲಿ ವಿವಿಧ ಹಂತಗಳ ಅಧಿಕಾರ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುವ ಮೂಲಕ ಮಹಿಳೆ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾ ಬಂದಿದ್ದಾಳೆ.

ಮಹಿಳೆಯ ರಾಜಕೀಯ ಭಾಗವಹಿಸುವಿಕೆಯ ಚರಿತ್ರೆಯನ್ನು ನೋಡಿದಾಗ ಯಾವುದೇ ರಾಜಕೀಯ ಪಕ್ಷವು ಮಹಿಳೆಯರನ್ನು ಒಂದು ರಾಜಕೀಯ ಶಕ್ತಿಯನ್ನಾಗಿ ಪರಿಗಣಿಸಿಯೇ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆ ಬಹುಮುಖ್ಯ ಪಾತ್ರವಹಿಸಿದಳು. ಎಲ್ಲಾ ಸ್ತರಗಳ ಮಹಿಳೆಯರು ಈ ಚಳುವಳಿಯಲ್ಲಿ ಪಾಲ್ಗೊಂಡರು. ದಂಡಿ ಸತ್ಯಾಗ್ರಹವನ್ನು ನೋಡಲೆಂದೇ ವಿಶೇಷವಾಗಿ ಆಗಮಿಸಿದ ಅಮೇರಿಕನ್ ಪತ್ರಕರ್ತನೊಬ್ಬ ಗಾಂಧಿ ಸ್ವಾತಂತ್ರ್ಯವನ್ನು ಪಡೆಯುತ್ತಾರೋ ಇಲ್ಲವೋ, ಆದರೆ ಮಹಿಳೆಯರನ್ನು ಗೃಹಬಂಧನದಿಂದ ಬಿಡಿಸಿ ರಾಷ್ಟ್ರೀಯ ಹೋರಾಟದಲ್ಲಿ ಪರಿಣಾಮಕಾರಿಯಾದ ಪಾತ್ರವಹಿಸುವಂತೆ ಮಾಡುವ ಅದ್ಭುತವನ್ನೇ ಸಾಧಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸ್ವಾತಂತ್ರ್ಯ ಚಳುವಳಿ ಅದರಲ್ಲೂ ಗಾಂಧೀಜಿ ನೇತೃತ್ವದ ಅಹಿಂಸಾ ಚಳವಳಿ ಮಹಿಳೆಯರನ್ನು ಮುಂಚೂಣಿಗೆ ಬರುವಂತೆ ಮಾಡಿತು.

ಭಾರತದಲ್ಲಿ ಮಹಿಳೆಯ ಸ್ಥಾನಮಾನವನ್ನು ಅಧ್ಯಯನ ಮಾಡುವ ಸಲುವಾಗಿ ರಚನೆಯಾದ ಎಲ್ಲಾ ಆಯೋಗಗಳೂ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಗೆ ಇರುವ ಎರಡನೆಯ ಸ್ಥಾನವನ್ನು ಎತ್ತಿ ತೋರಿಸಿವೆ. ಮಹಿಳೆಯ ಸ್ಥಾನವನ್ನು ಪುರುಷನಿಗಿರುವ ಸ್ಥಾನಮಾನಕ್ಕೆ ಸರಿಸಮಾನಾಗಿಸುವುದರಲ್ಲಿ ಶ್ರಮಿಸಲು ಮತ್ತು ಮಹಿಳೆಯರ ತೊಂದರೆಗಳನ್ನು ನಿವಾರಿಸಲು ಒಂದು ಪ್ರತ್ಯೇಕ ಆಯೋಗವನ್ನು ರಚಿಸಬೇಕೆಂದು ಈ ಹಿಂದಿನ ಆಯೋಗಗಳು ಸಲಹೆ ನೀಡುತ್ತಾ ಬಂದಿದ್ದವು. ಅಲ್ಲದೆ ಮಹಿಳಾ ಕಾರ್ಯಕರ್ತರು ಮತ್ತು ಮಹಿಳಾ ಸ್ವಯಂ ಸೇವಾ ಸಂಘಗಳು ಸಹ ಮಹಿಳೆಯರಿಗಾಗಿ ಒಂದು ಆಯೋಗವನ್ನು ರಚಿಸಬೇಕೆಂದು ಒತ್ತಾಯಿಸುತ್ತಲೇ ಇದ್ದವು. ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರು ಇರುವ ರಾಷ್ಟ್ರದಲ್ಲಿ ಸಮಾನ ಸ್ಥಾನಮಾನ ದೊರಕದ ಹೊರತು ಪ್ರಗತಿ ಸಾಧ್ಯವಿಲ್ಲ. ಇದನ್ನು ಮನಗಂಡ ಸರ್ಕಾರ ಒಬ್ಬರು ಅಧ್ಯಕ್ಷರು ಹಾಗೂ ಆರುಜನ ಸದಸ್ಯರನ್ನು ಒಳಗೊಂಡ ಒಂದು ರಾಷ್ಟ್ರೀಯ ಮಹಿಳಾ ಆಯೋಗವನ್ನು ರಚಿಸಲು ತೀರ್ಮಾನಿಸಿತು.

ಈ ಆಯೋಗದ ಮುಖ್ಯ ಉದ್ದೇಶ ಮಹಿಳೆಯರಿಗೆ ಸಂವಿಧಾನ ಹಾಗೂ ಇತರ ಕಾನೂನುಗಳ ಮೂಲಕ ನೀಡಲಾಗಿರುವ ಹಕ್ಕುಗಳನ್ನು ಅವರಿಗೆ ದೊರೆಯುವಂತೆ ಮಾಡುವುದು, ಜಾರಿಯಲ್ಲಿರುವ ಕಾನೂನುಗಳನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿಗಳನ್ನು ಶಿಫಾರಸ್ಸು ಮಾಡುವುದು, ಅಸಹಾಯಕ ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತಾನೇ ಸ್ವತಃ ಕೈಗೆತ್ತಿಕೊಂಡು ಕಾನೂನಿನ ಮೂಲಕ ಅಥವಾ ಕೊಡಬಹುದಾದ ಬೆಂಬಲವನ್ನು ಕೊಡುವುದು, ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆಯನ್ನು ಹೊಂದಲು ಮತ್ತು ರಾಷ್ಟ್ರದ ಅಭಿವೃದ್ಧಿಯಲ್ಲಿ ಸಮಾನವಾಗಿ ಪಾಲ್ಗೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಅವರಿಗೆ ನೀಡಿರುವ ಹಕ್ಕುಗಳನ್ನು ನಿಜವಾದ ಅರ್ಥದಲ್ಲಿ ಚಲಾಯಿಸುವಂತೆ ನೋಡಿಕೊಳ್ಳಲು ಸಂಬಂಧಪಟ್ಟ ಕಾನೂನುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದು. ಕರ್ನಾಟಕ ಸರ್ಕಾರದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಯ ಬಗ್ಗೆ ನಡೆಸಲಾದ ಎಲ್ಲಾ ಸಮೀಕ್ಷೆಗಳು ನಿರಾಶಾದಾಯಕ ಚಿತ್ರವನ್ನು ಕೊಡುತ್ತವೆ.

ಬದಲಾಗುತ್ತಿರುವ ಇಂದಿನ ಕಾಲಘಟ್ಟದ ಅತಿಮುಖ್ಯವಾದ ಸಂದೇಶವೆಂದರೆ, ಗ್ರಾಮೀಣ ಆಡಳಿತವೂ ಜನರಿಗಾಗಿಯೇ ವಿನಃ ಸ್ಥಳೀಯ ನೌಕರಶಾಹಿಗಾಗಿ ಅಲ್ಲ ಎಂಬುದೇ ಆಗಿದೆ. ಹಾಗಾಗಿ ಇಂದಿನ ಮನೋಪ್ರವೃತ್ತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಅಗತ್ಯವಾಗಿದ್ದು, ನಮ್ಮ ಸೇವೆಯಿಂದ ಎಷ್ಟು ಪ್ರಮಾಣದಲ್ಲಿ ಒದಗಿಸಿರುವೆವು ಎನ್ನುವುದಕ್ಕಿಂತ ಜನರು ನಮ್ಮ ಸೇವೆಯಿಂದ ಎಷ್ಟು ಸಂತೃಪ್ತರಾಗಿದ್ದಾರೆ ಎನ್ನುವುದೇ ತಮ್ಮ ಕಾರ್ಯಕ್ಷಮತೆಯ ಅಳತೆಗೋಲು ಎಂಬುದು ಸ್ಥಳೀಯ ಸಂಸ್ಥೆಗಳ ಆಶಯವಾಗಿ ಬದಲಾಗುತ್ತಿದೆ. ಎಲ್ಲಿ ಯಾವೊಂದು ವರ್ಗವು ಇತರೆ ವರ್ಗಗಳ ಅಭಿಪ್ರಾಯಗಳನ್ನು ಹತ್ತಿಕ್ಕದೆ ವಿಶಾಲ ತಳಹದಿಯಲ್ಲಿ ಜನರ ಪಾಲ್ಗೊಳ್ಳುವಿಕೆ ಸಾಧ್ಯವಾಗುವುದೋ ಅದೇ ಉತ್ತಮ ಮತ್ತು ಸಂತೃಪ್ತ ಆಡಳಿತ ಪದ್ಧತಿಯಾಗಿರುತ್ತದೆ. ಇಂತಹ ಪದ್ಧತಿಯ ಸಮುದಾಯದ ಎಲ್ಲಾ ವರ್ಗಗಳ ರಾಜಕೀಯ ಭಾಗವಹಿಸುವಿಕೆ ಮತ್ತು ಪ್ರಾತಿನಿಧ್ಯದಿಂದ ಮಾತ್ರವೇ ಸಾಧ್ಯ. ಅದರಲ್ಲೂ ಯಾವುದೇ ಸಮಾಜದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಪ್ರಮಾಣದಲ್ಲಿರುವ ಮಹಿಳೆಯರ ಭಾಗವಹಿಸುವಿಕೆ ಮತ್ತು ಪ್ರಾತಿನಿಧ್ಯ ಎಷ್ಟರ ಮಟ್ಟಿಗೆ ಎನ್ನುವುದು ಇಲ್ಲಿ ನಿರ್ಣಾಯಕವಾಗುತ್ತದೆ.

ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಅವರ ಪ್ರಮಾಣಕ್ಕನುಸಾರವಾಗಿ ಶಾಸಕಾಂಗದಲ್ಲಿ ಮೀಸಲಾತಿ ನೀಡಿದಲ್ಲಿ, ಮಹಿಳೆಯರಿಗೆ ಹಾಗೂ ರಾಜಕೀಯ ಪಕ್ಷಗಳಿಗೆ ಚಾಲನೆ ನೀಡಿದಂತಾಗುತ್ತದೆ. ಹೆಚ್ಚು ಹೆಚ್ಚು ಮಹಿಳೆಯರು ರಾಜಕೀಯ ಪ್ರವೇಶಿಸಿದಂತೆ ಅವರು ತಮಗಿರುವ ಹಿಂಜರಿಕೆಯನ್ನು ಹೋಗಲಾಡಿಸಿಕೊಂಡು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವುದು ಸಾಧ್ಯವಾಗುತ್ತದೆ.

ಮಹಿಳೆಯರು ತಾವಾಗಿಯೇ ರಾಜಕೀಯ ಪ್ರವೇಶ ಮಾಡುವುದು ತೀರಾ ಕಡಿಮೆ. ನಮ್ಮ ರಾಜಕೀಯ ಸಂಸ್ಕೃತಿ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಅನುಕೂಲಕರವಾಗಿಲ್ಲ ಮತ್ತು ಸಂಪ್ರದಾಯವೂ ಸಹ ಮಹಿಳೆಯರ ರಾಜಕೀಯ

ಭಾಗವಹಿಸುವಿಕೆಗೆ ವಿರೋಧವಾಗಿದೆ. ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಒಟ್ಟಾರೆಯಾಗಿ ಬದಲಾವಣೆ ಮಾಡುವ ಮತ್ತು ಗಣ್ಯರೇ ಭಾಗವಹಿಸುವಂಥ ರಾಜಕೀಯ ರಚನೆಯನ್ನು ವಿಸ್ತೃತಗೊಳಿಸುವ ಸಮಸ್ಯೆಯಲ್ಲಿ ಮಹಿಳೆಯರ ರಾಜಕೀಯ ಸ್ಥಾನಮಾನವನ್ನು ಸುಧಾರಿಸುವ ಸಮಸ್ಯೆಯೂ ಒಂದಾಗಿರುತ್ತದೆ. ಮುಂದೆ ಅಭಿವೃದ್ಧಿಯ ಮುಂದಿನ ಹಂತದಲ್ಲಿ, ಸಮಾಜೋ–ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾಗುವ ಬದಲಾವಣೆಗಳು ಮಹಿಳೆಯ ರಾಜಕೀಯ ಸ್ಥಾನಮಾನವನ್ನು ಬದಲಿಸಲು ಕಾರಣವಾಗಬಹುದಾದರೂ ಸದ್ಯದ ಭಾರತದಲ್ಲಿ ಮೊದಲು ಮಹಿಳೆಯ ರಾಜಕೀಯ ಸ್ಥಾನಮಾನದಲ್ಲಿ ಬದಲಾವಣೆ ಉಂಟಾದಲ್ಲಿ ಮಾತ್ರ ಸಮಾಜೋ–ಆರ್ಥಿಕ ಪರಿಸ್ಥಿತಿಯಲ್ಲಿ ಬದಲಾವಣೆ ತರಲು ಸಾಧ್ಯ.

ಈ ಹಿನ್ನೆಲೆಯಲ್ಲಿ ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯನ್ನು ಒಂದು ಮಾದರಿಯಾಗಿ ಗಮನಿಸಬಹುದು. ಚಿಕ್ಕಮಗಳೂರು ಜಿಲ್ಲೆಯ ಕೆಲವು ಗ್ರಾಮ ಪಂಚಾಯಿತಿ ಮಹಿಳಾ ಸದಸ್ಯರನ್ನು ಅವರ ಸಾಮರ್ಥ್ಯಗಳ ಹಿನ್ನೆಲೆಯಲ್ಲಿ, ಪಾತ್ರನಿರ್ವಹಣೆಯನ್ನು ಪ್ರಾತಿನಿಧಿಕವಾಗಿ ಗಮನಿಸಿ ಕಂಡುಬಂದ ಫಲಿತಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿಡಿಬಿಡಿಯಾಗಿ ವಾಸಿಸುವ ಕುಟುಂಬಗಳು, ಶಾಲಾ–ಕಾಲೇಜು ಸಂಖ್ಯೆಯಲ್ಲಿ ವ್ಯತ್ಯಾಸ ಆದರೂ ಕೂಡ ವಿದ್ಯಾಭ್ಯಾಸ ಮಟ್ಟದಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡುಬರುತ್ತದೆ. ಇಲ್ಲಿಯ ಜನ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರೆದವರಾಗಿದ್ದಾರೆ. ವಿದ್ಯಾಭ್ಯಾಸವನ್ನು ಮಹತ್ವವೆಂದು ಪರಿಗಣಿಸಿ ದೂರದ ಊರುಗಳಲ್ಲೂ ವಿದ್ಯಾಭ್ಯಾಸ ಪಡೆಯುವಷ್ಟು ಮುಂದಿದ್ದಾರೆ ಎನ್ನುವುದು ಗಮನಾರ್ಹ. ಗ್ರಾಮಪಂಚಾಯಿತಿಯ ಪ್ರತಿನಿಧಿಗಳು ತಮ್ಮ ಪ್ರತಿನಿಧಿ ಸ್ಥಾನದ ಬಗ್ಗೆ ಸಕಾರಾತ್ಮಕ ಧೋರಣೆ ಪಡೆದ ಕಾರಣ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತು ಸಭೆಗಳಿಗೆ ಹೋಗುವ ಮುನ್ನ ಅಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಪಟ್ಟಿಮಾಡಿಕೊಂಡು ಹೋಗುತ್ತಾರೆ. ಇಲ್ಲಿ ಮಹಿಳಾ ಪ್ರತಿನಿಧಿಗಳು ಹೆಚ್ಚು ಚುರುಕು ಸ್ವಭಾವದವರಾಗಿದ್ದು ಹಲವಾರು ಸಂಘಸಂಸ್ಥೆಗಳಲ್ಲಿ ಕೆಲಸಮಾಡಿ ಅನುಭವ ಹೊಂದಿದವರಾಗಿದ್ದು ಅನೇಕ ವಿಚಾರಗಳನ್ನು ತಿಳಿದುಕೊಂಡವರಾಗಿರುವುದು ಮತ್ತು ತರಬೇತಿಗಳಲ್ಲಿಯೂ ಕೂಡ ಹೆಚ್ಚು ಕ್ರಿಯಾಶೀಲರಾಗಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಶಿಕ್ಷಣದ ಮಟ್ಟ ಕಡಿಮೆ ಇದ್ದರೂ ಕೂಡ ಪಾಲ್ಗೊಳ್ಳುವಿಕೆ ಹೆಚ್ಚಿನದ್ದಾಗಿದೆ ಮತ್ತು ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಮಾಹಿತಿ ತಿಳಿಯಲು ಹೆಚ್ಚು ಆಸಕ್ತರಾಗಿರುವುದು ತಿಳಿಯುತ್ತದೆ.

ಇಲ್ಲಿ ಕುಟುಂಬದ ಸದಸ್ಯರು ರಾಜಕೀಯದಲ್ಲಿ ತೊಡಗಿಕೊಂಡರೆ ಮನೆಯಲ್ಲಿ ರಾಜಕೀಯ ವಾತಾವರಣವಿದ್ದು, ಅಲ್ಲಿ ಆಡಳಿತದ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು ಇವುಗಳನ್ನು ಇವರು ಗಮನಿಸುತ್ತಾರೆ. ಮಹಿಳಾ ಪ್ರತಿನಿಧಿಗಳ ಆಡಳಿತಕ್ಕೆ ಕುಟುಂಬದ ಅನುಭವಿ ರಾಜಕಾರಣಿಗಳು ಸಹಾಯಕರಾಗುತ್ತಾರೆ.

ಚಿಕ್ಕಮಗಳೂರಿನಲ್ಲಿ ಶೇ.30ರಷ್ಟು ಪ್ರತಿನಿಧಿಗಳು ಸಮುದಾಯಕ್ಕೆ ಅಗತ್ಯವಾದ ನಾಯಕತ್ವ ಗುಣ ಬೆಳೆಸಿಕೊಂಡಿರುವುದು ಕೂಡ ಇಲ್ಲಿಯ ವಿಶೇಷ. ಕಾರಣ ಇಲ್ಲಿ ಮಹಿಳಾ ಪ್ರತಿನಿಧಿಗಳು ಆರ್ಥಿಕವಾಗಿ ಸಬಲರಾಗಿದ್ದು, ಇದರಿಂದಾಗಿ ಇವರುಗಳು ತಮ್ಮನ್ನು ಇತರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿ ಗ್ರಾಮಪಂಚಾಯಿಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಗುರುತರವಾದ ಕೆಲಸ ಮಾಡುತ್ತಲಿದ್ದಾರೆ. ಗ್ರಾಮಪಂಚಾಯಿತಿ ಸದಸ್ಯರ ಮೇಲೆ ಹೆಚ್ಚಿನ ಜವಾಬ್ದಾರಿ ಬಂದಿದ್ದು ಗ್ರಾಮ ಸಮುದಾಯಕ್ಕೆ ಅಗತ್ಯವಾದ ನಾಯಕತ್ವ ಗುಣ ಬೆಳೆಸಿಕೊಳ್ಳುವುದರಲ್ಲಿ ಸಫಲರಾಗಿದ್ದಾರೆ. ತಮ್ಮ ಜವಾಬ್ದಾರಿಯ ಬಗ್ಗೆ ಹೆಚ್ಚು ಕಾಳಜಿ ಇಟ್ಟುಕೊಂಡಿರುವುದರಿಂದ ಸಮುದಾಯದೊಡನೆ ಬೆರೆತು ಗ್ರಾಮದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಗ್ರಾಮಸಮುದಾಯಕ್ಕೆ ಹೆಚ್ಚು ಚಿರಪರಿಚಿತರಾಗಿದ್ದಾರೆ.

ಮನೆಯಲ್ಲಿ ಇರುವಂತಹ ಇತರರು ಕೂಡ ಸಮಾಜಕಾರ್ಯಗಳಲ್ಲಿ ತೊಡಗಿಕೊಂಡಿರುವುದು ಮತ್ತು ಮನೆಯ ರಾಜಕೀಯ ನಾಯಕರ ಬೆಂಬಲ ಹಾಗೂ ಸ್ಫೂರ್ತಿ ಇವರುಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಿವೆ. ಇಲ್ಲಿ ಜಾತಿಯು ಕೂಡ ನಾಯಕರಾಗಲೂ ಪ್ರಮುಖವಾದ ಕಾರಣವಾಗಿ ಕಂಡುಬರುತ್ತದೆ.

ಇಲ್ಲಿ ಅತಿಹೆಚ್ಚಿನ ಅಂದರೆ ಶೇ. 52.5ರಷ್ಟು ಪ್ರತಿನಿಧಿಗಳು ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸುವ ಮನೋಭಾವನೆಯನ್ನು ಹೊಂದಿದ್ದಾರೆ. ಇಲ್ಲಿನ ಮಹಿಳಾ ಪ್ರತಿನಿಧಿಗಳು ಹೆಚ್ಚಾಗಿ ಸಮಾಜದೊಡನೆ ಗುರುತಿಸಿಕೊಂಡು ಕ್ರಿಯಾಶೀಲವಾಗಿ ಯೋಚಿಸುವ ಮನೋಭಾವ ಹೊಂದಿದವರಾಗಿದ್ದುದೇ ಇದಕ್ಕೆ ಕಾರಣ. ಇಲ್ಲಿನ ಮಹಿಳಾ ಪ್ರತಿನಿಧಿಗಳು ಅವರು ಪಡೆದ ಶಿಕ್ಷಣದ ಮೂಲಕ ಹೆಚ್ಚು ಜಾಗೃತರಾಗಿ ಹಲವಾರು ಸಂಘಸಂಸ್ಥೆಗಳ ಜೊತೆಗೂಡಿ ಕೆಲಸ ಮಾಡಿರುವ ಅನುಭವ ಹೊಂದಿದವರಾಗಿದ್ದು ಅವರುಗಳು ಹಲವಾರು ತರಬೇತಿಗಳಲ್ಲಿ ಭಾಗವಹಿಸಿ ಅದರಿಂದ ಪಡೆದ ಅನುಭವವನ್ನು

ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಮಾಡಿರುತ್ತಾರೆ. ಆ ಕಾರಣದಿಂದ ಇಲ್ಲಿನ ಮಹಿಳಾ ಪ್ರತಿನಿಧಿಗಳು ಹೆಚ್ಚಾಗಿ ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸುವ ಮನೋಭಾವನೆಯನ್ನು ರೂಢಿಸಿಕೊಳ್ಳಲು ಸಾಧ್ಯವಾಗಿದೆ.

ಮಹಿಳೆಯಿರುವ ಭಿನ್ನ ಸಾಮಾಜಿಕ, ಆರ್ಥಿಕ ಪರಿಸರಗಳನ್ನು ಎದುರಿಸುವಂತಹ ಮಹಿಳೆಯರ ಬದುಕಿನ ಅವಶ್ಯಕತೆಗಳ ಪೂರೈಕೆಗಾಗಿಯೇ ದಿನನಿತ್ಯದ ಸಂಘರ್ಷವನ್ನು ಎದುರಿಸಬೇಕಾಗಿರುವ ಮಹಿಳೆಯರಿಗೆ ಪೌಷ್ಠಿಕ ಆಹಾರ, ಪರಿಶುದ್ಧ ಕುಡಿಯುವ ನೀರು, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ ಸೇವೆಗಳು, ಆದಾಯಗಳಿಕೆಗೆ ಅವಕಾಶಗಳು ಇವುಗಳು ಸಬಲೀಕರಣದ ಪ್ರಥಮ ಸೋಪಾನಗಳಾದರೆ ಈಗಾಗಲೇ ಈ ಅನುಕೂಲಗಳನ್ನು ಪಡೆದಿರುವವರಿಗೆ ಅವರ ಶಿಕ್ಷಣಮಟ್ಟದಲ್ಲಿ ಉದ್ಯೋಗದಲ್ಲಿ ಅಥವಾ ಬದುಕಿನ ಇತರ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಮಾಡಲು ಮೇಲ್ಮುಖ ಚಲನೆಯನ್ನು ಪಡೆಯಲು ಇನ್ನೂ ಹೆಚ್ಚಿನ ಅವಕಾಶಗಳನ್ನು ಪಡೆಯುವುದು ಸಬಲೀಕರಣವೆನ್ನಿಸಬಹುದು.

ಪ್ರತಿನಿಧಿಗಳು ಮೂಲತಃ ಪಂಚಾಯಿತಿ ಕಾರ್ಯದಲ್ಲಿ ಆಸಕ್ತಿವುಳ್ಳವರಾಗಿರುವುದರಿಂದ ಈ ಮಹಿಳೆಯರು ತರಬೇತಿಗಳಿಗೆ ತಪ್ಪದೇ ಹಾಜರಾಗಿ ಅಲ್ಲಿನ ಭಾಗವಹಿಸುವಿಕೆಯಿಂದ ಹೆಚ್ಚು ತಿಳುವಳಿಕೆ ಪಡೆದಿದ್ದಾರೆ. ತಿಳುವಳಿಕೆ ಇರುವವರ ಜೊತೆ ಹೆಚ್ಚು ಒಡನಾಟವಿದ್ದು ಪಂಚಾಯಿತಿ ಕಾರ್ಯಗಳ ಬಗ್ಗೆ ಚರ್ಚಿಸುತ್ತಾರೆ. ತಮಗೆ ಗೊತ್ತಿಲ್ಲದ ವಿಷಯವನ್ನು ಕೇಳಿ ತಿಳಿದುಕೊಂಡು ಕಾರ್ಯನಿರ್ವಹಿಸುತ್ತಾರೆ. ಈ ಗುಂಪಿನ ವಿಶೇಷವೆಂದರೆ ಇಲ್ಲಿ ಕೆಲವರಿಗೆ ಶಿಕ್ಷಣದ ಕೊರತೆ ಇದ್ದರೂ ಕೂಡ ಮೇಲೆ ಹೇಳಿದಂತೆ ಅವರ ತಿಳುವಳಿಕೆಯನ್ನು ಹೆಚ್ಚಿಸಿಕೊಂಡಿರುವುದು ತಿಳಿದುಬರುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ 31ರಿಂದ 40ವರ್ಷ ವಯಸ್ಸಿನ ಪ್ರತಿನಿಧಿಗಳು ಶೇ.62ರಷ್ಟು ಕಂಡುಬರುತ್ತಾರೆ. 31ರಿಂದ 40ವರ್ಷ ವಯಸ್ಸಿನ ಮಹಿಳೆಯರಲ್ಲಿ ಜೀವನೋತ್ಸಾಹ ಹೆಚ್ಚಾಗಿದ್ದು ಸಾಮಾಜಿಕ ಕಾರ್ಯಗಳತ್ತ ಆಸಕ್ತಿ ಹೆಚ್ಚಾಗಿರುವುದರಿಂದ ಈ ವರ್ಗದ ಮಹಿಳೆಯರು ಗ್ರಾಮಪಂಚಾಯಿತಿಯಲ್ಲಿ ಹೆಚ್ಚು ಭಾಗವಹಿಸುವಿಕೆ ಸಾಧ್ಯವಾಗಿದೆ.

ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಶೇ. 35ರಷ್ಟು ಹೆಚ್ಚಾಗಿರುವುದು ಗಮನಾರ್ಹ. ಉಳಿದಂತೆ ಎಲ್ಲಾ ಜಾತಿಯವರಿಗಿಂತ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಹೆಚ್ಚಾಗಿರುವುದಕ್ಕೆ ಮಹಿಳಾ ಮೀಸಲಾತಿ ಹಾಗೂ ಜಾತಿ ಮೀಸಲಾತಿ ಎರಡರ ಅವಕಾಶವೂ ಇರುವುದರಿಂದ ಪರಿಶಿಷ್ಟ ಪಂಗಡದವರು ಹೆಚ್ಚಾಗಿರುವುದೇ ಇದಕ್ಕೆ ಕಾರಣ. ಅನಕ್ಷರಸ್ಥರ ಸಂಖ್ಯೆ ಶೇ. 62.2ರಷ್ಟು ಕಂಡುಬಂದಿದೆ. ಅನಕ್ಷರಸ್ಥರ ಸಂಖ್ಯೆ ಹೆಚ್ಚಿರಲು ಪಂಚಾಯಿತಿಗೆ ಸ್ಪರ್ಧಿಸಲು ಶಿಕ್ಷಣದ ಮಿತಿ ಹಾಗೂ ಕಡ್ಡಾಯ ಇಲ್ಲದೇ ಇರುವುದು, ಮಹಿಳಾ ಮೀಸಲಾತಿಯನ್ನು ಭರ್ತಿಮಾಡುವ ಉದ್ದೇಶದಿಂದ ಅನಕ್ಷರಸ್ಥರ ಸಂಖ್ಯೆ ಹೆಚ್ಚಾಗಿರುವುದು ತಿಳಿಯುತ್ತದೆ. ಮೀಸಲಾತಿ ದೊರಕದೆ ಇದ್ದರೂ ಸ್ಪರ್ಧಿಸುವುದಾಗಿ ಹೇಳಿದವರು ಶೇ. 0.8ರಷ್ಟು ಕಂಡುಬಂದಿದ್ದಾರೆ. ಮಹಿಳಾ ಮೀಸಲಾತಿ ದೊರೆತಿಲ್ಲದಿದ್ದರೂ ಸ್ಪರ್ಧಿಸುವುದಾಗಿ ಹೇಳಲು ಕಾರಣ ಇವರು ಸ್ವ-ಇಚ್ಛೆಯಿಂದ ಭಾಗವಹಿಸಲಿದ್ದು, ಮಹಿಳೆಯರಲ್ಲಿ ಆದ ಬದಲಾವಣೆಯ ಮನೋಭಾವನೆ ಕಂಡುಬರುತ್ತದೆ. ಸ್ವತಂತ್ರವಾಗಿ ಯೋಚಿಸುವಿಕೆ, ಸಮಾಜದಲ್ಲಿ ತಾನೂ ಒಂದು ಭಾಗ ಎಂಬ ವಿಶ್ವಾಸ ಇವೆಲ್ಲವುಗಳಿಂದ ಮೀಸಲಾತಿ ದೊರಕದೇ ಇದ್ದರೂ ಭಾಗವಹಿಸುವಿಕೆ ಕಂಡುಬರುತ್ತದೆ.

ಮಹಿಳೆಯರ ಕಾಳಜಿಯು ಶ್ರೀಮಂತರಿರಲಿ ಅಥವಾ ಬಡವರಿರಲಿ ಸುರಕ್ಷೆ ಪರಿಸರಕ್ಕೆ ಸಂಬಂಧಿಸಿದ ಅಪರಾಧಗಳಿಂದ ಮುಕ್ತವಾಗುವುದು. ಹಿಂಸೆಯಿಂದ ಮುಕ್ತವಾಗುವುದು, ಕುಟುಂಬವನ್ನು ಬೆಳೆಸುವುದಕ್ಕೆ, (ಮಹಿಳೆಯರು ಪ್ರಯತ್ನಪಡುತ್ತಿರುತ್ತಾರೆ). ಅವರ ಕೌಟುಂಬಿಕ ಜವಾಬ್ದಾರಿಗಳು ಕುಡಿಯುವ ನೀರಿಗೆ ಆರೋಗ್ಯ ಸೇವೆಗೆ, ಮಕ್ಕಳಿಗೆ ಶಾಲೆಗಳು ಮತ್ತು ಬಹುತೇಕ ಜನರಿಗೆ ಆದಾಯ ಮತ್ತು ಆಸ್ತಿಗಳಿಗೆ ಪ್ರವೇಶ ಕಲ್ಪಿಸುವುದು. ವಸತಿ ಮತ್ತು ಅಡುಗೆ ಇಂಧನ ಪೂರೈಕೆಗೆ ಪ್ರವೇಶ ಪಡೆಯುವುದು ಮಹಿಳೆಯರಿಗೆ ಸಂಬಂಧಿಸಿವೆ. ಅವುಗಳು ಮಹಿಳೆಯರ ಪ್ರಾಥಮಿಕ ಕಾಳಜಿಗಳಾಗಿವೆ. ಈ ಎಲ್ಲವನ್ನು ನೀಡುವುದು ಈ ವಿಷಯವಾಗಿ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮಹಿಳಾವಾದಿ ವಿದ್ವಾಂಸೆ ದೇವಕಿ ಜೈನ್ ನಮ್ಮ ಗಮನ ಸೆಳೆದಿದ್ದಾರೆ. (ಖಿಜ ಖಿಜುಚಿಜಾಡಿಚಿಖ್ಯ, ಒಚಿಡಿಛಿ 22, 1997) ಇದೇ ತೆರನಾದ ಅಭಿಪ್ರಾಯವನ್ನು ಝಣಞ ಅಜುಟಥಿ (ಖಿಜ ಊಟಿಜಾಡಿ, ೦ಠಿಡಿಟ 24, 1997) ವ್ಯಕ್ತಪಡಿಸಿದ್ದಾರೆ. “ರಾಜಕಾರಣದಲ್ಲಿ ಮಹಿಳೆಯರ ಪಾಲುಗೊಳ್ಳುವಿಕೆಯ ಸಮಗ್ರ ಅಭಿವೃದ್ಧಿಗೆ ಅವಶ್ಯವಿದೆ. ಮಹಿಳೆಯರು ಕೆಲವು ಮಹತ್ವದ ವಿಷಯಗಳ ಬಗೆಗೆ ಪರಿಸರ, ಆರೋಗ್ಯ ಸೇವೆ ಮತ್ತು ಶಿಕ್ಷಣ ಕುರಿತಂತೆ ಉತ್ತಮ ದೃಷ್ಟಿಕೋನ ಬೆಳೆಸಿಕೊಳ್ಳುವುದಾಗಿದೆ; ಈ ಎಲ್ಲವೂ ಮಹಿಳೆಯರು ಮತ್ತು ವಿಶೇಷವಾಗಿ ಹೆಣ್ಣು ಮಗುವಿನ ಮೇಲೆ ಪ್ರತ್ಯಕ್ಷವಾಗಿ ಗಾಢ ಪ್ರಭಾವಬೀರುವುವು” ಎಂದಿದ್ದಾರೆ.

ಸದನಗಳಲ್ಲಿ, ಶಾಸಕಾಂಗಗಳಲ್ಲಿ ಮಹಿಳೆಯರ ಸ್ಪಷ್ಟ ಅಸ್ತಿತ್ವವು ರಾಜಕೀಯ ಜೀವನದ ಕಾರ್ಯಾಚರಣೆಯನ್ನು ಸ್ವಯಂ ಪರಿವರ್ತಿಸುವರು. ಈ ಮೂಲಕ ಮಹಿಳೆಯರು ರಾಜಕೀಯ ವ್ಯವಸ್ಥೆಯನ್ನು ಹೆಚ್ಚು ಶಾಂತಿಯುತಗೊಳಿಸುವರು; ಹೆಚ್ಚು ಪ್ರಾಮಾಣಿಕಗೊಳಿಸುವರು. ಸಾರ್ವತ್ರಿಕ ಒಳಿತಿಗಾಗಿ ಹೆಚ್ಚು ಪ್ರಾಮಾಣಿಕವಾಗಿ ಮಹಿಳೆಯರು ದುಡಿಯುವರು.

“ಭ್ರಷ್ಟಾಚಾರವನ್ನು ಕೊನೆಗೊಳಿಸಲು ಮಹಿಳೆಯರು ನಿಜವಾಗಿ ನೆರವಾಗುವರು” ಎಂದು ಮಹಿಳಾ ಕಾಂಗ್ರೆಸ್‌ನ ಅಧ್ಯಕ್ಷೆ ಗಿರಿಜಾ ವ್ಯಾಸ್ ಅಭಿಪ್ರಾಯಪಟ್ಟಿದ್ದಾರೆ. (ಖ್ರಿಜ ಖಾಟಿಜಚಿಥಿ ಔಛಿಟಿಣಾಠಿಜಡಿ, ಓಡಿಜಞಠಿಜಡಿ, 3–9 1966) ರಾಜಕೀಯ ಪರಿಸರವು ಮಾಲಿನ್ಯಗೊಳ್ಳುತ್ತಿರುವಂತೆ ಅದನ್ನು ಪರಿಹರಿಸಲು ಸಾಮರ್ಥ್ಯ ಪಡೆದಿರುವ ಮಹಿಳೆಯರು, ಸೂಕ್ತ ಪಾತ್ರ ವಹಿಸಬೇಕೆಂದು ರಾಷ್ಟ್ರೀಯ ಸೇವಿಕ ಸಮಿತಿ ಸದಸ್ಯರು ಪ್ರತಿಪಾದಿಸಿದ್ದಾರೆ. “ಮಹಿಳೆಯರನ್ನು ಬಹಳ ಸುಲಭವಾಗಿ ನಂಬಿಸಲಾಗದು. ಅವರು ಪುರುಷರಿಗಿಂತ ಹೆಚ್ಚು ವಸ್ತುನಿಷ್ಠರಾಗಿದ್ದಾರೆ. ಮಹಿಳೆಯರು ರಾಜಕೀಯವನ್ನು ಹೆಚ್ಚು ಸೂಕ್ಷ್ಮಗೊಳಿಸುವುದು, ನವಿರುಗೊಳಿಸುವುದು ಸಾಧ್ಯವಿಲ್ಲ”. (ಏಟಿಜಜಿ ಖಿಜಚಿಥಿ, ಔಛಿಣಠಜಡಿ 15, 1996). ಈ ಕುರಿತು ವಿಭಿನ್ನ ತತ್ವದರ್ಶನಗಳ ಹಿನ್ನೆಲೆಯ ಜನರಲ್ಲಿ ಏಕಮತ ಮೂಡಿದೆ ಎನ್ನುವುದನ್ನು ನಾವು ಗಮನಿಸಬೇಕು.

ಒಟ್ಟಾರೆಯಾಗಿ ಗಮನಿಸುವುದಾದರೆ ಮಹಿಳೆಯು ಆಡಳಿತದ ಒಂದು ಅವಶ್ಯಕ ಭಾಗವಾಗಬೇಕು ಎನ್ನುವುದಿಲ್ಲಿ ದೃಢವಾಗುತ್ತದೆ ಮತ್ತು ಸೂಕ್ತ ಮಾರ್ಗದರ್ಶನ, ತಿಳಿವು, ಪ್ರೋತ್ಸಾಹ ದೊರೆತರೆ ಅವಳು ಪುರುಷನಿಗೆ ಸಮಾನಾಂತರವಾಗಿ ನಿಲ್ಲಬಲ್ಲಳು ಎನ್ನುವುದು ಸ್ಪಷ್ಟವಾಗುತ್ತದೆ.

# ಅಕ್ಕಮಹಾದೇವಿ ಮತ್ತು ಮಲೆನಾಡು

**ದಿವ್ಯ ಕೆ. ಎಲ್.**

ಮಲೆನಾಡ ಸಮೃದ್ಧ ಸಿರಿಯ ಆದ್ಯ ಶಿವಶರಣೆಯಾದ ಮಹಿಳಾಮಣಿ ಮಹಾದೇವಿಅಕ್ಕ. ಕನ್ನಡ ನಾಡಿಗೆ ಸ್ತ್ರೀಯರ ಆಧ್ಯಾತ್ಮ ಸಾಧನೆಯ ಶ್ರೀಮಂತಿಕೆಯನ್ನು ತೋರಿದ ಮೊದಲ ಶಿವಯೋಗಿಣಿ. ತಂದೆ-ತಾಯಿ, ಪತಿ, ಭವ-ಬಂಧನಗಳನ್ನೆಲ್ಲಾ ತೊರೆದು ಆಳವಾದ ಅನುಭವದ ಮೂಲಕ ಆಧ್ಯಾತ್ಮದ ವಚನ ರಚಿಸಿ, ಶ್ರೀಶೈಲದ ಚನ್ನಮಲ್ಲಿಕಾರ್ಜುನನೊಟ್ಟಿಗೆ ಅದಮ್ಯ ಪ್ರೇಮ ಹಾಗೂ ಭಕ್ತಿಯನ್ನು ಹೊಂದಿ ಸಮಕಾಲೀನ ವಚನಕಾರರ ಜೊತೆಯಲ್ಲೂ ತನ್ನ ವಿಶಿಷ್ಟವಾದ ವ್ಯಕ್ತಿತ್ವ ಮತ್ತು ಆಧ್ಯಾತ್ಮಿಕತೆಯನ್ನು ನಿರ್ಮಿಸಿಕೊಂಡವಳು ಅಕ್ಕಮಹಾದೇವಿ. ಹಾಗೆಯೇ ಮಧ್ಯಕಾಲೀನ ಕವಿಗಳನ್ನು ಆಕರ್ಷಿಸಿ, ಕಾವ್ಯಲೋಕಕ್ಕೆ ಅಡಿಯಿಟ್ಟ ಅನುಪಮ ಮಹಿಳೆ ಮಹಾದೇವಿಅಕ್ಕ.

ಮಹಾದೇವಿ ಅಕ್ಕ ಎಂದು ಇಂದಿಗೂ ಮನೆ ಮಾತಾಗಿರುವ 12ನೇ ಶತಮಾನದಲ್ಲೇ 'ಹೆಣ್ಣು ಎಂದಿಗೂ ಅಬಲೆಯಲ್ಲ, ಸಬಲೆ' ಎಂದು ಶಕ್ತಿ ಸ್ವರೂಪವೆಂದು, ಆ ಕಾಲದಲ್ಲೇ ಲೋಕಕ್ಕೆ ತಿಳಿಸಿದ ದಿಟ್ಟ ಮಹಿಳೆ ಹಾಗೂ ಅವಳ ಭಾವ-ಅನುಭಾವ, ಸತ್ಯ-ಸದ್ಭಕ್ತಿ, ಸದ್ವೃತ್ತಿ ಸಚ್ಚಾರಿತ್ರ್ಯದಿಂದಾಗಿ ಇಂದಿಗೂ ಜನಮಾನಸದಲ್ಲಿ ಅತಿಶಯವಾಗಿ ಕಂಗೊಳಿಸುವ ಅನುಭಾವಿ ಮಹಿಳೆ ಅಕ್ಕ. ಅಕ್ಕಮಹಾದೇವಿ ಅಥವಾ ಮಹಾದೇವಿ ಅಕ್ಕ ಎಂದು ನಾವಿಂದು ಕರೆಯುವ 'ಅಕ್ಕ', ಮಹಾದೇವಿ ಎಂಬ ನಾಮಸೂಚಕದೊಡನೆ ಬರುವ ಗೌರವ ಸೂಚಕವೇ 'ಅಕ್ಕ'. ಈ ಅಕ್ಕ ಮಹಾದೇವಿ ಎಂಬ ಹೆಸರಿಗೆ ಬಹಳ ಸೂಕ್ತವಾಗಿ ಹೊಂದುತ್ತದೆ. ಹಾಗೂ ಈ ಅಕ್ಕನೇ ಉಡುತಡಿಯ ಮಹಾದೇವಿಯ ನಾಮದೊಂದಿಗೆ ಸೇರಿರುವ ಅವಳ ಹಿರಿತನದ ಸಂಕೇತ ಎಂದು ಸುಲಭವಾಗಿ ಕಲ್ಪಿಸಬಹುದು. ಹಾಗಾಗಿ ಮಹಾದೇವಿ ಅಕ್ಕ ಎಂದು ಪ್ರಸಿದ್ಧಳಾದ ಮಹಾನುಭಾವಿ ಈಕೆ. ಪ್ರಸ್ತುತ ಈ ಮಹಾದೇವಿ ಅಕ್ಕನ ಜೀವಿತದ ಬಗೆಗೆ ಅವಳ ವೈವಾಹಿಕ ಜೀವನದ ಬಗೆಗೆ ಗೃಹಸ್ಥಾಶ್ರಮ ಜೀವನದಿಂದ ಕಹಿ ಅನುಭವಿಸಿ ಇವೆಲ್ಲಾ ತೊಡಕುಗಳಿಂದ ಬಿಡಿಸಿಕೊಂಡು ಇಷ್ಟಾರ್ಥ ದೈವವಾದ ಶ್ರೀಶೈಲದ ಚನ್ನಮಲ್ಲಿಕಾರ್ಜುನನಲ್ಲಿ ತನ್ನನ್ನು ತಾನೇ ಅರ್ಪಿಸಿಕೊಂಡಳು ಎಂಬ ಮಾಹಿತಿಯ ಬಗ್ಗೆ ಸಂಶೋಧಕರು ಹಲವು ಅಂಶಗಳನ್ನು ವ್ಯಕ್ತಪಡಿಸುತ್ತಾರೆ. ಮಹಾದೇವಿಅಕ್ಕ ತನ್ನ ಜೀವಿತದಲ್ಲಿ ತನ್ನ ಅನುಭವದ ಪಕ್ವತೆಯಿಂದಲೇ ಹಲವು ಮಾಗಿದ ವಚನಗಳನ್ನು ರಚಿಸಿದಳು ಎಂಬ ದಾಖಲೆಗಳಿವೆ. ಮಹಾದೇವಿ ಅಕ್ಕನ ಬದುಕಿನ ಬಗ್ಗೆ ಕೆಲವು ಶಾಸನಗಳಲ್ಲಿ ಹಾಗೂ ವಚನಗಳಲ್ಲಿ ಕೆಲವು ಸುಳಿವು ಸಿಕ್ಕಿರುವುದರಿಂದ ಆಕೆಯ ಮೊದಲ ನೆಲೆಯನ್ನು ಸಂಶೋಧಕರು ಗುರುತಿಸುವ ಕೆಲಸವನ್ನು ಮಾಡಿದ್ದಾರೆ.

ಮಹಾದೇವಿ ಅಕ್ಕನ ಬದುಕಿನ ಮೂಲ ನೆಲೆಯನ್ನು ಅರಸುತ್ತಾ ಹೋದಂತೆ ಆಕೆ ತನ್ನ ಬದುಕಿನಲ್ಲಿ ಅನುಭವಿಸಿದ ನಡೆಯನ್ನು ಪ್ರಮುಖವಾಗಿ ನಾಲ್ಕು ಕಾಲಘಟ್ಟಗಳಾಗಿ ಗ್ರಹಿಸಬಹುದು. "ಹುಟ್ಟಿನಿಂದ ತಾರುಣ್ಯದವರೆಗೆ ಅವಳ ಸುಂದರ ಕನಸುಗಳನ್ನು ಕಾಣುತ್ತಾ ಹಕ್ಕಿಯಂತೆ ಬದುಕಿದ ಕಾಲ – ಇದು ಮೊದಲ ಘಟ್ಟ ; ಬಲವಂತದ ಮದುವೆಗೆ ಒಳಗಾಗಿ ಕೆಲ ಕಾಲ ತನ್ನ ಒಲ್ಲದ ಗಂಡನೊಡನೆ ಬಾಳುವೆಯನ್ನು ಮಾಡಿದ ಕಾಲ – ಇದು ಎರಡನೆಯ ಘಟ್ಟ ; ಕೈಹಿಡಿದ ಗಂಡನ ಮನೆಯಿಂದ ಹೊರಬಂದರೂ ಏಕಾಂಗಿಯಾಗಿ ಅಲೆದಾಡುತ್ತಾ ದುಷ್ಟರ, ಕಾಮುಕರ, ಕ್ರೂರ ಕಣ್ಣಿಗೆ ಒಳಗಾಗಿ, ವೇದನೆಗೆ ಒಳಗಾದ ಕಾಲ – ಇದು ಮೂರನೇ ಘಟ್ಟ ; ಕಲ್ಯಾಣದಲ್ಲಿ ಬಸವ, ಅಲ್ಲಮರಂತಹ ಭಕ್ತರಿಂದ ಸಾಂತ್ವನ ಸಮಾಧಾನವನ್ನು ಪಡೆದು, ಮನಸ್ಸಿನ ಬೇಗುದಿಯನ್ನು ಕಳೆದುಕೊಂಡು, ಬಳಿಕ ಶ್ರೀಶೈಲಕ್ಕೆ ಬಂದು ತನ್ನ ಕೊನೆಯ ದಿನಗಳನ್ನು ತನ್ನ ಕೊನೆಯ ದಿನಗಳನ್ನು ಚನ್ನಮಲ್ಲಿಕಾರ್ಜುನನ ಸಾನಿಧ್ಯದಲ್ಲಿ ಶಾಂತವಾಗಿ ಕಳೆದುದು – ನಾಲ್ಕನೇ ಘಟ್ಟ"[1]. ಹೀಗೆ ಅಕ್ಕಮಹಾದೇವಿಯ ರೂಪುರೇಷೆಗಳನ್ನು ಸಂಶೋಧಕರು ಗುರುತಿಸುತ್ತಾರೆ.

ಮಹಾದೇವಿ ಅಕ್ಕನ ಹುಟ್ಟು ಹಾಗೂ ತಾರುಣ್ಯದ ಬಗ್ಗೆ ಮಾಹಿತಿಯನ್ನು ಹರಿಹರ, ಚಾಮರಸರ ಸಾಹಿತ್ಯ ಕೃತಿಗಳಲ್ಲಿ ಗುರುತಿಸಬಹುದು. ಹರಿಹರ ತನ್ನ ರಗಳೆಗೆ 'ಉಡುತಡಿಯ ಮಹಾದೇವಿಯಕ್ಕನ ರಗಳೆ' ಎಂದು ಹೆಸರಿಸಿದ್ದಾರೆ. "ಉಡುತಡಿಯ ಮಹಾದೇವಿಯಕ್ಕ ಎಂಬ ನಾಮಮಂಧರಿಸಿ" ಎಂಬ ಪ್ರಸ್ತಾಪವಿದೆ[2]. ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ನಡೆದ ವೀರಶೈವ ಕ್ರಾಂತಿಯಲ್ಲಿ ಬೆಳಗಿದ ಮಹಾಜ್ಯೋತಿ ಅಕ್ಕಮಹಾದೇವಿ. ಕನ್ನಡ ಸಾಹಿತ್ಯ ಅದರಲ್ಲೂ ಮಧ್ಯಕಾಲೀನ ಕನ್ನಡ ಸಾಹಿತ್ಯದ ಹರಿಹರ, ಚಾಮರಸ ಮುಂತಾದ ಕವಿಗಳು ಮಹಾದೇವಿಅಕ್ಕನ ಚಿತ್ರಣವನ್ನು ಕಟ್ಟಿಕೊಡುತ್ತಾರೆ.

ಚಾಮರಸ ತನ್ನ 'ಪ್ರಭುಲಿಂಗಲೀಲೆ'ಯ ಕೆಲವು ಭಾಗಗಳಲ್ಲಿ ಪಾರ್ವತಿ ಸ್ವರೂಪದಿಂದ ಜನಿಸಿದ ತಾಮಸ ಗುಣದ, 'ಮಾಯೆ'ಯ ಚಿತ್ರಣ ತಂದಿದ್ದಾನೆ. ಮುಂದೆ ಮಾಯೆಗೆ ಮರುಜನ್ಮದಲ್ಲಿ ಸಾತ್ವಿಕ ಗುಣದ 'ಮಹಾದೇವಿ'ಯಾಗಿ ಭೂಲೋಕದಲ್ಲಿ ಅವತಾರ ತಳೆದಳು ಮಹಾದೇವಿ ಅಕ್ಕ ಎಂದು ರಚಿಸಿದ್ದಾನೆ.

ಈಕೆ

"ಇಳಯೊಳುಡುತಡಿಯೆಂಬ ಪಟ್ಟಣ
ದೊಳಗೆ ವೀರ ಶಿವಾಗಮಿಕ ನಿ
ರ್ಮಳನ ವಲ್ಲಭೆಯೆನಿಪ ಸುಮತಿಯ ಗರ್ಭಶುಕ್ತಿಯಲಿ
ಚೆಲುವೆಯಾದ ಕುಮಾರಿಯೆಂಬ
ಗಳ್ಗದ ಮುತ್ತುದಯಿಸಿತು ಧರಣೀ
ತಳದೊಳಗೆ ಪಾರ್ವತಿಯ ಸಾತ್ವಿಕ ಗುಣವೇ ರೂಪಾಗಿ"[3]

'ಉಡುತಡಿ' ಎಂಬ ಪಟ್ಟಣದಲ್ಲಿ ವೀರ ಶಿವಾಗಮಿಕನಾದ ನಿರ್ಮಳನ ಹೆಂಡತಿ ಎನಿಸಿದ ಸುಮತಿಯ ಗರ್ಭಶುಕ್ತಿಯಲ್ಲಿ ಪಾರ್ವತಿಯ ಸಾತ್ವಿಕ ಗುಣದ ರೂಪಾಗಿ ಚೆಲುವೆ ಕುಮಾರಿಯೆಂಬ ಶ್ರೇಷ್ಠ ಮುತ್ತಾಗಿ ಹುಟ್ಟಿದಳು ಎಂಬ ಅಂಶವನ್ನು ಈ ಕಾವ್ಯದ ಸಾಲುಗಳಲ್ಲಿ ಗಮನಿಸಬಹುದು.

ಮಹಾದೇವಿ ಅಕ್ಕನ ಹುಟ್ಟಿದ ಊರು 'ಉಡುತಡಿ' ಎಂದು ಹರಿಹರ, ಚಾಮರಸ ಇಬ್ಬರೂ ಕವಿಗಳು ತಮ್ಮ ಕಾವ್ಯದಲ್ಲಿ ಹೇಳುತ್ತಾರೆ. ಶಿ.ಶಿ. ಬಸವನಾಳ ಅವರು 'ಉಡುತಡಿ' ಎಂಬ ಊರು ಗುಲ್ಬರ್ಗಾ ಜಿಲ್ಲೆಯ ಮಹಾಗಾಂವ್ ಎಂಬಲ್ಲಿ ಬರುತ್ತದೆ ಎಂದು ಪ್ರಭುಲಿಂಗಲೀಲೆ ಕೃತಿಯ ಸಂಗ್ರಹದೊಂದಿಗೆ ಚರ್ಚೆ ಮಾಡುತ್ತಾರೆ. ಆದರೆ ಖ್ಯಾತ ಸಂಶೋಧಕ ಡಾ. ಎಂ. ಚಿದಾನಂದಮೂರ್ತಿಯವರು ಮಹಾದೇವಿ ಅಕ್ಕನ ಬಗ್ಗೆ ದೀರ್ಘವಾದ ಸಂಶೋಧನೆ ನಡೆಸಿ ಆಕೆ ಹುಟ್ಟೂರು ಗುಲ್ಬರ್ಗಾ ಜಿಲ್ಲೆಯಲ್ಲಿ ಬರುವುದಿಲ್ಲ ಎಂದಿದ್ದಾರೆ. 'ಉಡುತಡಿ' ಎಂಬಲ್ಲಿ ಅಕ್ಕಮಹಾದೇವಿ ಹುಟ್ಟಿರುವುದರಿಂದ ಅದು ಮಲೆನಾಡ ಮಡಿಲಿನಲ್ಲಿರುವ ಹಿಂದಿನ ಶ್ರೀಶೈಲ ತಪ್ಪಲು. ಅದು ಈಗಿನ ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿದೆ. ಹರಿಹರ, ಚಾಮರಸರು ಹೇಳುವ ಉಡುತಡಿ ಇಂದಿನ ಉಡುಗಣಿ ಎಂದೇ ಜನಪ್ರತೀತಿ ಮತ್ತು ವಿದ್ವಾಂಸರ ನಂಬಿಕೆ ಎನ್ನುತ್ತಾರೆ. "ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪಕ್ಕೆ ನಾಲ್ಕು ಕಿ.ಮೀ. ದೂರದಲ್ಲಿ ತಡಗಣಿಯು ಅದರ ಪಕ್ಕದಲ್ಲೇ ಉಡುಗಣಿಯೂ ಉಂಟು. 'ಉಡುತಡಿ' ಎನ್ನುವ ಇಂದಿನ ದೊಡ್ಡ ಗ್ರಾಮ ಉಡುಗಣಿ, ತಡಗಣಿ ಎಂದು ಎರಡಾಗಿ ಹೊಡೆಯಿತೆಂದಿಟ್ಟುಕೊಂಡರೂ, ಉಡುತಡಿ ಎನ್ನುವ ಈ ಊರ ಹೆಸರು ಎರಡಾಗಿ ಒಡೆದು 'ಗಣೆ' ಎಂಬ ಪ್ರತ್ಯಯ ಸಮೇತ ಉಡುಗಣೆ, ತಡುಗಣೆ ಎಂದಾಯಿತು ಎಂಬ ವಿವರಣೆಯನ್ನು ಸಮರ್ಥಿಸಿಕೊಳ್ಳುವುದು ಕಷ್ಟ – ಕಣೆ ಅಥವಾ ಗಣೆ ಎಂದು ಕೊನೆಯಾಗುವ ಊರ ಹೆಸರುಗಳೇನೋ ಆ ಭಾಗದಲ್ಲಿವೆ (ಉದಾ : ಬೇಡರ ಕಣೆ). ಉಡುಗಣೆಯ ಪಕ್ಕದಲ್ಲಿರುವ ಕೋಟೆ, ಅಗುಳುಗಳು ಈಚಿನವಂತೆ ಕಂಡುಬಂದರೂ ಅದಕ್ಕಿಂತ ಹಿಂದೆ ಅವು ಇರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಆ ಊರಲ್ಲಿರುವ ಸುಂದರವಾದ ವಿಷ್ಣು ವಿಗ್ರಹವು ಆ ಊರ ಹನ್ನೊಂದು ಹನ್ನೆರಡನೆಯ ಶತಮಾನದಷ್ಟು ಪ್ರಾಚೀನವಾದುದೆಂಬುದಕ್ಕೆ ಆಧಾರ. ಅದೇನೇ ಇರಲಿ, ಸದ್ಯಕ್ಕೆ ಉಡುಗಣೆಯೇ ಮಹಾದೇವಿಅಕ್ಕನ ಹುಟ್ಟೂರು ಎಂದು ನಂಬಬಹುದು. ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ ಎಂದು ಹರಿಹರ, ಚಾಮರಸ ಹೇಳಿದ್ದರೂ ಆ ಹೆಸರುಗಳು ಸಾಂಕೇತಿಕವಾಗಿರುವಂತೆ ತೋರುತ್ತದೆ"[4] ಎಂಬುದಾಗಿ ಮಹಾದೇವಿ ಅಕ್ಕನ ಆರಂಭಿಕ ಬದುಕಿನ ವಿಚಾರಗಳು ಐತಿಹಾಸಿಕ ಸಂಶೋಧನೆಯ ಮೂಲಕ ಪುನಃ ರಚನೆಯನ್ನು ಕಟ್ಟಿಕೊಡುತ್ತವೆ.

ಮಹಾದೇವಿ ಅಕ್ಕನ ಜನನದ ಬಗ್ಗೆ ನೋಡುವುದಾದರೆ ಆಕೆ ನಿರ್ಮಲ ಶೆಟ್ಟಿ ಹಾಗೂ ಸುಮತಿಯ ಮಗಳಾಗಿ ಜನಿಸಲು ಹಿಂದೆ ಅವರ ತಂದೆ ತಾಯಿಯರು ಶ್ರೀಶೈಲದ ಚನ್ನಮಲ್ಲಿಕಾರ್ಜುನನಲ್ಲಿ ಹರಸಿಕೊಂಡಿದ್ದರು ಎಂಬುದಕ್ಕೆ ಸಂಬಂಧಿಸಿದ ವಿವರಗಳು ಕೆಲವು ಶಾಸನಗಳಲ್ಲಿವೆ. ಅಂಥದ್ದೊಂದು ಶಾಸನ ದೊರೆತಿರುವುದು ಇಂದಿನ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಪಕ್ಕದ ಹಿರೇಕೆರೂರು ತಾಲ್ಲೂಕಿನ 'ಪರ್ವತ ಸಿದ್ಧಗೇರಿ'ಯಲ್ಲಿ. ದೊರೆತಿರುವ ಈ ಶಾಸನ ಕ್ರಿ.ಶ. 1265 ಎಂದು ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ. ಇಲ್ಲಿ ಬರುವ ಸಿದ್ದಗೇರಿ ಪರ್ವತಕ್ಕೆ ಪರ್ವತ ಎಂದರೆ ಶ್ರೀಶೈಲ ಎಂಬ ಅರ್ಥವನ್ನು ಗಮನಿಸಿ ಎನ್ನುತ್ತಾರೆ. ಆ ಶಾಸನವು ಹೀಗಿದೆ :

"ಸಸ್ತಿ ಸಮಸ್ತ ಭುವನ ಮಂಡ .... ಮಣಿ ದೀಪಿಕಾಯ ಮಾನಾನೇಕ ಮಾಣಿಕ್ಯ ಶಿಲಾತಳ ಪ್ರಭಾವ ಪಟಲ ಜಟಿಲ ಶ್ರೀಶೈಲ ಶಿಖರ ಸಿಂಹಾಸನಾಸೀನ ಚುತುರ್ದಶಭುವನಾಧೀಶ್ವರ ಶ್ರೀ ಶ್ರೀ ಪರ್ವತ ಶ್ರೀ ಸ್ವಯಂಭುಲಿಂಗ ಚಕ್ರವರ್ತಿ ಶ್ರೀ ಮಲ್ಲಿಕಾರ್ಜುನ ದೇವರ್ಗೆ ದಂಣಾಯಕರು ಸೋಮಯಾಜಿಗಳು ..... ದಲಿ ದೇವದರ್ಶನವಾಗಿ ಶ್ರೀ ಮಲ್ಲಿಕಾರ್ಜುನ

ದೇವರ ಸನ್ನಿಧಿಯಲ್ಲಿ ಶಕವರ್ಷ 1187ನೆಯ ಕ್ರೋಧನ ಸಂವತ್ಸರದ ವೈಶಾಖದ ಪೌರ್ಣಮಿ ಭೃಗುವಾರ ವಿಶಾಖಾ ನಕ್ಷತ್ರ ಶಿವಯೋಗ ಯುಕ್ತವಪ್ಪ ಪುಣ್ಯತಿಥಿಯಲ್ಲಿ ಶ್ರೀ ಪರ್ವತದ ಪುಲು ಮಠದ ಆಚಾರ್ಯರಪ್ಪ ಪರಿಪೂರ್ಣ ಶಿವಾಚಾರ್ಯರ ಸಮಕ್ಷದಲು ಮಲ್ಲಿಕಾರ್ಜುನ ದೇವರ್ಗೆ"[5].

ಶ್ರೀಶೈಲದ ಶಿಖರದಲ್ಲಿರುವಂತಹ ಮಲ್ಲಿಕಾರ್ಜುನ ದೇವರಿಗೆ ಈ ಶಾಸನದಲ್ಲಿ ಬರುವ ಸಿದ್ಧಗೇರಿ ಎಂಬ ಊರನ್ನು ದಾನ ಮಾಡಿಕೊಡಲಾಗುತ್ತದೆ. ಮುಂದಿನ ದಿನಗಳಲ್ಲಿ ಶ್ರೀಶೈಲದ ಸಿದ್ಧಗೇರಿ ಎಂಬ ಊರು 'ಪರ್ವತ ಸಿದ್ಧಗೇರಿ' ಎಂಬುದಾಗಿ ಪರಿವರ್ತಿತವಾಗಿದೆ. ಹಾಗಾಗಿ ಶಾಸನಗಳು ಹಾಗೂ ಕಾವ್ಯಗಳ ಒಟ್ಟು ಮಾಹಿತಿಯನ್ನು ಗ್ರಹಿಸಿದಾಗ ಮಹಾದೇವಿಅಕ್ಕನ ಹುಟ್ಟು ನೆಲೆ ಶ್ರೀಶೈಲದ ಆಸುಪಾಸು ಎಂದು ವಿದ್ವಾಂಸರು ಉಲ್ಲೇಖಿಸುವ ಸಂಗತಿ ಸತ್ಯಕ್ಕೆ ಹತ್ತಿರವಾದುದು. ಈ ಹಿನ್ನೆಲೆಯಲ್ಲಿ 'ಅಕ್ಕ' ಮಲೆನಾಡ ಮಹಿಳೆ ಎಂದು ಗುರುತಿಸಬಹುದು.

ಚಾಮರಸ ತನ್ನ ಕಾವ್ಯದಲ್ಲಿ ಶ್ರೀಶೈಲದಲ್ಲಿ ಸುಮತಿ ನಿರ್ಮಳರು ತಮ್ಮ ಕುವರಿಗೆ ಸ್ತ್ರೀಗೆ ಶಿವಯೋಗ ರಾಜ್ಯದ ಪಟ್ಟಗಟ್ಟುವವಂತೆ ಹಣೆಯಲ್ಲಿ ಪರಿಶುದ್ಧವಾದ ವಿಭೂತಿಯನ್ನು ಇಟ್ಟಿದ್ದಾರೆ ಎಂದು ಪ್ರಸ್ತಾಪಿಸುತ್ತಾನೆ. ಸ್ವತಃ ಅಕ್ಕನೇ

"ಉರಕ್ಕೆ, ಜವ್ವನಗಳು ಬಾರದ ಮುನ್ನ
ಮನಕ್ಕೆ ನಾಚಿಕೆಗಳು ತೋರಿದ ಮುನ್ನ
ನಮ್ಮವರಂದೆ ಮದುವೆಯ ಮಾಡಿದರು
ಸಿರಿಶೈಲ ಮಲ್ಲಿಕಾರ್ಜುನಂಗೆ
ಹೆಂಗೂಸೆಂಬ ಭಾವ ತೋರದ ಮುನ್ನ
ನಮ್ಮವರಂದೆ ಮದುವೆಯ ಮಾಡಿದರು"[6]

ಮಹಾದೇವಿ ತನ್ನ ಬಾಲ್ಯದಲ್ಲೇ ಶ್ರೀಶೈಲ ಮಲ್ಲಿಕಾರ್ಜುನನೇ ತನ್ನ ಗಂಡ ಎಂದು ಭಾವಿಸಿಕೊಳ್ಳಲು ನನ್ನ ತಂದೆತಾಯಿಯರು ಚಿಕ್ಕ ವಯಸ್ಸಿನಲ್ಲಿಯೇ ಆತನೊಟ್ಟಿಗೆ ನನ್ನ ಮದುವೆ ಮಾಡಿದರು ಎನ್ನುತ್ತಾಳೆ. ಮುಂದೆ ಮಹಾದೇವಿ ಮನದೊಳಗೆ ಶ್ರೀಶೈಲದ ಶಿವನನ್ನು ಪ್ರತಿಷ್ಠಾಪಿಸಿಕೊಂಡು, ಭಕ್ತಿ ಎಂಬ ಹೃದಯ ಗೋಪುರವನ್ನು ಕಟ್ಟಿ ಇಷ್ಟದೈವವನ್ನು ಮನದಲ್ಲೇ ಪೂಜಿಸುತ್ತಿದ್ದಳು.

ಚಾಮರಸ ತನ್ನ 'ಪ್ರಭುಲಿಂಗಲೀಲೆ'ಯಲ್ಲಿ ಮಹಾದೇವಿ ಹೇಗೆ ತನ್ನ ಇಷ್ಟಾರ್ಥದೈವದ ಬಗ್ಗೆ ಜನ್ಮಜನ್ಮದಲ್ಲೂ ಅತಿಶಯವಾಗಿಯೇ ಪ್ರೇಮ ಭಕ್ತಿಯನ್ನು ತಳೆದಿದ್ದಳು ಎಂಬುದನ್ನು 'ಮಾಯೆ' ಎಂಬ ಪಾತ್ರದ ಮೂಲಕ ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಮಾಯಾದೇವಿಯು ಲಾವಣ್ಯವತಿಯಾಗಿ ಕಂಗೊಳಿಸುವಾಗ ತಂದೆಯು ಮಗಳ ವಿವಾಹ ಪ್ರಸ್ತಾಪವನ್ನು ಅರಮನೆಯ ಆಚಾರ್ಯರಿಗೆ ತಿಳಿಸಿ, ಈ ನಮ್ಮ ಕುಮಾರಿಗೆ ಉತ್ತಮವಾದ ವರನನ್ನು ನೀವೇ ಸೂಚಿಸಬೇಕೆಂದು ಈಕೆ ಎಷ್ಟು ಚೆಲುವಿನ ಸುಕೋಮಲೆ, ಇವಳಿಗೆ ಸರಿಸಮನಾದ ವರನನ್ನು ನಾಗೇಂದ್ರ, ಸುರ, ನರಲೋಕದಲ್ಲಾದರೂ ಸರಿ ಸದ್ಗುಣ ಶೀಲವಂತನನ್ನು ಹುಡುಕಬೇಕೆಂದು ರಾಜ ಹೇಳುತ್ತಾನೆ. ಆಗ ಆಚಾರ್ಯರು ಅರಸನನ್ನು ಕುರಿತು ಮಾಯಾದೇವಿಗೆ ಚಿಗುರುಬಿಟ್ಟ ಮಾವಿನ ಮರದ ಸಂಪತ್ತು, ಕೋಗಿಲೆಗೆ ಹಾಲು ಹಂಸ ಪಕ್ಷಿಗೆ, ಮನೋಹರವಾದ ಹೂವಿನ ಕಂಪು ತುಂಬಿಗೆ, ನೇರವಾಗಿ ಸವಿ ಉಂಟುಮಾಡುವಂತೆ ಇನ್ನುಳಿದ ಹಕ್ಕಿಗಳಿಗೆ, ಕಡಜೇರಿಗೆಯ ಹುಳುಗಳಿಗೆ ಆ ಸವಿಯು ಹೊಂದಿಕೆಯಾಗುವುದೇ ಈ ಕನ್ಯೆ ಸದಾಶಿವನಿಗಲ್ಲದೆ ಮನುಷ್ಯರಿಗೆ ವಿವಾಹಯೋಗ್ಯಳೆ? ಎಂದು ಈಕೆಗೆ ಶಿವನಲ್ಲದೆ ಬೇರೆ ಗಂಡನಿಲ್ಲ ಎಂದು ಹೇಳುತ್ತಾರೆ. ತಂದೆ ಮಗಳ ವಿವಾಹ ಸಿದ್ಧತೆಗೆ ಸಹಾಯ ಕೇಳಿದಾಗ ಆಚಾರ್ಯರೇ ಮಾಯಾವತಿ ಶಿವಭಕ್ತಿಯನ್ನು ವಿಶೇಷವಾಗಿ ಆಚರಿಸುವವಳು ಅವರವರ ಇಚ್ಛೆಗೆ ಒಲಿಯುವ ಶಿವನು ಮಾಯಾದೇವಿಗೆ ಒಲಿಯುವುದು ಸತ್ಯ ಎಂದು ಆಚಾರ್ಯರು ಪ್ರೀತಿಯಿಂದ ಅರಸನಿಗೆ ನುಡಿಯುತ್ತಾರೆ.

ಚಾಮರಸ ಮಾಯಾದೇವಿ ಪಾತ್ರದಲ್ಲಿ ಹಿಂದಿನ ಜನ್ಮವನ್ನು ಮಾಯೆಯಾಗಿ, ಶಿವಸ್ವರೂಪಿಯಾದ ಅಲ್ಲಮನೊಟ್ಟಿಗೆ ಪ್ರೇಮಾಂಕುರವಾಗುವಂತೆ ಚಿತ್ರಿಸಿ, ನಂತರ ಆತನೇ ಆಕೆಯನ್ನು ಮರುಜನ್ಮದಲ್ಲಿ ಭವ ಬಂಧನದಿಂದ ಬಿಡಿಸುವಲ್ಲಿ, ಲೌಕಿಕ ಜೀವನದ ತುಡಿತಕ್ಕೆ ವಿದಾಯ ನೀಡುವಲ್ಲಿ ಯಶಸ್ವಿಯಾಗಿದ್ದಾನೆ. ಇದಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಕಾರಣವೊಂದನ್ನು ಚಾಮರಸ ತರುತ್ತಾನೆ. ಮಹಾದೇವಿಗೆ ಹಿಂದಿನ ಜನ್ಮದ ಸೋಂಕು ಇನ್ನೂ ಉಳಿದಿದ್ದ ಕಾರಣ ನಿರ್ಮಲ ಶೆಟ್ಟಿ ಹಾಗೂ ಸುಮತಿಯ ಮಗಳಾಗಿ ಹುಟ್ಟಿದಾಗಲೂ ಶಿವಸಾಕ್ಷಾತ್ಕಾರಕ್ಕಾಗಿ ಶ್ರೀಶೈಲದ ಮಲ್ಲಿಕಾರ್ಜುನನ ಮರುಜನ್ಮದಲ್ಲಿಯೂ ಆರಾಧ್ಯ ದೈವವಾಗಿಸಿಕೊಂಡಿದ್ದಳು. ಆಕೆಗೆ ಒತ್ತಾಯಪೂರ್ವಕ ವಿವಾಹವನ್ನು ಮಾಡಿದರೂ, ಹೆಚ್ಚು ಕಾಲ ಉಳಿಯಲಿಲ್ಲ. ಮಹಾದೇವಿಅಕ್ಕನ ಗಂಡ, 'ಕೌಶಿಕ'ನ ಇತಿಹಾಸದಿಂದ ತಿಳಿದುಬರುವುದೇನೆಂದರೆ ಆತ ಮಹಾದೇವಿಅಕ್ಕನ ವಿವಾಹವಾಗಿದ್ದು, ಆತ ಕೂಡ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ ಬರುವ ಉಡುಗಣೆಗೆ ಸೇರಿದ ಗ್ರಾಮದವನು ಎಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ.

ಕ್ರಿ.ಶ. 1200 ರಿಂದ 1220ರಲ್ಲಿ ಕನ್ನಡ ಸಾಹಿತ್ಯದಲ್ಲಿ ಬರುವ ರಗಳೆ ಕವಿ ಎಂದೇ ಪ್ರಖ್ಯಾತನಾಗಿರುವ 'ಹರಿಹರ' ತನ್ನ ಪ್ರಖ್ಯಾತ 'ರಗಳೆ' 'ಮಹಾದೇವಿಯಕ್ಕನ ರಗಳೆ'ಯಲ್ಲಿ ಅಕ್ಕಮಹಾದೇವಿಯ ಜೀವನಕ್ಕೆ ಸಂಬಂಧಿಸಿದಂತೆ ನಮಗೆ ಕೆಲವು ಮಾಹಿತಿಗಳನ್ನು ಕಟ್ಟಿಕೊಡುತ್ತಾನೆ.

> "**ಕೌಶಿಕನೆನಪ್ಪ** ಮನ್ನೆಯನಿಪ್ಪ ಪಟ್ಟಣದ !
> ದೇಶದೊಳಗೊಪ್ಪು ವುಡುತಡಿಯೆಂಬ ಪಟ್ಟಣದ !! "[7]

ಇಲ್ಲಿ ಬರುವ ಕೌಶಿಕ ಮಹಾದೇವಿ ಹುಟ್ಟೂರು ಉಡುತಡಿ ಎಂಬ ಪಟ್ಟಣವನ್ನು ಆಳುತ್ತಿದ್ದ ರಾಜ ಎಂಬ ಅಭಿಪ್ರಾಯವಿದೆ.

"ಉಡುತಡಿ ಆ ರಾಜನ ರಾಜಧಾನಿಯೋ ಅಥವಾ ರಾಜಧಾನಿಯ ಭಾಗವೋ ಅಥವಾ ರಾಜನಿಗೆ ಸಮೀಪದ ಊರೋ ಆಗಿದ್ದರೆ, ಆಗಿನ ಉಡುತಡಿಯೇ ಈಗಿನ ಉಡುಗಣೆ-ತಡಗಣೆ ಗ್ರಾಮಗಳಾಗಿವೆ, ಮಹಾದೇವಿ ಅಕ್ಕನ ಕಾಲ ಸುಮಾರು ಕ್ರಿ.ಶ. 1160–65 ಎಂದು ನಂಬುವುದಾದರೆ (ಈ ಬಗ್ಗೆ ಮಾತ್ರ ಅನುಮಾನಕ್ಕೆ ಆಸ್ಪದವಿಲ್ಲ) ಆಗ 'ಕೌಶಿಕ' ಎಂಬ ದೊರೆ ಈ ಉಡುಗಣೆ ತಡುಗಣೆ ಗ್ರಾಮಗಳ ಪ್ರದೇಶದಲ್ಲಿ ಆಳುತ್ತಿದ್ದ ಯಾವನೋ ಸಾಮಂತ ದೊರೆಯೋ ಒಬ್ಬ ರಾಜನ ಮಟ್ಟದ ಪ್ರಧಾನ ಅಧಿಕಾರಿಯೇ ಆಗಿರಬೇಕು, ನಮಗೆ ಆ ಪ್ರದೇಶದಲ್ಲಿ ಆಳುತ್ತಿದ್ದ ಮನ್ನೆಯರು (ಮಾನ್ಯ ೦ ಟಥಿಚಿಟ ಛಿಜಿಜಿ ಣಚಿಟಿ ಡಿ ಚಿ ಡಾಜಾಟಿಡಿ) ಯಾರು ಎಂಬುದು ಗೊತ್ತಿದೆ"[8].

ಇತಿಹಾಸದ ಮಾಹಿತಿಯಿಂದಾಗಿ ಹನ್ನೆರಡನೇ ಶತಮಾನದಲ್ಲಿ ಬರುವ ಬಳ್ಳಿಗಾವೆ ಮಧ್ಯ ಕರ್ನಾಟಕದ ಸಾಂಸ್ಕೃತಿಕ – ರಾಜಕೀಯ ಕೇಂದ್ರವಾಗಿತ್ತು. ಇದು ಉಡುಗಣೆ, ತಡಗಣೆಯಿಂದ ನಾಲ್ಕು ಕಿ.ಮೀ. ದೂರದಲ್ಲಿದ್ದು, ಚಾಲುಕ್ಯ ಸಾಮ್ರಾಜ್ಯದ ಮುಖ್ಯ ಕೇಂದ್ರಗಳಲ್ಲೊಂದಾಗಿತ್ತು. ಅದರ ಸಾಮಂತನೆ ಈ ಕೌಶಿಕನೆಂದು ಹಲವು ಸಂಶೋಧಕರು ಸಮೀಕರಿಸುತ್ತಾರೆ. ಹಾಗಾಗಿ ಹನ್ನೆರಡನೇ ಶತಮಾನದ ಕೌಶಿಕನೇ ಮುಂದೆ ಮಹಾದೇವಿಯನ್ನು ವಿವಾಹವಾಗಿದ್ದನು ಎಂಬುದಕ್ಕೆ ಇತಿಹಾಸದ ನೆಲೆಯಿಂದ, ಸಾಹಿತ್ಯದ ನೆಲೆಯಿಂದ ಈ ಮೇಲಿನ ವಿಚಾರದಲ್ಲಿ ಗ್ರಹಿಸಬಹುದು.

ಮಹಾದೇವಿ ಅಕ್ಕನ ತವರು ಮನೆಯಾದ ಉಡುಗಣೆ ಗಂಡನ ಊರಾದ ಬಳ್ಳಿಗಾವೆಯು ಶೈವ ವಾತಾವರಣಗಳಿಂದ ಕೂಡಿದ್ದವು ಎಂಬುದು ಸ್ಪಷ್ಟವಾದ ಹಿನ್ನೆಲೆಯಲ್ಲಿ ಚಾಮರಸನ ಕಾವ್ಯದಲ್ಲಿ 'ಮಾಯೆ'ಗೆ ತಂದೆ ವಿವಾಹ ಮಾಡಬೇಕೆಂದು ಆಚಾರ್ಯರಿಗೆ ವರನನ್ನು ಹುಡುಕಿ ಎಂದಾಗಿ ಶಿವನಲ್ಲದೆ ಅವಳಿಗೆ ಬೇರಾವ ಗಂಡನಿಲ್ಲ ಎಂದು ಹೇಳಿದ ಆಚಾರ್ಯರು ಮುಂದೆ ಮಹಾದೇವಿ ಅಕ್ಕನು ಒಲ್ಲದ ಮನಸ್ಸಿನಿಂದ ಕೌಶಿಕನನ್ನು ವಿವಾಹವಾದ ಮೇಲೂ ಅವಳ ಅರಮನೆಗೆ ಬರುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ. ಒಂದು ದಿನ ಅವಳ ಮನೆಗೆ ಬಂದ ಗುರು ಶೈವಾಚಾರ್ಯರನ್ನು "ನೀಳ್ದ ಕೆಂಜಡೆಗಳ ತಾಳ್ದ ಕರ್ಣ ಕುಂಡಲದ ಕಕ್ಷದೊಳ್ ಮರೆವ ಶಿವಲಿಂಗದ ಸರ್ವಾಂಗ ಭಸಿತೋದ್ಧೂಳನದ ಉಟ್ಟಧವಳಾಂಬರದ ತೊಟ್ಟ ರುದ್ರಾಕ್ಷಿಯ ಮೆಟ್ಟದ ಹಾವುಗೆಯ ಮುಂದಣ ಮಹೇಶ್ವರರ ಹಿಂದಣ ಶಿಷ್ಯವರ್ಗದ ವಿಳಾಸಂ ಪುಣ್ಯ ಲಾವಣ್ಯಮಂ ಪಸರಿಸೆ ಮಹಾದೇವಿಯಾರಾಧ್ಯರ್ ಭೋಂಕನೆ ಬರೆ......"[9] ಹಾಗಾಗಿ ಬಳ್ಳಿಗಾವೆಯಲ್ಲಿ ಅನೇಕ ಶೈವ ಮಠಗಳಿದ್ದವೆಂಬುದನ್ನು, ಅವುಗಳಲ್ಲಿ ಒಂದಾದ ಕೋಡಿಮಠವು ತುಂಬಾ ಖ್ಯಾತಿ ಹೊಂದಿತ್ತು ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಹಿನ್ನೆಲೆಯಲ್ಲಿ ಉಡುಗಣೆಯು ಈಗಿನ ಉಡುಗಣೆ-ತಡಗಣೆಯೇ ಎಂಬುದನ್ನು ಸಮರ್ಥಿಸುವ ಎಂ. ಚಿದಾನಂದಮೂರ್ತಿಯವರ ಅಭಿಪ್ರಾಯವನ್ನು ಸಮ್ಮತಿಸಬಹುದು.

ಬಳ್ಳಿಗಾವೆ ಅಂದು ಶೈವ ವಾತಾವರಣದಿಂದ ಕೂಡಿದ್ದು ಶಿವಶರಣರ ಕೇಂದ್ರ ಸ್ಥಾನವೂ ಆಗಿತ್ತು. ಅಲ್ಲಮನ ಜನ್ಮವೂ ಸಹ ಇದೇ ಊರಿನಲ್ಲಿ ಎಂದು ಸಂಶೋಧಕರು ಗುರುತಿಸುತ್ತಾರೆ. ಬಳ್ಳಿಗಾವೆಯಿಂದ ನಾಲ್ಕು ಕಿ.ಮೀ. ದೂರದಲ್ಲಿರುವ ತಾಳಗುಂದದ ಸಮೀಪ ಏಕಾಂತ ರಾಮಯ್ಯನ ಗುಡಿಯು ಈಗಲೂ ಇದ್ದು, ಅಲ್ಲಮಪ್ರಭುವಿನ ಗುರು ಅನಿಮಿಷಾಚಾರ್ಯರ ಯೋಗ ಸಾಧನೆಯ ಸ್ಥಳವೂ ಅದೇ ಆಗಿತ್ತು. ಸುತ್ತಮುತ್ತ ಕೋಟೆ ಕೊತ್ತಲಗಳ ಅವಶೇಷವಿರುವುದನ್ನು ಗಮನಿಸಿದಾಗ ಕೌಶಿಕನು ಉಡುತಡಿಯಲ್ಲೇ ಆಳುತ್ತಿದ್ದ ಎಂಬುದಕ್ಕೆ ಹಲವು ಸಾಕ್ಷ್ಯಗಳು ದೊರೆಯುತ್ತವೆ.

ಹಾಗಾಗಿ ಈಕೆಯ ಕಾಲ ಸುಮಾರು 1160 ಎಂದು ಶಿವಮೊಗ್ಗ ಜಿಲ್ಲೆಯ ಉಡುಗಡಿ ಇವಳ ಊರೆಂದು ತಂದೆ ತಾಯಿ ಶಿವಭಕ್ತರಾದ ನಿರ್ಮಲಶೆಟ್ಟಿ ಸುಮತಿಯರೆಂದು ಈಕೆಗೆ ಕೌಶಿಕನೊಟ್ಟಿಗೆ ವಿವಾಹವಾಗಿತ್ತು ಎಂಬುದಕ್ಕೆ ಈ ಮೇಲಿನ ಮಾಹಿತಿಗಳೇ ಸಾಕ್ಷಿ. ಬಾಲ್ಯದಲ್ಲೇ ಶರಣಸತಿ ಲಿಂಗಪತಿ ಎನ್ನುವ ತತ್ವದೊಡನೆ ಬೆಳೆದ ಅಕ್ಕ, ಲೌಕಿಕಕ್ಕೊಬ್ಬ ಗಂಡನೇ ಪರಮಾರ್ಥಿಕಕ್ಕೊಬ್ಬ ಗಂಡನೇ? ಎಂದು ಪ್ರಶ್ನಿಸುತ್ತಾಳೆ. "ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು"[10] ಎನ್ನುತ್ತಾ

ಶ್ರೀಶೈಲದ ಮಲ್ಲಿಕಾರ್ಜುನನೇ ಗಂಡನೆಂದು ನುಡಿಯುವ ಮುಖೇನ ನುಡಿದಂತೆ ನಡೆದು ತೋರಿಸಿ ಸಾಂಸಾರಿಕ ಬಂಧನದಿಂದ ಬಿಡಿಸಿಕೊಂಡು ಬದುಕಿನ ಯಾವ ಸಂದರ್ಭಕ್ಕೂ ಧೃತಿಗೆಡದೆ ಧೈರ್ಯದಿಂದ, ಆತ್ಮಬಲದ ಪ್ರಭೆಯನ್ನು ಲೋಕಕ್ಕೆ ಬೆಳಗಿ ತೋರಿಸಿದಳು ಮಹಾದೇವಿ ಅಕ್ಕ. ಅಕ್ಕಮಹಾದೇವಿ ತನ್ನ ಪರಿಸರದ ಸಂಪೂರ್ಣ ಚಿತ್ರಣವನ್ನು ತಾನು ನೆಲೆಸಿದ್ದ ಆ ಸುಂದರ ತಾಣದ ವಿಚಾರವನ್ನು ಸಹಜವಾಗಿಯೇ ವಚನಗಳಲ್ಲಿ ಬಿಂಬಿಸಿದ್ದಾಳೆ.

ವನವೆಲ್ಲಾ ಕಲ್ಪತರು, ಗಿಡುವೆಲ್ಲಾ ಮರುಜವಣೆ
ಶಿಲೆಯೆಲ್ಲಾ ಪರ್ವತ, ನೆಲವೆಲ್ಲಾ ಅವಿಮುಕ್ತ ಕ್ಷೇತ್ರ
ಜಲವೆಲ್ಲಾ ನಿರ್ಜರಾಮೃತ, ಮೃಗವೆಲ್ಲಾ ಪುರುಷಾಮೃಗ
ಎಡಹುವ ಹರಳೆಲ್ಲಾ ಪಿತಾಮಣಿ !
ಚೆನ್ನಮಲ್ಲಿಕಾರ್ಜುನಯ್ಯ ನೆಚ್ಚಿನ ಹಿರಿಯ ಸುತ್ತಿ
ನೋಡುತ್ತ ನೋಡುತ್ತ ಬಂದು
ಕದಳಿಯ ಬನವೆಂಬುದ ಕಂಡ ನಾನು
(ಅಕ್ಕನ ವಚನಗಳು, 200)

ಅಕ್ಕಮಹಾದೇವಿ ಈ ರೀತಿಯ ರೂಪಕವನ್ನು ಹೇಳುವಾಗ ಮಲೆನಾಡ ಗಿರಿಯ ಕಲ್ಪನೆಯನ್ನು ಕಣ್ಣಮುಂದೆ ತರುತ್ತಾಳೆ.

ಗಿರಿಯಲಲ್ಲದೆ ಹುಲುಮೊರಡಿಯೊಳಾಡುವುದೆ ನವಿಲು ?
ಕೊಳಲನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ ?
ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ ?
ಪರಿಮಳ ವಿಲ್ಲದ ಪುಷ್ಪಕ್ಕೆರಗುವುದೇ ಭ್ರಮರ ?
ಎನ್ನದೇವ ಚನ್ನಮಲ್ಲಿಕಾರ್ಜುನಲ್ಲದೆ ಪರಪುರುಷರು
ಎನ್ನ ಮನಸ್ಸಂಗೆ ಸೊಗಸುವರೆ ಕೆಳದಿ ?

ಸಮೃದ್ಧವಾದ ಮಲೆನಾಡ ಚಿತ್ರಣವನ್ನು, ನಿಸರ್ಗದ ದಟ್ಟತೆ, ವಿವಿಧ ಮರಗಳು, ಹಲವು ಬಗೆಯ ಹೂವಿನ ಕಲ್ಪನೆ, ಪಶು ಪಕ್ಷಿಗಳನ್ನು ಕಟ್ಟಿಕೊಡುವ ಅಕ್ಕನ ದರ್ಶನ ಶಕ್ತಿಯ ಒಳಗಣ್ಣು ವಿಶಾಲವಾದದ್ದು.

ಚಿಲಿಪಿಲಿಯೆಂದು ಓದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಸರವೆತ್ತಿ ಹಾಡುವ ಕೋಗಿಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಸರೋವರದೊಳಗಾಡುವ ಹಂಸೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಗಿರಿಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೇ ನೀವು ಕಾಣಿರೇ
ಚನ್ನಮಲ್ಲಿಕಾರ್ಜುನನೆಲ್ಲಿರ್ದಹನೆಂದು ಹೇಳಿರೇ
(ಅಕ್ಕನ ವಚನಗಳು, 189)
ಅಳಿ ಸಂಕುಳವೇ ಮಾಮರವೇ ಬೆಳದಿಂಗಳೇ ಕೋಗಿಲೆಯೇ
ನಿಮ್ಮೆಲ್ಲರನು ಒಂದು ಬೇಡುವೆನು
ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೇ
(ಅಕ್ಕನ ವಚನಗಳು, 187)

ಭಾವಪುಷ್ಠಿಯ ಪೂರ್ಣ ಅಭಿವ್ಯಕ್ತಿಗೆ ಪ್ರಕೃತಿ ಬಳಕೆಯಾಗಿರುವುದು ತುಂಬಾ ಔಚಿತ್ಯವೆನಿಸಿದೆ. ಓದುವ ಗಿಳಿ, ಹಾಡುವ ಕೋಗಿಲೆ, ಆಡುವ ದುಂಬಿ, ನಡೆದಾಡುವ ಹಂಸ, ನರ್ತಿಸುವ ನವಿಲು, ಚಿಗುರು ಚೆಲುವಾದ ಮಾಮರ ಇವೇ ಮೊದಲಾದ ನಿಸರ್ಗ ಚೇತನಗಳನ್ನು ಅಕ್ಕ ಕೂಗಿ ಕೇಳುತ್ತಾಳೆ. ತನ್ನೊಡೆಯನನ್ನು ಕಂಡಿದ್ದರೆ ಕರೆದು ತೋರಿರೇ ಎಂದು ಬೆಳದಿಂಗಳನ್ನು ದೈನ್ಯದಿಂದ ಬೇಡುತ್ತಾಳೆ.

ಅಕ್ಕಮಹಾದೇವಿ ಆ ಕಾಲದಲ್ಲೇ ಲಿಂಗಭೇದ ಮತ್ತು ಲಿಂಗ ಅಸಮಾನತೆಯ ಬಗ್ಗೆ ಸಮಾಜ ತೋರುತ್ತಿದ್ದ ಧೋರಣೆಗಳನ್ನು ಬಹಳ ವೈಚಾರಿಕವಾಗಿ ಪ್ರಶ್ನಿಸುತ್ತಾಳೆ.

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ

ಮನದ ಸೂತಕ ಹಿಂತೆಂದೆಡೆ
ತನುವಿನ ಸೂತಕಕ್ಕೆ ತೆರೆಹುಂಟೆ
(ಅಕ್ಕನ ವಚನಗಳು, 431)

ಇಡೀ ಜಗತ್ತಿನ ದೃಷ್ಟಿಯಿಂದ ಲಿಂಗ ಭೇದ ವಿರೋಧಿಸಿದ ಹೆಣ್ಣು ಅಕ್ಕ. ಹೆಣ್ಣು ಹಾಗೂ ಗಂಡಿನ ಹುಟ್ಟಿನ ರಹಸ್ಯವನ್ನು ಚರ್ಚಿಸಿ ಈ ಲಿಂಗಗಳ ಅರ್ಥವನ್ನು ಜಗತ್ತಿನ ಮಟ್ಟದಲ್ಲಿ ಪ್ರಶ್ನಿಸಿದ ತಿಳಿಸುವಲ್ಲಿ ಅವಳ ವಿಚಾರ ಮನೋಧರ್ಮ ಆ ಕಾಲಕ್ಕೆ ಪ್ರೌಢವಾದುದು.

"'ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು' ಎಂಬ ವಚನದ ಸಾಲು ಹೆಣ್ಣು ಗಂಡುಗಳ ಬಾಹ್ಯ ದೈಹಿಕ ಗುಣಲಕ್ಷಣಗಳನ್ನು ಕುರಿತಿದ್ದು, ಆದರೂ ಇವು ನಿಸರ್ಗಸಹಜ ಗುಣಗಳನ್ನು ಸೃಷ್ಟಿಯಲ್ಲೇ ಏನಾದರೂ ಏರುಪೇರಾದರೆ ಈ ಗುಣಗಳ ಬದಲಾವಣೆಯೇ ಹೊರತು ಹೆಣ್ಣು–ಗಂಡುಗಳ ಲಿಂಗದಿಂದಾದುದಲ್ಲ. ವಿಜ್ಞಾನದ ಮೊರೆ ಹೊಕ್ಕ ಮಾನವ ದೇಹ ರಚನೆಯ ಆಂತರಿಕ ವಿವರಗಳಿಗೆ ಹೋದರೆ ಈ ಹೆಣ್ಣು–ಗಂಡುಗಳ ದೇಹಗಳು ಉಳಿದೆಲ್ಲ ಸಂಗತಿಗಳಲ್ಲಿ ಸಮಾನ ಲಕ್ಷಣಗಳನ್ನು ಹೊಂದಿವೆಯಾದರೂ ಜನನಾಂಗಗಳ ರಚನೆಯಲ್ಲಿ ತೀರಾ ವಿಶಿಷ್ಟ ಗುಣ ಹಾಗೂ ವಿಭಿನ್ನ ಗುಣಲಕ್ಷಣಗಳನ್ನು ಪಡೆದಿವೆ"[11] ಎಂಬ ಅಭಿಪ್ರಾಯ ಸರಿಯಾಗಿದೆ. ಹಾಗೆಯೇ ಹೆಣ್ಣಿನ ದೇಹ ಈ ವಿಭಿನ್ನತೆಯಿಂದ ಕಾಣುವುದು ಸಂತಾನೋತ್ಪತ್ತಿಯ ಕಾರಣಕ್ಕಾಗಿ ನಿಸರ್ಗದ ಸೃಷ್ಟಿ ಎಂಬ ಸೂಕ್ಷ್ಮದ ಅರಿವು ಆಕೆಗಿತ್ತು ಎಂಬುದು ತಿಳಿಯುತ್ತದೆ.

ಮಹಾದೇವಿಅಕ್ಕ ತನ್ನ ವಿಚಾರ ಲಹರಿಯ ಮೂಲಕ 12ನೇ ಶತಮಾನದಲ್ಲಿ ಜಾಗತಿಕ ಮಟ್ಟದಲ್ಲೇ ಹೋರಾಟಕ್ಕೆ ತನ್ನ ಸಂವೇದನೆಯನ್ನು ಜಾಗೃತವಾಗಿಸಿದ್ದ ಮೊದಲ ಸ್ತ್ರೀವಾದಿ ಎನ್ನಬಹುದು. ಮಹಾದೇವಿ ಅಕ್ಕ ಅನುಭಾವ ಗೀತೆಗಳ (ವಚನ) ಮೂಲಕ ಅವಳ ವ್ಯಕ್ತಿತ್ವ, ಧರ್ಮ, ತತ್ವ, ಭಕ್ತಿಯ ನಾನಾ ಮುಖಗಳನ್ನು ಹೊರಹೊಮ್ಮಿಸಿದ ಮಲೆನಾಡಿನ ಅನನ್ಯ ಮಹಿಳಾ ಪ್ರತಿಭೆಯೆಂದರೆ ತಪ್ಪಾಗಲಾರದು.

**ಕೊನೆಟಿಪ್ಪಣಿ**

1. ಚಿದಾನಂದಮೂರ್ತಿ ಎಂ., "ಸ್ಥಾವರ–ಜಂಗಮ", 2004, ಪು. 273.
2. ಹರಿಹರ, "ಮಹಾದೇವಿಅಕ್ಕನ ರಗಳೆ", ಸ್ಥಲ–1, ಪದ್ಯ–2.
3. ಚಾಮರಸ, "ಪ್ರಭುಲಿಂಗಲೀಲೆ", ಡಾ. ಎಸ್. ವಿದ್ಯಾಶಂಕರ್, 2010, ಗತಿ–9, ಪದ್ಯ–2.
4. ಚಿದಾನಂದಮೂರ್ತಿ ಎಂ., "ಸ್ಥಾವರ–ಜಂಗಮ", 2004, ಪು. 274.
5. ಏಚಿಡಿಟಿಚಿಣಚಿಞ ಖಟ್ಕಿಭಿಡಿಖೂಣಝಟ್ಕಿ, ಗಿಖ. ಇಜ : ಃ.ಖ. ಉಹಿಚಿಟ, ಓಠ 48.
6. "ಶಿವಶರಣೆಯರ ವಚನಗಳು", ಭಾಗ–1, ವಚನ–50.
7. ಹರಿಹರ, "ಮಹಾದೇವಿಅಕ್ಕನ ರಗಳೆ", ಸಂ. ಮಲ್ಲಿಕಾರ್ಜುನ, 1933, ಪು. 8.
8. ಚಿದಾನಂದಮೂರ್ತಿ ಎಂ., "ಸ್ಥಾವರ–ಜಂಗಮ", 2004, ಪು. 256.
9. ಹರಿಹರ, "ಮಹಾದೇವಿಅಕ್ಕನ ರಗಳೆ", ಸಂ. ಮಲ್ಲಿಕಾರ್ಜುನ, 1933, ಪು. 54–55.
10. "ಶಿವಶರಣೆಯರ ವಚನಗಳು", ಭಾಗ–1, ವಚನ–108, ಪು. 108.
11. ಶ್ರೀಮತಿ ಎಚ್.ಎಸ್., "ಸ್ತ್ರೀವಾದ", 2003, ಪು. 1.

# ಮಲೆನಾಡಿನ ಮಹಿಳಾ ಬರಹಗಾರರು

**ಸುನಂದ ಕೆ.ಸಿ.**

ಮಲೆನಾಡು ಕಲೆ, ಸಾಹಿತ್ಯ, ಸಂಸ್ಕೃತಿಯ ನೆಲೆಬೀಡು. ಯಾವುದೇ ಕ್ಷೇತ್ರ ತೆಗೆದುಕೊಂಡರೂ ಗಣನೀಯ ಸಾಧನೆ ಮಾಡಿದ ಮೇರು ವ್ಯಕ್ತಿಗಳು ಇಲ್ಲಿ ಕಾಣಸಿಗುತ್ತಾರೆ. ಈ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಯೂ ಗುರುತರವಾಗಿದೆ. ಇಂತಹ ಶ್ರೀಮಂತ ಸಂಸ್ಕೃತಿಯ ಹಿನ್ನೆಲೆಯ ಮಲೆನಾಡಿನಲ್ಲಿ ಮಹಿಳೆಯರು ನಾಲ್ಕು ಗೋಡೆಗಳ ನಡುವೆ ತಮ್ಮನ್ನು ನಿರ್ಬಂಧಿಸಿಕೊಳ್ಳದೇ ಸಮಾಜದ ಮುಖ್ಯವಾಹಿನಿಯಲ್ಲಿ ತಮ್ಮ ಪ್ರತಿಭಾ ಸಾಮರ್ಥ್ಯಗಳ ಮುಖಾಂತರ ವಿಭಿನ್ನವಾಗಿ ಗುರುತಿಸಿಕೊಂಡಿದ್ದಾರೆ. ಕೌಟುಂಬಿಕ ಪಾತ್ರಗಳಾಚೆಗೂ ಮಹಿಳೆಯರು ತಮ್ಮ ಶಕ್ತಿ, ಸಾಮರ್ಥ್ಯಗಳೊಂದಿಗೆ ಬಹುಮುಖೀ ಪಾತ್ರಗಳನ್ನು ನಿರ್ವಹಿಸಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ. ಕಲೆ, ಸಾಹಿತ್ಯ, ಕೃಷಿ, ಸಂಶೋಧನೆ, ಉದ್ಯಮ ಹೀಗೆ ವಿವಿಧ ರಂಗಗಳಲ್ಲಿ ಮಲೆನಾಡ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ಸಾಹಿತ್ಯಕವಾಗಿ ಗುರುತಿಸಿಕೊಂಡ ಮಹಿಳಾ ಪ್ರತಿಭೆಗಳಂತೂ ನಾಡಿನ ವಿವಿಧ ಭಾಗಗಳ ಸ್ತ್ರೀವಲಯಕ್ಕೆ ಮಾದರಿಯಾಗಬಲ್ಲ ಸಾಹಿತ್ಯಕ ಕೊಡುಗೆಗಳನ್ನು ನೀಡಿದ್ದಾರೆ.

ಮಹಾದೇವಿ ಅಕ್ಕನಿಂದ ಹಿಡಿದು ಇಂದಿನ ಸವಿತಾ ನಾಗಭೂಷಣ ಅವರವರೆಗೆ ವಿವಿಧ ಮಹಿಳಾ ಬರಹಗಾರರು ಕನ್ನಡ ಸಾಹಿತ್ಯವನ್ನು ಸಶಕ್ತಗೊಳಿಸುವಂಥ ಆಶಯಗಳನ್ನು ಕಟ್ಟಿಕೊಟ್ಟಿದ್ದಾರೆ. ಈಗಾಗಲೇ ಆಗಿಹೋದ ಹನ್ನೆರಡನೇ ಶತಮಾನದಿಂದ ಹಿಡಿದು 19ನೇ ಶತಮಾನದ ಅವಧಿಯ ಮಹಿಳಾ ಬರಹಗಾರರು ತಮ್ಮ ಅಭಿವ್ಯಕ್ತಿಕ್ರಮಗಳಿಂದ ವಿಶೇಷ ಮನ್ನಣೆ ಪಡೆದಿದ್ದಾರೆ.

ಅಪೂರ್ವ ಸಾಧನೆ ಮಾಡಿದ ಸಾಧಕರ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿರುವ ಉಡುತಡಿ ಗ್ರಾಮದ ನಿರ್ಮಲ ಶೆಟ್ಟಿ ಹಾಗೂ ಸುಮತಿಯವರ ಮಗಳಾಗಿ ಜನಿಸಿದ ಮಾಹಾದೇವಿಯಕ್ಕ ಅತ್ಯಂತ ಪ್ರಮುಖ ಮಹಿಳೆ. ಹೆಣ್ಣನ್ನು ಹಂಗಿಸಿ ದೂಷಿಸುವ, ಅಪಮಾನಿಸುವ ಹಾಗೂ ಅಧೀನತೆಯಲ್ಲಿಟ್ಟು ಅಧಿಪತ್ಯ ಮೆರೆಯುವ ಕಾಲಘಟ್ಟದಲ್ಲಿ ಹುಟ್ಟಿಬಂದ ಅಕ್ಕ ಹೆಣ್ತನಕ್ಕಂಟಿಸಿದ್ದ ಸೂತಕಗಳನ್ನು ಸುಳ್ಳಾಗಿಸಿ ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪಾರಮಾರ್ಥ ಸಾಧನೆಯ ಒಂದು ಮಹಾಪ್ರಕರಣವಾಗಿ ಬೆಳೆದುನಿಂತ ಅಸಮಾನ್ಯ ಶಕ್ತಿ ಚೇತನವಾಗಿದ್ದಾಳೆ. ಮಹಾದೇವಿಯಕ್ಕಳ ತಂದೆ ತಾಯಿ ಶಿವಭಕ್ತರಾಗಿದ್ದರು. ಅವಳದು ಸುಸಂಸ್ಕೃತ ಕುಟಂಬ. ಧರ್ಮಶಾಸ್ತ್ರ, ತತ್ವಜ್ಞಾನಗಳ ಪ್ರಬುದ್ಧ ಅಧ್ಯಯನ ಮಹದೇವಿಯಕ್ಕನಿಗೆ ಸಾಧ್ಯವಾಯಿತು. ಅಕ್ಕನ ವಚನಗಳಲ್ಲಿ ಸಂಸ್ಕೃತ ಕಾವ್ಯ ಪುರಾಣಗಳ ಉಲ್ಲೇಖಗಳು, ಆಕೆಯ ಶಾಸ್ತ್ರಾಧ್ಯಯನ ಮತ್ತು ತತ್ವಜ್ಞಾನದ ತಿಳುವಳಿಕೆಯನ್ನು ಹೊಂದಿರುತ್ತದೆ. ಮಹಾದೇವಿಯಕ್ಕನ ವಿವಾಹ ಅರಸು ಕೌಶಿಕನೊಂದಿಗೆ ಬಲವಂತದಿಂದ ಆಗುತ್ತದೆ. ಆದರೆ ತನ್ನ ಶಿವಭಕ್ತಿ ಸಾಧನೆಗೆ ಅನುಕೂಲವಲ್ಲದ ವೈವಾಹಿಕ ಪ್ರಸ್ತಾಪವನ್ನು ಒಪ್ಪದೆ ವಿರಾಗಿಣಿಯಾಗಿ ಆಧ್ಯಾತ್ಮ ಸಾಧನೆಯತ್ತ ನಡೆಯುತ್ತಾಳೆ. ಅಕ್ಕನ ಪರಮಗುರು ಇಷ್ಟದೈವ ಚೆನ್ನಮಲ್ಲಿಕಾರ್ಜನ. ತದನಂತರ ಚ'ನ್ನಮಲ್ಲಿಕಾರ್ಜನನ್ನೇ ಗಂಡನೆಂದು ಸ್ವೀಕರಿಸಿ ಲೌಕಿಕ ಗಂಡನ ಸಂಬಂಧವನ್ನು ನಿರಾಕರಿಸುತ್ತಾಳೆ. ತನ್ನ ಬದುಕಿನಲ್ಲಿ ಉಳಿದ ಗಂಡಸರ ಪ್ರವೇಶವು ಅಸಂಭವವೆನ್ನುವ ಅಕ್ಕನ ಧೋರಣೆಯನ್ನು ಒಂದು ವಚನವು ಸೂಚಿಸುವಂತಿದೆ.

ಉರದ ಮುಳ್ಳಿನಂತೆ ಪರಗಂಡರೆನಗವ್ವಾ
ಸೋಂಕಲಮ್ಮೆ ಸುಳಿಯಲಮ್ಮೆ , ನಂಬಿ ನೆಚ್ಚಿ ಮಾತಾಡಲಮ್ಮೆನವ್ವ
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ
ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆ ನವ್ವ

ಮಹಾದೇವಿಯಕ್ಕನು ಉಡುತಡಿಯನ್ನು ತ್ಯಜಿಸಿ ಕಲ್ಯಾಣ ಪಟ್ಟಣವನ್ನು ಬಸವಾದಿ ಶರಣರನ್ನು ದರ್ಶಿಸಿದಾಗ ಅಕ್ಕನ ಆನಂದಾನುಭೂತಿಯನ್ನು ಬಣ್ಣಿಸುವ ಆಕೆಯ ಹಲವಾರು ವಚನಗಳು ಅಕ್ಕನ ಜೀವನ ಯಾತ್ರೆಯ ಮಹತ್ವದ ಕ್ಷಣಗಳು.

ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತು
ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ
ಇದರಂತುವನಾರು ಬಲ್ಲರಯ್ಯ

ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯ
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತಾವಕವೆನಗಾಯಿತ್ತು
ಕೇಳು ಚೆನ್ನಮಲ್ಲಿಕಾರ್ಜುನ
ಬಸವಣ್ಣನೇ ಗುರು ಪ್ರಭುದೇವರೇ ಲಿಂಗ
ಸಿದ್ಧರಾಮಯ್ಯನೇ ಜಂಗಮ
ಮಡಿವಾಳಯ್ಯನೆ ತಂದೆ ಚೆನ್ನಬಸವಣ್ಣನೆನ್ನ ಪರಮಾರಾಧ್ಯರು
ಇನ್ನು ಸುಖಿಯಾದೆನು ಕಾಣ ಚೆನ್ನಮಲ್ಲಿಕಾರ್ಜುನಯ್ಯ

ಇತ್ಯಾದಿ ಅನೇಕ ಮಾತುಗಳಲ್ಲಿ ಕಲ್ಯಾಣ ಮತ್ತು ಶರಣರ ಒಡನಾಟದ ಧನ್ಯತೆಯ ಭಾವವಿದೆ.

ಬಸವಣ್ಣನ ಭಕ್ತಿ ಚೆನ್ನಬಸವಣ್ಣನ ಜ್ಞಾನ
ಮಡಿವಾಳಯ್ಯನ ನಿಷ್ಠೆ ಪ್ರಭುದೇವರ ಜಂಗಮ ಸ್ಥಳ
ಆ ಜಗದಣ್ಣನ ಐಕ್ಯಸ್ಥಲ, ನಿಜಗುಣನ ಆರೂಢ ಸ್ಥಲ
ಸಿದ್ಧರಾಮಯ್ಯನ ಸಮಾಧಿ ಸ್ಥಲ
ಇಂತಿವರ ಕರುಣ ಪ್ರಸಾದ ಎನಗಾಯಿತ್ತು ಚೆನ್ನಮಲ್ಲಿಕಾರ್ಜುನಯ್ಯ

ಮಹಾದೇವಿಯಕ್ಕ ಶ್ರೀಶೈಲದಲ್ಲಿ ಐಕ್ಯಳಾದಳೆನ್ನುವುದು ತುರುಗಾಹಿ ರಾಮಣ್ಣನ ಒಂದು ವಚನದಲ್ಲಿ ಸೂಚನೆ ದೊರೆಯುತ್ತದೆ.

ಬಂದಿತ್ತು ದಿನ ಬಸವಣ್ಣನ ಕಲ್ಲಿಗೆ
ಚೆನ್ನಬಸವಣ್ಣ ಉಳುವೆಯಲ್ಲಿಗೆ
ಪ್ರಭು ಅಕ್ಕ ಕದಳಿದ್ವಾರಕ್ಕೆ

ಹೀಗೆ ಅಕ್ಕ ತನ್ನದೇ ಆದ ಸ್ತ್ರೀವಾದಿ ನಿಲುವುಗಳ ಮೂಲಕ ಆಪ್ತವಾಗಿದ್ದಾಳೆ. ಲೌಕಿಕತೆಯ ಎಲ್ಲ ಮಿತಿಗಳನ್ನೂ ಎದುರುಗೊಂಡು ತನ್ನ ವಚನಗಳನ್ನು ಮುಖಾಮುಖಿಯಾಗಿಸಿ ಮಹತ್ವದ ಸಂವಾದವನ್ನು ಹುಟ್ಟುಹಾಕಿದ ಅಕ್ಕ ಇಂದಿನ ಮಹಿಳಾ ಸಾಹಿತಿಗಳಿಗಷ್ಟೇ ಅಲ್ಲದೇ ಕನ್ನಡದ್ದೇ ಆದ ಸ್ತ್ರೀವಾದಿ ಚಿಂತನೆಗೆ ತಳಪಾಯ ಒದಗಿಸಿದ್ದಾರೆ. ಸ್ತ್ರಿ ಸಮಾನತೆಯ ತತ್ವಗಳನ್ನು ನಿರೂಪಿಸಿದ್ದಾರೆ.

**ಕದಿರೆಮ್ಮವೆ**

ರೆಬ್ಬವ್ವೆ, ರೆಮ್ಮವ್ವೆ ನಾಮಾಂತರಗಳಿಂದ ಗುರುತಿಸಾಲಾಗಿರುವ ರೆಮ್ಮವ್ವೆ ಇವರ ಕಾಲ ಕ್ರಿ. ಶ. 1160 ಬಸವೋತ್ತರ ವಚನಕಾರ್ತಿ, ಹರಿಹರ ಕವಿಯು ಲಿಂಗಾರ್ಚನೆಯ ರಗಳೆಯಲ್ಲಿ ರೆಮ್ಮವ್ವೆ, ಕದಿರೆಮ್ಮವ್ವೆಯೆಂದು ಎಂದು ಸ್ತುತಿಸಿದ್ದಾರೆ. ಪಂಡಿತರಾಧ್ಯ ಚಾರಿತ್ರ್ಯದ ಗಣಸಹಸ್ರನಾಮದಲ್ಲಿ ಕದಿರೆಮ್ಮವ್ವೆಯನ್ನು ಉಲ್ಲೇಖಿಸಲಾಗಿದೆ, ಬಸವಣ್ಣ, ಪ್ರಭುದೇವ ಚೆನ್ನಬಸವಣ್ಣ ಇತ್ಯಾದಿ ಹನ್ನೆರಡನೆಯ ಶತಮಾನದ ಶರಣರ ವಚನಗಳಲ್ಲಿ ಕದಿರೆ ರೆಮ್ಮವ್ವೆ, ಬಸವಣ್ಣನವರ ಸಮಕಾಲೀನ ವಚನಗಾರ್ತಿ.

“ಕದಿರೆ” ಶಿವಮೊಗ್ಗ ಜಿಲ್ಲೆಯ ಒಂದು ಊರು. ರೆಮ್ಮವ್ವೆಯ ಗಂಡ ರೆಮ್ಮಯ್ಯನವರ ಪತ್ನಿಯನ್ನುವ ಕವಿ ರಚಿತಕಾರರ ಅಭಿಪ್ರಾಯವಿದೆ.

ಕದಿರೆಮ್ಮಿಯೊಡೆಯ ಗುಮ್ಮೇಶ್ವರ ಅಂಕಿತದಲ್ಲಿ ನಾಲ್ಕು ವಚನಗಳು ದೊರಕಿವೆ. ರೆಮ್ಮವ್ವೆ ಸೀಮಾತೀತವಾದ ಸರ್ವತಂತ್ರ ಸ್ವತಂತ್ರ ನಿರುಪಾಧಿಕ ತತ್ವವನ್ನು ಸಾಂಕೇತಿಕವಾಗಿ ವರ್ಣಿಸಿರುವ ವಿಧಾನ

ಎಲ್ಲರ ಗಂಡರು ಪರದಳ ವಿಭಾಡರು
ಎನ್ನ ಮನದಳ ವಿಭಾಡ
ಎಲ್ಲರ ಗಂಡಂದಿರು ಗಜವೇಂಟೆಕಾರರು
ಎನ್ನ ಗಂಡ ಮನವೇಂಟೆಕಾರ
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು

ಎನ್ನ ಗಂಡ ತಾರದೇ ಇಕ್ಕಿಸಿಕೊಂಬ
ಎಲ್ಲರ ಗಂಡಂದಿರಿಗೆ ಮೂರು,
ಎನ್ನ ಗಂಡಂಗೆ ಅದೊಂದೇ
ಅದೊಂದೂ ಸಂದೇಹ, ಕದಿರೆಮ್ಮಿಯೊಡೆಯ ಗುಮ್ಮೇಶ್ವರಾ.

ನೂಲು ತೆಗೆಯುವ ಉಪಕರಣಗಳಾದ ರಾಟಿ, ಕದಿರು ಮತ್ತು ನೂಲುವ ಕಾಯಕವನ್ನೇ ಅನುಭಾವ ನಿರೂಪಣೆಗೆ ಪ್ರತೀಕವಾಗಿರಿಸಿಕೊಂಡಿದ್ದಾಳೆ. ರೆಮ್ಮವ್ವೆಯ ಬೆಡಗಿನ ವಚನವೊಂದು ಅನುಭಾವ ನಿಶ್ಚಲ ನಿಸ್ತರಂಗ ಸ್ಥಿತಿಯನ್ನು ಪರತತ್ವದೊಂದಿಗಿನ ಐಕ್ಯಾನುಭವವನ್ನು ಧ್ವನಿಸುವಂತಿದೆ, ಕಾಯಕದ ಪರಿಭಾಷೆಯಲ್ಲಿ ಸ್ವಾನುಭವದ ಸಂಕೀರ್ಣತೆಯನ್ನು ಪಡಿಮೂಡಿಸುವ ರೆಮ್ಮವ್ವೆಯ ವಚನ ಮಾದರಿ.

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿಯಣ್ಣಾ
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರ ಕರಣ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತು ನೂಲು ಕದಿರು ತುಂಬಿತ್ತು
ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ
ಇನ್ನೇವೆ ಕದಿರೆಮ್ಮಯೊಡೆಯ ಗುಮ್ಮೇಶ್ವರ ?

ತನ್ನ ಕಾಯಕದ'ಲ್ಲಿನ ಅನುಭಾವವನ್ನು ಭಾ಼ಷೆಯಲ್ಲಿ ಬಲವಾಗಿ ಕಟ್ಟಿಕೊಟ್ಟ ರೆಮ್ಮವ್ವೆಯ ಬದುಕು ಕಷ್ಟ ಜೀವಿಗಳಲ್ಲಿ ಕೆಚ್ಚು ತುಂಬಬಲ್ಲದು.

**ನಾಡಘರ ಶಾಂತಿಬಾಯಿ**

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಕ್ರಿ. ಶ. 1860 ರಲ್ಲಿ ಶಾಂತಿಬಾಯಿ ಜನಿಸಿದಳು. ಇವರ ತಂದೆ ವಕೀಲರಾಗಿದ್ದ ಕೊಪ್ಪಿ ವೆಂಕಟೇಶಯ್ಯ. ಇವರು ವಿದ್ಯಾವಂತರಾಗಿದ್ದರಿಂದ ಮಗಳಿಗೆ ಸ್ವತಃ ಓದು ಬರಹವನ್ನು ಕಲಿಸಿಕೊಟ್ಟಿದ್ದರು. ಶಾಂತಿಬಾಯಿಯವರ ವಿವಾಹ ನಾಡಘರ ಕೃಷ್ಣರಾಯರೊಂದಿಗೆ ನೆಡೆದಿತ್ತು. ಶಾಂತಿಬಾಯಿಯವರ ವೈವಾಹಿಕ ಬದುಕು ತಾತ್ಕಾಲಿಕವಾದುದಾಗಿತ್ತು. ಅವರ ಎಳೆಯ ಪ್ರಾಯದಲ್ಲಿಯೇ ಕೃಷ್ಣರಾಯರು ತೀರಿಕೊಂಡು ಮೂವತ್ತನೆಯ ವಯಸ್ಸಿಗೆ ವಿಧವೆಯಾದರು. ಕೆಲವೇ ದಿನಗಳಲ್ಲಿ ಇದ್ದೊಬ್ಬ ಮಗನು ತಂದೆಯ ಹಾದಿಯನ್ನು ಹಿಡಿದನು. ಮಗಳೂ ವಿಧವೆಯಾದಳು. ಈ ಸಂಕಟಗಳು ಮೇಲಿಂದ ಮೇಲೆ ಬಂದೆರಗಿದ್ದಕ್ಕೆ ಶಾಂತಿಬಾಯಿಯವರು ತತ್ತರಿಸಿಹೋದರು. ಅವರು ಐಹಿಕ ಬದುಕಿಗೆ ವಿಮುಖರಾಗಿ ಆಧ್ಯಾತ್ಮದಲ್ಲಿ ಮನಸ್ಸನ್ನಿರಿಸಿ ವಿಠ್ಠಲ ಮತ್ತು ದತ್ತಾತ್ರೇಯರ ಭಕ್ತಳಾದಳು. ಬದುಕಿದ್ದಾಗಲೇ ದಂತಕಥೆಯಾಗಿದ್ದಳು. ಶಾಂತಿಬಾಯಿಯು ಮರಾಠಿ ಮತ್ತು ಕನ್ನಡ ಭಾಷೆಗಳಲ್ಲಿ ದೇವರನಾಮಗಳನ್ನು ರಚಿಸಿದ್ದಾರೆ.

ಆಶೆಯ ಬಿಡಿದಿದ್ಯೋ ಎನ್ನಾ ಮುಂದೆ
ವಾಸವಾಗದಂತೆ ಕಾಯೋ ಮೋಹನಾ
ವಾಸುದೇವನೆ ನಿನ್ನ ಸ್ಮರಣೆಯೊಳಗೆ ಮನ
ಸೂಚಿಸಿದಂತೆ ಸ್ಥಿರ ನಿಜದಲ್ಲಿ ನಿಲಿಸಯ್ಯಾ

ಎಂದು ತಂಬಾ ಸಹಜವಾಗಿ ವ್ಯಕ್ತಪಡಿಸಿದ್ದಾರೆ.

ಭಕ್ತಿ ಕವಿಗಳು ತಾವೀಗ ಮಾನವ ಜನ್ಮವೆತ್ತಿದ್ದಕ್ಕೆ ಹಿಂದಿನ ಜನ್ಮಗಳಲ್ಲಿ ಎಸಗಿದ ಪಾಪದ ಫಲವೆಂದು

ಭಾವಿಸಿದ್ದರು. ಶಾಂತಿಬಾಯಿಯ ಹಾಡುಗಳಲ್ಲಿಯೂ ಇಂಥ ಭಾವನೆಗಳು ಮೂಡಿವೆ.

ಹಿಂದೆ ನಾ ಮಾಡಿದ ಕುಂದಿನ ಫಲದಿಂದ

ಬೆಂದೆನು ಬಹುಜನ್ಮದೊಳಗೆ
ಮೂರುತಾಸುಗಳೆನ್ನ ಹಾರೈಸಿ ಸುಡುತಿದೆ ತಾರಕಗುರುಪ್ರಸನ್ನ
ಹಮ್ಮು ವಾಸನೆ ಬಿಟ್ಟು ನಿರ್ಮಲತೆಯ ಹೂಡಿ
ರಮ್ಯ ಸ್ವರ್ಗ ಸುಖವೀಯೊ ದೇವಾ

ಈ ಸಾಲುಗಳು ಸುಖ–ದುಃಖಗಳು ಪೂರ್ವಜನ್ಮದ ಫಲವೆಂಬುದನ್ನು ಸ್ಪಷ್ಟಪಡಿಸುತ್ತವೆ.

ಸಾಲು ಸಾಲು ಕಷ್ಟಗಳ ಮಳೆ ಸುರಿದರೂ ಛಲ ಬಿಡದೆ ಬದುಕಿ ಬೇರೆಯವರಿಗೆ ಬದುಕಿನ ಸಾರ್ಥಕತೆಯ ಭರವಸೆಯನ್ನು ಕಟ್ಟಿಕೊಡುವ ಕಾಯಕದಲ್ಲಿ ಸಾಹಿತ್ಯವನ್ನು ಅಪ್ಪಿಕೊಂಡ ದಿಟ್ಟ ಹೆಣ್ಣು ಈ ಮಲೆನಾಡ ಸಾಹಿತಿ.

**ಪದ್ಮಾವತಿ ಚನ್ನಪ್ಪ ರಸ್ತೋಗಿ**

ಪದ್ಮಾವತಿ ಚನ್ನಪ್ಪ ರಸ್ತೋಗಿ ಹೆಚ್ಚು ಬರೆಯಲಿಲ್ಲ. ಬರೆದಿರುವ ಏಕೈಕ ಕಥಾಸಂಕಲನ 'ಕೊಡಗರ ಹೆಣ್ಣು ಮುತ್ತಮ್ಮ'. ಅದರಲ್ಲಿ ಒಟ್ಟು ಹದಿನಾರು ಕಥೆಗಳಿವೆ. ಅವರ ಸಂಕಲನದ ಕಥೆಗಳು ಮುಖ್ಯವಾಗಿ ಹೆಣ್ಣಿನ ಧೈರ್ಯ, ಸಾಹಸ ಪ್ರವೃತ್ತಿ, ಕ್ಷತ್ರಿಯ ಸಾಮರ್ಥ್ಯವನ್ನು ಬಿಂಬಿಸುತ್ತವೆ.

ಪದ್ಮಾವತಿಯವರು ಸೇಡು, ಪ್ರೇಮದ ವಸ್ತುಗಳನ್ನು ಆಯ್ದುಕೊಂಡು ಕಥೆಗಳ ಮೂಲಕ ಹೆಣ್ಣಿನ ಧ್ಯರ್ಯ, ಶಕ್ತಿ ಸಾಹಸದ ಪ್ರವೃತ್ತಿಗಳ ವಿವಿಧ ಸಾಧ್ಯತೆಗಳನ್ನು ಕಾಣಿಸುತ್ತಾರೆ.

**ಸಾವಿತ್ರೀಬಾಯಿ ಬಾಳೇಗದ್ದೆ**

ಸಾವಿತ್ರೀಬಾಯಿ ಸಿರ್ಸಿ ತಾಲೂಕಿನ ಬಾಳೇಗದ್ದೆಯ ಸುಬ್ರಾಯ ಹೆಗ್ಗಡೆ ಎಂಬುವರನ್ನು ವಿವಾಹವಾದರು. ಇವರ ಕಾಲ ಖಚಿತವಾಗಿ ತಿಳಿಯದಿರುವುದರಂದ ಕ್ರಿ. ಶ.1899 ರಲ್ಲಿ ಜನಿಸಿರಬೇಕು. ಇವರು ಅನಕ್ಷರಸ್ಥೆ. ಆದರೆ ಕವನ ಕಟ್ಟುವ ಕಲೆ ಸುಪ್ತವಾಗಿತ್ತು. ಸಾವಿತ್ರೀಬಾಯಿಯವರು ಸಂಪ್ರದಾಯದ ಹಾಡುಗಳನ್ನು ಬರೆದಿದ್ದಾರೆ. ಮದುವೆ, ದೇವತಾಕಾರ್ಯಗಳು ನಡೆಯುತ್ತಿದ್ದರೆ ಆ ಸಂದರ್ಭಕ್ಕನುಗುಣವಾಗಿ ಇವರು ಹಾಡುತ್ತಿದ್ದುದನ್ನು "ನನ್ನ ಹಾಡು ಸರ್ಪನ ಗಂಟಿನಂತೆ ಆಗಿಹೋಗುವುದೆಂಬ ಅಂಜಿಕೆಯಿಂದ ನಾನು ನನ್ನ ಮೈದುನನಿಗೆ ಹೇಳಿದೆನು" ಎಂದು ಮೈದುನನಿಂದ ಬರಸಿಕೊಟ್ಟ ಸಂದರ್ಭವನ್ನು ವಿವರಿಸಿದ್ದಾರೆ. ಈ ಹಾಡುಗಳು ಮುಂದೆ 'ವನಿತಾ ಗೀತಾ ಮಂಜರಿ' ಎಂಬ ಶೀರ್ಷಿಕೆಯಲ್ಲಿ ಪುಸ್ತಕವಾಗಿ ಹೊರಬಂದಿತು. ಹೆಣ್ಣು ಮಗಳನ್ನು ಗಂಡನ ಮನೆಗೆ ಕಳಿಸಿಕೊಡುವ ಸಂದರ್ಭದಲ್ಲಿ ಬಾಯಿಯವರು ಹೇಳಿದ ಹಾಡು.

ಪೋಗಿ ಬಾರಲೆ ಗೆಳತಿ ಆದರದಿ ಪತಿಗೃಹಕೆ
ತಂದೆ ತಾಯ ಮಿತ್ರೆಯರ ಒಡಗೊಂಡು
ಪತಿಯ ಸಂಗಡ ವಿನಯದಿ ಬಾಳಲು ॥ ಪಲ್ಲವಿ॥

ಎಂದು ಸ್ನೇಹ ಸಂಹಿತೆಯಿಂದ ಆರಂಭವಾಗುವ ಹಾಡಿನಲ್ಲಿ

ಅತ್ತೆಮಾವಂದಿರಿಗೆ ನಮಿಸುತ್ತ ಬಾಲೆಯೆ
ಭಾವಮೈದುನರೊಳು ಪ್ರೀತಿಯ ತೋರುತ
ಪತಿ ಸೇವೆಯ ಮಾಡುತ ಇರು ಮಗಳೆ

ಎಂದು ಸ್ಥಾಪಿತ ಮೌಲ್ಯವನ್ನೇ ಬೋಧಿಸಲಾಗಿದೆ. ಹೀಗೆ ಈಕೆ ಸಾಂಪ್ರಾದಾಯಿಕ ದೃಷ್ಟಿಕೋನದಿಂದಲೇ ಹಾಡುಗಳನ್ನು ರಚಿಸಿದ್ದಾರೆ.

**ಕಳಸದ ಸುಂದರಮ್ಮ**

ಚಿಕ್ಕಮಗಳೂರು ಜಿಲ್ಲೆಯ ಸುಂದರಮ್ಮನ ಕಾಲ ಖಚಿತವಾಗಿ ತಿಳಿಯದು. ಹತ್ತೊಂಬತ್ತನೆ ಶತಮಾನದಲ್ಲಿ ರಬಹುದೆಂಬ ಊಹೆಯಿದೆ. ಇವರು 'ಕಾಳಿಮರ್ದನ ಕೃಷ್ಣ ' ಎಂಬ ಅಂಕಿತವನ್ನಿಟ್ಟುಕೊಂಡು ಹಾಡುಗಳನ್ನು ರಚಿಸಿದರು. ಇವರ ಹಾಡುಗಳ ಸಂಖ್ಯೆ 34. ಲಕ್ಷ್ಮಿ, ವಿಷ್ಣು, ಪಾರ್ವತಿ, ವಾಯುದೇವ, ಮದ್ವಾಚಾರ್ಯ, ವಾದಿರಾಜ, ಅಷ್ಟಮಠದ ಯತಿಗಳು ರಾಘವೇಂದ್ರ ಇವರನ್ನು ಕುರಿತು ದೇವರನಾಮಗಳನ್ನು ರಚಿಸಿದ್ದಾರೆ. ಶ್ರೀಹರಿಯನ್ನು ಬಗೆಬಗೆಯಾಗಿ

ಸ್ತುತಿಸುವುದು ಹರಿದಾಸ ಪರಂಪರೆಯಲ್ಲಿ ಬಂದ ಮಹಿಳಾ ಸಾಹಿತ್ಯದ ಲ್ಷಣವಾಗಿದೆ. ಸುಂದರಮ್ಮ ಕೂಡ ಇಂಥ ಲಕ್ಷಣವುಳ್ಳ ಹಾಡುಗಳನ್ನು ರಚಿಸಿದ್ದಾರೆ.

ಸುಂದರಾಂಗನೆ ನಿನ್ನ ಇಂದುಶ್ರೀ ರೂಪವ
ಚಂದದಲಿ ನೋಡುವೆನು ಆನಂದ ಪಡುವೆನು

ಹರಿಭಕ್ತಿಗಾಗಿ ಹಂಬಲಿಸುವ ಇವರು ಹರಪನಹಳ್ಳಿ ಭೀಮವ್ವನಂತೆ ಆಭರಣಗಳನ್ನು ತುಂಬ ಉತ್ಸಾಹದಿಂದ ವರ್ಣಿಸಿದ್ದಾರೆ. ಆ ಕಾಲದ ಅನೇಕ ಆಭರಣಗಳು ಇವರ ಹಾಡುಗಳಲ್ಲಿ ಮಿನುಗಿವೆ. ಹರಿದಾಸರ ಪ್ರಭಾವ ಇವರ ಕೃತಿಗಳ ಮೇಲೆ ಆಗಿರುವುದಕ್ಕೆ ನಿದರ್ಶನಗಳಿವೆ. 'ಈತನೀಗ ವಾಸುದೇವನು' ಎಂದು ಹಾಡಿದಂತೆ ಸುಂದರಮ್ಮನವರು 'ಈತನೇನೆ ಮುಖ್ಯ ಪ್ರಾಣದೇವರು' ಎಂದು ಹಾಡಿದ್ದಾರೆ. ಸಂಸಾರದಲ್ಲಿ ಅರಿಷಡ್ವರ್ಗಗಳನ್ನು ದೂರಮಾಡದೆ ತೊಳಲಿ ಬಳಲಿದುದನ್ನು ತಿಳಿಸುತ್ತ ಬಂಧನ ಬಿಡಿಸು ಎಂದು ಪರಿತಪಿಸುವ ಕೀರ್ತನೆಗಳು ಆತ್ಮನಿವೇದನೆಯ ಕೀರ್ತನೆಗಳು ಇವರು ರಚಿಸಿದವುಗಳಾಗಿವೆ.

**ಕೊಡಗಿನ ಗೌರಮ್ಮ**

ಕನ್ನಡ ನಾಡು ನುಡಿಗೆ ಗೌರವತಂದ ಸಾಹಸಿ ಹೆಂಗಸು ಕೊಡಗಿನ ಗೌರಮ್ಮ. ಈಕೆ ಪ್ರಬುದ್ಧ ಕತೆಗಾರ್ತಿ. ತಿರುಮಲೆ ರಾಜಮ್ಮ ತಮ್ಮ  ವೀಣಾವಾದನದಿಂದ ಗಾಂಧೀಜಿಯವರ ಮನಸ್ಸನ್ನು ಗೆದ್ದಿದ್ದರು. ಕೊಡಗಿನ ಗೌರಮ್ಮ ತಮ್ಮ ಉಪವಾಸ ವ್ರತದ ನಿಷ್ಠೆಯ ಮೂಲಕವೇ ಗಾಂಧೀಜಿಯವರನ್ನು ಸೆಳೆದವರು. ಆ ಕಾರಣಕ್ಕಾಗಿಯೇ ಒಮ್ಮೆ ಉಪವಾಸವ್ರತವನ್ನು ಕೊನೆಗೊಳಿಸುವಾಗ ಗಾಂಧೀಜಿ ಇವರ ಮನೆಗೆ ಬಂದು ಕಿತ್ತಳೆರಸ' ನೀಡುತ್ತಾರೆ. ತದನಂತರವೇ ಕೊಡಗಿನ ಗೌರಮ್ಮ ಅವರ ಉಪವಾಸ ಕೊನೆಗೊಳ್ಳುತ್ತದೆ. ಇವರು 1912 ರಲ್ಲಿ ಜನಿಸಿದರು. ಇವರು ಬಿ. ಡಿ. ಜಿ. ಕೃಷ್ಣರೊಂದಿಗೆ ವಿವಾಹವಾಗಿದ್ದರು. ಇವರು ತಮ್ಮ ಜೀವನವನ್ನು ಸಮಾಜಕ್ಕೋಸ್ಕರ ತ್ಯಾಗಮಾಡಿದ್ದು ಅದಕ್ಕಾಗಿ ತಮ್ಮ ಒಡವೆಗಳನ್ನು ಮಾರಿದ್ದರೂ ದೀನದಲಿತರ ಸೇವೆಯು ಅವರ ಮುಖ್ಯಕರ್ತವ್ಯವಾಗಿತ್ತು.

ನೇರ ನಡೆನುಡಿಯನ್ನು ಹೊಂದಿದ್ದ ಗೌರಮ್ಮ ತನಗೆ ಸರಿಯಾಗಿ ಕಂಡದ್ದನ್ನು ಧೈರ್ಯದಿಂದ ಹೇಳಿದ ಧೀಮಂತ ಸಾಹಿತಿಯಾಗಿದ್ದರು. ಇವರ ಕೃತಿಗಳು

1. **ಪುನರ್ವಿವಾಹ**
2. **ಕೆಲವು ಕಾಗದಗಳು**
3. **ಮನುವಿನ ರಾಣಿ**
4. **ಕೌಸಲ್ಯ ನಂದನ**
5. **ಕಂಬನಿ**
6. **ಚಿಗುರು**

ಇವರ ಈ ಕಥೆಗಳಲ್ಲಿ ನಿರೂಪಿತವಾದ ಹೆಣ್ಣಿನ ಜೀವನ ಮನಮಿಡಿಯುವಂತದ್ದಾಗಿದೆ. ಅಕಾಲ ಮರಣದಿಂದಾಗಿ ಅವರ ಬರಹ ಅರ್ಧಕ್ಕೆ ನಿಂತೂಹೋಯಿತು.

**ಮೂರ್ನಾಡಿನ ಪಾಂಡಂಡ ಎಂ ತಂಗಮ್ಮನವರು**

ತಂಗಮ್ಮನವರು ಐವತ್ತರ ದಶಕದಲ್ಲಿ ಕೊಡಗಿನ ಮಹಿಳೆ ಮೂರ್ನಾಡಿನ ಪಾಂಡಂಡ ಎಂ. ತಂಗಮ್ಮನವರು ಇಂದ್ರಗೋಪ, ಅರಳಿದ ಮೊಗ್ಗು, ಕೊಡಗಿನ ಮಲ್ಲಿಗೆ ಕವನ ಸಂಕಲನವನ್ನು ಹೊರತಂದಿದ್ದಾರೆ. ಕೊಡಗಿನ ಮಹಿಳೆಯರು ಬರೆದದ್ದು ಅಪರೂಪ. ಅದರಲ್ಲೂ ಬೆರಳೆಣಿಕೆಯಷ್ಟೇ ಮಂದಿ ಕಾವ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಭಕ್ತಿ ಹಾಗೂ ಪ್ರಕೃತಿ ಸೌಂದರ್ಯವನ್ನು ವರ್ಣಿಸುತ್ತಾರೆ. ಅಕ್ಕಿ ಬೀಸುವ ಹಾಡು ಹೂವಿನ ಮಾಲೆ, ಹಾಡೋಣ ಏರಿಗಳನ್ನು ಎಂಬ ಪ್ರಕೃತಿ ಗೀತೆ ಹಾಗೂ ಮಕ್ಕಳ ಕವನಗಳನ್ನು ತಂಗಮ್ಮನವರು ರಚಿಸಿದ್ದಾರೆ.

**ಲಕ್ಷ್ಮಿದೇವಿ**

ಲಕ್ಷ್ಮಿದೇವಿ ಮಲ್ಲಿಕಾ ಎಂಬ ಕಾವ್ಯನಾಮದಿಂದ ಚಿರಪರಿಚಿತವಾದವರು. ಚಿಕ್ಕಮಗಳೂರು ಜಿಲ್ಲೆಯ ಬಾಗೆ ಮನೆಯ ಪಾರ್ವತಮ್ಮ ಚನ್ನೆಗೌಡರ ಮಗಳಾಗಿ ಹುಟ್ಟಿದ ಮಲ್ಲಿಕಾ ಅವರು ಶಾಲೆಗೆ ಹೋಗಲು ಸಾಧ್ಯವಾಗದೆ ಮನೆಯಲ್ಲಿಯೇ ಸ್ವಯಂಶಿಕ್ಷಣ ಪಡೆದರು. ಕಡಿದಾಳ ಮಂಜಪ್ಪನವರ ಪತ್ನಿ. ಒಟ್ಟು 12 ಕವನ ಸಂಕಲನಗಳು, 53 ಕಥೆ, ಹಲವು ಕಾದಂಬರಿಗಳು ವಿವೇಕಾನಂದ ವಿಜಯದಂತಹ ಮಹಾಕಾವ್ಯವನ್ನು ರಚಿಸಿದ್ದಾರೆ. 1970 ರಲ್ಲಿ 'ಧ್ಯಾನವಾಸನ ಸಮಯೇ' 'ಪೂಜಾವಾಸನ ಸಮಯೇ' ವಿಜಯ ಗಾಥಾ, ಗಾನತೀರ್ಥ, ನಾದಬಿಂದು, ತರಂಗಿಣಿ ಹೀಗೆ ಇವರು ಹೊರ ತಂದಿರುವ ಕವನಗಳು ಆಧ್ಯಾತ್ಮಿಕತೆ, ಭಕ್ತಿ ದೈವೀಶ್ರದ್ಧೆಗಳೇ ಇವರ ಕಾವ್ಯದ ವಸ್ತುವಾಗಿವೆ.

> ಅಮೇರಿಕೆಯ ಸಾಹಿತ್ಯ ಜಗದಿ
> ಅಂದು ಪ್ರಖ್ಯಾತ ನಾಮನಿರ್ದಾ
> ನೀ ಹೆನ್ರಿ ದನಗಾಹಿತನದಿಂ
> ತನ್ನಯ ಜೀವನನಾರೈದಂ

**ಎಂ. ಕೆ. ಇಂದಿರಾ**

ಲೇಖಕಿಯರ ಸಂಖ್ಯೆ ಇವತ್ತಿನಷ್ಟು ದೊಡ್ಡ ಪ್ರಮಾಣದಲ್ಲಿಲ್ಲದ ಸಂದರ್ಭದಲ್ಲಿ ಎಂ.ಕೆ ಇಂದಿರಾ ಅವರು ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದರು. ಅವರು 5–1–1917ರಂದು ತೀರ್ಥಹಳ್ಳಿಯಲ್ಲಿ ಜನಿಸಿದರು. ತಂದೆ ತರೀಕೆರೆ ಸೂರ್ಯನಾರಾಯಣ ರಾವ್ ಹಾಗೂ ತಾಯಿ ಬನಂಶಕರಮ್ಮ, ಪತಿ ಎಂ ಕೃಷ್ಣರಾವ್. ಇಂದಿರಾ ಅವರು ಬದುಕಿನ ಕಷ್ಟ–ಸುಖಗಳನ್ನು ಕಂಡುಂಡು ಪಕ್ವಗೊಂಡ ನಂತರ ಸುಮಾರು 45 ನೇ ವಯಸ್ಸಿನಲ್ಲಿ ತುಂಗಭದ್ರ ಕಾದಂಬರಿಯ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶ ಮಾಡಿದರು.

ನಂತರದಲ್ಲಿ ಅವರು ಬರೆದ ಸಾಹಿತ್ಯದಲ್ಲಿ 49 ಕಾದಂಬರಿಗಳು ಹನ್ನೊಂದು ಕಥಾ ಸಂಕಲನಗಳೂ ಸೇರಿವೆ.

ಎಂ. ಕೆ ಇಂದಿರಾ ಅವರಿಗೆ ಸದಾನಂದ, ನವರತ್ನ, ಫಣಿಯಮ್ಮ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು ಲಭಿಸಿವೆ. 1975 ರಲ್ಲಿ ಶ್ರೇಷ್ಠ ಲೇಖಕಿ ಪ್ರಶಸ್ತಿ ಸಂದಿದೆ. 1980ರಲ್ಲಿ ಸಾಹಿತ್ಯ ಪರಿಷತ್ತಿನಿಂದ ಗೌರವ ಪ್ರಶಸ್ತಿಗಳು ಲಭಿಸಿದ್ದು ಅವರು ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರ ಗೆಜ್ಜೆಪೂಜೆ, ಫಣಿಯಮ್ಮ, ಸದಾನಂದ ಮುಂತಾದ ಕಾದಂಬರಿಗಳನ್ನು ಆಧರಿಸಿ ನಿರ್ದೇಶಿತವಾದ ಚಲನಚಿತ್ರಗಳು ಜನಮನ್ನಣೆ ಪಡೆದಿವೆ. ಇಂದಿರಾ ಅವರು ವಿಧವಾ ಸಮಸ್ಯೆ, ಬಾಲ್ಯವಿವಾಹ, ಕೇಶಮುಂಡನ, ವೇಶ್ಯಾಸಮಸ್ಯೆ, ಸ್ತ್ರೀಯರ ಅನಕ್ಷರತೆ, ಅಧೀನತೆಗಳನ್ನು ತಮ್ಮ ಕಥಾ ವಸ್ತುವಾಗಿ ತೆಗೆದುಕೊಳ್ಳುತ್ತಾರೆ.

ಸನ್ಯಾಸಿಗಳ ಡಾಂಭಿಕತನ, ಕ'ಪಟತನ, ವರದಕ್ಷಿಣೆ, ಬಾಲ್ಯವಿವಾಹ, ವೇಶ್ಯಾಸಮಸ್ಯೆ, ಅಂಗವಿಕಲರ ಸಮಸ್ಯೆ ವಠಾರದ ಜನಗಳ ನೋವು ನಲಿವುಗಳು ಬಡತನ, ಪ್ರಾಕೃತಿಕ ಸ್ತ್ರೀ ಶೋಷಣೆ, ನಗರ ಜೀವನ, ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು, ಅವಿವಾಹಿತ ಹೆಣ್ಣಿನ ಆಂತರ್ಯ, ವಿದೇಶಿ ನೆಲದಲ್ಲಿ ನೆಲೆಸಿರುವ, ಭಾರತೀಯರ ಸಮಸ್ಯೆ ಹೀಗೆ ವೈವಿಧ್ಯಮಯ ವಸ್ತುಗಳನ್ನು ಆಧರಿಸಿ ಎಂ.ಕೆ.ಇಂದಿರಾ ಕೃತಿಗಳನ್ನು ಬರೆದಿದ್ದಾರೆ. ಸಾಮಾಜಿಕ ಸಮಸ್ಯೆಗಳ ಬಗೆಗೆ, ಮಾಮೂಲಿ ಪ್ರೀತಿ, ಪ್ರಣಯ, ಭಗ್ನ ಪ್ರೇಮ ಸ್ತ್ರೀ ಪರ ಕಾಳಜಿಗಳು ದಟ್ಟವಾಗಿವೆ. ಇವರ ಸ್ತ್ರೀ ಪಾತ್ರಗಳು ಸಾಂಪ್ರದಾಯಿಕ ನೆಲೆ ಮೀರುವ ಭ್ರಮೆ ಹುಟ್ಟಿಸಿದರೂ ಯಥಾಸ್ಥಿತಿಯಲ್ಲಿ ಪುರುಷ ನಿರ್ಮಿತ ಚಕ್ರದೊಳಗೇ ಒದ್ದಾಡುತ್ತವೆ. ಅದರಾಚಗೆ ಬರುವ ಬಯಕೆ ತೋರಿದರೂ ರಹದಾರಿ ಅರಿಯದವರಾಗುತ್ತಾರೆ.

**ಡಾ. ಅನುಪಮ ನಿರಂಜನ**

ಡಾ.ಅನುಪಮ ನಿರಂಜನ ಇವರು ವೃತ್ತಿಯಿಂದ ವೈದ್ಯೆಯಾಗಿ ಪ್ರವೃತ್ತಿಯಿಂದ ಲೇಖಕಿಯಾದ ಅನುಪಮ ನಿರಂಜನ ಅವರು 17–5–1934 ರಂದು ತೀರ್ಥಹಳ್ಳಿಯಲ್ಲಿ ಡಿ. ಎಸ್.ಶಿವರಾಮಯ್ಯ ಹಾಗೂ ಲಕ್ಷ್ಮಿದೇವಮ್ಮನವರ ಮಗಳಾಗಿ ಜನಿಸಿದರು. ಹೆಣ್ಣು ಮಕ್ಕಳು ಕಾಲೇಜಿನ ಮೆಟ್ಟಿಲು ಹತ್ತುವುದೇ ಅಪರೂಪವಾದ ದಿನಗಳಲ್ಲಿ ಎಂ. ಬಿ. ಬಿ. ಎಸ್ ಪರೀಕ್ಷೆ ಮುಗಿಸಿ ವೈದ್ಯರಾದರು. ಜಾತಿಯ ಬಗೆಗೆ ತು'ಂಬಾ ಮಡಿತನವಿದ್ದ ದಿನಗಳಲ್ಲೇ ಪ್ರಗತಿಶೀಲ ಲೇಖಕರಾದ ನಿರಂಜನರನ್ನು ಅಂತರ್ಜಾತಿ ವಿವಾಹವಾದರು. ಇಪ್ಪತ್ತೆರಡು ಕಾದಂಬರಿಗಳು, ಒಂಬತ್ತು ಕಥಾಸಂಕಲನಗಳು, ಒಂದು ನಾಟಕ, ಶಿಶು ಸಾಹಿತ್ಯ, ಆತ್ಮಕಥೆ ಪ್ರವಾಸ ಕಥನಗಳು, ವೈದ್ಯಕೀಯ ಬರವಣಿಗೆಗಳು ಹೀಗೆ ಕನ್ನಡ ಸಾಹಿತ್ಯದ

ಅನೇಕ ಪ್ರಕಾರಗಳಲ್ಲಿ ಉತ್ತಮ ಕೊಡುಗೆಗಳನ್ನು ನೀಡಿದ್ದಾರೆ. ಇಷ್ಟೆಲ್ಲ ಸಾಹಿತ್ಯದ ಪ್ರಕಾರಗಳಲ್ಲಿ ಪ್ರವೇಶ ಪಡೆದರೂ ಮೇಲುಗೈ ಸಾಧಿಸಿದ್ದು ಕಾದಂಬರಿ ಪ್ರಕಾರದಲ್ಲೇ ಎನ್ನಬಹುದು.

ಅನುಪಮಾ ಅವರಿಗೆ ಮಹಿಳೆಯರ ಬಗ್ಗೆ ಅಪಾರ ಕಳಕಳಿ ಇದೆ. ಅವರಿಗೆ ತಿಳುವಳಿಕೆ ನೀಡಬೇಕು. ಅವರಲ್ಲಿ ಜಾಗೃತಿ ಉಂಟು ಮಾಡಬೇಕು. ಮಹಿಳಾ ಬದುಕಿನ ಸ್ವರೂಪ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೊಸ ಅರ್ಥ ಪಡೆಯಬೇಕೆಂಬ ಹಿನ್ನೆಲೆಯಲ್ಲಿ ಶುಭ ಕಾಮನೆ, ಮಾನಿನಿ, ನಾರಿಲೋಕ, ಮುಂತಾದ ಕೃತಿಗಳನ್ನು ರಚಿಸಿದರು. ಇದರೊಂದಿಗೆ ಮಹಿಳೆಯರ ಆರೋಗ್ಯ, ಅವರ ಆರೋಗ್ಯ ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುವ ವ್ಯಾಯಾಮಗಳ ಮಹತ್ವ, ತಾಯಿಮಗುವಿನ ಆರೋಗ್ಯ, ಹೊಸದಾಗಿ ಸಾಂಸಾರಿಕ ಜೀವನ ಪ್ರವೇಶಿಸುತ್ತಿರುವ ಹೊಸ ವಧುವಿಗೆ ಕಿವಿಮಾತು, ದಾಂಪತ್ಯ ದೀಪಿಕೆ, ಸ್ತ್ರೀ ಸ್ವಾಸ್ಥ್ಯಸಂಹಿತೆ, ಕಿಶೋರಾವಸ್ಥೆಗೆ ಪ್ರವೇಶಿಸುತ್ತಿರುವ ಹದಿಹರೆಯದ ಹೆಣ್ಣಿಗೆಂದೇ ಕೇಳು ಕಿಶೋರಿ ಎಂಬ ಕೃತಿಗಳ ಮೂಲಕ ಅನುಪಮಾರವರು ಸ್ತ್ರೀವಾದಿ ಚಿಂತನೆಯನ್ನು ಅಭಿವ್ಯಕ್ತಿಸಿದ್ದಾರೆ.

ಅನುಪಮಾ ಅವರ ಪ್ರತಿಭೆಗೆ 1978ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1978ರಲ್ಲಿ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, 1983ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, 1987ರಲ್ಲಿ ನಂಜನಗೂಡು ತಿರುಮಲಾಂಬಾ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿ ಗೌರವ, ಮಾನ ಸನ್ಮಾನಗಳು ದೊರೆತಿವೆ. ಅವರ 'ಋಣ' ಕೃತಿ ಚಲನಚಿತ್ರವಾಗಿ ಜನಪ್ರಿಯತೆ ಗಳಿಸಿದೆ.

**ಎಸ್. ಎಸ್ ಕಾತ್ಯಾಯಿನಿ**

ಎಸ್. ಎಸ್ ಕಾತ್ಯಾಯಿನಿಯವರು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಎಸಳೂರು ಪೇಟೆ ಗ್ರಾಮದ ಎಸ್. ಸಿದ್ಧಯ್ಯ ಹಾಗೂ ರುದ್ರಮ್ಮನವರ ಮಗಳಾಗಿ 16-6-1923 ರಲ್ಲಿ ಜನಿಸಿದರು ಸಿದ್ಧಯ್ಯನವರು ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದುದರಿಂದ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸಬೇಕೆಂಬ ಆಸೆ ಅವರದು. ಅದರಂತೆ ಕಾತ್ಯಾಯಿನಿಯವರು ಉತ್ತಮ ದರ್ಜೆಯಲ್ಲಿ ಬಿ.ಎಸ್ಸಿ. ಆನರ್ಸ್ ಪದವಿ ಪಡೆದು ದುಡಿಯುತ್ತಲೇ ಭೌತಶಾಸ್ತ್ರದ ಎಂ. ಎಸ್ಸಿ. ಮಾಡಿ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ 1979ರಲ್ಲಿ ನಿವೃತ್ತರಾಗುವವರೆಗೆ ಸರ್ಕಾರಿ ಕಾಲೇಜಿನಲ್ಲಿ ಸೇವೆ ಸಲ್ಲಿಸಿದರು. ವಿವಾಹದ ಬಗ್ಗೆ ಆಸಕ್ತಿ ತೋರಿಸದೆ ಅವಿವಾಹಿತರಾಗಿಯೇ ಉಳಿದರು.

ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿಯಿರುವ ಕಾತ್ಯಾಯಿನಿಯವರು 1954ರಲ್ಲಿ 'ಮಾಲಾ ಮತ್ತು ಇತರ ಕಥೆಗಳು' ಎಂಬ ಶೀರ್ಷಿಕೆಯ ಸಣ್ಣ ಕಥಾ ಸಂಕಲನವನ್ನು ಹೊರತಂದರು. ಅವರ ಇತರ ಕೃತಿಗಳೆಂದರೆ 1979ರಲ್ಲಿ ಪ್ರಕಟಿಸಿದ ಕಥಾ ಸಂಕಲನ. ಗೌರಿ ಮತ್ತು ಇತರ ಕಥೆಗಳು 1986ರಲ್ಲಿ ಹೊರತಂದ ಕಾದಂಬರಿ 'ಗಂಗಾ ತರಂಗ' ಇದಲ್ಲದೆ 'ರಾಮನ್ ಪರಿಣಾಮ' ಎಂಬ ವಿಜ್ಞಾನ ಪುಸ್ತಿಕೆಯನ್ನು ಪ್ರಕಟಿಸಿದ್ದಾರೆ.

ಕಾತ್ಯಾಯಿನಿಯವರ ಎಲ್ಲ ಕಥೆಗಳ ಕೇಂದ್ರದ ಪಾತ್ರ ಹೆಣ್ಣು. ಅವರ ಕಥೆಗಳ ವೈಶಿಷ್ಟ್ಯ ತಮ್ಮ ಕಥಾನಾಯಕಿಯನ್ನೇ ಕಥೆಯ ಶೀರ್ಷಿಕೆಯಾಗಿರಿಸಿರುವುದು ಒಂದು ವಿಶೇಷ.

**ಶ್ರೀಮತಿ ಸವಿತಾ ನಾಗಭೂಷಣ (1961)**

ಸಮಕಾಲೀನ ಕನ್ನಡ ಕವಿಯತ್ರಿಯರ ನಡುವೆ ವಿಭಿನ್ನವೂ ವಿಶಿಷ್ಟವೂ ಆದ ವ್ಯಕ್ತಿತ್ವವುಳ್ಳ ಸವಿತಾ ನಾಗಭೂಷಣ ಇವರು ಚಿಕ್ಕಮಗಳೂರಿನಲ್ಲಿ ಜನಿಸಿದರು. ಶಿವಮೊಗ್ಗೆಯಲ್ಲಿ ಬಿ. ಕಾಂ. ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಿಂದ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸ್ವಯಂನಿವೃತ್ತಿ ಪಡೆದಿದ್ದಾರೆ.

ಸವಿತಾ ನಾಗಭೂಷಣರವರು ಶ್ರೇಷ್ಟ ಬರಹಗಾರರು. ನಾ ಬರುತ್ತೇನೆ ಕೇಳು, ಚಂದ್ರನನ್ನು ಕರೆಯಿರಿ ಭೂಮಿಗೆ, ಹೊಳೆಮಗಳು ಜಾತ್ರೆಯಲ್ಲಿ ಶಿವ ಇವರ ಪ್ರಮುಖ ಕವನ ಸಂಕಲನಗಳು. ಇವರ ವಿಶಿಷ್ಟ ನಿರೂಪಣೆಯ ಸ್ತ್ರೀಲೋಕ ಕಾದಂಬರಿ ವಿಮರ್ಶಕರ ಗಮನ ಸೆಳೆದಿದೆ. 'ನಾ ಬರುತ್ತೇನೆ ಕೇಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಬಹಳ ಹಿಂದಿನಿಂದಲೂ ಗಂಡು ಹೆಣ್ಣು ಎಂಬ ಭೇಧಭಾವ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಅನಾರೋಗ್ಯಕರ ಹಾಗೂ ಅವೈಜ್ಞಾನಿಕ ಸಂಗತಿಯಾಗಿದೆ. ಹೆಣ್ಣನ್ನು ಕೀಳಾಗಿ ನೋಡುವ ಪ್ರವೃತ್ತಿ ಹೇಯವಾದುದು. ಹೆಣ್ಣು ಹುಟ್ಟಿದಾಗಲೇ ಪ್ರತಿಕ್ರಿಯಿಸುವ ತಂದೆ ಹಾಗೂ ಬಂಧು ಬಳಗದವರ ರೀತಿ ಅಮಾನವೀಯವಾದುದು.

ಪುರುಷ ಪ್ರಧಾನವ್ಯವಸ್ಥೆಯಲ್ಲಿ ಹೆಣ್ಣು ತಾರತಮ್ಯದಿಂದ ಅವಕಾಶಗಳಿಲ್ಲದೆ ಅವಜ್ಞೆಗೆ ಗುರಿಯಾಗುತ್ತಿರುವುದು ಒಂದು ಸಾಮಾಜಿಕ ದುರಂತ. ಹೆಣ್ಣನ್ನು ಅಲಕ್ಷಿಸುವ ಸಮಾಜ ಅವಿವೇಕಿಯಾದುದು. ಹೆಣ್ಣಿಗೆ ಹೆಣ್ಣೇ ರಕ್ಷಣೆ ನೀಡಿ ಸಹಾನುಭೂತಿಯ ಶಕ್ತಿಯಾಗಬೇಕಿದೆ ಎಂಬುದನ್ನು ಅವರ ಕವಿತೆಗಳು ಪ್ರತಿಪಾದಿಸುತ್ತವೆ.

# ಮಲೆನಾಡಿನ ದಲಿತ ಮಹಿಳೆ

**ನವೀನ ಮಂಡಗದ್ದೆ**

ಮಲೆನಾಡೆಂದರೆ ಅದೊಂದು ವಿಶೇಷವಾದ ಜಗತ್ತು. ಅಲ್ಲಿ ಗಿಡ ಮರಗಳಿಂದ ಹಿಡಿದು ಪ್ರಾಣಿಪಕ್ಷಿಗಳ ಸಹಿತ ಒಂದರ ಜೊತೆ ಒಂದು ಸಂಬಂಧವನ್ನು ಹೊಂದಿದೆ.

ಈ ಪ್ರಾಕೃತಿಕ ಜಗತ್ತಿನಂತೆ ಇಲ್ಲಿನ ಮನುಷ್ಯ ಜಗತ್ತು ಕೂಡ ವಿಶೇಷವಾದುದು. ಎಲ್ಲಾ ಮೇಲ್ವರ್ಗದ ಜನರಿಗೆ ಒಂದು ರೀತಿಯಲ್ಲಿ ಆಧಾರಸ್ತಂಭದಂತೆ ನಿಂತಿರುವವರು ದಲಿತರು. ಇಲ್ಲಿ ದಲಿತರ ಕುರಿತ ಒಂದು ಮುಖ್ಯ ವಿಷಯವನ್ನು ಹೇಳಬೇಕು. ಅದೇನೆಂದರೆ ಮಲೆನಾಡಿನ ದಲಿತರಲ್ಲಿ ಎರಡು ರೀತಿಗಳಿವೆ. ಒಂದು ಇಲ್ಲಿಯ ಮೂಲನಿವಾಸಿಗಳು, ಇನ್ನೊಂದು ಬೇರೆ ಕಡೆಯಿಂದ ವಲಸೆ ಬಂದವರು.

ಇಲ್ಲಿಯ ಮೂಲನಿವಾಸಿಗಳನ್ನು ಹೊಲೆಯರೆಂದು ಬೇರೆ ಕಡೆಯಿಂದ ವಲಸೆ ಬಂದವರನ್ನು ಹಸಲರೆಂದು ಕರೆಯಲಾಗುತ್ತದೆ. ಈ ಹಸಲರ ಪೂರ್ವಜರು ಉದ್ಯೋಗವನ್ನು ಅರಸುತ್ತ ಅಥವಾ ಕುವೆಂಪು ಕಾದಂಬರಿಯಲ್ಲಿ ಉಲ್ಲೇಖಿತವಾಗಿರುವ ಸೇರೆಗಾರರ ಜೊತೆ ಕೆಲಸಕ್ಕೆ ಬಂದು ಇಲ್ಲೆ ನೆಲೆ ನಿಂತರು. ಇವೆರಡೂ ಜನಾಂಗಗಳ ಬಗೆಗೆ ಸ್ಥೂಲವಾಗಿ ನೋಡುವುದಾದರೆ ಹೊಲೆಯರ ಕೆಲಸಗಳೆಂದರೆ ಇವರು ಸತ್ತ ದನಗಳ ಚರ್ಮವನ್ನು ಸುಲಿದು ಅದರ ಮಾಂಸಭಕ್ಷಣೆಯನ್ನು ಮಾಡುತ್ತಾರೆ. ಮಾರಿಹಬ್ಬದ ಸಂದರ್ಭದಲ್ಲಿ ಮಾರಿಗೆ ಕಡಿದ ಕೋಣಗಳನ್ನು ಸಂಪೂರ್ಣವಾಗಿ ಇವರಿಗೆ ನೀಡಲಾಗುತ್ತದೆ. ಇವರ ಬಳಿ ಚರ್ಮದಿಂದ ಮಾಡಿದ "ಹಲಗೆ" ಎಂಬ ಚರ್ಮವಾದ್ಯವಿರುತ್ತದೆ. ಇದನ್ನು ಕೆಲವು ಸಂದರ್ಭದಲ್ಲಿ ಮಾತ್ರ ಬಳಸಲಾಗುತ್ತದೆ, ಊರಿನಲ್ಲಿ ಯಾರಾದರೂ ಮರಣ ಹೊಂದಿದಾಗ ಇವರು "ಹಲಗೆ"ಯನ್ನು ಬಡಿಯುತ್ತ ಶವ ಸಂಸ್ಕಾರದ ಕಡೆಗೆ ಸಾಗುತ್ತಾರೆ. ಮಾರಿ ಹಬ್ಬದ ಸಂದರ್ಭದಲ್ಲಿ ಇವರು ಹಲಗೆ ಬಡಿಯುತ್ತಾರೆ. ವಿಶೇಷವಾಗಿ ಬ್ಯಾಂಕ್, ಗ್ರಾಮಪಂಚಾಯಿತಿ, ಸಹಕಾರಿ ಸಂಘಗಳಿಗೆ ಸಂಬಂಧಿಸಿದಂತೆ ಏನಾದರೂ ಪ್ರಕಟಣೆಗಳಿದ್ದಲ್ಲಿ ಇವರು ಹಲಗೆ ಬಡಿಯುತ್ತ ಪ್ರಕಟಣೆಯನ್ನು ಸಾರುತ್ತ ಹೋಗುತ್ತಾರೆ. ಆದರೆ ಇದು ಅತಿ ವಿರಳ. ಉಳಿದಂತೆ ಇವರು ಕೂಲಿ ಕೆಲಸ ಮಾಡುತ್ತಾರೆ. ನಾನು ನನ್ನ ವೈಯಕ್ತಿಕ ಅನುಭವದ ಒಂದೆರಡು ಸಂದರ್ಭಗಳನ್ನು ಇಲ್ಲಿ ಉಲ್ಲೇಖಿಸಬೇಕು. ಈ ಹೊಲೆಯರೆಂಬ ಜನಾಂಗ ಯಾವುದೇ ಮದುವೆ, ಶ್ರಾದ್ಧದಂತಹ ಕಾರ್ಯಕ್ರಮವಿರಲ್ಲಿ ಅಲ್ಲಿ ಎಂಜಲೆಲೆಗಳನ್ನು ಎತ್ತುತ್ತ ಕೆಲಸ ನಿರ್ವಹಿಸುತ್ತಾರೆ. ಇನ್ನು ನಾನು ಅತ್ಯಂತ ನೋವಿನಿಂದ ಹೇಳಬೇಕಾದ ಸಂಗತಿಯೆಂದರೆ ನನ್ನೂರಿನಲ್ಲಿ ಕೊಲೆಯಾದ ಅಪರಿಚಿತ ಶವವೊಂದು ದೊರಕಿತು. ಅದರ ಸಮೀಪವೂ ಸುಳಿಯಲಾರದ ಸ್ಥಿತಿಯನ್ನು ಅದು ತಲುಪಿತ್ತು. ಕೆಲವು ದಲಿತ ಯುವಕರು ಆ ಶವವನ್ನು ವೈದ್ಯರ ಸಲಹೆಯಂತೆ ಬರಿಗೈನಲ್ಲೆ ಮುಟ್ಟಿ ಅದಕ್ಕೊಂದು ವ್ಯವಸ್ಥೆ ಮಾಡಿದ್ದು ನನ್ನನ್ನು ಇವತ್ತೂ ಕೂಡ ದಿಗ್ಭ್ರಮೆಗೊಳಿಸಿದೆ. (ಈ ಘಟನೆ ನಡೆದದ್ದು 28-2-2005 ಸೋಮವಾರ) ಇನ್ನು ಹಸಲರು ಇವರ ಹೊಲೆಯರಿಗಿಂತ ಭಿನ್ನ, ಇವರ ಮನೆ ಭಾಷೆ ತುಳು. ಇವರು ಮದುವೆಯಂತಹ ಶುಭ ಸಂದರ್ಭದಲ್ಲಿ ಮಂಗಳವಾದ್ಯವನ್ನು ಊದುತ್ತಾರೆ, ಇವರ ಕೆಲಸ ಕೂಲಿ. ಇವರು ಮೇಲ್ವರ್ಗದವರನ್ನು ಅತಿ ಗೌರವದಿಂದ ಕಾಣುತ್ತಾರೆ.

ಹೊಲೆಯರಿಗೆ ಹೋಲಿಸಿದರೆ ಹಸಲರಿಗೆ ಸರ್ಕಾರದಿಂದ ಯಾವ ಸೌಲಭ್ಯವೂ ದೊರಕಿಲ್ಲ. ಹೊಲೆಯರಿಗೆ ಸರ್ಕಾರವೇ ವಸತಿವ್ಯವಸ್ಥೆ ಮಾಡಿಕೊಟ್ಟಿದೆ. ಹಸಲರು ಇದರಿಂದ ವಂಚಿತರಾಗಿದ್ದಾರೆ. ಈ ಹೊಲೆಯರು ಮತ್ತು ಹಸಲರು ತೀರ್ಥಹಳ್ಳಿ ತಾಲ್ಲೂಕಿನಾದ್ಯಂತ ಇದ್ದಾರೆ. ಇದರಲ್ಲಿ ಹೊಲೆಯರು ತೀರ್ಥಹಳ್ಳಿ ತಾಲೂಕು ಮಂಡಗದ್ದೆ ಸಮೀಪದ ನೆಲ್ಲಿಸರ ಎಂಬ ಊರಿನಲ್ಲಿ ಇದ್ದಾರೆ. ಹಸಲರು ಇದೇ ತೀರ್ಥಹಳ್ಳಿ ತಾಲ್ಲೂಕಿನ ತೂದೂರು ಸಮೀಪದ ಹಳ್ಳಿಗಳಲ್ಲಿ ಇದ್ದಾರೆ. ಇವರನ್ನು ಒಟ್ಟಾರೆಯಾಗಿ ನೋಡುವುದಾದರೆ ಎರಡು ಜನಾಂಗಗಳ ಪರಿಸ್ಥಿತಿ ನಿಕೃಷ್ಟವಾಗಿಯೇ ಇದೆ.

ಇವರು ಶಿಕ್ಷಣದಿಂದ ವಂಚಿತರು. ಇತರರಿಂದ ಬೇಗ ಮೋಸಕ್ಕೆ ಒಳಗಾಗುವವರು, ಮದ್ಯವ್ಯಸನಿಗಳು ಇದರಿಂದಲೇ ಇವರ ಬದುಕು ದುರ್ಬರವಾಗುತ್ತಿದೆ.

ದಲಿತ ಜಗತ್ತಿನಲ್ಲಿ ಪುರುಷ ಪ್ರಧಾನತೆ ಇದ್ದರೂ ಸಹ ಮಹಿಳಾ ಜಗತ್ತಿನ ಬಗೆಗೆ ವಿಶೇಷವಾಗಿ ಗಮನಿಸಲೇಬೇಕು. ಮದ್ಯವ್ಯಸನಿಗಳು, ಭವಿಷ್ಯತ್ತಿನ ಬಗ್ಗೆ, ತಮ್ಮ ಮಕ್ಕಳ ಬಗೆಗೆ ಅಷ್ಟೇನೂ ಯೋಚನೆ ಮಾಡದ ಪುರುಷರ ನಡುವೆ, ಮಹಿಳೆಯರು ಬದುಕಿಗಾಗಿ ನಡೆಸುವ ಹೋರಾಟಗಳು ಈ ಜಗತ್ತಿಗೆ ಹೆಣ್ಣು ಎಷ್ಟು ಅಗತ್ಯ ಎಂಬುದನ್ನು ಮನದಟ್ಟು

ಮಾಡಿಸುತ್ತದೆ. ನನ್ನ ಈ ಲೇಖನದಲ್ಲಿ ನಾನು ವೈಯಕ್ತಿಕವಾಗಿ ನೋಡಿರುವ ದಲಿತರ ಮಹಿಳೆಯರ ಚಿತ್ರಣವನ್ನು ನನ್ನ ಮಿತಿಯಲ್ಲಿ ವಿವರಿಸಲು ಬಯಸುತ್ತೇನೆ. ಮನುವಿನಂತಹ ಸ್ಮೃತಿಕಾರ ಹೆಣ್ಣು ಬಾಲ್ಯದಲ್ಲಿ  ತಂದೆಯ ರಕ್ಷಣೆಯಲ್ಲೂ, ಯೌವ್ವನದಲ್ಲಿ ಗಂಡನ ರಕ್ಷಣೆಯಲ್ಲೂ, ಮುಪ್ಪಿನಲ್ಲಿ ಮಕ್ಕಳ ರಕ್ಷಣೆಯಲ್ಲೂ ಇರಬೇಕೆಂದು ಹೇಳಿ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದು ಸಾರಿದ'. ಆದರೆ ದಲಿತ ಮಹಿಳೆಯರಿಗೆ ಈ ಮಾತನ್ನು ಅನ್ವಯಿಸಲು ಸಾಧ್ಯವೇ ಇಲ್ಲ. ದಲಿತ ಮಹಿಳೆ ಹೀಗೆ ಪುರುಷ ರಕ್ಷಣೆಯನ್ನು ಬಯಸುತ್ತಾ ಕುಳಿತರೆ ಅದು ಕೇವಲ ಮರೀಚಿಕೆಯಷ್ಟೆ. ದಲಿತ ಪುರುಷರಿಗೆ ತಮ್ಮದೇ ಆದ ಹಳವಂಡಗಳಿರುತ್ತವೆ. ಅವುಗಳನ್ನು ಸರಿ ಮಾಡುವುದರಲ್ಲೇ ಅವರು ದಿನ ಕಳೆಯುತ್ತಾರೆ. ದಲಿತ ಮಹಿಳೆಯರು ಕಷ್ಟಜೀವಿಗಳು. ಅವರು ಯಾವುದೇ ಕೆಲಸಕ್ಕೂ ಸಹ ಸೋಮಾರಿತನ ಮಾಡುವುದಿಲ್ಲ. ಮಲೆನಾಡಿನಲ್ಲಿ ಒಂಟಿ ಮನೆಗಳೇ ಹೆಚ್ಚು. ಎಲ್ಲಿಗಾದರೂ ಹೋದ ಪುರುಷರು ಬರದಿದ್ದರೂ ಇರಬಹುದು. ಅಂತಹ ಸಮಯದಲ್ಲಿ ಚಿಕ್ಕಮಕ್ಕಳ ಜೊತೆ ಪ್ರತಿಕ್ಷಣವೂ ಕೂಡ ಅಪಾಯದ ನಿರೀಕ್ಷೆಯಲ್ಲಿ ಇದ್ದು ಯಾರಾದರೂ ಪರಪುರುಷ ಬಂದು ತನ್ನ ಮೇಲೆ ದೌರ್ಜನ್ಯವೆಸಗಬಹುದೇ? ಕ್ರೂರ ಮೃಗಗಳು ದಾಳಿಮಾಡಬಹುದೆ? ಎಂಬ ಭಯ–ಭೀತಿಯ ಸಾಂಗತ್ಯದ ಜೊತೆಗೆ ಇರುವ ದಲಿತ ಮಹಿಳೆಯ ಚಡಪಡಿಕೆಯನ್ನು ನಿರ್ಜೀವವಿರುವ ನನ್ನ ಲೇಖನಿ ವರ್ಣಿಸಬಲ್ಲದೆ? ಮಲೆನಾಡಿನಲ್ಲಿ ಸಾಮಾನ್ಯವಾಗಿರುವ ಮೂರು ಕೆಲಸಗಳೆಂದರೆ ಒಂದು ಭತ್ತದನಾಟಿ (ಮಲೆನಾಡಿನ ಭಾಷೆಯಲ್ಲಿ ನಟ್ಟಿ) ಅಡಿಕೆ ಸುಲಿತ, ಗದ್ದೆ ಕೊಯ್ಲು. ಈ ಮೂರು ಕೆಲಸಗಳಲ್ಲಿ ದಲಿತ ಮಹಿಳೆಯರು ಮುಂಚೂಣಿಯಲ್ಲಿರುತ್ತಾರೆ. ಏಕೆಂದರೆ ಅದು ಅವರಿಗೆ ಬದುಕಿನ ಅನಿವಾರ್ಯತೆ. ವಿಪರೀತ ಮಳೆಯಾಗುವ ಮಲೆನಾಡಿನಲ್ಲಿ ಬೆಳಗ್ಗಿನಿಂದ ಸಂಜೆಯವರೆಗೂ ನೀರಿನಲ್ಲಿ ನಿಂತು ನಾಟಿ ಮಾಡಬೇಕಾಗುತ್ತದೆ. ಇಲ್ಲಿ ಗಾಳಿಮಳೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ, ಹೇಗೋ ಸಂಜೆಯವರೆಗೂ ನಾಟಿ ಮುಗಿಸಿ ಬಂದು ಬೆಂಕಿ ಹೊತ್ತಿಸಲು ಸೌದೆಯನ್ನು ಹುಡುಕಿದರೆ ದಿನವಿಡಿ ಬಿದ್ದ ಮಳೆಯಿಂದ ಅದೆಲ್ಲ ಸಂಪೂರ್ಣವಾಗಿ ನೀರಿನಿಂದ ಒದ್ದೆಯಾಗಿ ಶತಪ್ರಯತ್ನಪಟ್ಟರೂ ಬೆಂಕಿ ಹೊತ್ತುವುದಿಲ್ಲ. ಇಂತಹ ಎಷ್ಟೋ ಸಂದರ್ಭದಲ್ಲಿ ದಲಿತ ಮಹಿಳೆಯರು ತಮ್ಮ ಬದುಕನ್ನು ಶಪಿಸಿ ಜೋರಾಗಿ ಅತ್ತಿದ್ದನ್ನು ನಾನು ನೋಡಿದ್ದೇನೆ. ನಂತರ ಚಳಿಗಾಲ ಬಂದರೆ ದಲಿತ ಮಹಿಳೆಯರು ಇನ್ನೊಂದು ರೀತಿಯ ತೊಂದರೆ ಅನುಭವಿಸುತ್ತಾರೆ.

ಚಳಿಗಾಲದಲ್ಲಿ ಬೆಳಗಿನಿಂದ ಸಂಜೆಯವರೆಗೂ ಕೂಲಿ ಕೆಲಸ ಮಾಡಿ ಸಂಜೆ ಏಳರಿಂದ ಹನ್ನೊಂದು ಗಂಟೆಯವರೆಗೆ ಶ್ರೀಮಂತರ ಮನೆಗೆ ಅಡಿಕೆ ಸುಲಿಯಲು ಹೋಗಬೇಕು. ಕೊರೆಯುವ ಚಳಿಯನ್ನು ಲೆಕ್ಕಿಸದೆ ಹೋಗಿ ಅಡಿಕೆ ಸುಲಿದು ಬಂದು ಮಲಗುವಾಗ ರಾತ್ರಿ ಒಂದು ಗಂಟೆಯಾದರೂ ಆದೀತು. ನಿದ್ರೆ ಹತ್ತಿರ ಸುಳಿಯುವಷ್ಟರಲ್ಲಿ ಬೆಳಕು ಹರಿದಿರುತ್ತದೆ ಮತ್ತು ಕೂಲಿ ಕೆಲಸಕ್ಕೆ ಸಿದ್ಧರಾಗಬೇಕು, ಇದು ದಲಿತ ಮಹಿಳೆಯರ ಜೀವನ ಚಕ್ರ.. ಇದರಲ್ಲಿ ಬದಲಾವಣೆಯ ಸಾಧ್ಯತೆಯೇ ಕಡಿಮೆ. ವರ್ಷಕ್ಕೆ ಒಂದೆರಡು ಮದುವೆಗಳು, ಊರಿನ ಜಾತ್ರೆ ಇದಿಷ್ಟೇ ಅವರ ಸಂಭ್ರಮ. ಉಳಿದಂತೆ ಅವರು ಸಿಮೋನ್ ದಿ ಬೊವಾ ಹೇಳುವಂತೆ ದ್ವಿತೀಯ ದರ್ಜೆಯವರೆ.

ಸಾಮಾನ್ಯವಾಗಿ ಯಾರಾದರೂ ತಂದೆ–ತಾಯಿ ತಮ್ಮ ಮಗಳನ್ನು ಬೇರೆ ಊರಿನ  ಹುಡುಗನಿಗೆ ಮದುವೆ ಮಾಡಿದರೆ ಅಲ್ಲಿ ತಮ್ಮ ಮಗಳು ಎಷ್ಟು ಸಂತೋಷವಾಗಿ ಇರಬಲ್ಲಳು ಎಂಬುದನ್ನು ಯೋಚಿಸುತ್ತಾರೆ. ಇದು ಸಹಜ ಕೂಡ. ಆದರೆ ದಲಿತ ಲೋಕದಲ್ಲಿ ಈ ಆಲೋಚನೆಯೇ ಇಲ್ಲ. ಏಕೆಂದರೆ ಹೆಣ್ಣು ಹುಟ್ಟಿರುವುದು ಬಡವರ ಮನೆಯಲ್ಲಿ, ಮದುವೆಯಾಗಿ ಹೋಗುವುದು ಬಡವರ ಮನೆಗೆ. ತನ್ನ ಸ್ವಂತ ಮನೆಯಲ್ಲಿದ್ದಾಗಲೂ ತಂದೆ ತಾಯಿಯರ ಜೊತೆ ದುಡಿಯಲು ಹೋಗುತ್ತಿದ್ದಳು. ಈಗ ಮದುವೆಯಾಗಿ ಗಂಡನ ಮನೆಗೆ ಬಂದರೂ ಕೂಡ ಗಂಡನ ಪರಿವಾರದ ಜೊತೆ ಗಂಡನ ಊರಿನ ಯಾರಾದರೂ ಧನಿಕರ ಮನೆಗೆ ದುಡಿಯಲು ಹೋಗಬೇಕು. ದಲಿತ ಮಹಿಳೆಯ ಬದುಕಿನಲ್ಲಿ ಹೊಸ ಬದುಕಿನ ಪುಳಕ'ಗಳಿಗೆ, ರೋಮಾಂಚಕತೆಗೆ ಅವಕಾಶವೇ ಇಲ್ಲ. ಇಲ್ಲಿ ದಲಿತ ಮಹಿಳೆಯ ಸಂಭ್ರಮವೆಂದರೆ ಮಕ್ಕಳ ಹುಟ್ಟು ಮಾತ್ರ. ಪೌಷ್ಟಿಕ ಆಹಾರದ ಕೊರತೆಯಿಂದ ಹುಟ್ಟಿದ ಮಕ್ಕಳು ಸಹ ಯಾವುದಾದರೊಂದು ರೋಗದಿಂದ ನರಳುತ್ತಲೆ ಇರುತ್ತವೆ. ಕೆಲವು ಮಹಿಳೆಯರು ಹೆರಿಗೆ ನೋವಿನ ಸಂದರ್ಭದಲ್ಲಿ ಸರಿಯಾದ ಚಿಕಿತ್ಸೆ ದೊರೆಯದೆ ಮರಣ ಹೊಂದುತ್ತಾರೆ. ಇಂತಹ ಒಂದೆರಡು ಉದಾಹರಣೆಗಳನ್ನು ನಾನು ನೋಡಿದ್ದೇನೆ.

ಇನ್ನು ದಲಿತ ಮಹಿಳೆಯರಿಗೆ ಮೇಲ್ವರ್ಗದವರ ಮನೆಯೊಳಗೆ ಪ್ರವೇಶವೇ ಇಲ್ಲ ಮತ್ತು ಅವರು ಮುಂದಿನ ಬಾಗಿಲ ಕಡೆಯಿಂದ ಬರುವಂತಿಲ್ಲ. ಹಿಂದಿನ ಬಾಗಿಲ ಕಡೆಯಿಂದ ಬರಬೇಕು. ಬಹಳ ಹಿಂದೆ ಅವರಿಗೆ ಚಹಾದಂತಹ ಪಾನೀಯಗಳನ್ನು ತೆಂಗಿನ ಚಿಪ್ಪಿನಲ್ಲಿ ನೀಡಲಾಗುತ್ತಿತ್ತು, ನಾನು ಗಮನಿಸಿದಂತೆ ಅವರಿಗೆ ಲೋಟದಲ್ಲಿ ನೀಡಿದರೂ ಸಹ ಅವರು ಕುಡಿದ ಲೋಟವನ್ನು ಅವರೇ ತೊಳೆದಿಡಬೇಕು. ಅವರಿಗೆ ಊಟವನ್ನು ನೀಡುವುದಾದರೆ ಬಾಳೆ ಎಲೆಯಲ್ಲಿಯೇ ನೀಡುತ್ತಾರೆ. ಇಷ್ಟೆಲ್ಲ ಶೋಷಣೆಯಾದರೂ ಕೂಡ ಒಬ್ಬ ದಲಿತ ಮಹಿಳೆಯು ಅದನ್ನು ವಿರೋಧಿಸಿದ್ದನ್ನು ನಾನು ನೋಡಿಲ್ಲ,

ಇನ್ನು ದಲಿತ ಮಹಿಳೆಯರ ಮೇಲಿನ ಲೈಂಗಿಕ' ದೌರ್ಜನ್ಯಕೆ ಸಂಬಂಧಪಟ್ಟಂತೆ ಹೇಳುವುದಾದರೆ ನನ್ನ ಗಮನಕ್ಕೆ ಬಂದಂತೆ ಇಂತಹ ಘಟನೆ ನಡೆದಿಲ್ಲವಾದರೂ ಸಹ ನಡೆಯದಿರುವ ಸಾಧ್ಯತೆ ಇಲ್ಲವೇ ಇಲ್ಲ. ಈ ದಲಿತ ಮಹಿಳೆಯರು ಕೆಲಸಕ್ಕೆ ಹೋಗುವ ಮನೆಯ ಧನಿಕರು ಒಂಟಿಯಾಗಿರುವ ಇವರ ಮೇಲೆ ಖಂಡಿತ ಕೆಟ್ಟ ದೃಷ್ಟಿ ನೆಟ್ಟಿರುತ್ತಾರೆ. ಅಲ್ಲಿ ಅಕಸ್ಮಾತ್ ಅವರ ಮೇಲೆ ದೌರ್ಜನ್ಯ ನಡೆದರೂ ಸಹ ಅದನ್ನು ಸಹಿಸಿಕೊಳ್ಳಬೇಕು. ಏಕೆಂದರೆ ಅದನ್ನು ಪ್ರತಿಭಟಿಸಿ ಕೆಲಸಕ್ಕೆ ಹೋಗದಿದ್ದರೆ ಉಪವಾಸವಿರಬೇಕಾಗುತ್ತದೆ. ಗಂಡನ ಬಳಿ ಅದನ್ನು ಹೇಳಿದರೂ ವ್ಯರ್ಥವೆ, ಏಕೆಂದರೆ ಅವನು ತನ್ನ ಹೆಂಡತಿಯ ಮೇಲೆ ಅನುಮಾನಪಟ್ಟಾನು. ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದರೆ ಆ ಧನಿಕರು ಬಂದು ಹಣ ಕೇಳಿದರೆ ಕೊಡಲು ಸಾಧ್ಯವಾಗುವುದಿಲ್ಲ. ಒಮ್ಮೆಲೆ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದರೆ ಊರ ಜನ ಅವಳ ಮೇಲೆ ಅನುಮಾನ ಪಡುತ್ತಾರೆ. ಏನೇ ಅಂದರೂ ಅವಳ ಮೇಲೆ ದೌರ್ಜನ್ಯ ಮಾಡಿದವನು ತಪ್ಪಿಸಿಕೊಳ್ಳುತ್ತಾನೆಯೇ ಹೊರತು ಅವನಿಗೇನೂ ಆಗುವುದಿಲ್ಲ. ಅಮೇಲೆ ಅವಳು ಉಳಿದ ಬದುಕನ್ನು ಒಂದು ರೀತಿಯ ಕುಗ್ಗಿದ ಮನಸ್ಥಿತಿಯಲ್ಲೇ ಕಳೆಯಬೇಕಾಗುತ್ತದೆ. ಇಷ್ಟೆಲ್ಲಾ ತೊಡಕುಗಳನ್ನು ಆಲೋಚಿಸಿ ಎಷ್ಟು ದೌರ್ಜನ್ಯ ನಡೆದರೂ ಸಹ ಮೌನವಾಗಿ ಮನಸ್ಸಿನಲ್ಲೆ ಅಳುವ ದಲಿತ ಹೆಣ್ಣು ಮಕ್ಕಳ ಸ್ಥೈರಣ ಶಕ್ತಿಗೆ ಏನು ತಾನೇ ಹೇಳಲು ಸಾಧ್ಯ?.

ಊರಿನಲ್ಲಿ ಸಾರ್ವಜನಿಕವಾಗಿ ಉಪಯೋಗಿಸುವ ಬಾವಿಗಳಿಗೆ ದಲಿತ ಮಹಿಳೆಯರಿಗೆ ಪ್ರವೇಶವಿಲ್ಲ. ಅವರು ತಮ್ಮ ನೀರಿನ ಉಪಯೋಗಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಅದು ಶುದ್ಧವಾಗಿದ್ದರೂ, ಅಶುದ್ಧವಾಗಿದ್ದರೂ ಅದನ್ನೇ ಉಪಯೋಗಿಸಬೇಕು. ಇದರಿಂದ ರೋಗಗಳು ಬರುವ ಸಾಧ್ಯತೆಯೇ ಹೆಚ್ಚು. ಅಕಸ್ಮಾತ್ ಇದರಿಂದ ರೋಗಗಳೇನಾದರೂ ಬಂದರೆ ಅಪ್ಪಿತಪ್ಪಿಯೂ ಕೂಡ ವೈದ್ಯರ ಬಳಿಗೆ ಹೋಗುವುದಿಲ್ಲ. ಯಾರಾದರೂ ಪುರೋಹಿತರ ಬಳಿ ಹೋಗಿ ತಮ್ಮ ವ್ಯಾಧಿಯನ್ನು ಹೆಚ್ಚಿಸಿಕೊಳ್ಳುತ್ತಾರೆ. ರೋಗವೇನಾದರೂ ಉಲ್ಬಣಿಸಿ ಯಾರಾದರೂ ಮರಣ ಹೊಂದಿದರೆ ಯಾರೋ ಮಾಟ ಮಾಡಿಸಿದ್ದರೋ ಅಥವಾ ದೇವರ ತೊಂದರೆಗಳೆಂದು ಹೊಸ ಕತೆ ಶುರುವಾಗುತ್ತದೆ. ಇವೆಲ್ಲ ಎಂದೂ ಕೊನೆಯಾಗುತ್ತದೊ ಏನೋ?.

ನಾನು ತುಂಬ ಸಣ್ಣವನಿದ್ದಾಗ ದಲಿತ ಕುಟುಂಬವೊಂದು ದೇವಸ್ಥಾನಕ್ಕೆ ಬಂದು ಒಳಗೆ ಬರಲಾರದೆ ಬಾಗಿಲಲ್ಲಿ ನಿಂತು ಹಿಂದಿರುಗಿದ್ದನ್ನು ನಾನು ನೋಡಿದ್ದೇನೆ. ಆದರೆ ಕೆಲವು ವರ್ಷಗಳ ನಂತರ ಆ ದಲಿತ ಮಹಿಳೆ'ಯರು ದೇವಸ್ಥಾನದೊಳಗೆ ಬರುವಂತಾಗಿತ್ತು. ಅದು ಹ್ಯಾಗಾಯಿತೋ ಗೊತ್ತಿಲ್ಲ. ಆದರೆ ನನಗಂತೂ ಖುಷಿ ಕೊಟ್ಟ ಸಂಗತಿ ಅದು.

ದಲಿತ ಮಹಿಳೆಯರು ಶಿಕ್ಷಣದಿಂದ ತೀರಾ ವಂಚಿತರು. ಅವರಿಗೆ ಶಿಕ್ಷಣ ಪಡೆಯುವ ಅವಕಾಶವೇ ಇಲ್ಲ. ಅಕಸ್ಮಾತ್ ಅವರು ಶಾಲೆಗೆ ಪ್ರವೇಶ ಪಡೆದರೂ ಕೂಡ ಕಿರಿಯ ಪ್ರಾಥಮಿಕ ಮಟ್ಟಕ್ಕಿಂತ ಹೆಚ್ಚು ಶಿಕ್ಷಣವನ್ನು ಪಡೆದವರು ಅತಿವಿರಳ. ತೀರ ವಿಶೇಷವಾಗಿ ಎನ್ನುವಂತೆ ಯಾರಾದರೂ ದಲಿತರ ಹುಡುಗಿ ಪ್ರೌಢ'ಶಾಲಾಮಟ್ಟಕ್ಕೆ ತಲುಪಿದರೆ ಅವಳು ಒಂಭತ್ತನೆ ತರಗತಿಯಲ್ಲೇ ಅನುತ್ತೀರ್ಣಳಾಗುವಂತೆ ಮಾಡುವ ಹುನ್ನಾರವಿತ್ತು. ಏಕೆಂದರೆ ದಲಿತರ ಮಕ್ಕಳು ಓದಿ ಮುಂದೆ ಬಂದರೆ ದಲಿತರು ತಮ್ಮ ನಿಯಂತ್ರಣದಿಂದ ತಪ್ಪಿಸಿಕೊಳ್ಳುತ್ತಾರೆ ಎಂಬ ಭಯವು ಮೇಲ್ವರ್ಗದವರಿಗೆ ಇರಬಹುದು. ಅಲ್ಲದೆ ತಮ್ಮ ಮನೆ ಕೆಲಸಕ್ಕೆ ಆಳು ಬೇಕು ಮತ್ತು ಅವಳ ಅಪ್ಪ, ಅಮ್ಮ ಅವಳ ಮದುವೆಗೆ ಸಾಲ ಮಾಡಿದರೆ ಅವರು ಇನ್ನಷ್ಟು ವರ್ಷ ತಮ್ಮ ಜೀತಗಳಾಗುತ್ತಾರೆ. ಅಳಿಯನು ಅಕಸ್ಮಾತ್ ಮನೆಯ ಅಳಿಯನಾಗಿ ಬಂದರೆ ಅವನೂ ಕೂಡ ಕೆಲಸದಾಳಾಗಬಹುದು ಎಂಬ ಆಲೋಚನೆ ಮೇಲ್ವರ್ಗದವರಿಗೆ ಇರಬಹುದು.

ನನ್ನೂರಿನಲ್ಲಿ ವಾಟೆ ಎಂಬ ವಿಶೇಷವಾದ ಬಿದಿರಿನಿಂದ ತಯಾರಿಸಿದ ದರಗಿನ ಜಲ್ಲೆ[1]. ಗೊರಬು[2]. ಹೊಗೆದಟ್ಟಿ[3]ಗಳನ್ನು ಮಾಡಿ ಮಾರುವ ಗಂಡ ಹೆಂಡತಿಯರಿದ್ದರು. ಈ ವಾಟೆ ಎಂಬ ಬಿದಿರನ್ನು ತರುವುದು ಅಷ್ಟು ಸುಲಭದ ವಿಷಯವಲ್ಲ. ಇದು ಬೆಳೆಯುವುದು ಅತಿ ತಂಪಾದ ಪ್ರದೇಶಗಳಲ್ಲಿ ಮಾತ್ರ. ಈ ಬಿದಿರ ಮೆಳೆಗಳಲ್ಲಿ ಹೆಬ್ಬಾವಿನಂತಹ ಅಪಾಯಕಾರಿ ಹಾವುಗಳಿರುತ್ತವೆ. ಈ ಎಲ್ಲ ತೊಂದರೆಗಳನ್ನು ನಿವಾರಿಸಿಕೊಂಡು ಅವರು ವಾಟೆಯನ್ನು ತರುತ್ತಿದ್ದರು. ಒಬ್ಬ ಮನುಷ್ಯ ತಲೆಯ ಮೇಲೆ ಹೊರಲು ಅಸಾಧ್ಯವಾದಷ್ಟು ವಾಟೆಗಳನ್ನು ಗಂಡನ ಜೊತೆ ಆ ಮಹಿಳೆ ಹೊತ್ತು ತರುತ್ತಿದ್ದಳು. ಅವರ ವಾಸಸ್ಥಳದಿಂದ ವಾಟೆ ಇರುವ ಸ್ಥಳ ಎಂಟು ಕಿ.ಮೀ. ಇರಬಹುದು. ಅಷ್ಟು ದೂರ ಹೊತ್ತು ಸಾಗುವ ಮಹಿಳೆಯ ಛಲಕ್ಕೆ ಜೀವನಪ್ರೀತಿ ಎನ್ನದೆ ಬೇರೇನೂ ಹೇಳಲು ಸಾಧ್ಯ.

ಮಲೆನಾಡಿನಲ್ಲಿ ಪ್ರಾಕೃತಿಕವಾಗಿ ಅನೇಕ ಆಹಾರ ವಸ್ತುಗಳು ಸಿಗುತ್ತವೆ. ಕಳಲೆ, ಹೆಗ್ಗಾಲು ಅಣಬೆಗಳಂತಹ ವಿಶೇಷ ಆಹಾರ ವಸ್ತುಗಳು ಇಲ್ಲಿ ದೊರೆಯುತ್ತವೆ. ಅವು ಹೆಚ್ಚಾಗಿ ದೊರಕುವುದು ದಲಿತ ಮಹಿಳೆಯರಿಗೆ ಮಾತ್ರ. ಏಕೆಂದರೆ ಅವರು ಪ್ರಕೃತಿಯ ಒಡನಾಟದಲ್ಲಿರುತ್ತಾರೆ. ತಮಗೆ ದಕ್ಕಿದ ವಸ್ತುಗಳೆಲ್ಲ ತಮಗೆ ಬೇಕೆನ್ನುವ ಸ್ವಾರ್ಥ ಅವರದ್ದಲ್ಲ. ತಮಗೆ ದೊರಕಿದಲ್ಲಿ ಹೆಚ್ಚು ಪಾಲು ತಮ್ಮ ಒಡೆಯರಿಗೆ ತಲುಪಿಸಬೇಕೆನ್ನುವ ಮನಸ್ಥಿತಿ ಅವರದು. ಏಕೆಂದರೆ ಹಾಗೇನಾದರೂ ತಮ್ಮ ಒಡೆಯನ

ಹೆಂಡತಿ ಖುಷಿಯಾಗಿ ಒಂದಿಷ್ಟು ಅಕ್ಕಿಯನ್ನೋ, ಹಿಂದಿನ ದಿನದ ಇಡ್ಲಿ, ದೋಸೆಯನ್ನೋ ನೀಡಿದರೆ ತಮ್ಮ ಮಕ್ಕಳಿಗಾದೀತೂ ಎನ್ನುವ ದೂರದ ಆಸೆ ಅವರದು.

ನನಗೆ ಗೊತ್ತಿರುವ ದಲಿತ ಮಹಿಳೆಯೊಬ್ಬರು ನಮ್ಮ ಕುಟುಂಬದ ಚಿಕ್ಕ ಮಕ್ಕಳನ್ನು ಸಹ ಬಹುವಚನದಿಂದ ಮಾತನಾಡಿಸುತ್ತಿದ್ದರು. ನಾವು ಚಿಕ್ಕವರಿದ್ದಾಗ ಅವರನ್ನು ಏಕವಚನದಿಂದ ಮಾತನಾಡಿಸುತ್ತಿದ್ದೆವು. ಈಗ ನಾನು ಅವರನ್ನು ಬಹುವಚನದಿಂದ ಮಾತನಾಡಿಸುತ್ತೇನೆ. ಆದರೆ ನನ್ನ ಹಿರಿಯರಿಂದ ಇದಕ್ಕೆ ಆಗಾಗ ವಿರೋಧ ಬಂದಿದ್ದು ಇದೆ.

ಈ ಲೇಖನದ ಸಲುವಾಗಿ ಒಂದಿಬ್ಬರು ದಲಿತ ಮಹಿಳೆಯರನ್ನು ಮಾತನಾಡಿಸಿದಾಗ ಅವರು ಹೇಳಿದ ಪ್ರಕಾರ ಈಗ ಬೆರಳೆಣಿಕೆಯಷ್ಟು ಜನ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಆದರೆ ಅದು ಪದವಿಪೂರ್ವ ಹಂತದವರೆಗೆ ಮಾತ್ರ. ದಲಿತ ಮಹಿಳೆಯರು ಸಬಲರಾಗಬೇಕೆಂದರೆ ಅವರಿಗೆ ಶಿಕ್ಷಣದ ಅಗತ್ಯ ಖಂಡಿತ ಇದೆ. ದಲಿತ ಹೆಣ್ಣು ಮಕ್ಕಳು ಎದುರಿಸುವ ಮತ್ತೊಂದು ಸಮಸ್ಯೆ ಎಂದರೆ ಅದು ಶೌಚಾಲಯದ ಸಮಸ್ಯೆ. ಬಹುತೇಕ ದಲಿತರ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯೇ ಇಲ್ಲ. ಹೆಣ್ಣು ಮಕ್ಕಳು ತಮ್ಮ ನಿತ್ಯವಿಧಿಗಳಿಗಾಗಿ ಬಯಲು ಶೌಚಾಲಯವನ್ನೇ ಅವಲಂಬಿಸಿರುವುದು ದಲಿತರ ಪರಿಸ್ಥಿತಿಗೆ ಹಿಡಿದ ಕೈಗನ್ನಡಿ. ಇತ್ತೀಚಿನ ಮಹಿಳಾ ಸ್ವ ಸಹಾಯ ಸಂಘಗಳಿಂದ ದಲಿತ ಮಹಿಳೆಯರು ಒಂದಿಷ್ಟು ಮುಂಚೂಣಿಗೆ ಬರುವಂತಾಗಿದೆ. ಸ್ವ ಸಹಾಯ ಸಂಘಗಳಿಂದ ಹಣ ಪಡೆದು ಅದರಿಂದ ಹೈನುಗಾರಿಕೆ, ಮುಂತಾದ ಸ್ವಯಂ ಉದ್ಯೋಗವನ್ನು ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇದರಲ್ಲೂ ಸಹ ತೊಡಕುಗಳಿವೆ. ಅದೇನೆಂದರೆ ಹೈನುಗಾರಿಕೆಯನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ವಹಿಸಲು ಅದರ ರೀತಿ–ನೀತಿಗಳು ದಲಿತ ಮಹಿಳೆಯರಿಗೆ ತಿಳಿದಿಲ್ಲ. ಅಕಸ್ಮಾತ್ ಇವರು ಹೈನುಗಾರಿಕೆಯನ್ನು ಮಾಡಿ ಹಾಲನ್ನು ಮಾರಾಟ ಮಾಡಲು ಪ್ರಯತ್ನಿಸಿದರೂ ಸಹ ಸಾಧ್ಯವಾಗುವುದಿಲ್ಲ. ಮೊದಲನೆಯದಾಗಿ ಹಾಲನ್ನು ಕೊಳ್ಳುವ ಸರ್ಕಾರಿ ಹಾಲಿನ ಡೈರಿಗಳು ಹಳ್ಳಿಗಳಲ್ಲಿ ಇಲ್ಲ. ಇನ್ನೊಂದು ಹಳ್ಳಿಯಲ್ಲಿಯೆ ಮಾರಾಟ ಮಾಡಲು ಬಹುದೊಡ್ಡ ಸಮಸ್ಯೆ ಜಾತಿ. ದಲಿತರು ಮುಟ್ಟಿದ ಹಾಲನ್ನು ಸವರ್ಣೀಯರು ಯಾವ ಕಾರಣಕ್ಕೂ ಕೊಳ್ಳುವುದಿಲ್ಲ. ಹೀಗಿದ್ದಾಗ ಹೈನುಗಾರಿಕೆ ಅವರಿಗೆ ಕನಸೇ ಸರಿ. ಸ್ವಸಹಾಯ ಸಂಘಗಳಿಂದ ದಲಿತ ಮಹಿಳೆಯರು ಒಂದಿಷ್ಟು ಹಣ ಉಳಿಸಲು ಸಾಧ್ಯವಾಗುತ್ತಿದೆ. ಸಂಘದ ಸದಸ್ಯರು ಒಂದಿಷ್ಟು ಹಣವನ್ನು ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಪಾವತಿಸುವುದರಿಂದ ಇದು ಸಾಧ್ಯವಾಗುತ್ತದೆ.

ನಾನು ಇತ್ತೀಚೆಗೆ ಗಮನಿಸಿದ ಪ್ರಕಾರ ಮೇಲೆ ಉಲ್ಲೇಖಿಸಿದ ಹೊಲೆಯರು ಮತ್ತು ಹಸಲರ'ಲ್ಲಿ, ಹೊಲೆಯರು **ಇನ್ನು** ಸರ್ಕಾರದ ಸವಲತ್ತುಗಳನ್ನು ಪಡೆಯುತ್ತ ದಿನದಿಂದ ದಿನಕ್ಕೆ ನಿರ್ಗತಿಕರಾಗುತ್ತಿದ್ದರೆ, ಹಸಲರು ಒಂದಿಷ್ಟು ಶ್ರಮದಿಂದ ದುಡಿದು ಅಭಿವೃದ್ಧಿಯತ್ತ ಆಮೆ ನಡಿಗೆಯನ್ನು ನಡೆಯುತ್ತಿದ್ದಾರೆ

ಏನೇ ಆದರೂ ಕೂಡ ದಲಿತ ಮಹಿಳೆಯರ ಪರಿಸ್ಥಿತಿ ಶೋಚನೀಯವೇ ಸರಿ. ಹೊರಪ್ರಪಂಚದ ಶೋಷಣೆ ಕಡಿಮೆಯಾದರೂ ಸಹ ಅವರ ಕೌಟುಂಬಿಕ ಶೋಷಣೆಗಳು ಕಡಿಮೆಯಾಗುವುದಿಲ್ಲ. ಅವರು ಶಿಕ್ಷಣವನ್ನು ಪಡೆದು ಗೌರವಾರ್ಹ ಹುದ್ದೆಗಳನ್ನು ಪಡೆದು ತಮ್ಮ 'ಮಿತಿ'ಯನ್ನು ಮೀರಬೇಕೆಂದು ನನ್ನ ಆಶಯ.

**ಅಡಿ ಟಿಪ್ಪಣಿ**

1. **ದರಗಿನ ಜಲ್ಲೆ:–** ಮಲೆನಾಡಿನಲ್ಲಿ ಮರದಿಂದ ಉದುರಿಬಿದ್ದ ಎಲೆಗಳನ್ನು ದರಗು ಎನ್ನುತ್ತಾರೆ. ಅದನ್ನು ಮುಂಜಾನೆ ತಂದು ತಮ್ಮ ಜಾನುವಾರುಗಳ ಕೊಟ್ಟಿಗೆಗೆ ಹಾಕುತ್ತಾರೆ. ಅದನ್ನು ತರಲು ಬಳಸುವ ಸಾಧನವನ್ನು ಜಲ್ಲೆ ಎನ್ನುತ್ತಾರೆ. ಅದು ಬಿಜಾಪುರದ ಗೋಳಗುಮಟ್ಟದ ಮಾದರಿಯಲ್ಲಿ ಇರುತ್ತದೆ. ಅದರ ಹೆಣಿಗೆಯನ್ನು ಸೂಕ್ಷ್ಮವಾಗಿ ಮಾಡಿರುತ್ತಾರೆ. ಅದರ ನಡುವೆ ಮುಂಗೈ ನುಸುಳಬಹುದಾದಷ್ಟು ದೊಡ್ಡ ರಂಧ್ರಗಳನ್ನು ಮಾಡಿರುತ್ತಾರೆ.

2. **ಗೊರಬು:–** ಇದನ್ನು ಮಲೆನಾಡಿನಲ್ಲಿ ನಾಟಿ ನೆಡುವ ಸಮಯದಲ್ಲಿ ಬಳಸುತ್ತಾರೆ. ಉದ್ದನೆಯ ವಾಟೆಯ ಕೋಲಿನಾಕಾರದ ರಚನೆಯನ್ನು ಸೀಳಿ ಅದರ ಮೇಲೆ ಪ್ಲಾಸ್ಟಿಕ್ ಕವರಿನಿಂದ ಮುಚ್ಚಿರುತ್ತಾರೆ. ಇದು ಮಳೆಯ ನೀರು ಮೈ ಮೇಲೆ ಬೀಳದಂತೆ ರಕ್ಷಿಸುತ್ತದೆ. ಈಗೀಗ ಇದು ಸಂಪೂರ್ಣವಾಗಿ ಮಾಯವಾಗಿದೆ.

3. **ತಟ್ಟಿ:–** ಎರಡು ದಬ್ಬೆಯ ನಡುವೆ ಹೆಣೆದ ಚಾಪೆಯಾಕಾರದ ರಚನೆಯೇ ತಟ್ಟಿ. ಇದನ್ನು ಎರಡು ಸಂದರ್ಭದಲ್ಲಿ ಉಪಯೋಗಿಸುತ್ತಾರೆ. ಅಡಿಕೆಯನ್ನು ಬೇಯಿಸಿ ಅದನ್ನು ತಟ್ಟಿಯ ಮೇಲೆ ಒಣಗಿಸುತ್ತಾರೆ. ಆಗ ಅದು ತಟ್ಟಿಯಷ್ಟೆ. ಅಕಸ್ಮಾತ್ ಮಳೆಬಂದು ಅಡಿಕೆ ನೆನೆದು ಹೋದರೆ ತಟ್ಟಿಯ ಮೇಲೆ ಒಣಗಿಸಿ ಕೆಳಗಿನಿಂದ ಹದವಾದ ಬೆಂಕಿ ಹಾಕುತ್ತಾರೆ. ಆಗ ಅದು ಹೊಗೆದಟ್ಟಿ. ಮಲೆನಾಡಿನಲ್ಲಿ ಮಳೆಗಾಲದಲ್ಲಿ ಯಥೇಚ್ಚವಾಗಿ ಸಿಗುವ ಸಣ್ಣ ಮೀನುಗಳನ್ನು ಒಣಗಿಸಲು ಇದನ್ನು ಬಳಸುತ್ತಾರೆ.

# ಶಿಕ್ಷಣ ಮತ್ತು ಮಹಿಳೆ....ಭಾಗ್ಯಲಕ್ಷ್ಮಿ ಯೋಜನೆಯ ಅಧ್ಯಯನ

(ಭದ್ರಾವತಿ ತಾಲೂಕಿನ ಪರಿಗಣನೆ)

**ರೋಹಿತ್ ಎಲ್.ಎಸ್.**

**ಸ**ಮಾಜದ ಅಭ್ಯುದಯಕ್ಕೆ ಒಂದು ನಿಶ್ಚಿತತೆಗೆ ಆಧಾರಗಳು, ಕಾನೂನುಗಳು ಎಷ್ಟು ಮುಖ್ಯವೋ ಸಮಾಜದ ಮನಸ್ಥಿತಿಗಳ ಉನ್ನತಿಗೆ, ಬೆಳವಣಿಗೆಗೆ, ಪ್ರಗತಿಗೆ ಶಿಕ್ಷಣವೂ ಕೂಡ ಅಷ್ಟೇ ಮುಖ್ಯವಾದದ್ದು. ಯಾವುದೇ ಶತಮಾನಗಳ ಉದಾಹರಣೆಗಳನ್ನು ತೆಗೆದುಕೊಂಡರೂ, ಅವುಗಳನ್ನು ವ್ಯಾಖ್ಯಾನಿಸಿ ಉಲ್ಲೇಖಿಸಿದರೂ ತಾಯಿಯೇ ಮೊದಲ ಗುರು–ಮನೆಯೇ ಮೊದಲ ಪಾಠಶಾಲೆ ಎಂಬುವುದು ಅಕ್ಷರಶಃ ಸತ್ಯ. ಹೆಣ್ಣೊಂದು ಕಲಿತರೆ ಮನೆಯೊಂದು ಕಲಿತಂತೆ ಎಂಬುದು ಎಲ್ಲ ಕಾಲಕ್ಕೂ ಹಚ್ಚಹಸಿರಾದದ್ದು.

ಸದಾ ಹಚ್ಚಹಸಿರಾದ ಮಲೆನಾಡು ಸ್ವರ್ಗದ ಪ್ರತಿಬಿಂಬ. ಈ ಮಣ್ಣಿನ ಸೊಬಗು, ಗಂಧದ ಸುವಾಸನೆ, ಯಾವ ಮಾನವ ಕುಲ ಊಹಿಸದ, ಮಿತಿಗೆ ಸಿಲುಕದ್ದು, ಮಾನವನು ಎಷ್ಟೇ ಆಧುನಿಕ ತಂತ್ರಜ್ಞಾನದ ಜಗತ್ತಿನಲ್ಲಿ ಮುಂದುವರಿಯುತ್ತಿದ್ದರೂ ಮಲೆನಾಡಿನ ಪ್ರಕೃತಿಯನ್ನು ಚಿತ್ರಿಸುವಲ್ಲಿ, ರೂಪಿಸುವಲ್ಲಿ, ಉಳಿಸುವುದರಲ್ಲಿ ಸಫಲತೆ ಕಾಣುವುದು ಮಲೆನಾಡಿನ ಗೌಪ್ಯತೆಯಷ್ಟೇ ಮರಿಚಿಕೆಯಾದದ್ದು. ಮಲೆನಾಡಿನ ಸೌಂದರ್ಯವನ್ನು ಎಷ್ಟೇ ವರ್ಣಿಸಿದರೂ ಇವಳನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡಿದ್ದೇವೆ ಎಂದರೆ ಅದು ಮಿಥ್ಯ ಮಾತ್ರ. ಈ ಮಲೆನಾಡು ಎಷ್ಟು ಸುಂದರವೋ ರಮಣೀಯವೋ ಅಷ್ಟೇ ಗೌಪ್ಯ ಮತ್ತು ವಿಸ್ಮಯ. ಇವಳ ಒಡಲಲ್ಲಿ ಕೇವಲ ಸುಂದರತೆ, ಸುಖ, ಸಂತೋಷ ಮಾತ್ರವಲ್ಲ. ಇವಳಲ್ಲಿ ನೋವು, ದುಃಖವಿದೆ, ಇವಳ ಮಕ್ಕಳ ಅಳುವಿಕೆ, ಇವಳ ಹೆಣ್ಣು ಮಕ್ಕಳ ಕಣ್ಣೀರಿದೆ. ಈ ಗೌಪ್ಯ ಅರಣ್ಯದೊಳಗೆ ಅನೇಕ ತೊಂದರೆಗಳು, ಕಷ್ಟಕಾರ್ಪಣ್ಯಗಳು ಇವಳ ಮಕ್ಕಳನ್ನು ಕಿತ್ತುತಿನ್ನುತ್ತಿವೆ. ಶಿಕ್ಷಣವಿರುವ ವಿದ್ಯಾವಂತರೂ ಕವಿಗಳು ಲೇಖಕರೂ ಮಲೆನಾಡಿನ ವರ್ಣನೆಮಾಡುತ್ತಿರುವುದು ಒಂದೆಡೆಯಾದರೆ ಶಿಕ್ಷಣದಿಂದಲೇ ವಂಚಿತರಾಗಿರುವ ಮಕ್ಕಳ, ಹೆಣ್ಣುಮಕ್ಕಳ ಅಜ್ಞಾನದ ನೋವು ಮತ್ತೊಂದೆಡೆ. ರಸ್ತೆಯೇ ಇಲ್ಲದ ಕಾಡಲ್ಲಿ ಕಾಲು ಹಾದಿ ಮಾಡಿ ಗುಡ್ಡಗಳನ್ನು ಎಣಿಸುತ್ತ ಶಾಲೆಗಳಿಗೆ ತೆರಳುವ ಸನ್ನಿವೇಶ. ಈ ನಡುವೆ ಈ ಸಮಾಜದ ಕೆಟ್ಟ ರೀತಿ–ನೀತಿ ರಿವಾಜುಗಳನ್ನು ದಟ್ಟಿ ಶಿಕ್ಷಣದ ಕಡೆಗೆ ಮುಖಮಾಡುವುದು ದೌರ್ಜನ್ಯ, ಅತ್ಯಾಚಾರ, ಹಿಂಸೆ, ಎರಡು ಕಾಲು ಪ್ರಾಣಿಗಳ ಕ್ರೂರತೆಯನ್ನು ಮೀರಿ ಶಾಲೆಯ ಮೆಟ್ಟಿಲು ಏರುವುದು, ದೇಶದ ಗಡಿಯಲ್ಲಿ ಪರಕೀಯರ ಮೋಸದ ಕೃತ್ಯಗಳಿಗೆ ಎದೆಒಡ್ಡಿ ನಿಂತಷ್ಟೇ ಧೈರ್ಯದ ಕೆಲಸ.

ಕರೆಂಟ್ ಹೋದರೆ ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸುವ ಬ್ಯಾಟರಿಗಳನ್ನು ಉಪಯೋಗಿಸುವ ಆಧುನಿಕ ಜೀವನ ಶೈಲಿಯಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳ ಬೆಳಕಿನ ರೂಪಮಾಡಿ, ಅಮಾವಸ್ಯೆ ಕರೆಂಟ್ ಹೋದ ದಿನವೆಂದು ಹುಣ್ಣಿಮೆಯೇ ಬ್ಯಾಟರಿಯ ಬೆಳಕು ಎಂಬಂತೆ ಜೀವನ. ಈ ಕಗ್ಗತ್ತಲೆಯ ಮಲೆನಾಡಿನಲ್ಲಿ, ಶಿಕ್ಷಣ ಬೆಳಕಿನ ಕಡೆಗಿನ ನಡಿಗೆ ಎಂಬುದು ಒಂದೆಡೆಯಾದರೆ ಶಿಕ್ಷಣದ ಕಲಿಕೆಗೆ ಜ್ಞಾನದ ಅಭಿವೃದ್ಧಿಗೆ ಬೆಳಕನ್ನು ನೋಡದ ಕತ್ತಲೆಯ ಮಲೆನಾಡಿನ ಸಮಾಜ ಮತ್ತೊಂದೆಡೆ.

ವಿಪರ್ಯಾಸವೆಂದರೆ, ಈ ಮಣ್ಣಿನ ಸಾಹಿತಿಗಳು, ಕವಿಗಳು, ಚಿಂತಕರು ವಿಶ್ವಮಟ್ಟದಲ್ಲಿ ಹೆಸರು ಸ್ಥಾಪಿಸಿದರು. ಈ ಮಲೆನಾಡಿನ ಮಡಿಲಲ್ಲೇ ಶಿಕ್ಷಣದ ಮಟ್ಟಿಗೆ ಅನೇಕ ಸಮಸ್ಯೆಗಳು ಇರುವುದು ಸೋಜಿಗದ ಸಂಗತಿ. ಈ ನಿಟ್ಟಿನಲ್ಲಿ ಪ್ರಮುಖವಾದ ಸಮಸ್ಯೆ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಉಂಟಾಗುತ್ತಿರುವ ತೊಂದರೆಗಳು, ಅವರ ಅಭಿವೃದ್ಧಿಗೆ ಇರುವ ಅಡ್ಡಿ ಆತಂಕಗಳು.

ಪುರುಷಪ್ರಧಾನ ಸಮಾಜದ ದಬ್ಬಾಳಿಕೆ, ದೌರ್ಜನ್ಯ, ನೀತಿ, ನಿಯಮ ಸಂಪ್ರದಾಯಗಳ ಗುಡ್ಡವನ್ನು ದಾಟಿ ನಡೆಯುವ ಯೋಜನೆ–ಯೋಚನೆ ಒಂದೆಡೆಯಾದರೆ, ಈ ಸಮಾಜದಲ್ಲಿ ಶಿಕ್ಷಣದ ಮಹತ್ವ ತಿಳಿಯದ ಜನರಿಗೆ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಇರುವ ತಿರಸ್ಕಾರದ ಧೋರಣೆ. ಶಿಕ್ಷಣ ಕೊಡಿಸುವ, ಕಲಿಯುವ ಉತ್ಸಾಹವಿದ್ದರೂ ಅದನ್ನು ಪಡೆಯಲಾಗದ ಆರ್ಥಿಕ ಖಿನ್ನತೆ, ಶಾಲೆಗಳ ಕೊರತೆ ಹೀಗೆ ಅನೇಕ ಸಾಮಾಜಿಕ ತೊಂದರೆಗಳು, ಆರ್ಥಿಕ ಸಮಸ್ಯೆ ಮತ್ತು ಸಮಾಜದ ಕಣ್ಣಿಗೆ ಕಾಣದ ಸಂಪ್ರದಾಯದ ರಾಜಕೀಯ ನೀತಿಗಳು, ಮಲೆನಾಡಿನ ಹೆಣ್ಣುಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗುವಂತೆ ಮಾಡಿವೆ. ಈ ನಿಟ್ಟಿನಲ್ಲಿ ಈ ಅಧ್ಯಯನವೂ ಮಲೆನಾಡಿನ ಕಳಸವಾದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕನ್ನು ಕೇಂದ್ರೀಕರಿಸಿ, ತಾಲ್ಲೂಕಿನ ಹೆಣ್ಣುಮಕ್ಕಳ ಶಿಕ್ಷಣ ಅವರ ಕಲಿಕೆಯಲ್ಲಿ ಉಂಟಾಗುವ ತೊಂದರೆಗಳು ಮತ್ತು ಶಿಕ್ಷಣದ ತೊಂದರೆಗಳಿಂದ ಹೊರಬರಲು ಸರ್ಕಾರದ ಒಂದು ಯೋಜನೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ

ಯೋಜನೆಯ ಅನುಷ್ಠಾನದ ಉದ್ದೇಶ ಮತ್ತು ಫಲಿತಾಂಶವನ್ನು ಪರೀಕ್ಷಿಸುತ್ತದೆ. ಪ್ರಮುಖವಾಗಿ 2006ರಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಅಭಿವೃದ್ಧಿಗೆ ಉತ್ತೇಜನ ನೀಡುವ ಸಲುವಾಗಿ ಮತ್ತು ಭ್ರೂಣಹತ್ಯೆಯಂತಹ ಸಾಮಾಜಿಕ ಪಿಡುಗನ್ನು ದೂರಸರಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು, 2006ರಲ್ಲಿ ರೂಪಿಸಿದ ಭಾಗ್ಯಲಕ್ಷ್ಮಿ ಯೋಜನೆಯ ಉದ್ದೇಶ, ಸೌಲಭ್ಯ, ವಿದ್ಯಾರ್ಥಿವೇತನ, ಆರೋಗ್ಯ ವಿಮೆ ಮತ್ತು ಯೋಜನೆಯ ರೂಪುರೇಷೆಗಳನ್ನು ಅಧ್ಯಯನಕ್ಕೊಳಪಡಿಸುತ್ತದೆ ಭದ್ರಾವತಿ ತಾಲ್ಲೂಕಿನಲ್ಲಿ ಭಾಗ್ಯಲಕ್ಷ್ಮಿಯೋಜನೆಯಿಂದಾಗಿರುವ ಅನುಕೂಲ ಮತ್ತು ಅದರ ಫಲಿತಾಂಶವನ್ನು ಅಧ್ಯಯನಕ್ಕೆ ಒಳಪಡಿಸುತ್ತದೆ.

ಉಕ್ಕಿನ ನಗರಿಯೆಂದೇ ಪ್ರಸಿದ್ಧವಾದ ಭದ್ರಾವತಿ ತಾಲ್ಲೂಕು ಅನೇಕ ವೈಶಿಷ್ಟ್ಯತೆಗಳ ತಾಣ. ಹೊಯ್ಸಳ ಕಾಲದ ವಾಸ್ತುಶಿಲ್ಪವಿರುವ ನರಸಿಂಹಸ್ವಾಮಿ ದೇವಾಲಯ, ಜ್ಞಾನದೇಗುಲವಾದ ಕುವೆಂಪು ವಿಶ್ವವಿದ್ಯಾನಿಲಯ, ಭದ್ರಾ ಜಲಾಶಯ, ಹುಲಿಸಂರಕ್ಷಿತ ಅಭಯಾರಣ್ಯ ಹೀಗೆ ವೈವಿಧ್ಯತೆಯ ಪರಿಸರದೊಂದಿಗೆ, ರಕ್ತ, ಹಿಂಸೆ ಮತ್ತು ಪಟ್ಟಭದ್ರ ಹಿತಾಸಕ್ತಿ ರೂಢಿ, ಸಂಪ್ರದಾಯಗಳನ್ನು ರೂಢಿಸಿಕೊಂಡಿರುವ ಸ್ಥಳ.

2011ರ ರಾಷ್ಟ್ರೀಯ ಅಂಕಿಅಂಶಗಳ ಪ್ರಕಾರ ಭದ್ರಾವತಿ ಒಟ್ಟು ಜನಸಂಖ್ಯೆ 150.776 ಅದರಲ್ಲಿ ಗಂಡು ಮತ್ತು ಹೆಣ್ಣು ಕ್ರಮವಾಗಿ 75.020 ಮತ್ತು 75.756. ಸಾಕ್ಷರತೆಯ ಪ್ರಮಾಣ, ಶಿಕ್ಷಣದಲ್ಲಿ ಒಟ್ಟು 118.446 ಅದರಲ್ಲಿ ಗಂಡು ಹೆಣ್ಣು ಕ್ರಮವಾಗಿ 62.199 ಮತ್ತು 56.247. ಶೇಕಡವಾರು 86.60ರಷ್ಟು ಸಾಕ್ಷರತೆಯ ಪ್ರಮಾಣ.

ಪುರುಷ ಸಾಕ್ಷರತೆಯ ಶೇಕಡವಾರು ಪ್ರಮಾಣ 91.56

ಸ್ತ್ರೀಯರ ಸಾಕ್ಷರತೆಯ ಶೇಕಡವಾರು ಪ್ರಮಾಣ 81.70

2001ರ ಜನಗಣತಿಯ ಅನುಸಾರ ಕರ್ನಾಟಕದಲ್ಲಿ ಲಿಂಗ ಅನುಪಾತವು 1000 ಪುರುಷರಿಗೆ 964 ಇರುತ್ತದೆ. ಈ ಅನುಪಾತವು ರಾಷ್ಟ್ರೀಯ ಸರಾಸರಿಗಿಂತ ಉತ್ತಮವಾಗಿದ್ದರೂ ಸಹ ಪ್ರಸ್ತುತ ಪರಿಸ್ಥಿತಿಯಲ್ಲಿ ಹೆಣ್ಣು ಮಗುವಿನ ಜೀವನಕ್ಕೆ ಹೆಚ್ಚಿನ ಮೌಲ್ಯಕಲ್ಪಿಸುವುದು ಅಗತ್ಯವಾಗಿದೆ.

ಭಾಗ್ಯಲಕ್ಷ್ಮಿ ಯೋಜನೆಯ ಮುಖ್ಯ ಉದ್ದೇಶ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತುಕೊಡುವುದು, ಹೆಣ್ಣು ಮಗುವಿನ ವಿರುದ್ಧ ಸಮಾಜದಲ್ಲಿರುವ ಧೋರಣೆಯನ್ನು ಬದಲಿಸಲು, ಹೆಣ್ಣು ಮಗುವಿನ ಜನನ ಉತ್ತೇಜಿಸಲು ಹಾಗೂ ಹೆಣ್ಣು ಮಕ್ಕಳ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡುವುದು ಹಾಗೂ ಹೆಣ್ಣುಮಕ್ಕಳ ರಕ್ಷಣೆಗೆ ಸರ್ಕಾರವು 2006–07ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿಯೋಜನೆಯನ್ನು ಅಸ್ತಿತ್ವಕ್ಕೆ ತಂದಿತು.

**ಭಾಗ್ಯಲಕ್ಷ್ಮಿ ಯೋಜನೆಯ ಉದ್ದೇಶ:**

1. **ಲಿಂಗ ಅನುಪಾತವನ್ನು ಉತ್ತಮಪಡಿಸುವುದು:** 2001ರ ಜನಗಣತಿಯ ಅನುಸಾರ ಕರ್ನಾಟಕದಲ್ಲಿ ಲಿಂಗ ಅನುಪಾತವು 1000 ಪುರುಷರಿಗೆ 964 ಇರುತ್ತದೆ. ಈ ಪರಿಸ್ಥಿತಿಯಲ್ಲಿ ಹೆಣ್ಣು ಮಗುವಿನ ಜೀವನಕ್ಕೆ ಹೆಚ್ಚಿನ ಮೌಲ್ಯವಿಲ್ಲವಾದ್ದರಿಂದ ಇದನ್ನು ಅಭಿವೃದ್ಧಿಪಡಿಸುವ ಸಲುವಾಗಿ ಈ ಸದರಿ ಯೋಜನೆ ಜಾರಿಗೆ ಬಂದಿದೆ.
2. **ಹೆಣ್ಣು ಭ್ರೂಣ ಹತ್ಯೆ ತಡೆಯುವುದು:** ಕರ್ನಾಟಕ ರಾಜ್ಯದಲ್ಲಿ ಲಿಂಗಾನುಪಾತ ಕಡಿಮೆ ಇರುವುದು ಮುಖ್ಯ ಕಾರಣವೇನೆಂದರೆ ರಾಜ್ಯದಲ್ಲಿ ಹೆಚ್ಚಾಗಿ ಹೆಣ್ಣು ಭ್ರೂಣ ಹತ್ಯೆ ಇರುವುದರಿಂದ ಹೆಣ್ಣು ಮಗು ಎಂದ ತಕ್ಷಣ ಪೋಷಕರಿಗೆ ತಲೆಗೆ ಹೊಳೆಯುವುದು ಮದುವೆ ಮತ್ತು ವರೋಪಚಾರಕ್ಕೆ ತಗಲುವ ವೆಚ್ಚ ಮತ್ತು ಆಕೆಯ ಪೋಷಣೆ. ಹೆಚ್ಚಾಗಿ ಕರ್ನಾಟಕದಲ್ಲಿ ಕಡುಬಡತನ ಮತ್ತು ಮಧ್ಯಮ ವರ್ಗದ ಜನರು ಇರುವುದರಿಂದ ಈ ಒಂದು ಹೇಯಕೃತ್ಯವೆಸಗುತ್ತಾರೆ. ಇದನ್ನು ತಡೆಯಲು ಭಾಗ್ಯಲಕ್ಷ್ಮಿ ಯೋಜನೆ ಜಾರಿಗೆ ಬಂದಿದೆ.
3. **ಬಾಲ್ಯವಿವಾಹ ತಡೆಯುವುದು**: ಬಾಲ್ಯವಿವಾಹದಿಂದಾಗಿ ಹೆಣ್ಣುಮಗುವಿನ ಆರೋಗ್ಯ ಮತ್ತು ಮನಸ್ಸಿನ ಮೇಲೆ ಕೆಟ್ಟ ಪರಿಣಾಮಗಳು ಉಂಟಾಗುತ್ತವೆ. ಮಾತ್ರವಲ್ಲದೇ ಆಕೆಗೆ ಮಗು ಮತ್ತು ಆರೈಕೆ, ಪೋಷಣೆ ಅಷ್ಟೊಂದು ತಿಳುವಳಿಕೆ ಈ ಚಿಕ್ಕವಯಸ್ಸಿನಲ್ಲಿ ಇರುವುದಿಲ್ಲ ಮಾತ್ರವಲ್ಲದೇ ಇದೊಂದು ಸಮಾಜದಲ್ಲಿರುವ ಅನಿಷ್ಟ ಪದ್ಧತಿಯಲ್ಲಿ ಇದೂ ಒಂದು. ಇದನ್ನು ತಡೆಗಟ್ಟುವುದು ಇದರ ಉದ್ದೇಶವಾಗಿದೆ.
4. **ಹೆಣ್ಣುಮಗುವಿನ ಶಿಕ್ಷಣಮಟ್ಟ, ಆರೋಗ್ಯಮಟ್ಟ ಉತ್ತಮಪಡಿಸುವ, ಸರ್ವಾಂಗೀಣ ಅಭಿವೃದ್ಧಿಪಡಿಸುವುದು:** ಈ ಯೋಜನೆಯಿಂದಾಗಿ ಹೆಣ್ಣುಮಗುವಿಗೆ ಒಳ್ಳೆಯ ಶಿಕ್ಷಣ ಮತ್ತು ಜೀವನ ಶೈಲಿ ಮಾತ್ರವಲ್ಲದೇ ವಿಟಮಿನ್‌ಗಳ

ಕೊರತೆಯನ್ನು ಹೋಗಲಾಡಿಸಿ ಆಕೆಗೆ ಸಮಾಜದಲ್ಲಿ ಒಂದು ಒಳ್ಳೆಯ ಸ್ಥಾನಮಾನ ಕಲ್ಪಿಸುವುದು ಇದರ ಉದ್ದೇಶಗಳಲ್ಲಿ ಒಂದಾಗಿದೆ.

5. **ಹೆಣ್ಣುಮಗುವನ್ನು ಆರ್ಥಿಕ ಸ್ವಾವಲಂಬಿಯನ್ನಾಗಿ ಮಾಡುವುದು:** ಈ ಪುರುಷಸಮಾಜದಲ್ಲಿ ಹೆಣ್ಣುಮಕ್ಕಳು ಮನೆಗೆ ಮಾತ್ರಸೀಮಿತವಲ್ಲ ಆಕೆ ಪುರುಷನಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ ಎಂಬುದನ್ನು ಸಾಬೀತು ಮಾಡಲು ಮತ್ತು ಹೆಣ್ಣು ಮಗುವನ್ನು ಆಕೆಯ ಸ್ವಾವಲಂಬಿಯಾಗಿ ಬದುಕಲುಬೇಕಾದ ಪರಿಸ್ಥಿತಿಯನ್ನು ಒದಗಿಸುವುದು ಇದರ ಉದ್ದೇಶವಾಗಿದೆ.

**ಭಾಗ್ಯಲಕ್ಷ್ಮಿಯೋಜನೆಯ ಸೌಲಭ್ಯಪಡೆಯಲು ಇರಬೇಕಾದ ಅರ್ಹತಾ ಮಾಪಕಗಳು:**

- ಹೆಣ್ಣುಮಗು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿರಬೇಕು.
- ಕುಟುಂಬವು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ನೀಡುವ ಬಿ.ಪಿ.ಎಲ್. ಕಾರ್ಡ್ ಹೊಂದಿರಬೇಕು.
- ಕುಟುಂಬದ ಮೊದಲ 2 ಹೆಣ್ಣುಮಕ್ಕಳಿಗೆ ಮಾತ್ರ ಯೋಜನೆಯ ಸೌಲಭ್ಯ ದೊರೆಯುತ್ತದೆ.
- ಕುಟುಂಬದ ಮಕ್ಕಳ ಸಂಖ್ಯೆ ಒಟ್ಟು 3ನ್ನು ಮೀರಬಾರದು.
- ಪೋಷಕರು ಶಾಶ್ವತ ಕುಟುಂಬ ಯೋಜನೆ ಪದ್ಧತಿಯನ್ನು ಅಳವಡಿಸಿಕೊಂಡಿರಬೇಕು.
- ಮಗುವಿನ ಜನನ ನೊಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.
- ಆರೋಗ್ಯ ಇಲಾಖೆಯಿಂದ ಮಗುವಿಗೆ ರೋಗ ನಿರೋಧಕ ಲಸಿಕೆ ಹಾಕಿಸಿರಬೇಕು.
- ಮಗು ಜನಿಸಿದ 1 ವರ್ಷದೊಳಗಾಗಿ ಅರ್ಜಿ ಸಲ್ಲಿಸಿ, ಮಂಜೂರಾಗಿ ಭಾರತೀಯ ಜೀವವಿಮಾ ನಿಯಮಕ್ಕೆ ಮಾಹಿತಿ ನೀಡಬೇಕು.
- ಈ ಯೋಜನೆಯ ಸೌಲಭ್ಯವನ್ನು ಗ್ರಾಮಾಂತರ ಹಾಗೂ ನಗರಪ್ರದೇಶಗಳಲ್ಲಿನ ಕುಟುಂಬಗಳು ಪಡೆಯಬಹುದಾಗಿದೆ.

**ಭದ್ರಾವತಿ ತಾಲೂಕಿನ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳ ಅಂಕಿಅಂಶ :**

| **ವರ್ಷ** | **ಸ್ವೀಕರಿಸಿರುವ ಅರ್ಜಿಗಳು** | **ವಿತರಿಸಿರುವ ಬಾಂಡ್‌ಗಳು** | **ಬಾಕಿಇರುವಬಾಂಡ್‌ಗಳು** |
|---|---|---|---|
| 2007–08 | 1858 | 1858 | – |
| 2008–09 | 2063 | 2061 | 2 |
| 2009–10 | 2080 | 2075 | 5 |
| 2011–12 | 996 | 996 | – |
| 2012–13 | 983 | 441 | 542 |

2006–07ನೇ ಸಾಲಿನಿಂದ 2012–13ನೇ ಸಾಲಿನವರೆಗೂ ಭದ್ರಾವತಿ ತಾಲ್ಲೂಕಿನಲ್ಲಿ ವಿತರಿಸಲಾಗಿರುವ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಫಲಾನುಭವಿಗಳ ಅಂಕಿ ಅಂಶ, 2006–07ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಯೋಜನೆಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ 1667 ಹಾಗೂ ವಿತರಿಸಲಾಗಿರುವ ಯೋಜನೆ ಬಾಂಡ್‌ಗಳ ಸಂಖ್ಯೆ 1567 ಕ್ರಮವಾಗಿ, 2007–08ನೇ ಸಾಲಿನಲ್ಲಿ ಅರ್ಜಿಗಳ ಸಂಖ್ಯೆ 1858 ವಿತರಿಸಲಾಗಿರುವ ಯೋಜನೆಯ ಬಾಂಡ್‌ಗಳ ಸಂಖ್ಯೆ 1858. 2008–09ನೇ ಸಾಲಿನಲ್ಲಿ 2063 ಅರ್ಜಿಗಳಲ್ಲಿ 2061 ಬಾಂಡ್‌ಗಳನ್ನು ಹಾಗೂ 2009–10ನೇ ಸಾಲಿನಲ್ಲಿ 2080 ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ. ಬಂದಿರುವ ಅರ್ಜಿಗಳ ಸಂಖ್ಯೆ 2075. ಬಾಕಿ ಇರುವ ಬಾಂಡ್‌ಗಳ ಸಂಖ್ಯೆ 5. 2011–12ನೇ ಸಾಲಿನಲ್ಲಿ ನೀಡಲಾಗಿರುವ ಅರ್ಜಿಗಳ ಸಂಖ್ಯೆ 996, ವಿತರಿಸಲಾಗಿರುವ ಬಾಂಡ್‌ಗಳ ಸಂಖ್ಯೆ 996. 2012–13ನೇ ಸಾಲಿನಲ್ಲಿ ಸ್ವೀಕರಿಸಲಾಗಿರುವ ಅರ್ಜಿಗಳ ಸಂಖ್ಯೆ 983, ವಿತರಿಸಲಾಗಿರುವ ಬಾಂಡ್‌ಗಳ ಸಂಖ್ಯೆ 414, ಬಾಕಿ ಇರುವ ಬಾಂಡ್‌ಗಳ ಸಂಖ್ಯೆ 542. ಈ ಮೇಲಿನ ಅಂಕಿ–ಅಂಶಗಳನ್ನು ಪರಿಗಣಿಸುವುದಾದರೆ 2011–12, 2012–13 ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಕ್ರಮವಾಗಿ ತಾಲೂಕಿನ ಮಟ್ಟದಲ್ಲಿ ಇಳಿಮುಖಕೊಂಡಿದೆ. ಶಿಕ್ಷಣ ನೀಡುವ ಕಲಿಯುವ ಉತ್ಸಾಹವಿದ್ದರೂ ಅದನ್ನು

ಪಡೆಯಲಾಗದ ಆರ್ಥಿಕ ಖಿನ್ನತೆ ಶಾಲೆಗಳ ಕೊರತೆ ಹೀಗೆ ಅನೇಕ ಸಾಮಾಜಿಕ ತೊಂದರೆಗಳು ಆರ್ಥಿಕ ಸಮಸ್ಯೆ ಮತ್ತು ಸಮಾಜದ ಕಣ್ಣಿಗೆ ಕಾಣದ ಸಂಪ್ರದಾಯದ ರಾಜಕೀಯ ನೀತಿಗಳು ಮಲೆನಾಡಿನ ಹೆಣ್ಣುಮಕ್ಕಳನ್ನು ಶಿಕ್ಷಣ ವಂಚಿತವಾಗುವಂತೆ ಮಾಡಿವೆ. ಒಂದರ್ಥದಲ್ಲಿ ಈ ಯೋಜನೆಯಿಂದಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಉತ್ತೇಜನ ದೊರೆಯುವುದರ ಜೊತೆಗೆ ಪ್ರಾಥಮಿಕ ಮತ್ತು ಪ್ರೌಢಶಾಲಾಶಿಕ್ಷಣ ಕಡ್ಡಾಯಗೊಳಿಸುವುದರಿಂದಾಗಿ ಹೆಣ್ಣು ಮಕ್ಕಳಿಗೆ ಒಂದು ಸಾಮಾಜಿಕ ತಿಳುವಳಿಕೆ, ಅರಿವು, ಜ್ಞಾನ ಮತ್ತು ಸಮಾಜದ ಪರಿಸ್ಥಿತಿಯನ್ನು ಅರ್ಥೈಸಿರುವ ವ್ಯವಹಾರಿಕ ಪ್ರಪಂಚದಲ್ಲಿ ಬದುಕುವ ಮನೋಸ್ಥೈರ್ಯವನ್ನು ಶಿಕ್ಷಣನೀಡುತ್ತದೆ. ಜೊತೆಗೆ ಒಂದು ನಿಶ್ಚಿತ ಅವಧಿಯ ನಂತರ ಒಂದು ನಿಶ್ಚಿತ–ನಿವ್ವಳ ಆದಾಯ ದೊರೆಯುವುದರಿಂದಾಗಿ ಹೆಣ್ಣುಮಕ್ಕಳಿಗೆ ಸ್ವ–ಉದ್ಯೋಗ, ಸ್ವಾವಲಂಬಿ ಜೀವನ ನಡೆಸಲು ಆರ್ಥಿಕ ಸಹಾಯ ಬಹಳಷ್ಟು ಉಪಯೋಗವಾಗುತ್ತಿದೆ. ಈ ಯೋಜನೆಯ ಪೂರ್ಣ ಸಾಧನೆ, ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು ಮತ್ತು ಪೋಷಕರ ಕಾಳಜಿ, ಜವಾಬ್ದಾರಿಯನ್ನು ಅವಲಂಬಿಸಿದೆ. ಶಾಲೆಗಳಲ್ಲಾಗಲಿ ಮತ್ತು ಕುಟುಂಬಗಳಲ್ಲಾಗಲಿ ಹೆಣ್ಣು ಮಗುವೆಂದು ಶೂನ್ಯಭಾವನೆಯಿಂದ ನೋಡುವುದರಿಂದ ತಿರಸ್ಕರಿಸುವುದರಿಂದ ಹೆಣ್ಣುಮಕ್ಕಳ ಜ್ಞಾನದ, ಶಿಕ್ಷಣದ ಮಟ್ಟ ಕುಗ್ಗುತ್ತದೆ. ಪೋಷಕರು ಹೆಣ್ಣುಮಕ್ಕಳು ಶಾಲೆಗೆ ಹೋಗುವುದರಿಂದ ಒಂದು ಆದಾಯಕ್ಕೆ ಆಸೆಪಟ್ಟು ಮುಂದೆ ಬರುವ ಆದಾಯದಲ್ಲಿ ಅವರ ಮದುವೆ, ಅಥವಾ ಪೋಷಕರ ದುರಭ್ಯಾಸಗಳಿಗೆ ಒಳಗಾಗದ ಹಾಗೆ ಸಾಮಾಜಿಕ ತಿಳುವಳಿಕೆ ಮತ್ತು ಅರಿವು ಮೂಡಿಸುವ ಅಗತ್ಯತೆ ಇದೆ.

ಭಾಗ್ಯಲಕ್ಷ್ಮಿ ಯೋಜನೆಯು ಕಾರ್ಯರೂಪಕ್ಕೆ ಬರಲು ಅಂಗನವಾಡಿಕಾರ್ಯಕರ್ತೆಯರ, ಶಿಕ್ಷಕರು ಮತ್ತು ಪೋಷಕರ ತಿಳುವಳಿಕೆ, ಮುತುವರ್ಜಿ ಅತಿಮುಖ್ಯವಾದದ್ದು. ಈ ಯೋಜನೆಯನ್ನು ಬೆಳವಣಿಗೆ, ಉಪಯೋಗ ಮತ್ತು ಕಾರ್ಯಸಾಧನೆಯ ಮಾಹಿತಿಗಾಗಿ ಭದ್ರಾವತಿ ತಾಲೂಕಿನ ತಾವರಘಟ್ಟ ಗ್ರಾಮಪಂಚಾಯತಿಯ ಮೂರು ಅಂಗನವಾಡಿಕೇಂದ್ರಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಒಳಪಡಿಸಿ, ಕೇಂದ್ರಗಳಿಂದ ಭಾಗ್ಯಲಕ್ಷ್ಮಿಯೋಜನೆಯ ನೋಂದಣಿ, ಭಾಗ್ಯಲಕ್ಷ್ಮಿ ಯೋಜನೆಯ ಬಾಂಡುಗಳ ವಿತರಣೆ, ವಿಮೆ ಮತ್ತು ಅದರ ಉಪಯೋಗದ ಬಗ್ಗೆ ಮಾಹಿತಿಗಾಗಿ ತಾವರಘಟ್ಟ ಅಂಗನವಾಡಿ ಕೇಂದ್ರ, ನೆಲ್ಲಿಸರ, ಮಾಳೇನಹಳ್ಳಿ ಅಂಗನವಾಡಿ ಕೇಂದ್ರಗಳನ್ನು ಆಯ್ಕೆಮಾಡಿ ಭಾಗ್ಯಲಕ್ಷ್ಮಿ ಯೋಜನೆಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಮೂಲಕ ಮಾಹಿತಿಯನ್ನು ಕಲೆಹಾಕಲಾಗಿದೆ.

**ಭದ್ರಾವತಿ ತಾಲೂಕಿನ ಅಂಗನವಾಡಿ ಕೇಂದ್ರಗಳ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳ ಅಂಕಿಅಂಶ :**

| ವರ್ಷ | ತಾವರೆಘಟ್ಟ ಅಂಗನವಾಡಿ ಕೇಂದ್ರ | ನೆಲ್ಲಿಸರ ಅಂಗನವಾಡಿ ಕೇಂದ್ರ | ಮಾಳೇನಹಳ್ಳಿ |
|---|---|---|---|
| 2006–07 | 3 | 2 | 3 |
| 2007–08 | 6 | 4 | 5 |
| 2008–09 | 6 | 4 | 6 |
| 2009–10 | 5 | 5 | 4 |
| 2010–11 | 4 | 4 | 3 |
| 2011–12 | 5 | 3 | 2 |
| 2012–13 | 0 | 0 | 1 |

ಈ ಮೇಲಿನ ಅಂಗನವಾಡಿ ಕೇಂದ್ರಗಳಲ್ಲಿ ದೊರೆತ ಭದ್ರಾವತಿ ತಾಲೂಕಿನ ಒಟ್ಟು ಭಾಗ್ಯಲಕ್ಷ್ಮಿಯೋಜನೆಯ ಅಂಕಿಅಂಶಗಳ ಪ್ರಕಾರ 2006–07ನೇ ಸಾಲಿನಿಂದ 2010–11ನೇ ಸಾಲಿನವರೆಗೂ ಭಾಗ್ಯಲಕ್ಷ್ಮಿಯೋಜನೆಯ ನೋಂದಣಿ ನಿಶ್ಚಿತ ಪ್ರಗತಿಯಲ್ಲಿದ್ದು ಅನಂತರದ ದಿನಗಳಲ್ಲಿ ತಾಲೂಕು ಮಟ್ಟದಲ್ಲಿ ಮತ್ತು ಅಂಗನವಾಡಿ ಕೇಂದ್ರಗಳಲ್ಲಿಯೂ ಭಾಗ್ಯಲಕ್ಷ್ಮಿಯ ಯೋಜನೆಯ ನೊಂದಣಿ ಸಂಖ್ಯೆ ಇಳಿಮುಖವಾಗಿದೆ ಆದರೆ ವಿದ್ಯಾರ್ಥಿವೇತನ ನಿರ್ದಿಷ್ಟವಾದ ಸಮಯದಲ್ಲಿ ಬರುತ್ತಿರುವುದು ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿದೆ.

**ನೊಂದಣಿ ಇಳಿಕೆಗೆ ಕೇಳಿಬರುತ್ತಿರುವ ಕಾರಣಗಳು ಹಲವಾರು ಅವುಗಳೆಂದರೆ :**

- ಬಿ.ಪಿ.ಎಲ್ ಕಾರ್ಡ್‌ಗಳನ್ನು ಪಡೆಯಲು ಇರುವ ಮಾನದಂಡ ಅಧಿಕಗೊಂಡಿರುವುದು.
- ಆದಾಯ ನಿಗದಿಪಡಿಸಿ ಆದಾಯ ಪ್ರಮಾಣಪತ್ರ ಪಡೆಯುವಲ್ಲಿ ಇರುವ ನಿರ್ದಿಷ್ಟ ನಿರ್ಬಂಧಗಳು.

- ಕೆಲವು ಪೋಷಕರಿಗೆ ಈ ಯೋಜನೆ ಅಡಿಯಲ್ಲಿ ಪಾಲ್ಗೊಳ್ಳಲು ಬೇಕಾಗಿರುವ ಅರ್ಹತಾ ಮಾನದಂಡಗಳನ್ನು ಪೂರೈಸಲಾಗದಿರುವುದು.
- ಭಾಗ್ಯಲಕ್ಷ್ಮಿ ಯೋಜನೆಯ ಅನುಕೂಲತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯ ಕುಂಠಿತಗೊಳ್ಳುತ್ತಿರುವುದು.
- ಯೋಜನೆಯಡಿಯಲ್ಲಿ ಬರುವಲ್ಲಿ ಇರುವ ಕಡ್ಡಾಯಗಳು ಮತ್ತು ಯೋಜನೆಯ ಉಪಯೋಗದ ಬಗ್ಗೆ ಇಲ್ಲದಿರುವ ಮಾಹಿತಿಗಳು ಕೂಡ ಯೋಜನೆಯ ನೋಂದಾವಣಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ.

ಹೀಗೆ ಭಾಗ್ಯಲಕ್ಷ್ಮಿ ಯೋಜನೆಯು ಸಮಾಜದ ಎಲ್ಲಾ ಸ್ತರಗಳ ಜಾತಿ–ಧರ್ಮಗಳ ತಳಸಮುದಾಯದ ಎಲ್ಲಾ ಹೆಣ್ಣುಮಕ್ಕಳ ಶಿಕ್ಷಣದ ಉನ್ನತಿಗೆ ಹಾಗೂ ಹೆಣ್ಣುಮಗುವಿನ ಸಾಮಾಜಿಕ–ಆರ್ಥಿಕ–ನೈತಿಕ ಅಭಿವೃದ್ಧಿಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯು ಒಂದು ಪ್ರಮುಖ ಯೋಜನೆಯಾಗಿದೆ. ಈ ಯೋಜನೆಯಿಂದಾಗಿ ಸಮಾಜದ ಸಾಮಾಜಿಕ ಪಿಡುಗುಗಳಾದ ಹೆಣ್ಣುಶಿಶು ಹತ್ಯೆ, ಹೆಣ್ಣು ಭ್ರೂಣಹತ್ಯೆ ಮತ್ತು ಹೆಣ್ಣುಮಕ್ಕಳು ಅನವಶ್ಯಕ ಜವಾಬ್ದಾರಿ ಎನ್ನುವ ಜನರ ಮನಸ್ಥಿತಿಯನ್ನು ಮಾರ್ಪಾಡು ಮಾಡುವಲ್ಲಿ ಕಾರ್ಯರೂಪಿಯಾಗಿದೆ. ಹಾಗೆಯೇ ಹೆಣ್ಣುಮಕ್ಕಳು ಶೈಕ್ಷಣಿಕವಾಗಿಯೂ ಮತ್ತು ಆರ್ಥಿಕವಾಗಿಯೂ ಸ್ವಾವಲಂಬಿ ಜೀವನ ನಡೆಸಲು ಈ ಯೋಜನೆಯು ಮಹತ್ವಪೂರ್ಣವಾಗಿದೆ.

**ಮಾಹಿತಿ ಶೇಖರಣೆ :**

1. ಅಂಗನವಾಡಿ ಕೇಂದ್ರ. ಮಾಳೇನಹಳ್ಳಿ, ಶಂಕರಘಟ್ಟ ಅಂಚೆ, ಭದ್ರಾವತಿ ತಾಲ್ಲೂಕು.
2. ತಾವರೆಘಟ್ಟ ಅಂಗನವಾಡಿ ಕೇಂದ್ರ. ಶಂಕರಘಟ್ಟ ಅಂಚೆ, ಭದ್ರಾವತಿ ತಾಲ್ಲೂಕು.
3. ನೆಲ್ಲಿಸರ ಅಂಗನವಾಡಿ ಕೇಂದ್ರ. ಶಂಕರಘಟ್ಟ ಅಂಚೆ, ಭದ್ರಾವತಿ ತಾಲ್ಲೂಕು.
4. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಭದ್ರಾವತಿ ತಾಲ್ಲೂಕು.

# ದೃಶ್ಯಮಾಧ್ಯಮ : ಹೆಣ್ಣಿನ ಪ್ರತಿನಿಧೀಕರಣ

**ಶ್ವೇತ. ಸಿ**

**ಮ**ಹಿಳೆ ಎಂಬ ಹೆಸರಿನ ಪದಶಃ ಅರ್ಥವೇ ಮನದ, ಮನೆಯ ಹಿತವನ್ನು ಕಾಯುವವಳು. ಈ ಕಾರಣಕ್ಕೋ ಏನೋ ಅವಳು ಮನೆಕೆಲಸಗಳಿಗೆ ಮಾತ್ರ ಸೀಮಿತವಾಗಿ ಕುಟುಂಬಕ್ಕಷ್ಟೇ ಸಂಪೂರ್ಣ ತೊಡಗಿಸಿಕೊಂಡು ಗೃಹಲಕ್ಷ್ಮಿಯಾಗಿ ಜೊತೆಗೆ ಗೃಹಬಂಧಿಯಾಗಿ ಕಾಲಸವೆಸಬೇಕು ಎಂಬ ದಿನಗಳಿದ್ದವು. ಬದಲಾಗುತ್ತಿದೆ ಬದುಕು, ಇಂದು ಮಹಿಳೆ ಎಲ್ಲಾ ರಂಗಗಳಲ್ಲೂ ತನ್ನನ್ನು ತೊಡಗಿಸಿಕೊಂಡು ಮುನ್ನಡೆಯುತ್ತಿದ್ದಾಳೆ. ಮಹಿಳೆ ಇಲ್ಲದ ಯಾವುದೇ ಕ್ಷೇತ್ರವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬಂತೆ ಮಹಿಳೆಯ ಉಪಸ್ಥಿತಿ ಎಲ್ಲಾ ಕಡೆ ಎದ್ದುಕಾಣುತ್ತಿದೆ.

ಮನೆ–ಮಕ್ಕಳು ಸಂಸಾರವನ್ನು ನಡೆಸುತ್ತಾ ಮನೆಯ ಮಹಾಲಕ್ಷ್ಮಿಯಾಗಿ ಗೃಹಿಣಿ ಗೃಹಮುಚ್ಯತೇ ಎಂಬಂತಿದ್ದ ಮಹಿಳೆ ಇಂದು ಗೃಹಕೃತ್ಯದ ಜೊತೆಗೆ ಸಂಸಾರವನ್ನು ಸರಿತೂಗಿಸಿಕೊಂಡು ಹೊರಗಿನ ಸಮಾಜದಲ್ಲೂ ಕೂಡ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾಳೆ. ಮಹಿಳೆಯನ್ನು ನಮ್ಮ ಪುರುಷಪ್ರಧಾನ ಸಂಪ್ರದಾಯಬದ್ಧವಾದ ಸಮಾಜವು ದ್ವಿತೀಯದರ್ಜೆಯ ಪ್ರಜೆಯಾಗಿ ನಡೆಸಿಕೊಂಡು ಅವಳ ಆಶೋತ್ತರಗಳಿಗೆ ಸ್ಪಂದಿಸದೆ ಅವಳನ್ನು ಸದಾ ತೆರೆಮರೆಯಲ್ಲಿಟ್ಟು ನೋಡುವ ಕ್ರಮವನ್ನೇ ತನ್ನ ಹಕ್ಕೆಂಬಂತೆ ನಡೆಸಿಕೊಂಡು ಬಂದಿದೆ. ತನ್ನ ಮೇಲಿನ ಎಲ್ಲಾ ಜವಾಬ್ದಾರಿಗಳನ್ನು ಹಲವು ಸಂಕಷ್ಟಗಳ ನಡುವೆ ಸರಿದೂಗಿಸಿಕೊಂಡು ಬಂದಿರುವ ಮಹಿಳೆ ಇಂದು ಆರ್ಥಿಕ ವಲಯದಲ್ಲಿ, ಆಡಳಿತದಲ್ಲಿ, ರಾಜಕೀಯದಲ್ಲಿ, ವಿಜ್ಞಾನಕ್ಷೇತ್ರದಲ್ಲಿ, ಕ್ರೀಡೆ, ಸಾಹಿತ್ಯ–ಸಾಂಸ್ಕೃತಿಕ ರಂಗದಲ್ಲಿ ಮತ್ತು ಬಾಹ್ಯಾಕಾಶ ತಂತ್ರಜ್ಞಾನದಲ್ಲಿ –ಹೀಗೆ ಎಲ್ಲೆಡೆ ತನ್ನದೇ ಆದ ಸ್ವಂತ ಹೆಜ್ಜೆಗುರುತುಗಳನ್ನು ಮೂಡಿಸಿ ದಾಖಲೆಯನ್ನು ಸೃಷ್ಟಿಸಿದ್ದಾಳೆ.

ಇಂದಿನ ಸ್ಪರ್ಧಾತ್ಮಕಯುಗದಲ್ಲಿ ಗಂಡಿಗೆ ಸರಿಸಮಾನಳಾಗಿ ನಿಂತು ಸಮಾಜದಲ್ಲಿ ನಡೆಯುವ ಆಗು–ಹೋಗುಗಳಿಗೆ ಸ್ಪಂದಿಸುತ್ತಾ ಸಾಧನೆಯ ಹಾದಿಯಲ್ಲಿ ದಾಪುಗಾಲಿಟ್ಟು ಸಾಗುತ್ತಿರುವುದು ಮೆಚ್ಚಲೇಬೇಕಾದ ಸಂಗತಿ. ಇಂದಿನ ಮಹಿಳೆಯಷ್ಟು ಸ್ವತಂತ್ರವಾದ ಹಾದಿಗಳು ಹಿಂದಿನ ಮಹಿಳೆಗಿರಲಿಲ್ಲ, ತನ್ನಲ್ಲಿ ಗಂಡಿಗಿಂತ ಹೆಚ್ಚು ಶಕ್ತಿಯಿದ್ದರೂ ಅದನ್ನು ಮಕ್ಕಳನ್ನು ಹೆರುವುದರಲ್ಲಿ, ಗಂಡನ ಸುಖಸಂತೋಷಕ್ಕಷ್ಟೇ ವ್ಯಯಿಸಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ಅವಳನ್ನು ಮನೆಯಿಂದ ಹೊರಗೆ ಕರೆತಂದು ಅವಳು ಆರ್ಥಿಕವಾಗಿ ಸ್ವಾವಲಂಬಿಯಾಗಿ ಬದುಕಲು ಸಹಕಾರಿಯಾದ ಬಹುಮುಖ್ಯ ಸಾಧ್ಯತೆಗಳಲ್ಲಿ ದೃಶ್ಯಮಾಧ್ಯಮ ಕೂಡ ಮುಖ್ಯವಾದುದು. ಇಂತಹ ಸಮೂಹ ಮಾಧ್ಯಮಗಳು ಹೆಣ್ಣಿಗೆ ಹಲವಾರು ರೀತಿಯಲ್ಲಿ ಸಹಕಾರಿಯಾದದ್ದು ಒಂದುಕಡೆಯಾದರೆ, ಹೆಣ್ಣನ್ನು ಆಕರ್ಷಣೆಯಾಗಿ ಬಳಸಿಕೊಂಡು ಅವಳ ಕಂಠಸಿರಿ–ದೇಹಸಿರಿಯನ್ನು ಬಂಡವಾಳವಾಗಿಸಿಕೊಂಡು ಅದು ಅತಿರೇಕಕ್ಕೆ ತಲುಪಿರುವುದು ಮತ್ತೊಂದು ಕಡೆ. ಇದನ್ನೆಲ್ಲ ನೋಡಿದರೆ ಹೆಣ್ಣು ದ್ವಿತೀಯ ದರ್ಜೆಯ ವ್ಯಕ್ತಿಯಾಗಿದ್ದಾಗಲೇ ಇಂದಿಗಿಂತ ಹೆಚ್ಚು ಸುರಕ್ಷಿತವಾಗಿದ್ದಳು ಎಂದೆನಿಸುತ್ತದೆ.

ಮಹಿಳೆ ತನ್ನ ಕಾಲಮೇಲೆ ಆತ್ಮವಿಶ್ವಾಸದಿಂದ ನಿಂತು ಆರ್ಥಿಕವಾಗಿ ಗಂಡಿನಷ್ಟೇ ಸಬಲಳಾಗಲು ಪ್ರೇರೇಪಿಸಿದ್ದು ಮತ್ತು ಅವಳಲ್ಲಿದ್ದ ಮಾನಸಿಕ–ದೈಹಿಕ ಸೌಂದರ್ಯಕ್ಕೆ ಅಡಿಪಾಯವನ್ನು ಒದಗಿಸಿದ್ದು ದೃಶ್ಯಮಾಧ್ಯಮ. ಮೊದಲಿಗೆ ಹೆಣ್ಣು ರಂಗಮಾಧ್ಯಮದ ಮೂಲಕ ತನ್ನನ್ನು ಗುರುತಿಸಿಕೊಂಡಳು. ನಾಟಕ ಸಾಹಿತ್ಯವು ನೋಡುಗರನ್ನು ಮತ್ತು ಕೇಳುಗರನ್ನು ಏಕಕಾಲದಲ್ಲಿ ಆಕರ್ಷಿಸುವಂತಹ ಮಾಧ್ಯಮ. ಇಂತಹ ಮಾಧ್ಯಮದಲ್ಲಿ ಮಹಿಳೆ ಪುರುಷನಿಗಿಂತ ಜವಾಬ್ದಾರಿಯಾಗಿ ವರ್ತಿಸುವ ತುರ್ತು ಹೆಚ್ಚೇ ಇತ್ತು. ಅದನ್ನು ಸಹೃದಯ ಪ್ರೇಕ್ಷಕ ನಿರೀಕ್ಷಿಸುತ್ತಿದ್ದ ಕೂಡ. ಹಾಗಾಗಿಯೇ ಅವಳು ಸಂಪ್ರದಾಯದ ಹಿಡಿತದಲ್ಲೇ ತನ್ನನ್ನು ಈ ಮಾಧ್ಯಮಕ್ಕೆ ಒಡ್ಡಿಕೊಂಡಳು. ಹೀಗೆ ಒಡ್ಡಿಕೊಂಡ ಮಹಿಳೆಯ ಮನಸ್ಥಿತಿಯಲ್ಲಿ ಹಲವು ಏರುಪೇರುಗಳಾಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ವಿಶ್ವಸಾಹಿತ್ಯದ ಸಂದರ್ಭದಲ್ಲಿ ಪ್ರಯೋಗದ ದೃಷ್ಟಿಯಿಂದ ನೋಡುವುದಾದರೆ ಮಹತ್ವವನ್ನು ಪಡೆದುಕೊಂಡದ್ದು ನಾಟಕಸಾಹಿತ್ಯ. ಸಾಹಿತ್ಯ–ಸಂಸ್ಕೃತಿಯ ಸಂದರ್ಭಕ್ಕೆ ಅನಿವಾರ್ಯವೆಂಬಂತೆಯೂ ಕಾಣಿಸಿಕೊಂಡ ನಾಟಕಸಾಹಿತ್ಯ ಕೇಳುಗರು ಮತ್ತು ನೋಡುಗರನ್ನು ಏಕಕಾಲಕ್ಕೆ ಗಮನದಲ್ಲಿಟ್ಟುಕೊಂಡು ರಚನೆಯಾದ ಕಾರಣದಿಂದಲೂ ಹೆಣ್ಣು ತನ್ನ ವ್ಯಕ್ತಿತ್ವಕ್ಕೆ ಧಕ್ಕೆಬರದಂತೆ ಪಾತ್ರನಿರ್ವಹಿಸಬೇಕಾದ ಅಗತ್ಯತೆಯಿತ್ತು. ಇಂದಿನ ನಮ್ಮ ಕನ್ನಡ ಚಲನಚಿತ್ರಗಳ ಮೊದಲ ಹೆಜ್ಜೆಯನ್ನು ಗುರುತಿಸುವ ಪ್ರಯತ್ನಮಾಡಿದರೆ ನಾವು ಮುಖಮಾಡಬೇಕಾದ್ದು ರಂಗಭೂಮಿ ಮತ್ತು ನಾಟಕಸಾಹಿತ್ಯದ ಕಡೆಗೆ ಎಂಬುದರಲ್ಲಿ ಎರಡು ಮಾತಿಲ್ಲ.

ದೃಶ್ಯಮಾಧ್ಯಮವಾದ ರಂಗಭೂಮಿಯಲ್ಲೂ ಪುರುಷಪಾತ್ರವನ್ನು ಅತ್ಯಂತ ಪರಿಣಾಮಕಾರಿಯಾಗಿ ತೋರಿಸುವಾಗಲೂ ಹೆಣ್ಣು ಅವನ ಸಹಾಯಕಳಾಗಿಯೇ ಪಾತ್ರನಿರ್ವಹಿಸಬೇಕಾಗಿತ್ತು. ಆದರೆ ಬರುಬರುತ್ತಾ ಈ ಕಲ್ಪನೆಯಿಂದ ಸ್ವಲ್ಪ ಸ್ವತಂತ್ರವಾಗಿ ಯೋಚಿಸುವಂತೆ ನಾಯಕನ ಪಾತ್ರದ ಕಲ್ಪನೆಯೊಂದಿಗೆ ಅತ್ಯಗತ್ಯ ಮತ್ತು ಅನಿವಾರ್ಯ ಎಂಬಂತೆ ನಾಯಕಿಯ ಪಾತ್ರವನ್ನು ಸಮಾನಗೊಳಿಸುವ ಸನ್ನಿವೇಶಗಳು ಸೃಷ್ಟಿಯಾದವು. ಇಂದು ಕೂಡ ಈ ಪರಿಸ್ಥಿತಿಯಿಂದ ದೃಶ್ಯಮಾಧ್ಯಮ ಹೊರತಾಗಿಲ್ಲ ಎಂಬುದೇ ಹೆಣ್ಣಿನ ಉಪಸ್ಥಿತಿಯನ್ನು ಒತ್ತಿಹೇಳುತ್ತದೆ. ನಾಟಕ-ಸಿನಿಮಾಗಳು ನಾಯಕನೊಂದಿಗೆ ನಾಯಕಿಯನ್ನು ಅನಿವಾರ್ಯ ಎಂಬಂತೆಯೇ ರೂಪಿಸಿಕೊಂಡು ಬಂದಿವೆ. ಅದು ಗಂಡು ಹೆಣ್ಣಿನ ಪರಸ್ಪರ ಆಕರ್ಷಣೆಯ ಕಾರಣಕ್ಕೂ ಮುಖ್ಯವಾಹಿನಿಯಲ್ಲಿ ನೋಡಲು ಸಾಧ್ಯವಾಯಿತು. ಇಂದು ಕೆಲವೊಮ್ಮೆ ವಿಪರೀತ ಎಂಬಂತೆ ಹೆಣ್ಣನ್ನು ಹೇಗೆಬೇಕೋ ಹಾಗೆ ಬಳಸಿಕೊಳ್ಳುವ, ಶೋಷಿಸುವ ಮಟ್ಟವನ್ನು ತಲುಪಿವೆ. ಆದರೆ ಹಿಂದಿನ ರಂಗಭೂಮಿ-ಚಲನಚಿತ್ರರಂಗ-ಟಿವಿಮಾಧ್ಯಮಗಳಲ್ಲಿ ಹೆಣ್ಣಿನ ಪರಿಸ್ಥಿತಿ ಇಷ್ಟೊಂದು ಅಸಹನೀಯವಾಗಿರಲಿಲ್ಲ ಎಂಬುದನ್ನು ಮನಗಾಣಬಹುದು.

ಮೊದಲೆಲ್ಲ ನಾಟಕಗಳಲ್ಲಿ ಸ್ತ್ರೀಪಾತ್ರವನ್ನು ಪುರುಷರೇ ನಿರ್ವಹಿಸುತ್ತಿದ್ದರು. ಸಾಂಪ್ರದಾಯಿಕ ಮಡಿವಂತಿಕೆಯ ಜನರು ಅವಳನ್ನು ನಾಲ್ಕುಗೋಡೆಗಳ ನಡುವೆ ಇಟ್ಟಿದ್ದರಿಂದಲೂ ಹೆಣ್ಣು ಹೊಸಿಲಿನಿಂದ ಹೊರಗೆ ಕಾಲಿಟ್ಟರೆ ತಮಗಿಂತ ಹೆಚ್ಚು ಬೆಳೆಯಬಹುದು ಎಂಬ ಕಾರಣಕ್ಕೂ ಪುರುಷರೇ ಮಹಿಳಾ ಪಾತ್ರವನ್ನು ಅನಿವಾರ್ಯವಾಗಿ ನಿರ್ವಹಿಸಬೇಕಾಗಿತ್ತು. ಸಾರ್ವಜನಿಕವಾದ ಪ್ರದರ್ಶನದಲ್ಲಿ ಅವಳನ್ನು ತರುವುದು ಕಷ್ಟದ ಕೆಲಸವೇ ಆಗಿತ್ತು. ಆದರೆ ಗಂಡು ಹೆಣ್ಣಿನಂತೆ ಅಲಂಕಾರಮಾಡಿಕೊಂಡು ಎಷ್ಟೇ ಚೆನ್ನಾಗಿ ಪಾತ್ರನಿರ್ವಹಿಸಿದರೂ ಹೆಣ್ಣಿನ ಹಾಗೆ ಸಹಜ ಅಭಿನಯವನ್ನು ನೀಡಲು ಸಾಧ್ಯವಿಲ್ಲ. ಈ ಎಲ್ಲಾ ಬೆಳವಣಿಗೆಗಳಿಂದ ವಿಮುಖವಾದಂತೆ ಮಹಿಳೆಯೇ ದೃಶ್ಯಮಾಧ್ಯಮದ ಕಡೆಗೆ ಒಲವು ತೋರಿದಾಗ ಆದ ಬದಲಾವಣೆ ನಂಬಲರ್ಹವಾದುದಾಗಿತ್ತು. ಏಕೆಂದರೆ ಯಾರ ಪಾತ್ರವನ್ನು ಯಾರು ನಿರ್ವಹಿಸಬೇಕೋ ಅವರೇ ನಿರ್ವಹಿಸಿದರೆ ಸೊಗಸು. ಎಲ್ಲ ಕೆಲಸಗಳನ್ನು ಎಲ್ಲರೂ ಮಾಡಲು ಬರುವುದಿಲ್ಲ. ಇದನ್ನೇ ಔಚಿತ್ಯಪ್ರಜ್ಞೆ ಎನ್ನಬಹುದು. ಇಂದು ಆಧುನಿಕತೆಯ ಸಂದರ್ಭದಲ್ಲಿ ಆಕರ್ಷಣೆ ಮತ್ತು ಬಂಡವಾಳದ ಕಾರಣಕ್ಕೂ ಹೆಣ್ಣು ಅನಿವಾರ್ಯ ಮತ್ತು ಅವಶ್ಯಕ. ಇಷ್ಟಾಗಿಯೂ ಕೂಡ ಹೆಣ್ಣನ್ನು ಪ್ರಥಮಪ್ರಜೆಯಾಗಿ ಮೊದಲ ಸಾಲಿನಲ್ಲಿ ಗಮನಿಸಿದ್ದು ಕಡಿಮೆಯೇ.

'ಕನ್ನಡದಲ್ಲಿ ಮೊದಲು ಬಿಡುಗಡೆಯಾದ ವಾಕ್ಚಿತ್ರ 'ಸತಿಸುಲೋಚನ'ದಲ್ಲಿ ಸುಲೋಚನಾಳ (ನಾಯಕಿ) ಪಾತ್ರವನ್ನು ನಿರ್ವಹಿಸಿದ ತಾರೆ ತ್ರಿಪುರಾಂಭ ಹಾಗೆ ಆ ಸಿನಿಮಾದಲ್ಲಿ ಮತ್ತೊಂದು ಮುಖ್ಯ ಪಾತ್ರವಾದ ಮಂಡೋದರಿಯಾಗಿ ಲಕ್ಷ್ಮಿಬಾಯಿ ನಟಿಸಿದ್ದರು. ಆರಂಭದಿಂದಲೂ ನಾಯಕಿಯ ಸ್ಥಾನವನ್ನು ಅನಿವಾರ್ಯ ಎಂಬಂತೆ ಗಮನಿಸಿದ್ದರೂ ಅವುಗಳನ್ನು ಆದ್ಯತೆಯ ದೃಷ್ಟಿಯಿಂದ ಮೊದಲ ಸಾಲಿನಲ್ಲಿ ಗಮನಿಸಿದ್ದು ಕಡಿಮೆ'[1] ಎನ್ನುವ ಡಾ. ಜಿ. ಪ್ರಶಾಂತ ನಾಯಕರ ಮಾತುಗಳು ಅಕ್ಷರಶಃ ಸತ್ಯ. ಏಕೆಂದರೆ ಇಂದು ಕೂಡ ಆ ಪರಿಸ್ಥಿತಿ ಮುಂದುವರಿದಿದೆ ಎಂದರೆ ತಪ್ಪಾಗಲಾರದು. ಗಂಡನ್ನು ವೈಭವೀಕರಿಸಿ ತೋರಿಸುವ ಚಿತ್ರಗಳ ಸಂಖ್ಯೆಯೇ ಅಧಿಕವಾಗಿವೆ. ನಾಯಕಪ್ರಧಾನ ಚಿತ್ರಗಳೇ ಹೆಚ್ಚು ಮನ್ನಣೆಯನ್ನು ಗಳಿಸಿಕೊಳ್ಳುವ ಹೊತ್ತಿಗೂ ನಾಯಕಿಪ್ರಧಾನ ಚಿತ್ರಗಳು ಕೂಡ ಒಂದಷ್ಟು ಹೆಸರುಮಾಡಿದ್ದವು ಎಂಬುದು ಉಲ್ಲೇಖಾರ್ಹ. ಅಂದು ಪುಟ್ಟಣ್ಣನವರ ಗರಡಿಯಲ್ಲಿ ಕಲ್ಪನಾ, ಮಂಜುಳಾ, ಆರತಿ, ಭಾರತಿ, ಜಯಂತಿಯಂತಹ ನಟಿಮಣಿಯರು ಕನ್ನಡ ಚಿತ್ರರಂಗದಲ್ಲಿ ಆಳಿದರು, ಬಾಳಿದರು ಜೊತೆಗೆ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡರು. ಮುಂದುವರಿದಂತೆ ಮಾಲಾಶ್ರೀಯ ಆಗಮನ ಕನ್ನಡ ಚಿತ್ರರಂಗಕ್ಕೊಂದು ಹೊಸ ತಿರುವುನೀಡಿತು. ನಾಯಕಪ್ರಧಾನ ಚಿತ್ರಗಳಷ್ಟೇ ಯಶಸ್ವಿ ಚಿತ್ರಗಳನ್ನು ನಾಯಕಿಪ್ರಧಾನಪಾತ್ರದ ಮೂಲಕ ಕೊಟ್ಟಂತಹ ಕೀರ್ತಿ ಮಾಲಾಶ್ರೀಯವರಿಗೆ ಸಲ್ಲುತ್ತದೆ. ಕಲ್ಪನಾಳ ನಂತರ ಇಂತಹದ್ದೊಂದು ವಿಶೇಷ ಯಶಸ್ಸು ಮಾಲಾಶ್ರೀಯದ್ದಾಗಿತ್ತು. ಪ್ರಿಯಾ ಹಾಸನ್ ಮುಂತಾದ ನಾಯಕಿಯರು ಚಿತ್ರರಂಗದಲ್ಲಿ ವಿಭಿನ್ನ ಆಲೋಚನೆ ಮತ್ತು ಪಾತ್ರಗಳ ಮೂಲಕ ಇಡಿಯಾಗಿ ನಾಯಕಿಪ್ರಧಾನ ಪಾತ್ರದಲ್ಲಿ ಮಹಿಳಾಸಬಲತೆಯನ್ನು ಬಿಂಬಿಸುತ್ತಿದ್ದಾರೆ. ಇಂದು ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆಹೋಗಿ ಚಿತ್ರಕಥೆ-ನಿರ್ದೇಶನ-ನಿರ್ಮಾಪಕ-ಛಾಯಾಗ್ರಾಹಕ-ಪಾತ್ರಧಾರಿ-ತಂತ್ರಜ್ಞರು ಹೀಗೆ ಇಡಿಯಾಗಿ ಮಹಿಳಾಪ್ರಧಾನ ಚಿತ್ರಗಳು ರೂಪುಗೊಳ್ಳುತ್ತಿರುವುದು ಹೊಸಪ್ರಯೋಗದ ಜೊತೆಗೆ ಪ್ರಶಂಸಾರ್ಹ ಸಂಗತಿಯೂ ಹೌದು ಹಾಗೆಯೇ ಆಶಾದಾಯಕವಾದ ಬೆಳವಣಿಗೆಯೂ ಹೌದು. ಇಂತಹ ಹಲವು ಭಿನ್ನ-ವಿಭಿನ್ನ ಆಲೋಚನೆಗಳ ಅಗತ್ಯತೆ ಇಂದು ಹೆಚ್ಚೇ ಇದೆ. ಹೆಣ್ಣಿಂದ ಏನುಮಾಡಲು ಸಾಧ್ಯ ಎಂದು ಪ್ರಶ್ನಿಸುತ್ತಿದ್ದವರಿಗೆಲ್ಲ ಹೆಣ್ಣು ಮನಸ್ಸುಮಾಡಿದರೆ ಏನೂ ಬೇಕಾದರೂ ಸಾಧಿಸಬಲ್ಲಳು ಎಂಬುದಕ್ಕೆ ಇವೆಲ್ಲ ಉದಾಹರಣೆಗಳಾಗಿ ನಿಲ್ಲುತ್ತವೆ.

ಇಂದಿನ ಸ್ಪರ್ಧಾತ್ಮಕ ಜಗತ್ತಿನ ನಾಗಾಲೋಟದಲ್ಲಿ ಹೆಣ್ಣು ಅನಿವಾರ್ಯವಾಗಿ ತನ್ನನ್ನು ಎಲ್ಲಾ ಕ್ಷೇತ್ರಕ್ಕೂ ಒಡ್ಡಿಕೊಳ್ಳುತ್ತಿದ್ದಾಳೆ. ದೃಶ್ಯಮಾಧ್ಯಮದ ಮೂಲಕ ಇಂದು ಮಹಿಳೆ ತನ್ನನ್ನು ಪ್ರತಿಬಿಂಬಿಸಿಕೊಳ್ಳುವಲ್ಲಿ ತೊಡಗಿಸಿಕೊಳ್ಳುತ್ತಿದ್ದಾಳೆ.

ಹೀಗೆ ಆತ್ಮವಿಶ್ವಾಸದಿಂದ ಮುನ್ನಡೆಯುತ್ತಿರುವ ಮಹಿಳೆ ಇಂದು ಪುರುಷನ ದಬ್ಬಾಳಿಕೆಗೆ ಮೊದಲಿಗಿಂತ

ಹೆಚ್ಚಾಗಿಯೇ ಒಳಗಾಗುತ್ತಿದ್ದಾಳೆ ಎಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ನಾಗರೀಕ ಎನಿಸಿಕೊಳ್ಳುತ್ತಿರುವ ಮನುಷ್ಯ ತನ್ನಂತೆ ರಕ್ತ-ಮಾಂಸ ತುಂಬಿಕೊಂಡಿರುವ ಹೆಣ್ಣನ್ನು ಜೀವಸೆಲೆಯಾಗಿ ನೋಡದೆ ಅವಳ ಅಸ್ತಿತ್ವವನ್ನು ಇಲ್ಲವಾಗಿಸುತ್ತಿರುವ ಸಂಚುಗಳಿಗೇನು ಕಡಿಮೆಯಿಲ್ಲ. ಇಂತಹ ಹಲವು ಸಂಚುಗಳ ನಡುವೆಯೇ ಹೆಣ್ಣು ತನ್ನತನವನ್ನು ಉಳಿಸಿಕೊಳ್ಳಬೇಕಾಗಿದೆ. ಮತ್ತಷ್ಟು ಗಟ್ಟಿಯಾಗಬೇಕಿದೆ.

ಇಂದು ರಿಯಾಲಿಟಿ ಶೋಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಮಹಿಳೆಯನ್ನೋ, ಧಾರವಾಹಿಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಮಹಿಳೆಯನ್ನೋ, ಫ್ಯಾಶನ್ ಶೋಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಮಹಿಳೆಯನ್ನೋ ನೋಡಿದರೆ ಮನಸ್ಸಿಗೆ ಒಂದು ರೀತಿಯ ಇರಿಸು-ಮುರಿಸು ಉಂಟಾಗುವುದಂತು ಖಂಡಿತ. ಹಲವು ಸನ್ನಿವೇಶಗಳಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರು ಎಂಬಂತೆ ಬಿಂಬಿಸಿ ಕುಟುಂಬದ ಹಿತವನ್ನು ಕಾಪಾಡುವಲ್ಲಿ ದೃಶ್ಯಮಾಧ್ಯಮಗಳು ಸೋಲುತ್ತಿವೆ ಎಂದೆನಿಸುತ್ತದೆ. ಏಕೆಂದರೆ ಇಂದು ಬಹುಪಾಲು ಟಿ.ವಿ ಮಾಧ್ಯಮದಲ್ಲೂ ಆರೋಗ್ಯಕರವಾದಂತಹ ಪರಿಸರವನ್ನು ಸೃಷ್ಟಿಸಲು ಯತ್ನಿಸುತಿಲ್ಲ. ಎಲ್ಲವೂ ವ್ಯಾಪಾರೀಕರಣವಾಗುತ್ತಿದೆ. ಇಡಿಯಾಗಿ ಕುಟುಂಬದ ಸದಸ್ಯರೆಲ್ಲ ಕುಳಿತು-ಕಲೆತು ನೋಡುವಂತಹ ಕಾರ್ಯಕ್ರಮಗಳ ಪ್ರಸಾರ ಕಡಿಮೆಯೆಂದೇ ಹೇಳಬೇಕು. ಒಳಿತಿದ್ದ ಕಡೆ ಕೆಡುಕು ಇರುವ ಹಾಗೆ ಕೆಡುಕಿದ್ದ ಕಡೆ ಒಳಿತು ಇರುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ದೃಶ್ಯಮಾಧ್ಯಮಕ್ಕೆ ಹಲವು ರೀತಿಯಲ್ಲಿ ಸಹಾಯಕವಾಗುವ ಪ್ರಾಯೋಜಕತ್ವದ ಜಾಹೀರಾತುಗಳಲ್ಲಿ ಕೂಡ ಹೆಣ್ಣನ್ನು ಸೌಂದರ್ಯ ಮತ್ತು ಆಕರ್ಷಣೆಯ ಒಂದಂಶವಾಗಿಯೇ ಪರಿಗಣಿಸಲಾಗುತ್ತಿದೆ. ಜಾಹೀರಾತುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯನ್ನು ಕ್ರೀಮ್, ಸೋಪು, ಶಾಂಪು, ವಸ್ತ್ರ, ಸೌಂದರ್ಯವರ್ಧಕಗಳು, ಟಾಲ್ಕಮ್ ಪೌಡರ್, ಹಾಲಿಡೆ ಟ್ರಿಪ್ಸ್, ಪರ್‌ಫ್ಯೂಮ್, ಕಿಚನ್‌ಗೆ ಸಂಬಂಧಿಸಿದಂತೆ ಬಳಸಿಕೊಳ್ಳುತ್ತಲೇ ಮುಖ್ಯವಾಗಿ ಪುರುಷರಿಗೆ ಸಂಬಂಧಿಸಿದ ಜಾಹೀರಾತುಗಳಲ್ಲಿಯೂ ಇವಳ ಹಾಜರಿ ಅನಿವಾರ್ಯ ಎಂಬಂತೆ ಸಂಯೋಜಿಸುವುದು ವಿಪರ್ಯಾಸ. ಕಾರಿನ ಜಾಹಿರಾತುಗಳಲ್ಲಿಯೂ ಸಹ ಹೆಣ್ಣಿನ ದೇಹವನ್ನು ಕಾರಿನ ಜೊತೆ ಯೋಜಿಸಲಾಗುತ್ತದೆ. ಇಂತಹ ಆಯೋಜಕರ ಮನೋಭಾವವನ್ನು ನೋಡಿದರೆ ಅವರ ಮನೋಧೋರಣೆಯ ಹಿಂದಿರುವ ಹುನ್ನಾರಗಳು ಸ್ಪಷ್ಟವಾಗುತ್ತವೆ. ಇಂದು ಇಂಟರ್‌ನೆಟ್ ಅಂದರೆ ಅಂತರ್ಜಾಲ ಮತ್ತು ವಿದ್ಯುನ್ಮಾನ ಯಂತ್ರವೂ ಕೂಡ ಹಲವು ರೀತಿಯಲ್ಲಿ ಹೆಣ್ಣನ್ನು ಮಾರುಕಟ್ಟೆಯ ಮಾರಾಟದ ವಸ್ತುವಾಗಿಯೇ ಪರಿಗಣಿಸುತ್ತಿದೆ. ಇದೂ ಕೂಡ ಹೆಣ್ಣಿನ ಅಸ್ತಿತ್ವಕ್ಕೆ ದೊಡ್ಡ ಪೆಟ್ಟನ್ನು ನೀಡುತ್ತಿದೆ. ಪುರುಷರ ಸೌಂದರ್ಯವರ್ಧಕ ಉತ್ಪನ್ನಗಳಲ್ಲಿಯೂ ಸಹ ಹೆಣ್ಣನ್ನು ಮೋಹಕ ಅಂಶವಾಗಿಯೇ ನೋಡಲಾಗುತ್ತದೆ, ಪುರುಷರು ಬಳಸುವ ಪರ್‌ಫ್ಯೂಮ್, ಒಳಉಡುಪುಗಳ ಜಾಹೀರಾತುಗಳಲ್ಲಿ ಹೆಣ್ಣು ಅವನನ್ನು ನೋಡಿ ಆಕರ್ಷಕವಾಗುವಂತೆ ಬಿಂಬಿಸುವುದು ಯುವಜನತೆಯ ಮನಸ್ಥಿತಿಯ ಮೇಲೆ ಕೆಟ್ಟಪ್ರಭಾವವನ್ನು ಬೀರುತ್ತಿದೆ. ಇಂತಹ ಜಾಹೀರಾತುಗಳನ್ನು ನೋಡಿ ಹಲವು ಪಡ್ಡೆಹುಡುಗರು ದುಬಾರಿ ಹಣತೆತ್ತು ಅಂತಹ ಉತ್ಪನ್ನಗಳನ್ನು ಖರೀದಿಸುತ್ತಾರೆ. ಹೆಣ್ಣಾಗಲಿ, ಗಂಡಾಗಲಿ ಸೌಂದರ್ಯ ಮುಚ್ಚಿಟ್ಟಂತೆ ಇದ್ದರೇನೆ ಆಕರ್ಷಣೆ ಹೆಚ್ಚು. ಹಾಗೆಂದು ದೃಶ್ಯಮಾಧ್ಯಮದಲ್ಲಿ ಪ್ರಸಾರವಾಗುವ ಎಲ್ಲಾ ಜಾಹಿರಾತುಗಳು ಹೆಣ್ಣನ್ನು ಕೆಳದರ್ಜೆಯ ವ್ಯಕ್ತಿಯಾಗಿ ಚಿತ್ರಿಸುತ್ತವೆ ಬಿಂಬಿಸುತ್ತವೆ ಎಂದಲ್ಲ, ಪ್ರಸಾರವಾಗುವ ಹಲವು ಜಾಹೀರಾತುಗಳಲ್ಲಿ ಈ ಬಗೆಯ ಹೆಣ್ಣಿನ ಪ್ರತಿನಿಧೀಕರಣ ಇರುವುದು ಎಲ್ಲರಿಗೂ ಗೋಚರಿಸಿರುವ ಸತ್ಯ.

ಇಂದು ಹಲವಲ್ಲದಿದ್ದರೂ ಕೆಲವು ಕಿರುತೆರೆ-ಹಿರಿತೆರೆಯ ಕಾರ್ಯಕ್ರಮಗಳು ಹೆಣ್ಣಿನಲ್ಲಿ ಸ್ವಾಭಿಮಾನದ ಜೊತೆಗೆ ಆತ್ಮವಿಶ್ವಾಸವನ್ನು ಹುಟ್ಟುಹಾಕುತ್ತಿವೆ. ಅದರಲ್ಲಿ ಮಲೆನಾಡಿನ ಪಾತ್ರ ತುಸು ಹೆಚ್ಚೇ ಇದೆ. ಮಲೆನಾಡು ಎಲ್ಲಾ ಸಂಸ್ಕೃತಿಯ ಮೂಲ. ಹಾಗಾಗಿಯೇ ಪ್ರತೀ ಮನೆಯ ಮನದ ಯೋಚನೆಯ ಹಿಂದೆ ಒಂದು ಸಂಸ್ಕೃತಿ ಉಸಿರಾಡುತ್ತಿರುತ್ತದೆ. ಪ್ರತಿಯೊಂದು ಪ್ರಾದೇಶಿಕತೆಗೂ ಅದರದ್ದೇ ಆದ ಭಿನ್ನತೆಗಳಿರುತ್ತವೆ. ಅದರಂತೆ ಮಲೆನಾಡು ಎಲ್ಲಾ ಸಂಸ್ಕೃತಿಯ ಮೂಲವಾಗಿರುವ ಕಾರಣಕ್ಕೂ ಅದರ ಪ್ರಭಾವ ಇಂದು ದೃಶ್ಯಮಾಧ್ಯಮದಲ್ಲಿ ಹೆಚ್ಚಾಗಿದೆ. ಆದಕಾರಣಕ್ಕೂ ಕಿರುತೆರೆ-ಹಿರಿತೆರೆಯನ್ನು ಮಲೆನಾಡಿನ ಆಚಾರ-ವಿಚಾರ-ಸಂಪ್ರದಾಯ-ವೈಶಿಷ್ಟ್ಯತೆಗಳು ಆವರಿಸಿಕೊಂಡಿವೆ. ಪ್ರಾದೇಶಿಕತೆಯ ಭಿನ್ನತೆಯ ಕಾರಣಕ್ಕೂ ಬಯಲುಸೀಮೆ, ಕರಾವಳಿ ಭಾಗಗಳಿಗಿಂತಲೂ ಮಲೆನಾಡು ಹೆಚ್ಚು ಆಪ್ಯಾಯಮಾನವಾಗಿದೆ. ಅದಕ್ಕೆ ಕಾರಣ ಅಲ್ಲಿನ ಹಲವು ವೈಶಿಷ್ಟ್ಯತೆಗಳಿರಬಹುದು. ಅದರಲ್ಲಿ ಭಾಷೆಯು ಕೂಡ ಪ್ರಮುಖಪಾತ್ರ ವಹಿಸುತ್ತದೆ. ಇಂದು ಹಲವು ಧಾರವಾಹಿಗಳು ಮಲೆನಾಡಿನ ಜನರಜೀವನವನ್ನು ಕೇಂದ್ರೀಕರಿಸಿಕೊಂಡಂತೆ ಪ್ರಸಾರವಾಗುತ್ತಿವೆ. ಹಾಗೆಯೇ ಮಲೆನಾಡಿನ ಹೆಣ್ಣುಮಕ್ಕಳು ಅಧಿಕಸಂಖ್ಯೆಯಲ್ಲಿ ದೃಶ್ಯಮಾಧ್ಯಮದ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಿದ್ದಾರೆ. ಹಲವರು ಕಿರುತೆರೆ ಮತ್ತು ಹಿರಿತೆರೆಯಲ್ಲಿ ಕಾರ್ಯಕ್ರಮಗಳ ನಿರೂಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ನಾನು ನೋಡಿದ ಹಾಗೆ ಮಲೆನಾಡಿನ ಹೆಣ್ಣುಮಕ್ಕಳಿಗೆ ಏನಾದರೂ ಸಾಧಿಸಬೇಕೆಂಬ ಛಲದ ಜೊತೆಗೆ ಆತ್ಮವಿಶ್ವಾಸವೂ ಅಗಾಧಪ್ರಮಾಣದಲ್ಲೇ ಇರುತ್ತದೆ. ಆದ್ದರಿಂದಲೇ ಇಂದು ಅನೇಕ ರಿಯಾಲಿಟಿಶೋಗಳಲ್ಲಿ ಅವರ ಪಾಲ್ಗೊಳ್ಳುವಿಕೆ ಎದ್ದುಕಾಣುತ್ತಿದೆ. ಮಲೆನಾಡೆಂದರೆ ಕರ್ನಾಟಕದ ಕಾಶ್ಮೀರ ಎಂದು ಹೇಳಿದ ರಾಷ್ಟ್ರಕವಿ ಕುವೆಂಪು ಅವರ ಎರಡು ಕಾದಂಬರಿಗಳು ಮಲೆಯನಾಡಿನ ಜನ-

ಜೀವನವನ್ನೇ ಕೇಂದ್ರೀಕರಿಸಿಕೊಂಡಿರುವ ಕಾರಣಕ್ಕೂ ಸಿನಿಮಾಗಳಾಗಿ, ಧಾರಾವಾಹಿಗಳಾಗಿ ಕಿರುತೆರೆ ಮತ್ತು ಹಿರಿತೆರೆ ಎರಡರಲ್ಲೂ ಸೈ ಎನಿಸಿಕೊಂಡಿವೆ. 'ಕಾನೂರು ಹೆಗ್ಗಡಿತಿ' ಸಿನಿಮಾವಾಗಿ ಪ್ರಯೋಗಗೊಂಡರೆ 'ಮಲೆಗಳಲ್ಲಿ ಮದುಮಗಳು' ಕಿರುತೆರೆಯಲ್ಲಿ ಧಾರಾವಾಹಿಯಾಗಿ ಮತ್ತು ನಾಟಕವಾಗಿ ಕೂಡ ಪ್ರದರ್ಶನಗೊಂಡಿದೆ.

ಮಲೆನಾಡಿನ ಹೆಣ್ಣಿನ ಬದುಕು-ಬವಣೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವ ಈ ಎರಡು ಕಾದಂಬರಿಗಳು ಹೆಣ್ಣಿನ ಒಳತೋಟಿಯ ಸೂಕ್ಷ್ಮ ಅಧ್ಯಯನವಾಗಿದೆ. ಆದ್ದರಿಂದಲೇ ಹಲವು ಕಾದಂಬರಿಕಾರರು ನೂರು ಕಾದಂಬರಿಗಳಿಗಾಗುವಷ್ಟು ಹೊಂದಿಸಬಹುದಾಗಿದ್ದ ಕಥಾವಿಸ್ತಾರವನ್ನು ಕುವೆಂಪು ಅಂತಹ ಮಹಾಕವಿ ತಮ್ಮ ಅತ್ಯಮೂಲ್ಯ ಎರಡು ಕೃತಿಗಳ ವಸ್ತುವಾಗಿಸಿದ್ದು ಮೆಚ್ಚಲೇಬೇಕಾದ ಸಂಗತಿ. 'ಕಾನೂರು ಹೆಗ್ಗಡಿತಿ' ಚಲನಚಿತ್ರದಲ್ಲಿ ಇಡೀ ಮಲೆನಾಡಿನ ದೃಶ್ಯವೈಭವದೊಂದಿಗೆ ಪ್ರಕೃತಿ-ಪುರುಷನ ಜೊತೆಗೆ ಹೆಣ್ಣಿನ ನಿರಂತರ ಹೋರಾಟವನ್ನು ಕಾಣಬಹುದಾಗಿದೆ. 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಈ ಎರಡು ಮಹಾಕಾದಂಬರಿಗಳು ನಿರಂತರ ಕ್ರಿಯಾಶೀಲ, ಚಲನಶೀಲ ಮತ್ತು ಸಂವೇದನಾಶೀಲ ಗುಣವನ್ನು ಹೊಂದಿರುವಂತಹ ಕಾರಣಕ್ಕೂ ಸ್ತ್ರೀಸಂಬಂಧಿತ ನೆಲೆಗಳನ್ನು ಸೂಚಿಸುವುದನ್ನು ಗಮನಿಸಬಹುದಾಗಿದೆ. "ಹೆಣ್ಣಿನ ಪರಂಪರಾಗತ ಕೌಟುಂಬಿಕ ನೆಲೆಯನ್ನು 'ಮದುಮಗಳು' ಎಂಬುದು ಸೂಚಿಸುವಂತಿದ್ದರೆ 'ಹೆಗ್ಗಡಿತಿ' ಎಂಬುದು ಈ ರೂಢಿಗತ ಅಧೀನತೆಯನ್ನು ಉಲ್ಲಂಘಿಸಿದ ಅಧಿಕಾರದ ನೆಲೆಯನ್ನು ಧ್ವನಿಸುವಂತಿದೆ. ಹೆಣ್ಣು ಅಧೀನತೆಯಿಂದ ಅಧಿಕಾರದ ನೆಲೆಯತ್ತ ಸಾಗುವ ಸಾಂಸ್ಕೃತಿಕ ಪ್ರಕ್ರಿಯೆಯನ್ನು, ಅಧೀನತೆಯಿಂದ ಸಮಾನತೆಯತ್ತ ಬೆಳೆಯುವ ಪ್ರಕ್ರಿಯೆಯನ್ನೂ ಈ ಎರಡು ಕಾದಂಬರಿಗಳಲ್ಲಿ ಕಾಣಬಹುದು"[2].

ಈ ಎರಡು ನೆಲೆಯೂ ಸಹ ಹೆಣ್ಣಿನ ಮನಸ್ಸಿನಾಳದ ಸ್ವಾತಂತ್ರ್ಯವನ್ನೇ ಕುರಿತು ಪ್ರಸ್ತಾಪಿಸಿದಂತಿದೆ. ಆದ್ದರಿಂದಲೇ ಅಂತಹ ಸ್ವಾತಂತ್ರ್ಯವನ್ನು ಬಯಸದ ಪುರುಷಸಮಾಜ ಹೆಣ್ಣನ್ನು ನೋಡುವ ರೀತಿಯಲ್ಲಿ ಯಾವ ಬದಲಾವಣೆಯನ್ನು ಮಾಡಿದ ಹಾಗೆ ಕಾಣಿಸುವುದಿಲ್ಲ. ಈ ಮಾತನ್ನು ಇಲ್ಲಿ ಪ್ರಸ್ತಾಪಿಸಲು ಕಾರಣವೆಂದರೆ ಒಂದು ವೇಳೆ ಹೆಣ್ಣು-ಗಂಡು ಸಮ ಎಂದು ಭಾವಿಸಿದ್ದರೆ ತುಂಬ ಸ್ಫುಟವೂ ಬಲಿಷ್ಠವೂ ಆದ ಸುಬ್ಬಮ್ಮನ ಸಾವು ಖಂಡಿತ ನಡೆಯುತ್ತಿರಲಿಲ್ಲ. ಗಂಡಸು ಎಂದು ಚಂದ್ರಯ್ಯಗೌಡನಿಗೆ ಇರುವ ರಿಯಾಯತಿ ಹೆಣ್ಣಾಗಿರುವ ಸುಬ್ಬಮ್ಮನಿಗೆ ಇಲ್ಲ. ಆದ್ದರಿಂದಲೇ ಲೈಂಗಿಕತೆಯಲ್ಲಿ ಸ್ವೇಚ್ಛಾಚಾರವಾಗಿ ಬದುಕಿದ ಚಂದ್ರಯ್ಯಗೌಡನಿಗೆ ಇಲ್ಲದ ಕಟ್ಟುಪಾಡುಗಳು ಚಂದ್ರಯ್ಯ ಸತ್ತ ನಂತರ ಸುಪ್ತಮನಸ್ಸಿನ ಬಯಕೆಗಳನ್ನು ಹತ್ತಿಕ್ಕಲಾರದೆ ಅತಿ ಅಲ್ಲದಿದ್ದರೂ ಮಿತಿಯಾಗಿಯೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಬಯಸಿ ಮತ್ತೊಬ್ಬ ಪುರುಷನ ಒತ್ತಾಯಕ್ಕೆ ಮಣಿದ ಸುಬ್ಬಮ್ಮ ತಾನು ಗರ್ಭಿಣಿ ಎಂದು ತಿಳಿದಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅದೇ ಸೀತೆ ತಾನು ಒಲ್ಲದ ಗಂಡನಾದ ರಾಮಯ್ಯನೊಂದಿಗೆ ತನ್ನ ಮದುವೆನೆರವೇರಿದ್ದರೂ ಕೂಡ ಹಲವು ನೆಪಗಳನ್ನು ಹೇಳಿ ಅವನಿಂದ ಮಾನಸಿಕವಾಗಿ, ದೈಹಿಕವಾಗಿ ದೂರವೇ ಉಳಿದು ಮುಂದೆ ಆತ ಸತ್ತ ನಂತರ ಹೂವಯ್ಯನ ಜೊತೆಗೆ ಆದರ್ಶ ತಪಸ್ವಿನಿಯಂತೆ ಕಾನೂರಿಗೆ ಬಂದು ನೆಲೆಸುತ್ತಾಳೆ. ಪುರುಷ ಸಮಾಜದ ಕ್ರೌರ್ಯಕ್ಕೆ ಬಲಿಯಾಗಿಯೂ ತನ್ನತನವನ್ನು ಉಳಿಸಿಕೊಂಡು ಬದುಕಿದ ಸೀತೆ ಒಂದುಕಡೆಯಾದರೆ ತನ್ನತನವನ್ನು ಕಳೆದುಕೊಂಡು ಹೆಣವಾದ ಸುಬ್ಬಮ್ಮ ಮತ್ತೊಂದುಕಡೆ. ಸುಬ್ಬಮ್ಮನಂತಹ ಹೆಣ್ಣುಗಳ ಸಾವು ಆಧುನಿಕಯುಗದಲ್ಲಿ ಸಂಖ್ಯೆಗೆ ನಿಲುಕದಂತೆ ನಡೆಯುತ್ತಲೇ ಇದೆ. ಎಚ್ಚೆತ್ತುಕ್ಕೊಳ್ಳಬೇಕಾದ ಹೆಣ್ಣು ಮತ್ತದೇ ಪುರುಷ ಒಡ್ಡುವ ಆಮಿಷಗಳಿಗೆ ಬಲಿಪಶುವಾಗಿ ಅಸ್ತಿತ್ವ ಕಳೆದುಕೊಳ್ಳುತ್ತಿದ್ದಾಳೆ. ಇದು ಎಷ್ಟರಮಟ್ಟಿಗೆ ಸರಿ?. "ಇಷ್ಟೆಲ್ಲದರ ನಡುವೆಯೂ ರಿಮೇಕ್ ಅಬ್ಬರ, ಅಶ್ಲೀಲ, ಅಸಂಬದ್ಧ ತರಲೆ ಅಭಿರುಚಿಯ ಸಿನಿಮಾಗಳ ನಡುವೆ ಒಂದು ಹೊಸ ಆಹ್ಲಾದದ, ಮಲೆನಾಡು ಬದುಕಿನ ತಂಪು-ಇಂಪುಗಳನ್ನು ಕನ್ನಡ ಚಲನಚಿತ್ರರಂಗಕ್ಕೆ ತುಂಬಿದ ಕಾನೂರು ಹೆಗ್ಗಡಿತಿ ಸದ್ಯಕ್ಕೆ ಕನ್ನಡ ಚಿತ್ರಗಳೆಲ್ಲದರ 'ಹೆಗ್ಗಡಿತಿ'ಯೂ ಹೌದು"[3].

'ಮಲೆಗಳಲ್ಲಿ ಮದುಮಗಳು' ಕೃತಿಯು ಪ್ರತಿಪಾದಿಸುವುದೇನೆಂದರೆ ಪಲಾಯನವು ಯಾವಾಗಲೂ ಒಂದು ಪಾರಾಗುವ ಯತ್ನವಾಗಿಯಷ್ಟೇ ಉಳಿದಿಲ್ಲ ಬದಲಾಗಿ ಅದು ಒಂದು ಪ್ರತಿಭಟನೆಯ ರೀತಿಯೂ ಆಗುವುದನ್ನು ತಿಮ್ಮಿ ಮತ್ತು ಚಿನ್ನಮ್ಮರ ಪಾತ್ರಗಳ ಮೂಲಕ ಪ್ರತೀಕಗಳಾಗಿ ಗಮನಿಸಬಹುದು. "ಏಕೆಂದರೆ ಈ ಪಲಾಯನ ಇವರ ಬದುಕುಗಳಲ್ಲಿ ಅದುವರೆಗಿದ್ದ ಕೌಟುಂಬಿಕ ಭದ್ರತೆಯಿಂದ ಪ್ರತ್ಯೇಕಗೊಳ್ಳುವ ಸ್ಥಿತಿಯನ್ನು ತಂದೊಡ್ಡುತ್ತದೆ. ಮುಂದಿನ ಬದುಕಿನ ಬಗ್ಗೆ ಭರವಸೆಗಿಂತ ಗಂಡಾಂತರಗಳ ಸೂಚನೆಗಳೇ ಅಲ್ಲಿ ದಟ್ಟವಾಗಿವೆ. ಓಡಿಹೋಗುವ ಕ್ರಿಯೆ ತನಗೂ ಮುಕುಂದಯ್ಯನಿಗೂ ಸಮಾನವೇ ಆಗಿದ್ದರೂ ಅದರ ಪರಿಣಾಮ ಗಂಡಾದ ಅವನಿಗೂ ಹೆಣ್ಣಾದ ತನಗೂ ಬೇರೆಬೇರೆಯೇ ಎಂಬ ನೈತಿಕ ತಳಮಳ ಚಿನ್ನಮ್ಮನಿಗೆ ಎದುರಾದರೆ ಸಾಮಾಜಿಕವಾಗಿ ಕೆಳಗಿನವಳಾದ ತಿಮ್ಮಿಗೆ ತಂದೆಯ, ಅವನ ಮೇಲೆ ಹಿಡಿತವಿರುವ ಒಡೆಯರ ಗೂಂಡಾಗಿರಿಯ ದಬ್ಬಾಳಿಕೆಯ ಭೀತಿಯ ಹಾಗೆ, ಗುತ್ತಿಯೊಂದಿಗೆ ಊರು **ಬಿಟ್ಟು** ಬೇರೊಂದು ಕಡೆ ಆಶ್ರಯ ಪಡೆದರೂ ಚಂದ್ರಯ್ಯಗೌಡನಂಥ ಒಡೆಯರ ಭೀತಿ ತಪ್ಪುವುದಿಲ್ಲ..... ಸೀತೆ ರೊಮ್ಯಾಂಟಿಕ್ ನೆಲೆಯ ಆದರ್ಶದ ಸಮಾನತೆಗೆ ಪ್ರತಿನಿಧಿಯಾದರೆ ತಿಮ್ಮಿ, ಚೆನ್ನಮ್ಮ ವಾಸ್ತವ ನೆಲೆಯಲ್ಲಿ ಸಾಮಾನ್ಯರ ಬದುಕಿನಲ್ಲಿ ಈ ಸಮಾನತೆಯ ಅಳವಡಿಕೆಯ ಸಾಧ್ಯತೆಗೆ ಪ್ರತೀಕಗಳಾಗುತ್ತಾರೆ"[4]. ಹೀಗೆ ಮಲೆನಾಡಿನಲ್ಲಿನ ಹೆಣ್ಣಿನ ಮೇಲಾಗುತ್ತಿರುವ ದೌರ್ಜನ್ಯವನ್ನು ಮತ್ತು ಅವಳು

ಅದನ್ನು ಮೀರಿದಂತೆ ಜೀವಂತಿಕೆಯಿಂದ ಬದುಕನ್ನು ಚಂದಗಾಣಿಸಿಕೊಳ್ಳುವುದರತ್ತ ತುಡಿಯುವುದನ್ನು ಈ ಕಾದಂಬರಿಗಳು, ಚಲನಚಿತ್ರ ಮತ್ತು ನಾಟಕಗಳ ಮೂಲಕ ಕಾಣಿಸಿರುವುದನ್ನು ಗ್ರಹಿಸಬಹುದಾಗಿದೆ. ಇವುಗಳಲ್ಲದೆ ಕಿರುತೆರೆಯ ಧಾರಾವಾಹಿಗಳಲ್ಲೂ ಸಹ ಮಲೆನಾಡಿನ ಹೆಣ್ಣಿನ ಜೀವನಚಿತ್ರಗಳನ್ನು ಕಟ್ಟಿಕೊಡುವಂತಹ ಹಲವು ಧಾರಾವಾಹಿಗಳು ನಮ್ಮೊಂದಿಗಿವೆ ಅದರಲ್ಲಿ ಮುಖ್ಯವಾಗಿ ಟಿ.ಎನ್. ಸೀತಾರಾಮು ನಿರ್ದೇಶನದ 'ಮುಕ್ತ' ಮತ್ತು ವೈಶಾಲಿ ಕಾಸರವಳ್ಳಿ ನಿರ್ದೇಶನದ 'ಮೂಡಲ ಮನೆ' ಧಾರಾವಾಹಿಗಳು ಮಲೆನಾಡಿನ ಹೆಣ್ಣಿನ ಮನಸ್ಥಿತಿಯ ಸಂಪೂರ್ಣ ಅವಲೋಕನದಂತೆ ಕಂಡುಬರುತ್ತವೆ.

ಹೀಗೆ ಮಲೆನಾಡಿನ ಹೆಣ್ಮಗಳ ಗತಿಬಿಂಬವಾಗಿ ಕೆಲಸಮಾಡುವ ದೃಶ್ಯಮಾಧ್ಯಮ ಒಂದುಕಡೆಯಾದರೆ ಮತ್ತೊಂದು ಕಡೆ ಎಲ್ಲದರಲ್ಲೂ ಮುಕ್ತ ಮತ್ತು ಸಮಾನ ಎಂದು ಇಂದಿನ ಸಮಾಜದಲ್ಲಿ ಪ್ರತಿಬಿಂಬಿಸಿಕೊಳ್ಳಲು ಹೊರಟಿರುವ ಆಧುನಿಕ ಸಮಾಜದ ಹೆಣ್ಣನ್ನು ವಸ್ತುವಂತೆ ನಡೆಸಿಕೊಳ್ಳುತ್ತಿರುವುದು ಮತ್ತೊಂದು ರೀತಿ. ಇತ್ತೀಚಿನ ಆಧುನಿಕ ಮಾರುಕಟ್ಟೆ ಅವಳನ್ನು ವ್ಯಕ್ತಿಯಾಗಿ ನೋಡದೆ ಬರಿಯ ಭೋಗದ, ಆಕರ್ಷಣೆಯ ವಸ್ತುವಾಗಿ ನೋಡುತ್ತಿರುವುದು ಒಂದು ದಿನ ಮಹಿಳೆಯ ಅಸ್ತಿತ್ವವೇ ಇಲ್ಲದಾಗುವ ಸಂದಿಗ್ಧತೆಯನ್ನು ಸೃಷ್ಟಿಸಬಹುದು. ಹೆಣ್ಣಿಲ್ಲದ ಸಮಾಜವನ್ನು ಊಹಿಸಿಕೊಳ್ಳಲು ಸಾಧ್ಯವೇ, ಖಂಡಿತಾ ಸಾಧ್ಯವಿಲ್ಲ. ಹಾಗಿರುವಾಗ ಅವಳ ಅಸ್ತಿತ್ವಕ್ಕೆ ಕೊಡಲಿಪೆಟ್ಟು ನೀಡುತ್ತಿರುವುದು ಎಷ್ಟುಸರಿ?. ಇಂದು ಫ್ಯಾಶನ್ ಶೋಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಮಹಿಳೆಯರು ಕನಿಷ್ಠ ಬಟ್ಟೆಗಳನ್ನು ತೊಟ್ಟು ಹಾಡಿ ನರ್ತಿಸುತ್ತಾ ಮೈಮರೆಯುವುದನ್ನು ನೋಡಿದರೆ ಅವಳನ್ನು ಬಳಸಿಕೊಳ್ಳುತ್ತಿರುವ ಪ್ರಾಯೋಜಕರ-ಆಯೋಜಕರ ಉದ್ದೇಶ ಏನಾಗಿರಬಹುದು ಎಂಬುದನ್ನು ಯಾರೂ ಊಹಿಸಬಹುದು. ಹೆಣ್ಣು ಒಂದು ವಸ್ತುವಾಗಿ ಲೈಂಗಿಕ ಆಸಕ್ತಿಯನ್ನು ಕೆರಳಿಸುವ ಉದ್ದೇಶವಾಗಿ ಮಾತ್ರ ಪುರುಷರ ಕಣ್ಣಿಂದ ದಾಖಲಾಗುತ್ತಿದ್ದಾಳೆ.

ಇದೆಲ್ಲದರ ಆಚೆಗೂ 'ಹೆಣ್ಣು' ಎನ್ನುವುದಕ್ಕೆ ತಾಯ್ತನ ಜೀವಂತಿಕೆ ಎನ್ನುವ ವಿಶೇಷ ಅರ್ಥವೂ ಇದೆ ಅವಳು ಸಂಸ್ಕೃತಿಯನ್ನು ಕಟ್ಟಬಲ್ಲವಳು ಹಾಗಾಗಿ ಅವಳನ್ನು ಹೃದಯದ ಮೂಲವಾಗಿಯೇ ನೋಡಬೇಕಾಗಿದೆ. ಪ್ರಬಲ ಸಮೂಹಮಾಧ್ಯಮವಾಗಿರುವ ದೃಶ್ಯಮಾಧ್ಯಮ ಸಹಜವಾಗಿಯೇ ಜನಪ್ರಿಯವೂ ಆಗಿದೆ. ಹಾಗಾಗಿ ಇದು ನೇರವಾಗಿ ಜನರನ್ನು ತಲುಪಿ ಗಂಭೀರ ಪ್ರಭಾವಬೀರುವ ಸಾಧ್ಯತೆಯಿರುವುದರಿಂದ ಈ ಮಾಧ್ಯಮಗಳು ಹೆಣ್ಣನ್ನು ಗೌರವಯುತವಾಗಿ ಚಿತ್ರಿಸುತ್ತಾ ತನ್ಮೂಲಕ ಆರೋಗ್ಯಕರವಾದ ಸಮಾಜವನ್ನು ರೂಪಿಸುವಲ್ಲಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕಾದ ತುರ್ತಿದೆ. ವ್ಯವಹಾರ ಎನ್ನುವುದು ವಸ್ತುವಾಗಬೇಕೇ ವಿನಃ ಭಾವಗಳಲ್ಲ..... ಪ್ರಾಮಾಣಿಕ-ಶುದ್ಧ ಜೀವನ ಕಳಕಳಿ ಇರುವ ಯಾವ ಸ್ಪಂದನಗಳು ವ್ಯವಹಾರಕ್ಕೆ ಆಸ್ಪದಕೊಡುವುದಿಲ್ಲ. ಹಾಗೆ ಆಸ್ಪದ ನೀಡಿದರೆ ಅದರಲ್ಲಿ ಸಾಚಾತನದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗಾಗಿ ಹೆಣ್ಣು ನಿಜದ ನೆಲೆಯ ಜೀವಂತಿಕೆಯ ಅರ್ಥ. ಅವಳನ್ನು ಗೌರವದಿಂದ, ಆದರದಿಂದ ಕಾಣುವುದು, ಕಾಣುವಂತೆ ಅವಳನ್ನು ಪ್ರತಿಬಿಂಬಿಸುವುದು ಕೂಡ ಎಲ್ಲರ ಮನೆ-ಮನದ ಉಸಿರಾಟದ ಮಿಡಿತವಾಗಿರುವ ದೃಶ್ಯಮಾಧ್ಯಮದ ಅತಿ ದೊಡ್ಡ ಜವಾಬ್ದಾರಿ. ಇದು ಎಲ್ಲಾ ಪ್ರಾದೇಶಿಕ ಪ್ರಜ್ಞೆ ಮತ್ತು ಪರಿಸರವನ್ನು ಒಳಗೊಂಡಂತೆ ರೂಪುಗೊಳ್ಳುತ್ತದೆ. ಇದರಿಂದ ಮಲೆನಾಡು ಹೊರತಾಗಿಲ್ಲ. ತನ್ನ ಅನನ್ಯತೆಯ ನಡುವೆ ಇಂತಹ ಸಂಸ್ಕೃತಿ ಉಳಿವಿನ ಚಲನೆಯೇ ದೇಶ-ಕಾಲಗಳಾಚೆಗೆ ನವನವೋನ್ಮೇಷಶಾಲಿನಿಯಾಗಿ ಉಳಿಯುವುದು ಎಂಬುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಪ್ರೀತಿ ಮತ್ತು ಸ್ಫೂರ್ತಿಯ ಒಡನಾಡಿಯಾದ ಹೆಣ್ಣನ್ನು ಗೌರವದಿಂದ ನೋಡುವುದು ಸದ್ಯದ ತುರ್ತು.

**ಅಡಿ ಟಿಪ್ಪಣಿ:**

1. ನಾಯಕಿ ನಟಿಯರು, ಕನ್ನಡ ಸಿನಿಮಾ ಲೋಕ, ಡಾ. ಜಿ.ಪ್ರಶಾಂತನಾಯಕ, ರಚನಾಪ್ರಕಾಶನ, ಮೈಸೂರು, 2009, ಪುಟ-169.
2. ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀತ್ವದ ಪ್ರತೀಕಗಳು, ಬಿ.ಎನ್.ಸುಮಿತ್ರಾಬಾಯಿ, ಕುವೆಂಪು ಕೃತಿ ವಿಮರ್ಶೆ, ಸಂ-ಅರವಿಂದ ಮಾಲಗತ್ತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 2006, ಪುಟ-600.
3. ಕುವೆಂಪು ಅವರ ಕಾನೂರು ಹೆಗ್ಗಡಿತಿ; ಕಾರ್ನಾಡರ ಕ್ಯಾಮರಾ ಕಣ್ಣಿನಲ್ಲಿ, ಅನ್ನಿಸುವ ಅರ್ಥ, ಡಾ.ಜಿ. ಪ್ರಶಾಂತ ನಾಯಕ, ಶ್ರೀಕ್ಷೇತ್ರ ಪ್ರಕಾಶನ, ಮೈಸೂರು, 2005, ಪುಟ-122.
4. ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀತ್ವದ ಪ್ರತೀಕಗಳು, ಬಿ.ಎನ್.ಸುಮಿತ್ರಾಬಾಯಿ, ಕುವೆಂಪು ಕೃತಿ ವಿಮರ್ಶೆ, ಸಂ-ಅರವಿಂದ ಮಾಲಗತ್ತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 2006, ಪುಟ-608.

**ಪರಾಮರ್ಶನ ಗ್ರಂಥಗಳು:**


1. ಸಿನೆಮಾ ಸರ್ಕಾರ ಸಮಾಜ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ–ಬೆಂಗಳೂರು, ಎರಡನೇ ಮುದ್ರಣ 2001.
2. ಜಾಹಿರಾತುಗಳಲ್ಲಿ ಮಹಿಳಾ ಪ್ರತೀನಿಧೀಕರಣ, ಡಾ.ಕಲಾವತಿ. ಬಿ.ಜಿ. ಪ್ರಗತಿಗ್ರಾಫಿಕ್ಸ್, ಬೆಂಗಳೂರು, 2010.
3. ಸಾಹಿತ್ಯ ಮತ್ತು ಸಿನಿಮಾ, ಬರಗೂರು ರಾಮಚಂದ್ರಪ್ಪ,
4. ಕನ್ನಡ ಚಲನಚಿತ್ರ ರಂಗ, ಪಿ.ಜಿ.ಶ್ರೀನಿವಾಸ ಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1995.
5. ಚಿಂತನ ಚಿತ್ತ, ಡಾ. ಜಿ. ಪ್ರಶಾಂತ ನಾಯಕ, ಪ್ರಸಾದ್ ಏಜೆನ್ಸೀಸ್, ಮೈಸೂರು, 2008.
6. ಕನ್ನಡ ಸಾಹಿತ್ಯ ಮತ್ತು ಸಿನಿಮಾ, ಬರಗೂರು ರಾಮಚಂದ್ರಪ್ಪ, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು, 1998.
7. ಕನ್ನಡ ಸಿನಿಮಾ ಲೋಕ, ಡಾ. ಜಿ. ಪ್ರಶಾಂತನಾಯಕ, ರಚನಾಪ್ರಕಾಶನ, ಮೈಸೂರು, 2009.

# ಮಲೆನಾಡ ಹೆಣ್ಣಿಗೆ ಸೌಂದರ್ಯ ವೃದ್ಧಿಸುವ ಉಡುಗೆ ತೊಡುಗೆಗಳು

**ವಿಜಯಕುಮಾರ.ಹೆಚ್.**

ನೇಸರನುದಿಯಿಸುವ ಕ್ಷಣದಿಂದ ಪರ್ಯಾವಸನಗೊಳ್ಳುವವರೆಗೆ ಪಶ್ಚಿಮಘಟ್ಟಗಳ ಮಲೆನಾಡಿನ ಭಾಗದಲ್ಲಿ ಒಂದಲ್ಲಾ ಒಂದು ಬದಲಾವಣೆಗಳು ಸಹಜವಾಗಿ ಸಂಭವಿಸುತ್ತಲೇ ಇರುತ್ತವೆ. ಸೌಂದರ್ಯದ ತವರೂರು ಮಲೆನಾಡು. ಪ್ರಕೃತಿ ಸೊಬಗಿನ ನೆಲೆವೀಡು, ನಿಸರ್ಗ ದೇವತೆಯು ರಾರಾಜಿಸುವ ತಾಣವಿದು. ಇಂತಹ ಪ್ರಕೃತಿಯ ಸೊಬಗಿನ ಮಧ್ಯೆ ಮಿಣಕು ಹುಳುಗಳಂತೆ ಮನಸೌಂದರ್ಯದ ಜೊತೆಗೆ ದೇಹಸೌಂದರ್ಯಕ್ಕೆ ಹೆಚ್ಚು ಹೆಚ್ಚು ಐಡೆಂಟಿಟಿಯನ್ನು ತಂದುಕೊಡುವ ಮಲೆನಾಡಿನ ಉಡುಗೆ-ತೊಡುಗೆಗಳು ಬಹು ವಿಭಿನ್ನ ವಿಶಿಷ್ಟ ಹಾಗೂ ಅನ್ವಯಿದಾಯಿಕವೆಂದು ಪರಿಗಣಿಸಿಬಹುದು.

ಮಲೆನಾಡಿನ ಹೆಣ್ಣುಮಕ್ಕಳ ಉಡುಗೆ-ತೊಡುಗೆಗಳು ವಯಸ್ಸಿಗನುಗುಣವಾಗಿ ವ್ಯತ್ಯಾಸ ಹೊಂದುತ್ತವೆ. ಬಾಲ್ಯದಿಂದ ಮುಪ್ಪಿನವರೆಗೆ ವ್ಯಕ್ತಿಯು ಅನುಕ್ರಮವಾಗಿ ಧರಿಸುವ ಉಡುಪಿನಲ್ಲಿ ವೈವಿಧ್ಯತೆ ಇರುತ್ತದೆ. ಉಡುಗೆ ತೊಡುಗೆಗಳು ಸಾಮಾಜಿಕ ಅಂತಸ್ತನ್ನು ಸೂಚಿಸುವ ಪರಿಕರಗಳೂ ಹೌದು. ಮಲೆನಾಡಿನ ಹೆಣ್ಣುಮಕ್ಕಳು ಹಿಂದೆ ಮನೆಯೊಳಗೂ, ಹೊರಗೂ ಕೆಲಸ ಮಾಡುತ್ತಿದ್ದಾಗ ಮೈಯನ್ನೆಲ್ಲ ಮುಚ್ಚಿಕೊಳ್ಳುವಷ್ಟು ಬಟ್ಟೆ ಕೂಡ ದೊರಕುತ್ತಿರಲಿಲ್ಲ. ಸೊಂಟಕ್ಕೆ ಸುತ್ತಿಕೊಂಡು ಅರಿವೆಯ ತುಂಡಿನ ಒಂದು ಸೆರಗನ್ನೇ ಎದೆಯ ಮೇಲೆ ಹಾಕಿಕೊಂಡಿರುತ್ತಿದ್ದರಂತೆ, ಮುದುಕಿಯರಂತೂ ಎದೆಯನ್ನು ಮರೆಮಾಡುವ ಗೋಜಿಗೇ ಹೋಗುತ್ತಿರಲಿಲ್ಲವೆನ್ನುತ್ತಾರೆ.

ಜಡ್ಡು ಅಥವಾ ಕಾಗಿನ ಸೀರೆ ಎಂದು ಪ್ರಸಿದ್ಧವಾಗಿದ್ದ ಕೈಮಗ್ಗದ ಹದಿನೆಂಟು ಮೊಳದುದ್ದದ ಸೀರೆಯನ್ನು **'ಗೊಬ್ಬೆ'** ಹಾಕಿ ಉಡುವುದು ಸಾಮಾನ್ಯವಾಗಿತ್ತು. ಸೀರೆಯ ಹೆಚ್ಚಿನ ಭಾಗವನ್ನು ಸೊಂಟಕ್ಕೆ ಸುತ್ತಿ ಗೊಬ್ಬೆ ಸೆರಗು ಕಟ್ಟಿಕೊಳ್ಳುತ್ತಿದ್ದರು. ಮೇಲ್ ಸೆರಗು ಹಾಕಿ ಉಡುತ್ತಿದ್ದವರ ಬಗ್ಗೆ ಹಿಂದೆ ಒಳ್ಳೆಯ ಅಭಿಪ್ರಾಯವಿರಲಿಲ್ಲ. ವೇಶ್ಯೆಯರು ಮಾತ್ರ ಮೇಲ್ ಸೆರಗು ಹಾಕಿ ಸೀರೆ ಉಡುವುದು ಎಂಬ ಭಾವನೆಯಿತ್ತು. ಹೆಂಗಸರಾರೂ ಹಿಂದೆ ಕುಪ್ಪಸ ಅಥವಾ ರವಿಕೆಗಳನ್ನು, ಒಳಲಂಗವನನ್ನು ಧರಿಸುತ್ತಿರಲಿಲ್ಲ. ಗೊಬ್ಬೆ ಮೇಲೆ ಬೆನ್ನು ಮುಚ್ಚುವಂತೆ **'ವಲ್ಲಿ'** ಕಟ್ಟಿಕೊಳ್ಳುತ್ತಿದ್ದರು. ಅಗಲನೆಯ ಅಂಚಿರುವ ವಸ್ತ್ರಕ್ಕೆ 'ವಲ್ಲಿ' ಎಂದು ಹೆಸರು. ಇದನ್ನು ಕೊರಳಿಗೆ ಕಟ್ಟಿಕೊಳ್ಳುತ್ತಾರೆ. ಅದು ಬೆನ್ನಿನ ಮೇಲೆ ಸೊಂಟದವರೆಗೂ ಹರಡಿಕೊಂಡಿರುತ್ತದೆ. ಸೊಂಟಕ್ಕೆ ಸೀರೆ ಸುತ್ತಿಕೊಳ್ಳುವುದರ ಜೊತೆಗೆ ಕಾಡಿನಲ್ಲಿ ಸೌದೆ ಸಂಗ್ರಹಿಸುವಾಗ ಪ್ರಾಣಾಪಾಯಕ್ಕೆ ಸಿಲುಕಿದಾಗ ಸೀರೆ ಬಿಚ್ಚಿಹೋಗಬಾರದೆಂದು ಸೊಂಟಕ್ಕೆ ಬೆಳ್ಳಿ ಪಟ್ಟಿ ಧರಿಸುತ್ತಿದ್ದರು.

ಮನೆಗೆಲಸ ಮಾಡುತ್ತಿದ್ದಾಗ ಗೊಬ್ಬೆಯ ಸೆರಗು ನೇತು ಬಿದ್ದಿರುತ್ತದೆ. ಮನೆಯಲ್ಲಿರುವಾಗ ವಲ್ಲಿಯನ್ನು ಹೊದ್ದುಕೊಳ್ಳುವುದು ವಿರಳ. ಆದರೆ ಮಳೆಗಾಲದ ದಿನಗಳಲ್ಲಿ ವಲ್ಲಿ ಹೊದ್ದಿರುವುದರ ಜೊತೆಗೆ ತಲೆದೊಡುಗೆಯಾಗಿ ಹೊಂಬಾಳೆಯ **'ಹಾಳೆಕೊಟ್ಟೆ'**ಯನ್ನು ಧರಿಸುತಾರೆ.**(ತಳಾಲೆ ಎನ್ನುತ್ತಾರೆ)** ಹೆಂಗಸರು ಧರಿಸುತ್ತಿದ್ದ ನಿತ್ಯ ಆಭರಣಗಳಲ್ಲಿ ಮೂಗು, ಕಿವಿ, ಕೈಕಾಲಿನ ಆಭರಣಗಳು ಮುಖ್ಯವಾದವು. **ಮೂಗಿಗೆ ಕೊಕ್ಕೆ ಮೂಗುತಿ ಅಥವಾ ಬಟ್ಟು; ಕೆಳಗಿವಿಗೆ ಬೆಂಡೋಲೆ ಮತ್ತು ಎಸಳು; ಮೇಲ್ಗಿವಿಗೆ ಲವಂಗದ ಕಟ್ಟಿ ಮತ್ತು ಕೊಟ್ಟಿಗೆ ಮುರ. ಕೈಗೆ ಬೆಳ್ಳಿ ಕಡಗಗಳ ಜೊತೆಗೆ ಎರಡೆರಡು ಮಣ್ಣಿನ ಬಳೆ; ಎರಡೆರಡು ಕತ್ತಿಗೆ ಬಳೆ;** ಕೊರಳಲ್ಲಿ ಧರಿಸುತ್ತಿದ್ದರು.

**ಅವಿವಾಹಿತ ಹೆಣ್ಣುಮಕ್ಕಳು:** ಹನ್ನೆರಡು ಮೊಳದುದ್ದದ ಜಡ್ಡು ಸೀರೆ ಉಟ್ಟು ಕಾಲುಂಗುರ, ಮಾಂಗಲ್ಯ ಬಿಟ್ಟು ಉಳಿದೆಲ್ಲ ಆಭರಣಗಳನ್ನು ಧರಿಸಿಕೊಳ್ಳುತ್ತಿದ್ದರು.

**ವಿಧವೆಯರು:** ಮೂಗುತಿ, ಬೆಂಡೋಲೆ, ಮಾಂಗಲ್ಯ, ಕೈಬಳೆ, ಸುತ್ತು ಕಾಲುಂಗುರಗಳು ಹೊರತಾಗಿ ಮಿಕ್ಕವನ್ನು ಮಾತ್ರ ಧರಿಸಿಕೊಳ್ಳುತ್ತಿದ್ದರು. ಕೈಗೆ ಮಾತ್ರ ವಿಶೇಷವಾಗಿ ಕಡಗ ಧರಿಸುತ್ತಿದ್ದರು. ಸುಮಂಗಲೆಯರಂತೆ ತಲೆ ಬಾಚಿ, ಜಡೆ ಹೆಣೆದು ಹೂ ಮುಡಿದು ಕುಂಕುಮ ಇಟ್ಟುಕೊಳ್ಳುತ್ತಿರಲಿಲ್ಲ.

ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಹೆಂಗಸರು ಹೊಸ ಸೀರೆ ಉಡುವುದು ಅಪರೂಪವಾಗಿತ್ತು. ಮನೆಯ ಯಜಮಾನನ ಹೆಂಡರಿಗೆ ಮಾತ್ರ ಆ ಅವಕಾಶವಿತ್ತು. ಉಳಿದವರು ನಿತ್ಯ ಉಡುವ ಸೀರೆಯನ್ನೇ ಉಟ್ಟುಕೊಳ್ಳುತ್ತಿದ್ದರು.

ನಂತರ ಮನೆಗಳಿಗೆ ಹೋಗುವಾಗ ವಿಶೇಷ ವೇಷಭೂಷಣಗಳಿಂದ ಸಾಲಂಕೃತಗೊಳ್ಳುತ್ತಿದ್ದರು. ಸೊಂಟಕ್ಕೆ ಜರತಾರಿ ಅಥವಾ ಕೈಮಗ್ಗದ ಹೊಸ ಸೀರೆ, ಸೀರೆ ಸುತ್ತಿ ಗೊಬ್ಬೆ ಸೆರಗು ಹಾಕಿ ಕಟ್ಟಿ ರವಿಕೆ ಧರಿಸಿಕೊಳ್ಳುತ್ತಿದ್ದರು. ರವಿಕೆಯ ಮೇಲೆ ಚಾಕಳಿ ಅಂಚಿನ ರೇಷ್ಮೆ 'ವಲ್ಲಿ' ಹೊದ್ದುಕೊಳ್ಳುತ್ತಿದ್ದರು. ತಲೆಗೂದಲನ್ನು ಬೈತಲೆ ತೆಗೆದು ತುರುಬು ಕಟ್ಟಿ

ಹಣೆಗೆ ಬೊಟ್ಟಿಟ್ಟು ಕಿವಿಗೆ ಬುಗುಡಿ, ಕೊರಳಿಗೆ, ಅಡ್ಡಿಕೆ, ಕೈಗೆ ಚಿನ್ನದ ಬಳೆ ಕಡಗ ಹಾಕಿ ಸಿಂಗರಿಸಿಕೊಳ್ಳುತ್ತಿದ್ದರು. ಮದುವೆ ಮನೆಗಳಿಗೆ ಹೋಗುವಾಗ ಕೇಶಕ್ಕೂ ಬಂಗಾರ ಧರಿಸುತ್ತಿದ್ದರು. ಹೊಂಬಳೆ, ತೋಳು ಸರಿಗೆ, ಎಸಳು, ಬುಗಡಿ, ಬೆಂಡೋಲೆ, ಗೆಜ್ಜಯಡ್ಡಿಕೆ ಇವೇ ಮುಂತಾದ ಆಭರಣಗಳಿಗೆ ವಿಶೇಷ ಪ್ರಾಶಸ್ತ್ಯವಿತ್ತು.

**ಮದುಮಗಳ ವೇಷಭೂಷಣಗಳು:**

ಮೂಗಿಗೆ ನತ್ತು, ಬುಲಾಕು, ಕೈಗೆ ಕಾಪು, ಬಳೆ, ತೋಳ್ಬಂದಿಗಳು, ಬೆರಳಿಗೆ ಉಂಗುರ; ಕಾಲುಗಳಿಗೆ ರುಳಿ ಕಾಲಂದುಗೆ, ಕಾಲುಗಡಗ, ಸುತ್ತು ಕಾಲುಂಗುರ'; ಕೊರಳಗೆ ಗೆಜ್ಜೆಡ್ಡಿಕೆ, ದೊಡ್ಡಗುಂಡು, ಸಣ್ಣಗುಂಡು, ಕಟ್ಟಾಣಿ, ಕಾಸಿನಸರ, ಕಂಠಿಸರ; ಕಿವಿಗೆ ಮುತ್ತಿನ ಏಳುಕಳಸದ ಬುಗುಡಿ, ಕೆನ್ನೆಸರಪಳಿ, ಲವಂಗದ ಹೂ, ಪಟ್ಟೆಮುರಿ, ಮೇಟಿಕೊಳವೆಗಳು; ಸೊಂಟಕ್ಕೆ ಡಾಬು, ಕೇಶಕ್ಕೆ ಜಡೆಬಿಲ್ಲೆ ನಾಗರು, ಬೈತಲೆ ಬಂಗಾರ, ಮಲ್ಲಿಗೆ ಮೊಗ್ಗು, ಕುಚ್ಚು, ಚಂದ್ರಬಿಲ್ಲೆ ಈ ಆಭರಣಗಳಿಂದ ವಧುವನ್ನು ಸಿಂಗರಿಸಲಾಗುತ್ತಿತ್ತು.

ಧಾರೆಗೆ ಹದಿನಾರು ಮೊಳದ ಸೀರೆಯನ್ನು ಸೆರಗುಹಾಕಿ ಉಡಿಸುತ್ತಿದ್ದರು. ಇತರ ಮದುವೆ ಶಾಸ್ತ್ರದಲ್ಲಿ ಪಾಲ್ಗೊಳ್ಳಲು ಆಕೆ'ಗೆ ಕೈಮಗ್ಗದ ಸೀರೆಗಳನ್ನು ಉಡಿಸುತ್ತಿದ್ದರು. ಹೆಂಗಸರ ವೇಷಭೂಷಣಗಳಲ್ಲಿ ಈಗ ಸಾಕಷ್ಟು ಮಾರ್ಪಾಟುಗಳಾಗಿವೆ. ಗೊಬ್ಬೆ ಹಾಕಿ ಸೀರೆ ಉಡುವ ಪದ್ಧತಿ ಕ್ಷೀಣಿಸುತ್ತಿದೆ. ಮುದುಕಿಯರಾದಿಯಾಗಿ ಎಲ್ಲರೂ ರವಿಕೆ ಧರಿಸಲಾರಂಭಿಸಿದ್ದಾರೆ. ಈಗ ಮುದುಕಿಯರ ಹೊರತು ಬೇರೆ ಹೆಂಗಸರು 'ವಲ್ಲಿ' ಹೊದೆಯುವುದಿಲ್ಲ. ಆಭರಣಗಳ ತೊಡುಗೆಯಲ್ಲೂ ಸಂಪ್ರದಾಯ ಹಿಂದೆ ಸರಿಯುತ್ತಿದೆ.

**ಮಕ್ಕಳ ಉಡುಗೆ ತೊಡುಗೆಗಳು:** ಹಿಂದೆ ಮಕ್ಕಳು ಗಂಡಾಗಲಿ ಹೆಣ್ಣಾಗಲಿ ಮೂರ್‍ನಾಲ್ಕು ವರ್ಷ ತುಂಬುವವರೆಗೆ ಹೆಚ್ಚಾಗಿ ಬಟ್ಟೆಯನ್ನೇ ನೋಡುತ್ತಿರಲಿಲ್ಲ. ನಾಲ್ಕು ವರ್ಷ ಮೇಲ್ಪಟ್ಟ ಗಂಡುಮಕ್ಕಳಿಗೆ ಬೆಳ್ಳಿ ಉಡಿದಾರ ಹಾಕಿ **ಲಂಗೋಟಿ** ಕಟ್ಟಿಸುತ್ತಿದ್ದರು. ಹೆಣ್ಣುಮಕ್ಕಳಿಗೆ ಸೀರೆ ತುಂಡು ಸುತ್ತುತ್ತಿದ್ದರು. ಹತ್ತು ವರ್ಷ ದಾಟುವವರೆಗೂ ಅವಕ್ಕೆ **'ಪರಿಕಾರ'** ಮುಂದುವರೆಯುತ್ತಿತ್ತು. ಆನಂತರ ಮೈನೆರೆಯುವವರೆಗೆ **'ಕಿರಿಗೆ'** ಉಡುತ್ತಿದ್ದರು. ಸ್ವಲ್ಪಮಟ್ಟಿಗೆ ಸ್ಥಿತಿವಂತರಾದವರು ನಾಲ್ಕೈದು ವರ್ಷದ ಮೇಲ್ಪಟ್ಟಿನ ಹೆಣ್ಣುಮಕ್ಕಳಿಗೆ ಲಂಗ ಹೊಲಿಸಿ ಹಾಕುತ್ತಿದ್ದರು. ಗಂಡಾಗಲಿ ಹೆಣ್ಣಾಗಲಿ ವರ್ಷ ತುಂಬುವುದರೊಳಗೆ ಕಿವಿ ಚುಚ್ಚಿಸಿ ಕಡ್ಡಿಯನ್ನೋ **ಒಂಟಿ**ಯನ್ನೋ ಇಡುತ್ತಿದ್ದರು. ನಾಲ್ಕೈದು ವರ್ಷ ತುಂಬಿದ ಮೇಲೆ ಕೈಗೆ ಬೆಳ್ಳಿಯ ಕಡಗ ಇಲ್ಲವಾದಲ್ಲಿ ಮಣ್ಣಿನ ಬಳೆ ಇಡಿಸುತ್ತಿದ್ದರು. ಕಾಲಿಗೆ ಕಡಗ, ಕಾಲುಗೆಜ್ಜೆ ಹಾಕಿಸುವುದಿತ್ತು. ನಾಲ್ಕಾಣೆ ಪಾವಲಿಯನ್ನು ದಾರದಲ್ಲಿ ಪೋಣಿಸಿ **'ದೃಷ್ಟಿಮಣಿ ಸರ'** ಎಂದು ಕೊರಳಿಗೆ ಹಾಕುತ್ತಿದ್ದರು.

ಗಂಡುಮಕ್ಕಳು ಐದಾರು ವರ್ಷ ತುಂಬಿದ ಬಳಿಕ ಮೊಳಕಾಲಿನಿಂದ ತುಸು ಕೆಳಗಿನವರೆಗೆ ಇಳಿಬಿದ್ದಿರುವಂತೆ ಅಡ್ಡಪಂಚೆಯುಟ್ಟು ಉದ್ದನೆಯ **ಕಸೆ ಅಂಗಿ** ಹಾಕಿ ಎರಡೂ ಕಿವಿಗಳಿಗೆ ಮೇಲೆ ಕೆಳಗೆ ಎರಡೆರಡು ಚಿನ್ನದ ಒಂಟಿಗಳನ್ನೂ ಕಡ್ಡಿಗಳನ್ನೊ ಧರಿಸುತ್ತಿದ್ದರು. ಸೊಂಟಕ್ಕೆ **ಬೆಳ್ಳಿಯ ನೇವಳ ಉಡಿದಾರ, ಕೈಗೆ ಪಾಟ್ಲಿ, ಕಾಲಿಗೆ ಕಡಗ** ಹಾಕುವ ಪದ್ಧತಿಯಿತ್ತು. ಕೊರಳಿಗೆ ಪಂಚ ಲೋಹದಿಂದ ತಯಾರಾದ **ಸರಿಗೆ** ಹಾಕುತ್ತಿದ್ದರು. ಈ ಸರಿಗೆಗೆ ಒಂದು ಹುಲಿಹಲ್ಲನ್ನು ಪೋಣಿಸುತ್ತಿದ್ದರು.

ಈಗ ಕಾಲ ಬದಲಾಗಿದೆ, ಮಕ್ಕಳ ಲಂಗೋಟಿ ಸ್ಥಾನವನ್ನು ಚಡ್ಡಿ ಆಕ್ರಮಿಸಿದೆ. ಕಿವಿ ಚುಚ್ಚಿಸುವ ಶಸ್ತ್ರವಿದ್ದರೂ ಚಿನ್ನದ ಒಂಟಿಗಳನ್ನು ಮಾಡಿಸಿ ಹಾಕುವ ಪದ್ಧತಿ ಕಡಿಮೆಯಾಗುತ್ತಿದೆ. ಬೆಳ್ಳಿಯ ನೇವಳದ ಸ್ಥಾನವನ್ನು ದಾರದ ಉಡಿದಾರ ಆಕ್ರಮಿಸಿದೆ. ಪಾಟ್ಲಿ, ಕಡಗ, ಪಂಚಲೋಹದ ಸರಿಗೆಗಳು ಈಗಿಲ್ಲ. ಹೆಣ್ಣುಮಕ್ಕಳಿಗೆ ತುಂಡುದಟ್ಟಿಯ ಚಿಕ್ಕ ಲಂಗ ಹೊಲಿಸಿ ಹಾಕುವುದೇ ಹೆಚ್ಚು. ಮಕ್ಕಳಿಗೆ ಕಾಲುಗೆಜ್ಜೆ, ದೃಷ್ಟಿಮಣಿ ಸರಗಳ ಹೊರತು ಬೇರೆ ಆಭರಣಗಳನ್ನು ಹಾಕುವುದು ಅಪರೂಪ.

**ಕೇಶಾಲಂಕಾರ:**

ಹಿಂದೆ ಗಂಡಸರು ಮತ್ತು ಗಂಡುಮಕ್ಕಳು ಮುಂದಲೆ ಕ್ಷೌರ ಮಾಡಿಸಿಕೊಂಡು ಹಿಂದಲೆ ಜುಟ್ಟು ಬಿಟ್ಟುಕೊಳ್ಳುವುದು ಸಂಪ್ರದಾಯವಾಗಿತ್ತು. ಗಂಡಸರೂ ಜುಟ್ಟಿಗೆ ಹೂ ಮುಡಿದುಕೊಳ್ಳುತ್ತಿದ್ದರು. ಹೆಂಗಸರು ಮತ್ತು ಹೆಣ್ಣುಮಕ್ಕಳು ಬೈತಲೆ ತೆಗೆದು **'ಮಂಡೆಕಟ್ಟಿ'**ಕೊಳ್ಳುತ್ತಿದ್ದರು. ನಂತರ ಮನೆಗಳಿಗೆ ಹೋಗುವಾಗ **'ತುರುಬು'** ಕಟ್ಟಿಕೊಳ್ಳುತ್ತಿದ್ದರು. ಉಡುಗೆ ತೊಡುಗೆಗಳಲ್ಲಿ ಸುಧಾರಣೆಯಾದಂತೆ ಕೇಶಾಲಂಕಾರದಲ್ಲೂ ಅನೇಕ ಬದಲಾವಣೆಗಳಾಗಿವೆ. ಈಗ ಹೆಚ್ಚಾಗಿ ಯಾರು ಜುಟ್ಟು ಬಿಟ್ಟುಕೊಳ್ಳುವುದಿಲ್ಲ. ಹಣೆಗೆ ಯಾರು ನಾಮ ಧರಿಸುವುದಿಲ್ಲ. ಅನೇಕ ಹೊಸ ಜಗತ್ತಿನ ಪರಿಚಯವಾಗುತ್ತಿದೆ.

**ಹಚ್ಚೆ:**

ಹಚ್ಚೆ ಹುಯಿಸಿಕೊಳ್ಳುವ ಪದ್ಧತಿ ಈಗ ಕಡಿಮೆಯಾಗಿದ್ದರೂ ಹಿಂದೆ ಕಡ್ಡಾಯವೆನ್ನುವಂತೆ ಗಂಡು ಹೆಣ್ಣುಗಳಿಬ್ಬರಲ್ಲೂ ಸಾಮಾನ್ಯವಾಗಿತ್ತು. ಹೆಂಗಸರು ಮುಂಗೈಗೆ ಹಚ್ಚೆ ಚುಚ್ಚಿಸಿಕೊಳ್ಳುತ್ತಿದ್ದರು. **'ಶಿವನ ಜಡೆ'** ಚುಚ್ಚಿಸಿಕೊಂಡರೆ ಮುತ್ತೈದೆಗೆ ಮಂಗಳ ಎಂಬ ನಂಬಿಕೆಯಿತ್ತು. ಹಣೆ, ಕಣ್ಣು, ಗಲ್ಲ, ತೋಳು, ಭುಜ, ಎಡಗೈ ಹೆಬ್ಬೆರಳು ಮುಂತಾದೆಡೆ ಹಚ್ಚೆ ಚುಚ್ಚಿಸಿಕೊಳ್ಳುವುದು ವಾಡಿಕೆಯಾಗಿತ್ತು. ಹಣೆ ಮೂಗಿನ ಮೇಲೆ ಒಂದೊಂದು ಗುಂಡು, ಎರಡೂ ಕಣ್ಣಿನ ಎರಡೂ ಕೊನೆಗೆ ಎರಡು ಕಣ್ಣ, ಸೋಗು; ಗಲ್ಲಕ್ಕೆ ಎರಡು ಗುಂಡು, ಮುಂಗೈಗೆ 'ಶಿವನ ಜಡೆ' ಜೊತೆಗೆ ಗಿಂಡಿ, ಭುಜಕ್ಕೆ ಬಸವ, ಎಡಗೈ ಹೆಬ್ಬೆರಳ ಮೇಲಿನ ಮೊದಲ ಗಣ್ಣಿನ ಮೇಲೆ ಮೂರು ಒಲೆಗುಂಡು, ತೋಳಿಗೆ ಗಂಡನ ಹೆಸರು ಚುಚ್ಚಿಸಿಕೊಳ್ಳುತ್ತಿದ್ದರು.ಗಂಡಸರು ತೋಳಿಗೆ ಬಾಳೆಮರ ಚುಚ್ಚಿಸಿಕೊಳ್ಳುವುದು ಸಾಮಾನ್ಯವಾಗಿತ್ತು.

**ಕೆಲಸದ ಸಂದರ್ಭದಲ್ಲಿ ಧರಿಸುತ್ತಿದ್ದ ಉಡುಗೆ ತೊಡುಗೆಗಳು:**

ಅನುಗಾಲವೂ ಗದ್ದೆ ತೋಟಗಳಲ್ಲಿ ಕೆಲಸ ಮಾಡುವ ಈ ಜನರಲ್ಲಿ ಹಲವರಿಗೆ ಪೂರ್ತಿ ಮೈಮುಚ್ಚುವಷ್ಟು ಬಟ್ಟೆಯೂ ಇರುವುದಿಲ್ಲ. ಬಟ್ಟೆಗಳ ಸೌಲಭ್ಯವಿರದಿದ್ದ ಕಾಲದಲ್ಲಿ ಇವರು ಮಾನ ಮುಚ್ಚಿಕೊಳ್ಳಲು ಕಾಡು ಬಾಳೆ ಪಟ್ಟೆಗಳಿಂದ ಕಾಸೆ ಕಟ್ಟಿಕೊಳ್ಳುತ್ತಿದ್ದರಂತೆ. ಈಗ ಒಳ್ಳೆಯ ಲಂಗೋಟಿ ಕಟ್ಟಿಕೊಂಡು ಮೊಳಕಾಲಿನಿಂದ ಮೇಲಕ್ಕೆ ಮಾತ್ರ ಮುಚ್ಚುವಂತೆ ಸೊಂಟಕ್ಕೆ **'ಮೋಟು ಪಂಚೆ'**ಯೊಂದನ್ನು ಸುತ್ತಿಕೊಳ್ಳುವರು. ಇದರ ಜೊತೆಗೆ ಸೊಂಟಕ್ಕೆ **ದಟ್ಟಿ** ಬಿಗಿಯುವರು. ಅದಕ್ಕೆ ಹಿಂಭಾಗದಲ್ಲೊಂದು ಕಬ್ಬಿಣದ ಕೊಂಡಿಯಿರುತ್ತದೆ. ಆ ಕೊಂಡಿಯಲ್ಲಿ ಕೆಲಸದ ಕತ್ತಿ ತೂಗಾಡುತ್ತಿರುತ್ತದೆ. ಮೈಗೆ ಅಂಗಿ' ತಲೆಗೆ ಟೋಪಿ ಧರಿಸುವರು. ಕಿವಿಗಳಲ್ಲಿ ಲೋಹದ ಒಂಟಿಗಳಿರುತ್ತವೆ. ಮೇಲ್ಗಿವಿಯ ಆಭರಣವನ್ನು **'ಕೊಟ್ಗೆಮರ'** ಎಂದೂ, ಕೆಳಗಿವಿಯದನ್ನು **'ಒಂಟಿ'** ಎಂದೂ ಕರೆಯುತ್ತಾರೆ. ಕೈಗೆ ಬೆಳ್ಳಿ ಪಾಟ್ಲಿ, ಕಾಲಿಗೆ ಕಡಗ ಹಾಕುವರು. ಹೆಗಲ ಮೇಲೊಂದು **ಕಂಬಳಿ ಕೊಪ್ಪೆ** ಹಾಕಿಕೊಳ್ಳುವರು. ಇದು ಚಳಿಯಾದಾಗ ಹೊದೆಯಲು, ಮಳೆಬಂದಾಗ ಗೊಪ್ಪೆಮಾಡಿ ತಲೆಯ ಮೇಲೆ ಹಾಕಿಕೊಂಡು ಮಳೆಯಿಂದ ರಕ್ಷಿಸಿಕೊಳ್ಳಲು ಮಲಗುವಾಗ ಹಾಸಿಕೊಳ್ಳಲು, ಹೀಗೆ ಅನೇಕ ವಿಧದಲ್ಲಿ ಉಪಯೋಗಕ್ಕೆ ಬರುತ್ತದೆ. ಇವೆಲ್ಲವುಗಳ ಜೊತೆಗೆ **'ಸಂಚಿಚೀಲ'** ಸದಾ ಸೊಂಟದಲ್ಲಿ ನೇತಾಡುತ್ತಿತ್ತು. ಮುದುಕಿಯರು ಒಂದು ಲಂಗೋಟಿ ಕಟ್ಟಿ, ಮೈಮೇಲೊಂದು ಉದ್ದ ಅಂಗಿ ತೊಡುವರು. ಈ ಅಂಗಿಗೆ ಗುಂಡಿಗಳಿರುವುದಿಲ್ಲ. ಹೆಗಲ ಮೇಲೊಂದು ಕಂಬಳಿ ಹೊದ್ದಿರುತ್ತಾರೆ.

ಹೆಂಗಸರು ಹಾಗೂ ಗಂಡಸರು ಕೆಲಸ ಮುಗಿಸಿ ಮನೆಗೆ ಬಂದ ಮೇಲೆ ಧರಿಸುವ ಉಡುಪಿನಲ್ಲಿ ಗಮನಾರ್ಹ ವ್ಯತ್ಯಾಸಗಳೇನೂ ಇರುವುದಿಲ್ಲ. ಸೊಂಟಕ್ಕೆ ಸುತ್ತಿದ **ಒಡ್ಯಾಣ** ಮೈಮೇಲೆ ಧರಿಸಿದ ಅಂಗಿ ತಲೆಯ ಮೇಲಿನ ಟೋಪಿಗಳಿಗೆ ವಿಶ್ರಾಂತಿ ಸಿಗುತ್ತದೆ. ಮೈಗೊಂದು ಕಸೆ ಅಂಗಿ ಧರಿಸುತ್ತಾರೆ.

ಮಲೆನಾಡಿನ ಬ್ರಾಹ್ಮಣ ಹೆಂಗಸರ ಉಡುಗೆ-ತೊಡುಗೆ ಪದ್ಧತಿ ಬ್ರಾಹ್ಮಣೇತರ ಹೆಂಗಸರಿಗಿಂತ ಭಿನ್ನವಾಗಿತ್ತು. ಬ್ರಾಹ್ಮಣೇತರರು **'ಗೊಬ್ಬೆ ಸೆರಗು'** ಹಾಕಿ ಸೀರೆಯನ್ನು ಬಿಗಿದು ಕಟ್ಟಿದರೆ, ಬ್ರಾಹ್ಮಣ ಹೆಂಗಸರು ಗಂಡಸರಂತೆ **ಕಚ್ಚೆ** ಹಾಕಿ ಉಡುತ್ತಿದ್ದರು. ಬೆಟ್ಟಳ್ಳಿಯ ಗಾಡಿಯಲ್ಲಿ ಕಲ್ಲೂರಿನ ಅಗ್ರಹಾರ ದೇವಸ್ಥಾನಕ್ಕೆ ಬಂದ ಧರ್ಮ, ಕಾಡು, ತಿಮ್ಮ ಉಡುಗರು ಬ್ರಾಹ್ಮಣ ಹೆಂಗಸರ ಉಡುಗೆಯ ರೀತಿಯನ್ನು ಅವರ ಸೊಬಗನ್ನು ಕಂಡು ವಿನೋದವಾಡುವಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಹೆಂಗಸರ ಉಡುಗೆ-ತೊಡುಗೆಯಲ್ಲಿ ಕಂಡುಬರುವ ಅಂತರವನ್ನು ಸೂಚಿಸುತ್ತದೆ. 'ತನ್ನ ತಾಯಿ ಮುಂತಾದವರ ಗೊಬ್ಬೆ ಸೆರಗಿನ ಮಲೆನಾಡಿನ ಉಡುಗೆಯನ್ನೇ ನೋಡಿ ಅಭ್ಯಾಸಬಾಗಿದ್ದ ತಮ್ಮುಗೆ ಹಾರುವರ ಹೆಂಗಸರ ಉಡುಗೆಯ ರೀತಿ ವಿನೋದಕರವಾಗಿತ್ತು. ಅದರಲ್ಲಿಯೂ ಕಚ್ಚೆ ಹಾಕಿದಂತೆ ಸೀರೆ ಉಟ್ಟಿದವರನ್ನು ನೋಡಿ ಅವನಿಗೆ ನಗೆ ತಡೆಯಲಾಗಲಿಲ್ಲ. **"ಏನೋ ಕಾಡಣ್ಣಯ್ಯ ಗಂಡಸರ ಹಾಂಗೆ ಕಚ್ಚೆ ಹಾಕಿದ್ದಾರಲ್ಲೋ ಥೂ..!"** ಎಂದು ಪಿಸುಗುಟ್ಟಿದನು **"ಅದೊಂದು ತರಹ ಬಿಂಬರ ಉಡುಗೆ ಕಣೋ..!"** ಎಂದು ವಿವರಿಸಿದ್ದನು ಕಾಡು ತಿಮ್ಮುಗೆ ಉಡುಗೆ ತೊಡಿಗೆಯಲ್ಲಾಗಲಿ ರೂಪದಲ್ಲಾಗಲೀ ಬಣ್ಣದಲ್ಲಾಗಲಿ ತನ್ನ ಹಳೆಮನೆ ಅತ್ತಮ್ಮ ಬೆಟ್ಟಳ್ಳಿ ಅತ್ತಮ್ಮ ಮುಂತಾದವರ ಮುಂದೆ ಯಾವ 'ಹಾರ್ತಿ'ಯೂ 'ಚೆಂದ' ಕಾಣಲಿಲ್ಲ. (ಮಲೆಗಳಲ್ಲಿ ಮದುಮಗಳು ಪು.ಸಂ.429) ಮಕ್ಕಳ ಈ ಮನೋವೃತ್ತಿಯಲ್ಲಿ ಕಚ್ಚೆ ಹಾಕಿ ಸೀರೆ ಉಡುವ ಬ್ರಾಹ್ಮಣ ಹೆಂಗಸರಿಗಿಂತ ಒಕ್ಕಲಿಗರ ಹೆಂಗಸರು ಗೊಬ್ಬೆ ಸೆರಗಿನಲ್ಲಿ ಅಂದವಾಗಿ ಕಾಣುತ್ತಿದ್ದರು ಎಂಬುದು ವಿದಿತವಾಗುತ್ತದೆ.

ಸಾಮಾಜಿಕವಾಗಿ ಮೇಲ್ವರ್ಗದಲ್ಲಿರುವ ಬ್ರಾಹ್ಮಣರು ವೇಷ-ಭೂಷಣಗಳಲ್ಲಿ ಯಾವಾಗಲೂ ಶುಭ್ರತೆ, ಮಡಿವಂತಿಕೆ ಹಾಗೂ ಸರಳತೆಯನ್ನು ಕಾಯ್ದುಕೊಂಡಿರುತ್ತಿದ್ದರು. ಇವರು ಮಣ್ಣಿನಿಂದ ದೂರವಿರುವ ಜನರು. ಅವರ ಸಹಜ ಮನೋವೃತ್ತಿಗಳಾದ ಶುಚಿತ್ವ, ಮಡಿವಂತಿಕೆ ಹಾಗೂ ಅವರ ಪುರೋಹಿತ ವೃತ್ತಿಯನ್ನು ಅವರ ವೇಷ ಭೂಷಣಗಳು ನಿರ್ದೇಶಿಸುತ್ತಿದ್ದವು.

**ಮಲೆನಾಡಿನ ಹೆಂಗಸರಿಗೆ ಗೊಬ್ಬೆ ಸೆರಗಿನ ಸೀರೆ ಉಡುಗೆ ಗಟ್ಟಿಮುಟ್ಟಾದ ಬಿಗಿವಿನಿಂದ ಕೂಡಿದ್ದಲ್ಲದೆ, ಸೌಂದರ್ಯಕ್ಕೂ ಕಾರಣವಾಗಿತ್ತು** ಎಂಬುದು ಅವರ ನಂಬಿಕೆಯಾಗಿತ್ತು. ಗುತ್ತಿ ತನಗೆ ಬಂದ ಅಪಾಯದಿಂದ ಪಾರಾಗಲೆಂದು ಮೇಗೊಳ್ಳು ಕಡೆಯಿಂದ ತೀರ್ಥಹಳ್ಳಿ ಮೇಲಾಗಿ ಹೊಳೆದಾಟಿ ಗಟ್ಟದ ಕೆಳಗೆ ಹೊರಟಿದ್ದನ್ನ, ಜೊತೆಯಲ್ಲಿ ಹೆಂಡತಿ ತಿಮ್ಮಿಯೂ ಇದ್ದಳು. ಗಟ್ಟದ ಕೆಳಗೆ ಹೋದ ಮೇಲೆ ಅಲ್ಲಿಯ ಹೆಂಗಸರಂತೆ ಸೀರೆ ಉಟ್ಟರೆ ನಮ್ಮ ಗುರುತು ಯಾರಿಗೂ ಸಿಗುವುದಿಲ್ಲ ಎಂದು ತಿಮ್ಮಿಗೆ ಸೂಚಿಸುತ್ತಾನೆ. ಆಗ ತಿಮ್ಮಿ **'ಹೂ.! ನನ್ನಿಂದ ಆಗೂದಿಲ್ಲ. ಆ ಹಾರೋರು ಕರಾದೇರು ಬಿಲ್ಲೋರು ಉಟ್ಟಂಗೆ** ಸೀರೆ **ಉಡಾಕೆ !** ಒಂದೆರಡು ದಿನ ಹಾಂಗೆ ಉಟ್ಟುಕೊಂಡ್ರೆ, ನಿಂಗೇನು ಜಾತಿ ಹೋಗ್ತದಾ..? **ಊ ಹು ....! ನೀವೇನು ಮಾಡಾಕೆ ಹೇಳುದ್ರೂ ಮಾಡ್ತೀನಿ ಅದೊಂದು ಮಾತ್ರ ನನ್ನಿಂದ ಆಗಾದಿಲ್ಲ. ನಾ ಯಾವಗ್ಲೂ ಗೊಬ್ಬೆ ಸೆರಗು ಹಾಕ್ಯೇ ಸೀರೆ ಉಡಾದು..!** (ಮಲೆಗಳಲ್ಲಿ ಮದುಮಗಳು. ಪು.573) ತಿಮ್ಮಿ ಗೊಬ್ಬೆ ಸೆರಗು ಸೀರೆಯನ್ನೇ ಉಡುವುದಾಗಿ ಹೊಂದಿರುವ ಹಠಮಾರಿತನದ ಈ ವರ್ತನೆಯಲ್ಲಿ ಮಲೆನಾಡಿನ ಹೆಂಗಸರಿಗೆ ಗೊಬ್ಬೆ ಸೀರೆ ಉಡುಗೆ ಅತ್ಯಂತ ಮೆಚ್ಚುಗೆಯಾಗಿರುವುದು ಸೂಚಿಸುತ್ತದೆ.

ದೇವಯ್ಯಗೌಡರು ಪ್ರೀತಿಯಿಂದ ಬೆರಳಿಗೆ ಹಾಕಿದ್ದ ಬಂಗಾರದ ಉಂಗುರವನ್ನು ಕಾವೇರಿ ಕಳೆದುಕೊಳ್ಳುತ್ತಾಳೆ. ಅದು ಒಬ್ಬರ ಹತ್ತಿರವಿದೆ ನಿನಗೆ ಕೊಡಿಸುತ್ತೇನೆ. ರಾತ್ರಿ ಸಮಯದಲ್ಲಿ ದೂರದಲ್ಲಿರುವ ಶಾಲೆಗೆ ಬಂದುಬಿಡು ಎಂದು ಚೀಂಕ್ರ ಕಾವೇರಿಗೆ ಸೂಚಿಸುತ್ತಾನೆ. **ಉಂಗುರದ ಆಸೆಯಿಂದಾಗಿ ರಾತ್ರಿ ಕಾವೇರಿ ಅದನ್ನು ಪಡೆದುಕೊಳ್ಳಲು ನಿರ್ಧರಿಸಿದರೂ ತನ್ನ ಶೀಲದ ಬಗ್ಗೆ ಶಂಕೆ ಹುಟ್ಟಿ ಅಂದು ಅವಳು ದಿನನಿತ್ಯದ ರೂಢಿಯಂತೆ ಗಟ್ಟದ ತಗ್ಗಿನ ಉಡುಗೆ ಸಡಿಲ ಉಡುಗೆ ಎಂಬುದು ಅವಳ ನಂಬುಗೆ. ಯಾರಾದರೂ ತುಸು ಜಗ್ಗಿಸಿ ಎಳೆದರೂ ಬಿಚ್ಚಿಯೋ ಹೋಗುವ ಸಂಭವ ಹೆಚ್ಚು, ಗಟ್ಟದ ಮೇಲಿನದಾದರೋ ದಂಡುಕಡಿಯಲು ಹೋಗುವವರ ಸಮವಸ್ತ್ರದಂತೆ ಬಿಗಿಯಾಗಿ ಭದ್ರವಾಗಿದ್ದು ಎಂತಹ ಹೋರಾಟದಲ್ಲಿಯೂ ಸಡಿಲವಾಗುವ ಸಂಭವ ಬಹಳ ಕಡಿಮೆ. ಬಿಚ್ಚಿ ಹೋಗುವುದಂತೂ ಸಾಧ್ಯವೇ ಇಲ್ಲ. ಕಾವೇರಿ ಈ ಕಾರಣದಿಂದಾಗಿ ಅಂದು ರಾತ್ರಿ ಗೊಬ್ಬೆ ಸೆರಗು ಸೀರೆ ಉಡುತ್ತಾಳೆ. ಗಟ್ಟಿಮುಟ್ಟಾದ ಉಡುಗೆಗೆ ಗೊಬ್ಬೆ ಸೆರಗು ಸೀರೆ ಮಲೆನಾಡಿನಲ್ಲಿ ಹೆಚ್ಚು ಪ್ರಚಲಿತವಿರುವುದು ಮತ್ತು ಜನರ ಮೆಚ್ಚುಗೆಯ ಉಡುಗೆಯಾಗಿತ್ತು** ಎಂಬುದು ಇದರಿಂದ ತಿಳಿದುಬರುತ್ತದೆ.

ಅಂದು ಮಲೆನಾಡಿನ ಹೆಣ್ಣುಮಕ್ಕಳು ಉಡುತ್ತಿದ್ದ ಸೀರೆಗಳಲ್ಲಿ **ಜರತಾರಿ ಸೀರೆಯೂ** ರೂಢಿಯಲ್ಲಿತ್ತು. ಅಲ್ಲದೆ ಕಿವಿಯಲ್ಲಿ ಬಂಗಾರದ ಬುಗಡಿ ಮೂಗಿನಲ್ಲಿ **ನತ್ತು,** ಬೆರಳುಗಳಿಗೆ **ಹರಳುಂಗುರ, ಅಡ್ಡಿಕೆ, ಡಾಬು, ಕಾಸಿನ ಸರ, ಕಟ್ಟಾಣಿ, ಹೊಂಬಳೆ** ಮುಂತಾದ ಆಭರಣಗಳನು ತೊಡುತ್ತಿದ್ದರು. ಆರ್ಥಿಕ ಪರಿಸ್ಥಿತಿಯಿಂದ ಸುಧಾರಿಸಿದ ಒಕ್ಕಲಿಗರು, ಹೆಗ್ಗಡೆ, ಗೌಡರಂತಹ ಮನೆತನದವರು ಇಂಥ ತೊಡುಗೆಗಳನ್ನು ಹೊಂದಿರುತ್ತಿದ್ದರು. ಕಾನೂರಿನ ಚಂದ್ರೇಗೌಡರ ಹೆಂಗಸರೆಲ್ಲ ಇಂಥ ಆಭರಣಗಳನ್ನು ಹೊಂದಿದ್ದರು. ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರು ತಮ್ಮ ಮಗಳು ಬುಚ್ಚಿ (ಮಂಜುಳಮ್ಮ) ತೊಟ್ಟಿದ್ದ **ಮೂಗುತಿ, ಬುಗಡಿ, ಎಸಳ ಸರಪಳಿ** ಮೊದಲಾದ ಆಗಿನ ಕಾಲದ ಮೆಚ್ಚಿನ ಸ್ಥೂಲಾಭಿರುಚಿಯ ಭಾರಾಲಂಕಾರಗಳನ್ನು ನೋಡಿ ಆನಂದಗೊಳ್ಳುತ್ತಾರೆ. ಹೆಣ್ಣುಮಕ್ಕಳು ನಿತ್ಯ ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದರಿಂದ ಈ ಎಲ್ಲ ತೆರನಾದ ಬಂಗಾರದ ಆಭರಣಗಳನ್ನು ದಿನನಿತ್ಯ ತೊಡುತ್ತಿರಲಿಲ್ಲ. ಅವುಗಳು ಅವರ ಮೈಮೇಲೆ ಶೃಂಗಾರ ವೈಭವ ಹಬ್ಬ, ಜಾತ್ರೆ ಮದುವೆಯಂತಹ ವಿಶೇಷ ದಿನಗಳಲ್ಲಿಯೇ ಕಾಣಬಹುದಾಗಿತ್ತು.

ಕೂಲಿಯಾಳಾಗಿ ಮತ್ತು ಜೀತದಾಳುಗಳಾಗಿ ದಿನವಿಡೀ ಒಡೆಯರ ಹೊಲಗದ್ದೆಗಳಲ್ಲಿ ದುಡಿಯುವುದರಲ್ಲಿಯೇ ಬದುಕು ಸವಿಯುಸುತ್ತಿದ್ದ ಹೆಂಗಸರ ಉಡುಗೆ ತೊಡುಗೆ ತುಂಬಾ ಸರಳ ಮತ್ತು ಅಲಂಕಾರ ರಹಿತವಾದದ್ದು. ಏನಿದ್ದರೂ ಅವರು ತಮ್ಮ ಮಾನ ಮುಚ್ಚಿಕೊಳ್ಳಲು ಸಹಾಯಕಾರಿಯಾಗುವಂತಹ ಬಟ್ಟೆ ಬರೆಗಳನ್ನು ಹೊಂದಿದ್ದರು. ಒಕ್ಕಲಿಗ ಹೆಂಗಸರು ತೊಡುವ ಸುಧಾರಿಸಿ ಬಟ್ಟೆಬರೆ ಬಂಗಾರದ ಆಭರಣಗಳನ್ನು ತೊಡಬೇಕು ಎಂಬ ಆಸೆ ಜೀತದಾಳು ಮನದಲ್ಲಿದ್ದರೂ ಅವುಗಳನ್ನು ಹೊಂದುವ, ಪಡೆದುಕೊಳ್ಳುವ ಸ್ಥಿತಿ ಅವರದ್ದಾಗಿರಲಿಲ್ಲ. ಅವರ ದುಡಿತದ ಪ್ರತಿಫಲ ಹೊಟ್ಟೆಗೇ ಸಾಲುತ್ತಿರಲಿಲ್ಲ. ಹೀಗಾಗಿ ಅಂಥ ವೇಷ ಭೂಷಣ ಅವರ ಪಾಲಿಗೆ ಕನಸಾಗಿತ್ತು.

ಕುವೆಂಪು ಕಾದಂಬರಿಗಳಲ್ಲಿ ಕಂಡುಬರುವ ವೇಷ ಭೂಷಣಗಳು ಅಂದಿನ ಮಲೆನಾಡಿನ ಜನರ ಜೀವನ ಪದ್ಧತಿ, ಸೌಂದರ್ಯದ, ಪರಿಕಲ್ಪನೆ, ಸರಳವಾದ ಉಡುಗೆಯ ಸೊಬಗು, ವಿವಿಧ ವ್ಯಕ್ತಿಗಳ ಅವಲಂಬನೆ, ಆಸ್ತಿ, ಅಂತಸ್ತು, ಆರ್ಥಿಕ ಪರಿಸ್ಥಿತಿ ಮಲೆನಾಡಿನ ಪರಸ್ಪರ ಸಾಮಾಜಿಕ ಸ್ಥಾನಮಾನ ಇವುಗಳನ್ನು ಅವಲಂಬಿಸಿಯೇ ಇರುವುದರಿಂದ ಆ ವೇಷಭೂಷಣಗಳಿಂದ ಅವರ ಒಟ್ಟು ಇರುವಿಕೆಯನ್ನು ಸೂಚಿಸುತ್ತವೆ. ಏನೇ ಆದರೂ ದಿನವಿಡೀ ದುಡಿಯುವುದೇ ಅವರ ಜೀವನ ವಿಧಾನವಾಗಿದ್ದರಿಂದ ವೇಷಭೂಷಣಗಳಿಗೆ ಅಷ್ಟೊಂದು ಮಹತ್ವ ನೀಡದೆ ಸರಳತೆ ಹೊಂದಿದ್ದರು. ಪಾಶ್ಚಾತ್ಯರ ಪ್ರಭಾವದಿಂದಾಗಿ ನವ ನಾಗರೀಕತೆಯ ಕುರುಹುಗಳಾಗಿ ಆಗ ತಾನೇ ಕಾಣಿಸಿಕೊಳ್ಳುತ್ತಿದ್ದ ಹೊಸ ಉಡುಪುಗಳು ಮೆಚ್ಚುಗೆಯಿಂದಲೂ ತಿರಸ್ಕಾರದ ಸಂಘರ್ಷದಿಂದ ತಮ್ಮ ಸ್ಥಾನಮಾನವನ್ನು ಪಡೆದುಕೊಳ್ಳುತ್ತಿದ್ದವು. ಹೀಗಾಗಿ ಸಾಂಸ್ಕೃತಿಕ ಸಂಘರ್ಷ ಸಹಜವಾಗಿಯೇ ಕಾಣಿಸಿಕೊಂಡಿದೆ.

**ಮಾನವನ ಸೌಂದರ್ಯ ಕಲ್ಪನೆ** ವೈವಿಧ್ಯಮಯ ವೇಷಭೂಷಣಗಳು ಜನ್ಮ ತಳೆಯಲು ಕಾರಣವಾಗಿರಬೇಕು. ಅಂಗಾಂಗ ರಕ್ಷಣೆಯೇ ಉಡುಪಿನ ಮುಖ್ಯ ಉದ್ದೇಶವಾದರೂ ಅದರಲ್ಲಿ ಸೊಗಸಿನ ಎಳೆಯೂ ಸೇರಿಕೊಂಡಿದೆ. ಈ ಸಂಗತಿಯನ್ನು ಮಲೆನಾಡಿನ ಹೆಣ್ಣುಮಕ್ಕಳ ಕೆಲವು ಉಡುಗೆ ತೊಡುಗೆಗಳಲ್ಲಿ ಗುರುತಿಸಬಹುದಾಗಿದೆ. ಹೆಂಗಸರು ಕಿವಿಗಳಿಗೆ ಚಿನ್ನ ಮತ್ತು ತಾಮ್ರದ ಒಂಟಿಗಳನ್ನು ಧರಿಸುತ್ತಿದ್ದು ಶೀತ ಮತ್ತಿತರ ಕಾರಣದಿಂದಾಗಿ ದೇಹ ಊತ ಹೊಂದುವುದನ್ನು ನಿವಾರಿಸಿಕೊಳ್ಳಲೆಂಬುದನ್ನು ಅರಿತಾಗ ಪ್ರತಿಯೊಂದು ಆಭರಣಗಳ ಹುಟ್ಟಿಗೂ ಒಂದೊಂದು ವಿಶಿಷ್ಟ ಹಿನ್ನಲೆ ಇದೆ ಎಂಬುದು ಮನವರಿಕೆಯಾಗುತ್ತದೆ. ಮಕ್ಕಳಿಗೆ ಕಾಲಿಗೆ ಕಡಗ', ಕೈಗೆ ಪಾಟ್ಲಿ ಹಾಕುವ ಸಂಪ್ರದಾಯಕ್ಕೂ ವೈಜ್ಞಾನಿಕ ಹಿನ್ನಲೆ ಇದೆ. ಕೈ ಕಾಲುಗಳು ತೆಳ್ಳಗಾಗಿ ದಪ್ಪೆ ಗಾತ್ರವಾಗುವುದನ್ನು ತಡೆದು ಅವಕ್ಕೆ ಒಂದು ಸ್ಪಷ್ಟ ಆಕಾರವನ್ನು ನೀಡುವ ಶಕ್ತಿ ಆ ಆಭರಣಗಳಿಗಿವೆ. ತಾಮ್ರದ ತಾಯಿತವನ್ನು ಭೂತ ಪಿಶಾಚಿಗಳ ಪೀಡೆಯ ನಿವಾರಣೆಗಾಗಿ ಕಟ್ಟಿಕೊಳ್ಳುವುದಾದರೂ ದೇಹಕ್ಕೆ ಅಗತ್ಯವಾಗಿ ಬೇಕಾದ ಲೋಹ ಸ್ಪರ್ಶವನ್ನು ಅದು ಒದಗಿಸುತ್ತದೆ. ಹೆಂಗಸರು ಮಳೆಗಾಲದಲ್ಲಿ ತಲೆಯ ಮೇಲೆ ತೊಡುವ ಹಾಳೆಕೊಟ್ಟ (ತಳಾಲೆ) ಅವರ ತಲೆಗೂದಲನ್ನು ಮಳೆಯಿಂದ ರಕ್ಷಿಸುತ್ತದೆ. ಮದುವೆಯಲ್ಲಿ ಗಂಡಿನ ಎಡಕೈಗೆ **ಕಠಾರಿ** ಕೊಡುವುದು ಹೆಣ್ಣನ್ನು ರಕ್ಷಿಸಬೇಕೆಂಬುದಕ್ಕೆ ಸಂಕೇತ.

ಮಲೆನಾಡಿನ ಮಹಿಳೆಯರ ವೇಷಭೂಷಣಗಳು ಬೇರೆ ಬೇರೆ ಸಂಸ್ಕೃತಿಗಳ ಪ್ರಭಾವದಿಂದಾಗಿ ಸುಧಾರಣೆಯನ್ನು ಸಾಧಿಸಿದ್ದರೂ ಸ್ಥಳೀಯ, ಪ್ರಾದೇಶಿಕ, ಸಾಮಾಜಿಕ ಭಿನ್ನತೆಯನ್ನು ಅವರು ಉಳಿಸಿಕೊಂಡು ಬಂದಿದ್ದಾರೆ. ಯಾವುದೇ ನಿರ್ದಿಷ್ಟ ಧಾರ್ಮಿಕ ಸಿದ್ಧಾಂತ ನಿರ್ಬಂಧಗಳಿಗೊಳಗಾಗದ ಇವರು ಒಂದು ವಿಶಿಷ್ಟ ರೀತಿಯ ಪ್ರತ್ಯೇಕತೆಯನ್ನು ಸಾಧಿಸಿರುವುದು ಕುತೂಹಲಕರವಾಗಿ ಕಾಣುತ್ತದೆ. ಅನ್ಯ ಸಂಸ್ಕೃತಿ, ಭೌಗೋಳೀಕರಣ, ಜಾಗತೀಕರಣ, ಸಾಮಾಜೀಕರಣ, ಆಧುನೀಕರಣ, ನಗರೀಕರಣಗಳ ಸಂಪರ್ಕ ಇದ್ದರೂ ಈ ಮಲೆನಾಡಿನ ಮಹಿಳೆಯರು ತಮ್ಮದೇ ಆದ ಪ್ರತ್ಯೇಕತೆ ಗುರುತಿಸಿಕೊಂಡಿರುವುದು ಮಹತ್ವದ ಅಂಶ. ಇವರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಅಂತಸ್ತುಗಳಿಗೆ ಅಗತ್ಯಕ್ಕನುಗುಣವಾಗಿ ಇವರು ವೇಷಭೂಷಣಗಳನ್ನು ನಿರ್ಮಿಸಿಕೊಂಡಿರುವುದು ಇಡೀ ಜಗತ್ತಿನಲ್ಲಿ ಮಲೆನಾಡಿನ ಪ್ರತ್ಯೇಕತೆ ಉಳಿದು ಬರಲು ಸಾಧ್ಯವೆಂದು ಭಾವಿಸಲಾಗಿದೆ.

ಇಂದಿನ ಯುವತಿಯರು ವೇಷಭೂಷಣಗಳು ರಾಜಕುಮಾರಿಯರಿಗೆ ಅಲಂಕಾರಿಕ ಆಭರಣಗಳನ್ನು ತೊಡಿಸಿದಾಗ ಕಂಗೊಳಿಸುವ ರೀತಿಯಲ್ಲಿ ಶೋಭಿಸುತ್ತಾರೆ. **'ಮಲೆನಾಡ ಹೆಣ್ಣಾ ಮೈಬಣ್ಣ; ನಡುಸಣ್ಣ, ನಾ ಮನಸೋತೆನೆ ಚಿನ್ನಾ'** ಎಂದು ಉದ್ಗಾರ ತೆಗೆಯುವ ನಮ್ಮ ಸಿನಿಮಾ ಹಾಡಿನ ಗೆಳೆಯರ ಮಾತು ಇನ್ನೂ ದೃಢವಾಗುತ್ತದೆ. ಏನೇ ಇರಲಿ ಇವರನ್ನು ಎಂಥಹಾ ಸಮೂಹದಲ್ಲಿ ಬಿಟ್ಟರೂ ಮಲೆನಾಡಿನ ಉಡುಗೆ ತೊಡುಗೆ ಹಾಕಿದರೆ ಇವರೇ ಮಲೆನಾಡಿನವರೆಂದು ಯಾರು ಬೇಕಾದರೂ ಸುಲಭವಾಗಿ ಹೇಳವಷ್ಟು ಕೆಲಸ ಮತ್ತೊಂದಿಲ್ಲ.

**ಪರಾಮರ್ಶನ ಗ್ರಂಥಗಳು:**

೦೧. ಮಲೆನಾಡಿನ ನಾಮಧಾರಿ ಒಕ್ಕಲಿಗರ ಒಂದು ಅಧ್ಯಯನ – ಅಂಬಳಿಕೆ ಹಿರಿಯಣ್ಣ,

೦೨. ಮಲೆಗಳಲ್ಲಿ ಮದುಮಗಳು – ಕುವೆಂಪು

೦೩. ಕುವೆಂಪು ಕಾದಂಬರಿಗಳಲಿ ಜನಪದ ಬದುಕು – ದೊಡ್ಡಮನಿ ಕೆ. ನ್

೦೪. ನೆನಪಿನ ದೋಣಿಯಲ್ಲಿ– ಕುವೆಂಪು

೦೫. ಕುವೆಂಪು ಕಾದಂಬರಿಗಳು – ಗುರುಪಾದ ಮರಿಗುದ್ದಿ.

# ಚಂದ್ರಗುತ್ತಿ ಸ್ತ್ರೀ ಪರ ಹೋರಾಟ ಮರುಚಿಂತನೆ

**ರಾಜೀವ ನಾಯ್ಕ ಎಸ್**

ದಲಿತ ಹೋರಾಟದ ಪರಿಕಲ್ಪನೆ ಆಧುನಿಕ ಸಮಾಜದ್ದಾದರೂ ಆಧುನಿಕ ಪೂರ್ವ ಸಮಾಜವು ಕೂಡ ಬದಲಾವಣೆಗೆ ತೆರೆದುಕೊಂಡಿತ್ತು. ಈ ಹಿನ್ನೆಲೆಯನ್ನು ಆಧರಿಸಿ ಹೇಳುವುದಾದರೆ. ಎಲ್ಲಾ ಬಗೆಯ ಸಾಮುದಾಯಿಕ ನಡವಳಿಕೆಗಳು ವ್ಯವಸ್ಥೆಯೊಂದರಲ್ಲಿ ಬದಲಾವಣೆ ತರುವುದು ಸಹಜವೆನಿಸುತ್ತದೆ.

ಅಂದರೆ ಒಂದು ಸಮುದಾಯದ ಆಚರಣೆಗಳು ಜನರ ದೃಷ್ಟಿಕೋನ ಬದಲಾದ ಜೀವನಕ್ರಮ ಅಪೇಕ್ಷಿಸುತ್ತದೆ. ತನ್ನನ್ನು ಹೊಂದಿ ಇತರರನ್ನು ಹೊಂದಿಸಿಕೊಳ್ಳುತ್ತದೆ. ಆದರೆ ಹೋರಾಟವೆನ್ನುವುದು ಬದಲಾವಣೆಗಾಗಿ ಸಮಷ್ಠಿ ಒತ್ತಾಯವನ್ನೂ ತರುವುದೇ ಆಗಿದೆ. ಈ ಹಿನ್ನಲೆಯನ್ನು ಆಧರಿಸಿ ಮಾನವ ಬದುಕಿನ ಹೋರಾಟ, ಬವಣೆ, ಬದಲಾವಣೆ ರೂಪುಗೊಂಡ ಸನ್ನಿವೇಶಗಳನ್ನು ನೋಡುವುದಾದರೆ ಈ ಮಾನವಜೀವಿ ಪ್ರಾಣಿ ಅವಸ್ಥೆಯಿಂದ ಮಾನವಾವಸ್ಥೆಗೆ ಬದಲಾದ ಸಂದರ್ಭದಲ್ಲೂ ಅವನು ಬೆತ್ತಲಾಗಿಯೇ ಇದ್ದ. ನಾಗರಿಕತೆಯು ಆವಿಷ್ಕಾರವಾದಂತೆ ಉಡುಗೆ ತೊಡುಗೆಗಳೊಂದಿಗಿನ ಮಾನವ ವಿಕಾಸದ ಪಥದಲ್ಲಿ ಪ್ರಕೃತಿ ಗಾಢವಾದ ಪ್ರಭಾವವನ್ನೂ ಬೀರತೊಡಗಿತು. ಪ್ರಕೃತಿಯಲ್ಲಿನ ನಿತ್ಯಕ್ರಿಯೆಗಳು ಅವನಿಗೆ ಭಯವನ್ನು ಆಶ್ಚರ್ಯವನ್ನು ಉಂಟುಮಾಡಿದವು. ಹೀಗಿರುವಾಗ ಮಾನವನು ಆಗೋಚರ ಶಕ್ತಿಗಳ ಬಗ್ಗೆ ನಂಬಿಕೆ ಇಟ್ಟು ಅವುಗಳನ್ನು ಸಂತೃಪ್ತಿ ಪಡಿಸಲು ಆರಾಧಿಸುವಲ್ಲೂ ನಿರತನಾದ ಅಂತಹ ಆಚರಣೆಗಳಲ್ಲಿ ಬೆತ್ತಲೆ ಸೇವೆಯು ಒಂದಾಗಿದೆ. ಹಾಗಾದರೆ ಈ ಆಚರಣೆ ಎಷ್ಟರ ಮಟ್ಟಿಗೆ ಸರಿ? ಸಮಾಜ ಸಮುದಾಯಗಳಿಗೆ ಇದು ಅಪಾಯಕಾರಿ ಪ್ರೇರಣೆ ಅಲ್ಲದೆ ಮತ್ತೇನು? ಅಲ್ಲವೆ? ಇಂಥ ಬೆತ್ತಲೆ ಸೇವೆ ಆಚರಣೆ ಕರ್ನಾಟಕದ ಹಲವಾರು ಕ್ಷೇತ್ರಗಳಲ್ಲಿ ಆಚರಣೆಯಲ್ಲಿರುವುದು ಕಂಡುಬರುತ್ತದೆ. ಈ ಆಚರಣೆ ಫಲವಂತಿಕೆಗಾಗಿ ನಡೆಯುವ ಆಚರಣೆಯಾಗಿದೆ ಎಂದಾಗ ಇಲ್ಲಿ ಸಾಮಾನ್ಯವಾಗಿ ಪ್ರಶ್ನೆ ಉದ್ಭವಿಸುತ್ತದೆ. ಅದೇನೆಂದರೆ ಬೆತ್ತಲೆಸೇವೆ ಮಾಡಿದರೆ ಫಲವಂತಿಕೆ ಪ್ರಾಪ್ತವಾಗುತ್ತದೆಯೇ? ಎಂಬುದನ್ನು ವೈಚಾರಿಕ ದೃಷ್ಟಿಯಲ್ಲಿ ನೋಡಬೇಕಾಗಿದೆ ಹಾಗೂ ನಿರಾಕರಿಸುವುದು ಸರಿ. ಉದಾ: ಶ್ರೀರಂಗಪಟ್ಟಣದಲ್ಲಿ ದಂಪತಿ ಸಹಿತವಾಗಿ ಮೆರವಣಿಗೆ ಹೊರಡುವ ಬೆತ್ತಲೆ ತಿಮ್ಮಪ್ಪ, ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ 'ಬಗದುರಿ ಎಲ್ಲಮ್ಮ'ನಿಗೆ ಬೆತ್ತಲೆ ಸೇವೆ ನಡೆಯುತ್ತಿದ್ದುದ್ದನ್ನು ಕಾಣಬಹುದು. ಮುಸ್ಲಿಮರ ಆಳ್ವಿಕೆಯ ಕಾಲದಲ್ಲೂ ಅದನ್ನು ನಿಲ್ಲಿಸಲಾಯಿತು. ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲ್ಲೂಕಿನ 'ಚಂಚೂರು ಮಾಪುರದೇವಿ ಮತ್ತು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ 'ಅರೋಲಿ ಹುಲಿಗೆಮ್ಮ ದೇವತೆಗೆ ಬೆತ್ತಲೆ ಸೇವೆ ಸಲ್ಲಿಸುವ ಅಚರಣೆಯಿತ್ತು. 1978 ರಲ್ಲಿ ದಲಿತ ಸಂಘರ್ಷ ಸಮಿತಿ ಬಂಡಾಯ ಸಾಹಿತ್ಯ ಸಂಘಟನೆಗಳ ಹೋರಾಟದ ಫಲವಾಗಿ ಬೆತ್ತಲೆ ಸೇವೆಯನ್ನು ನಿಲ್ಲಿಸಲಾಗಿದೆ. ಸವದತ್ತಿ ಎಲ್ಲಮ್ಮ, ಉಚ್ಚಂಗಿ ಎಲ್ಲಮ್ಮ ದೇವತೆಗಳಿಗೆ ಬೇವಿನುಡಿಗೆ ಅರೆಬೆತ್ತಲೆ ಸೇವೆ ನಡೆಯುತ್ತ ಬಂದಿದೆ. ಚಂದ್ರಗುತ್ತಿಯ ರೇಣುಕಾ ಯಲ್ಲಮ್ಮ ದೇವಿಗೆ ಸಲ್ಲಿಸುತ್ತಿದ್ದ ಬೆತ್ತಲೆ ಸೇವೆಯು ಪ್ರಸಿದ್ಧವಾಗಿತ್ತು. ಹೀಗಿದ್ದಾಗ ಸ್ತ್ರೀ ದೇವತೆಯನ್ನು ಸರ್ವಮಂಗಳ ಮುತ್ತೈದೆ, ಗೌರಿ ಎಂದೆಲ್ಲಾ ಗೌರವಿಸಿ ಪೂಜಿಸುವ ಜನಸಮುದಾಯವೇ ದೇವತೆಗೆ ಉಡುಣೆಯನ್ನುಡಿಸಿ ತಾವು ಬೆತ್ತಲಾಗುವುದರಲ್ಲಿ ಯಾವ ಅರ್ಥವಿದೆ? ಈ ಎಲ್ಲಾ ಪದವನ್ನು ಅರಿತ ಸಮಾಜ ಸುಧಾರಕ ಪ್ರೊ.ಬಿ.ಕೃಷ್ಣಪ್ಪನವರು ತಮ್ಮ ನೇತೃತ್ವದಲ್ಲಿ ನಡೆದ ದಲಿತ ಸಂಘರ್ಷ ಸಮಿತಿಯ ಹೋರಾಟದ ಫಲವಾಗಿ 1986ರಲ್ಲಿ ಬೆತ್ತಲೆ ಸೇವೆಯನ್ನು ನಿಲ್ಲಿಸಲಾಯಿತು. ಹಾಗಾಗಿ ಇದರ ಫಲವಾಗಿ ಅನೇಕ ಕ್ಷೇತ್ರಗಳಲ್ಲಿ ಬೆತ್ತಲೆ ಸೇವೆಯನ್ನು ನಿಷೇಧಿಸಲಾಯಿತು ಹಾಗೂ ನಿಲ್ಲಿಸಲಾಯಿತು. ಆದರೆ ಕೆಲವು ಕಡೆ ಬೆತ್ತಲೆ ಸೇವೆ ರಾತ್ರಿವೇಳೆ ಯಾರಿಗೂ ಕಾಣದಂತೆ ರಹಸ್ಯವಾಗಿ ನಡೆಯುತ್ತಿದೆ. ಕಾನೂನಿನ ಭಯದಿಂದ ಭಕ್ತರು ರಾತ್ರಿಯ ವೇಳೆಯಲ್ಲೂ ಬೆತ್ತಲೆ ಸೇವೆಯನ್ನು ಸಲ್ಲಿಸುತ್ತಾರೆಂದು ಸ್ಥಳೀಯ ಜನರು ಹೇಳುತ್ತಾರೆ ಎಂದಾಗ ನಮ್ಮ ಸಮುದಾಯದ ಮೌಢ್ಯತೆಗೆ ಏನೆಂದು ಪರಿಗಣಿಸುವುದು ಅಲ್ಲವೇ? ಶತಶತಮಾನಗಳಿಂದ ಜನರ ಮನದಲ್ಲೂ ಆಳವಾಗಿ ಬೇರೂರಿದ ಈ ಆಚರಣೆಯನ್ನು ಕಾನೂನಿನಿಂದ ಸಂಪೂರ್ಣ ತೊಡೆದು ಹಾಕಲು ಕ್ರಮ ಕೈಗೊಂಡರೂ ಸಾಧ್ಯವಿಲ್ಲವೆಂಬುದನ್ನು ಇಲ್ಲಿ ಅರಿತುಕೊಳ್ಳಬೇಕಾಗಿದೆ. ಇದು ಕಾನೂನು ಮಾಡಿ ಬದಲಾಗಬೇಕಾದ ಅನಿವಾರ್ಯ. ಅಲ್ಲೂ ಸ್ವತಃ ಇನ್ನೊಬ್ಬರನ್ನು ಕಂಡು ಜಾಗೃತಗೊಂಡ ನಮ್ಮ ಸಂಸ್ಕೃತಿ ಬಗ್ಗೆ ಹಾಗೂ ನಮ್ಮತನದ ಬಗ್ಗೆ ನಾವೇ ಅರಿತು ಸುಸಂಸ್ಕೃತರಾಗ ಬೇಕಾಗುತ್ತದೆ. ಇಂಥ ಬೆತ್ತಲೆ ಸೇವೆ ಆಚರಣೆಯು ಚಂದ್ರಗುತ್ತಿ ಗ್ರಾಮದಿಂದ ಸುಮಾರು ಮೂರು ಕಿ.ಮಿ. ದೂರದಲ್ಲಿ ವರದಾನದಿಯ ಬಳಿ

ನಡೆಯುತ್ತದೆ. ಈ ಕ್ಷೇತ್ರದ ಸಾಂಸ್ಕೃತಿಕ ಅನನ್ಯತೆಯನ್ನು ರೂಪಿಸುವಲ್ಲೂ ಈ ನದಿಯ ಪಾತ್ರ ದೊಡ್ಡದು. ಚಂದ್ರಗುತ್ತಿ ಕ್ಷೇತ್ರದ ಅಧಿದೇವತೆ ಶಕ್ತಿದೇವತೆ ರೇಣುಕಾ ಯಲ್ಲಮ್ಮನಿಗೆ ಗುತ್ಯಮ್ಮನೆಂತಲೂ ಕರೆಯುತ್ತಾರೆ. ರೇಣುಕಾ ಯಲ್ಲಮ್ಮ ದೇವತೆಗೆ ಬೆತ್ತಲೆಸೇವೆ ಸಲ್ಲಿಸುವ ಆಚರಣೆ ಬಹು ಹಿಂದಿನಿಂದಲೂ ನಡೆಯುತ್ತಾ ಬಂದಿದೆ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಪುರಾಣಗಳು, ಜನಪದ ಕತೆಗಳು ಮತ್ತು ಐತಿಹ್ಯಗಳು ಸುತ್ತಮುತ್ತಲ ಜನಪದರಲ್ಲೂ ಪ್ರಚಲಿತದಲ್ಲಿವೆ. ಈ ಪುರಾಣ ಮತ್ತು ಐತಿಹ್ಯಗಳು ಜನರಲ್ಲಿ ಬೆತ್ತಲೆ ಸೇವೆಯ ಬಗ್ಗೆ ಪವಿತ್ರ ಭಾವನೆ ಬರುವಂತೆ ಮಾಡಿ ಅದನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಪುರಾಣದಲ್ಲಿ ಹೇಳಿದಂತೆ ರೇಣುಕಾದೇವಿ ಬೆತ್ತಲಾಗಿ ಒಂದು ಗುಹೆಯಲ್ಲಿ ಆಶ್ರಯ ಪಡೆದುದರಿಂದ ಅವಳಿಗೆ ಬಂದ ಸಂಕಟ ಪರಿಹಾರವಾಯಿತು. ಆದ್ದರಿಂದ ತಾವು ಬೆತ್ತಲಾಗಿ ಬಂದು ಸೇವೆಯನ್ನು ಸಲ್ಲಿಸಿದರೆ ತಮಗೊದಗಿ ಬಂದ ಕಷ್ಟ ಕಾರ್ಪಣ್ಯಗಳು ದೂರವಾಗುತ್ತವೆಂಬುದು ಅಲ್ಲಿಯ ಜನರ ಭಾವನೆ. ಈ ಬೆತ್ತಲೆ ಸೇವೆಯನ್ನು ಕುರಿತು ದಾಸ ಪಂಥದ ದಾಸಶ್ರೇಷ್ಠ ಕನಕದಾಸರು ತಮ್ಮದೊಂದು ಕೀರ್ತನೆಯನ್ನು ಹಾಡಿದ್ದಾರೆ.

> ಸುತ್ತಣವರು ಮಾತು ಕೇಳಿ ಗುತ್ತಿ ಎಲ್ಲಮ್ಮನೊಲಿದು।
> ಬೆತ್ತಲೆ ದೇವರ ಮುಂದೆ ಬಲಿಯ ನೋಡಿರೋ।
> ಮತ್ತೆ ಮುಕ್ತಿಕಾಂಬೆವೆಂಬ ಆಸಕ್ತಿ ಬೇಡಿರೋ॥

ಎಂದು ಕನಕದಾಸರು ಬೆತ್ತಲೆಸೇವೆಯನ್ನು ಕಟುವಾಗಿ ವಿಡಂಬಿಸಿದ್ದಾರೆ. ಈ ಬೆತ್ತಲೆ ಸೇವೆ ಮಾಡಿ ಮುಕ್ತಿ ಪಡೆದೆವೆಂದು ಭಾವಿಸುವುದು ತಪ್ಪೆಂದೇ ಹೇಳಿದ್ದಾರೆ. ಹಾಗೆಯೇ 'ಬೆತ್ತಲೆಸೇವೆ ಮಾಡಬೇಡಿರೋ ಹುಚ್ಚಪ್ಪಗಳಿರಾ!' ಎಂದು ಛೇಡಿಸಿದ್ದಾರೆ.

ಈ ಬೆತ್ತಲೆ ಸೇವೆಗೆ ದೈವಿಕ ಮುಖವಿರುವಂತೆ ಮತ್ತೊಂದು ಮುಖವೂ ಇದೆ. ಬೆತ್ತಲೆ ಸೇವೆ ಮಾಡುವವರು ದಲಿತರು, ಹಿಂದುಳಿದವರು, ಅನಕ್ಷರಸ್ತರು. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರು ಮೇಲುವರ್ಗದ ಬ್ರಾಹ್ಮಣರು ಬೆತ್ತಲೆ ಸೇವೆ ಮಾಡಿದ್ದು ಇತಿಹಾಸದಲ್ಲಿ ಸಿಗುವುದಿಲ್ಲ. ಆದ್ದರಿಂದ ಬೆತ್ತಲೆ ಸೇವೆಯ ಆಚರಣೆಯ ಹಿಂದೆ ಮೇಲುವರ್ಗದವರ ಕೈವಾಡವಿದೆ. ಮೇಲುವರ್ಗದವರು ಕೆಳವರ್ಗದ ಜನರಲ್ಲಿ ಅಂಧಾನುಕರಣೆ ಮೂಢನಂಬಿಕೆಗಳನ್ನು ಬಿತ್ತಿ ದೈವದ ಹೆಸರಿನಲ್ಲೂ ಬೆತ್ತಲೆ ಸೇವೆಯನ್ನು ಮಾಡಿಸುತ್ತಾರೆ. ಬೆತ್ತಲೆ ಸೇವೆ ಮಾಡುವ ಹೆಣ್ಣುಗಳಲ್ಲೂ ಹಲವರು ಮುತ್ತು ಕಟ್ಟಿಸಿಕೊಳ್ಳುತ್ತಾರೆ. ಇವರು ದೇವರಿಗೆ ಅರ್ಪಿತವೆಂದೇ ಅರ್ಥ, ಹೀಗೆ ದೇವರಿಗೆ ಅರ್ಪಿತವಾದ ಈ ಹೆಣ್ಣು ಮೇಲುವರ್ಗದ ಶ್ರೀಮಂತರ ಊರಿನ ಮುಖಂಡನೊಂದಿಗೆ ಲೈಂಗಿಕ ಸಂಪರ್ಕವನ್ನು ಪಡೆಯಬೇಕು. ಇದು ಮೇಲುವರ್ಗದವರು ಹೂಡಿಕೊಂಡ ತಂತ್ರವಾಗಿದೆ. ಅಸ್ಪೃಶ್ಯರು ಮುಟ್ಟಿದರೆ ಮೈಲಿಗೆಯಾಗುವ, ಅಸ್ಪೃಶ್ಯರ ಹೆಣ್ಣು ಮಕ್ಕಳನ್ನೇ ಏಕೆ ಈ ಬೆತ್ತಲೆ ಸೇವೆಗೆ ಹರಕೆ ಬಿಡುವ ಪದ್ಧತಿಯನ್ನು ಹೆಚ್ಚು ರೂಢಿಗೆ ತಂದರು? ಇಲ್ಲಿ ಉಳ್ಳವರ ಕುತಂತ್ರಗಳೇ ಮುಖ್ಯವಾಗಿ ದಲಿತರ ಕೊರಳಿಗೆ ಕಟ್ಟಲ್ಪಟ್ಟಿವೆ. ಸುಂದರ ಹೆಣ್ಣನ್ನು ಬೆತ್ತಲಾಗಿಸಿ ನೋಡುವ ನಾಟಕವಾಡುವುದರ ಜೊತೆಗೆ ವ್ಯಾಪಾರೀಕರಣಕ್ಕೆ ಒಡ್ಡುವಂತಹದು ಇದೆ.

ಯಾವುದೇ ಸ್ವಇಚ್ಛೆಯಿಂದ ಭಕ್ತಿಪೂರ್ವಕವಾಗಿ ಈ ಸೇವೆಯನ್ನು ಮಾಡುವವರು ವಿರಳಾತಿವಿರಳ. ಒತ್ತಡ, ಒತ್ತಾಯ, ಹರಕೆಗಳಿಗೆ ಒಲ್ಲದ ಮನಸ್ಸಿಂದ ಒಪ್ಪಿಕೊಳ್ಳುವ ಹರಕೆ ಈಡೇರಿಸುವವರು ಕಾಣಬಹುದು. ಇಲ್ಲಿ ಯಾರೋ ಕಟ್ಟಿಕೊಂಡ ಹರಕೆಗೆ ಯಾರೋ ಬೆತ್ತಲಾಗುವ ಸಂದರ್ಭಗಳೇ ಹೆಚ್ಚು. ಈ ಸಮಾಜ ವಿರೋಧಿ ಆಚರಣೆಗೆ ಹಲವು ಕಾರಣಗಳು ಇರಬಹುದು. ಅನಕ್ಷರತೆ, ಮೂಢನಂಬಿಕೆ, ಅಜ್ಞಾನಗಳು ಆರ್ಥಿಕ ತೊಂದರೆಗಳು ಕಾರಣವಾಗಿರುವ ಸಂಗತಿ ಇದೆ. ಹಾಗಾಗಿ ಈ ಬೆತ್ತಲೆ ಸೇವೆ ಎನ್ನುವುದು ಸಮಾಜದ ಕಪ್ಪು ಚುಕ್ಕಿ. ಇದನ್ನು ತಡೆಯುವುದು, ಹೋಗಲಾಡಿಸುವುದು ಪ್ರಜ್ಞಾವಂತರಾದ ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಇಂತಹ ಸಾಮಾಜಿಕ ಮೌಢ್ಯ ಆಚರಣೆಗಳನ್ನು ತಡೆಯಲು ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ. ಹಾಗೂ ಇದು ದುರಂತವೂ ಕೂಡ.

1986ರಲ್ಲಿ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾದ ಪ್ರೊ.ಬಿಕೃಷ್ಣಪ್ಪನವರು ಚಂದ್ರಗುತ್ತಿಯಲ್ಲಿ ನಡೆಯುತ್ತಿರುವ ಬೆತ್ತಲೆ ಸೇವೆ ನಾಗರಿಕ ಸಮಾಜಕ್ಕೆ ಕಳಂಕ ಪ್ರಾಯವಾದುದೆಂದು ತಿಳಿದು ಕಾರ್ಯಕಾರಿ ಸಮಿತಿಯಲ್ಲಿ ಈ

ವಿಷಯ ಪ್ರಸ್ತಾಪ ಮಾಡಿ ಕರ್ನಾಟಕದಾದ್ಯಂತ ಹೋರಾಟಕ್ಕೆ ತಯಾರಿ ನಡೆಸಲಾಯಿತು. ಇದಕ್ಕೆ ಪೂರಕವಾಗುವಂತೆ ಸಮಾಜ ಕಲ್ಯಾಣ ಇಲಾಖೆಯ ಸಹಕಾರವನ್ನು ಪಡೆದು ಸೊರಬ ತಾಲ್ಲೂಕಿನಾದ್ಯಂತ ಬೀದಿನಾಟಕ, ಸಭೆಗಳನ್ನು ನಡೆಸುವುದರ ಮೂಲಕ ಜನರಿಗೆ ಅರಿವನ್ನು ಮೂಡಿಸಲಾಯಿತು. ಇದರ ಹಿಂದಿನ ಕುತಂತ್ರ ಬಯಲುಮಾಡಿದಾಗ ಅನೇಕರು ಆಶ್ಚರ್ಯಪಟ್ಟರು ಹಾಗೂ ಕೈಬಿಡಲು ನಿರ್ಧರಿಸಿದರು.

1986 ಮಾರ್ಚ್ 19, 20, 21 ಚಂದ್ರಗುತ್ತಿಯಲ್ಲಿ ಜಾತ್ರೆಯ ಸಡಗರ. ಈ ವೇಳೆಯಲ್ಲಿ ಪ್ರಾರಂಭದ ಎರಡೂ ದಿನಗಳಲ್ಲಿ ಬೆತ್ತಲೆ ಸೇವೆ ನಡೆಯುತ್ತದೆ. ಶಿವಮೊಗ್ಗ, ಧಾರವಾಡ, ಹಾವೇರಿ, ಗದಗ, ಉತ್ತರ ಕರ್ನಾಟಕ ಜಿಲ್ಲೆಗಳ ಹಾಗೂ ನಾನಾ ಭಾಗಗಳಿಂದ ಬೆತ್ತಲೆ ಸೇವೆಯ ಹರಕೆ ಹೊತ್ತ ಲಕ್ಷಾಂತರ ಜನರು ಚಂದ್ರಗುತ್ತಿ ಜಾತ್ರೆ ಸೇರುತ್ತಾರೆ. ಮಾರ್ಚ್ 18 ರಂದೇ ಪ್ರೊ.ಬಿ.ಕೃಷ್ಣಪ್ಪ ತಮ್ಮ ಕಾರ್ಯಕರ್ತರೊಂದಿಗೆ ಬೆತ್ತಲೆ ಸೇವೆಯನ್ನು ತಡೆಯಲು ಅಲ್ಲಿ ಸಮೀಪದ ಪರಿಚಿತರ ಮನೆಯಲ್ಲಿ ತಂಗಿದ್ದರು. ಬೆತ್ತಲೆಯಾಗುವ ಮಹಿಳೆಯರಿಗೆ ವಸ್ತ್ರ ಉಡಿಸುವ, ಅವರೊಂದಿಗೆ ವರ್ತಿಸುವ ರೀತಿಯನ್ನು ಬೋಧಿಸಿ ತರಬೇತಿಗೊಳಿಸಿದರು. 1986 ಮಾರ್ಚ್ 19ನೇ ಬೆಳಗಿನ ಜಾವ ವರದಾನದಿಯ ದಂಡೆಗೆ ಪ್ರೊ.ಬಿ.ಕೃಷ್ಣಪ್ಪನವರು ನೂರಾರು ಜನ ಕಾರ್ಯಕರ್ತರೊಂದಿಗೆ ಅಲ್ಲಿ ಹಾಜರಾಗಿದ್ದರು. ಆ ವೇಳೆಗೆ ಸ್ನಾನ ಮುಗಿಸಿ ಬೆತ್ತಲಾಗುತ್ತಿದ್ದ ಮಹಿಳೆಯರ ಬಳಿಗೆ ಧಾವಿಸಿ "ತಾಯಂದಿರೆ ಬೆತ್ತಲಾಗಬೇಡಿ. ದೇವರು ತನ್ನ ಮಕ್ಕಳನ್ನು, ಭಕ್ತರನ್ನು ಬೆತ್ತಲಾಗಿ ಬನ್ನಿ ಎಂದು ಎಂದೂಕೂಡ ಹೇಳಿಲ್ಲಾ, ಹೇಳಲಾರ. ನೀವು ಬಟ್ಟೆ ಧರಿಸಿಯೇ ದೇವರ ಪೂಜೆಮಾಡಿ. ಎಂದು ವಿನಂತಿಸಿಕೊಂಡರು. ಇದಕ್ಕೆ ಹಲಕೆಲವು ಸಮ್ಮತಿ ಅಸಮ್ಮತಿ ದೊರೆತವು. ಆದರೆ ಮಾರ್ಚ್ 20ರಂದು ಅಪಾರ ಜನಸ್ತೋಮ ಧಾವಿಸಿತು. ಆಗ ಪ್ರೊ.ಬಿ.ಕೃಷ್ಣಪ್ಪ ಹಾಗೂ ಅವರ ಕಾರ್ಯಕರ್ತರು ಹಿಂದಿನ ದಿನದಂತೆ ಕಾರ್ಯಪ್ರವೃತ್ತರಾದರು ಕೂಡ ಫಲಕಾರಿ ಆಗಲಿಲ್ಲ. ಇದಕ್ಕೆ ವಿರೋಧ ವ್ಯಕ್ತಪಡಿಸಿ ಉಗ್ರರೂಪ ಪಡೆದು ಇವರ ವಿರುದ್ಧವೇ ಹೋರಾಟಗಳಾಗಿ ತಪ್ಪಿಸಿಕೊಳ್ಳಬೇಕಾದಂತಹ ಸನ್ನಿವೇಶ ಒದಗಿ ಬಂದಿತು. ಪೋಲಿಸ್ ಸಿಬ್ಬಂದಿಗಳು ಅನಾಹುತ ಎದುರಿಸುವಂತಾಯಿತು. ಹೀಗಿರುವಾಗ ಇದನ್ನು ಸವಾಲಾಗಿ ಸ್ವೀಕರಿಸಿದ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಜೀವದ ಹಂಗು ತೊರೆದು ಹೋರಾಡಿದ್ದು ಸ್ತುತ್ಯಾರ್ಹವಾದುದು. ಪೋಲಿಸರನ್ನೇ ಬೆತ್ತಲುಗೊಳಿಸಿದ ಸಮಾಜ ವಿರೋಧಿಗಳ ವಿರುದ್ಧ ಸರ್ಕಾರ ತೀರ್ವತರವಾದ ಕ್ರಮ ಕೈಗೊಂಡಿತು. ಸರ್ಕಾರ ಜಾತ್ರೆಯನ್ನು ನಿಷೇಧಗೊಳಿಸಿ ಆದೇಶ ಹೊರಡಿಸಿತು. ಅಂದಿನಿಂದ ಭಕ್ತಾದಿಗಳು ಉಡುಗೆಯಲ್ಲಿ ಬಂದು ಹರಕೆ ತೀರಿಸಲು ಅವಕಾಶ ಕಲ್ಪಿಸಲಾಗಿದೆ. ಬೆತ್ತಲೆ ಸೇವೆ ಮಾಡದಂತೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಂಡಿದ್ದಾರೆ.

ಶತಶತಮಾನಗಳಿಂದ ನಮ್ಮ ಸಮಾಜದಲ್ಲಿ ಬೇರುಬಿಟ್ಟಿದ್ದ ಅಸ್ಪೃಶ್ಯತೆ, ದೇವದಾಸಿ ಪದ್ಧತಿಗಳನ್ನು ನಿಲ್ಲಿಸಲು ಸರ್ಕಾರ ಆದೇಶ ಮಾಡಿದೆ. ಆದರೆ ಪೂರ್ಣಪ್ರಮಾಣದಲ್ಲಿ ನಿಂತಿಲ್ಲವೆಂಬುದು ಎಲ್ಲರಿಗೂ ತಿಳಿದಿದೆ. ಹಾಗಾಗಿ ಸರ್ಕಾರ ಕೇವಲ ಕಾನೂನು ಮಾಡಿದರೆ ಸಾಲದು ಇಂತಹ ಅನಿಷ್ಟ ಪದ್ಧತಿ ಆಚರಣೆಗೆ ಕಾರಣವಾಗಿರುವ ಅಜ್ಞಾನ, ಮೂಢನಂಬಿಕೆಗಳನ್ನೂ ತೊಡೆದು ಹಾಕಬೇಕು. ಹೆಚ್ಚು ಜನರನ್ನು ಸಾಕ್ಷರರನ್ನಾಗಿ ಮಾಡಬೇಕು.

ಆರ್ಥಿಕವಾಗಿ ಹಿಂದುಳಿದಿರುವ ಜನರಿಗೆ ಬೇರೆಬೇರೆ ಯೋಜನೆಗಳನ್ನು ಹಾಕಿಕೊಂಡು ಮೇಲೆ ಬರುವಂತೆ ಪ್ರೇರೇಪಿಸಬೇಕು. ಉಳಿಗಮಾನ್ಯ ಪದ್ಧತಿ ನಿರ್ಮೂಲನೆ ಮಾಡಿ ಇಂತಹ ಪಾಪಕೃತ್ಯಕ್ಕೆ ಪ್ರೋತ್ಸಾಹಿಸುವವರಿಗೆ ಶಿಕ್ಷೆ ವಿಧಿಸಬೇಕು. ಬೆತ್ತಲೆ ಸೇವೆಗೆ ಪ್ರಚೋದಿಸುವ ಜೋಗತಿಯರಿಗೆ ತಿಳಿವನ್ನು ಮೂಡಿಸಿ ಪುನರ್ವಸತಿ ಕಲ್ಪಿಸಿಕೊಡಬೇಕು ಹಾಗಾದಾಗ ಮಾತ್ರ ಪೂರ್ಣ ಪ್ರಮಾಣದಲ್ಲಿ ಬೆತಲೆ ಸೇವೆಯನ್ನು ತೊಡೆದುಹಾಕಲು ಸಾಧ್ಯವಾದೀತು.

ಒಟ್ಟಾರೆಯಾಗಿ ಸುಸಂಸ್ಕೃತವಾದ, ಪ್ರಜ್ಞಾವಂತರಾದ, ಶ್ರೀಮಂತ ಸಂಸ್ಕೃತಿಯನ್ನು ಆರಾಧಿಸುವ ನಮ್ಮ ಕರ್ನಾಟಕದಲ್ಲಿ ದೇವದಾಸಿ ಪದ್ಧತಿ, ಬಸವ ಪದ್ಧತಿ, ಜೋಗತಿಯ ಪದ್ಧತಿಗಳು, ಸಾಮಾಜಿಕ ಅನಿಷ್ಟಗಳು ಚಂದ್ರಗುತ್ತಿಯ ಬೆತ್ತಲೆ ಸೇವೆಯ ಆಚರಣೆಯು ಅನಿಷ್ಟಗಳ ಸಾಲಿಗೆ ಸೇರಿದ್ದಾಗಿದೆ. ಬೆತ್ತಲೆ ಸೇವೆಯಂತಹ ಅನಿಷ್ಟ ಪದ್ಧತಿಯು ಸಂಸ್ಕೃತಿಯಲ್ಲಿ ಪ್ರಾಚೀನವಾದುದು ಎಂದ ಮಾತ್ರಕ್ಕೆ ಅದನ್ನು ಉಳಿಸಿಕೊಳ್ಳಬೇಕೆಂಬ ಯು.ಆರ್.ಅನಂತಮೂರ್ತಿ ಅವರ ಅಭಿಪ್ರಾಯವನ್ನು ಕುರಿತು ಚನ್ನಣ್ಣ ವಾಲೀಕಾರರು ಖಂಡಿಸಿದ್ದಾರೆ. ಆದರೆ ಅವರು ಇಲ್ಲಿ ಯು.ಆರ್.ಅನಂತಮೂರ್ತಿ ಅವರು ಮಾಡಿರುವ ತರ್ಕ ಆಲೋಚಿಸುವಂತಿದೆ. ಮೇಲ್ಜಾತಿಯವರ ಬೆತ್ತಲೆ ಸೇವೆಯಿಂದ ಅವರಿಗೆ ಹಾನಿ ಇಲ್ಲ ಲಾಭವಿದೆ. ಆದರೆ ಕೆಳಜಾತಿಯವರು ಬೆತ್ತಲೆ ಸೇವೆ ಮಾಡುವುದರಿಂದ ಜನಾಂಗಕ್ಕೆ ಅಪಾರ ಹಾನಿ ಇದೆ. ಮೌಢ್ಯದಿಂದ ಬಡತನದಲ್ಲಿ

ಸಾಯುವುದು, ಜೋಗತಿಯಾಗಿ, ಬಸವಿಯಾಗಿ, ಸೂಳೆಯಾಗಿ ಸಾಯುವುದು, ದೇವದಾಸಿ ಹೋಗಿ ಉಳ್ಳವರ ಭೋಗದಾಸಿಯಾಗಿ ಜೀವನಪರ್ಯಂತ ಅವರ ಹಾಸಿಗೆಯಾಗಿ ಬಾಳುವುದು ಕಣ್ಣೀರಿನ ಕಡಲ ಕಥೆಯಾಗಿದೆ. ಜಗತ್ತಿನೆಲ್ಲಾ ಧರ್ಮಗಳು ಪಾಪಿಗಳನ್ನು ಉದ್ಧರಿಸಲು ಬಂದಿರುವಾಗ, ಕಣ್ಣೀರು ತಡೆಯಲು ಪ್ರಯತ್ನಿಸುವಾಗ ಎಲ್ಲಮ್ಮನ ಹೆಸರಲ್ಲಿ ಈ ಅನಿಷ್ಟ ಪದ್ಧತಿಯನ್ನು ಪೋಷಿಸಿಕೊಂಡು ಬರುತ್ತಿರುವ ಮೂಲಾರ್ಥವೇನು? ಎಂದು ಪ್ರಶ್ನಿಸಿದ್ದಾರೆ. ಈ ಪದ್ಧತಿಯು ಕೇವಲ ಆಚರಣೆಯಾಗಿ ಉಳಿದಿಲ್ಲ. ಒಟ್ಟು ಸಮಾಜವನ್ನು ದುರಂತಕ್ಕೆ ತಳ್ಳುವ ಪ್ರಗತಿ ವಿರೋಧಿಗಳಾಗಿವೆ. ಆದ್ದರಿಂದಲೇ ಇಂತಹ ಆಚರಣೆಗಳನ್ನು ತಡೆಯಬೇಕೆನ್ನುವುದು ಎಲ್ಲಾ ಪ್ರಗತಿಪರರ ಅಭಿಪ್ರಾಯವಾಗಿದೆ.

ಒಟ್ಟಿನಲ್ಲಿ ಕಂದಾಚಾರ, ಮೂಢನಂಬಿಕೆಯ ಆಗರವಾದ ನಮ್ಮ ಸಮಾಜದಲ್ಲಿ ಪ್ರಸ್ತುತ ಸಮಾಜಕ್ಕೆ ಹೊಂದಿಕೆಯಾಗದ ಹಲವಾರು ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿವೆ. ಈ ಸಮಾಜಕ್ಕೆ ಇಂದು ಬೇಕಾಗಿರುವುದು ಶಿಕ್ಷಣ, ನಿರುದ್ಯೋಗ ನಿವಾರಣ ವೈಚಾರಿಕ ಅರಿವು ಪ್ರಾಪಂಚಿಕ ಜ್ಞಾನದ ಅರಿವು ವಿಜ್ಞಾನ ತಂತ್ರಜ್ಞಾನಗಳ ತಿಳುವಳಿಕೆ ಮೂಡಿಸುವ ಕೆಲಸವಾಗಬೇಕಿದೆ.

**ಪರಾಮರ್ಶನ ಗ್ರಂಥಗಳು:**


1. ಅಗ್ರಹಾರ ಕೃಷ್ಣಮೂರ್ತಿ, ಬೆಳ್ದಿಂಗಳ್ಳಪ್ಪನ ಪೂಜೆ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂ–1999.
2. ಕಮಲಾ ಹೆಮ್ಮಿಗೆ, ಸವದತ್ತಿ ಯಲ್ಲಮ್ಮ ಹಾಗೂ ದೇವದಾಸಿ ಪದ್ಧತಿ ವಿಮೋಚನಾ ಪ್ರಕಾಶನ. ಅಥಣಿ, ಬೆಳಗಾವಿ–1998.
3. ಅನಂತಮೂರ್ತಿ ಯೂ.ಆರ್, ಬೆತ್ತಲೆ ಪೂಜೆ ಯಾಕೆ ಕೂಡದು? ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ–1998.
4. ಕೃಷ್ಣಪ್ಪ.ಬಿ ಕೃಷ್ಣಪ್ಪ, ಚಿಂತನೆಗಳು ಮತ್ತು ಬರಹಗಳು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂ–1999.
5. ಜೋಗನ್ ಶಂಕರ್, ದೇವದಾಸಿ ಸಂಪ್ರದಾಯ ವಿಮೋಚನಾ ಪ್ರಕಾಶನ. ಅಥಣಿ, ಬೆಳಗಾವಿ.
6. ಓಂಕಾರನಾಯ್ಕ ಹೆಚ್, (ಸಂಶೋಧನಾ ಪ್ರಬಂಧ) ಚಂದ್ರಗುತ್ತಿ ಕ್ಷೇತ್ರದ ಜಾನಪದೀಯ ಅಧ್ಯಯನ.
7. ಡಾ.ಹಾಲತಿ ಸೋಮಶೇಖರ, ಕರ್ನಾಟಕ ದಲಿತ ಚಳುವಳಿಯಲ್ಲಿ ಮಹಿಳೆ.
8. ಡಾ.ಎ.ಉಷಾ, ಮಹಿಳಾ ಚಳವಳಿ ಮತ್ತು ಮಹಿಳಾ ವಿಷಯಗಳು ಕನ್ನಡ ವಿಶ್ವವಿದ್ಯಾಲು, ಹಂಪಿ.
9. ಡಾ.ಬಿ.ಎಸ್. ಸುಮಿತ್ರಾಬಾಯಿ, ಸ್ತ್ರೀ ವಾದ.
10. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ಕನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.

# ಮಲೆಯೊಡಲ ರುಚಿ ರಹಸ್ಯ

**ಆಶಾರಾಣಿ.ಎಂ.ಪಿ**

ಭಾರತವೊಂದು ತಾಳ್ಮೆಯ ದೇಶವೆಂದು ಕೇಳಿರುವುದುಂಟು. ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ, ಎಂಬ ಕುವೆಂಪುರವರ ವಾಣಿಯಂತೆ ಮಲೆನಾಡಿನ ಮೋಡಿಗೆ ಕುವೆಂಪು ಗ್ರಹಿಸಿರುವ ಮಲೆನಾಡು ಎಷ್ಟೊಂದು ರಮಣೀಯ, ಸೌಂದರ್ಯದ ಗಣಿ, ಸಹ್ಯಾದ್ರಿಯ ಸೂರ್ಯೋದಯ, ಸೂರ್ಯಾಸ್ತ, ಸಮಸ್ತ ಸಸ್ಯ ಜೀವ ಸಂಕುಲಗಳ ತೌರು ಮಲೆನಾಡು. ಈ ಪ್ರಕೃತಿ ಸೊಬಗಿನ ನಡುವೆಯೂ ಅವರಿಸಿರುವ ಮಲೆನಾಡಿನ ಹೆಂಗಸರು ತಮ್ಮ ಕೈಚಳಕದ ಮೂಲಕ ಇಡೀ ಜಗತ್ತಿಗೇ ವಿಶೇಷವಾದ ರುಚಿರುಚಿಯ ವಿಭಿನ್ನ ಆಹಾರ ಪದಾರ್ಥಗಳನ್ನು ತಯಾರಿಸಿ ಅದರ ಸ್ವಾದವನ್ನು ನೆನಪಿಸಿಕೊಂಡ ಕೂಡಲೇ ಬಾಯಲ್ಲಿ ನೀರೂರಿಸುವಂತೆ ಮಾಡಿದ ಮಲೆನಾಡಿನ ಹೆಂಗಳತಿಯರ ಕಿರು ಪರಿಚಯವನ್ನು ಮಾಡಿಸಲೆತ್ನಿಸಿದ್ದೇನೆ.

ಅಡುಗೆ ಪದ್ಧತಿ ಒಂದು ನಾಡಿನ ಸಂಸ್ಕೃತಿಯ ಅನೇಕ ಅಂಶಗಳನ್ನು ಹೊರಗೆಡಹುತ್ತದೆ. ಅಡುಗೆಗೆ ಬಳಸುವ ವಸ್ತುಗಳು, ತಯಾರಿಕೆಯ ವಿಧಾನ, ಉಪಯೋಗಿಸುವ ಬಗೆ, ಶೇಖರಿಸಿಡುವ ರೀತಿ, ಅಡುಗೆಗಳ ಹೆಸರುಗಳು ದೇಶದಿಂದ ದೇಶಕ್ಕೆ ಸಮಾಜದಿಂದ ಸಮಾಜಕ್ಕೆ ಸ್ಥಳದಿಂದ ಸ್ಥಳಕ್ಕೆ ಕಾಲದಿಂದ ಕಾಲಕ್ಕೆ ಬೇರೆಯಾಗುತ್ತವೆ. ಒಂದು ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡ ಒಂದು ಸಮಾಜ ತನಗೆ ವಿಶಿಷ್ಟವಾದ ಒಂದು ಪರಂಪರೆಯನ್ನು ನಿರ್ಮಿಸಿಕೊಳ್ಳುತ್ತದೆ.

ಮಲೆನಾಡಿನ ಅಡುಗೆ ಪದ್ಧತಿ ಸಾಂಪ್ರದಾಯಿಕವಾದುದಾಗಿದ್ದು ಸ್ಥಳೀಯ ಗುಣವನ್ನು ಹೊಂದಿದೆ. ಮುಖ್ಯವಾಗಿ ಮೂರು ರೀತಿಯ ಅಡುಗೆ ತಯಾರಿಕೆಯೆಂದು ಗುರ್ತಿಸಬಹುದಾಗಿದೆ.

೦೧. ನಿತ್ಯದ ಅಡುಗೆಗೆಳು,
೦೨. ಹಬ್ಬದ ಅಡುಗೆಗಳು,
೦೩. ಮದುವೆ, ತಿಥಿ ಇತ್ಯಾದಿ ಸಂದರ್ಭದ ಅಡುಗೆಗಳು.

**ನಿತ್ಯದ ಅಡುಗೆ:**

ಮಲೆನಾಡಿನ ಜನರ ದಿನನಿತ್ಯದ ಅಡುಗೆ ಸರಳವಾದದ್ದು. ಗದ್ದೆ, ತೋಟಗಳಲ್ಲಿ ದುಡಿಯಲು ಶಕ್ತಿಯೊದಗಿಸುವಂಥ ಆಹಾರ ಪದಾರ್ಥಗಳನ್ನು ಸೇವಿಸುತ್ತಾರೆ. ಬಯಲು ಸೀಮೆಯವರಿಗೆ ರಾಗಿ ರೊಟ್ಟಿ ಮತ್ತು ಮುದ್ದೆ ಪ್ರಿಯವಾದಷ್ಟೇ ಇವರಿಗೆ ಅನ್ನ, ಅಕ್ಕಿ ಹಿಟ್ಟಿನ ಕಡುಬು, ರೊಟ್ಟಿ ಪ್ರಿಯವಾಗಿವೆ. ಇವರ ಮುಖ್ಯ ಆಹಾರ ಅನ್ನ, ಅಕ್ಕಿಗಂಜಿ, ಅಕ್ಕಿ ಹಿಟ್ಟಿನ ಕಡುಬು, ರೊಟ್ಟಿ, ದೋಸೆ, ಚಟ್ನಿ, ಕುಟ್ಟುಂಡೆ, ಗೊಜ್ಜು, ಇವಕ್ಕೆ ನಂಚಿಕೆಗಳು, ಕಾಡು ಪ್ರಾಣಿಗಳ ಮಾಂಸದ ಸಾರು, ಬಿದರಿನ ಕಳಲೆ, ಸೊಪ್ಪು ಇತ್ಯಾದಿ.

ಚಟ್ನಿಯನ್ನು ಕಡಲೆ, ಎಳ್ಳು, ಹೆಸರು, ಹುರುಳಿಕಾಳುಗಳಿಂದ, ನುಗ್ಗೆಸೊಪ್ಪು, ಚಗಟೆ ಸೊಪ್ಪು, ಮುಂತಾದ ಸೊಪ್ಪುಗಳಿಂದ ತಯಾರಿಸಲಾಗುವುದು. ಕಾಳು, ಸೊಪ್ಪು, ಏನನ್ನೂ ಬಳಸದೆ ತುರಿದ ತೆಂಗಿನ ಕಾಯಿಗೆ ಬೆಳ್ಳುಳ್ಳಿ ಜೀರಿಗೆ ಹುಣಸೇ ಹಣ್ಣು ಉಪ್ಪು ಸೇರಿಸಿ ನೀರು ಬೆರಸದೆ ತೆಂಗಿನಕಾಯಿ ಚಟ್ನಿ ತಯಾರಿಸಲಾಗುವುದು. ಹಲಸಿನಕಾಯಿ, ಬದನೆಕಾಯಿ ಮುಂತಾದ ತರಕಾರಿಗಳಿಂದ ಗೊಜ್ಜು ತಯಾರಿಸುತ್ತಾರೆ. ಹಲಸಿನ ಬೀಜ ಅಥವಾ ಎಳ್ಳನ್ನು ಹುರಿದು ಅದಕ್ಕೆ ಬೆಳ್ಳುಳ್ಳಿ ಒಣಮೆಣಸಿನಕಾಯಿ, ಕಾಳುಮೆಣಸು ಮತ್ತು ಉಪ್ಪು ಸೇರಿಸಿ ಕುಟ್ಟಿ ಪುಡಿ ಮಾಡಿದರೆ ಅದೇ **'ಕುಟ್ಟುಂಡೆ'**

ಸಾರುಪಲ್ಯಗಳಿಗೆ ಇವರು ಕಾಯಿ, ಕಾಳು, ನಾರುಬೇರು, ಗೆಡ್ಡೆ, ಸೊಪ್ಪುಗಳನ್ನು ವಿಶೇಷವಾಗಿ ಬಳಸುತ್ತಾರೆ. ಅಲಸಂದೆ, ಹಸಿಕಡ್ಲೆ, ಅವರೆಕಾಳು, ಕೆಸುಬಿನಗೆಡ್ಡೆ, ಕೆಸುವಿನ ಚೀಪು, ಬೆಲಗೆಣಸು, ಸುವರ್ಣಗೆಡ್ಡೆ, ಗೆಡ್ಡಗೆಣಸು, ಬಾಳೆದಿಂಡು, ಬಸಳೆ ಸೊಪ್ಪು, ಹರಿವೆ ಸೊಪ್ಪು, ಮುಳ್ಳಿಸೊಪ್ಪು, ಇಲಿಕಿವಿಸೊಪ್ಪು, ಕರಡಿಸೊಪ್ಪು, ಚಿಟ್ಟೆ ಸೊಪ್ಪು, ಕೆಸುವಿನ ಸೊಪ್ಪು, ವನಗೆಣ್ಣೆ, ಸುರಬೆಕುಡಿ, ಹೀರೆ, ಬೆಂಡೆ, ಬದನೆ, ಹಾಗಲ, ತಿಂಗಳವರೆ, ತೊಂಡು, ಬಾಳೆಕಾಯಿ, ಸೌತೆಕಾಯಿ,

ಕುಂಬಳಕಾಯಿ, ಚೀನಿಕಾಯಿ, ಅಕ್ಕಿ ಅಣಬೆ, ಹೆಗ್ಗಾಲಣಬೆ, ಚುಳ್ಳಣಬೆ, ಶಾಸರ್ಕನಣಬೆ, ತ್ಯಾವೆ ಕಳಲೆ, ಬಿದಿರುಕಳಲೆ, ವಾಟೆ ಕಳಲೆ, ಈ ಎಲ್ಲಾ ಬಗೆಯ ತರಕಾರಿ ಪಲ್ಯ ಸಾರುಗಳನ್ನು ತಯಾರಿಸಲು ಒಂದೇ ವಿಧಾನವನ್ನು ಅನುಸರಿಸಲಾಗುವುದು. ಮಳೆಗಾಲದ ದಿನಗಳಲ್ಲಿ ಪಲ್ಯ, ಪಲ್ಯಸಾರುಗಳನ್ನು ತಯಾರಿಸಲು ಹೆಚ್ಚು ಕಾಲಾವಕಾಶ ಇರುವುದಿಲ್ಲವಾದ್ದರಿಂದ ಬೇಗ ಅಣಿಗೊಳ್ಳುವ **'ಆಮ್ರ'**ದ ತಯಾರಿಕೆ ಆ ದಿನಗಳಲ್ಲಿ ಸಾಮಾನ್ಯ.

ಇಲಿಕಿವಿಸೊಪ್ಪು ಮತ್ತು ಚಗಟೆ ಸೊಪ್ಪುಗಳನ್ನು ಈ ಉದ್ದೇಶಕ್ಕಾಗಿ ಬಳಸಲಾಗುವುದು. ಸೊಪ್ಪನ್ನು ಚೆನ್ನಾಗಿ ಸೋಸಿ ತೊಳೆದಿಟ್ಟುಕೊಂಡು ಅದಕ್ಕೆ ಈರುಳ್ಳಿ, ಬೆಳ್ಳುಳ್ಳಿ, ಒಣಮೆಣಸಿನಕಾಯಿ, ಕೊತ್ತಂಬರಿ, ತೆಂಗಿನಕಾಯಿಗಳನ್ನು ಸೇರಿಸಿ ರುಬ್ಬಿ ಕರಿಬೇವಿನ ಒಗ್ಗರಣೆ ಹಾಕಿ ಕುದಿಸುತ್ತಾರೆ. ಆಮೇಲೆ ಅದು ಆರಿ ತಣ್ಣಗಾದ ನಂತರ ಅದಕ್ಕೆ ಮಜ್ಜಿಗೆ ಸೇರಿಸುತ್ತಾರೆ. ಇದೇ **'ಆಮ್ರ'**. ಇದನ್ನು **'ತಂಬುಳಿ'** ಎಂದು ಕರೆಯುತ್ತಾರೆ.

**ಮಲೆನಾಡ ಉಪ್ಪಿನಕಾಯಿ:**

ಇದು ಊಟಕ್ಕೆ ನಂಚಿಕೆ, ಮಾವಿನ ಮಿಡಿ, ದೊಡ್ಲಿ, ಕಂಚಿ, ಲಿಂಬೆ, ಕಳಲೆ, ಅರುಮಾರ್ಲುಕಾಯಿ, ಕಾಳುಮೆಣಸು, ನೆಲ್ಲಿಕಾಯಿ, ಅಮಟೆಕಾಯಿ – ಇವೇ ಮುಂತಾದವುಗಳನ್ನು ಉಪ್ಪಿನಕಾಯಿ ತಯಾರಿಸಲು ಬಳಸಲಾಗುವುದು. ಯಾವುದೇ ಬಗೆಯ ಉಪ್ಪಿನಕಾಯಿ ಸಿದ್ಧ ಮಾಡುವುದಾದರೂ ಪದಾರ್ಥವನ್ನು ಚೆನ್ನಾಗಿ ತೊಳೆದು ಸೋಸಿ ಪಿಂಗಾಣಿ ಜಾಡಿಯಲ್ಲಿ ತುಂಬಿ ಪದಾರ್ಥದ ಎರಡರಷ್ಟು ನೀರುಹಾಕಿ ಎರಡು ದಿನಗಳವರೆಗೆ ನೆನೆಸಿಡಬೇಕು. ಮಾರನೆಯ ದಿನ ಒಂದು ಬಿಳಿ ವಸ್ತ್ರದಲ್ಲಿ ಎಷ್ಟು ಬೇಕೋ ಅಷ್ಟು ಉಪ್ಪನ್ನು ಗಂಟುಕಟ್ಟಿ ಜಾಡಿಯೊಳಗೆ ಇಡಬೇಕು. ಐದನೆಯ ದಿನ ಜೀರಿಗೆ ಮೆಣಸು ಕುಟ್ಟಿ ಪುಡಿ ಮಾಡಿ ಸ್ವಲ್ಪ ಇಂಗು ಸೇರಿಸಿ ಜಾಡಿಗೆ ಹಾಕಿ, ಜಾಡಿಯ ಬಾಯಿಗೆ ಬಿಳಿವಸ್ತ್ರ ಕಟ್ಟಿ ಮುಚ್ಚಳ ಹಾಕಿಡಬೇಕು. ಮುಚ್ಚಳದ ಮೂಲಕ ಒಳಗೆ ಗಾಳಿ ಸೇರದಂತೆ ಮಾಡಲು ಮುಚ್ಚುಳದ ಹೊರಭಾಗಕ್ಕೊಂದು ವಸ್ತ್ರ ಕಟ್ಟಬೇಕು. ಹೀಗೆ ಕಟ್ಟಿಟ್ಟು ಒಂದು ತಿಂಗಳಾದಮೇಲೆ ಉಪ್ಪಿನಕಾಯಿ ತಿನ್ನಬಹುದು.

**ಮಲೆನಾಡಿನ ಮಜ್ಜಿಗೆ ಮೆಣಸು:**

**ತಯಾರಿಸುವ ವಿಧಾನ:** ಹಸಿಮೆಣಸಿನ ಕಾಯನ್ನು ಹೊಟ್ಟೆ ಸೀಳಿ ಉಪ್ಪುಮಜ್ಜಿಗೆಯಲ್ಲಿ ಚೆನ್ನಾಗಿ ನೆನಸಿ ಅನಂತರ ಒಣಗಿಸಿ ತಯಾರಿಸಲಾಗುತ್ತದೆ. ಇದನ್ನು ಎಣ್ಣೆಯಲ್ಲಿ ಕರಿದು ಊಟಕ್ಕೆ ನಂಜಿಕೊಳ್ಳಬಹುದು.

**ಹಬ್ಬದ ಅಡುಗೆಗಳು:**

ಹಬ್ಬ ಹರಿದಿನಗಳು ಇವರ ಆಸರ ಬೇಸರ ಕಳೆಯುವ ಸಾಧನಗಳು. ಆ ದಿನಗಳಲ್ಲಿ ಕೆಲಸ ಕಾರ್ಯಗಳಿಗೆ ಬಿಡುವು. ಹಬ್ಬದ ಅಂಗವಾಗಿ ವಿಶೇಷ ತಿಂಡಿ ತಿನಿಸುಗಳು ಅಣಿಯಾಗುತ್ತವೆ. ಒಂದೊಂದು ಹಬ್ಬಕ್ಕೂ ಒಂದೊಂದು ಭಕ್ಷ್ಯ ಮೀಸಲಿರುವುದುಂಟು.

**ಯುಗಾದಿ ಹಬ್ಬ:** 'ಬೇವು ಬೆಲ್ಲ' ಸೇವಿಸುವ ದಿನ. ಅಂದು ಬಾಳೆಹಣ್ಣು ಮತ್ತು ಕಡಲೆಪುಡಿಗೆ ಬೇವಿನ ಹೂ ಎಲೆಗಳನ್ನು ಸೇರಿಸಿ ತಿನ್ನುವುದೇ ಪದ್ಧತಿ. ಆ ದಿನ ಐದು ಬಗೆಯ ತರಕಾರಿ ಹಾಕಿ ತಯಾರಿಸಿದ ಪಲ್ಯದ ಜೊತೆಗೆ ಅಕ್ಕಿ ರವೆಯ ಪಾಯಸ, ಹೋಳಿಗೆ, ಸಿಕ್ರುಂಡೆ, ವಡೆ ಇತ್ಯಾದಿ ಕಡಲೆಬೇಳೆ ಬೆಲ್ಲ ಹುರಿದು ಅಕ್ಕಿ ಹಿಟ್ಟುಗಳಿಂದ ತಯಾರಿಸಿದ ತಿಂಡಿಯೇ **ಸಿಕ್ರುಂಡೆ.**

**ಗೌರಿಹಬ್ಬ:** ಆ ದಿನದ ಬೆಳಗಿನ ತಿಂಡಿ 'ಕಾಯಿಕಡುಬು' ದೋಸೆ, ಅನ್ನಸಾರು, ಮೂರು ಬಗೆಯ ತರಕಾರಿ ಪಲ್ಯ ಜೊತೆಗೆ ಸಿಹಿ ಪಾಯಸ. ಈ ಹಬ್ಬಕ್ಕೆ ವಿಶೇಷ ಅಡುಗೆ **'ಕೊಟ್ಟೆ ಹಿಟ್ಟು'**

**ತಯಾರಿಸುವ ವಿಧಾನ:** ಹಲಸಿನ ತೋಳೆ ಬಿಡಿಸಿ ಅದಕ್ಕೆ ಸಮ ಪ್ರಮಾಣದಲ್ಲಿ ಅಕ್ಕಿ ಸೇರಿಸಿ ಕೆಲಹೊತ್ತು ನೆನೆಸಿಟ್ಟು ರುಬ್ಬಿ ಬಾಳೆ ಎಲೆಗಳಿಂದ ತಯಾರಿಸಿದ ಕೊಟ್ಟೆಗಳಿಗೆ ರುಬ್ಬಿದ ಹಿಟ್ಟನ್ನು ತುಂಬಿ ಕಡುಬು ಬೇಯಿಸುವಂತೆ ಸರಗಲ್ಲಿನೆಟ್ಟು ಬೇಯಿಸಿ ತಯಾರಿಸುವ ತಿಂಡಿಯಿದು.

**ಕೊಡಾಮವಾಸ್ಯೆ ಹಬ್ಬ:** ಸೀ ಅಪ್ಪು – ಈ ಹಬ್ಬದ ವಿಶೇಷ ಸಿಹಿ ಅಡುಗೆ.

**ತಯಾರಿಸುವ ವಿಧಾನ:** ಅನ್ನ ಮತ್ತು ಅಕ್ಕಿ ಹಿಟ್ಟಿನೊಡನೆ ಬಾಳೆಯ ಹಣ್ಣು ಕಲಸಿ ಕೈಯಲ್ಲಿ ತಟ್ಟಿ ರೊಟ್ಟಿ ಹಂಚಿನಲ್ಲಿ ಬೇಯಿಸಿ ತಯಾರಿಸಲಾಗುತ್ತದೆ. ಅಂದು ಸಂಜೆ ದೇವರ ಹರಿಕೆ ನಡೆಯುತ್ತದೆ. ಮಾಂಸದಡುಗೆ ಸಿದ್ಧವಾಗಿರುತ್ತದೆ.

**ಶ್ರಾವಣ: ಕಜ್ಜಾಯ**–ಆ ದಿನದ ವಿಶೇಷ ಅಡುಗೆ.

**ತಯಾರಿಸುವ ವಿಧಾನ:** ಅಕ್ಕಿಯನ್ನು ಹುರಿದು ಹಿಟ್ಟು ಮಾಡಿ ಬೆಲ್ಲದ ಪಾಕಕ್ಕೆ ಸುರಿದು ಆ ಹಿಟ್ಟಿಗೆ ತೆಂಗಿನಕಾಯಿ ತುರಿ ಮತ್ತು ಎಳ್ಳನ್ನು ಸೇರಿಸಿ ಉಂಡೆ ಕಟ್ಟಿ ಸರಗಲ್ಲಿನಲ್ಲಿ ಬೇಯಿಸಿ ತಯಾರಿಸಲಾಗುತ್ತದೆ.

**ಭೂಮಿ ಹುಣ್ಣಿಮೆ:** ಮಲೆನಾಡಿನ ಹಬ್ಬಗಳಲ್ಲಿ ಇದು ವಿಶೇಷವಾದದ್ದು ಆ ದಿನ ಊಟ ಪಾಯಸ. ಐದು ಅಥವಾ ಒಂಬತ್ತು ಬಗೆಯ ತರಕಾರಿ ಪಲ್ಯದ ಜೊತೆಗೆ ಕಾಡಿನಲ್ಲಿ ದೊರಕುವ ನೂರೊಂದು ಕುಡಿಯ ಬೆರಕೆ ಸೊಪ್ಪಿನ ಪಲ್ಯ ಅಂದಿನ ವಿಶೇಷವಾಗಿರುತ್ತದೆ.ಅಂದು ಭೂಮಿತಾಯಿಗೆ ಎಡೆ ಇಡಬೇಕಾದ್ದರಿಂದ ಅಮಟೆಕಾಯಿಗಳನ್ನು ಈ ಪಲ್ಯಕ್ಕೆ ಸೇರಿಸುತ್ತಾರೆ. ಇದೇ ದಿನದ ಇನ್ನೊಂದು ವಿಶೇಷ **'ಬುತ್ತಿ ಅನ್ನ'** ,

**ತಯಾರಿಸುವ ವಿಧಾನ:** ಅನ್ನಕ್ಕೆ ಗಟ್ಟಿ ಮೊಸರು ಹಾಕಿ ಕಲಸಿ ಅರಿಶಿನದ ಎಲೆಯಲ್ಲಿ ತುತ್ತು ಕಟ್ಟಿಡುವುದೆ 'ಬುತ್ತಿ ಅನ್ನ' ದೀಪಾವಳಿ ಹಬ್ಬದವರೆಗೂ ದಿನವೂ ಒಬ್ಬರಿಗೊಂದು ತುತ್ತಿನಂತೆ ಅದನ್ನು ಬಡಿಸುತ್ತಾರೆ.

**'ಕಟ್ಟೆ ಕಡುಬು'** ಇದೇ ದಿನದ ಮತ್ತೊಂದು ವಿಶೇಷ.

**ತಯಾರಿಸುವ ವಿಧಾನ:** ಮರಸಣಿಗೆ ಕೆಸುವಿನ ದಡಿಯನ್ನು ಬೇಯಿಸಿ ಅದನ್ನು ಅಕ್ಕಿ ಜೊತೆ ನೆನೆಸಿ ರುಬ್ಬಿ, ಈ ಹಿಟ್ಟನ್ನು ಅನಂತರ ಬಾಳೆ ಎಲೆಗಳ ಕೊಟ್ಟೆಗಳಲ್ಲಿ ತುಂಬಿ ಹಗ್ಗದಿಂದ ಕಟ್ಟಿ ಸರಗಲ್ಲಿನಲ್ಲಿಟ್ಟು ಬೇಯಿಸಿ ತಯಾರಿಸುವುದೇ **'ಕೊಟ್ಟೆ ಕಡುಬು'**

**ದೀಪಾವಳಿ:** ಈ ಹಬ್ಬದಲ್ಲಿ ಮೂರು ಬಗೆಯಿದೆ.

೦೧. ಬೋರೆ
೦೨. ಬಲಿಪಾಡ್ಯಮಿ
೦೩. ವರ್ಷತೊಡಕು.

01.**ಬೋರೆ: ಚೀನಿಕಾಯಿ ಕಡುಬು** ಈ ದಿನದ ವಿಶೇಷ.

**ತಯಾರಿಸುವ ವಿಧಾನ:** ಅಕ್ಕಿಹಿಟ್ಟನ್ನು ಬೇಯಿಸಿದ ಚೀನಿಕಾಯಿ ಸೇರಿಸಿ ರುಬ್ಬಿ ಕೊಟ್ಟೆ ರಚಿಸಿ ಬೇಯಿಸಿ ಅಣಿಗೊಳಿಸುವ ಕಡುಬು ಇದು. ಕೆಸುವಿನದಡಿ, ಹಲಸಿನಕಾಯಿ, ಹೀರೆಕಾಯಿ ಪಲ್ಯಗಳು ಅಂದಿನ ವಿಶೇಷ.

02. **ಬಲಿಪಾಡ್ಯಮಿ:** ಗೋಪೂಜೆ ನೆರವೇರುವ ಈ ದಿನದಂದು ಗೋವುಗಳ ಕೊರಳಿಗೆ ಕಟ್ಟಲು ಸಪ್ಪೆರೊಟ್ಟಿಗಳನ್ನು ತಯಾರಿಸುತ್ತಾರೆ.

**ತಯಾರಿಸುವ ವಿಧಾನ:** ಬೇಯಿಸಿದ ಅಕ್ಕಿಹಿಟ್ಟಿಗೆ ಉಪ್ಪುಹಾಕದೆ, ಬಾಳೆಹಣ್ಣು ಮಿಶ್ರಮಾಡಿ ತಯಾರಿಸುವ ಬಿಲ್ಲೆಯಾಕಾರದ ರೊಟ್ಟಿಗಳಿವು. ಸಂಜೆಯ ಊಟಕ್ಕೆ ಬೆಲ್ಲ ಸೇರಿಸಿ ಅಣಿಗೊಳಿಸಿದ ಗೋದಿ ಪಾಯಸ, ಐದು ಬಗೆಯ ಪಲ್ಯ, ದೋಸೆ, ಅನ್ನಗಳ ಜೊತೆಗೆ ವಿಶೇಷ ತಿನಿಸುಗಳಾಗಿ **'ಅತ್ರಾಸ' ಮತ್ತು 'ಹೋಳಿಗೆ'ಗಳಿರುತ್ತವೆ.**

**ತಯಾರಿಸುವ ವಿಧಾನ:** ನೆನೆಸಿದ ಅಕ್ಕಿಯನ್ನು ಬಿಸಿಲಿನಲ್ಲಿ ಒಣಗಿಸಿ ಒರಳಿನಲ್ಲಿ ಹಾಕಿ ಕುಟ್ಟಿ ಹುಡಿಮಾಡಿ ಏಲಕ್ಕಿ ಜೀರಿಗೆ ಹುಡಿಯೊಂದಿಗೆ ಬೆಲ್ಲದ ಪಾಕಕ್ಕೆ ಹಾಕಿ ಬೇಯಿಸಿದ ಹಿಟ್ಟನ್ನು ಉಂಡೆಕಟ್ಟಿ ಈ ಉಂಡೆಗಳನ್ನು ಎಣ್ಣೆಯಲ್ಲಿ ಕರಿಯಲಾಗುತ್ತದೆ. ಇದೇ **'ಅತ್ರಾಸ'**

03 **ವರ್ಷತೊಡಕು: 'ಅಂಬಡೆ' 'ಅವುಗ'** ಅಂದಿನ ವಿಶೇಷಗಳು.

**ತಯಾರಿಸುವ ವಿಧಾನ:** ರುಬ್ಬಿದ ಬಾಳೆಹಣ್ಣು ಮಿಶ್ರಿತ ಅಕ್ಕಿಹಿಟ್ಟಿನಿಂದ ತಯಾರಿಸುವ ತಿಂಡಿಯೇ **'ಅವುಗ'**. ಒಲೆಯ ಮೇಲೆ ಹೆಂಚಿಟ್ಟು ಅದರ ಮೇಲೆ ಸಣ್ಣ ಪುಟ್ಟ ರಂಧ್ರವಿರುವ ಒಂದು ಮಡಕೆಯನ್ನು ಬೋರಲು ಹಾಕಿ ತಯಾರಿಸುವ ಒಂದು ಬಗೆಯ ಸಿಹಿ ತಿಂಡಿಯಿದು.

**ಮಹಾಲಯ:** ಪಿತೃಗಳಿಗೆ ಅನ್ನ ಹಾಕುವ ದಿನ. ಸಿಹಿ ಪಾಯಸ 'ಅನ್ನ' ಐದು ಬಗೆಯ ಪಲ್ಯ ಸಿಕ್ರುಂಡೆ, ಸಪ್ಪೆವಡೆ, ಸೀ ಅಪ್ಪುಗಗಳು ಈ ದಿನದ ವಿಶೇಷ. ಅಂದು ದೇವರ ಹರಕೆ ಸಲ್ಲಿಸುವುದಿದ್ದರೆ ಕಡುಬು ಮತ್ತು ಮಾಂಸದಡುಗೆ ಅಣಿಗೊಳ್ಳುತ್ತದೆ.

**ಹೊಸ್ತಿನ ಮನೆ:** ಕಾಯಾಲು ಮತ್ತು ಶಾವಿಗೆ ಜೊತೆಗೆ **'ಎರಿಯಪ್ಪ'** ಅಂದಿನ ವಿಶೇಷ ತಿನಿಸುಗಳು.

**ತಯಾರಿಸುವ ವಿಧಾನ:** ಉದ್ದು ಕಾಯಿ ಬೆಲ್ಲಗಳನ್ನು ಸಮ ಪ್ರಮಾಣದಲ್ಲಿ ಬೆರೆಸಿ ರುಬ್ಬಿದ ಹಿಟ್ಟನ್ನು ಎಣ್ಣೆಯಲ್ಲಿ ಕರಿದರೆ ಅದೇ **'ಎರಿಯಪ್ಪ'**.

**ಶಿವರಾತ್ರಿ: ತಂಬಿಟ್ಟಿನುಂಡೆ ಮತ್ತು ಪತ್ರಡೆ** ಅಂದಿನ ವಿಶೇಷ. ತಿನಿಸುಗಳು. ಮರಗೆಣಸು, ಸಾಂಬಾರು ಸಾಮಾಗ್ರಿಗಳು ಮತ್ತು ಅಕ್ಕಿಯನ್ನು ರುಬ್ಬಿ ಆ ಹಿಟ್ಟನ್ನು ಬಾಳೆ ಎಲೆಯಲ್ಲಿ ತುಂಬಿ ಸರಗಲ್ಲಿನಲ್ಲಿ ಬೇಯಿಸಿ ಆಮೇಲೆ ಅದನ್ನು ಸಣ್ಣಗೆ ಕತ್ತರಿಸಿ ವಗ್ಗರಣೆ ಹಾಕಿದರೆ ಅದೇ **'ಪತ್ರಡೆ'**

**ಮದುವೆ ತಿಥಿ ಇತ್ಯಾದಿಗಳ ಸಂದರ್ಭದ ಅಡುಗೆಗಳು:**

ಹುಟ್ಟು, ಪ್ರೌಢಾವಸ್ಥೆ, ಮದುವೆ ಮತ್ತು ಸಾವು – ಇವು ಮಾನವನ ಜೀವನದ ಪ್ರಮುಖ ಘಟ್ಟಗಳು. ಈ ಜೀವನ ಚಕ್ರದ ಅವಧಿಯಲ್ಲಿ ವ್ಯಕ್ತಿ ಸಂತೋಷಪಡುವ ಮತ್ತು ದುಃಖಪಡುವ ಅನೇಕ ಸನ್ನಿವೇಶಗಳು ಎದುರಾಗುತ್ತವೆ. ಆ ಎಲ್ಲಾ ಸಂದರ್ಭದ ಅಡುಗೆಗಳಲ್ಲಿ ಅದರದೇ ಆದ ವೈಶಿಷ್ಟ್ಯವಿರುತ್ತದೆ.

**ಮದುವೆ:** ಇದೊಂದು ಹರ್ಷದ ಸಮಾರಂಭ. ಹಿಂದೆ ವಾರಗಟ್ಟಲೆ ಮದುವೆ ನಡೆಯುತ್ತಿದ್ದ ಕಾಲದಲ್ಲಿ ದೇವರೂಟ, ಧಾರೆಯೂಟ, ಹಿಡಿದಿಬ್ಬಳೂಟ ಮತ್ತು ಧಾರೆ ದೀಪದೂಟ ಎಂದು ನಾಲ್ಕು ಭರ್ಜರಿ ಊಟಗಳನ್ನು ನೀಡುವ ಪದ್ಧತಿಯಿತ್ತು.

**ದೇವರೂಟದಲ್ಲಿ:** ಅನ್ನ, ಸಾರು, ಸೌತೆಕಾಯಿ ಹುಳಿ, ಹಲಸಿನ ಕಾಯಿಪಲ್ಯ, ಪರಮಾನ್ನ, ಕೊಚ್ಚುಪಿನ ಕಾಯಿ, ಹಪ್ಪಳ, ಕುಟ್ಟುಂಡೆ, ಮಜ್ಜಿಗೆ ಮೆಣಸು ಇರುತ್ತದೆ.

**ಧಾರೆಯೂಟದಲ್ಲಿ** ಕೆಸುವಿನದಡಿ ಹುಳಿ, ಹಲಸಿನಕಾಯಿ ಪಲ್ಯ, ಸೌತೆಕಾಯಿ ಸಾರು, ಸಿಕ್ರುಂಡೆ, ಪರಮಾನ್ನ, ಉಪ್ಪಿನಕಾಯಿ, ಹಪ್ಪಳ, ಕುಟ್ಟುಂಡೆ ಇದ್ದೇ ಇರುತ್ತದೆ.

ಗಂಡನ್ನು ಹೆಣ್ಣಿನೊಡನೆ ಮನೆದುಂಬಿಸಿಕೊಳ್ಳುವ ದಿನದಂದು **ಹಿದಿಬ್ಬಳೂಟ**ವಿರುತ್ತಿತ್ತು. ಕಡುಬು ಮಾಂಸದ ಅಡುಗೆ ಅಂದಿನ ವಿಶೇಷ. ಹೆಣ್ಣಿನ ಮನೆಯಲ್ಲಿ ಧಾರೆ ದೀಪದ ಶಾಸ್ತ್ರದ ಅಂಗವಾಗಿ **ಧಾರೆದೀಪದೂಟ**ವಿರುತ್ತಿತ್ತು. ಕಡುಬು ಮಾಂಸದ ಅಡುಗೆಯೇ ವಿಶೇಷ.

**'ಹುಗ್ಗಿ ಅನ್ನ'**

**ತಯಾರಿಸುವ ವಿಧಾನ:** ಹೆಣ್ಣು ಮೈನೆರೆದ ಸಂದರ್ಭದಲ್ಲಿ ಬೆಲ್ಲ ಮತ್ತು ಮೆಂತೆಯನ್ನು ಸೇರಿಸಿ ತಯಾರಿಸಿದ ಅನ್ನವನ್ನು ಹುಗ್ಗಿ ಅನ್ನ ಎನ್ನುತ್ತಾರೆ.

ಮೃತರ ಸ್ಮರಣಾರ್ಥವಾಗಿ ಏರ್ಪಡಿಸುವ ತಿಥಿಯೂಟದಲ್ಲಿ ಸಿಹಿ ಭಕ್ಷ್ಯಗಳನ್ನು ಉಣಬಡಿಸುವುದಿಲ್ಲವಾದರೂ ಮೃತರ ಹೆಸರಿನಲ್ಲಿ ಎಡೆ ಅರ್ಪಿಸಲು ಅವು ಬೇಕು. ಬಾಳೆಕಾಯಿ, ಹುಳಿ, ಸಪ್ಪೆವಡೆ, ಉದ್ದಿನವಡೆ, ಕಡುಬು, ಕುರಿ, ಕೋಳಿ ಮಾಂಸದ ಅಡುಗೆ ವಿಶೇಷವಾಗಿರುತ್ತದೆ. **ಹೆಚ್ಚುಗಟ್ಲೆ** ನೆಂಟರಿಷ್ಟರು ಬಂದಾಗ ಸಿದ್ಧಪಡಿಸುವ ಅಡುಗೆಯನ್ನು ಹೀಗೆ ಕರೆಯುತ್ತಾರೆ. ಮಲೆನಾಡಿನ ವೈಷ್ಣವ ಸಂಪ್ರದಾಯದ ನಾಮಧಾರಿ ಒಕ್ಕಲಿಗರಿಗೆ ಖಾರದ ಅಡುಗೆಗಳು (ಮಾಂಸಹಾರ) ತುಂಬಾ ಪ್ರಿಯವಾದವು. ಮಂಗ, ಮುಂಗುಸಿ, ನರಿ, ಹಾವು, ಹೆಗ್ಗಣ, ಹುಲಿ, ಕಾಡುಕೋಣ ಮತ್ತು ದನ ಎಮ್ಮೆಗಳ ಮಾಂಸ ತಿನ್ನುವುದಿಲ್ಲ. ಕೋಳಿ, ಕುರಿ, ಹಂದಿ, ಮೊಲ, ಕಾಡು ಹಂದಿ, ಬರ್ಕ, ಉಡ, ಕಬ್ಬೆಕ್ಕು, ಮುಳ್ಳುಹಂದಿ, ಕಡ, ಚಿಗರೆ ಇಂತಹ ಪ್ರಾಣಿಗಳ ಮಾಂಸವನ್ನು ಹೆಚ್ಚು ಇಷ್ಟಪಡುತ್ತಾರೆ. ಹೊರ್ಸಾಲಕ್ಕಿ, ಮಂಗಟೆ ಹಕ್ಕಿ, ಚಿಲುಮೆ ಹಕ್ಕಿ, ಕಂಚಿಗಾರ

ಕೊಕ್ಕರೆ, ಗುಮಡ್ಲ ಹಕ್ಕಿ ಮುಂತಾದ ಹಕ್ಕಿಪಕ್ಷಿಗಳನ್ನು ತಿನ್ನುತ್ತಾರೆ. ಮೀನು, ಆಮೆ, ಮತ್ತು ಏಡಿ ಮಳೆಗಾಲದ ದಿನಗಳ ನಿತ್ಯ ಆಹಾರ. ಇವರು ಸಾಕು ಪ್ರಾಣಿಗಳಿಗಿಂತ ಕಾಡು ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವುದೇ ಹೆಚ್ಚು.

**ಮಾಂಸದ ಸಂಡಿಗೆ:** ಮೂಳೆಯಿರದ ಮಾಂಸಕ್ಕೆ ಉಪ್ಪು ಹಾಕಿ ಬಿಸಿಲಲ್ಲಿ ಅಥವಾ ಬೆಂಕಿಯ ಶಾಖದಲ್ಲಿ ನಾಲ್ಕಾರು ಕಾಲ ಒಣಗಿಸಿಡುವುದೇ ಸಂಡಿಗೆ ಮಾಂಸ. ಮಳೆಗಾಲದ ದಿನಗಳಲ್ಲಿ ತರಕಾರಿಗೆ ಅಭಾವವಿದ್ದಾಗ ಈ ಮಾಂಸವನ್ನು ಬಳಸಿಕೊಳ್ಳಲಾಗುವುದು.

**ಕರಿಮೀನು:** ಮಳೆಗಾಲದಲ್ಲಿ ಗದ್ದೆ ಕೋಡಿ, ಹಳ್ಳದ ಕೋಡಿಗಳಲ್ಲಿ 'ಯಾಪೆ' ಕುಳಿ ಇಟ್ಟು ದೊರಕಿಸಿಕೊಂಡ ಸಣ್ಣ ಜಾತಿಯ ಮೀನುಗಳನ್ನು 'ಹೊಗೆ ತಟ್ಟಿ' ಶಾಖದಲ್ಲಿ ಗರಿಗರಿಯಾಗಿ ಒಣಗಿಸಿದ್ದೇ 'ಕರಿಮೀನು' ಇದರಿಂದ ಬೇಕಾದಾಗ ಮೀನು ಪಲ್ಯ ಅಥವಾ ಸಾರು ಮಾಡಬಹುದು.

**ಒಣಮೀನು ಚಟ್ನಿ:**

**ತಯಾರಿಸುವ ವಿಧಾನ:** ಮೀನನ್ನು ಎಣ್ಣೆಯಲ್ಲಿ ಹುರಿದು ಒರಳಲ್ಲಿ ಹಾಕಿ ಜಜ್ಜಿ ಪುಡಿಮಾಡಿ ಅದಕ್ಕೆ ವಾಟೆ ಹುಳಿ, ಜೀರಿಗೆ, ಮೆಣಸು ಹಾಕಿ ತಯಾರಿಸುವುದೇ ಮೀನು ಚಟ್ನಿ.

**ಏಡಿ ಚಟ್ನಿ:**

**ತಯಾರಿಸುವ ವಿಧಾನ:** ಏಡಿಯ ದೇಹದ ಬೇಡವಾದ ಭಾಗಗಳನ್ನು ತೆಗೆದು ಹಾಕಿ ಕೆಂಡದಲ್ಲಿ ಸುಟ್ಟು ನುಣ್ಣಗೆ ಉರಿದು. ಅದಕ್ಕೆ ಒಣಮೆಣಸಿನಕಾಯಿ, ಈರುಳ್ಳಿ, ಕೊಬ್ಬರಿ ಮುಂತಾದವನ್ನು ಹಾಕಿದರೆ ಏಡಿ ಚಟ್ನಿ ಸಿದ್ಧವಾಗುತ್ತದೆ ಎನ್ನುತ್ತಾರೆ.

ಚಗಳಿ ಮತ್ತು ಬೆಲ್ಲದ ಇರುವೆ ಕೂಡ ಸಂಗ್ರಹಿಸಿ ತಿನ್ನುವುದುಂಟು.

**ಹಳಸದ ಪದಾರ್ಥಗಳನ್ನು ತಯಾರಿಸುವ ಕೌಶಲ್ಯ:**

ಮಲೆನಾಡಿನ ಹೆಣ್ಣುಮಕ್ಕಳು ಕೆಲವು ಆಹಾರ ಪದಾರ್ಥಗಳನ್ನು ಎರಡು ದಿನಗಳಿಂದ ತೊಡಗಿ ವರ್ಷಾಂತ್ಯದವರೆಗೂ ಕೆಡದಂತೆ ತಯಾರಿಸುವ ವಿಧಾನಗಳನ್ನು ಕಲಿತಿದ್ದರು. ಸಸ್ಯಾಹಾರ ಅಥವಾ ಮಾಂಸಾಹಾರದ ಸಾರು ಪಲ್ಯಗಳನ್ನು ಎರಡು ರಾತ್ರಿ ಕೆಡದಂತೆ ಮಾಡಲು ತೆಂಗಿನಕಾಯಿ ಬದಲಿಗೆ ಕೊಬ್ಬರಿಯನ್ನು ಉಪಯೋಗಿಸಲಾಗುತ್ತದೆ. ಈರುಳ್ಳಿಯನ್ನು ಬಳಸುವುದಿಲ್ಲ. ಪ್ರತಿದಿನ ಆಹಾರ ಪದಾರ್ಥವನ್ನು ಬಿಸಿ ಮಾಡಿಡುವರು. ತೆಂಗಿನಕಾಯಿ, ಈರುಳ್ಳಿ ಒಣ ಮೆಣಸಿನಕಾಯಿ ಬಳಸದೆ, ಕೊಬ್ಬರಿ, ಬೆಳ್ಳುಳ್ಳಿ, ಕಾಳುಮೆಣಸು ಮಾತ್ರ ಉಪಯೋಗಿಸಿ ಹುರಿದ ತರಕಾರಿ ಪಲ್ಯ, ಮೀನು ಪಲ್ಯಗಳು ಒಂದು ವಾರ ಕಾಲ ಕೆಡದೆ ಉಳಿಯುತ್ತವೆ ಎನ್ನುತ್ತಾರೆ.

ಭೂಮಿ ಹುಣ್ಣಿಮೆ ಹಬ್ಬದ **'ಮಜ್ಜಿಗಂಬ್ಲಿ'** ಸುಮಾರು 15 ದಿನಗಳವರೆಗೆ ಕೆಡದೆ ಉಳಿಯುವ ಪದಾರ್ಥ. ಅರಿಶಿನದ ಎಲೆ, ಗಟ್ಟಿಮೊಸರು ಅನ್ನ ಕೆಡುವುದನ್ನು ತಪ್ಪಿಸುತ್ತದೆ. ಪ್ರತಿದಿನವೂ ಮಜ್ಜಿಗಂಬ್ಲಿಯ ತುತ್ತುಗಳನ್ನು ಹೊಸ ನೀರಿನಲ್ಲಿಡಬೇಕು.

ಎಣ್ಣೆಯಲ್ಲಿ ಕರಿದ ತಿಂಡಿಗಳು ಕನಿಷ್ಠ ಒಂದು ತಿಂಗಳು ಕೆಡುವುದಿಲ್ಲ. ಅವನ್ನು ಒಲೆಸರದಲ್ಲಿಡುವುದು ಆ ಪದಾರ್ಥಗಳು ಕೆಡದಂತೆ ಮಾಡಲು ವಹಿಸುವ ಮುಂಜಾಗ್ರತೆ ಕ್ರಮವಾಗಿದೆ. ದೀರ್ಘಕಾಲ ಕೆಡದೆ ಉಳಿಯುವ ಪದಾರ್ಥಗಳ ಗುಂಪಿಗೆ ಮಾಂಸದ ಸಂಡಿಗೆ, ಒಣಮೀನು, ಕರಿಮೀನು, ಕುಟ್ಟುಂಡೆ, ಮಜ್ಜಿಗೆ ಮೆಣಸು, ಹಪ್ಪಳ, ಉಪ್ಪಿನಕಾಯಿ ಮೊದಲಾದ ನೆಂಚಿಕೆಗಳು ಸೇರುತ್ತವೆ. ಸದಾಕಾಲವೂ ಇವು ಒಲೆ ಸರದಲ್ಲಿಯೇ ಶೇಖರಣೆಗೊಳ್ಳುತ್ತವೆ.

**ಮದ್ಯಪಾನೀಯಗಳ ತಯಾರಿಕೆ:**

ಆಹಾರ ತಿನಿಸುಗಳ ಜೊತೆಗೆ ಅನೇಕ ಬಗೆಯ ಮದ್ಯಪಾನೀಯಗಳನ್ನೂ ಮಲೆನಾಡಿನ ಜನರು ಸೇವಿಸುವರು. ಕಳ್ಳು, ಹೆಂಡ, ಅಕ್ಕಿ ಭೋಜ, ಮೊದಲಾದ ಮದ್ಯಪಾನೀಯಗಳನ್ನು ಗಂಡಸರು, ಹೆಂಗಸರು ಮಕ್ಕಳಾದಿಯಾಗಿ ಕುಡಿಯುತ್ತಿದ್ದರು. ಇದು ಕೂಡ ಮಲೆನಾಡಿನ ರುಚಿರಹಸ್ಯವೇ.

**ತಯಾರಿಸುವ ವಿಧಾನ:** ಭತ್ತವನ್ನು ಕುಡಿಮೊಳಕೆ ಬರುವವರೆಗೆ ನೀರಿನಲ್ಲಿ ನೆನಸಿಟ್ಟು ಮೊಳಕೆ ಕಾಣಿಸಿಕೊಂಡ ಮೇಲೆ ಸಗಣಿಯಿಂದ ಸಾರಿಸಿದ ನೆಲದ ಮೇಲೆ ಮೊಳಕೆ ಭತ್ತವನ್ನು ಹರಡಿ ಅದರ ಮೇಲೆ ಲಕ್ಕಿ ಸೊಪ್ಪನ್ನು ಮುಚ್ಚಿ ಮರದ ಕುಂಟೆಗಳನ್ನು ಹೇರುತ್ತಾರೆ. ಸಂಪೂರ್ಣ ಮೊಳಕೆ ಬಂದ ಮೇಲೆ ಬಿಸಿಲಿನಲ್ಲಿ ಒಣಹಾಕಿ ಚೆನ್ನಾಗಿ ಅನಂತರ ಒಳಕಲ್ಲಿನಲ್ಲಿ ಹಾಕಿ ಕುಟ್ಟಿ ಹುಡಿಮಾಡಿ ಮಣ್ಣಿನ ಹರವಿಯೊಳಗೆ ತುಂಬಿಸಿ ಅದರ ಬಾಯನ್ನು ಸಗಣಿಯಿಂದ ಮೆತ್ತಿ ಮುಚ್ಚುಹಾಕುತ್ತಾರೆ.

ಹೆಂಡ ಕುಡಿಯಬೇಕೆನಿಸಿದಾಗ ಅಗತ್ಯಕ್ಕೆ ಬೇಕಾದಷ್ಟು ಅಕ್ಕಿಯನ್ನು ಮೂರು ದಿನಗಳವರೆಗೆ ನೀರಿನಲ್ಲಿ ನೆನೆಹಾಕಿ ನಾಲ್ಕನೆಯ ದಿನ ಆ ಅಕ್ಕಿಯನ್ನು ಬೇಯಿಸಬೇಕು. ನುಣ್ಣಗೆ ಜಜ್ಜಿದ ಬೂದುಗನ ತೊಗಟೆ ಮತ್ತು ಸಣ್ಣೆಲೆ ಸದ್ಗದ ಬಳ್ಳಿಯ ಹುಡಿಯನ್ನು ಆ ಅಕ್ಕಿಗೆ ಸೇರಿಸಿ ಮತ್ತೆ ಬೇಯಿಸಿ ಬಿಸಿಲಿಗೆ ಒಣಹಾಕಬೇಕು. ಐದನೆಯ ದಿನ ಮೊಳಕೆ ಬತ್ತದೆ ಹಿಟ್ಟನ್ನು ಅದಕ್ಕೆ ಸೇರಿಸಿ, ಒಂದು ಹರವಿಯಲ್ಲಿ ತುಂಬಿ ಹರವಿಯ ಬಾಯನ್ನು ಮೆತ್ತು ಹಾಕಬೇಕು. ಐದುದಿನ ಕಳೆದ ಮೇಲೆ ಹರವಿಯೊಳಗೆ ಬೊದ ಬೊದ ಶಬ್ದ ಕೇಳಿಸುತ್ತದೆ. ಆಗ ಆ ಹಿಟ್ಟನ್ನು ಹೊರತೆಗೆದು ಸೋಸಿಕೊಳ್ಳಬೇಕು. ಒಂದು ಅಗಲ ಬಾಯಿಯ ಪಾತ್ರೆಗೆ ತೆಳ್ಳನೆಯ ವಸ್ತ್ರ ಸುತ್ತಿ ಅದರ ಮೇಲೆ ಹಿಟ್ಟನ್ನು ಹಾಕಿ ಹಿಟ್ಟಿನ ಮೇಲೆ ಕಾದಾರಿದ ನೀರು ಸುರಿದಾಗ ಬೋಗುಣಿಯ ತಳದಲ್ಲಿ ಶೇಖರಗೊಳ್ಳುವ ದ್ರವವೇ **'ಅಕ್ಕಿ ಭೋಜ'** ಹೆಂಡ. ಹನಿಹೆಂಡ ಕುಡಿಯಬಯಸುವಲವ'ರು ಇನ್ನೊಂದು ಅಗಲ ಬಾಯಿ ಪಾತ್ರೆಗೆ ಸೋಸಣಿಗೆ ಕಟ್ಟಿ ನೆನೆಹಾಕಿದ ಹಿಟ್ಟನ್ನು ಅದರ ಮೇಲೆ ಸುರಿದಿಡುವರು. ಬೆಳಗಾಗುವ ಹೊತ್ತಿಗೆ ಬೂಗುಣಿಯ ತಳದಲ್ಲಿ ಹನಿಹೆಂಡ ಶೇಖರಗೊಂಡಿರುತ್ತದೆ. ಹೆಂಡ ಕುಡಿಯುವಾಗ ನೆಂಚಿಕೆಯಾಗಿ ಕುಟ್ಟುಂಡೆ, ಮಜ್ಜಿಗೆ ಮೆಣಸು, ಉಪ್ಪಿನಕಾಯಿ, ಕರಿದ ಸ್ವಾರ್ಲು ಮೀನು ಚಟ್ನಿ ಬಳಸುತ್ತಾರೆ.

**ಇತರೆ ಪಾನೀಯಗಳು:**

ರಾಗಿ ಮತ್ತು ಹೆಸರು ಪಾನಕವಾಗಿ ಕುಡಿಯುತ್ತಿದ್ದರು. ಮತ್ತು ತಯಾರಿಸುತ್ತಿದ್ದರು. ಮೆಣಸಿನಕಾಳು, ಬಿಳಿ ಕುನ್ನೇರಲು ಕುಡಿ, ಬಿಳಿ ಸಣ್ಗಲೆ ಸದಗನ ಕಷಾಯಗಳನ್ನು ಸವಿಯುತ್ತಿದ್ದರು ಮತ್ತು ತಯಾರಿಸುತ್ತಿದ್ದರು.

ಮಲೆನಾಡಿನ ಹೆಂಗಸು ಅಡುಗೆ ತಯಾರಿಕೆಯಲ್ಲಿ ನಿರ್ದಿಷ್ಟ ಕ್ರಮ, ವಿಧಾನಗಳನ್ನು ಅನುಸರಿಸುತ್ತಿದ್ದರು. ಆದ್ದರಿಂದಲೇ ಅವರ ಅಡುಗೆಗೆ ಒಂದು ರೀತಿಯ ವಿಶೇಷತೆ ಸಿಕ್ಕಿದೆ. ತನ್ನ ಭೌತಿಕ ಪರಿಸರದಲ್ಲಿ ಸಿಗುವಂತಹ ಅನೇಕ ಗೆಡ್ಡೆ–ಗೆಣಸುಗಳು, ಸೊಪ್ಪು–ಸೆದೆಗಳು, ಮೀನು–ಮಾಂಸಗಳು, ಹಕ್ಕಿ– ಪಕ್ಷಿಗಳನ್ನು ಬಳಸಿಕೊಂಡು ತಮ್ಮದೇ ಆದ ವಿಧಾನದಲ್ಲಿ ಇಡೀ ವಿಶ್ವಕ್ಕೇ ಬೆರಗುಗೊಳಿಸುವಂತಹ ಮಲೆನಾಡಿಗೆ ಸೀಮಿತವಾದಂತಹ ಅಡುಗೆಯ ರುಚಿಗಳನ್ನು ಕೊಟ್ಟಿರುವ ಮಲೆನಾಡಿನ ಮಹಿಳೆಯರಿಗೆ ನಾವು ಸಲಾಮು ಮಾಡಲೇಬೇಕು

**ಪರಾಮರ್ಶನ ಗ್ರಂಥಗಳು:**


೦೧. ಮಲೆನಾಡ ಜನಪದ ಸಂಪ್ರದಾಯಗಳು – ಅಂಬಳಿಕೆ ಹಿರಿಯಣ್ಣ,

೦೨. ಮಲೆಗಳಲ್ಲಿ ಮದುಮಗಳು – ಕುವೆಂಪು,

೦೩. ನೆನಪಿನ ದೋಣಿಯಲ್ಲಿ – ಕುವೆಂಪು,

೦೪. ಕಾನೂರು ಹೆಗ್ಗಡತಿ – ಕುವೆಂಪು

೦೫. ಮಲೆನಾಡಿನ ಚಿತ್ರಗಳು – ಕುವೆಂಪು

# ಮಲೆನಾಡಿನ 'ಚಿತ್ತಾರ' ಪ್ರತಿಭೆ ರಾಧಾ ಸುಳ್ಳೂರು

**ಅನ್ನಪೂರ್ಣ ಹೆಚ್.ಎಸ್**



**ಚಿತ್ರ 1: ರಾಧಾ ಸುಳ್ಳೂರು**

ನಿರ್ದಿಷ್ಟ ಪ್ರದೇಶವೊಂದರ ಸಂಸ್ಕೃತಿಯು ಹಲವು ಮಹತ್ವದ ದೇಶೀ ಸಂಪನ್ಮೂಲಗಳನ್ನೇ ಜೀವಾಳವಾಗಿಸಿಕೊಂಡು ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ ದಾಟಿಕೊಳ್ಳುತ್ತಿರುತ್ತದೆ. ಈ ದೇಶೀ ಸಂಪನ್ಮೂಲಗಳು ವ್ಯಕ್ತಿಗತ ಪ್ರತಿಭೆ ಮತ್ತು ಆ ಮೂಲಕ ಹೊರಹೊಮ್ಮುವ ಪತ್ಯ ಪರಿಕರಗಳ (ಅಡುಣಚುಣ, ಣುಚುಷು ಚಿಟಜ ಟಚಿಣಜಾುಚಿಟ) ಮೂಲಕ ಪ್ರಾದೇಶಿಕ ಸಂಸ್ಕೃತಿಯೊಂದರ ಸೊಗಡನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಮಾತ್ರವಲ್ಲ, ಅವುಗಳ ಅಭಿವ್ಯಕ್ತಿಗೆ ಕಾರಣವಾದ ವ್ಯಕ್ತಿತ್ವಗಳಿಗೆ ಸಾಂಸ್ಕೃತಿಕ ಮನ್ನಣೆ ದಕ್ಕಿಸಿಕೊಡುತ್ತವೆ. ದೇಶೀ ಸಂಪನ್ಮೂಲಗಳು ಆಶ್ರಯಿಸುವ ಪತ್ಯ ಪರಿಕರಗಳು ವಿವಿಧ ಬಗೆಯ ಕಲಾನೈಪುಣ್ಯಗಳ ಆಧಾರದಲ್ಲಿ ರೂಪಾಂತರ ಹೊಂದುತ್ತವೆ. ದೇಶೀಯತೆಗೆ ಧಕ್ಕೆಯಾಗದೆಯೇ ಮೂಲಸ್ವರೂಪದ ಘನತೆಯನ್ನು ಉಳಿಸಿಕೊಂಡೇ ವರ್ತಮಾನದಲ್ಲಿ ಪ್ರಯೋಗಗಳನ್ನು ನಡೆಸುವ ಬದ್ಧತೆಯು ಕಲಾಕೌಶಲ್ಯದ ಶ್ರೇಷ್ಠತೆಯ ಬಹುಮುಖ್ಯ ಗುಣಲಕ್ಷಣವೂ ಹೌದು. ಅಂಥದ್ದೊಂದು ಬದ್ಧತೆಯು ಈಗಾಗಲೇ ಆಗಿಹೋದ ಕಲೆಗೆ ವರ್ತಮಾನದಲ್ಲಿ ಮರುಹುಟ್ಟು ನೀಡುತ್ತದೆ. ಭವಿಷ್ಯದಲ್ಲಿ ಹೊಸದೊಂದು ರೂಪದ ಮೂಲಕ ಮತ್ತೊಂದು ಬಗೆಯ ಅಭಿವ್ಯಕ್ತಿ ಕಂಡುಕೊಳ್ಳಲು ನೆರವಾಗುತ್ತದೆ. ಆಧುನಿಕತೆ, ನಗರೀಕರಣ, ಜಾಗತೀಕರಣಗಳ ಭರಾಟೆಯಲ್ಲಿ ಗ್ರಾಮ್ಯಸಂಸ್ಕೃತಿಯ ಪರಿಧಿಯೊಳಗಿನ ಕಲಾತ್ಮಕ ಸಂಪನ್ಮೂಲಗಳ ಸದ್ಬಳಕೆ ಮತ್ತು ಅವುಗಳನ್ನು ಆಧರಿಸಿದ ಕಲಾಕೌಶಲ್ಯದ ಮರುಸೃಷ್ಟಿಯ ಕೆಲಸ ಸಾಂಸ್ಕೃತಿಕವಾಗಿ ಮಹತ್ವದ್ದು. ಅಂಥ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿರುವವರು ರಾಧಾ ಸುಳ್ಳೂರು (ಚಿತ್ರ 1) ಮಲೆನಾಡಿನ ಪ್ರಾದೇಶಿಕ ಸಂಸ್ಕೃತಿಯ ವೈವಿಧ್ಯಮಯ ಕಲಾತ್ಮಕ ಪ್ರಕಾರಗಳಲ್ಲೊಂದಾದ 'ಚಿತ್ತಾರ'ವನ್ನು ವಿನೂತನವಾಗಿ ಜೀವಂತವಾಗಿರಿಸಿದ ಹೆಗ್ಗಳಿಕೆ ಅವರದು.

ಗ್ರಾಮೀಣರು ತಮ್ಮ ಬದುಕಿನ ವಿವಿಧ ಕ್ಷಣಗಳನ್ನು ಮಹತ್ವಪೂರ್ಣವಾಗಿಸಿಕೊಳ್ಳಲು ಕಲಾತ್ಮಕ ಮಾರ್ಗವನ್ನು ಕಂಡುಕೊಂಡಿದ್ದಕ್ಕೆ 'ಚಿತ್ತಾರ'ದಂಥ ಕಲೆ ಸಾಕ್ಷಿಯಾಗುತ್ತದೆ. ಗ್ರಾಮೀಣ ಸಂಸ್ಕೃತಿಯು ನಗರೀಕರಣದ ಎಲ್ಲ ಬಗೆಯ ಅತಿರೇಕಗಳ ಮಧ್ಯೆಯೇ ಹಿನ್ನೆಲೆಗೆ ಸರಿಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ತಾಂತ್ರಿಕವಾದ ಯಾವ ಸೌಲಭ್ಯಗಳೂ ಇಲ್ಲದ ಕಾಲದಲ್ಲಿ ಕಲಾತ್ಮಕ ನೈಪುಣ್ಯತೆಯನ್ನು ಸಾಧ್ಯವಾಗಿಸಿಕೊಂಡ ಹಳ್ಳಿಗರ ಜೀವನಶೈಲಿಯನ್ನೂ ಇದು ಪ್ರತಿನಿಧಿಸುತ್ತದೆ. ನಿರ್ದಿಷ್ಟ ಜನಾಂಗವೊಂದರ ಕಲೆ ಸಮೂಹದ ಕಲೆಯಾಗಿ ಸಾಮಾಜಿಕ ಸ್ವೀಕೃತಿ ಮತ್ತು ಮನ್ನಣೆಯನ್ನು ದಕ್ಕಿಸಿಕೊಳ್ಳುವಂಥ ವೈಶಿಷ್ಟ್ಯತೆಯನ್ನು ದೃಢೀಕರಿಸುತ್ತದೆ. ಚಿತ್ತಾರವು ಮೂಲತಃ ದೀವರ ಕಲೆಯಾಗಿದ್ದರೂ ಸಮಾಜದ ಉಳಿದ ವರ್ಗಗಳವರನ್ನೂ ಸೆಳೆದು ಎಲ್ಲರ ಮನೆಗಳಲ್ಲಿಯೂ ಕಂಗೊಳಿಸುವಂಥ ಶಕ್ತತೆಯನ್ನು ಪಡೆದಿದೆ. ಹಬ್ಬಸಂಭ್ರಮ ಸೇರಿದಂತೆ ಬದುಕಿನ ಮಹತ್ವದ ಕ್ಷಣಗಳ ಸಂದರ್ಭಗಳನ್ನು 'ಚಿತ್ತಾರ' ಕಲೆಯು ಅರ್ಥಪೂರ್ಣಗೊಳಿಸುವಂಥದ್ದು.

ವಿನ್ಯಾಸದ ದೃಷ್ಟಿಯಿಂದ ಗ್ರಾಮೀಣ ಮತ್ತ ನಗರ ಪ್ರದೇಶಗಳಲ್ಲಿನ ಮನೆಗಳು ವಿಭಿನ್ನವೆನ್ನಿಸುತ್ತವೆ. ಈಚೆಗಂತೂ ಗ್ರಾಮೀಣ ಪ್ರದೇಶಗಳಲ್ಲೂ ಕೂಡ ನಗರಗಳಲ್ಲಿಯ ಆಧುನಿಕ ವಿನ್ಯಾಸವನ್ನೇ ಅನುಸರಿಸಿ ಕಟ್ಟಡಗಳನ್ನು ನಿರ್ಮಿಸುವ ಪ್ರವೃತ್ತಿ ಹೆಚ್ಚಿದೆ. ಕೃಷಿಕ ಚಟುವಟಿಕೆಗಳಿಗೆ ಮಾನವಸಂಪನ್ಮೂಲವನ್ನು ಒದಗಿಸುವ ಕೇಂದ್ರವಾಗಿರುವ ಕುಟುಂಬದ ನೆಲೆಗಳಾಗಿ ಗ್ರಾಮೀಣ ಮನೆಗಳು ಕಂಗೊಳಿಸುತ್ತವೆ. ಗ್ರಾಮೀಣ ಸಂಸ್ಕೃತಿ ಒಪ್ಪಿಕೊಂಡಿರುವ ನಂಬಿಕೆ ಮತ್ತು ಮೌಲ್ಯವ್ಯವಸ್ಥೆಯ ಒಳಗೆ ರೂಪುಗೊಂಡು ಅನುಸರಿಸಲ್ಪಡುವ ಸಂಪ್ರದಾಯಗಳು ಮೌಲಿಕ ಕಲಾ ಪರಂಪರೆಗೂ ಭದ್ರವಾದ ಅಡಿಪಾಯ

ಹಾಕಿಕೊಡುತ್ತವೆ. ನಗರದಲ್ಲಿನ ಯಾಂತ್ರಿಕ ಬದುಕಿನ ಸಂಕೇತಗಳಾಗುವ ಆಧುನಿಕ ಗೃಹಗಳು ಕೃತಕ ವಿನ್ಯಾಸದ ಕಲಾಕೌಶಲ್ಯವನ್ನು ನೆಚ್ಚಿಕೊಂಡರೆ, ಹಳ್ಳಿಮನೆಗಳು ಪಾರಂಪರಿಕ ಶ್ರೇಷ್ಠತೆಯ ಸ್ಪರ್ಶ ಹೊಂದಿರುವ ಕಲಾನೈಪುಣ್ಯದ ಮೂಲಕ ಗಮನಸೆಳೆಯುತ್ತವೆ. ನಗರದ ಗೃಹಗಳು ನಗರೀಕರಣದ ನಿರ್ದಿಷ್ಟ ನಮೂನೆಗಳಾದರೆ, ಹಳ್ಳಿ ಮನೆಗಳು ಗ್ರಾಮೀಣ ಸಂಸ್ಕೃತಿಯ ಪರಂಪರೆಯ ಕಥನಗಳನ್ನು ಹೇಳುವ ಕಲಾತ್ಮಕ ನೆಲೆಗಳಾಗಿ ಮುಖ್ಯವೆನ್ನಿಸುತ್ತವೆ. ಈ ಬಗೆಯ ವ್ಯತ್ಯಸ್ತ ವಿನ್ಯಾಸದ ಕಲಾತ್ಮಕ ಚೌಕಟ್ಟುಗಳನ್ನು ಮನಗಾಣಿಸುವ ಕಲೆಯಾಗಿ 'ಚಿತ್ತಾರ' ಕಲೆ ಮನ್ನಣೆ ಪಡೆದಿದೆ. ಇದು ಮನವರಿಕೆಯಾಗುವುದು ರಾಧಾ ಸುಳ್ಳೂರು ಅವರ ಮನೆಯನ್ನು (ಚಿತ್ರ 2)ನೋಡಿದಾಗ ಇದು ಹಳ್ಳಿಮನೆಯ ಸೊಗಡನ್ನು ಅರ್ಥೈಸುತ್ತದೆ.




**ಚಿತ್ರ 2: ರಾಧಾ ಸುಳ್ಳೂರು ಅವರ ಮನೆ**

ಚಿತ್ತಾರ ಕಲೆಯನ್ನು ಎರಡು ವಿಧಗಳಲ್ಲಿ ಕಣ್ತುಂಬಿಕೊಳ್ಳಬಹುದು. ನಿತ್ಯಜೀವನದ ವಿವಿಧ ಸಂದರ್ಭಗಳಲ್ಲೆಲ್ಲಾ ಚಿತ್ತಾರದ ಭಿತ್ತಿ ಪ್ರಾಮುಖ್ಯತೆ ಪಡೆದರೆ, ಮದುವೆ, ನಾಮಕರಣ, ಹಬ್ಬ, ಆರಾಧನಾ ಮಹೋತ್ಸವ ಮತ್ತಿತರ ಅವಧಿಗಳಲ್ಲಿ 'ಹಸೆ ಚಿತ್ತಾರ' ಪ್ರಕಾರಕ್ಕೆ ಆದ್ಯತೆ ದೊರೆಯುತ್ತದೆ. ಚಿತ್ತಾರ ಕಲೆಯ ಮೂಲಕ ಪ್ರಾಕೃತಿಕ ಸೊಗಡು ಮತ್ತು ಪ್ರಾಕೃತಿಕ ಬದಲಾವಣೆಗಳನ್ನೆಲ್ಲಾ ಹಿಡಿದಿಡಬಹುದು. ಗೋಡೆಮೇಲಿನ ಚಿತ್ತಾರವು (ಚಿತ್ರ 3)ಚಿಗುರು, ಎಲೆ, ಪತಂಗ, ಕೋಳಿ, ಹಕ್ಕಿ, ಮದುವೆ ದಿಬ್ಬಣದ ವಿವಿಧ ಬಗೆಯ ಚಿತ್ರಣಗಳನ್ನು ಕಟ್ಟಿಕೊಟ್ಟು ಆ ಮೂಲಕ ಪ್ರಕೃತಿ ಮತ್ತು ಬದುಕಿನ ನಡುವಿನ ಕರುಳುಬಳ್ಳಿಯ ಸಂಬಂಧವನ್ನು ಅನಾವರಣಗೊಳಿಸುತ್ತದೆ.



**ಚಿತ್ರ 3: ಗೋಡೆ ಚಿತ್ತಾರದ ಸಮಗ್ರ ಸೊಬಗು**

ಈ ಚಿತ್ತಾರವು ಧ್ವನಿಸುವ ಧ್ವನ್ಯಾರ್ಥಗಳು ಹತ್ತು ಹಲವು. ಈ ಚಿತ್ತಾರದ ಭಿತ್ತಿಯಲ್ಲಿ ಕಾಣಿಸಿಕೊಳ್ಳುವ ಕೋಳಿಗಳು ಗ್ರಾಮೀಣರ ಕುಲಕಸುಬನ್ನು ಸಂಕೇತಿಸುತ್ತವೆ. ಟಿವಿ ಇರದ ಕಾಲದಲ್ಲಿ ಕೋಳಿಗಳ ಚಲನವಲನಗಳಿಂದಲೇ ಮನರಂಜಿಸಿಕೊಳ್ಳುತ್ತಲೇ ಕುಲಕಸುಬು ನಿರ್ವಹಿಸುವ ದಾರಿಯನ್ನು ಗ್ರಾಮೀಣರು ಕಂಡುಕೊಂಡಿದ್ದರು. ಕೋಳಿ ಸಾಕಣೆ ಬದುಕಿನ ಅವಿಭಾಜ್ಯ ಅಂಗವಾಗಿರುವುದನ್ನು ಈ ಚಿತ್ರಗಳು ಕಾಣಿಸುತ್ತವೆ. ಈ ಚಿತ್ತಾರದಲ್ಲಿ ಪಪ್ಪಳಿ ಪೆಟ್ಟಿಗೆಯ ಚಿತ್ರಣವೂ ಇದೆ. ಒಂದೊಂದು ಪೆಟ್ಟಿಗೆಯು ಕಣ್ಣನ್ನು ಸಂಕೇತಿಸುತ್ತದೆ. ಕಣ್ಣನ್ನು ನಕ್ಷತ್ರಗಳಿಗೆ ಹೋಲಿಸಲಾಗುತ್ತದೆ. ಈ ನಕ್ಷತ್ರಗಳು ನಿರ್ದಿಷ್ಟ ಮನೆಯ ಪೂರ್ವಜರ ದ್ಯೋತಕವಾಗಿವೆ. ನಿಧನಾನಂತರ ಹಿರಿಯರು ತಾರೆಗಳಾಗಿ ಬಾನಿಗೆ ಸೇರಿಬಿಡುತ್ತಾರೆ ಎಂಬ ನಂಬಿಕೆಯೇ ಈ ಪಪ್ಪಳಿ ಪೆಟ್ಟಿಗೆಯ ಚಿತ್ರಣದ ಮೂಲವಾಗಿದೆ. ಇದು ಕೇವಲ ಒಂದು ಬಗೆಯ ಚಿತ್ತಾರವಾದರೆ ದೀಪದ ಚಿತ್ತಾರ ಸೇರಿದಂತೆ ವಿವಿಧ ತೆರನಾದ ಚಿತ್ತಾರಗಳನ್ನು ಬಿಡಿಸಲಾಗುತ್ತದೆ. (ವಿವಿಧ ಚಿತ್ರಗಳು) ಹಸೆ ಚಿತ್ತಾರವೂ ಭಿನ್ನ ಹಿನ್ನೆಲೆ ಹೊಂದಿದೆ. ಚಾಪೆಗಳ ಮೇಲೆ ಕುಳಿತುಕೊಳ್ಳುವವರ ಸಂಖ್ಯೆಯ ಆಧಾರದಲ್ಲಿ ದೊಡ್ಡ ಬಳಗವೋ, ಸಣ್ಣಬಳಗವೋ ಎಂಬುದನ್ನು ನಿರ್ಧರಿಸಿ ಹೆಣ್ಣುಕೊಡುವ ಸಂಪ್ರದಾಯವಿತ್ತು. ಈಚಲು ಚಾಪೆಗಳನ್ನು ಉಡುಗೊರೆಗಳನ್ನಾಗಿ ನೀಡಲಾಗುತ್ತಿತ್ತು. ಈ ಚಾಪೆಗಳ ಮೇಲೆ ಉತ್ತರಾಭಿಮುಖ, ಪೂರ್ವಾಭಿಮುಖವಾಗಿ ಚಿತ್ತಾರ ಬಿಡಿಸಲಾಗುತ್ತಿತ್ತು. ಬಾಗಿಲ ತೋರಣದೊಂದಿಗಿನ ಚಿತ್ತಾರ, ಮಡಕೆ ಚಿತ್ತಾರಗಳಂತೂ ಕಣ್ಮನ ಸೆಳೆಯುತ್ತವೆ. ಚಿತ್ತಾರ ಬಿಡಿಸುವುದಕ್ಕೆ ಬ್ರಷ್ ಬಳಸಲಾಗುವುದಿಲ್ಲ. ಪುಂಡಿನಾರು ಬಳಕೆಯ ಮೂಲಕವೇ ಚಿತ್ತಾರವನ್ನು ಬಿಡಿಸಲಾಗುತ್ತದೆ. ಚಿತ್ತಾರದಲ್ಲಿ ಬಣ್ಣ ತುಂಬಲು ಮರುಗೆ ಹರಳನ್ನು ಉಪಯೋಗಿಸಲಾಗುತ್ತದೆ. ಕೆಮ್ಮಣ್ಣು ಮತ್ತು ಅಕ್ಕಿ ಇಟ್ಟನ್ನೂ ಬಳಸಿ ಚಿತ್ತಾರವನ್ನು ರೂಪಿಸಲಾಗುತ್ತದೆ.

ಮನೆಯ ಗೋಡೆಯ ಮೇಲೆ ಬಿಡಿಸಿರುವ ದೀವರು ಜನಾಂಗದ ಆಚಾರ–ವಿಚಾರಗಳಲ್ಲಿಯೇ ಮೇಳೈಸಿರುವ ಈ ಕಲಾಪ್ರಕಾರಕ್ಕೆ ಸಾಮಾಜಿಕ ನೆಲೆಗಟ್ಟಿನ ಸಾರ್ವತ್ರಿಕ ಆಯಾಮವನ್ನು ದೊರಕಿಸಿಕೊಡುವ ಕಾರ್ಯದಲ್ಲಿ ರಾಧಾ ಸುಳ್ಳೂರು ನಿರತರಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಸೈದೂರು ಸಮೀಪದ ಸುಳ್ಳೂರಿನವರಾದ ರಾಧಾ ಅವರು ಸಾಗರ ತಾಲೂಕಿನ ಹಸುವಂತೆಯ 'ಚಿತ್ತಾರ ಚಾವಡಿ'ಯಲ್ಲಿ ಹೆಚ್ಚಿನ ತರಬೇತಿ ಪಡೆದು ತಮ್ಮ ಪೂರ್ವಜರಿಂದ ಬಳುವಳಿಯಾಗಿ ಪಡೆದ ಚಿತ್ತಾರ ಕಲಾಕೌಶಲ್ಯವನ್ನು ವಿಭಿನ್ನ ರೀತಿಯಲ್ಲಿ ಅಭಿವ್ಯಕ್ತಿಸುವ ಪ್ರಯೋಗಶೀಲತೆಯನ್ನು ಸಾಬೀತುಪಡಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಇವರ ಪ್ರಯೋಗಶೀಲ ಪ್ರಯತ್ನಗಳನ್ನು ಗುರುತಿಸಿ 2005ರಲ್ಲಿ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ರಾಜಭವನದಲ್ಲಿ 2002ರಲ್ಲಿ ಚಿತ್ತಾರ ಬಿಡಿಸಿ ಮೆಚ್ಚುಗೆ ಗಳಿಸಿದ ಇವರು ಬೆಂಗಳೂರಿನ ಶ್ರೀ ಕುಮಾರನ್ ಚಿಲ್ಡ್ರನ್ ಹೋಮ್‌ನ ಮಕ್ಕಳಿಗಾಗಿ ಒಂದು ವರ್ಷದ ಅವಧಿಯವರೆಗೆ ಚಿತ್ತಾರ ಕಲಾಕೌಶಲ್ಯದ ತರಬೇತಿಯನ್ನೂ ನೀಡಿದ್ದಾರೆ. ಕಳೆದ ಹದಿಮೂರು ವರ್ಷಗಳಲ್ಲಿ ನವದೆಹಲಿ, ಚೆನ್ನೈ, ಬೆಂಗಳೂರು, ಹಂಪಿ, ಮೈಸೂರು, ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧ ಕಡೆಗಳಲ್ಲಿ ಚಿತ್ತಾರ ಪ್ರದರ್ಶನ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿ ಆ ಮೂಲಕ ಚಿತ್ತಾರ ಕಲೆಯ ದೇಶೀಯ ಆಯಾಮಗಳನ್ನು ಪ್ರಚುರಪಡಿಸಿದ್ದಾರೆ. ಸುಳ್ಳೂರಿನಲ್ಲಿ ಪ್ರತಿವರ್ಷವೂ ಮಕ್ಕಳಿಗೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಚಿತ್ತಾರ ಕುರಿತು ತರಬೇತಿಯನ್ನು ನೀಡುತ್ತಿದ್ದಾರೆ.



**ಚಿತ್ರ4: ಗೋಡೆ ಚಿತ್ತಾರದ ಮತ್ತೊಂದು ಬಗೆ**



**ಚಿತ್ರ 5: ವಿನೂತನ ಚಿತ್ತಾರವಿನ್ಯಾಸ**

ಬೆಂಗಳೂರು ಸೇರಿದಂತೆ ವಿವಿಧ ನಗರಗಳವರು ದೂರವಾಣಿ ಮೂಲಕ ಸಂಪರ್ಕಿಸಿ ತಮ್ಮ ಮನೆಯ ಗೋಡೆಗಳ ಮೇಲೆ ಚಿತ್ತಾರ ವಿನ್ಯಾಸ ರೂಪಿಸುವುದಕ್ಕೆ ಇವರನ್ನು ಆಹ್ವಾನ ನೀಡುತ್ತಾರೆ. ಆಧುನಿಕ ವಿನ್ಯಾಸಕ್ಕಿಂತಲೂ ಈ ದೇಶೀ ವಿನ್ಯಾಸವೇ ಬಹಳಷ್ಟು ಜನರಿಗೆ ಇಷ್ಟವಾಗುತ್ತದೆ ಎಂದು ರಾಧಾ ಅವರು ಅಭಿಪ್ರಾಯಪಡುತ್ತಾರೆ. ಚಿತ್ತಾರ ಕಲೆಯು ಮಲೆನಾಡಿನದ್ದು ಎಂಬುದೇ ಬಹುತೇಕರಿಗೆ ಗೊತ್ತಿರಲಿಲ್ಲ. ನಗರಗಳ ನಿವಾಸಿಗಳ ನಿರೀಕ್ಷೆಗಳಿಗೆ ತಕ್ಕಂತೆ ಚಿತ್ತಾರ ಕಲೆಯನ್ನು ವಿವಿಧ ರೀತಿಗಳಲ್ಲಿ ಬಳಸಿಕೊಳ್ಳಬಹುದು. ಇದು ಮನೆಯ ಅಂದವನ್ನು ಹೆಚ್ಚಿಸುವುದಷ್ಟೇ ಅಲ್ಲದೇ ದೇಶೀ ಕಲೆಗಳ ಶ್ರೇಷ್ಠತೆಯನ್ನು ನಂತರದ ಪೀಳಿಗೆಗಳಿಗೆ ಪರಿಚಯಿಸಲೂ ಸಹಾಯಕವಾಗುತ್ತದೆ. ಮರ, ಮಡಕೆ, ಸ್ವೀಟ್ ಬಾಕ್ಸ್, ಗ್ರೀಟಿಂಗ್ ಕಾರ್ಡ್ ಹೀಗೆ ವಿವಿಧ ರೀತಿಗಳಲ್ಲಿ ಚಿತ್ತಾರ ಕಲೆಯನ್ನು ವರ್ತಮಾನದ ಟ್ರೆಂಡ್‌ಗೆ ಅನುಗುಣವಾಗಿ ಬಳಸಿಕೊಳ್ಳಬಹುದು. ಅಲ್ಲದೇ ಮದುವೆ ಆಮಂತ್ರಣ ಪತ್ರಿಕೆ, ವಿಸಿಟಿಂಗ್ ಕಾರ್ಡ್‌ಗಳಲ್ಲೂ ಚಿತ್ತಾರ ಬಿಡಿಸಬಹುದು. ಈಗೀಗ ನಗರಗಳ ಹೋಟೆಲ್‌ಗಳವರೂ ಚಿತ್ತಾರದ ಮೂಲಕ ತಮ್ಮ ಗ್ರಾಹಕರನ್ನು ಆಕರ್ಷಿಸುವುದಕ್ಕೆ ಒಲವು ತೋರುತ್ತಿದ್ದಾರೆ ಎಂದು ಅವರು ಹೇಳುತ್ತಾರೆ. ದೊಡ್ಡ ದೊಡ್ಡ ಮನೆಗಳಲ್ಲಿ ಚಿತ್ತಾರವನ್ನು ಬಿಡಿಸುವಾಗ ಅಲ್ಲಿ ಲಭ್ಯವಿರುವ ಆವರಣವನ್ನು ಬಳಸಿಕೊಳ್ಳುವ ಆ ಕ್ಷಣದ ನಿರ್ಧಾರವೇ ಮುಖ್ಯವಾಗುತ್ತದೆ. ಅಲ್ಲದೇ ಬಣ್ಣಗಳನ್ನು ಉಪಯೋಗಿಸುವ ಕಾಲಕ್ಕೂ ಎಚ್ಚರ ವಹಿಸಬೇಕಾಗುತ್ತದೆ ಎನ್ನುತ್ತಾರೆ.

ಚಿತ್ತಾರ ಕಲೆಯನ್ನು ಪ್ರತ್ಯೇಕ ಗೃಹಕೈಗಾರಿಕೆಯನ್ನಾಗಿ ಗುರುತಿಸಿ ಅದನ್ನು ಪ್ರಚುರಪಡಿಸುವ ಇಚ್ಛಾಶಕ್ತಿಯನ್ನು ಸರ್ಕಾರ ತೋರಬೇಕು ಎಂಬುದು ರಾಧಾ ಅವರ ಒತ್ತಾಯ. ನಾಲ್ಕು ಗೋಡೆಗಳ ಮಧ್ಯೆದಲ್ಲಿಯೇ ಕಳೆದುಹೋಗಬಹುದಾದ ಈ ಕಲಾಕೌಶಲ್ಯವನ್ನು ಸಮಾಜದ ಮುಖ್ಯವಾಹಿನಿಗೆ ಅವಶ್ಯಕತೆಯಿದೆ ಎಂದು ಅವರು ಪ್ರತಿಪಾದಿಸುತ್ತಾರೆ. “ಬಡತನದ ಹಿನ್ನೆಲೆಯಿರುವವರು ಈ ಚಿತ್ತಾರ ಕಲೆಯನ್ನೇ ನೆಚ್ಚಿಕೊಂಡು ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಚಿತ್ತಾರಗಳನ್ನು ಪ್ರದರ್ಶಿಸಿ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳುವುದಕ್ಕಾಗದು. ಇದಕ್ಕೆ ತೊಡಗಿಸುವ ಹಣದ ವಾಪಸಾತಿ ಮತ್ತು ಲಾಭ ಎರಡೂ ಅನಿರೀಕ್ಷಿತ ಆಗಿರುವುದರಿಂದ ಈ ಚಿತ್ತಾರವನ್ನೇ ನೆಚ್ಚಿಕೊಂಡು ಬದುಕುವ ಧೈರ್ಯ ತೋರುವುದಿಲ್ಲ. ನಿರ್ದಿಷ್ಟ ಯೋಜನೆಗಳ ಮೂಲಕ ಸರ್ಕಾರ ನಿರಂತರ ಬೆಂಬಲ ನೀಡಿದರೆ ಚಿತ್ತಾರ ಕಲಾಕೌಶಲ್ಯವುಳ್ಳ ಗೃಹಿಣಿಯರು ಸ್ವಾವಲಂಬನೆಯ ಹಾದಿಯನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ” ಎಂದು ಹೇಳುತ್ತಾರೆ.

# ಮಲೆನಾಡಿನ ಹಿಂದುಳಿದ ವರ್ಗಗಳ ಮಹಿಳೆಯರ ಸ್ಥಿತಿಗತಿಗಳು

**ಗಿರಿಧರ್. ಎಸ್.**

ಕರ್ನಾಟಕ ರಾಜ್ಯವು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪಡೆದಿರುವ ಸಿದ್ಧಿ ದೊಡ್ಡದು. ಸಾಹಿತ್ಯ, ಶಿಲ್ಪಕಲೆ, ವಾಸ್ತುಶಿಲ್ಪ, ಚಿತ್ರಕಲೆ, ಸಂಗೀತ, ಆಡಳಿತ ಇವೇ ಮೊದಲಾದ ಕ್ಷೇತ್ರಗಳಲ್ಲಿ ಕರ್ನಾಟಕವು ಅಪಾರವಾದ ಸಾಧನೆಯನ್ನು ಮಾಡಿದೆ. ಹಾಗಾಗಿ ಭಾರತದ ಸಂಸ್ಕೃತಿ ಸಂಪನ್ನ ಪ್ರಾಂತಗಳಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಕರ್ನಾಟಕದ ಪ್ರವಾಸಿ ತಾಣ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಶಿವಮೊಗ್ಗ ಜಿಲ್ಲೆಯು ಎತ್ತರವಾದ ಹಾಗೂ ಕಡಿದಾದ ಘಟ್ಟ ಶ್ರೇಣಿಗಳಿಂದಲೂ ನದಿ ತೊರೆಗಳಿಂದಲೂ ಕೂಡಿದ್ದು, ವಿಶಿಷ್ಟ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಸಹ್ಯಾದ್ರಿ ಶ್ರೇಣಿ ಎಂದು ಕರೆಯುವ ಪಶ್ಚಿಮ ಘಟ್ಟ ಸಾಲು ಮತ್ತು ಎತ್ತರವಾದ ಗಿರಿಪರ್ವತಗಳು ಈ ಜಿಲ್ಲೆಯ ಪಶ್ಚಿಮ ಸೆರಗಿನಲ್ಲಿ ಹಾದುಹೋಗಿವೆ. ಈ ಪಶ್ಚಿಮ ಘಟ್ಟಗಳ ಅಂಚಿನ ಪೂರ್ವಕ್ಕೆ ಬಯಲು ಪ್ರದೇಶದವರೆಗೂ ಹಬ್ಬಿರುವ ದಟ್ಟವಾದ ಕಾಡುಕಣಿವೆ ಮತ್ತು ನದಿಗಳಿಂದ ಆವೃತ್ತವಾದ ಭೂ ಪ್ರದೇಶವನ್ನೆ ಮಲೆನಾಡು ಪ್ರದೇಶವೆಂದು ಕರೆಯಲಾಗುವುದು. ಈ ಭೂಭಾಗಕ್ಕೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಹೊಸನಗರದ ಬಹುತೇಕ ಭೂ ಪ್ರದೇಶಗಳು ಸೇರಿಕೊಳ್ಳುತ್ತವೆ. ಉಳಿದ ತಾಲ್ಲೂಕುಗಳು ಅರೆಮಲೆನಾಡಾಗಿ ಗುರುತಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಮಲೆನಾಡಿನ ಹಿಂದುಳಿದ ವರ್ಗಗಳ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಯಲು ಶಿವಮೊಗ್ಗ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಮಲೆನಾಡು ಎಂದಾಕ್ಷಣ ಸಾಮಾನ್ಯವಾಗಿ ಕಣ್ಮುಂದೆ ಬರುವ ದೃಶ್ಯವೆಂದರೆ, ಸಮೃದ್ಧಿಯ ತಾಣ. ಬರಗಾಲ ಎಂಬ ಹೆಸರನ್ನೇ ಕಂಡರಿಯದ ಅದೃಷ್ಟದ ಬೀಡು. ಎಲ್ಲೆಡೆ ಹಚ್ಚ ಹಸಿರಿನಿಂದ ಕೂಡಿದ್ದು, ನೋಡಲೇಬೇಕಾದ ಪ್ರವಾಸೀ ತಾಣ. ಶ್ರೀಮಂತಿಕೆಯ ನೆಲೆವೀಡು. ಆದರೆ ಮಲೆನಾಡು ಭಾಗದಲ್ಲಿ ನೆಲೆ ಕಂಡುಕೊಂಡಿರುವ ಜನರ ಅನುಭವದ ಒಳ ಹೊಕ್ಕಿದವರಿಗೆ ಮಾತ್ರ ಸಮಸ್ಯೆಗೆ ಮತ್ತೊಂದು ಹೆಸರೇ ಮಲೆನಾಡು ಎಂಬುದು ಅರ್ಥವಾಗುತ್ತದೆ. ಸಾಮಾನ್ಯ ಮೂಲಭೂತ ಸೌಕರ್ಯಗಳಿಂದಲೂ ವಂಚಿತರಾದ ಜನ ಇಂದಿಗೂ ಮಲೆನಾಡಿನ ಮೂಲೆ ಮೂಲೆಗಳಲ್ಲಿ ವಾಸವಾಗಿದ್ದಾರೆ. ಮೊದಲೇ ಗುಡ್ಡಗಾಡು ಪ್ರದೇಶವಾದ್ದರಿಂದ ಒಂಟಿಮನೆ, ಗುಂಪು ಮನೆಗಳು ಇಲ್ಲಿ ಸಾಮಾನ್ಯ. ಎಷ್ಟೋ ಹಳ್ಳಿಗರು ವಿದ್ಯುತ್ ಸಂಪರ್ಕದ ಸೋಂಕಿಲ್ಲದಂತಿದ್ದಾರೆ. 2011–12 ರ ಶಿವಮೊಗ್ಗ ಜಿಲ್ಲಾ ಅಂಕಿ ಅಂಶಗಳ ಪ್ರಕಾರ ಇಂದಿಗೂ 2 ಗ್ರಾಮ ಹಾಗೂ 25 ಉಪಗ್ರಾಮಗಳು ವಿದ್ಯುತ್ ಸಂಪರ್ಕವನ್ನು ಹೊಂದಿಲ್ಲ. ಇನ್ನು ಮಲೆನಾಡು ಭಾಗದಲ್ಲಿ ಇಂದು ನಕ್ಸಲ್ ಸಮಸ್ಯೆ ಕಡಿಮೆಯಾಗಿದ್ದರೂ, ನಾಗರಿಕತೆಯ ಸಂಪರ್ಕವನ್ನೇ ಕಡಿದುಕೊಂಡ ಎಷ್ಟೋ ಗ್ರಾಮಗಳು ಈ ಸಮಸ್ಯೆಯಿಂದ ಸಂಪೂರ್ಣ ಹೊರಬಂದಿಲ್ಲ. ಹಾಗಾಗಿ ಮಲೆನಾಡು ಪ್ರದೇಶದಲ್ಲಿ ಎಲ್ಲಾ ನೈಸರ್ಗಿಕ ಸಂಪನ್ಮೂಲ, ಉತ್ತಮ ಹವಾಗುಣ ಇದ್ದಾಗ್ಯೂ, ಈ ಪ್ರದೇಶದಲ್ಲಿ ನೆಮದಿಯ ಜೀವನವನ್ನು ನಡೆಸುವುದು ಒಂದು ಸವಾಲಿನ ಸಂಗತಿ. ಇಲ್ಲಿನ ಬಹುತೇಕ ಸಮುದಾಯಗಳು ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳಲ್ಲಿ ನಿರತವಾಗಿದ್ದು, ಇವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಅಷ್ಟೊಂದು ಉತ್ತಮವಾಗಿಲ್ಲ. ಇನ್ನೂ ಈ ಪ್ರದೇಶದ ಹಿಂದುಳಿದ ವರ್ಗಗಳ ಸ್ಥಿತಿ ಶೋಚನೀಯವಾಗಿದೆ. ಅಲ್ಲದೆ, ಮಲೆನಾಡು ಭಾಗದ ಮಹಿಳೆಯ ಸ್ಥಿತಿ ಸಮಸ್ಯೆಗಳಿಂದೇನು ಹೊರತಾಗಿಲ್ಲ. ಅತ್ಯಾಚಾರ, ದೌರ್ಜನ್ಯ, ರಕ್ಷಣೆಯ ಕೊರತೆ, ಶೋಷಣೆ ಮುಂತಾದ ಸಮಸ್ಯೆಗಳಿಂದ ಜೀವನ ಸಾಗಿಸುತ್ತಿದ್ದಾಳೆ. ಬಹುತೇಕ ಅಧ್ಯಯನಗಳು ದೃಢಪಡಿಸುವಂತೆ ಭಾರತದಾದ್ಯಂತ ಚದುರಿಹೋಗಿರುವ ಮಹಿಳೆಯರ ಸಮಸ್ಯೆಗಳು ಅಗಾಧವಾಗಿವೆ. ಆದಾಗ್ಯೂ ದೇಶದ ಎಲ್ಲಾ ಕಡೆ ಮಹಿಳೆಯರ ಸಮಸ್ಯೆಗಳು ಏಕರೂಪವಾಗಿವೆ ಎಂದು ಹೇಳಲು ಸಾಧ್ಯವಿಲ್ಲ. ಒಂದು ಜಿಲ್ಲೆ, ಪ್ರಾಂತ್ಯ, ರಾಜ್ಯದಲ್ಲಿ ಸಮಸ್ಯೆ ಎನಿಸುವಂಥದ್ದು ಮತ್ತೊಂದು ಕಡೆ ಮಹಿಳೆಯರಿಗೆ ಸಮಸ್ಯೆವೆನಿಸದೇ ಹೋಗಬಹುದು. ಆದರೆ ಈ ಭಾಗದ ಹಿಂದುಳಿದ ವರ್ಗಗಳ ಮಹಿಳೆಯ ಸ್ಥಿತಿಗತಿಗಳು ಮೇಲಿನ ಸಮಸ್ಯೆಗಳ ಜೊತೆಗೆ ಹಲವಾರು ಮೂಲಭೂತ ಸಮಸ್ಯೆಗಳಿಂದ ಕೂಡಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಒಟ್ಟಾರೆಯಾಗಿ ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗದಲ್ಲಿ ನೆಲೆಸಿರುವ ಹಿಂದುಳಿದ ವರ್ಗಗಳ ಮಹಿಳೆಯರ ಅಭಿವೃದ್ಧಿ ಕುರಿತಾದ ಸಮಸ್ಯೆಗಳನ್ನು ಕ್ರೂಢೀಕರಿಸಿ ವಾಸ್ತವಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸುವ ಪ್ರಯತ್ನವಾಗಿದೆ.

**ಭಾರತೀಯ ಮಹಿಳೆ**

ಭಾರತವು ತನ್ನದೇ ಆದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದೆ. ಇದು ಶತಶತಮಾನಗಳಿಂದ ಇಂದಿನವರೆಗೂ ವೈವಿಧ್ಯ ಹಾಗೂ ವೈಶಿಷ್ಟ್ಯಪೂರ್ಣ ವಿಚಾರಗಳ ತವರೂರು ಎಂದೇ ಹೆಸರು ಪಡೆದುಕೊಂಡಿದೆ. ನಾಗರಿಕತೆಯುದ್ದಕ್ಕೂ ಸಂಸ್ಕೃತಿ, ಆಚಾರ-ವಿಚಾರ, ಜೀವನ ಶೈಲಿ, ಧರ್ಮ, ಭಾಷೆ, ಜನಾಂಗ ಇತ್ಯಾದಿಗಳಲ್ಲಿ ಹಾಗೂ ಸ್ತ್ರೀ-ಪುರುಷರ ಬದುಕಿನ ಹೋರಾಟದಲ್ಲಿಯೂ ಕೂಡ ವಿಭಿನ್ನತೆಯನ್ನು ಗಮನಿಸಬಹುದಾಗಿದೆ. ಭಾರತೀಯ ಸಮಾಜದ ಸಾಂಸ್ಕೃತಿಕ ಇತಿಹಾಸವನ್ನು ಅವಲೋಸಿದಾಗ ವರ್ಣ, ಜಾತಿ, ಸಂಪ್ರದಾಯ ಪದ್ದತಿಗಳು, ಏಣಿ-ಶ್ರೇಣಿ ವ್ಯವಸ್ಥೆ ಇಲ್ಲಿ ಕಂಡುಬರುತ್ತವೆ. ಇವುಗಳ ಜೊತೆಗೆ ಲಿಂಗತ್ವ (ಉಜಟಿಜಜಡಿ) ಎನ್ನುವ ಪ್ರಮುಖ ಸ್ತರವಿನ್ಯಾಸ ಈ ಸಮಾಜದಲ್ಲಿ ಅಸಮಾನತೆಯನ್ನು ಸೃಷ್ಟಿಸಿದೆ. ಆದಾಗ್ಯೂ ಭಾರತೀಯ ಮಹಿಳೆಯರು ತಮ್ಮದೇ ಆದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದ್ದಾರೆ. ಪುರುಷ ಮತ್ತು ಮಹಿಳೆ ಎಂಬ ಲಿಂಗಭೇದದಿಂದ ಸಹಜವಾಗಿ ಇವರು ಬೇರೆಯಾಗಿದ್ದರೂ, ಭಾರತೀಯ ಸಾಂಸ್ಕೃತಿಕ ಚರಿತ್ರೆಯಲ್ಲಿ ಇವರಿಗೆ ವಿಶಿಷ್ಟ ಸ್ಥಾನವಿದೆ. ಸಾಮಾಜೀಕರಣದಿಂದಾಗಿ ಈ ಎರಡೂ ಗುಂಪುಗಳು ಸಮನಾಗಿ ಬೆಳೆಯದೇ ಅಸಮಾನ ಗುಂಪುಗಳಾಗಿ ಬೆಳೆದವು. ಪ್ರಾಚೀನ ಕಾಲದಿಂದಲೂ ಲಿಂಗ ತಾರತಮ್ಯ ಪ್ರಪಂಚದಾದ್ಯಂತ ಕಂಡು ಬಂದರೂ, ಭಾರತೀಯ ಸಮಾಜದಲ್ಲಿ ಅತ್ಯಂತ ತೀವ್ರ ಸ್ವರೂಪ ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ. ಸಮಾಜ ಉದ್ಭವವಾದಾಗಿನಿಂದಲೂ ಅಂದರೆ ಬೇಟೆಯಾಡುವ ಹಂತದಿಂದ ಕೃಷಿಪ್ರಧಾನ ಸಮಾಜದಲ್ಲಿಯೂ ಶ್ರಮವಿಭಜನೆಯ ಲಿಂಗತ್ವದ ಮೇಲೆಯೇ ಆಗಿರುವುದನ್ನು ಇತಿಹಾಸ ಹೇಳುತ್ತದೆ. ಅಂದರೆ ಮಹಿಳೆಯು ಶಕ್ತಿವಂತಳಲ್ಲ ಎಂಬ ಕಲ್ಪನೆಯು ಅಭಿವೃದ್ಧಿಶೀಲ ಸಮಾಜಗಳಲ್ಲಿ ಬಲವಾಗಿ ಬೇರೂರಿದ್ದನ್ನು ನೋಡಬಹುದು. ಪರಿಣಾಮವಾಗಿ ಮಹಿಳೆಯ ಕೆಲಸವನ್ನು ಉತ್ಪಾದಕ ಕೆಲಸವಲ್ಲ (ಓಠಟಿ-ಕಾಡಿಠಜಣಛಿಣiತಿe) ಎಂದು ಪರಿಗಣಿಸಿ ಕೇವಲ ಅವಳ ಪಾತ್ರವನ್ನು ಅಡುಗೆ ಮನೆಗೆ ಸೀಮಿತಗೊಳಿಸಲಾಯಿತು. ಅಲ್ಲಿಂದ ಪ್ರಾರಂಭವಾದ ಅಸಮಾನತೆ, ತಾರತಮ್ಯ, ಶೋಷಣೆ, ವಂಚಿತತೆ ಮತ್ತು ಹಿಂದುಳಿದಿರುವಿಕೆಗಳು ಇಂದೂ ಮುಂದುವರಿದಿವೆ.

ಭಾರತೀಯ ಮಹಿಳೆಯು ಹೆಚ್ಚು ಕಡಿಮೆ ಎಲ್ಲಾ ರಂಗದಲ್ಲಿಯೂ ಪುರುಷರಿಗಿಂತ ಕಡಿಮೆ ಅವಕಾಶಗಳನ್ನು ಪಡೆದಿರುವುದನ್ನು ಇತಿಹಾಸ ಹೇಳುತ್ತದೆ. ಇದಕ್ಕೆ ಮುಖ್ಯ ಕಾರಣ ಪುರುಷ ಪ್ರಧಾನ ವ್ಯವಸ್ಥೆ (ಒಚಿಟಜ ಆಠಮಿಚಿಣಜಜ ಖಙಭಿಙಾಥಿ) ಎಂದು ಹೇಳಬಹುದು. ಹಿಂದಿನಿಂದಲೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪುರುಷರು ಪ್ರಾಬಲ್ಯ ಸಾಧಿಸಿ ಎಲ್ಲಾ ಅವಕಾಶಗಳನ್ನು ಪಡೆದುಕೊಂಡುದದರಿಂದಲೇ ಇಂದು ಈ ಎರಡು ಗುಂಪುಗಳಲ್ಲಿ ಅಸಮಾನತೆ ಕಂಡು ಬರುತ್ತಿದೆ (ಗುರುಲಿಂಗಯ್ಯ ಎಂ, 2007:46). ಶಿಕ್ಷಣದ ಅವಕಾಶಗಳಲ್ಲಿ ಮಹಿಳೆಯು ಪುರುಷರಿಗಿಂತ ಕಡಿಮೆ ಅವಕಾಶಗಳನ್ನು ಪಡೆದಿದ್ದಾಳೆ. ಅಲ್ಲದೆ ಸಾಕ್ಷರತೆಯಲ್ಲಿ ಮಹಿಳೆಯರಲ್ಲಿ ಹೆಚ್ಚಿನ ಹಿಂದುಳಿದಿರುವಿಕೆಯಿದೆ. ಈ ರೀತಿಯ ಶಿಕ್ಷಣದ ಅಸಮಾನತೆ ಕೇವಲ ಸಾಕ್ಷರತೆಗೆ ಸೀಮಿತವಾಗಿರದೇ ವಿವಿಧ ರೀತಿಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇವರ ಪ್ರವೇಶಾವಕಾಶ (ಇಟಿಡಿಠಟಟಮಿಟಿಣ) ಪುರುಷರಿಗಿಂತ ಕಡಿಮೆ ಎಂದೇ ಹೇಳಬೇಕು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಸ್ಥಾನಮಾನಗಳ ಬಗ್ಗೆ ಖಚಿತವಾದ ಉತ್ತರ ನೀಡುವುದು ಕಷ್ಟಕರ. ಪುರಾತನ ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯವರನ್ನಾಗಿ ಪರಿಗಣಿಸಿ ಕೆಳಸ್ತರದಲ್ಲಿಟ್ಟಿರುವುದು ಕಂಡುಬರುತ್ತದೆ. ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿಕೆಗೆ ಅಡ್ಡಿಯನ್ನುಂಟುಮಾಡುವುದರ ಜೊತೆಗೆ, ಯಾವುದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಇಲ್ಲದ ಸ್ಥಿತಿಗೆ ದೂಡಿರುವುದನ್ನು ಕಾಣಬಹುದು. ಮಹಿಳೆಯರೆಂದರೆ ಅವಲಂಬಿತರು, ಅವರ ಅವಲಂಬನೆಯ ಮೂಲ ಜೈವಿಕ ಹಾಗೂ ದೈಹಿಕ ಕಾರಣಗಳಿಗಿಂತ ಅವರ ಆರ್ಥಿಕ ಬಲಹೀನತೆಯಲ್ಲಿದೆ ಹಾಗೂ ಅವರನ್ನು ಪಾಲಿಸಿ ಪೋಷಿಸಿ, ರಕ್ಷಿಬೇಕಾದಂತಹ ಹೊಣೆ ಪುರುಷರ ಮೇಲಿದೆ ಎಂಬ ಮನೋಭಾವನೆ ನಮ್ಮ ಸಮಾಜದಲ್ಲಿ ಬೇರೂರಿದೆ. ಈ ಮನೋಭಾವಕ್ಕೆ ಮುಖ್ಯ ಕಾರಣ ಅವರ ಆರ್ಥಿಕ ಮೌಲ್ಯದ ಅಗೋಚರತೆ. ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿದ್ದ ಸಂಪ್ರದಾಯ, ರೂಢಿ, ಪದ್ಧತಿ ಮತ್ತು ಪರಂಪರೆಗಳೂ ಕೂಡ ಮಹಿಳೆಯು ಪುರುಷನ ಅಧೀನಳೆಂಬ ಭಾವನೆಗಳನ್ನು ಜಾಗೃತಗೊಳಿಸಿ ಅವಳ ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಗೆ ಕಂಟಕ ಪ್ರಾಯವಾಗಿವೆ (ಆಂಜನಪ್ಪ ಬಿ.ಹೆಚ್, 2006:2). ಈ ಹಿನ್ನೆಲೆಯಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ವಿವಿಧ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವುದು ಪ್ರಸ್ತುತ ದಿನಗಳಲ್ಲಿ ಅತ್ಯಂತ ಅಗತ್ಯವೂ, ಅನಿವಾರ್ಯವೂ ಆಗಿದೆ.

**ಹಿಂದುಳಿದ ವರ್ಗಗಳ ಮಹಿಳೆ**

ಹಿಂದುಳಿದ ವರ್ಗಗಳ ಮಹಿಳೆ ಎನ್ನುವ ವಿಭಿನ್ನ ಸಾಮಾಜಿಕ ಘಟಕವಿದೆಯೇ ಎನ್ನುವುದೇ ಒಂದು ಮುಖ್ಯವಾದ ಪ್ರಶ್ನೆ. ಮಹಿಳೆಯರು ಯಾವುದೇ ಜಾತಿಯವರಾದರೂ, ದ್ವಿತೀಯ ದರ್ಜೆಯ ಪ್ರಜೆಗಳೇ ಆಗಿರುವುದರಿಂದ, ಹಿಂದುಳಿದ ವರ್ಗಗಳ ಮಹಿಳೆ ಎಂಬ ಪ್ರತ್ಯೇಕತೆಯ ಅಗತ್ಯವಿಲ್ಲ ಎಂಬುದು ಬಹಳಷ್ಟು ಸ್ತ್ರೀವಾದಿ ಚಿಂತಕರ ಅಭಿಪ್ರಾಯ. ಮಹಿಳೆಯರು ಒಂದು ನಿರ್ದಿಷ್ಟ ಸಾಮಾಜಿಕ ಗುಂಪನ್ನು ಪ್ರತಿನಿಧಿಸದಿದ್ದರೂ, ಭಾರತೀಯ ಸಮಾಜದಲ್ಲಿ ಅವಕಾಶ ವಂಚಿತವಾದ ಗುಂಪಾದ್ದರಿಂದ ಮತ್ತು ಲಿಂಗ ತಾರತಮ್ಯಕ್ಕೆ ಒಳಗಾದ್ದರಿಂದ ಇವರು ಸಹ ಒಂದು ಹಿಂದುಳಿದ ಗುಂಪಾಗಿದ್ದಾರೆ. ಈ ರೀತಿಯ ಹಿಂದುಳಿದ ಗುಂಪಾಗಿರುವುದರಿಂದಲೇ ಇವರೂ ಸಹ ಅಂಚೀಕೃತ ಗುಂಪಾಗಿ (ಒಚಿಡಿರುಚಿಚಿಟಿಋಜ) ಮಾರ್ಪಾಟಾಗಿದ್ದಾರೆ. ಭಾರತೀಯ ಮಹಿಳೆಯರು ಅಂಚೀಕರಣ ಪ್ರಕ್ರಿಯೆಗೆ ಒಳಗಾಗಿ ಸಮಾಜದ ಅಂಚಿಗೆ (ಒಚಿಡಿರುಚಿ ಔಜಿ ಣುಜ ಖಂಭಿಜಾಥಿ) ತಳ್ಳಲ್ಪಟ್ಟಿದ್ದಾರೆ (ಅವರೇ, 2007:45). ಇದಕ್ಕೆ ಪುರುಷ ಸಮಾಜ ಕಾರಣವಾಗಿದ್ದರೂ, ಒಟ್ಟಾರೆ ಸಮಾಜದ ಸ್ವರೂಪ ಮತ್ತು ಸಂಸ್ಕೃತಿ ಕಾರಣೀಭೂತ ಅಂಶಗಳಾಗಿವೆ.

ಯಾವುದೇ ಒಂದು ಅಧ್ಯಯನವನ್ನು ಕೈಗೊಂಡಾಗ ಮೊದಲು ಆ ಅಧ್ಯಯನವು ಒಳಗೊಂಡಿರುವ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಈ ಹಿನ್ನೆಲೆಯಲ್ಲಿ ಅಧ್ಯಯನದ ತಿರುಳಿನ ಮುಂಚೆ ಹಿಂದುಳಿದ ವರ್ಗ ಎಂದರೇನು? ಹಿಂದುಳಿದ ವರ್ಗದ ಮಹಿಳೆಯರೆಂದರೆ ಯಾರು? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಹಿಂದುಳಿದ ವರ್ಗಗಳೆಂದರೇನು? ಹಿಂದುಳಿದಿರುವಿಕೆಯನ್ನು ಗುರುತಿಸುವುದು ಹೇಗೆ? ಗಮನಿಸಬೇಕಾದುದೆಂದರೆ, ಈ ಪ್ರಶ್ನೆಗಳಿಗೆ ಸಂವಿಧಾನಾತ್ಮಕ ಉತ್ತರ ದೊರೆಯುವುದಿಲ್ಲ. ಡಾ॥ ಅಂಬೇಡ್ಕರ್ ಹೇಳಿದಂತೆ ಹಿಂದುಳಿದ ವರ್ಗಗಳೆಂದರೆ ಬೇರೆ ಏನೂ ಅಲ್ಲ, ಅವರೊಂದು ಅನೇಕ ಜಾತಿಗಳ ಸಮೂಹ. ಇಷ್ಟಾದರೂ ಸಂವಿಧಾನವು ಹಿಂದುಳಿದ ವರ್ಗಗಳೆಂದು ನಿರ್ಧರಿಸಲು ಯಾವ ವಿಧಾನಗಳನ್ನು ಸೂಚಿಸುವುದಿಲ್ಲ. ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರು ಯಾರು ಎಂಬುದನ್ನು ನಿರ್ದಿಷ್ಟಪಡಿಸುವುದಿಲ್ಲ. ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರ್ಧರಿಸಬೇಕೆಂದು ಅದು ಸೂಚಿಸುತ್ತದೆ (ತೆಲಗಾವಿ ಲಕ್ಷ್ಮಣ, 1999:2). ಆದ್ದರಿಂದ ಹಿಂದುಳಿದ ವರ್ಗಗಳೆಂದರೆ ಸಾಮಾನ್ಯವಾಗಿ ದಲಿತ ಅಥವಾ ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳೆಂದು ಅರ್ಥವಾಗುತ್ತದೆ.

ಸಾಮಾನ್ಯವಾಗಿ ಒಂದು ಸಮುದಾಯದ ಹಿಂದುಳಿದಿರುವಿಕೆಯನ್ನು ಆ ಸಮುದಾಯದಲ್ಲಿನ ಮಹಿಳೆಯರ ಸ್ಥಾನಮಾನ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಗುರುತಿಸಬಹುದು. ಅಧ್ಯಯನದಲ್ಲಿ ಈ ವರ್ಗದ ಮಹಿಳೆಯರು ಈ ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದಿರುವುದು ಕಂಡು ಬರುತ್ತದೆ. ಹಿಂದುಳಿದಿರುವಿಕೆಯು ಸಾಮಾಜಿಕ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಸಾಮಾಜಿಕ ಹಿಂದುಳಿದಿರುವಿಕೆಯಿಂದಾಗಿ, ಮಹಿಳೆಯರು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿಯುತ್ತಾರೆ. ಆರ್ಥಿಕ ಹಿಂದುಳಿದಿರುವಿಕೆ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇದು ಮಹಿಳೆಯರನ್ನು ಸಮಾಜದ ಅಂಚಿಗೆ ತಳ್ಳಿ, ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡಿ, ಸಮಸ್ಯೆಗಳಿಂದ ನರಳುವಂತೆ ಮಾಡುತ್ತದೆ. ಇದರ ಪರಿಣಾಮವಾಗಿ ಸಮಾಜದಲ್ಲಿ ಅಸಮಾನತೆ ಏರ್ಪಡುತ್ತದೆ. ಈ ಕಾರಣದಿಂದ ಪ್ರಸ್ತುತ ಅಧ್ಯಯನದಲ್ಲಿ ಶಿವಮೊಗ್ಗ ಜಿಲ್ಲೆಯ ಹಿಂದುಳಿದ ವರ್ಗಗಳ ಮಹಿಳೆಯರ ನೈಜ ಸ್ಥಿತಿಗತಿಗಳನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಚರ್ಚಿಸಲಾಗಿದೆ.

**ಅಧ್ಯಯನದ ಜನಸಂಖ್ಯೆ ಮತ್ತು ಮಾದರಿ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕಾಗಿ, ಕರ್ನಾಟಕ ರಾಜ್ಯ, ಶಿವಮೊಗ್ಗ ಜಿಲ್ಲೆಯನ್ನು ಆಯ್ಕೆಮಾಡಿಕೊಂಡು ಈ ಮಲೆನಾಡು ಪ್ರದೇಶಗಳಲ್ಲಿ ನೆಲೆಸಿರುವ ಹಿಂದುಳಿದ ವರ್ಗದ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಂಶೋಧನಾ ಕಾರ್ಯಕ್ಷೇತ್ರದ ವ್ಯಾಪ್ತಿಯು ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯ ಒಟ್ಟು 06 ತಾಲ್ಲೂಕುಗಳನ್ನು ಆಯ್ದುಕೊಂಡು **'ವಿಭಾಗಿತ ಸರಳ ಯಾದೃಚ್ಛಿಕ ಮಾದರಿ'** ವಿಧಾನದ ಮೂಲಕ ಪ್ರತಿ ತಾಲ್ಲೂಕಿಗೆ 20 ಮಹಿಳೆಯರಂತೆ ಒಟ್ಟು 120 ಮಹಿಳೆಯರನ್ನು ನೇರವಾಗಿ ಸಂದರ್ಶಿಸಿ ವಸ್ತುನಿಷ್ಟ ಮಾಹಿತಿ ಸಂಗ್ರಹಿಸಲಾಗಿದೆ.

**ಅಧ್ಯಯನದ ತಿರುಳು**

ಪ್ರಸ್ತುತ ಅಧ್ಯಯನಕ್ಕಾಗಿ ಆಯ್ಕೆಮಾಡಿಕೊಂಡಿರುವ ಜಿಲ್ಲೆಗೆ ನೇರವಾಗಿ ಭೇಟಿನೀಡಿ ವಾಸ್ತವ ಸ್ಥಿತಿಗತಿಗಳನ್ನು ಹಲವಾರು ವೈಚಾರಿಕ ದೃಷ್ಟಿಕೋನಗಳಿಂದ ಅವಲೋಕಿಸಿ ವಸ್ತುನಿಷ್ಠ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಜೊತೆಗೆ ಈ

ಅಧ್ಯಯನದಲ್ಲಿ ಹಿಂದುಳಿದ ವರ್ಗದ ಮಹಿಳೆಯರ ಪ್ರಸ್ತುತ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಸಂಶೋಧನಾ ವಿಧಾನಗಳಿಗೆ ಅಳವಡಿಸಿ ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಭಾರತೀಯ ಸಮಾಜದಲ್ಲಿ ತೀವ್ರ ಸ್ವರೂಪದ ಅಸಮಾನತೆಗಳನ್ನು ಸೃಷ್ಟಿಸಿರುವ ವ್ಯವಸ್ಥೆಯೆಂದರೆ ಜಾತಿ. ಹಿಂದೂ ಧರ್ಮೀಯರು ವಿವಿಧ ಜಾತಿಗಳಲ್ಲಿ ಹಂಚಿಹೋಗಿದ್ದು, ಜಾತಿ–ಜಾತಿಗಳ ನಡುವೆ ಸಮಾಜದ ಸಂಪನ್ಮೂಲಗಳ ಬಳಕೆಯ ವಿಚಾರದಲ್ಲಿ ಅತ್ಯಂತ ಪ್ರಖರವಾದ ವ್ಯತ್ಯಾಸಗಳನ್ನು ನಾವು ಕಾಣಬಹುದು. ಜಾತಿ ಎನ್ನುವುದು ಒಂದು ಶ್ರೇಣೀಕೃತ ವ್ಯವಸ್ಥೆ. ಜಾತಿಯ ಅಂತಸ್ತನ್ನು ವ್ಯಕ್ತಿಯ ಹುಟ್ಟು ನಿರ್ಧರಿಸುತ್ತದೆ. ಇದು ಜಾತಿ ಎನ್ನುವ ವ್ಯವಸ್ಥೆ ಭಾರತೀಯ ಸಮಾಜವನ್ನು ಹೇಗೆ ತನ್ನ ಬಿಗಿಮುಷ್ಠಿಯಲ್ಲಿ ಹಿಡಿದಿಟ್ಟಿದೆ ಎಂಬುದಕ್ಕೆ ಸಾಕ್ಷಿಯಾಗಿದೆ (ಇಂದಿರಾ ಆರ್., 2002:108–109). ಹಾಗೆಯೇ ಬಡತನ, ಅನಕ್ಷರತೆ, ಮೌಢ್ಯ, ಪರಾವಲಂಬಿತನ ಮುಂತಾದ ಅಂಶಗಳು ಜಾತಿ ಶ್ರೇಣಿಯಲ್ಲಿ ಕೆಳಗಿನ ಸ್ತರಗಳಲ್ಲಿರುವ ಹಿಂದುಳಿದ ಜಾತಿಗಳಿಗೆ ಸೇರಿದ ಮಹಿಳೆಯರ ಬದುಕಿನಲ್ಲಿ ಹೆಚ್ಚಿನ ಮಟ್ಟದಲ್ಲಿರುತ್ತವೆ. ಮನೆಗೆಲಸಕ್ಕೆ, ಮಕ್ಕಳ ಲಾಲನೆ ಪಾಲನೆಗೆ ಸಾಮಾಜಿಕ ಮಾನ್ಯತೆಯ ಅಭಾವ, ದೈಹಿಕ ಹಿಂಸೆ, ವರದಕ್ಷಿಣೆಗಾಗಿ ಪೀಡಿಸುವುದು–ಇವೇ ಮುಂತಾದ ಸಮಸ್ಯೆಗಳನ್ನು ಎಲ್ಲಾ ಜಾತಿಗಳ ಮಹಿಳೆಯರೂ ಎದುರಿಸುತ್ತಾರೆ. ಆದರೆ, ಬಹುತೇಕ ಮಹಿಳೆಯರ ಬದುಕಿನಲ್ಲಿ ಜಾತಿ ತರಬಹುದಾದ ಸಾಮಾಜಿಕ, ಆರ್ಥಿಕ ಅನುಕೂಲಗಳು ಅಥವಾ ಅನಾನುಕೂಲಗಳು ಆ ಮಹಿಳೆಯರು ಸಮಾನತೆಯನ್ನು ಪಡೆಯುವ ಪ್ರಯತ್ನದಲ್ಲಿ ಎಷ್ಟು ಮುಂದೆ ಚಲಿಸುತ್ತಾರೆ ಎಂಬುದನ್ನು ನಿರ್ಧರಿಸುತ್ತವೆ (ಅವರೇ: 2002:111). ಹೀಗೆ ಭಾರತೀಯ ಸಮಾಜದಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನಮಾನ ಏಕರೀತಿಯಾಗಿರದೆ ಆಯಾ ಜಾತಿಯ ಸ್ಥಾನಮಾನವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಮಹಿಳೆಯರಿಗೂ ಮತ್ತು ಜಾತಿ ವ್ಯವಸ್ಥೆಗೂ ಸಂಬಂಧವಿದೆ ಎಂದು ಹೇಳಬಹುದು. ಹಾಗಾಗಿ ಕ್ಷೇತ್ರಾಧ್ಯಯನದಲ್ಲಿ ಈ ವರ್ಗದ ಕುಟುಂಬಗಳು ಹೊಂದಿರುವ ಮನೆಯ ಮಾದರಿಯನ್ನು ಗುರುತಿಸಲಾಗಿದೆ.

**ಕೋಷ್ಟಕ 1 : ಕುಟುಂಬಗಳು ಹೊಂದಿರುವ ಮನೆಯ ಮಾದರಿ**

| ಮನೆಯ ಸ್ವರೂಪ | ಆವೃತ್ತಿ | ಶೇಕಡವಾರು |
|---|---|---|
| ಗುಡಿಸಲುಗಳು | 18 | 15.00 |
| ಹೆಂಚಿನ ಮನೆಗಳು | 77 | 64.16 |
| ಸಿಮೆಂಟ್ ಕಟ್ಟಡ | 05 | 04.16 |
| ಶೀಟ್(ತಗಡು) | 09 | 07.50 |
| ಆಶ್ರಯ ಮನೆ | 07 | 05.84 |
| ಆರ್.ಸಿ.ಸಿ. ಮನೆಗಳು | 04 | 03.34 |
| ಒಟ್ಟು | 120 | 100.00 |

ಸಾಮಾನ್ಯವಾಗಿ ಮನೆ ಮಾದರಿಯ ಆಧಾರದ ಮೇಲೆ ಒಬ್ಬ ವ್ಯಕ್ತಿಯ ಅಥವಾ ಒಂದು ಕುಟುಂಬದ ಸಾಮಾಜಿಕ ಅಂತಸ್ತು ಹಾಗೂ ಆರ್ಥಿಕ ಸ್ಥಾನಮಾನವನ್ನು ಅಳೆಯಬಹುದಾಗಿದೆ. ಸಂದರ್ಶಿತ ಒಟ್ಟು 120 ಮಹಿಳೆಯರಲ್ಲಿ ಬಹುತೇಕ 77 (64.16%)ರಷ್ಟು ಕುಟುಂಬಗಳವರು ಹೆಂಚಿನ ಹೊದಿಕೆಯ ಮನೆಯನ್ನು ಹೊಂದಿದವರಾಗಿದ್ದಾರೆ. ಜೊತೆಗೆ ಗುಡಿಸಲು ಮನೆ ಹೊಂದಿದವರ ಪ್ರಮಾಣ 18 (15%) ರಷ್ಟಿದೆ. ಈ ಮೇಲಿನ ಅಂಕಿ–ಸಂಖ್ಯೆಯು ಈ ಸಮುದಾಯದವರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಯನ್ನು ತಿಳಿಸುತ್ತದೆ. ಆರ್.ಸಿ.ಸಿ ಮನೆಗಳಲ್ಲಿ ನೆಲೆಸಿರುವ ಈ ವರ್ಗದ ಜನರ ಪ್ರಮಾಣ 04(3.34%) ತುಂಬಾ ಕಡಿಮೆ. ಈ ವರ್ಗದ ಜನರು ಆರ್ಥಿಕವಾಗಿ ಹೆಚ್ಚು ಸಬಲರಿಲ್ಲದ ಕಾರಣ ಉತ್ತಮ ಮನೆಗಳನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಕೆಲವೇ ಕೆಲವು ಸರ್ಕಾರಿ ನೌಕರರು ಹಾಗೂ ವ್ಯಾಪಾರಿಗಳು, ಆರ್ಥಿಕವಾಗಿ ಸಬಲರಿರುವಂತಹವರು ಮಾತ್ರ ಆರ್.ಸಿ.ಸಿ ಮನೆಗಳಲ್ಲಿ ನೆಲೆಸಿದ್ದಾರೆ. ಬಹುತೇಕ ಕುಟುಂಬಗಳು ವಾಸಿಸಲು ಯೋಗ್ಯವಲ್ಲದ ಗುಡಾರಗಳಲ್ಲಿ ಇತರೆ ಕಡೆಗಳಲ್ಲಿ ವಾಸಿಸುತ್ತಿರುವುದನ್ನು ಕಾಣಬಹುದಾಗಿದೆ. ಒಟ್ಟಾರೆ ಅಧ್ಯಯನದಲ್ಲಿ ಈ ವರ್ಗದ ಜನರ ನೆಲೆಯನ್ನು ಅವಲೋಕಿಸಿದರೆ ಬಹುತೇಕ ಈ ಸಮುದಾಯದ ಜನರು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಸರ್ಕಾರಿ

ಯೋಜನೆಗಳ ಬಗ್ಗೆ ತಿಳುವಳಿಕೆಯ ಕೊರತೆಯಿಂದಾಗಿ ಇಂದಿಗೂ ಹೆಚ್ಚಿನ ಕುಟುಂಬಗಳು ಮೂಲಭೂತ ಸೌಕರ್ಯಗಳಿಲ್ಲದಂತಹ ಮನೆಗಳಲ್ಲಿ ವಾಸಿಸುತ್ತಿದ್ದಾರೆ ಎಂದು ಹೇಳಬಹುದಾಗಿದೆ.

ಆರ್ಥಿಕ ಕ್ಷೇತ್ರದಲ್ಲಿಯೂ ಮಹಿಳೆಯು ಪುರುಷರಿಗಿಂತ ಹಿಂದಿದ್ದು, ಹಲವಾರು ಸಮಸ್ಯೆಗೆ ಗುರಿಯಾಗಿದ್ದಾಳೆ. ಇದಕ್ಕೆ ಹಿಂದಿನಿಂದಲೂ ಬಲವಾಗಿ ರೂಢಿಗತವಾಗಿ ಬಂದಿರುವ ಪುರುಷ ಯಜಮಾನಿಕೆ ಮತ್ತು ಮಹಿಳೆಯು ಅಬಲಳು ಎಂಬ ಕುರುಡು ನಂಬಿಕೆಯೇ ಕಾರಣ. ಜೊತೆಗೆ ಸಮಾಜಶಾಸ್ತ್ರೀಯ (ಖಾಜಿಟಟಾಭಿಚಿಟ) ದೃಷ್ಟಿಯಿಂದ ನೋಡುವುದಾದರೆ ಇಂಡಿಯಾ ಸಮಾಜವು ಮೂಲತಃ ಪಿತೃಪ್ರಧಾನ ಸಮಾಜವಾಗಿರುವುದರಿಂದ ಇಲ್ಲಿ ಆಸ್ತಿಯು ಗಂಡು ಮಕ್ಕಳ ಮೂಲಕ ವರ್ಗಾವಣೆಯಾಗುತ್ತಿರುವುದರಿಂದ ಪಿತ್ರಾರ್ಜಿತ ಆಸ್ತಿಗೆ ಗಂಡು ಮಕ್ಕಳೇ ಒಡೆಯರಾಗುತ್ತಾರೆ. ಹೆಣ್ಣು ಮಕ್ಕಳಿಗೆ ಇದುವರೆಗೆ ಆಸ್ತಿಯ ಹಕ್ಕು ಇರಲಿಲ್ಲ. ಆದರೆ ಇತ್ತೀಚೆಗೆ ಹೆಣ್ಣು ಮಕ್ಕಳಿಗೂ ಆಸ್ತಿಯ ಹಕ್ಕು ಇರುವುದರಿಂದ ಸ್ತ್ರೀಯು ಪುರುಷರಷ್ಟೇ ಆಸ್ತಿಗೆ ಹಕ್ಕುಬದ್ಧಳಾಗಿದ್ದರೂ, ಸಂಪ್ರದಾಯಸ್ತ ಭಾರತೀಯ ಸಮಾಜದಲ್ಲಿ ಒಡೆತನ ಇನ್ನೂ ಲಭ್ಯವಾಗಿಲ್ಲದಿರುವುದು ಅಸಮಾನತೆಯನ್ನು ಎತ್ತಿ ತೋರಿಸುತ್ತದೆ. ಆ ಕಾರಣದಿಂದಾಗಿ ಅಧ್ಯಯನದಲ್ಲಿ ಈ ವರ್ಗದ ಕುಟುಂಬಗಳ ವಾರ್ಷಿಕ ಆದಾಯದ ವಿವರವನ್ನು ತಿಳಿಯಲಾಗಿದೆ.

**ಕೋಷ್ಟಕ 2 : ವಾರ್ಷಿಕ ಆದಾಯದ ವಿವರ**

| ವಾರ್ಷಿಕ ಆದಾಯ | ಆವೃತ್ತಿ | ಶೇಕಡವಾರು |
|---|---|---|
| 5,000–10,000 | 78 | 65.00 |
| 10,000–15,000 | 32 | 26.66 |
| 15,000–20,000 | 09 | 07.50 |
| 20,000ಕ್ಕಿಂತ ಹೆಚ್ಚು | 01 | 00.84 |
| ಒಟ್ಟು | 120 | 100.00 |

ಮೇಲಿನ ಕೋಷ್ಟಕದಲ್ಲಿ ಹಿಂದುಳಿದ ವರ್ಗಗಳ ಮಹಿಳೆಯರ ಕುಟುಂಬದ ಆರ್ಥಿಕ ಸ್ಥಿತಿ ಯಾವ ಮಟ್ಟದಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ. ಬಹುತೇಕ 78(65%) ಮಹಿಳೆಯರ ಕುಟುಂಬಗಳ ವಾರ್ಷಿಕ ಆದಾಯ 5–10 ಸಾವಿರದ'ಷ್ಟಿದೆ. ಇದು ಅವರ ಅರ್ಥಿಕ ಮಟ್ಟವನ್ನು ಸೂಚಿಸುತ್ತದೆ. ಅಧ್ಯಯನದಲ್ಲಿ ಕಂಡುಕೊಂಡಂತೆ ಬಹುತೇಕ ಈ ವರ್ಗದ ಮಹಿಳೆಯರು ಬಡತನ ಮತ್ತು ಆರ್ಥಿಕವಾಗಿ ಹಿಂದುಳಿರುವುದರಿಂದ, ದಿನನಿತ್ಯದ ಜೀವನ ನಿರ್ವಹಣೆಗಾಗಿ ಕೂಲಿ ಅಥವಾ ಕೃಷಿಕಾರ್ಮಿಕ ವೃತ್ತಿಗಳಲ್ಲೇ ದಿನಂಪ್ರತಿ ದುಡಿದು ಬದುಕಬೇಕಾದ ಅನಿವಾರ್ಯತೆಯನ್ನು ಕಾಣಬಹುದಾಗಿದೆ.

ಇನ್ನು ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ, ಲಿಂಗಭೇದವನ್ನು ನಿಷೇಧಿಸಿತಾದರೂ ವಾಸ್ತವ್ಯದಲ್ಲಿ ಮಹಿಳೆಯ ಶಿಕ್ಷಣ ನಾವೆಣಿಸಿದಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ಹಿಂದೆಂದಿಗಿಂತ ಇಂದು ಶಿಕ್ಷಣದ ಎಲ್ಲಾ ಮಟ್ಟಗಳಲ್ಲಿಯೂ ಮಹಿಳೆಯರ ದಾಖಲಾತಿಯ ಪ್ರಮಾಣದಲ್ಲಿ ಹೆಚ್ಚಳ ಉಂಟಾಗಿದೆಯಾದರೂ ದೇಶದ ಅನೇಕ ಭಾಗಗಳಲ್ಲಿ ಮಹಿಳಾ ಅನಕ್ಷರತೆಯ ಪ್ರಮಾಣ ದಿಗ್ಭ್ರಮೆ ಹುಟ್ಟಿಸುವಷ್ಟು ಕೆಳಮಟ್ಟದಲ್ಲಿದೆ. ಕಡ್ಡಾಯ ಹಾಗೂ ಉಚಿತ ಪ್ರಾಥಮಿಕ ಶಿಕ್ಷಣವೆಂಬುದು ಅನೇಕ ಸಂದರ್ಭಗಳಲ್ಲಿ ಘೋಷಣೆಯ ಮಟ್ಟದಲ್ಲಿ ಉಳಿದಿರುವುದು ಶೋಚನೀಯ. ಶಿಕ್ಷಣಾವಕಾಶಗಳ ಸಮಾನ ಬಳಕೆಗೆ ಅಡ್ಡಿ ಬರುವ ಪ್ರಮುಖ ಅಂಶಗಳೆಂದರೆ ಬಡತನ, ಅಜ್ಞಾನ, ಮೌಢ್ಯ ಹಾಗೂ ಸ್ತ್ರೀ ಶಿಕ್ಷಣವನ್ನು ಕುರಿತಂಥ ಸಾಮಾಜಿಕ ಧೋರಣೆ. ಅನೇಕ ಹೆಣ್ಣು ಮಕ್ಕಳ ಜೀವನದಲ್ಲಿ ಈ ನಾಲ್ಕು ಅಂಶಗಳೂ ಒಟ್ಟಾಗಿ ಕಲೆತು, ಅವರ ಶೈಕ್ಷಣಿಕ ಪ್ರಗತಿಗೆ ಬಲವಾದ ಗದಾಪ್ರಹಾರವನ್ನು ನೀಡುತ್ತವೆ ಎಂಬುದಾಗಿ ಸಮಾಜಶಾಸ್ತ್ರಜ್ಞೆ ಪ್ರೊ॥ ಆರ್. ಇಂದಿರಾ (2002:85–86) ಅಭಿಪ್ರಾಯಪಡುತ್ತಾರೆ. ಈ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗದ ಮಹಿಳೆಯರ ಶೈಕ್ಷಣಿಕ ಮಟ್ಟವನ್ನು ಕೆಳಗಿನಂತೆ ಕಾಣಬಹುದು.

**ಕೋಷ್ಟಕ 3 : ವಿದ್ಯಾರ್ಹತೆಯ ವಿವರ**

| ವಿದ್ಯಾರ್ಹತೆ | ಆವೃತ್ತಿ | ಶೇಕಡವಾರು |
|---|---|---|
| ಅನಕ್ಷರಸ್ಥರು | 41 | 34.16 |
| ಪ್ರಾಥಮಿಕ ಶಿಕ್ಷಣ | 29 | 24.16 |
| ಹಿರಿಯ ಪ್ರಾಥಮಿಕ ಶಿಕ್ಷಣ | 22 | 18.33 |

| | | |
|---|---|---|
| ಪ್ರೌಢಶಿಕ್ಷಣ | 16 | 13.33 |
| ಪದವಿ ಪೂರ್ವಶಿಕ್ಷಣ | 07 | 05.84 |
| ಪದವಿ ಶಿಕ್ಷಣ | 04 | 03.34 |
| ಸ್ನಾತಕೋತ್ತರ ಶಿಕ್ಷಣ | 01 | 00.84 |
| ವೃತ್ತಿಪರ ಶಿಕ್ಷಣ | – | –– |
| ಒಟ್ಟು | 120 | 100.00 |

ಶಿವಮೊಗ್ಗ ಜಿಲ್ಲೆಯ ಇತರೆ ವರ್ಗದ ಜನರಿಗೆ ಹೋಲಿಕೆ ಮಾಡಿದಲ್ಲಿ ಈ ವರ್ಗದ ಮಹಿಳೆಯರು ಹೆಚ್ಚು ಅನಕ್ಷರಸ್ಥರಿರುವುದು ಕಂಡುಬರುತ್ತದೆ. 2011 ರ ಜನಗಣತಿಯಂತೆ ಜಿಲ್ಲಾ ಸಾಕ್ಷರತಾ ಪ್ರಮಾಣ 86.11% ರಷ್ಟಿದ್ದರೂ ಈ ವರ್ಗದ ಮಹಿಳೆಯರಲ್ಲಿ ಶೇಕಡ 34.16ರಷ್ಟು ಅನರಕ್ಷತೆಯ ಪ್ರಮಾಣ ಕಂಡುಬಂದಿದೆ. ಪದವಿ, ತಾಂತ್ರಿಕ, ಸ್ನಾತಕೋತ್ತರ ಶಿಕ್ಷಣವನ್ನು ಪಡೆದವರ ಪ್ರಮಾಣ ಕಡಿಮೆ. ಈ ವರ್ಗಗಳಲ್ಲಿನ ಮಹಿಳೆಯರ ಅನಕ್ಷರತೆಯ ಹೆಚ್ಚಳಕ್ಕೆ ಪ್ರತಿವರ್ತಿಗಳು ಕಾರಣಗಳನ್ನು ನೀಡುತ್ತಾರೆ. ಕುಟುಂಬಗಳ ಬಡತನ, ಮನೆಯ ಹಿರಿಯರು ಅನಕ್ಷರಸ್ಥರಾಗಿದ್ದು, ಹೆಣ್ಣುಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವಲ್ಲಿ ಉದಾಸೀನತೆ ತೋರಿಸುವುದು. ಸರ್ಕಾರದ ಶೈಕ್ಷಣಿಕ ಸೌಲಭ್ಯಗಳಿರುವುದು ಈ ವರ್ಗದ ಜನರಿಗೆ ಹೆಚ್ಚಾಗಿ ತಿಳಿದಿಲ್ಲದಿರುವುದು ಕ್ಷೇತ್ರಾಧ್ಯಾಯನದಿಂದ ದೃಢಪಟ್ಟಿದೆ. ಈ ಕಾರಣಗಳಿಂದ ಅನಕ್ಷರತೆ ಪ್ರಮಾಣ ಹೆಚ್ಚಾಗಿರುತ್ತದೆ.

ಉದ್ಯೋಗಕ್ಕೆ ಸಂಬಂಧಿಸಿದಂತೆ ಭಾರತೀಯ ಸಮಾಜದಲ್ಲಿ ಜಾತಿ ಆಧಾರಿತ ಕಸುಬುಗಳ ಪ್ರಾಬಲ್ಯತೆ ಮತ್ತು ಪ್ರಾಮುಖ್ಯತೆಯನ್ನು ನಾವು ಸಾಂಪ್ರದಾಯಿಕ ಸಮಾಜದಲ್ಲಿ ಕಂಡಿದ್ದೇವೆ. ಕಾಲ ಬದಲಾದಂತೆಲ್ಲಾ ಹೊಸ ಹೊಸ ಅಸಂಪ್ರದಾಯಿಕ ಮತ್ತು ಆಧುನಿಕ ಹುದ್ದೆಗಳು ಸೃಷ್ಟಿಯಾದವು. ಸಮಾಜದಲ್ಲುಂಟಾದ ಈ ಬದಲಾವಣೆಯಿಂದಾಗಿ ಸಾಂಪ್ರದಾಯಿಕ ಕಸುಬನ್ನು ಅವಲಂಬಿಸಿದ್ದು ಸಮುದಾಯಗಳು ನಿಧಾನವಾಗಿ ತಮ್ಮ ಕುಲ ಕಸುಬುಗಳನ್ನು ಬಿಡುತ್ತಾ ಹೊಸ ಹೊಸ ಉದ್ಯೋಗಗಳನ್ನು ಆಯ್ಕೆ ಮಾಡಿಕೊಳ್ಳಲು ಪ್ರಾರಂಭಿಸಿದರು. ಈ ಪ್ರಕ್ರಿಯೆಯು ಉನ್ನತ ಸ್ಥರದಲ್ಲಿ ಹೆಚ್ಚಿನ ಸಾಮಾಜಿಕ ಚಲನೆಯನ್ನುಂಟು ಮಾಡಿದರೆ ಕೆಳಸ್ತರದಲ್ಲಿನ ಜನರಲ್ಲಿ ಕಡಿಮೆ ಸಂಚಲನೆಯನ್ನುಂಟು ಮಾಡಿತು. ಇಷ್ಟೆಲ್ಲಾ ಬದಲಾವಣೆಗಳು ಸಂಭವಿಸಿದರೂ, ಮಹಿಳೆಯರಿಗೆ ಇದು ವರದಾನವಾಗಲಿಲ್ಲ. ಏಕೆಂದರೆ ಇಲ್ಲಿಯೂ ಈ ಹೊಸ ಹುದ್ದೆಗಳು ಪುರುಷರಿಗೆಂದೇ ಸೀಮಿತವಾದಂಥವುಗಳು ಎಂದು ಬಿಂಬಿಸಲಾಯಿತು. ಮಹಿಳೆಯರಿಗೆ ಎಲ್ಲಾ ತೆರನಾದ ಹುದ್ದೆಗಳನ್ನು ಹೊಂದಲು ಪ್ರೋತ್ಸಾಹ ಸಿಗಲಿಲ್ಲ ಬದಲಿಗೆ, ನಿರಾಕರಿಸಲಾಯಿತು. ಪರಿಣಾಮವಾಗಿ ಉದ್ಯೋಗದ ಅವಕಾಶಗಳಲ್ಲಿಯೂ ಸಹ ಮಹಿಳೆಯರು ಅಂಚೀಕೃತ ಗುಂಪಾದರು. ಆದರೆ ಇತ್ತೀಚೆಗೆ ಮೀಸಲಾತಿಯ ಮುಖೇನ ಮಹಿಳೆಯರಿಗೆ ಉದ್ಯೋಗ ಮೀಸಲಾತಿ ಕಲ್ಪಿಸಿಸುದನ್ನು ನೋಡಬಹುದಾಗಿದೆ. ಆದರೆ ಅಸಂಘಟಿತ ಕಾರ್ಮಿಕರಾಗಿ ದುಡಿಯುತ್ತಿರುವ ಹಿಂದುಳಿದ ವರ್ಗಗಳ ಮಹಿಳೆಯರ ಸಮಸ್ಯೆಗಳು ಅವರ ಬಡತನದ ಕಾರಣಕ್ಕಾಗಿ ಇನ್ನಷ್ಟು ಆಳವಾಗಿರುತ್ತವೆ; ತೀವ್ರವಾಗಿರುತ್ತವೆ. ಒಟ್ಟಿನಲ್ಲಿ ವೃತ್ತಿಯೆಂಬುದು ಬಯಕೆಗಳ ಈಡೇರಿಕೆಯ ಸಾಧನ ಮಾತ್ರವಾಗಿರದೆ, ಸಮಾಜದ ವ್ಯಕ್ತಿಗಳ ಸ್ಥಾನಮಾನವನ್ನು ಅಳೆಯುವ ಮಾನದಂಡವೂ ಆಗಿದೆ. ಈ ಸಂಬಂಧವಾಗಿ ಕ್ಷೇತ್ರಾಧ್ಯಾಯನ ಸಂದರ್ಭದಲ್ಲಿ ಈ ವರ್ಗದ ಮಹಿಳೆಯರ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆದು ಈ ಕೆಳಕಂಡಂತೆ ಕೋಷ್ಟಕದ ಸಹಾಯದಿಂದ ವಿವರಿಸಲಾಗಿದೆ.

**ಕೋಷ್ಟಕ 4 : ಉದ್ಯೋಗದ ಸ್ಥಾನಮಾನ**

| ಉದ್ಯೋಗ | ಆವೃತ್ತಿ | ಶೇಕಡವಾರು |
|---|---|---|
| ಗೃಹಿಣಿ | 24 | 20.00 |
| ಕೂಲಿ | 67 | 55.84 |
| ಕೃಷಿ | 06 | 05.00 |
| ಸರ್ಕಾರಿ ಸೇವೆ | 02 | 01.66 |
| ಖಾಸಗಿ ವಲಯ | 05 | 04.16 |
| ಸ್ವಂತ ಉದ್ಯೋಗ | 09 | 07.50 |
| ಇತರೆ | 07 | 05.84 |
| ಒಟ್ಟು | 120 | 100.00 |

ಕರ್ನಾಟಕದ ಮೂರನೇ ಎರಡು ಭಾಗದಷ್ಟು ಮಹಿಳೆಯರು ಗ್ರಾಮೀಣ ಭಾಗಗಳಲ್ಲಿದ್ದಾರೆ. ಒಂದು ಅಧ್ಯಯನದ ಪ್ರಕಾರ ಹಳ್ಳಿಗಳ ಶ್ರಮಶಕ್ತಿಯ ಶೇ. 65 ಕ್ಕಿಂತ ಹೆಚ್ಚು ಭಾಗವನ್ನು ಮಹಿಳೆಯರೇ ಪೂರೈಸುತ್ತಿದ್ದಾರೆ. ಶೇ. 56 ಮಂದಿ ಮಹಿಳೆಯರು ತಮ್ಮ ಮನೆಕೆಲಸದ ಜೊತೆಗೆ ಕುಟುಂಬದ ಒಡೆತನದ ಜಮೀನಿನಲ್ಲಿ ವ್ಯವಸಾಯದ ಕೆಲಸದಲ್ಲೂ ಸೇರುತ್ತಾರೆ. ಈ ದುಡಿಮೆಯ ಫಲವಾದ ಲಾಭಾಂಶವೆಲ್ಲ ಕುಟುಂಬದ ಗಂಡಸರ ಕೈಯಲ್ಲಿರುವುದರಿಂದ ಮಹಿಳೆಯರಿಗೆ ಯಾವ ಸ್ವಂತ ಆದಾಯವೂ ಇರುವುದಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಬಹುತೇಕ 67 (55.84%) ರಷ್ಟು ಮಹಿಳೆಯರು ಅವರ ಕೂಲಿಯನ್ನೇ ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿರುವುದು ಅವರ ಹಿಂದುಳಿದ ಸ್ಥಾನಮಾನವನ್ನು ತೋರಿಸುತ್ತದೆ. ಅಧ್ಯಯನದಲ್ಲಿ ಕಂಡುಬಂದಂತೆ ವಿಶೇಷವಾಗಿ ಈ ವರ್ಗದ ಜನರು ಹೆಚ್ಚು ಭೂರಹಿತ ಕೃಷಿ ಕಾರ್ಮಿಕರಾಗಿದ್ದು, ಜೀವನ ನಿರ್ವಹಣೆಗಾಗಿ ಬೇರೆ ಯಾವುದೇ ಆಧಾರವಿಲ್ಲದಿರುವುದರಿಂದ ಕೂಲಿಯನ್ನು ಅವಲಂಬಿಸಿ ಬದುಕುವ ಅನಿವಾರ್ಯತೆ ಈ ಜನರಲ್ಲಿ ಕಂಡುಬರುತ್ತದೆ. ಜೊತೆಗೆ ಈ ವರ್ಗದ ಮಹಿಳೆ ಕೃಷಿ ಸಂಬಂಧಿತ ಹಾಗೂ ಹೈನುಗಾರಿಕೆಯಂತಹ ಕೆಲಸಗಳನ್ನು ಬಿಟ್ಟರೆ, ಸರ್ಕಾರಿ ನೌಕರಿಯಲ್ಲಿ ಇರುವವರ ಸಂಖ್ಯೆ ಅತ್ಯಂತ ಕಡಿಮೆ ಎಂದು ಹೇಳಬಹುದು. ಇದಕ್ಕೆ ಈ ಸಮುದಾಯದವರು ಶಿಕ್ಷಣದಲ್ಲಿ ಹಿಂದುಳಿದಿರುವುದೇ ಮೂಲ ಕಾರಣವೆಂದು ಹೇಳಬಹುದು.

ರಾಜಕೀಯವಾಗಿಯೂ ಸಹ ಭಾರತದ ಮಹಿಳೆಯರು ಹಿಂದುಳಿದಿದ್ದಾರೆ. ಪುರುಷ ಪ್ರಧಾನ ರಾಜಕೀಯ ಅವಕಾಶಗಳಿಂದ ಪುರುಷರು ರಾಜಕೀಯದ ಎಲ್ಲಾ ಅವಕಾಶಗಳನ್ನು ತಾವೇ ಉಪಯೋಗಿಸಿಕೊಂಡು ಮಹಿಳೆಯರು ರಾಜಕೀಯ ಪ್ರವೇಶಿಸದಂತೆ ವ್ಯವಸ್ಥಿತ ಕಾರ್ಯತಂತ್ರವನ್ನು ರೂಪಿಸಿಕೊಂಡಿದ್ದಾರೆ. ಈ ಕಾರ್ಯತಂತ್ರದಿಂದಾಗಿ ಹಿಂದಿನಿಂದಲೂ ಮಹಿಳೆಯರು ರಾಜಕೀಯ ಅವಕಾಶ ವಂಚಿತರಾಗಿ ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ರಾಜಕೀಯ ಅವಕಾಶವಿಲ್ಲದೆ ಸಮುದಾಯಗಳ ಆರ್ಥಿಕ ಪ್ರಗತಿ ಸಾಧ್ಯವಿಲ್ಲ ಎನ್ನುವ ಇವತ್ತಿನ ಸಂದರ್ಭದಲ್ಲಿ ಮಹಿಳೆಯು ಒಂದು ನಿರ್ದಿಷ್ಟ ಮಹಿಳಾ ಸಮಾಜವನ್ನು ಪ್ರತಿನಿಧಿಸುವುದರಿಂದ ಅವರಿಗೆ ರಾಜಕೀಯ ಅವಕಾಶವಿಲ್ಲದೆ ಅವರ ಆರ್ಥಿಕ ಪ್ರಗತಿ ಸಾಧ್ಯವಿಲ್ಲವೆಂದೇ ಹೇಳಬಹುದು.

ಅಧ್ಯಯನದಲ್ಲಿ ಕಂಡುಬಂದಂತೆ ಗ್ರಾಮೀಣ ಪ್ರದೇಶಗಳಲ್ಲಿ ಈ ಜನಾಂಗದ ಮಹಿಳೆಯರು ಗ್ರಾಮ ಪಂಚಾಯತ್ ಸದಸ್ಯರಾಗಿ, ನಗರಗಳ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿಯೂ ಸ್ಪರ್ಧಿಸಿ ಆರಿಸಿ ಬಂದು ರಾಜಕೀಯ ಅಧಿಕಾರ ಹೊಂದಿದವರಿದ್ದಾರೆ. ಆದರೆ ಅಂಥವರ ಪ್ರಮಾಣ 04(3.34%) ಅತ್ಯಂತ ಕಡಿಮೆ. ಇದು ಈ ವರ್ಗದ ಮಹಿಳೆಯರ ರಾಜಕೀಯ ಹಿಂದುಳಿದಿರುವಿಕೆಯನ್ನು ಸೂಚಿಸುತ್ತದೆ. ಇಂದು ಮಹಿಳಾ ರಾಜಕೀಯ ಸಬಲೀಕರಣಕ್ಕೆ ಪ್ರಯತ್ನಗಳು ನಡೆಯುತ್ತವೆಯಾದರೂ, ಇದುವರೆಗೆ ವಿಧಾನಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಶೇಖಡ 33 ರಷ್ಟು ಮಹಿಳಾ ಮೀಸಲಾತಿ ನೀಡುವುದು ಸಾಧ್ಯವಾಗಿಲ್ಲ. ರಾಜಕೀಯ ಅವಕಾಶಗಳಲ್ಲಿ ಪುರುಷ ಪ್ರಧಾನ ಸಮಾಜವೇ ಪ್ರಾಬಲ್ಯವನ್ನು ಸಾಧಿಸಿದೆ ಎಂದು ಹೇಳಬಹುದು. ಆದರೆ ತಳಮಟ್ಟದಲ್ಲಿ (ಡೂಚಿ–ಡಿಡಡಾ) ಅಂದರೆ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳಾ ರಾಜಕೀಯ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಇದರಿಂದಾಗಿಯೇ ಇಂದು ಗ್ರಾಮೀಣ ಸಮಾಜದಲ್ಲಿ ಮಹಿಳೆಯರು ಮೂರು ಹಂತಗಳ ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಸ್ಪರ್ಧಿಸುವುದರಿಂದ ಹಿಡಿದು ಸದಸ್ಯರು, ಅಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರುಗಳಾಗುವುದರ ಮೂಲಕ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎನ್ನಬಹುದು. ಆದರೆ ಇತ್ತೀಚೆಗೆ ಶೇ.33

ರಾಜಕೀಯ ಮೀಸಲಾತಿಯನ್ನು ಮಹಿಳೆಯರಿಗೋಸ್ಕರ ಅನುಷ್ಠಾನಕ್ಕೆ ತರಲು ರಾಜಕೀಯ ಪಕ್ಷಗಳು ಬದ್ಧವಾಗಿರುವಂತೆ ಕಾಣುತ್ತದೆ.

**ಸಂಶೋಧನೆಯಲ್ಲಿ ವ್ಯಕ್ತವಾದ ಅಂಶಗಳು**

- ಅಧ್ಯಯನ ಕ್ಷೇತ್ರದ ಹಿಂದುಳಿದ ವರ್ಗಗಳ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದಿರುವುದರಿಂದ, ಇವುಗಳು ಈ ವರ್ಗದ ಮಹಿಳೆಯರ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಪ್ರಮುಖ ಕಾರಣವಾಗಿರುವುದನ್ನು ನಮ್ಮ ಅಧ್ಯಯನವು ಸ್ಪಷ್ಟಪಡಿಸುತ್ತದೆ.
- ಈ ಸಮುದಾಯದಲ್ಲಿ ಹೆಚ್ಚಿನವರು ವಿಭಕ್ತ ಕುಟುಂಬಗಳಲ್ಲಿದ್ದು, ಪಿತೃಪ್ರಧಾನ ಕುಟುಂಬ ಪದ್ಧತಿಯನ್ನು ಹೊಂದಿರುವವರ ಸಂಖ್ಯೆಯೇ ಹೆಚ್ಚು. ಇಲ್ಲಿ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಯಜಮಾನ ಹೊಂದಿರುತ್ತಾನೆ. ಕುಟುಂಬದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪುರುಷರ ಜವಾಬ್ದಾರಿ ಹೆಚ್ಚು ಇರುತ್ತದೆ. ಕೆಲವೊಂದು ಸಮಯದಲ್ಲಿ ಮನೆಯ ಮಹಿಳೆಯರ ಸಲಹೆಯನ್ನು ಪಡೆಯುವುದು ಕಂಡುಬರುತ್ತದೆ.
- ಕರ್ನಾಟಕದ ಸಹ್ಯಾದ್ರಿ ತಪ್ಪಲಿನ ಮಲೆನಾಡು ಭಾಗದಲ್ಲಿ ನೆಲೆಸಿರುವ ಈ ವರ್ಗದವರು ತಮ್ಮ ಕಲೆ ಮತ್ತು ಸಂಸ್ಕೃತಿಯ ಸಂಪತ್ತಿನಲ್ಲಿ ಇತರೆ ಸಮುದಾಯಕ್ಕಿಂತ ಯಾವುದೇ ರೀತಿಯಲ್ಲಿ ಕಡಿಮೆ ಇಲ್ಲ ಎಂಬುವುದು ಈ ಸಂಶೋಧನೆಯಿಂದ ತಿಳಿದುಬರುತ್ತದೆ. ಇವರಲ್ಲಿರುವ ಸಾಂಸ್ಕೃತಿಕ ಜೀವನ ಅವಲೋಕಿಸಿದಾಗ ಇವರ ಸಂಪ್ರದಾಯಗಳು, ರೂಢಿ, ಪದ್ಧತಿಗಳು, ವೈವಿಧ್ಯಮಯವಾಗಿರುವುದು ಕಂಡುಬರುತ್ತದೆ.
- ಈ ವರ್ಗದ ಮಹಿಳೆಯರಲ್ಲಿ ಉಳಿತಾಯದ ಮನೋಭಾವನೆ ಇದೆ. ಕೆಲವರು ಬ್ಯಾಂಕುಗಳಲ್ಲಿ ಅಂಚೆ ಕಛೇರಿಗಳಲ್ಲಿ, ಮನೆಯಲ್ಲಿ, ಸ್ತ್ರೀ ಶಕ್ತಿ ಸಂಘಗಳಲ್ಲಿ ಉಳಿತಾಯ ಮಾಡುತ್ತಿದ್ದಾರೆ. ಆದರೆ ಇವರು ಮಾಡುವಂತಹ ಉಳಿತಾಯವು ಅಲ್ಪಪ್ರಮಾಣದಲ್ಲಿ ಇದ್ದು, ಇದರಿಂದ ಇವರ ಬೇಡಿಕೆಗಳನ್ನು ಅಥವಾ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.
- ಅಧ್ಯಯನದಲ್ಲಿ ಕಂಡುಬಂದಂತೆ ಇವರ ಮನೆಯಲ್ಲಿರುವ ಅಗತ್ಯ ವಸ್ತುಗಳು ತುಂಬಾ ಕಡಿಮೆ. ಇವರು ಹೆಚ್ಚಿನದಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಗ್ಯಾಸ್ ಸಂಪರ್ಕ, ನೀರಿನ ಸೌಲಭ್ಯ, ಶೌಚಾಲಯದಂತಹ ಅಗತ್ಯ ಸೌಕರ್ಯಗಳಿಂದ ವಂಚಿತರಾಗಿರುವುದು ಕಂಡುಬಂದಿದೆ. ಇದು ಇವರ ಮನೆಯ ಬಡತನವನ್ನು ತೋರಿಸುತ್ತದೆ. ಇವರ ಬಹುತೇಕ ವಾಸದ ನೆಲೆಗಳು ಸೌಲಭ್ಯಗಳಿಂದ ವಂಚಿತವಾಗಿವೆ. ಇವರ ಗಳಿಕೆಗೆ ಸಂಬಂಧಿಸಿದಂತೆ ಹೇಳುವುದಾದರೆ, ದಿನನಿತ್ಯದ ಕೂಲಿಯನ್ನು ಇವರು ಅವಲಂಬಿಸಿದ್ದಾರೆ. ಹಾಗೂ ಕೆಲವರು ವ್ಯಾಪಾರದಲ್ಲಿ ತೊಡಗಿದ್ದರೂ ಇವರ ಕಸುಬಿನಿಂದ ಬರುವ ಆದಾಯ ಅನಿಶ್ಚಿತ.
- ಅಧ್ಯಯನಕ್ಕೊಳಪಡಿಸಿದ ಪ್ರದೇಶಗಳಲ್ಲಿ ಈ ವರ್ಗದ ಗಂಡು ಮಕ್ಕಳಿಗೆ ಹೋಲಿಸಿದರೆ ಹೆಣ್ಣು ಮಕ್ಕಳ ಶಾಲಾ ಭಾಗವಹಿಸುವಿಕೆಯು ಅಸಮಾನತೆಯಿಂದ ಕೂಡಿದೆ. ವಿವಿಧ ಶೈಕ್ಷಣಿಕ ಕಾರ್ಯ ಯೋಜನೆಯ ಅನುಷ್ಠಾನ ಮತ್ತು ಇತರೆ ಅಂಶಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಹೆಣ್ಣು ಮಕ್ಕಳ ಶಾಲಾ ಭಾಗವಹಿಸುವಿಕೆಯು ಹೆಚ್ಚಾಗಿದ್ದರೂ ಸಹ ಬಹುತೇಕ ಈ ವರ್ಗದ ಪೋಷಕರು ಗ್ರಾಮೀಣ ಭಾಗದಲ್ಲಿ ಸ್ತ್ರೀ ರಕ್ಷಣೆ, ಬಡತನ, ಜೀವನ ನಿರ್ವಹಣೆ ಕಷ್ಟವಾದ್ದರಿಂದ ಜೊತೆಗೆ ಹೆಣ್ಣು ಮಕ್ಕಳಿಗೆ ಶಾಲೆಗೆ ಕಳುಸುವುದು ಅನವಶ್ಯಕ ಎಂಬ ಭಾವನೆಯಿಂದ ಹೆಣ್ಣು ಮಕ್ಕಳು ಹೆಚ್ಚಾಗಿ ಶಾಲೆಯಿಂದ ಹೊರಗುಳಿದಿರುವುದು ಕಂಡುಬರುತ್ತದೆ.
- ಈ ವರ್ಗದ ಜನರು ಇತ್ತೀಚಿನ ದಿನಗಳಲ್ಲಿ ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಸಾಮಾನ್ಯ ಶಿಕ್ಷಣದ ಜೊತೆಗೆ ವೃತ್ತಿ ಶಿಕ್ಷಣಗಳ ಬಗ್ಗೆಯೂ ಹೆಚ್ಚಿನ ಆಸಕ್ತಿ ಹೊಂದಿದ್ದು, ಶಿಕ್ಷಣದ ವಿಚಾರದಲ್ಲಿ ಸ್ತ್ರೀಯರಿಗೂ ಸಮಾನ ಪ್ರಾಧಾನ್ಯತೆ ನೀಡುವ ಬಗ್ಗೆ ಒಲವುಳ್ಳವರಾಗಿದ್ದಾರೆಂಬುದು ಅಧ್ಯಯನದಿಂದ ದೃಢಪಟ್ಟಿದೆ.

- ಒಟ್ಟಾರೆಯಾಗಿ, ಈ ವರ್ಗದ ಮಹಿಳೆಯರು ಇಂದು ಜಾಗೃತರಾಗುತ್ತಿದ್ದಾರೆ. ಇವರಲ್ಲಿ ಇತರೆ ಜನಾಂಗದವರಂತೆ ಬದುಕುವ ತಿಳುವಳಿಕೆ ಅರಿವು ಮೂಡುತ್ತಿದೆಯಾದ್ದರಿಂದ, ತಮ್ಮ ಮುಂದಿನ ಪೀಳಿಗೆಯಲ್ಲಿ ಬದಲಾವಣೆಯು ಖಂಡಿತ ಎಂಬ ಅಭಿಪ್ರಾಯ ನಮ್ಮದು.

**ಕೊನೆಮಾತು**

ಅಧ್ಯಯನದಲ್ಲಿ ಕಂಡುಬಂದಂತೆ ಮಲೆನಾಡು ಭಾಗದ ಹಿಂದುಳಿದ ವರ್ಗಗಳ ಮಹಿಳೆಯರ ಸಮಸ್ಯೆಗಳು ಹಲವಾರು ರೀತಿಯದಾಗಿವೆ. ಈಗಾಗಲೇ ಹೇಳಿದ ಹಾಗೆ ಶಿಕ್ಷಣ, ಉದ್ಯೋಗ, ರಾಜಕೀಯ ಹೀಗೆ ಹಲವು ರಂಗಗಳಲ್ಲಿ ಇವರು ಹಿಂದುಳಿದಿದ್ದು, ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಇಂದಿನ ಆಧುನಿಕ ಸಮಾಜದಲ್ಲಿಯೂ ಈ ವರ್ಗದ ಬಹುತೇಕ ಮಹಿಳೆಯರು ಹಲವು ರೀತಿಯ ಸಾಮಾಜಿಕ-ಶೈಕ್ಷಣಿಕ ಮತ್ತು ಆರ್ಥಿಕ ಅನರ್ಹತೆ (ಆಚಿಛಿಚಿಟಿಣಿಚಿಛಿ) ಗಳಿಂದ ನರಳುತ್ತಿದ್ದಾರೆ. ಕಾರಣವೇನೆಂದರೆ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯು ಔಪಚಾರಿಕವಾಗಿ 2001 ರಿಂದಲೇ ಜಾರಿಗೆ ಬಂದರೂ ಇದು ಎಲ್ಲಾ ಮಹಿಳೆಯರನ್ನು ತಲುಪಿಲ್ಲ. ಏಕೆಂದರೆ ಇಲ್ಲಿ ವಿವಿಧ ಸಾಮಾಜಿಕ ಗುಂಪು, ಜಾತಿ, ಜನಾಂಗ, ಸಮುದಾಯ ಧರ್ಮ, ಪ್ರಾದೇಶಿಕ ಭಿನ್ನತೆಗಳು ಮತ್ತು ಬುಡಕಟ್ಟುಗಳ ಬಹುರೂಪಿ ಸಂಸ್ಕೃತಿಯ ಭಿನ್ನತೆಯಿದ್ದು, ಅವಕಾಶಗಳು ಮತ್ತು ಸವಲತ್ತುಗಳು ಸಮಾನವಾಗಿ ಹಂಚಿಕೆಯಾಗಿಲ್ಲ. ಹಾಗಾಗಿ ಮಹಿಳೆಯರ ಸಬಲೀಕರಣದ ಬಗ್ಗೆ ಕಾರ್ಯತಂತ್ರ ಅಥವಾ ಯೋಜನೆ ರೂಪಿಸುವಾಗ ವಿವಿಧ ದೃಷ್ಟಿಕೋನ ಮತ್ತು ಆಯಾಮಗಳಿಂದ ನೋಡಬೇಕಾಗುತ್ತದೆ.

ಪ್ರಸ್ತುತ ದಿನಗಳಲ್ಲಿ ಸ್ತ್ರೀವಾದಿ ಚಿಂತನೆಗಳು ಮಹಿಳೆಯರ ಸಬಲೀಕರಣದ ನಿಟ್ಟಿನಲ್ಲಿ ಪ್ರಯತ್ನಿಸುತ್ತಿವೆಯಾದರೂ, ಸ್ತ್ರೀವಾದ ಎನ್ನುವುದು ತೀರಾ ಗೊಂದಲದ ಪರಿಕಲ್ಪನೆ. ಇಲ್ಲಿ ಸ್ತ್ರೀ, ಪುರುಷನನ್ನು ಶತ್ರುವಾಗಿ ಕಂಡಷ್ಟೂ ಪರಿಸ್ಥಿತಿಯು ಬಿಗಡಾಯಿಸುತ್ತಾ ಹೋಗುತ್ತದೆ. ಹೀಗಾಗಿ ಸ್ತ್ರೀ ಸ್ವಾತಂತ್ರ್ಯವೆನ್ನುವುದು ದೇಶವೊಂದು ಸ್ವಾತಂತ್ರ್ಯ ಪಡೆದಷ್ಟು ಸುಲಭದ್ದಲ್ಲ. ಸ್ತ್ರೀವಾದವೆನ್ನವುದು ಪ್ರತಿಯೊಬ್ಬ ಹೆಣ್ಣಿನಲ್ಲೂ ವೈಯುಕ್ತಿಕ ನೆಲೆಯಲ್ಲಿ ಎಲ್ಲಾ ದೇಶ ಕಾಲಗಳಲ್ಲೂ ಜಾರಿಯಲ್ಲಿರಬೇಕಾದ ಬಂಡಾಯದ ಹೋರಾಟ. ಇದು ವೈಯುಕ್ತಿಕ ನೆಲೆಯಲ್ಲಿ ಮಾತ್ರ ಕೆಲಸ ಮಾಡಬಲ್ಲದು. ಒಂದು ರೀತಿಯಲ್ಲಿ ಇದು ಮನುಷ್ಯನೊಬ್ಬ ತನ್ನೆಲ್ಲಾ ಬಲಹೀನತೆಗಳಿಂದ ಮುಕ್ತಿ ಪಡೆಯಲು ನಡೆಸುವ ಹೋರಾಟದ ಹಾಗೆ. ಇದಕ್ಕೆ ಅಂತ್ಯವೆಂಬುದು ಇಲ್ಲ. ಈ ಆಂತರಿಕ ಬಂಡಾಯಕ್ಕೆ ಪೂರಕವಾಗುವಂತೆ ಅನೇಕ ಬಾಹ್ಯ ಸವಲತ್ತು(ನೌಕರಿ, ಸಂಬಳ, ಜವಾಬ್ದಾರಿ, ಅಧಿಕಾರಗಳಲ್ಲಿ ಸಮಾನತೆ)ಗಳು ಅವಶ್ಯಕವಾದರೂ ಅವುಗಳನ್ನು ಗಳಿಸುವುದೇ ಸ್ತ್ರೀವಾದದ ಗುರಿ ಹಾಗೂ ಉದ್ದೇಶವಾಗಬಾರದು. ಬದಲಾಗಿ ಸ್ತ್ರೀಯರ ಮನೋಸ್ಥೈರ್ಯವನ್ನು ವೃದ್ಧಿಸಿ, ಅವರು ಕೂಡ ನೆಮ್ಮದಿಯ ಜೀವನವನ್ನು ನಡೆಸುವಂತಹ ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗಿದೆ.

ಒಟ್ಟಿನಲ್ಲಿ, ಮಹಿಳೆಯರ ಅಭ್ಯುದಯವನ್ನು ಸಾಧಿಸಲು ಸರ್ಕಾರವು ಸಂವಿಧಾನಿಕ ರಕ್ಷಣೆ ಹಾಗೂ ವಿಶೇಷ ಯೋಜನೆಗಳ ಮೂಲಕ ಕ್ರಮಗಳನ್ನು ಕೈಗೊಂಡಿದ್ದರೂ ಇದುವರೆಗಿನ ಸಾಧನೆ ಸಮಾಧಾನಕರವಾಗಿ ಇಲ್ಲವೆಂದೇ ಹೇಳಬೇಕು. ಸಮಗ್ರ ದೃಷ್ಟಿಕೋನದ ಕೊರತೆ, ಸರ್ಕಾರದ ವಿಳಂಬ ನೀತಿ, ಸರ್ಕಾರಿ ಅಧಿಕಾರಿಗಳ ಅದಕ್ಷತೆ, ಅನಾಸಕ್ತಿ ಮತ್ತು ಅಪ್ರಾಮಾಣಿಕತೆ ಹಾಗೂ ಸ್ಥಾಪಿತ ಹಿತಾಸಕ್ತಿಗಳ ಕುತಂತ್ರದಿಂದಾಗಿ ಮಹಿಳೆಯರ ಅಭ್ಯುದಯ ನಿರೀಕ್ಷಿತ ರೀತಿಯಲ್ಲಿ ಮತ್ತು ವೇಗದಲ್ಲಿ ಸಾಧಿತವಾಗಿಲ್ಲ. ದೇಶದ ಜನಸಂಖ್ಯೆಯ ಸರಿಸುಮಾರು ಅರ್ಧದಷ್ಟಿರುವ ಈ ಜನರ ಅಭ್ಯುದಯದತ್ತ ಸರ್ಕಾರವು ವಿಶೇಷ ಪ್ರಯತ್ನ ಮಾಡಬೇಕಾಗಿರುವುದರ ಅಗತ್ಯವಿದೆ. ಜೊತೆಗೆ ಪ್ರಸ್ತುತ ದಿನಗಳಲ್ಲಿ ಮಹಿಳೆಯರ ಸರ್ವತೋಮುಖ ಬೆಳವಣಿಗೆಗೆ ಸಂಬಂಧಿಸಿದ ಚಿಂತನೆಗಳು ಅಗಬೇಕಿವೆ. ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಶಿಕ್ಷಣವೇ ಮೂಲ ಮಂತ್ರವಾದುದರಿಂದ ಜನಾಂಗದ ಪ್ರತಿಯೊಬ್ಬರೂ ಸುಶಿಕ್ಷಿತರಾಗಬೇಕು. ಇಂದು ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಹಲವಾರು ಕಾನೂನುಗಳು ಅಸ್ತಿತ್ವಕ್ಕೆ ಬಂದಿವೆ. ಜೊತೆಗೆ ಶಿಕ್ಷಣ ಸಂಸ್ಥೆಗಳು ಸೇರಿದಂತೆ, ಹಲವು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸಂಘಟನೆಗಳಲ್ಲಿ ಮಹಿಳೆಯರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ವಿಶೇಷ ಸವಲತ್ತುಗಳನ್ನು ಕೊಡುವ ಮೂಲಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಗುತ್ತದೆ. ರಾಜಕೀಯ, ವೃತ್ತಿಪರ ಹಾಗೂ ಉನ್ನತ ಶಿಕ್ಷಣಕ್ಕೆ ಪೂರಕವಾಗುವ ಅವಕಾಶವನ್ನು ಕಲ್ಪಿಸುವ ಪ್ರಕ್ರಿಯೆಯನ್ನು ನಾವು ಇತ್ತೀಚಿನ ದಿನಗಳಲ್ಲಿ ನೋಡಬಹುದಾಗಿದೆ. ಈ ನಿಟ್ಟಿನಲ್ಲಿ ಹಿಂದುಳಿದ ವರ್ಗಗಳ ಮಹಿಳೆಯರು ಇಂತಹ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡಾಗ ಮಾತ್ರ ಇತರೆ ವರ್ಗದ ಮಹಿಳೆಯರಂತೆ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ. ಇಂತಹ ಸನ್ನಿವೇಶಕ್ಕಾಗಿ ಎಲ್ಲರೂ ನಿರೀಕ್ಷೆಯನ್ನು ಇಟ್ಟುಕೊಂಡು ಕಾರ್ಯಪ್ರವೃತ್ತರಾಗೋಣ.

**ಆಧಾರ ಗ್ರಂಥಗಳು**


- ಅಧ್ಯಯನ ಕ್ಷೇತ್ರ ಕಾರ್ಯಾಧಾರಿತ ಮಾಹಿತಿಗಳು.
- ಆಂಜನಪ್ಪ ಬಿ.ಹೆಚ್., 2006, ***ಮಹಿಳೆ ಮತ್ತು ದುಡಿಮೆ,*** ಸೃಷ್ಠಿ ಪಬ್ಲಿಕೇಷನ್, ಬೆಂಗಳೂರು.
- ಇಂದಿರಾ ಆರ್., 2002, ***ಮಹಿಳೆ, ಸಮಾಜ ಮತ್ತು ಸಂಸ್ಕೃತಿ,*** ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಗುರುಲಿಂಗಯ್ಯ, ಎಂ., 2005, ***ಬುಡಕಟ್ಟುಗಳು ಮತ್ತು ಅಭಿವೃದ್ಧಿ,*** ಪ್ರಸರಾಂಗ ಮಂಗಳೂರು ವಿಶ್ವವಿದ್ಯಾಲಯ.
- ಗುರುಲಿಂಗಯ್ಯ, ಎಂ., 2011, ***ಅಂಚಿನೀಕರಣ ಮತ್ತು ಅಂಚೀಕೃತ ಗುಂಪುಗಳು,*** ಪ್ರಸರಾಂಗ ಹಂಪಿ ವಿಶ್ವವಿದ್ಯಾಲಯ.
- ತೆಲಗಾವಿ, ಲಕ್ಷ್ಮಣ್, 1999, ***ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು,*** ಪ್ರಸರಾಂಗ, ಕನ್ನಡ ವಿ.ವಿ., ಹಂಪಿ.
- ಸಾಂಖಿಕ ಅಧಿಕಾರಿಗಳು, ***ಶಿವಮೊಗ್ಗ ಜಿಲ್ಲೆ ಅಂಕಿ-ಅಂಶಗಳ ನೋಟ,*** 2011–2012.
- ಶ್ರೀಮತಿ ಹೆಚ್.ಹೆಸ್., 2001, ***ಆಧುನಿಕ ಭಾರತದಲ್ಲಿ ಮಹಿಳೆ,*** ಪ್ರಸರಾಂಗ, ಕನ್ನಡ ವಿ.ವಿ., ಹಂಪಿ.
- Ramegowda, A., 1997., ***Gender Inequality: Power, Privilege and Poverty in Plantations***. Rawat Publications, New Delhi.
- Jain Shashi, 1988, ***Status and Role Perception of Middle Class Women***, Puja Publications, New Delhi.
- Khanna.G and M.A. Verghese, 1978, ***Indian Women Today,*** Vikas Publications, Delhi.


## ಲೇಖಕರ ವಿಳಾಸ :


**ಡಾ. ಸಾರಾ ಅಬ್ಬೂಬಕರ್,** ಚಂದ್ರಗಿರಿ ಪ್ರಕಾಶನ, ಮೈಕ್ರೊವೇವ್ ಸ್ಟೇಶನ್ ರಸ್ತೆ, ಮಂಗಳೂರು– 575006

**ಡಾ. ಬಸವರಾಜ ನೆಲ್ಲಿಸರ,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ–577451

**ಡಾ. ಜಿ. ಪ್ರಶಾಂತ ನಾಯಕ,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ–577451
e-mail: preethiyabaduku@gmail.com

**ಡಾ. ಕೆ.ಸಿ. ಶಶಿಧರ,** ಪ್ರಾದ್ರ್ಯಾಪಕರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

**ಡಾ.ನೆಲ್ಲಿಕಟ್ಟೆ ಸಿದ್ಧೇಶ,** ಸಹಾಯಕಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ–577451

**ರವಿಶಂಕರ್. ಜೆ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಇಂಡಿಯನ್ ಅಕಾಡೆಮಿ ಪದವಿಕಾಲೇಜು, ಹೆಣ್ಣೂರು ಕ್ರಾಸ್, ಬೆಂಗಳೂರು
e-mail-

**ಡಾ. ಎಸ್.ಎಂ. ಮುತ್ತಯ್ಯ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು(ಸ್ವಾಯತ್ತ), ಶಿವಮೊಗ್ಗ–577 203. e-mail- smmuthaiah@gmail.com

**ಡಾ. ಸಬಿತಾ ಬನ್ನಾಡಿ,** ಸಹ–ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಸರ್.ಎಂ.ವಿ.ಸರ್ಕಾರಿ ಕಲಾ/ವಾಣಿಜ್ಯ ಕಾಲೇಜು, ಭದ್ರಾವತಿ.
sabithabannadi@gmail.com

**ಡಾ. ಅಂಜಲಿ ಅಶ್ವಿನ್,** ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಬಿ.ಆರ್.ಸಿ. ಹೊಸನಗರ ಜ-ಟಿಚಿಟು–

**ಡಾ. ಶುಭಾ ಮರವಂತೆ, ಸಹಾಂಕ** ಪ್ರಾಧ್ಯಾಪಕರು, ಕನ್ನಡ ವಿಭಾಗ , ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ 577203

**ಶಿವಮೂರ್ತಿ . ಎಂ ಬಿ/ನ್ ಮಲ್ಲಪ್ಪ . ಎಸ್, ಶೊಂಭ್ಯನೂರು, ಶಿವನಿ ರೈಲ್ವೆ ನಿಲ್ದಾಣ ಅಂಚೆ– 577549, ತರೀಕೆರೆ ತಾಲ್ಲುಕು, ಚಿಕ್ಕಮಗಳೂರು ಜಿಲ್ಲೆ.**

**ಡಾ. ಎಂ. ಎನ್. ರಮೇಶ,** ಸಹಾಯಕಪ್ರಾಧ್ಯಾಪಕರು, ರಾಜ್ಯಶಾಸ್ತ್ರವಿಭಾಗ, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
**ಡಾ. ಪಿ.ನಾಗರಾಜ,** ಸಹಾಯಕ ಪ್ರಾಧ್ಯಾಪಕರು, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ರಾಷ್ಟ್ರೀಯ ಹೆದ್ದಾರಿ–4, ಭೂತರಾಮನಹಟ್ಟಿ, ಬೆಳಗಾವಿ. e-mail–
**ಶ್ರೀ ಹನುಮಂತಪ್ಪ ಡಿ.ಜಿ,** ಸಹಾಯಕ ಪ್ರಾಧ್ಯಾಪಕರು, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ರಾಷ್ಟ್ರೀಯ ಹೆದ್ದಾರಿ–4, ಭೂತರಾಮನಹಟ್ಟಿ, ಬೆಳಗಾವಿ. e-mail-
**ಡಾ. ಸುಶೀಲಾ ನೆಲ್ಲಿಸರ,** ಉಪನ್ಯಾಸಕರು, ರಾಷ್ಟ್ರೀಯ ಪದವಿಪೂರ್ವ ಕಾಲೇಜು, ಶಾಂತಿನಗರ
**ಡಾ. ಭಾರತಿ.ಎಂ. ,** ಉಪನ್ಯಾಸಕರು, ಪ್ರಥಮದರ್ಜೆ ಕಾಲೇಜು, ತರೀಕೆರೆ, e-mail-
**ದಿವ್ಯ ಕೆ. ಎಲ್.,** ಉಪನ್ಯಾಸಕರ, ಸರ್ಕಾರಿ ಪದವಿ ಕಾಲೇಜು, ಕೃಷ್ಣರಾಜನಗರ. e-mail-

**ಸುನಂದ ಕೆ.ಸಿ.,** ಕಿರಿಯ ಸಹಾಯಕರು, ಮಹಿಳಾ ಸಂಪನ್ಮೂಲ ಕೇಂದ್ರ , ಶಂಕರಘಟ್ಟ
**ನವೀನ ಮಂಡಗದ್ದೆ,** ಸಂಶೋಧಕರು, ಕನ್ನಡ ಭಾರತಿ e-mail-
ಶಂಕರಘಟ್ಟ – 577451
**ಶ್ವೇತ. ಸಿ.,** ಸಂಶೋಧಕರು, ಕನ್ನಡ ಭಾರತಿ.e-mail- shwekannada@gmail.com
**ವಿಜಯಕುಮಾರ್. ಹೆಚ್.,** ಸಂಶೋಧಕರು, ಕನ್ನಡ ಭಾರತಿ e-mail- vijayachiranthana@gmail.com
ಅನ್ನಪೂರ್ಣ ಹೆಚ್.ಎಸ್, ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಭಾರತಿ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
**ಆಶಾರಾಣಿ.ಎಂ.ಪಿ.,** ಸಂಶೋಧಕರು, ಕನ್ನಡ ಭಾರತಿ e-mail- vijayachiranthana@gmail.com
**ರಾಜೀವ ನಾಯ್ಕ ಎಸ್.,** ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾರತಿ e-mail- rajeevar54@gmail.com
**ರೋಹಿತ್ ಎಲ್.ಎಸ್.,** ಸಂಶೋಧಕರು, ಇಂಗ್ಲಿಷ್ ವಿಭಾಗ e-mail- rohithls89@gmail.com
**ಗಿರಿಧರ್. ಎಸ್.,** ಸಂಶೋಧಕರು, ಸಮಾಜಶಾಸ್ತ್ರ ವಿಭಾಗ e-mail- giridhar.soc@gmail.com